JJ50

(B) 025247

ಸುವರ್ಣ ಕರ್ನಾಟಕ-೨೦೦೬

ಕರ್ನಾಟಕ ವಿಧಾನಸಭೆಯ ನಡವಳಿಕೆಗಳು

KARNATAKA LEGISLATIVE ASSEMBLY DEBATES

ಅಧಿಕೃತ ವರದಿ

OFFICIAL REPORT

ಹನ್ನೆರಡನೇ ವಿಧಾನಸಭೆಯ ಎರಡನೆಯ ಅಧಿವೇಶನ

SECOND SESSION OF THE TWELFTH LEGISLATIVE ASSEMBLY

ಸಂಪುಟ - ೩ (ಕ್ರಮಾಂಕ -೧) **Volume - 3 (No.1)**

(೧ನೇ ಫೆಬ್ರವರಿ ೨೦೦೫)

(1st February 2005)

ಭಾಗ-೧ **Part-I**



ಕರ್ನಾಟಕ ವಿಧಾನಸಭೆಯ ಸಚಿವಾಲಯ, ಬೆಂಗಳೂರು

Karnataka Legislative Assembly Secretariat, Bangalore

ಕರ್ನಾಟಕ ವಿಧಾನಸಭೆ

ಹನ್ನೆರಡನೇ ವಿಧಾನಸಭೆ

ಎರಡನೆಯ ಅಧಿವೇಶನ

ಅಧ್ಯಕ್ಷರು

ಶ್ರೀ ಕೃಷ್ಣ

ಕಾರ್ಯದರ್ಶಿ

ಶ್ರೀ ಟಿ. ರಾಜಣ್ಣ

ಕರ್ನಾಟಕ ವಿಧಾನಸಭೆ
ವಿಷಯಾನುಕ್ರಮಣಿಕೆ
ಸಂಪುಟ – 3 (ಕ್ರಮಾಂಕ–1)
(1ನೇ ಫೆಬ್ರವರಿ 2005)

ಪುಟ ಸಂಖ್ಯೆ

ಮಂಗಳವಾರ, ದಿನಾಂಕ 1ನೇ ಫೆಬ್ರವರಿ 2005

1) ಪ್ರಕಟಣೆ: 1

ವಿಷಯ : ಮಾನ್ಯ ಸದಸ್ಯರಾದ ಶ್ರೀ ಯು.ಟಿ. ಫರೀದ್‌ರವರಿಗೆ ದಿನಾಂಕ : 20–1–05 ರಿಂದ ಅಧಿವೇಶನ ಮುಕ್ತಾಯವಾಗುವವರೆಗೆ ಸದನಕ್ಕೆ ಗೈರು ಹಾಜರಾಗಲು ಅನುಮತಿ (ಅನುಮತಿ ನೀಡಲಾಯಿತು).

2) ಅಧ್ಯಕ್ಷರ ಅಪ್ಪಣೆ ಮೇರೆಗೆ: 1-3

1) ವಿಷಯ : ಆಲಮಟ್ಟಿಯಲ್ಲಿ ಸಂಸದರ ನೇತೃತ್ವದಲ್ಲಿ ಧರಣಿ ನಡೆಯುತ್ತಿರುವ ಬಗ್ಗೆ.
– ಶ್ರೀ ಗೋವಿಂದ ಎಂ. ಕಾರಜೋಳ

2) ಅಸಂಘಟಿತ ಟೈಲರಿಂಗ್ ಕಾರ್ಮಿಕರ ಸಮಸ್ಯೆ ಬಗ್ಗೆ.
– ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು)
– ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

3) ಪ್ರಶ್ನೋತ್ತರಗಳು: 3-61

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು.
– ಶ್ರೀ ಎಸ್. ಎ. ರವೀಂದ್ರನಾಥ್
– ಶ್ರೀ ಜಗದೀಶ್ ಶೆಟ್ಟರ್
– ಶ್ರೀಮತಿ ವಿಜಯಲಕ್ಷ್ಮಿ ಬಂಡಿಸಿದ್ದೇಗೌಡ
– ಶ್ರೀ ಜಿ.ವಿ. ಶ್ರೀರಾಮರೆಡ್ಡಿ
– ಶ್ರೀ ಸರಿಕಾರ್ ಭೀಮಪ್ಪ ಚನ್ನಪ್ಪ
– ಶ್ರೀ ಕೆ. ರಘುಪತಿ ಭಟ್
– ಶ್ರೀ ಕೆ.ಆರ್. ರಮೇಶ್ ಕುಮಾರ್
– ಶ್ರೀ ಎಸ್. ರಾಜೇಂದ್ರನ್
– ಶ್ರೀ ಶಿವಾನಂದ ಎಸ್. ಪಾಟೀಲ್
– ಶ್ರೀ ಕೆ.ಜಿ. ಬೋಪಯ್ಯ
– ಶ್ರೀ ಎ.ಟಿ. ರಾಮಸ್ವಾಮಿ
– ಶ್ರೀ ಎಸ್.ಎಸ್. ಪಾಟೀಲ್

– ಶ್ರೀ ಆರ್. ಅಶೋಕ್ ಪುಟ ಸಂಖ್ಯೆ
– ಶ್ರೀ ಬಿ.ಕೆ. ಸಂಗಮೇಶ್ವರ
ಆ) ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ ಹಾಗೂ ಉತ್ತರಗಳು– (ಮಂಡಿಸಲಾಯಿತು) (ದಿ: 31–1–05 ಮತ್ತು 1–2–05) (ಅನುಬಂಧ–I)

4. ಚುನಾವಣಾ ಪ್ರಸ್ತಾವ : 61-62
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವ್ಯವಸ್ಥಾಪನಾ ಮಂಡಳಿಗೆ ಇಬ್ಬರು ವಿಧಾನ ಸಭೆ ಸದಸ್ಯರನ್ನು ನಾಮನಿರ್ದೇಶನ ಮಾಡುವ ಅಧಿಕಾರವನ್ನು ಸನ್ಮಾನ್ಯ ಅಧ್ಯಕ್ಷರಿಗೆ ನೀಡುವ ಬಗ್ಗೆ.
(ಸದನವು ಸನ್ಮಾನ್ಯ ಅಧ್ಯಕ್ಷರಿಗೆ ನಾಮನಿರ್ದೇಶನ ಮಾಡುವ ಅಧಿಕಾರ ನೀಡಿತು)

5. ಸಭೆಯ ಮುಂದಿಡಲಾದ ಕಾಗದಪತ್ರಗಳು : 62
ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣಾ ತಿದ್ದುಪಡಿ ವಿಧೇಯಕ, 2005
(ಅನುಬಂಧ–II)

6. ವರದಿಯನ್ನೊಪ್ಪಿಸುವುದು. 62
ಖಾಸಗಿ ಸದಸ್ಯರುಗಳ ವಿಧೇಯಕ ಹಾಗೂ ನಿರ್ಣಯಗಳ ಸಮಿತಿಯ ಎರಡನೇ ವರದಿ
– ಶ್ರೀ ಎಸ್.ಎಸ್. ಬೋಜರಾಜ್

7. ಹಕ್ಕುಚ್ಯುತಿ ನಿರ್ಣಯ ಮಂಡಿಸಲು ಅನುಮತಿ ಕೋರಿಕೆ: 62-74
ಅ) ವಿಧಾನ ಪರಿಷತ್ ಸದಸ್ಯರೊಬ್ಬರು ಕೆಡಿಪಿ ಸಭೆಯ ತೀರ್ಮಾನಗಳನ್ನು ಪ್ರಶ್ನಿಸುತ್ತಿರುವ ಬಗ್ಗೆ.
– ಶ್ರೀ ಜೆ.ಸಿ. ಮಾಧುಸ್ವಾಮಿ
– ಶ್ರೀ ಹೆಚ್.ಕೆ. ಪಾಟೀಲ್
(ಕಾನೂನು, ಸಂಸದೀಯ ವ್ಯವಹಾರಗಳ ಸಚಿವರು)
– ಶ್ರೀ ಬಿ.ಎಸ್. ಯಡಿಯೂರಪ್ಪ
(ವಿರೋಧ ಪಕ್ಷದ ನಾಯಕರು)
– ಶ್ರೀ ಕ್ಯಾತ್ಸಂದ್ರ ಎನ್. ರಾಜಣ್ಣ
– ಶ್ರೀ ಹೆಚ್. ನಿಂಗಪ್ಪ
– ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)
(ತಿರಸ್ಕರಿಸಲಾಯಿತು)

8. ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ: 74-76
ಗುಲ್ಬರ್ಗಾ, ರಾಯಚೂರು ಬಳ್ಳಾರಿ ಭಾಗದ ಜನರಿಗೆ ಸರ್ಕಾರಿ ಮತ್ತು ಅರೆ ಸರ್ಕಾರಿ ಸಂಸ್ಥೆಗಳಲ್ಲಿ ನೌಕರಿ ಸಿಗದಿರುವ ಬಗ್ಗೆ.

ಪುಟ ಸಂಖ್ಯೆ

– ಶ್ರೀ ವೈಜನಾಥ್ ಪಾಟೀಲ್
– ಶ್ರೀ ಹೆಚ್.ಕೆ. ಪಾಟೀಲ್
(ಕಾನೂನು, ಸಂಸದೀಯ, ವ್ಯವಹಾರಗಳ ಸಚಿವರು)

9. ಅಧ್ಯಕ್ಷರ ಅಪ್ಪಣೆ ಮೇರೆಗೆ : 76-87

ಅ) ಆಲಮಟ್ಟಿಯಲ್ಲಿ ಸಂಸದರ ನೇತೃತ್ವದಲ್ಲಿ ಧರಣಿ ನಡೆಯುತ್ತಿರುವ ಬಗ್ಗೆ.
– ಶ್ರೀ ಜಗದೀಶ್ ಶೆಟ್ಟರ್

ಆ) ಟ್ರೈಲರ್‌ಗಳ ಬೇಡಿಕೆಯ ಬಗ್ಗೆ.
– ಶ್ರೀ ಆರಗ ಜ್ಞಾನೇಂದ್ರ
– ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ
– ಶ್ರೀ ಎನ್. ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಇ) ಅಂಡಮಾನ್ ಮತ್ತು ನಿಕೋಬಾರ್ ದ್ವೀಪದಲ್ಲಿ ಸಿಕ್ಕಿ ಹಾಕಿಕೊಂಡಿರುವ ಚಾಮರಾಜನಗರದ ಕಾರ್ಮಿಕರನ್ನು ವಾಪಸ್ಸು ಕರೆಸಿಕೊಳ್ಳುವ ಬಗ್ಗೆ ಹಾಗೂ ಕನ್ನಡ ಭಾಷೆಗೆ ಶಾಸ್ತ್ರೀಯ ಭಾಷಾ ಸ್ಥಾನಮಾನ ನೀಡುವುದು ಮತ್ತು ಕಾಸರಗೋಡಿನ ವಿಚಾರದಲ್ಲಿ ನಿಯೋಗ ಕರೆದೊಯ್ಯುವ ಬಗ್ಗೆ.
– ಶ್ರೀ ವಾಟಾಳ್ ನಾಗರಾಜ್
– ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಈ) ಸರ್ಕಾರಿ ಕಾರ್ಯಕ್ರಮಗಳಲ್ಲಿ ಶಾಸಕರು ಅಧ್ಯಕ್ಷತೆ ವಹಿಸುವ ಬಗ್ಗೆ.
– ಶ್ರೀ ಯಾದ್‌ವಾಡ್ ಮಹಾದೇವಪ್ಪ ಶಿವಲಿಂಗಪ್ಪ
– ಶ್ರೀ ಜಗದೀಶ್ ಶೆಟ್ಟರ್
– ಶ್ರೀ ಡಿ.ಕೆ. ಶಿವಕುಮಾರ್
– ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಉ) ರಾಜ್ಯದಲ್ಲಿ ಹೆಣ್ಣುಮಕ್ಕಳ ಜನನದ ಅನುಪಾತ ಇಳಿಮುಖವಾಗುತ್ತಿರುವ ಬಗ್ಗೆ.
– ಶ್ರೀಮತಿ ಶಕುಂತಲಾ ಟಿ. ಶೆಟ್ಟಿ
– ಶ್ರೀ ಹೆಚ್.ಕೆ. ಪಾಟೀಲ್
(ಕಾನೂನು, ಸಂಸದೀಯ ವ್ಯವಹಾರಗಳ ಸಚಿವರು)

10. ಪ್ರಕಟಣೆ : 87

ಸನ್ಮಾನ್ಯ ರಾಜ್ಯಪಾಲರು ಏರ್ಪಡಿಸಿರುವ ಚಹಾಕೂಟದಲ್ಲಿ ಮಾನ್ಯ ಸದಸ್ಯರೆಲ್ಲರೂ ಪಾಲ್ಗೊಳ್ಳುವ ಬಗ್ಗೆ.

11. ಶಾಸನ ರಚನೆ : 87-119

ಅ) ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣಾ (ತಿದ್ದುಪಡಿ) ವಿಧೇಯಕ, 2005.
(ಅನುಬಂಧ–II)

– ಶ್ರೀ ಹೆಚ್.ಡಿ. ರೇವಣ್ಣ. **ಪುಟ ಸಂಖ್ಯೆ**
(ಲೋಕೋಪಯೋಗಿ ಮತ್ತು ಇಂಧನ ಸಚಿವರು)
– ಶ್ರೀ ಬಿ.ಎಸ್. ಯಡಿಯೂರಪ್ಪ
(ವಿರೋಧ ಪಕ್ಷದ ನಾಯಕರು)
– ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ
– ಶ್ರೀ ಸಿ.ಎಸ್. ಪುಟ್ಟೇಗೌಡ
– ಶ್ರೀ ಜೆ.ಸಿ. ಮಾಧುಸ್ವಾಮಿ
– ಶ್ರೀ ವಾಟಾಳ್ ನಾಗರಾಜ್
– ಶ್ರೀ ಜಿ.ವಿ. ಶ್ರೀರಾಮರೆಡ್ಡಿ
– ಶ್ರೀ ಎಸ್. ರಾಜೇಂದ್ರನ್
– ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ
– ಶ್ರೀ ಬಿ. ನಾಗರಾಜ ಶೆಟ್ಟಿ
– ಶ್ರೀ ಗೋವಿಂದ ಎಂ. ಕಾರಜೋಳ
– ಶ್ರೀ ಕೆ.ಆರ್. ರಮೇಶ್‌ಕುಮಾರ್
– ಶ್ರೀ ಎನ್. ಯೋಗೀಶ್ ಭಟ್
(ಪ್ರಸ್ತಾವ ತಿದ್ದುಪಡಿಯೊಂದಿಗೆ ಅಂಗೀಕರಿಸಲ್ಪಟ್ಟಿತು)

ಆ) ವಿಧೇಯಕದ ಮಂಡನೆ
ಕರ್ನಾಟಕ ಭೂಸುಧಾರಣೆಗೆ (ತಿದ್ದುಪಡಿ) ವಿಧೇಯಕ, 2005,
(ಅನುಬಂಧ– III)
(ಮಂಡಿಸಲಾಯಿತು)

12) ಗಮನ ಸೆಳೆಯುವ ಸೂಚನೆಗಳು : 120-142

ಅ) ಸ್ವಯಂ ಘೋಷಿತ ಆಸ್ತಿ ತೆರಿಗೆ ಬಗ್ಗೆ.
– ಶ್ರೀ ಬಿ.ಎಸ್. ಯಡಿಯೂರಪ್ಪ
(ವಿರೋಧ ಪಕ್ಷದ ನಾಯಕರು)
– ಶ್ರೀ ಎಸ್.ಆರ್. ಮೋರೆ
(ಪೌರಾಡಳಿತ ಹಾಗೂ ಕೆಯುಐಡಿಎಫ್‌ಸಿ ಸಚಿವರು)
– ಶ್ರೀ ಕೆ.ಎಸ್. ಈಶ್ವರಪ್ಪ
– ಶ್ರೀ ಜಗದೀಶ್ ಶೆಟ್ಟರ್
– ಶ್ರೀ ವಾಟಾಳ್ ನಾಗರಾಜ್
– ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು)
– ಶ್ರೀ ಆರಗ ಜ್ಞಾನೇಂದ್ರ
– ಶ್ರೀ ಸಿದ್ದು ಸಾವದಿ
– ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಆ) ಕಂದಾಯ ಇಲಾಖೆಗೆ ಸೇರಿದ ಬೆಂಗಳೂರಿನ ಸುತ್ತ ಮುತ್ತಲಿರುವ<u>ಪುಟ ಸಂಖ್ಯೆ</u>
ಕೋಟ್ಯಾಂತರ ರೂಪಾಯಿ ಬೆಲೆಬಾಳುವ ಸಾವಿರಾರು ಎಕರೆ ಜಮೀನನ್ನು
ಅನಧಿಕೃತವಾಗಿ ಭೂಕಬಳಿಕೆದಾರರು ಕಬಳಿಸಿರುವ ಬಗ್ಗೆ.
– ಶ್ರೀ ಆರ್. ರೋಷನ್ ಬೇಗ್
– ಶ್ರೀ ಬಿ.ಎಸ್. ಯಡಿಯೂರಪ್ಪ
(ವಿರೋಧ ಪಕ್ಷದ ನಾಯಕರು)
– ಶ್ರೀ ವಾಟಾಳ್ ನಾಗರಾಜ್
– ಶ್ರೀ ಎಂ.ಪಿ. ಪ್ರಕಾಶ್
(ಕಂದಾಯ ಸಚಿವರು)

13) ಅಧ್ಯಕ್ಷರ ಅಪ್ಪಣೆ ಮೇರೆಗೆ : 142-152

ಅ) ವಿಷಯ : ಬಿಜಾಪುರ ಬಾಗಲಕೋಟೆ ಜಿಲ್ಲೆಗಳ ಸಮಗ್ರ ನೀರಾವರಿ
ಯೋಜನೆಗಳ ಬಗ್ಗೆ.
– ಶ್ರೀ ಗೋವಿಂದ ಎಂ. ಕಾರಜೋಳ
– ಶ್ರೀ ಬಿ.ಎಸ್. ಯಡಿಯೂರಪ್ಪ
(ವಿರೋಧ ಪಕ್ಷದ ನಾಯಕರು)
– ಶ್ರೀ ಜಗದೀಶ್ ಶೆಟ್ಟರ್
– ಶ್ರೀ ಶಿವಾನಂದ ಎಸ್. ಪಾಟೀಲ್
– ಶ್ರೀ ಮಿರಾಜುದ್ದೀನ್ ಎನ್. ಪಟೇಲ್
(ಪಶುಸಂಗೋಪನಾ ಸಚಿವರು)
– ಶ್ರೀ ಧರ್ಮಸಿಂಗ್
(ಮುಖ್ಯ ಮಂತ್ರಿಗಳು)

14) ಅನುಬಂಧ – **I.II & III** 153-666

ಕರ್ನಾಟಕ ವಿಧಾನಸಭೆ

ಮಂಗಳವಾರ 1ನೇ ಫೆಬ್ರವರಿ 2005 ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 10 ಗಂಟೆ 15 ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಕೃಷ್ಣ) ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು.

1. ಪ್ರಕಟಣೆ

ವಿಷಯ:- ವಿಧಾನಸಭಾ ಸದಸ್ಯರಾದ ಶ್ರೀ ಯು.ಟಿ. ಫರೀದ್ ರವರು ಸದನಕ್ಕೆ ಗೈರು ಹಾಜರಾಗಲು ಅನುಮತಿ ಕೋರಿಕೆ

ಅಧ್ಯಕ್ಷರು : ವಿಧಾನಸಭಾ ಸದಸ್ಯರಾದ ಶ್ರೀ ಯು.ಟಿ. ಫರೀದ್‌ರವರು ಅನಾರೋಗ್ಯದ ಕಾರಣ ದಿನಾಂಕ 20-01-2005ರಿಂದ ಪ್ರಾರಂಭವಾಗಿರುವ ಪ್ರಸಕ್ತ ಅಧಿವೇಶನದ ಮುಕ್ತಾಯದವರೆಗೂ ಗೈರು ಹಾಜರಿ ಆಗಲು ಅನುಮತಿಯನ್ನು ಕೋರಿ ಪತ್ರವನ್ನು ಬರೆದಿರುತ್ತಾರೆ. ಇದಕ್ಕೆ ಸದನದ ಸಹಮತಿ ಇದೆಯೆಂದು ಭಾವಿಸಲಾಗಿದೆ.

(ಸದನವು ಶ್ರೀ ಯು.ಟಿ. ಫರೀದ್‌ರವರಿಗೆ ಸದನಕ್ಕೆ ಗೈರು ಹಾಜರಾಗಲು ಅನುಮತಿಯನ್ನು ನೀಡಿತು.)

ಅಧ್ಯಕ್ಷರು : ಈಗ ಪ್ರಶ್ನೋತ್ತರ.

ಶ್ರೀ ಗೋವಿಂದ ಮಕಟಪ್ಪ ಕಾರಜೋಳ್ : ಮಾನ್ಯ ಅಧ್ಯಕ್ಷರೆ, ಇವೊತ್ತು ಆಲಮಟ್ಟಿಯಲ್ಲಿ ಸಂಸದರ ನೇತೃತ್ವದಲ್ಲಿ.....

ಅಧ್ಯಕ್ಷರು : ನೀವು ಕುಳಿತುಕೊಳ್ಳಿ. ನಿಮಗೆ ಮಾತನಾಡಲು ಈಗ ಅವಕಾಶವನ್ನು ಕೊಟ್ಟಿಲ್ಲ.

2. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ : ಆಲಮಟ್ಟಿಯಲ್ಲಿ ಸಂಸದರ ನೇತೃತ್ವದಲ್ಲಿ ಧರಣಿ ನಡೆಯುತ್ತಿರುವ ಬಗ್ಗೆ

ಶ್ರೀ ಗೋವಿಂದ ಮಕಟಪ್ಪ ಕಾರಜೋಳ್ : ಇಲ್ಲ. ಹಾಗಾಗೋದಿಲ್ಲ. ಇವೊತ್ತು ತಾವು ನಮಗೆ ಅವಕಾಶ ಕೊಡಲೇಬೇಕು.

ಅಧ್ಯಕ್ಷರು : ಕಾರ್‌ಜೋಳ್‌ರವರೇ, ಇದೇನು ವಿಧಾನಸಭೆಯೋ, ಏನು?

ಶ್ರೀ ಗೋವಿಂದ ಎಂ. ಕಾರ್‌ಜೋಳ್ : ದಯವಿಟ್ಟು ತಾವು ಅವಕಾಶ ಕೊಡಬೇಕು.

ಅಧ್ಯಕ್ಷರು : ನೀವೇನು ನನಗೆ ಹೆದರಿಸುತ್ತಿದ್ದೀರೇನು? ಆ ಪದವನ್ನು ಮೊದಲು ನೀವು ವಾಪಸ್ಸು ತೆಗೆದುಕೊಳ್ಳಿ. ಆ ಪದವನ್ನು ವಾಪಸ್ಸು ತೆಗೆದುಕೊಳ್ಳಿ. ನಾವು ಅವಕಾಶ ಕೊಡದಿದ್ದರೆ ಎಂದು ಏರು ಧ್ವನಿಯಲ್ಲಿ ತಾವು ಮಾತನಾಡುವುದಕ್ಕೆ ಇಲ್ಲಿ ನಿಮಗೆ ಅವಕಾಶ ಇಲ್ಲ. ತಾವು ಜವಾಬ್ದಾರಿಯಿಂದ ಮಾತನಾಡಬೇಕು.

ಶ್ರೀ ಗೋವಿಂದ ಎಂ. ಕಾರ್‌ಜೋಳ್ : ನಾನು ಜವಾಬ್ದಾರಿಯಿಂದ ಮಾತನಾಡಿದ್ದೇನೆ. ನಾನು ಹೆದರಿಸುತ್ತಿಲ್ಲ.

ಅಧ್ಯಕ್ಷರು : ನೀವೇನು ನನಗೆ ಹೆದರಿಸುತ್ತಿದ್ದೀರೇನು? ಮಾತನಾಡುವಾಗ ಸರಿಯಾದ ರೀತಿಯಲ್ಲಿ ಪದ ಬಳಕೆ ಉಪಯೋಗಿಸಿ ಮಾತನಾಡಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಅಲ್ಲಿ ಈಗ ಎಂ.ಪಿ.ಗಳು, ರೈತ ನಾಯಕರುಗಳೆಲ್ಲರೂ ಉಪವಾಸ ಕುಳಿತಿದ್ದಾರೆ.

ಅಧ್ಯಕ್ಷರು : ದಯಮಾಡಿ ತಾವುಗಳು ಕುಳಿತುಕೊಳ್ಳಿ. ಈಗಾಗಲೇ ಸದನದ ಸಭೆ ಆರಂಭವಾಗಿ ಎಷ್ಟು ದಿವಸಗಳಾಗಿದೆ ನೀವೇ ಹೇಳಿ. ಇಲ್ಲಿಯವರೆಗೂ ಯಾವುದಾದರೂ ಒಂದು ಪ್ರಮುಖವಾದ ವಿಚಾರ ಸದನದಲ್ಲಿ ಚರ್ಚೆಯಾಗಿದೆಯೇ? ಇನ್ನೂ ಕೂಡ ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯ ಆರಂಭವಾಗಿಲ್ಲ. ಇನ್ನೂ ಬಿಲ್‌ಗಳೂ ಕೂಡ ಇವೆ. ಹೀಗಿರುವಾಗ ನೀವು ಈ ರೀತಿ ಮಾಡಿದರೆ ಹೇಗೆ? ನಾನು ತಮಗೆ ರಿಕ್ವೆಸ್ಟ್ ಮಾಡಿಕೊಂಡೆ, ನಿಯಮ 69ರ ಕೆಳಗಡೆ ಒಂದು ನೋಟೀಸ್ ಕೊಟ್ಟಿದ್ದೀರಿ. ಅದರ ಬಗ್ಗೆ ಚರ್ಚೆಯಾಗಲಿ, ನಾನು ಅವಕಾಶ ಮಾಡಿಕೊಡುತ್ತೇನೆ ಎಂದು ಒಪ್ಪಿದ್ದೇನೆ. ಈಗ ಕುಡಿಯುವ ನೀರಿನ ವಿಚಾರದ ಚರ್ಚೆಯನ್ನು ನಿಯಮ 69ರ ಕೆಳಗಡೆ ಎಂದು ಕನ್‌ವರ್ಟ್ ಮಾಡಿದ್ದೇನೆ. ಅದಕ್ಕೆ ಉತ್ತರ ಇದೆ. ಉತ್ತರವಾದ ಮೇಲೆ ಅವಕಾಶ ಮಾಡಿಕೊಡುತ್ತೇನೆ. ಚರ್ಚೆಯಾಗಲಿ. ಆದರೆ ಈ ರೀತಿ ನೀವು ಮಾಡಿದರೆ ಸರ್ಕಾರದವರು ಸರಿಯಾದ ರೀತಿಯಲ್ಲಿ ಉತ್ತರ ಕೊಡುವುದಕ್ಕೆ ಆಗುವುದಿಲ್ಲ. ಈಗ ಸಮಯ ಹಾಳಾಗುತ್ತದೆ. ಆ ರೀತಿ ಆಗಬಾರದು.

ಶ್ರೀ ಗೋವಿಂದ ಎಂ. ಕಾರ್‌ಜೋಳ : ನಾನು ತಮ್ಮಲ್ಲಿ ದಯವಿಟ್ಟು ವಿನಂತಿ ಮಾಡುತ್ತೇನೆ. ರೈತರ ಬದುಕಿನ ಪ್ರಶ್ನೆ ಇಲ್ಲಿ ಇದೆ.

ಅಧ್ಯಕ್ಷರು : ಕಾರ್‌ಜೋಳ್‌ರವರೆ, ಪ್ರಶ್ನೋತ್ತರ ಆದ ಮೇಲೆ ಈ ವಿಚಾರವನ್ನು ತಾವು ಪ್ರಸ್ತಾಪ ಮಾಡಿ. ಅದಕ್ಕೆ ಒಂದರ್ಧ ಗಂಟೆ ನಿಗಧಿ ಮಾಡುತ್ತೇನೆ.

ಶ್ರೀ ಗೋವಿಂದ ಎಂ. ಕಾರ್‌ಜೋಳ : ಆಯಿತು ಅಧ್ಯಕ್ಷರೆ, ಏಕೆಂದರೆ ಇದು ಬಹಳ ಮಹತ್ವವಾದ ವಿಚಾರ.

ಅಧ್ಯಕ್ಷರು : ಆಯಿತು, ಆಯಿತು. ಈಗ

(2) ವಿಷಯ:- ಅಸಂಘಟಿತ ಟೈಲರಿಂಗ್ ಕಾರ್ಮಿಕರ ಸಮಸ್ಯೆ ಬಗ್ಗೆ

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಒಂದ್ನಿಮಿಷ. ಈಗ ಇಲ್ಲಿ ಮುಖ್ಯಮಂತ್ರಿಗಳು ಇದ್ದಾರೆ. ನಾನು ಮಧ್ಯೆ ಪ್ರವೇಶ ಮಾಡುತ್ತಿದ್ದೇನೆ. ಇಡೀ ರಾಜ್ಯದಿಂದ ಒಂದು ಲಕ್ಷಕ್ಕೂ ಹೆಚ್ಚು ಜನರು ಟೈಲರಿಂಗ್ ಅಸೋಸಿಯೇಶನ್‌ರವರು ಬಂದಿದ್ದಾರೆ. ಅಸಂಘಟಿತ ಕಾರ್ಮಿಕರು, ಮದ್ರಾಸ್‌ನಲ್ಲಿರುವ ರೀತಿಯಲ್ಲಿ ನಮಗೆ ಒಂದು ವ್ಯವಸ್ಥೆ ಮಾಡಿ, ನಾವು ತಿಂಗಳಿಗೆ 20 ರೂಪಾಯಿಯಂತೆ ಕಟ್ಟುತ್ತೇವೆ. ಆ ಸವಲತ್ತನ್ನು ಒಟ್ಟು ರಿಟೈರ್ ಆದಮೇಲೆ 35 ವರ್ಷಗಳಾದ ಮೇಲೆ ಆ ಸವಲತ್ತುಗಳು ಸಿಗಬೇಕು ಎನ್ನುವ ದೃಷ್ಟಿಯಿಂದ ಅವರು ಹಾಗೆ ಕೇಳುತ್ತಿದ್ದಾರೆ. ಸದನವಾದ ಮೇಲೆ ತಾವೂ ಕೂಡ ಅಲ್ಲಿಗೆ ಬಂದು ಅವರನ್ನು ಮಾತನಾಡಿಸಿ ಹೋಗಬೇಕು ಮತ್ತು ಮದ್ರಾಸ್‌ನಲ್ಲಿರುವ ರೀತಿಯಲ್ಲಿಯೇ ಇಲ್ಲಿಯೂ ಅದನ್ನು ಜಾರಿಗೆ ತಂದರೆ ಲಕ್ಷಾಂತರ ಅಸಂಘಟಿತ ಕಾರ್ಮಿಕರಿಗೆ ಅನುಕೂಲವಾಗುತ್ತದೆ. ಈಗಾಗಲೇ ಕೇರಳದಲ್ಲೂ ಅದೇ ವ್ಯವಸ್ಥೆ ಇದೆ. ಅಲ್ಲಿ ಬಹಳ ಯಶಸ್ವಿಯಾಗಿ ಜಾರಿಗೆ ತಂದಿದ್ದಾರೆ. ಈಗಾಗಲೇ ಬೆಂಗಳೂರಿಗೆ ಬಂದಿರುವ ಆ ಅಸೋಸಿಯೇಶನ್ ಜನರು ಕಾರ್ಮಿಕ ಸಚಿವರನ್ನು ಕಂಡು ಅವರ ಮನವಿಯನ್ನು ಸಚಿವರಿಗೆ ಕೊಟ್ಟಿದ್ದಾರೆ. ಒಂದು ಲಕ್ಷಕ್ಕೂ ಹೆಚ್ಚು ಜನ ಬರುತ್ತಿರುವುದರಿಂದ ನಾವೆಲ್ಲರೂ ಒಟ್ಟಿಗೆ ಹೋಗಿ

ಅವರನ್ನು ಕೇಳಿ ತಮ್ಮ ಛೇಂಬರ್‌ಗೆ ಕರೆಸಿಕೊಂಡು ಆ ಸಮಸ್ಯೆಗೆ ಪರಿಹಾರವನ್ನು ದಯಮಾಡಿ ತಾವು ಹುಡುಕಬೇಕೆಂದು ವಿನಂತಿ. ಕೇರಳದಲ್ಲಿ ಆ ಪದ್ಧತಿ ಜಾರಿಗೆ ಬಂದಿದೆ. ಆದುದರಿಂದ ನಮ್ಮ ರಾಜ್ಯದಲ್ಲಿ ಸಹ ಲಕ್ಷಾಂತರ ಜನ ಈ ಅಸಂಘಟಿತ ಕಾರ್ಮಿಕರಾದಂತಹ ಟೈಲರುಗಳು ಏನಿದ್ದಾರೆ ಅವರಿಗೆ ಇದರಿಂದ ಅನುಕೂಲವಾಗುತ್ತದೆ. ಮಾನ್ಯ ಅಧ್ಯಕ್ಷರೇ ಬೇರೆ ಸಮಯದಲ್ಲಿ ಅನುಕೂಲ ಮಾಡಿಕೊಟ್ಟರೂ ಸಾಕು, ಈಗ ಬೇಡ ಆಮೇಲೆ ಮಾಡಿಕೊಡಿ.

ಅಧ್ಯಕ್ಷರು : ಆಯಿತು.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಮುಖ್ಯಮಂತ್ರಿಗಳು, ತಾವು ದಯಮಾಡಿ ರಾಜ್ಯದ ಮೂಲೆಮೂಲೆಯಿಂದ ಬಂದಿರುವುದರಿಂದ ತಾವು ಐದು ನಿಮಿಷ ಅವರಿದ್ದಲ್ಲಿಗೆ ಹೋಗಿಬಂದರೆ ಒಳ್ಳೆಯದು. ಅಲ್ಲಿ ಪಕ್ಷಪಂಗಡದವರು ಇಲ್ಲ. ಇಡೀ ರಾಜ್ಯದ ಮೂಲೆಮೂಲೆಗಳಿಂದ ಹಾಗೂ ಪ್ರತಿ ಹಳ್ಳಿಗಳಿಂದ ಮೊದಲಬಾರಿಗೆ ಒಂದು ಲಕ್ಷ ಜನ ಸಂಘಟನೆಯಾಗಿ ಇಲ್ಲಿಗೆ ಅವರ ಸಮಸ್ಯೆಗಳನ್ನು ತಮ್ಮ ಗಮನಕ್ಕೆ ತರಬೇಕೆಂದು ಅವರನ್ನು ಕರೆದುಕೊಂಡು ಬಂದಿದ್ದಾರೆ. ದಯಮಾಡಿ ತಾವು ಹೋಗಿ ಬಂದು ಅದಕ್ಕೆ ಪರಿಹಾರ ಹುಡುಕಬೇಕು. ಒಂದು ಮಾತನ್ನು ತಾವು ಹೇಳಿ, ಇಲ್ಲಿಗೆ ಒಂದು ಲಕ್ಷ ಜನ ಬಂದಿರುವವರಿಗೆ ಸಮಾಧಾನವಾಗಿರುತ್ತದೆ.

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಅವರನ್ನು ಚೇಂಬರ್‌ಗೆ ಕರೆಸೋಣ. ಪ್ರತಿನಿಧಿಗಳನ್ನು, ನಿಮ್ಮನ್ನು ಕರೆಸಿ ಮಾತನಾಡೋಣ ಅಲ್ಲಿಗೆ ಹೋಗಿ ಬರಬಹುದು.

ಅಧ್ಯಕ್ಷರು : ಆಯಿತು. ಈಗ ಪ್ರಶ್ನೋತ್ತರ

3. ಪ್ರಶ್ನೋತ್ತರಗಳು

(ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು)

ಮೈಸೂರು ದಸರಾದಲ್ಲಿ ಉಂಟಾದ ಅವ್ಯವಸ್ಥೆ ಬಗ್ಗೆ

76 (1492) : ಶ್ರೀ ಎಸ್.ಎ. ರವೀಂದ್ರನಾಥ (ಮಾಯಕೊಂಡ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ವಿಶ್ವವಿಖ್ಯಾತ ದಸರಾ ಆಚರಣೆಗೆ ಪ್ರವಾಸಿಗರನ್ನು ಆಕರ್ಷಿಸಲು ರೂಪಿಸಿದ ವಿವಿಧ ಕಾರ್ಯಕ್ರಮ ಯೋಜನೆಗಳ್ಯಾವುವು?

ಆ) ದಸರಾ ಜಂಬೂಸವಾರಿಯ ವಿಶೇಷ ವೀಕ್ಷಣೆಗಾಗಿ ನೀಡುವ "ಗೋಲ್ಡ್ ಕಾರ್ಡುದಾರರಿಗೆ" ವೀಕ್ಷಣೆಗೆ ಸರಿಯಾಗಿ ಅವಕಾಶ ನೀಡದೇ ಸದರಿ ಕಾರ್ಡುಗಳನ್ನು ಅಧಿಕಾರಿಗಳ ಸಮೀಪವರ್ತಿಗಳು ಹಾಗೂ ಪರಿವಾರದವರು ದುರುಪಯೋಗ ಪಡಿಸಿಕೊಂಡಿರುವುದು. ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಅರಮನೆ ಪ್ರವೇಶ ದ್ವಾರದಲ್ಲಿ ಅನಗತ್ಯ ಕಿರಿಕಿರಿ, ಆಸನಗಳ ಅಸಮರ್ಪಕ ನಿರ್ವಹಣೆ ಮುಂತಾದ ತೊಂದರೆಗಳಿಗೆ ಕಾರಣಗಳೇನು;

ಈ) ಇದಲ್ಲದೆ ದಸರಾ ಕವಿಗೋಷ್ಠಿಗೆ ಭಾಗವಹಿಸಿದ್ದವರ ಪೈಕಿ (ಆಯ್ದ ಅತಿಥಿಗಳಿಗೆ) ಕೆಲವರಿಗೆ ನಗರದ ಹೊರ ವಲಯದಲ್ಲಿ ಪಾನಗೋಷ್ಠಿ ಏರ್ಪಡಿಸಿದ್ದರ ಬಗ್ಗೆ ಸರ್ಕಾರದ ನಿಲುವೇನು;

ಉ) ಈ ಎಲ್ಲಾ ಗೊಂದಲ ಅವಾಂತರಗಳ ಹಿನ್ನೆಲೆಯಲ್ಲಿ ಸರ್ಕಾರವು ಇನ್ನು ಮುಂದೆ ಕೈಗೊಳ್ಳುವ ಕ್ರಮಗಳೇನು?

ಶ್ರೀ ಎನ್. ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ಪ್ರವಾಸಿಗರನ್ನು ಆಕರ್ಷಿಸಲು ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳು ದಸರಾ ಕ್ರೀಡಾ ಕೂಟ, ಯುವ ದಸರಾ ಸಾಹಸೋತ್ಸವ ಚಲನಚಿತ್ರೋತ್ಸವ ಕುಸ್ತಿ ಸ್ಪರ್ಧೆಗಳು ಕವಿಗೋಷ್ಠಿಗಳನ್ನು ಏರ್ಪಡಿಸಲಾಗಿತ್ತು. ನಗರಕ್ಕೆ ವಿಶೇಷ ದೀಪಾಲಂಕಾರ ಮಾಡಲಾಗಿತ್ತು. ಪ್ರವಾಸಿಗರ ಅನುಕೂಲಕ್ಕಾಗಿ ರೂ. 5,000–00ಗಳ ಮುಖ ಬೆಲೆಯ (ಇಬ್ಬರಿಗೆ ಪ್ರವೇಶ) ಗೋಲ್ಡ್ ಕಾರ್ಡ್ ಯೋಜನೆ ಮಾಡಲಾಗಿತ್ತು.

ಆ) ಗೋಲ್ಡ್ ಕಾರ್ಡ್ ಪಡೆದವರಿಗೆ ಎಲ್ಲಾ ಕಾರ್ಯಕ್ರಮಗಳಲ್ಲೂ ವಿಶೇಷವಾದ ಆಸನದ ವ್ಯವಸ್ಥೆ ಮಾಡಲಾಗಿತ್ತು. ಜಂಬೂ ಸವಾರಿ ವೀಕ್ಷಣೆಗೂ ಅರಮನೆ ಆವರಣದಲ್ಲಿ ಪ್ರತ್ಯೇಕ ವ್ಯವಸ್ಥೆ ಮಾಡಲಾಗಿತ್ತು. ಗೋಲ್ಡ್ ಕಾರ್ಡ್ ಪಡೆದಿರುವವರಿಂದ ತಮಗೆ ಆಸನಗಳು ಲಭಿಸದೆ ಇರುವ ಬಗ್ಗೆ ಈ ತನಕ ಯಾವುದೇ ದೂರುಗಳು ಬಂದಿರುವುದಿಲ್ಲ. ಹಾಗೂ ಗೋಲ್ಡ್ ಕಾರ್ಡ್‌ಗಳನ್ನು ದುರುಪಯೋಗ ಪಡಿಸಿರುವ ಯಾವುದೇ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಇ) ವಿಜಯ ದಶಮಿ, ಜಂಬೂಸವಾರಿ ವೀಕ್ಷಣೆಗೆ ಗೋಲ್ಡ್ ಕಾರ್ಡ್‌ದಾರರಿಗೆ ಪ್ರತ್ಯೇಕ ಆಸನ ವ್ಯವಸ್ಥೆ ಹಾಗೂ ಪ್ರತ್ಯೇಕ ದ್ವಾರದ ವ್ಯವಸ್ಥೆ ಮಾಡಲಾಗಿತ್ತು. ಆದರೆ ಕೆಲವರಿಗೆ ಸರಿಯಾದ ಮಾಹಿತಿಯಿಲ್ಲದೆ ತೊಂದರೆಯಾಗಿರುತ್ತದೆ.

ಈ) ಇಂತಹ ಯಾವುದೇ ಅಧಿಕೃತ ಕಾರ್ಯಕ್ರಮ ನಡೆದಿರುವುದಿಲ್ಲ.

ಉ) ದಸರಾ ಉತ್ಸವದ ಆಚರಣೆಗೆ ಸಂಬಂಧಿಸಿದಂತೆ ಸಾಕಷ್ಟು ಮುಂಚಿತವಾಗಿ ಸಿದ್ಧತೆಗಳನ್ನು ಮಾಡಿಕೊಳ್ಳುವುದರಿಂದ ದಸರಾ ಉತ್ಸವವನ್ನು ಯಶಸ್ವಿಯಾಗಿ ಆಚರಿಸಬಹುದು. ನಗರದ ಪ್ರಮುಖರು ಸಂಘಸಂಸ್ಥೆಗಳ ಮುಖಂಡರ ಸಭೆಯನ್ನು ನಾಲ್ಕೈದು ತಿಂಗಳ ಮುಂಚೆ ಕರೆದು ಅವರನ್ನು ಉತ್ಸವದಲ್ಲಿ ತೊಡಗಿಸಿಕೊಂಡು ಹಿಂದಿನ ಸಾಲಿಗಿಂತ ಉತ್ತಮವಾಗಿ ದಸರಾ ಉತ್ಸವ ಮಾಡಲು ಪ್ರಯತ್ನಿಸಲಾಗುವುದು. ಮುಂದೆ ಕಾರ್ಯಕ್ರಮಗಳನ್ನು ರೂಪಿಸುವಾಗ ಹಿಂದಿನ ಅನುಭವಗಳನ್ನು ಗಮನದಲ್ಲಿಟ್ಟುಕೊಳ್ಳಲಾಗುವುದು.

ಶ್ರೀ ಎಸ್.ಎ. ರವೀಂದ್ರನಾಥ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳ ಸೆಕ್ರೆಟರಿಗಳನ್ನೇ ಅಲ್ಲಿ ಗಲಾಟೆ ಮಾಡಿರುವಂತಾದ್ದು ಪತ್ರಿಕೆಯಲ್ಲಿ ಬಂದಿದೆ. ಆದರೆ ಇವರು ಉತ್ತರದಲ್ಲಿ ಅಂತಹ ಅಧಿಕೃತ ಕಾರ್ಯಕ್ರಮಗಳು ನಡೆದಿರುವುದಿಲ್ಲವೆಂದು ಹೇಳಿ ಬೇರೆ ಬೇರೆ ರೀತಿಯ ಉತ್ತರವನ್ನು ಕೊಟ್ಟಿದ್ದಾರೆ. ಆದರೆ ಇದೆಲ್ಲಾ ನಡೆದಿರುವುದು ಪತ್ರಿಕೆಯಲ್ಲಿ ಬಂದಿದೆ. ಆದುದರಿಂದ ನಾನು ಆ ಪ್ರಶ್ನೆ ಹಾಕಿದ್ದು. ಅದಕ್ಕೆ ಸರಿಯಾದ ಉತ್ತರ ನಿಮ್ಮ ಮುಖಾಂತರ ಬರಬೇಕೆಂಬುದು ನನ್ನ ಅಪೇಕ್ಷೆ.

ಶ್ರೀ ಧರ್ಮಸಿಂಗ್ : ಮಾನ್ಯ ಅಧ್ಯಕ್ಷರೆ, ದಸರಾ ಉತ್ಸವ ಬಹಳ ವ್ಯವಸ್ಥಿತವಾಗಿತ್ತು. ಒಂದು ವಿಚಾರವೇನೆಂದರೆ ಇದು ಐದು ವರ್ಷಗಳ ನಂತರ ಮೊಟ್ಟಮೊದಲನೆಯದಾಗಿ ರಾಜ್ಯದಲ್ಲಿ ಮಳೆ ಬಂದು ಜನರು ಬಹಳ ಖುಷಿಯಾಗಿ ಇದರಲ್ಲಿ 15 ಲಕ್ಷಕ್ಕಿಂತಲೂ ಹೆಚ್ಚಿಗೆ ಜನರೂ ಭಾಗವಹಿಸಿದ್ದಾರೆ. ಬಹುಶಃ ಪತ್ರಿಕೆಯಲ್ಲಿ ಏನು ಬಂದಿದೆ ಅದು ಗೊತ್ತಾಗಿಲ್ಲ. ಅದರ ಬಗ್ಗೆ ಏನಾದರೂ

ಕೂಡ ಸ್ಪೆಸಿಫಿಕ್ ಆಗಿ ಬಂದಿದೆ ಎನ್ನುವಂತಾದ್ದು ಇದ್ದರೆ ಅದರ ಬಗ್ಗೆ ಗಮನವನ್ನು ಕೊಡುತ್ತೇನೆ ಮತ್ತು ಕ್ರಮವನ್ನೂ ಕೂಡ ತೆಗೆದುಕೊಳ್ಳುತ್ತೇನೆ.

ಸಂಚಾರಿ ನ್ಯಾಯಪೀಠಗಳ ಸ್ಥಾಪನೆ ಬಗ್ಗೆ

77 (1041) : ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯ ಸರ್ಕಾರ ಸ್ಥಾಪಿಸಲು ಉದ್ದೇಶಿಸಿರುವ ಸಂಚಾರಿ ನ್ಯಾಯಪೀಠಗಳ (ಸರ್ಕ್ಯೂಟ್ ಬೆಂಚ್) ಸಂಖ್ಯೆ ಎಷ್ಟು;

ಆ) ಈ ಸಂಚಾರಿ ಪೀಠಗಳನ್ನು ಸ್ಥಾಪಿಸಲು ಸ್ಥಳಗಳನ್ನು ಆಯ್ಕೆ ಮಾಡಲಾಗಿದೆಯೇ;

ಇ) ಈ ಪೀಠಗಳು ಎಂದಿನಿಂದ ಕಾರ್ಯಾರಂಭ ಮಾಡಲಿದೆ;

ಈ) ಈ ಪೀಠ ಸ್ಥಾಪನೆಗೆ ಏನಾದರೂ ತೊಂದರೆಗಳಿವೆಯೇ:

ಉ) ಇದ್ದಲ್ಲಿ ಅವುಗಳೇನು (ವಿವರ ನೀಡುವುದು)?

ಶ್ರೀ ಎನ್. ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) 2 ಸಂಚಾರಿ ಪೀಠಗಳನ್ನು ಉತ್ತರ ಕರ್ನಾಟಕದಲ್ಲಿ ಸ್ಥಾಪಿಸಲು ಕರ್ನಾಟಕ ಉಚ್ಚ ನ್ಯಾಯಾಲಯ ಅಧಿಸೂಚಿಸಿದೆ.

ಆ) ಧಾರವಾಡ ಮತ್ತು ಗುಲ್ಬರ್ಗಾದಲ್ಲಿ ಸಂಚಾರಿ ಪೀಠಗಳನ್ನು ಸ್ಥಾಪಿಸಲು ಉಚ್ಚ ನ್ಯಾಯಾಲಯ ಅಧಿಸೂಚಿಸಿದೆ.

ಇ) ಈ ಸಂಚಾರಿ ಪೀಠಗಳ ಕಾರ್ಯಾರಂಭದ ಕುರಿತು ಕರ್ನಾಟಕ ಉಚ್ಚ ನ್ಯಾಯಾಲಯವು ಅಧಿಸೂಚನೆ ಹೊರಡಿಸಲಿದೆ.

ಈ) ಇಲ್ಲ.

ಉ) ಉದ್ಭವಿಸುವುದಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಎರಡು ಸಂಚಾರಿ ಪೀಠಗಳನ್ನು ಅಂದರೆ ಹೈಕೋರ್ಟ್‌ನ ಸರ್ಕೀಟ್ ಬೆಂಚ್‌ಗಳನ್ನು ಸ್ಥಾಪನೆ ಮಾಡುವುದಕ್ಕೆ ಈಗಾಗಲೇ ಸರ್ಕಾರ ನಿರ್ಣಯ ಕೈಗೊಂಡಿದೆ ಮತ್ತು ಹೈಕೋರ್ಟ್‌ನವರು ಅದಕ್ಕೆ ಅನುಮೋದನೆ ಕೊಟ್ಟಿದ್ದಾರೆ. ನಿಜವಾಗಿ ಉತ್ತರ ಕರ್ನಾಟಕ ಭಾಗಕ್ಕೆ ಪರ್ಮನೆಂಟ್ ಹೈಕೋರ್ಟ್ ಪೀಠ ಬೇಕಾಗಿತ್ತು. ಆದರೆ ಸರ್ಕೀಟ್ ಬೆಂಚ್ ಸಧ್ಯಕ್ಕೆ ಕೊಟ್ಟಿದ್ದೀರಲ್ಲಾ, ಅದನ್ನು ನಾವು ಸ್ವಾಗತ ಮಾಡುತ್ತಿದ್ದೇವೆ. ಏಕೆಂದರೆ ಈಗ ಸಧ್ಯಕ್ಕೆ ಅದನ್ನು ತೆಗೆದುಕೊಳ್ಳೋಣ. ಮುಂದೆ ಸಂಪೂರ್ಣವಾದಂತಹ ಹೈಕೋರ್ಟ್ ಪೀಠದ ಸಲುವಾಗಿ ಹೋರಾಟ ಮುಂದುವರಿಯುವಾಗ ಸರ್ಕಾರದ ಒತ್ತಡವೂ ಕೂಡ ಹೈಕೋರ್ಟ್ ಮೇಲೆ ಬೇಕಾಗುತ್ತದೆ. ಈಗ ನೀವು ಸರ್ಕೀಟ್ ಬೆಂಚ್ ಅನೌನ್ಸ್ ಮಾಡಿದಿರಿ. ಅವುಗಳು ಹುಬ್ಬಳ್ಳಿ ಮತ್ತು ಗುಲ್ಬರ್ಗದಲ್ಲಿ ಒಂದೊಂದು, ಆದರೆ ಇಲ್ಲಿಯವರೆಗೆ ಸ್ಥಳ ನಿಗದಿಯಾಗಲಿಲ್ಲ. ಯಾವ ಪ್ಲೇಸ್‌ನಲ್ಲಿ ಅಥವಾ ಯಾವ ಬಿಲ್ಡಿಂಗ್‌ನಲ್ಲಿ ಮಾಡುತ್ತೇವೆ ಎಂದು ಇದುವರೆಗೂ ನಿಗದಿಯಾಗಲಿಲ್ಲ. ಇದು ಏಕೆ ನಿಧಾನವಾಗಿದೆ? ಇದಕ್ಕೆ ಉತ್ತರ ಕೊಡಬೇಕು. ಮತ್ತು ಸರ್ಕಾರದ ಕಡೆಯಿಂದ ಇದರ ಬಗ್ಗೆ ಏನು ಮುತುವರ್ಜಿ ವಹಿಸಿದ್ದೀರಿ? ಹೈಕೋರ್ಟ್‌ನ ಚೀಫ್ ಜಸ್ಟೀಸ್ ಭೇಟಿಯಾಗಿ ಅದಕ್ಕೆ ಸಂಬಂಧಪಟ್ಟ ನ್ಯಾಯಾಧೀಶರನ್ನು ಭೇಟಿಯಾಗಿ ಈ ಸೈಟ್ ಮತ್ತು ಬಿಲ್ಡಿಂಗ್‌ನ ಇನ್ಸ್‌ಪೆಕ್ಷನ್ ಮಾಡಿ ಸ್ಥಳ ನಿಗದಿ ಮಾಡುವುದಕ್ಕೆ ಸರ್ಕಾರದ ಪ್ರಯತ್ನ ಏನು ನಡೆದಿದೆ ಎನ್ನುವುದನ್ನು ತಿಳಿಸಬೇಕು.

ಶ್ರೀ ಹೆಚ್.ಕೆ. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಜಗದೀಶ್ ಶೆಟ್ಟರ್ ಹೇಳಿದ ಹಾಗೆ ಉತ್ತರ ಕರ್ನಾಟಕದ ಜನತೆ ಬಹಳ ದಿವಸದಿಂದ ಏನು ಹೋರಾಟ ಮಾಡುತ್ತಿದ್ದರು ಅವರ ಬೇಡಿಕೆಗೆ ಸರ್ಕಾರ ಸ್ಪಂದಿಸಿದೆ, ಹೈಕೋರ್ಟ್ ಕೂಡ ಸ್ಪಂದಿಸಿದೆ. ಕಾರಣ ಅಲ್ಲಿ ಎರಡು ಸಂಚಾರಿ ಪೀಠಗಳನ್ನು ಈಗಾಗಲೇ ಸ್ಥಾಪನೆ ಮಾಡುವುದಕ್ಕೆ ಹೈಕೋರ್ಟ್‌ನವರು ಅಧಿಸೂಚನೆಯನ್ನು ಹೊರಡಿಸಿದ್ದಾರೆ. ಅದೇ ಅಧಿಸೂಚನೆಯಲ್ಲಿ, ಅಲ್ಲಿ ಯಾವ ಬಿಲ್ಡಿಂಗ್‌ನಲ್ಲಿ ಇರಬೇಕು ಎನ್ನುವುದರ ಬಗ್ಗೆ ಸರ್ಕಾರ ಏನು ಪ್ರಸ್ತಾಪ ಮಾಡಿದೆ ಆದರ ಬಗ್ಗೆ ಬಿಲ್ಡಿಂಗ್ ಮತ್ತು ಭೌತಿಕ ಸೌಲಭ್ಯಗಳು ಏನು ಬೇಕು ಎನ್ನುವ ಬಗ್ಗೆ ಒಂದು ಸಮಿತಿಯನ್ನು ನೇಮಕ ಮಾಡಿ ಆ ಸಮಿತಿ ವರದಿ ಕೊಟ್ಟ ನಂತರ ಮುಂದಿನ ಕೆಲಸಗಳನ್ನು ಮಾಡುತ್ತೇವೆಂದು ಆ ಅಧಿಸೂಚನೆಯಲ್ಲಿ ಏನು ತಿಳಿಸಿದ್ದಾರೆ, ಆ ಮಾತಿನಂತೆ ಈಗಾಗಲೇ ಒಂದು ಸಮಿತಿಯನ್ನು ನೇಮಿಸಿದ್ದಾರೆ ಎಂಬುದು ಎಲ್ಲರಿಗೂ ತಿಳಿದಿರುವಂತಹ ವಿಚಾರ. ಈ ಹಿನ್ನೆಲೆಯಲ್ಲಿ ಆ ಸಮಿತಿಯವರು ಕೊಟ್ಟಿರತಕ್ಕಂಥ ವರದಿ ಮೇಲೆ ಬಿಲ್ಡಿಂಗ್ ಅನ್ನು ನಾವೇನು ಪ್ರಪೋಸ್ ಮಾಡಿದ್ದೇವೆ ಅದನ್ನು ಅವರು ಗಮನಿಸುತ್ತಾರೆ. ನಂತರ ಮುಂದಿನ ಕಾರ್ಯಕ್ರಮವನ್ನು ಹೈಕೋರ್ಟ್‌ನವರು ತೆಗೆದುಕೊಳ್ಳುತ್ತಾರೆ. ಈ ಒಂದು ವಿಚಾರದ ಬಗ್ಗೆ ರಾಜ್ಯಸರ್ಕಾರ ಏನು ಕಾರ್ಯಕ್ರಮ ತೆಗೆದುಕೊಂಡಿದೆ, ಇದು ಬೇಗ ಆಗಬೇಕು ಎನ್ನುವುದರ ಬಗ್ಗೆ ಕೇಳಿದಿರಿ. ನಾನು ಈಗಾಗಲೆ ಸನ್ಮಾನ್ಯ ಮುಖ್ಯ ನ್ಯಾಯಾಧೀಶರನ್ನು ಭೇಟಿಯಾಗಿ ಇದನ್ನು ಆದಷ್ಟು ಬೇಗ ಪ್ರಾರಂಭಿಸಬೇಕು ಎನ್ನುವ ಮನವಿಯನ್ನು ಮಾಡಿಕೊಂಡಿದ್ದೇನೆ. ನಂತರ ಸನ್ಮಾನ್ಯ ಮುಖ್ಯಮಂತ್ರಿಗಳು ವಿಶೇಷವಾಗಿ ಮುಖ್ಯ ನ್ಯಾಯಾಧೀಶರನ್ನು ಭೇಟಿಯಾಗಿ ಅಲ್ಲಿ ಆದಷ್ಟು ಬೇಗ ಪ್ರಾರಂಭ ಮಾಡುವ ಬಗ್ಗೆ ಮನವರಿಕೆ ಮಾಡಿಕೊಟ್ಟಿದ್ದಾರೆ. ಏಕೆಂದರೆ ಜನ ಬಹಳಷ್ಟು ದಾರಿ ಕಾಯುತ್ತಿದ್ದಾರೆ ಎನ್ನುವುದರ ಬಗ್ಗೆ ಒತ್ತು ಕೊಟ್ಟು ಪ್ರಸ್ತಾಪ ಮಾಡಿದ್ದಾರೆ. ದಿ: 18.01.05ರಂದು ಮತ್ತೆ ಸನ್ಮಾನ್ಯ ಮುಖ್ಯಮಂತ್ರಿಗಳು ಮುಖ್ಯ ನ್ಯಾಯಾಧೀಶರಿಗೆ ಪತ್ರವೊಂದನ್ನು ಬರೆದು ಈಗಾಗಲೆ ನಾವು ಏನು ನಮ್ಮ ಬದ್ಧತೆಯನ್ನು ವ್ಯಕ್ತಮಾಡಿದ್ದೇವೆ ಮತ್ತು ಯಾವ ಸ್ಥಳದಲ್ಲಿ ಅದನ್ನು ಪ್ರಾರಂಭ ಮಾಡಬೇಕೆಂಬ ಬಗ್ಗೆ ವಿಶೇಷವಾಗಿರುವಂತಹ ಪ್ರಸ್ತಾಪದಿಂದ ಕೂಡಿದ ಪತ್ರ ಮುಖ್ಯ ನ್ಯಾಯಾಧೀಶರ ಹತ್ತಿರ ಹೋಗಿದೆ. ಅದಕ್ಕೆ ಅವರು ಸ್ಪಂದಿಸಿದ್ದಾರೆ ಎಂದು ಸನ್ಮಾನ್ಯ ಮುಖ್ಯಮಂತ್ರಿಗಳು ಈಗಾಗಲೆ ಹೇಳಿರುವುದು ತಮ್ಮ ಗಮನಕ್ಕೆ ಬಂದಿದೆ. ಆದಷ್ಟು ಬೇಗ ಈ ಸರ್ಕೀಟ್ ಬೆಂಚ್ ಸ್ಥಾಪನೆ ಅನ್ನುವುದಕ್ಕಿಂತ ಕಾರ್ಯಪ್ರಾರಂಭದತ್ತ ಸರ್ಕಾರ ಪ್ರಯತ್ನ ಮಾಡುತ್ತಿದೆ. ಮತ್ತು ಮುಖ್ಯ ನ್ಯಾಯಾಧೀಶರಿಗೆ ಆದಷ್ಟು ಬೇಗ ಪ್ರಾರಂಭಿಸುವುದರ ಬಗ್ಗೆ ಹಾಗೂ ಸಮಿತಿಯವರು ಏನಾದರೂ ಆ ಭಾಗಕ್ಕೆ ಬಂದಾಗ ಅವರಿಗೆ ನಾವೇನು ಸವಲತ್ತು ಕೊಡಬೇಕು ಅವುಗಳನ್ನು ಒದಗಿಸುವುದರ ಬಗ್ಗೆ ಅಲ್ಲದೆ ಹೈಕೋರ್ಟ್ ಸಂಚಾರಿ ಪೀಠವನ್ನು ಸ್ಥಾಪನೆ ಮಾಡುವಂತಹ ಸಂದರ್ಭದಲ್ಲಿ ಈ ಫಿಸಿಕಲ್ ಇನ್‌ಫ್ರಾಸ್ಟ್ರಕ್ಚರ್ ಅಲ್ಲದೆ, ಇತರೆ ಯಾವುದಾದರೂ ಅನುಕೂಲತೆಗಳನ್ನು ಸೃಷ್ಟಿ ಮಾಡುವುದಿದ್ದರೆ, ಅಡ್ಮಿನಿಸ್ಟ್ರೇಟೀವ್ ಡಿಸಿಷನ್ ತೆಗೆದುಕೊಳ್ಳುವುದಿದ್ದರೆ ಎಲ್ಲವನ್ನೂ ತೀವ್ರತೆಯಿಂದ ತೆಗೆದುಕೊಳ್ಳುತ್ತೇವೆ. ಆದಷ್ಟು ಬೇಗ ಈ ಸಂಚಾರಿ ಪೀಠಗಳು ಕಾರ್ಯಾರಂಭ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಸಚಿವರು ಸರ್ಕಾರದ ಪ್ರಯತ್ನದ ಬಗ್ಗೆ ಹೇಳಿದರು...

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಇಬ್ಬರೂ ಮಾತನಾಡಿಕೊಂಡಿದ್ದೀರಾ..........

ಶ್ರೀ ಹೆಚ್.ಕೆ. ಪಾಟೀಲ್ : ಸಮಸ್ಯೆಗಳು ಇರುತ್ತವೆ, ಮಾತನಾಡಲಿ, ಮಾತನಾಡದೆ ಇರಲಿ, 25 ವರ್ಷಗಳಿಂದ ಮಾತನಾಡಿದ್ದೆವು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಊರಿಂದ ಬರುವಾಗ ಜೊತೆಯಲ್ಲಿ ಇಬ್ಬರೂ ಮಾತನಾಡಿಕೊಂಡು ಬಂದಿರುತ್ತೀರಿ. ನಾನು ಕೇಳುತ್ತೇನೆ, ನೀನು ಹೇಳು ಅಂತ.

ಶ್ರೀ ಜಗದೀಶ್ ಶೆಟ್ಟರ್ : ಸರ್ಕೀಟ್ ಬೆಂಚ್ ಸಿಕ್ಕಿದೆ, ಪರ್ಮನೆಂಟ್ ಬೆಂಚ್ ಸಿಕ್ಕಿಲ್ಲ. ಅದಕ್ಕೂ ನೀವು ಅಸಹ್ಯ ಪಡುತ್ತೀರಿ....

ಶ್ರೀ ಹೆಚ್.ಕೆ. ಪಾಟೀಲ್ : ಜನರ ಒಳತಿಗಾಗಿ ಒಮ್ಮೆ ಯಾವಾಗಲಾದರೂ ಮಾನ್ಯ ಜಗದೀಶ್ ಶೆಟ್ಟರ್ ನಮ್ಮ ಕಾನ್‌ಫಿಡೆನ್ಸ್‌ಗೆ ಬಂದರೆ ಇಷ್ಟು ಏಕೆ ನೀವು ಸಂಕಟ ಪಡುತ್ತೀರಿ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅಲ್ಲ, ಸಂತೋಷ ಪಡುತ್ತಿದ್ದೇನೆ. ನೀವಿಬ್ಬರೂ ಮಾತನಾಡಿಕೊಂಡು ಬಂದಿದ್ದೀರಿ.

ಶ್ರೀ ಜಗದೀಶ್ ಶೆಟ್ಟರ್ : ಅಲ್ಲಿ 30 ವರ್ಷ ಹೋರಾಟ ಮಾಡಿದ ಮೇಲೆ ಒಂದು ಸರ್ಕೀಟ್ ಬೆಂಚ್ ಸಿಕ್ಕಿದೆ. ಅದು ದೊಡ್ಡದೇನಲ್ಲ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಸಚಿವರು ಏನು ಹೇಳಿದರು, ನಿಮ್ಮ ಪ್ರಯತ್ನದ ಬಗ್ಗೆ ಒಪ್ಪುತ್ತಿದ್ದೇನೆ, ಆದರೆ ಹೆಚ್ಚಿನ ಮುತುವರ್ಜಿಯ ಅವಶ್ಯಕತೆ ಇದೆ. ಏಕೆಂದರೆ ಹಿಂದೆ 1979 ರಲ್ಲಿ ನ್ಯಾಯಮೂರ್ತಿ ಚಂದ್ರಶೇಖರ್ ಅವರು ಆವತ್ತು ಫೇವರೆಬಲ್ ಆಗಿ ರಿಪೋರ್ಟ್ ಕೊಟ್ಟರು. ಆದರೆ ಅವತ್ತಿನ ಸರ್ಕಾರವಾಗಲಿ, ಕೇಂದ್ರ ಸರ್ಕಾರವಾಗಲಿ ಅದಕ್ಕೆ ಸರಿಯಾದಂತಹ ರೀತಿಯಲ್ಲಿ ಸ್ಪಂದನ ಮಾಡದೆ ಮುಂದೆ ಜಸ್ವಂತ್ ಸಿಂಗ್ ಆಯೋಗ ಹೀಗೆಲ್ಲಾ ಹೋಗಿ ಹಾಗೆ ಹೋಗಿಬಿಟ್ಟಿತು. ಇದೂ ಕೂಡ ಹಾಗಾಗಬಾರದು. ಈ ಪ್ರಯತ್ನ ಆದಷ್ಟು ಬೇಗ ಆಗಬೇಕು. ಇದಕ್ಕೆ ಒಂದು ಟೈಂ ಬೌಂಡ್ ಕಾರ್ಯಕ್ರಮ ಹಾಕಿಕೊಳ್ಳಿ ಈಗಾಗಲೆ ನನಗೆ ಬಂದ ಮಾಹಿತಿ ಪ್ರಕಾರ ಜಸ್ಟೀಸ್ ನಾಯಕ್, ಜಸ್ಟೀಸ್ ಪದ್ಮರಾಜ್, ಜಸ್ಟೀಸ್ ಪಾಟೀಲ್ ಅವರು ಈ ಒಂದು ಸಮಿತಿಗೆ ನೇಮಕವಾಗಿದ್ದಾರೆ, ದಯವಿಟ್ಟು ತಾವು ಅವರನ್ನು ಅಪ್ರೋಚ್ ಮಾಡಿ As a Law Minister ಚೀಫ್ ಮಿನಿಸ್ಟರ್ ಆಗಲಿ ತಾವು ಅವರಿಗೆ ಅಪ್ರೋಚ್ ಮಾಡಿ. ಅದರ ಬಗ್ಗೆ ಪ್ರಯತ್ನ ಮಾಡಿದರೆ ಆಗುತ್ತದೆ. ಇನ್ನೊಂದು ವಿಚಾರ ಇದಕ್ಕೆ ಎಷ್ಟು ಹಣವನ್ನು ನಿಗದಿ ಮಾಡಿದ್ದೀರಿ? ಈ ಬಜೆಟ್‌ನಲ್ಲಿ ಏನು ಘೋಷಣೆ ಮಾಡಿದ್ದೀರಿ? ಹೈಕೋರ್ಟ್‌ನವರು ಏನಾದರೂ ಇಷ್ಟು ಹಣವನ್ನು ನೀವು ಇನ್‌ಫ್ರಾಸ್ಟ್ರಕ್ಚರ್‌ಗೆ ಕೊಡಬೇಕೆಂದು ಕೇಳಿದ್ದಾರಾ? ಅದಕ್ಕೆ ನೀವು ನಿಗದಿ ಮಾಡಿರುವಂತಹ ಹಣ ಅಥವಾ ಆಫರ್ ಮಾಡಿರುವುದು ಎಷ್ಟು? ನಾವು ಇಷ್ಟು ಕೊಡುವುದಕ್ಕೆ ತಯಾರಿದ್ದೇವೆ ಅಥವಾ ಇನ್ನು ಜಾಸ್ತಿ ಕೊಡುವುದಕ್ಕೆ ತಯಾರಿದ್ದೇವೆ ಎಂದು ಈ ರೀತಿಯಾಗಿ ಸ್ಪೆಸಿಫಿಕ್ ಆಗಿ ಭರವಸೆ ನಿಮ್ಮ ಕಡೆಯಿಂದ ಹೋಗದೇ ಇದ್ದರೆ ಇನ್‌ಫ್ರಾಸ್ಟ್ರಕ್ಚರ್ ಕೊಟ್ಟಿಲ್ಲ ಎಂದು ಆ ನೆಪದ ಮೇಲೆ ಸರ್ಕೀಟ್ ಬೆಂಚ್ ಆಗುವುದಿಲ್ಲ. ಹೀಗಾಗಿ ಹಣದ ಬಗ್ಗೆ ಒಂದು ಖಾತರಿ ಬೇಕಾಗುತ್ತದೆ. ಟೈಂಬೌಂಡ್ ದಯವಿಟ್ಟು ಇನ್‌ಸಿಸ್ಟ್ ಮಾಡಿ. ಟೈಂಬಾಂಡ್ ಫಿಕ್ಸ್ ಮಾಡಿದರೆ ಆಗುತ್ತದೆ. ಇಲ್ಲದೆ ಇದ್ದರೆ ಒಂದು ವರ್ಷವಾದರೂ ಕೂಡ ಅಲ್ಲಿ ಹೋಗುವುದು, ಭೇಟಿಯಾಗುವುದು, ಸೈಟ್ ಇನ್ಸ್‌ಪೆಕ್ಷನ್, ಹೀಗೆ ಇದರಲ್ಲಿ ಒಂದು ವರ್ಷ ಹೋಗಿಬಿಡುತ್ತದೆ. ಹೀಗಾಗಿ ಆ ಸರ್ಕೀಟ್

ಬೆಂಚ್ ಕೇವಲ ಕಾಗದದ ಮೇಲೆ ಉಳಿದಿದೆ. ನಿಜವಾಗಿ ಇದು ಕಾರ್ಯಗತವಾಗುವುದಿಲ್ಲ. ಇದರ ಬಗ್ಗೆ ಹೆಚ್ಚು ಮುತುವರ್ಜಿ ವಹಿಸಬೇಕು. ಅದಕ್ಕೆ ಸ್ಪಷ್ಟೀಕರಣ ಕೊಡಬೇಕು ಎನ್ನುವುದು ಒಂದು ಪ್ರಶ್ನೆ, ಮತ್ತೊಂದು ಪ್ರಶ್ನೆ ವಕೀಲರ ಮೇಲೆ ಇದ್ದಂತಹ ಈ ಹೈಕೋರ್ಟ್ ಪೀಠದ ಹೋರಾಟದಲ್ಲಿ ಕ್ರಿಮಿನಲ್ ಕೇಸುಗಳನ್ನು ವಾಪಸ್ಸು ತೆಗೆದುಕೊಳ್ಳಬೇಕು ಎಂದು ಕ್ಯಾಬಿನೆಟ್‌ನಲ್ಲಿ ಡಿಸಿಷನ್ ಆಗಿದೆ ಎನ್ನುವುದನ್ನು ಪತ್ರಿಕೆಯಲ್ಲಿ ನೋಡಿದೆ. ಅದರ ಬಗ್ಗೆ ದಯವಿಟ್ಟು ಹೇಳಬೇಕು. ಮತ್ತು ಕೇವಲ ವಕೀಲರು ಭಾಗವಹಿಸಿದಂತಹ ಹೋರಾಟ ಅಷ್ಟೇ ಅಲ್ಲ. ಅದರಲ್ಲಿ ಸಾರ್ವಜನಿಕರೂ ಭಾಗವಹಿಸಿದ್ದಾರೆ. ಈಗ ಪತ್ರಿಕೆಯಲ್ಲಿ ಏನು ಬಂದಿದೆ ಅಂದರೆ ವಕೀಲರು ಭಾಗವಹಿಸಿದಂತಹ ಹೋರಾಟದ ಕಟ್ಟಳೆಗಳನ್ನು ವಾಪಸ್ಸು ತೆಗೆದುಕೊಳ್ಳುತ್ತೇವೆ ಎಂದು. ಹಾಗಾದರೆ ಸಾರ್ವಜನಿಕರ ಮೇಲೆ ಕಟ್ಟಳೆ ಇವೆ. ಸಾರ್ವಜನಿಕರು ಇದ್ದಾರೆ. ಡಾಕ್ಟರ್ ಇದ್ದಾರೆ. ವಕೀಲರು ಇದ್ದಾರೆ, ಇಂಜಿನಿಯರ್ಸ್ ಇದ್ದಾರೆ, ನಾಗರೀಕರು ಇದ್ದಾರೆ. ಅವರುಗಳ ಮೇಲೆ ಈ ಕಟ್ಟಳೆಗಳು ಇವೆ. ಅವುಗಳನ್ನು ವಿತ್‌ಡ್ರಾಗೆ ಡಿಸಿಷನ್ ಏನು ತೆಗೆದುಕೊಂಡಿದ್ದೀರಿ ಎಂಬ ಬಗ್ಗೆ ತಾವು ಸ್ಪಷ್ಟೀಕರಣ ಕೊಡಬೇಕು.

ಶ್ರೀ ಹೆಚ್.ಕೆ. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಜಗದೀಶ್ ಶೆಟ್ಟರ್‌ರವರು ಈ ವಿಚಾರವಾಗಿ ಶಂಕೆ ವ್ಯಕ್ತಪಡಿಸುತ್ತಿದ್ದಾರೆ. ಈ ನ್ಯಾಯ ಪೀಠ ಬರುತ್ತದೆಯೊ ಇಲ್ಲವೊ, ಇದು ಹೇಗೆ ಆಗಬಹುದು? ಎಂದು ಶಂಕೆಯಲ್ಲಿದ್ದಾರೆ. ಅದು ಆ ರೀತಿ ಏನೂ ಆಗುವುದಿಲ್ಲ, ಈ ವಿಚಾರವಾಗಿ ಈಗಾಗಲೇ ರಾಜ್ಯಪಾಲರಿಂದ ಅಧಿಸೂಚನೆಯು ಒಪ್ಪಿಗೆಯನ್ನು ಪಡೆದುಕೊಂಡಿದೆ. ರಾಜ್ಯಸರ್ಕಾರ ಹೈಕೋರ್ಟ್ ಸಂಚಾರಿ ಪೀಠವನ್ನು ಸ್ಥಾಪನೆ ಮಾಡಲು, ಎಲ್ಲಾ ಮುತುವರ್ಜಿಯನ್ನು ವಹಿಸಿ, ಇದರ ಬಗ್ಗೆ ಏನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೋ ಅದನ್ನು ನಾವು ತೆಗೆದುಕೊಳ್ಳುತ್ತೇವೆ. ಇನ್ನು ಇದರ ಬಗ್ಗೆ ಹೈಕೋರ್ಟ್‌ನವರಿಗೆ ವಿನಂತಿಯನ್ನು ಏನಾದರೂ ಮಾಡಿಕೊಳ್ಳುವಂಥಾದ್ದು ಇದ್ದರೆ, ಮತ್ತೆ ಇವರು ಏನಾದರೂ ಕ್ರಮವನ್ನು ಜರುಗಿಸುವಂಥಾದ್ದು ಇದ್ದರೆ, ಅಂಥಾದ್ದನ್ನು ಅವರ ಗಮನಕ್ಕೆ ತರುತ್ತೇನೆ, ಇನ್ನು ಭೌತಿಕ ಸೌಲಭ್ಯ ಕೊಡುವ ವಿಚಾರದಲ್ಲಿ ಹೈಕೋರ್ಟ್‌ನವರು ಏನು ಕೇಳುತ್ತಾರೋ ಅದೆಲ್ಲಾ ಸರ್ಕಾರ ಒದಗಿಸುತ್ತದೆ. ಇನ್ನು ಹಣಕಾಸಿನ ವಿಚಾರದಲ್ಲಿ, ನಾವು ಈಗಾಗಲೇ ಬಜೆಟ್‌ನಲ್ಲಿ 20 ಕೋಟಿ ರೂಪಾಯಿಗಳನ್ನು ಒದಗಿಸಿದ್ದೇವೆ. ಇದರಿಂದ ಅವರಿಗೆ ಎಷ್ಟು ಹಣ ಬೇಕೆಂಬ ಪ್ರಸ್ತಾವಗಳು ನಮಗೆ ಏನೂ ಬಂದಿಲ್ಲ. ಆದರೆ ನಾವು ಅವರಿಂದ ಬಂದಿದೆಯೋ, ಬರುತ್ತದೋ ಎಂದು ಕಾಯುವುದಿಲ್ಲ. ನಾವು ಭೌತಿಕ ಸೌಲಭ್ಯಗಳು ಏನು ಬೇಕೆಂಬುದನ್ನು ಕಮಿಟಿ ಅವರಿಗೆ ಕೇಳುತ್ತೇವೆ, ಮತ್ತೆ ಕಮಿಟಿಯವರಿಗೆ ಇನ್ನೇನಾದರೂ ಸೌಲಭ್ಯಗಳು ಬೇಕೇ ಎಂಬ ಬಗ್ಗೆ ಪ್ರಸ್ತಾಪ ಮಾಡಿ, ಇದರ ಬಗ್ಗೆ ಚರ್ಚೆಯನ್ನು ಮಾಡಿ, ಇದರ ಬಗ್ಗೆ ಮುಂದಿನ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ತಾವು ಯಾವುದೇ ಕಾರಣಕ್ಕೂ ಸಂಚಾರಿ ಪೀಠದ ಸ್ಥಾಪನೆಯ ಬಗ್ಗೆ, ಮತ್ತೆ ಅವುಗಳ ಕೆಲಸ ಪ್ರಾರಂಭದ ಬಗ್ಗೆ, ಶಂಕೆಯನ್ನು ದಯಮಾಡಿ, ಹೊಂದಬೇಡಿ, ಇನ್ನು ಎರಡನೆಯದಾಗಿ ಈ ಹೈಕೋರ್ಟ್ ಪೀಠದ ಚಳುವಳಿಯ ಕೆಲವು ಪ್ರಕರಣಗಳನ್ನು ಸರ್ಕಾರ ಈಗಾಗಲೇ ವಾಪಸ್ಸು ಪಡೆದುಕೊಂಡಿದ್ದೇವೆ. ಆ ವಿಚಾರಗಳು ಪತ್ರಿಕೆಗಳಲ್ಲೂ ಸಹ ಬಂದಿದೆ. ಸನ್ಮಾನ್ಯ ಮುಖ್ಯಮಂತ್ರಿಯವರನ್ನು, ನಮ್ಮ ಉತ್ತರ ಕರ್ನಾಟಕದ ವಕೀಲರುಗಳು ಬಂದು ಭೇಟಿ ಆಗಿ, ಇದು ಒಂದು ಸಾರ್ವಜನಿಕವಾದ ಕೆಲಸ. ಈ ಕೆಲಸವನ್ನು ಮಾಡುವಾಗ ನಮ್ಮ ಮೇಲೆ ಕೇಸ್‌ಗಳನ್ನು

ಹಾಕಿದ್ದಾರೆ. ಅದನ್ನು ವಾಪಸ್ಸು ಪಡೆಯಬೇಕೆಂಬ ಮನವಿಯನ್ನು ಮಾಡಿದ್ದರು. ಈ ದಿವಸವೇ, ವಾಪಸ್ಸು ತೆಗೆದುಕೊಳ್ಳುತ್ತೇವೆಂಬ ಭರವಸೆಯನ್ನು ಮಾನ್ಯ ಮುಖ್ಯಮಂತ್ರಿಯವರು ಕೊಟ್ಟಿದ್ದರು. ಆ ಭರವಸೆಯಂತೆ ಈಗಾಗಲೇ ಪ್ರಕರಣಗಳನ್ನು ವಾಪಸ್ಸು ತೆಗೆದುಕೊಂಡಿದ್ದೇವೆ. ಅದರಲ್ಲಿ ಕೇವಲ ವಕೀಲರು ಅಷ್ಟೇ ಅಲ್ಲ. ಆ ಹೋರಾಟದ ಸಂದರ್ಭದಲ್ಲಿ ಕೇಸ್‌ಗಳು ಏನು ಫೈಲು ಆಗಿದ್ದಾವೊ, ಆ ಪ್ರಕರಣದಲ್ಲಿದ್ದವರ ಮೇಲಿದ್ದ ಕೇಸುಗಳನ್ನು ವಾಪಸ್ಸು ಪಡೆಯುವುದಕ್ಕೆ ಈಗಾಗಲೇ ಸಚಿವಸಂಪುಟದಲ್ಲೂ ನಿರ್ಣಯ ತೆಗೆದುಕೊಂಡಿದೆ.

ಶ್ರೀ ಧರ್ಮಸಿಂಗ್ : ಮಾನ್ಯ ಅಧ್ಯಕ್ಷರೇ, ಈಗ ಮಾನ್ಯ ಜಗದೀಶ್‌ಶೆಟ್ಟರ್‌ರವರು ಏನು ಪ್ರಶ್ನೆಯನ್ನು ಪ್ರಸ್ತಾಪ ಮಾಡಿದ್ದಾರೆ, ಅದಕ್ಕೆ ನಮ್ಮ ಕಾನೂನು ಮಂತ್ರಿಯವರು, ಸೂಕ್ತವಾಗಿ ಸರ್ಕಾರ ತೆಗೆದುಕೊಂಡಿರುವಂತಹ ಕ್ರಮಗಳ ಬಗ್ಗೆ ಹೇಳಿದ್ದಾರೆ. ಇದು ಸುಮಾರು 50 ವರ್ಷಗಳ ಸಮಸ್ಯೆಯಾಗಿದೆ. ತಾವೂ ಕೂಡ ಈ ವಿಚಾರವಾಗಿ ಮಾನ್ಯ ಪ್ರಧಾನಮಂತ್ರಿಯವರನ್ನು ಭೇಟಿ ಮಾಡಿ ಬಂದಿರಿ, ಆಗಲಿಲ್ಲ ಈಗ ಕೊನೆಯದಾಗಿ ನಾವು ಸರ್ಕ್ಯೂಟ್ ಬೆಂಚ್, ಎಂದು ಸಲಹೆ ಮಾಡಿದ್ದೆವು. ಮಾನ್ಯ ಜಗದೀಶ್‌ಶೆಟ್ಟರು ಮಾತನಾಡುವಂತಹ ಕಾಲದಲ್ಲಿ ಇದು 50 ವರ್ಷಗಳ ಸಮಸ್ಯೆಯನ್ನು ಬಗೆಹರಿಸಿದ್ದೀರಿ. ಎಂದು ಸ್ವಾಗತ ಮಾಡಲಿಲ್ಲ ಆ ಮಾತು ತಮ್ಮ ಬಾಯಿಯಿಂದ ಬರುತ್ತಿದೆ ಎಂದು ಆಶಿಸಿದ್ದೆ.

ಶ್ರೀ ಜಗದೀಶ್ ಶೆಟ್ಟರ್ : ನಾನು ಈ ವಿಚಾರವನ್ನು ಸ್ವಾಗತ ಮಾಡಿದ್ದೇನೆ.

ಶ್ರೀ ಧರ್ಮಸಿಂಗ್ : ಇದರಲ್ಲಿ ಯಾರು ಯಾರು ವಕೀಲರು ಭಾಗವಹಿಸಿದ್ದಾರೆ. ಅದರ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಂಡು, ಈ ಕೇಸ್‌ಗಳನ್ನು ವಾಪಸ್ಸು ತೆಗೆದುಕೊಳ್ಳುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್ : ಅದನ್ನು ನಾನು ಸ್ವಾಗತ ಮಾಡುತ್ತೇನೆ.

ಶ್ರೀ ಧರ್ಮಸಿಂಗ್ : ಇದರಲ್ಲಿ ಏನಾಯಿತೆಂದರೆ ಮಾನ್ಯ ಜೈನ್‌ರವರು ಹೋಗುವಂತಹ ಸಮಯದಲ್ಲಿ he has constituted a committee ಇಲ್ಲಿ ಯಾವ ಬಿಲ್ಡಿಂಗ್ ಇದೆಯೆಂಬುದು ಗೊತ್ತಾದ ಮೇಲೆ, ನಮ್ಮ ಸರ್ಕಾರವೂ ಕೂಡ ಇದಕ್ಕೆ ಶಿಫಾರಸ್ಸು ಮಾಡಿತು. ಇದಕ್ಕೆ ರಾಜ್ಯಪಾಲರೂ ಕೂಡ ಒಪ್ಪಿದ್ದಾರೆ. ಮಾನ್ಯ ರಾಜ್ಯಪಾಲರೂ ಒಪ್ಪಿದಮೇಲೆ, ಒಂದು ಕಮಿಟಿ ಕಾನ್‌ಸ್ಟಿಟ್ಯೂಟ್ ಆಗಿದೆ. ಮಾನ್ಯ ಜೈನ್‌ರವರು ಅಧಿಕಾರದಿಂದ ಹೋದ ಮೇಲೆ, ಹೊಸ ಮುಖ್ಯ ನ್ಯಾಯಧೀಶರು ಬಂದರು. ಅವರ ಸಬ್‌ಕಮಿಟಿ ಅಲ್ಲಿಗೆ ಹೋಗಿ, ಇನ್‌ಫ್ರಾಸ್ಟಕ್ಚರ್ ಬಗ್ಗೆ ನೋಡಿಕೊಂಡು ಬರುವಂಥಾದ್ದು ಅಷ್ಟೇ ಇದೆ. ಈ ಇನ್‌ಫ್ರಾಸ್ಟಕ್ಚರ್ ಧಾರವಾಡದಲ್ಲೂ ಇದೆ; ಗುಲ್ಬರ್ಗಾದಲ್ಲೂ ಕೂಡ ಇದೆ. ಇದರಲ್ಲಿ ಬೇರೆ ಪ್ರಶ್ನೆ ಇಲ್ಲ. ಇದಕ್ಕೆ 20 ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆ. ಈ ಸಮಿತಿ ಸ್ಥಳಕ್ಕೆ ಹೋಗಿ ಬಂದಮೇಲೆ, ಎಷ್ಟೆಷ್ಟು ಹಣ ಬೇಕೆಂಬ ಬಗ್ಗೆ ತಿಳಿಸಿದರೆ, ಸರ್ಕಾರ ಆ ಹಣವನ್ನು ಬಿಡುಗಡೆ ಮಾಡುತ್ತದೆ. ಈ ಬಗೆಹರಿಯಲಾರದಂತಹ ಕೆಲಸಗಳು ಈ ಸಿ.ಇ.ಟಿ. ಆಗಲಿ, ಬೇರೆ ಕೆಲಸಗಳು, ಇವುಗಳ ಬಗ್ಗೆ ಮಾನ್ಯ ಯಡಿಯೂರಪ್ಪನವರು ತಾವು, ಇವೆಲ್ಲಾ ಆಗುತ್ತಾ ಬಂದಿವೆ. ಇವೆಲ್ಲವನ್ನೂ ತಾವು ಒಮ್ಮೆ ಹೇಳಿಕೊಂಡು ಬನ್ನಿ ಈ ಎರಡೂ ಸರ್ಕ್ಯೂಟ್ ಬೆಂಚ್ ಯಾವಾಗ ಆಗಬೇಕಾಗಿತ್ತು. ಅದು ಈಗ ಸರ್ಕಾರದಿಂದ ಆಗಿದೆ. ಇದರ ಬಗ್ಗೆ ಮಾನ್ಯ ಕಾನೂನು ಸಚಿವರು ಹೇಳಿದಹಾಗೆ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಜೆ.ಎಸ್. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೇ, ಈ ದಾಖಲೆಗಳನ್ನು ಮತ್ತು ಕಟ್ಟಳೆಗಳನ್ನು ವಾಪಸ್ಸು ತೆಗೆದುಕೊಳ್ಳುವಾಗ, ನಾನು ತಮ್ಮಲ್ಲಿ ವಿನಂತಿ ಮಾಡಿದ್ದೆ. ಇಲ್ಲಿ ರೈತರ, ವಿದ್ಯಾರ್ಥಿಗಳ, ಮತ್ತು ಕಾರ್ಮಿಕರ ಮೇಲೆ ಇರುವಂತಹ ಕಟ್ಟಳೆಗಳನ್ನು ವಾಪಸ್ಸು ತೆಗೆದುಕೊಳ್ಳುವಂಥಾದ್ದಕ್ಕೆ ತಾವು ದೊಡ್ಡ ಮನಸ್ಸು ಮಾಡಬೇಕು. ತಾವು ರೈತ ಸಂಘದ ಜೊತೆಗೆ ಮಾತನಾಡುತ್ತಾ ಹೇಳಿದ್ದೀರಿ. ರಾಜ್ಯದಲ್ಲಿ ರೈತರ ಮೇಲೆ ಯಾವುದಾದರೂ ಕೇಸ್‌ಗಳು ಹಾಕಿದ್ದರೆ, ವಿದ್ಯಾರ್ಥಿಗಳ ಮೇಲೆ ಹಾಕಿರುವಂತಹ ಕೇಸುಗಳನ್ನು ಹಿಂದಕ್ಕೆ ತೆಗೆದುಕೊಳ್ಳುತ್ತೇವೆಂಬ ಮಾತನ್ನು ಸರ್ಕಾರ ಶಾಸನ ಸಭೆಯಲ್ಲಿ ಒಂದು ಸಾರಿ ಹೇಳಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ತಾವು ನಿನ್ನೆಯ ವಿಚಾರವನ್ನು ನೋಡಿರಬಹುದು. ನಾವು ಇದನ್ನು ರಾಜಕಾರಣದಲ್ಲಿ ಬೆಳೆಸುವುದಕ್ಕೆ ಹೋಗಲಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ : ನಾನು ಕೇಳಿರುವಂತಹ ಪ್ರಶ್ನೆಗೆ ಸರ್ಕಾರ ಉತ್ತರ ಹೇಳಲಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಇದಕ್ಕೆ ಸಂಬಂಧಪಟ್ಟಂತೆ ಇರುವಂತಹ ಕೇಸ್‌ಗಳ ಬಗ್ಗೆ ಹೇಳುತ್ತಿದ್ದೇನೆ. ಭಟ್ಕಳದ ಶಾಸಕರ ಹತ್ಯೆ ಆಯಿತು. ಇದನ್ನು ಮಾನ್ಯ ಮುಖ್ಯಮಂತ್ರಿಯವರ ಮನೆಯ ಮುಂದೆ ಸಿ.ಬಿ.ಐ. ತನಿಖೆಗೆ ವಹಿಸಿಕೊಡಬೇಕೆಂದು ಸತ್ಯಾಗ್ರಹ ಮಾಡಿದಾಗ, ಅನೇಕ ಜನರ ಮೇಲೆ ಕಟ್ಟಳೆಯನ್ನು ಹಾಕಿದರು. ಆಗ ನಾವು ಜಾಮೀನನ್ನು ತೆಗೆದುಕೊಂಡು, ರಾಜ್ಯದಲ್ಲಿ ಓಡಾಡಬೇಕೆಂದು, ಶಾಸನಸಭೆಗೆ ಬರಬೇಕೆಂದು ಪರ್ಮಿಷನ್ ತೆಗೆದುಕೊಂಡಿದ್ದೆವು. ಆದರೆ ಪತ್ರಿಕೆಗಳಲ್ಲಿ ಧಾರಾವಾಹಿ ಏನು ಬರುತ್ತಿದೆಯೆಂಬುದನ್ನು ನೋಡಿ. ಅದಕ್ಕೆ ಈ ಎಲ್ಲಾ ಕೇಸ್‌ಗಳನ್ನು ವಾಪಸ್ಸು ತೆಗೆದುಕೊಂಡು, ಮತ್ತೆ ಹೊಸದಾಗಿ ಹೋರಾಟ ಮಾಡುವುದಕ್ಕೆ ಅವಕಾಶ ಮಾಡಿಕೊಡಿ. ಹಳೆಯ ಕೇಸ್‌ಗಳನ್ನು ವಿತ್‌ಡ್ರಾ ಮಾಡಿಕೊಳ್ಳಿ. ಈ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಸತ್ಯಾಗ್ರಹ, ಧರಣಿ ಮಾಡುವಂಥಾದ್ದು, ಇದಕ್ಕೆ ಕೊಲೆಯ ಮೊಕದ್ದಮೆಯನ್ನು ಹೂಡುವಂಥಾದ್ದು. ಈ ರೀತಿಯಾಗಿ ಪೋಲೀಸ್ ಅಧಿಕಾರಿಗಳು ಮಾಡುವುದರಿಂದ ಕಾನೂನಿಗೂ ಬೆಲೆ ಇಲ್ಲದಂತಾಗುತ್ತದೆ. ನಾವೂ ಸಹ ಈ ಪೇಚಾಟಕ್ಕೆ ಸಿಕ್ಕಿಕೊಳ್ಳಬೇಕಾಗುತ್ತದೆ. ಒಬ್ಬ ಚುನಾಯಿತ ಪ್ರತಿನಿಧಿಯಾಗಿ ನಾವು ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ರೈತರುಗಳ ಮೇಲೆ ಶಾಸಕರುಗಳ ಮೇಲೆ ಈ ಹೋರಾಟ ಮಾಡುವಂತಹ ಸಂದರ್ಭಗಳಲ್ಲಿ ಏನು ಕೇಸುಗಳು ದಾಖಲು ಆಗಿದೆಯೋ, ಅವೆಲ್ಲವನ್ನೂ ಸಮಗ್ರವಾಗಿ ವಾಪಸ್ಸು ತೆಗೆದುಕೊಳ್ಳುವಂಥಾದ್ದಕ್ಕೆ ತಾವು ಯೋಚನೆ ಮಾಡಿ ಎಂದು ಕೇಳುತ್ತಿದ್ದೇನೆ.

ಶ್ರೀ ಧರ್ಮಸಿಂಗ್ : ಮಾನ್ಯ ಅಧ್ಯಕ್ಷರೇ, ಈಗಾಗಲೆ ಸಂಪುಟದಲ್ಲಿ ರಾಜ್ಯದ ಸಮಸ್ಯೆಗಳ ಬಗ್ಗೆ ಹೋರಾಟ ಮಾಡುವಂತಹ ಪ್ರತಿಭಟನೆಗಳು ಏನು ಇದೆ. ಅದರಲ್ಲಿ ಏನು ಕೇಸುಗಳನ್ನು ಹಾಕಿದ್ದೇವೆ. ಅದರಲ್ಲೂ ಶ್ರೀ ಜೆ.ಸಿ. ಮಾಧುಸ್ವಾಮಿಯವರು ಹೇಳಿದ ರೈತರ ಬಗ್ಗೆ, ಮಾನ್ಯ ಪುಟ್ಟಣ್ಣಯ್ಯನವರ ನೇತೃತ್ವದಲ್ಲಿ ಮೊನ್ನೆ ರೈತರ ಪ್ರತಿನಿಧಿಗಳು ಬಂದು, ಭೇಟಿ ಮಾಡಿದ್ದರು. ನಾವು ಈಗಾಗಲೇ ವಿದ್ಯಾರ್ಥಿಗಳ ಮೇಲೆ ಬೇರೆ ಕಡೆಗಳಲ್ಲಿ ಎಲ್ಲಿ ಕೇಸ್‌ಗಳು ಆಗಿದೆ, ಅದನ್ನು ಇತ್ಯರ್ಥ ಮಾಡುತ್ತೇವೆ. ಆದರೆ 307 ಕೇಸ್‌ಗಳು ಏನು ಇದೆ, ಅದು non-bailable ವಾರೆಂಟ್ ಇದೆ, ಅದನ್ನು ಕಾನೂನು ಪ್ರಕಾರ ನೋಡಿ ತರುತ್ತಾರೆ. ಇದಕ್ಕೆ ತಾವೆಲ್ಲರೂ ಒಪ್ಪುತ್ತೀರಿ. ಇವತ್ತು ಪ್ರತಿಭಟನೆಯನ್ನು ಮಾಡುವಂತಹ ಹಕ್ಕು ವಿರೋಧಪಕ್ಷದವರು, ಬೇರೆ ಪಕ್ಷದವರು, ರೈತರು,

ವಿದ್ಯಾರ್ಥಿಗಳು, ದಲಿತರು, ಇವರೆಲ್ಲರಿಗೂ ಇದೆ. ಅಲ್ಲಿ ವಿನಾಕಾರಣ ಆಗಿ ಕೇಸಸ್ ಆಗಿವೆ. ನಾನು ಮೊನ್ನೆ 26ನೇ ತಾರೀಖಿನಂದು ಜೈಲಿಗೆ ಹೋಗಿದ್ದೆ. ಅಲ್ಲಿ 106 ಮಂದಿ ಖೈದಿಗಳನ್ನು ಬಿಟ್ಟೆವು. Under trial ಅಲ್ಲಿ ಐದು ಸಾವಿರ ಜನರು ಇದ್ದಾರೆ. ನಾನು ಇದನ್ನು ನೋಡುವುದಕ್ಕೆ ಆಗಲಿಲ್ಲ. ಇದರ ಬಗ್ಗೆ ಫಾಲೋ ಅಪ್ ಮಾಡಬೇಕೆಂದು, ಹೋಂ ಕಮೀಷನರ್‌ರವರಿಗೂ ಹೇಳಿದ್ದೇನೆ. ಇಲ್ಲಿ ಅಂಡರ್ ಟ್ರಯಲ್‌ಗೆ ಕರೆದುಕೊಂಡು ಹೋಗುತ್ತಾರೆ, ಮತ್ತೆ ವಾಪಸ್ಸು ಕಳುಹಿಸುತ್ತಾರೆ. ಆ ರೀತಿಯಾಗಬಾರದು, ಅದಕ್ಕೆ ಸ್ಪೀಡ್ ಆಫ್ ಮಾಡುವುದಕ್ಕೋಸ್ಕರ, ಮೊನ್ನೆ ದಿವಸ ಬಂದಿದ್ದ ಮಾನ್ಯ ಭಾರದ್ವಾಜ್‌ರವರು, ಲಾ ಮಿನಿಸ್ಟರ್ ಜೊತೆಗೂ ಮಾತನಾಡಿದ್ದೇನೆ. 307 - Non bailable warrant ನಲ್ಲಿ ತಮ್ಮದು ಏನೋ ಒಂದು ಕಾರ್ಯಕ್ರಮ ದೇಶದಲ್ಲಿ ಇದ್ದ ಹಾಗೆ ಕಾಣುತ್ತದೆ. ಶ್ರೀಮತಿ ಉಮಾಭಾರತಿಯವರ ಮೇಲೂ 307 ಇತ್ತು, ಅವರೂ ಕೂಡ ಬಂದರು. ಅವರು ಮುಖ್ಯಮಂತ್ರಿಗಳಾದರು. ಇದು ಏಕೆ ಹೀಗೆ ಬರುತ್ತಿದೆ, ಎಂದು ನೋಡಿದೆ. ಆದರೂ ಕೂಡ ತಾವು ನಿನ್ನೆ ದಿವಸ ನ್ಯಾಯಾಲಯಕ್ಕೆ ಹೋಗಿದ್ದೀರಿ. ತಾವು ಕಾನೂನಿಗೆ ಮರ್ಯಾದೆಯನ್ನು ಕೊಟ್ಟಿದ್ದೀರಿ. ನೀವು ಬೇಲ್ ತೆಗೆದುಕೊಂಡಿದ್ದೀರಿ. ತಾವು ಹೇಳುವಂಥಾದ್ದನ್ನು ಒಪ್ಪುತ್ತೇನೆ. ಇವತ್ತು ವಿನಾಕಾರಣ ಕೇಸ್‌ಗಳನ್ನು ಹಾಕುತ್ತಿದ್ದೇವೆ. ಅದನ್ನು ತೆಗೆಯುತ್ತೇವೆ. ಎಲ್ಲಿ ತೆಗೆಯಲಾರದಂತಹ ಕೇಸ್‌ಗಳು ಇವೆ ಅಲ್ಲಿ ಸ್ವಲ್ಪ ತೊಂದರೆಗಳು ಆಗುತ್ತವೆ. ಅದರ ಬಗ್ಗೆ ಗಮನ ಕೊಡುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೇ, ಭೀಮಾ ನದಿಯ ತೀರದಲ್ಲಿ ಹೋರಾಟ ಮಾಡಿದಂತಹ ರೈತರ ಮೇಲೆ ಇದ್ದಂತಹ ಕೇಸನ್ನು ವಾಪಸ್ಸು ತೆಗೆದುಕೊಳ್ಳುತ್ತೇವೆಂದು ಡಿಸಿಷನ್ ಆಯಿತು. ಆದರೆ ಇದುವರೆಗೂ ಇದನ್ನು ವಿತ್‌ಡ್ರಾ ಮಾಡಲಿಲ್ಲ.

ಶ್ರೀ ಧರ್ಮಸಿಂಗ್ : ಮಾನ್ಯ ಅಧ್ಯಕ್ಷರೇ, ನಮ್ಮ ಸರ್ಕಾರದ ನಿರ್ಣಯವೇನೆಂದರೆ ಹೋಂ ಕಮೀಷನರ್‌ನವರು ಕಳುಹಿಸಬೇಕು. ಅದು ಐ.ಜಿ.ಗೆ ಹೋಗುತ್ತದೆ. ಡಿ.ಜಿ.ಯವರಿಗೆ ಹೋಗುತ್ತದೆ. ಆದರೂ ಕೂಡ ಇದನ್ನು ಸ್ಪೀಡ್ ಆಫ್ ಮಾಡಿ, ಇದನ್ನು ತೆಗೆಯುವಂತಹ ಪ್ರಯತ್ನ ಮಾಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಡಿಸಿಷನ್ ತೆಗೆದುಕೊಂಡು 8–10 ತಿಂಗಳುಗಳಾಯಿತು. ಇದುವರೆಗೂ ಏನು ಮಾಡಲಿಲ್ಲ.

ಶ್ರೀ ಚಿಕ್ಕನಗೌಡ್ರ ಸಿದ್ಧನಗೌಡ ಈಶ್ವರಗೌಡ : ಮಾನ್ಯ ಅಧ್ಯಕ್ಷರೇ, ಮಾನ್ಯ ಹೆಚ್.ಕೆ. ಪಾಟೀಲ್‌ರವರು ಇದ್ದಾರೆ. ಅವರಿಗೆ ಗೊತ್ತಿದೆ. ನನ್ನ ಮೇಲೆ, ತಾಲ್ಲೂಕು ಪಂಚಾಯತ್‌ನವರ ಮೇಲೆ, ಜಿಲ್ಲಾ ಪಂಚಾಯತ್‌ನವರ ಮೇಲೆ, 14 ಮಂದಿಯ ಕೇಸ್ ಆಗಿದೆ. ನಾವು ಹದಿನೈದು ಬಾರಿ, ಇಪ್ಪತ್ತು ಬಾರಿ ಕೋರ್ಟ್‌ಗೆ ಹೋಗಿ ಮೂರು, ನಾಲ್ಕು ತಾಸುಗಳು ಕಾಯುವಂತಹ ಪರಿಸ್ಥಿತಿ ಇದೆ. ನಾವು ನೀರಿಗೋಸ್ಕರ ಹೋರಾಟ ಮಾಡಿದ್ದು. ನನ್ನ ಮೇಲೆ 9 ಕೇಸ್‌ಗಳನ್ನು ಹಾಕಿದ್ದಾರೆ. ನಾನು ಒಬ್ಬನೇ ಅಲ್ಲ. ಜಿಲ್ಲಾ ಪಂಚಾಯತ್ ಸದಸ್ಯರು, ತಾಲ್ಲೂಕು ಪಂಚಾಯತ್ ಸದಸ್ಯರು, ಗ್ರಾಮ ಪಂಚಾಯತ್ ಅಧ್ಯಕ್ಷರು ಇದ್ದಾರೆ. ಇಲ್ಲಿ 14 ಜನರ ಮೇಲೆ ಕೇಸ್ ಹಾಕಿದ್ದಾರೆ. ದಯಮಾಡಿ ಮಾನ್ಯ ಮಂತ್ರಿಗಳು ಮತ್ತು ಮಾನ್ಯ ಮುಖ್ಯಮಂತ್ರಿಯವರು ಕುಳಿತು ಮಾತನಾಡಿ, ಇದನ್ನು ವಿತ್‌ಡ್ರಾ ಮಾಡಿಕೊಳ್ಳಬೇಕೆಂದು ಅಧ್ಯಕ್ಷರ ಮುಖಾಂತರ ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಜಗದೀಶ್ ಶೆಟ್ಟರ್ : ಒಂದೊಂದು ಇಲಾಖೆಯವರು ಒಂದೊಂದು ಕೇಸ್ ಅನ್ನು ಹಾಕಿದ್ದಾರೆ. ಇನ್ನು ಮಾನ್ಯ ಚಂದ್ರಕಾಂತ್ ಬೆಲ್ಲದ್‌ರವರು ಜ್ಯುಡಿಶಿಯಲ್ ಕಸ್ಟಡಿಯಲ್ಲಿ ಇದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇದು ಈಗ ಸರಿಹೋಗುತ್ತದೆ.

ಶ್ರೀ ಹೆಚ್.ಕೆ. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಚಿಕ್ಕನಗೌಡ್ರ ಸಿದ್ದನಗೌಡ ಈಶ್ವರಗೌಡರು ಕಲಘಟಗಿಯಲ್ಲಿ ಹೋರಾಟ ಮಾಡಿದಂತಹ ವಿಚಾರವನ್ನು ಪ್ರಸ್ತಾಪ ಮಾಡಿದರು. ಈಗಾಗಲೇ ಸನ್ಮಾನ್ಯ ಮುಖ್ಯಮಂತ್ರಿಯವರು ರೈತರ ಮೇಲೆ ಇರುವಂತಹ ಪ್ರಕರಣಗಳು, ಅದು ಸಾರ್ವಜನಿಕ ಹೋರಾಟದಲ್ಲಿ ಮಾಡಿರುವಂತಹ ಪ್ರಕರಣವನ್ನು ವಾಪಸ್ಸು ತೆಗೆದುಕೊಳ್ಳಲು ಭರವಸೆಯನ್ನು ಕೊಟ್ಟಿದ್ದಾರೆ. ನಾವು ಆ ದಿಶೆಯಲ್ಲಿ ಕಾರ್ಯಕ್ರಮವನ್ನು ಮಾಡುತ್ತಿದ್ದೇವೆ. ಇನ್ನು ವಕೀಲರ ಬಗ್ಗೆ ಹೈಕೋರ್ಟ್ ಪೀಠದ ಹೋರಾಟದ ಸಂದರ್ಭದಲ್ಲಿ ಹಾಕಿರುವಂತಹದ್ದು, ಅದನ್ನು ವಾಪಸ್ಸು ಪಡೆದುಕೊಳ್ಳುವಂತಹ ಕಾರ್ಯಕ್ರಮವನ್ನು ಮಾಡಿದ್ದೇವೆ. ಈಗ ತಮ್ಮ ಮೇಲೆ ಏನು ಪ್ರಕರಣ ದಾಖಲು ಆಗಿದೆ. ಆ ಎಲ್ಲಾ ವಿವರಗಳು ನನ್ನ ಹತ್ತಿರ ಇಲ್ಲ. ಅದನ್ನು ನನಗೆ ಕಳುಹಿಸಿ ಕೊಡಿ, ನಾನು ಮಾನ್ಯ ಮುಖ್ಯಮಂತ್ರಿಯವರ ಜೊತೆಯಲ್ಲಿ ಮಾತನಾಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಚಂದ್ರಕಾಂತ ಬೆಲ್ಲದರವರ ಬಗ್ಗೆ...

ಶ್ರೀ ಹೆಚ್.ಕೆ. ಪಾಟೀಲ್ : ಮಾನ್ಯ ಚಂದ್ರಕಾಂತ ಬೆಲ್ಲದ್‌ರವರ ಮೇಲೆ ಬಹುತೇಕ ಕೇಸ್‌ಗಳು ಇರಲಿಕ್ಕಿಲ್ಲ.

ಶ್ರೀ ಜಗದೀಶ್‌ಶೆಟ್ಟರ್ : ಕೇಸ್ ಆಗಿ, ಅವರು ಪೊಲೀಸ್ ಕಸ್ಟಡಿಯಲ್ಲಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಈಗ ಅವರು ಜೈಲಿನಲ್ಲಿದ್ದಾರೆ.

ಶ್ರೀ ಜಗದೀಶ್‌ಶೆಟ್ಟರ್ : ಅವರು 5ನೇ ತಾರೀಖಿನವರೆಗೂ ಪೊಲೀಸ್ ಕಸ್ಟಡಿಯಲ್ಲಿ ಇದ್ದಾರೆ.

ಶ್ರೀ ಹೆಚ್.ಕೆ. ಪಾಟೀಲ್ : ಅವರು ಒಬ್ಬರನ್ನೇ ಬಿಟ್ಟರೆ, ಕೇಸ್ ಹಾಕಿಸಿಕೊಳ್ಳುವಂತಹ ಕೆಲಸವನ್ನೇ ಮಾಡುವ ಹಾಗೆ ಇಲ್ಲ. ಅದಕ್ಕೆ ಮಾನ್ಯ ಚಿಕ್ಕನಗೌಡರು ಮುಂದುವರೆಯುತ್ತಿರುತ್ತಾರೆ.

ಕೆ.ಆರ್.ಎಸ್.ನ ಕಾವೇರಿ ನೀರನ್ನು ಸ್ಥಳೀಯ ಕೆ.ಆರ್.ಎಸ್. ನಾಗರಿಕರಿಗೆ ಒದಗಿಸಲು ವ್ಯವಸ್ಥೆ

78 (1285) Smt. Vijayalakshmi Bondisiddegowda. (Sriranga Patna) will minister for water Resources and Transport be please to state?

ಅ) ಶ್ರೀರಂಗಪಟ್ಟಣ ತಾಲ್ಲೂಕು KRSನಲ್ಲಿ ಪ್ರವಾಸಿಗರಿಂದ ಬರುತ್ತಿರುವ ಆದಾಯ ಎಷ್ಟು;

ಆ) ಈ ಸ್ಥಳಕ್ಕೆ ಪ್ರತಿನಿತ್ಯ ಬಂದು ಹೋಗುವ ಪ್ರವಾಸಿಗರ ಸಂಖ್ಯೆ ಎಷ್ಟು;

ಇ) ಪ್ರವಾಸಿಗರಿಗೆ ಹಾಗೂ ಸ್ಥಳೀಯ ನಾಗರೀಕರಿಗೆ ಕುಡಿಯುವ ನೀರಿನ ತೊಂದರೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಸರ್ಕಾರ KRS ನಲ್ಲಿ ಇರುವ ಕಾವೇರಿ ನೀರನ್ನು KRSನ ನಾಗರೀಕರಿಗೆ ಒದಗಿಸಲು ಯೋಜನೆಯೊಂದನ್ನು ಸಿದ್ದಪಡಿಸಿ, ಕಾರ್ಯಗತಗೊಳಿಸಲು ಉದ್ದೇಶಿಸಿದೆಯೇ?

Sri Mallikarjun Kharge (Minister for Water Resources &Transport.)

a) An amount of Rs. 34.49 lakhs is collected in the form of entrance fee and vehicle parking fee, during December 2004 from tourists to KRS in Srirangapatna Taluk. Up to December 2004 an amount of Rs. 220.16 lakhs as entrance Fee And Rs.21.14 lakhs As vehicle parking fee totalling to Rs. 241.30 lakhs has been collected.

b) Based on number of tourists who visited this place during December 2004, an average of 8934 visitors (7044 elders and 1890 students) per day have visited KRS Brindavan garden.

c) Drinking water supply arrangements have been made in KRS for the facility of tourists. The drinking water facility for the local people has to be provided by the RDPR Department.

d) For providing the drinking water to the residents of KRS the RDPR Department should provide the necessary facilities and the required water will be made available by the Water Resources Department.

ಶ್ರೀಮತಿ ವಿಜಯಲಕ್ಷ್ಮಿ ಬಂಡಿಸಿದ್ದೇಗೌಡ : ಮಾನ್ಯ ಸಭಾಧ್ಯಕ್ಷರೇ, ಉತ್ತರವನ್ನು ಒದಗಿಸಿದ್ದಾರೆ. ಕೆ.ಆರ್.ಎಸ್. ಅನ್ನು ಕಟ್ಟಬೇಕಾದರೆ ಅಲ್ಲಿಯ ಜನ ಎಷ್ಟು ಜಾಗ ಬಿಟ್ಟುಕೊಟ್ಟಿದ್ದಾರೆ. ಅದರ ಆದಾಯ ಎಷ್ಟಿದೆ ಎಂದು ಅವರು ವರದಿ ಕೊಟ್ಟಿದ್ದಾರೆ. ಆದರೆ ಕೆ.ಆರ್.ಎಸ್.ನಿಂದ ಅರ್ಧ ಕಿ.ಮೀ. ಒಂದು ಕಿ.ಮೀ. ಸುತ್ತಮುತ್ತ ವಾಸಿಸುತ್ತಿರುವ ಸಾಮಾನ್ಯ ಜನರಿಗೆ ಕುಡಿಯುವ ನೀರಿನ ವ್ಯವಸ್ಥೆ ಇಲ್ಲ. ಕುಡಿಯುವ ನೀರಿನ ವ್ಯವಸ್ಥೆ ಬಗ್ಗೆ ಮಾತನಾಡಿದರೆ, ಬೆಂಗಳೂರಿಗೆ ಕೊಡುತ್ತೇವೆ. ಮಂಡ್ಯಕ್ಕೆ ಕೊಡುತ್ತೇವೆ, ಶ್ರೀರಂಗಪಟ್ಟಣಕ್ಕೆ ಕೊಡುತ್ತೇವೆ ಎಂದು ಹೇಳುತ್ತೀರಿ. ಆದರೆ ಕೆ.ಆರ್.ಎಸ್. ಸುತ್ತಮುತ್ತ ಇರುವಂಥವರು ಮುಳುಗಡೆ ಗ್ರಾಮದವರು. ಕೆ.ಆರ್.ಎಸ್. ಅಣೆಕಟ್ಟು ಕಟ್ಟಬೇಕಾದರೆ ಅವರು ಕಲ್ಲು ಹೊತ್ತಿದ್ದಾರೆ, ಕಲ್ಲು ಒಡೆದಿದ್ದಾರೆ. ಅಂಥವರಿಗೇ ನಾವು ನೀರು ಕೊಡಲಿಲ್ಲ. ಎಂದರೆ ಬಹಳ ಅನ್ಯಾಯವಾಗುತ್ತದೆ. ಕೆ.ಆರ್.ಎಸ್. ತುಂಬಿದಾಗ ಯಾವಾಗಲೂ ಮುಖ್ಯಮಂತ್ರಿಗಳು, ಉಪಮುಖ್ಯಮಂತ್ರಿಗಳು, ನೀರಾವರಿ ಮಂತ್ರಿಗಳು ಎಲ್ಲರೂ ಬರುತ್ತಾರೆ. ಆಗ ಜನರು ಅವರಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಿಕೊಡಿ ಎಂದು ಹೇಳುವುದನ್ನು ಬಿಟ್ಟರೆ, ಬೇರೆ ಯಾವುದೇ ಸಮಸ್ಯೆಯನ್ನು ಹೇಳುವುದಿಲ್ಲ. ಆದ್ದರಿಂದ, ಅದರ ಬಗ್ಗೆ ಹೆಚ್ಚಿನ ಗಮನ ಕೊಡಬೇಕೆಂದು ಹೇಳುತ್ತೇನೆ. ಈಗಾಗಲೇ ಕಾವೇರಿ ನೀರಾವರಿ ನಿಗಮದಿಂದ ಒಂದು ಎಸ್ಟಿಮೇಟ್ ಕೂಡ ಮಾಡಿಸಿದ್ದಾರೆ. ದಯಮಾಡಿ ಎಲ್ಲರೂ ಸೇರಿ ಅಲ್ಲಿನ ಜನರಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಒದಗಿಸಿದ್ದೇ ಆದರೆ ಬಹಳ ಅನುಕೂಲವಾಗುತ್ತದೆ ಎಂದು ನಾನು ತಮ್ಮ ಮೂಲಕ ಸಚಿವರನ್ನು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಕುಡಿಯುವ ನೀರಿನ ವ್ಯವಸ್ಥೆ ಮಾಡತಕ್ಕಂಥಾದ್ದು ಗ್ರಾಮೀಣಾಭಿವೃದ್ಧಿ ಇಲಾಖೆ. ಕೆ.ಆರ್.ಎಸ್.ನಿಂದ ನೀರು ತೆಗೆದುಕೊಳ್ಳುವುದಕ್ಕೆ ನಾವೇನೂ ಅಬ್ಜೆಕ್ಟ್ ಮಾಡುವುದಿಲ್ಲ. ಆದರೆ ಪೈಪ್‌ಲೈನ್ ಹಾಕಿಸುವುದು, ಟ್ಯಾಂಕ್ ಕಟ್ಟಿಸುವುದು, ಇಂಟರ್ನಲ್ ಪೈಪಿಂಗ್ ಮಾಡುವುದು ಇವುಗಳೆಲ್ಲವನ್ನೂ ವ್ಯವಸ್ಥೆ ಮಾಡತಕ್ಕಂಥಾದ್ದು ಜಿಲ್ಲಾ ಪಂಚಾಯಿತಿ ಮತ್ತು ಗ್ರಾಮ ಪಂಚಾಯಿತಿಯಡಿಯಲ್ಲಿ ಬರುತ್ತದೆ. ಅವರು ಹೇಳತಕ್ಕಂಥಾದ್ದೇನೆಂದರೆ, ಕೆ.ಆರ್.ಎಸ್.ನಂಥ ಒಂದು ದೊಡ್ಡ ಡ್ಯಾಂ ಅಲ್ಲಿ ಇದ್ದಾಗಲೂ ಕೂಡ, ಅದರ ಪಕ್ಕದಲ್ಲಿರತಕ್ಕಂಥ ಊರಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡುತ್ತಿಲ್ಲ. ಹಣವನ್ನು ಖರ್ಚು ಮಾಡಿ, ಇದನ್ನು ಮಾನವೀಯತೆಯ ದೃಷ್ಟಿಯಿಂದ ಮಾಡಿಕೊಡಿ ಎಂದು ಅವರು ಹೇಳುತ್ತಿದ್ದಾರೆ. ಸಭಾಧ್ಯಕ್ಷರಾದ ತಮ್ಮ ಅಧ್ಯಕ್ಷತೆಯಲ್ಲಿ ಅಲ್ಲಿ ಇತ್ತೀಚೆಗೆ ಒಂದು ಮೀಟಿಂಗ್ ಆಯಿತು. ಆಗ ನಾನೂ ಕೂಡ ಹೇಳಿದ್ದೇನೆ. ಗ್ರಾಮ ಪಂಚಾಯಿತಿ, ಜಿಲ್ಲಾ ಪಂಚಾಯಿತಿಯಿಂದ ಅರ್ಧ ಭಾಗದಷ್ಟು ಹಣವನ್ನು ಕೊಟ್ಟರೆ, ಉಳಿದ ಹಣವನ್ನು ನಾನು ಕಾವೇರಿ ನೀರಾವರಿ ನಿಗಮದಿಂದ ಕೊಡಿಸುವ ಪ್ರಯತ್ನ ಮಾಡುತ್ತೇನೆ. ದೇಶದ ಬೇರೆ ಬೇರೆ ಭಾಗಗಳಿಂದ ಅಲ್ಲಿಗೆ ಟೂರಿಸ್ಟ್ಸ್ ಬರುತ್ತಾರೆ. ಅವರಿಗೂ ಅನುಕೂಲವಾಗುತ್ತದೆ. ಆ ಊರಿನವರಿಗೂ ಅನುಕೂಲವಾಗುತ್ತದೆ. ಅದಕ್ಕಾಗಿ 50:50ರ ಅನುಪಾತದಲ್ಲಿ ನಾವು ಇದನ್ನು ಮಾಡೋಣ ಎನ್ನತಕ್ಕಂಥಾದ್ದು ಇದೆ. ಅದಕ್ಕೆ ನಾನು ಒಪ್ಪಿಕೊಂಡು ಆ ದಿವಸ ಹೇಳಿದ್ದೇನೆ. ಶಾಸಕರು ಸ್ವಲ್ಪ ಒತ್ತಡ ತಂದು ಗ್ರಾಮೀಣಾಭಿವೃದ್ಧಿ ಇಲಾಖೆಯಿಂದ ಅದನ್ನು ಮಾಡಿದರೆ, ಉಳಿದುದನ್ನು ನನ್ನ ಇಲಾಖೆಯ ವತಿಯಿಂದ ಕೊಡುತ್ತೇವೆ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ಮೈಸೂರು ನಗರಕ್ಕೆ ಕಾವೇರಿ ಹತ್ತಿರವಿದ್ದರೂ ಕೂಡ, ಮೈಸೂರಿನ ಬಹುತೇಕ ಭಾಗಗಳಲ್ಲಿ ಕಾವೇರಿ ನೀರಿಲ್ಲ. ಇದಕ್ಕೆ ಕಾರಣವೇನು? ಇದು ಅಧಿಕಾರಿಗಳ ಕಾರ್ಯ ವೈಖರಿಯ ವೈಫಲ್ಯತೆಯೋ ಅಥವಾ ಸರ್ಕಾರದ ನಿರ್ಲಕ್ಷತೆಯೋ? ಮೈಸೂರಿನ ಬಡಾವಣೆಗಳಲ್ಲಿರತಕ್ಕಂಥ ಬುದ್ಧಿಜೀವಿಗಳನ್ನು ಮಂದ ಬುದ್ಧಿಯ ಜನಗಳನ್ನಾಗಿ ಮಾಡುತ್ತಿದ್ದೀರಿ. ದಯಮಾಡಿ ಮೈಸೂರು ನಗರಕ್ಕೆ ಸಂಪೂರ್ಣವಾಗಿ ಕಾವೇರಿ ನೀರನ್ನು ಒದಗಿಸಬೇಕು. ಸಾಂಸ್ಕೃತಿಕ ರಾಜಧಾನಿ, ಅರಸರು ಆಳಿದ ಊರು, ಮಲ್ಲಿಗೆಯ ಕಂಪಿನ ಊರು, ಇಂಪಿನ ಊರು ಎಂದೆಲ್ಲಾ ಎಲ್ಲರೂ ಹೇಳುತ್ತಾರೆ. ಈಗ ಇವೆಲ್ಲಾ ನಿಂತು ಹೋಗಿದ್ದು, ಮೈಸೂರಿನ ಅರ್ಧ ಭಾಗಕ್ಕೆ ಕಾವೇರಿ ನೀರು ಇಲ್ಲವೇ ಇಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅಲ್ಲಿನ ಜನ ಮಂದ ಬುದ್ಧಿಯವರು ಎಂದು ನಾವು ಒಪ್ಪಿಕೊಂಡಿಲ್ಲ. ಅವರು ಮಾತನಾಡುತ್ತಿರುವುದನ್ನು ನೋಡಿದರೇ ಅವರು ಎಷ್ಟು ಚುರುಕಿದ್ದಾರೆ ಎನ್ನುವುದು ಗೊತ್ತಾಗುತ್ತದೆ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ಮೈಸೂರು ನಗರಕ್ಕೆ ನೀರು ಒದಗಿಸುವ ವಿಚಾರದ ಬಗ್ಗೆ ಹೇಳಬೇಕು. ಮಾನ್ಯ ಮುಖ್ಯಮಂತ್ರಿಗಳು ಮೂಕ ಪ್ರೇಕ್ಷಕರಾಗಿ ನೋಡುತ್ತಿದ್ದಾರೆ. ಖರ್ಗೆಯವರು ಉತ್ತರ ಹೇಳಲಿಲ್ಲ. ಅವರು ನಮ್ಮನ್ನು ಛೇಡಿಸಿದರಷ್ಟೇ. ದಯಮಾಡಿ ಅಲ್ಲಿನ ನೀರಿನ ಸಮಸ್ಯೆಗೆ ಏನು ವ್ಯವಸ್ಥೆ ಮಾಡುತ್ತೀರಿ ಎಂಬುದನ್ನು ಹೇಳಬೇಕು. ಮೈಸೂರು ನಗರಕ್ಕೆ ಪೂರ್ಣ ಪ್ರಮಾಣದಲ್ಲಿ ನೀರು ಒದಗಿಸಲು ಆಶ್ವಾಸನೆಯನ್ನು ಕೊಡುವಿರಾ?

ಶ್ರೀ ಮಲ್ಲಿಕಾರ್ಜುನ ಖರ್ಗೆ : ತಾವು ಬೇರೆ ಪ್ರಶ್ನೆ ಹಾಕಿ, ಉತ್ತರ ಕೊಡುತ್ತೇವೆ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ಅವರು ಕೇಳಿರುವ ಪ್ರಶ್ನೆಗೆ ನಾನು ಉಪ ಪ್ರಶ್ನೆ ಕೇಳಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅವರು ಕೇಳಿರುವುದು, ಕೆ.ಆರ್.ಎಸ್. ಹತ್ತಿರ ಇರತಕ್ಕಂಥ ಗ್ರಾಮಕ್ಕೆ ನೀರು ಒದಗಿಸತಕ್ಕಂಥ ವ್ಯವಸ್ಥೆ ಮಾಡುವಿರಾ ಎಂದು ಕೇಳಿದ್ದಾರೆ. ಏಕೆಂದರೆ, ಅಲ್ಲಿಗೆ ಅನೇಕ ಪ್ರವಾಸಿಗರು ಬರುತ್ತಾರೆ. ನೀರಿನ ವ್ಯವಸ್ಥೆ ಮಾಡುವುದರಿಂದ ಆ ಊರಿನ ಜನರಿಗೂ ಅನುಕೂಲವಾಗುತ್ತದೆ ಮತ್ತು ಪ್ರವಾಸಿಗರಿಗೂ ಅನುಕೂಲವಾಗುತ್ತದೆ. ಅದಕ್ಕಾಗಿ ಸಹಾಯ ಮಾಡಬೇಕು ಎಂದು ಅವರು ಕೇಳಿದ್ದಾರೆ. ಅವರು ಕೇಳಿರತಕ್ಕಂಥಾದ್ದರಲ್ಲಿ ನಗರದ್ದು ಏನೂ ಇಲ್ಲ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ಹಳ್ಳಿಗಳಿಗೆ ಕೊಡಬೇಡಿ ಎಂದು ನಾನು ಹೇಳುತ್ತಿಲ್ಲ. ಪಟ್ಟಣಗಳಲ್ಲೂ ನೀರು ಇಲ್ಲ ಎಂದು ಹೇಳುತ್ತಿದ್ದೇನೆ.

ಶ್ರೀಮತಿ ವಿಜಯಲಕ್ಷ್ಮಿ ಬಂಡಿಸಿದ್ದೇಗೌಡ : ಶ್ರೀರಂಗಪಟ್ಟಣದಲ್ಲಿ ಮನೆಯ ಮುಂದೆಯೇ ಕಾವೇರಿ ನೀರು ಹರಿಯುತ್ತಿದ್ದರೂ ಕೂಡ, ನೀರು ಕೈಗೆ ಸಿಗುತ್ತಿದ್ದರೂ ಕೂಡ ಅಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಇಲ್ಲ. ಮುಖ್ಯ ಮಂತ್ರಿಗಳು, ಉಪ ಮುಖ್ಯಮಂತ್ರಿಗಳು, ಗ್ರಾಮೀಣಾಭಿವೃದ್ಧಿ ಮಂತ್ರಿಗಳು ಎಲ್ಲರೂ ಸೇರಿ ಇದನ್ನು ಮಾಡಿಕೊಟ್ಟರೆ, ಅಲ್ಲಿಯ ಜನತೆಯ ಪರವಾಗಿ ನಾವು ತಮಗೆ ಧನ್ಯವಾದಗಳನ್ನರ್ಪಿಸುತ್ತೇವೆ. ಆದ್ದರಿಂದ, ದಯಮಾಡಿ ಆದಷ್ಟು ಬೇಗ ನೀವು ಈ ವ್ಯವಸ್ಥೆಯನ್ನು ಮಾಡಿಕೊಡಬೇಕು. ಈ ಹಳ್ಳಿಗಳವರು ತಮ್ಮ ಜಮೀನನ್ನು ಕೆ.ಆರ್.ಎಸ್. ಅಣೆಕಟ್ಟೆಗಾಗಿ ಕೊಟ್ಟಿದ್ದಾರೆ. ಅವರು ಜಮೀನುಗಳನ್ನು ಕೊಟ್ಟಿದ್ದು, ಅದು ಮುಳುಗಡೆ ಗ್ರಾಮವಾಗಿದೆ. ಆದರೂ ಕೂಡ ಅಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಇಲ್ಲ ಎಂದರೆ, ಶಾಸಕರಾದ ನಾವು ಅಲ್ಲಿನ ಜನಗಳ ಪ್ರಶ್ನೆಗಳಿಗೆ ಉತ್ತರ ಕೊಡಬೇಕಾದರೆ ಬಹಳ ಕಷ್ಟವಾಗುತ್ತದೆ. ಅಲ್ಲಿ ಆದಾಯ ಕೂಡ ಇದೆ ಎಂದು ಉತ್ತರ ಕೊಟ್ಟಿದ್ದಾರೆ. ಹಣವನ್ನು ಖರ್ಚುಮಾಡಿ ಕೆ.ಆರ್.ಎಸ್. ಅನ್ನು ಬಹಳ ಅಚ್ಚುಕಟ್ಟಾಗಿ, ಮಾಡಿರುವುದರಿಂದ ನೋಡುವುದಕ್ಕೆ ಕೂಡ ಅದು ಬಹಳ ಚೆನ್ನಾಗಿದೆ. ದಯಮಾಡಿ ಅಲ್ಲಿ ಕುಡಿಯುವ ನೀರಿನ ವ್ಯವಸ್ಥೆಗೆ ಹಣ ಖರ್ಚು ಮಾಡಿದ್ದೇ ಆದರೆ ಅಲ್ಲಿಯ ಜನ ಬಹಳ ಸಂತೋಷ ಪಡುತ್ತಾರೆ. ಆದ್ದರಿಂದ, ದಯಮಾಡಿ ಈ ವ್ಯವಸ್ಥೆಯನ್ನು ಆದಷ್ಟು ಜಾಗ್ರತೆ ಮಾಡಿ ಕೊಡಬೇಕು ಎಂದು ನಾನು ತಮ್ಮ ಮೂಲಕ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಾನು ಈಗಾಗಲೇ ಹೇಳಿದ್ದೇನೆ. ಗ್ರಾಮೀಣ ಭಾಗದಲ್ಲಿ ನೀರು ಕೊಡತಕ್ಕಂಥ ವ್ಯವಸ್ಥೆಯನ್ನು ಗ್ರಾಮೀಣಾಭಿವೃದ್ಧಿ ಇಲಾಖೆ ಮಾಡಬೇಕು. ಆದರೂ ಕೂಡ ಅದರ ಶೇಕಡ 50ರಷ್ಟು ಹಣವನ್ನು ನಾನು ಕೊಡಲು ಸಿದ್ಧನಿದ್ದೇನೆ. ಈ ಯೋಜನೆಗೆ ಸುಮಾರು 3 ಕೋಟಿ 25 ಲಕ್ಷ ರೂಪಾಯಿಗಳು ಬೇಕಾಗುತ್ತದೆ ಎಂದು ಅಂದಾಜು ಮಾಡಲಾಗಿದೆ. ಅದರ ಅರ್ಧಭಾಗವನ್ನು ನಾನು ಕೊಡುತ್ತೇನೆ. ಉಳಿದುದ್ದನ್ನು ಗ್ರಾಮೀಣಾಭಿವೃದ್ಧಿ ಇಲಾಖೆಯಿಂದ ತಾವು ತೆಗೆದುಕೊಳ್ಳಬೇಕು. ಪ್ರಶ್ನೋತ್ತರ ವೇಳೆ ಮುಗಿದ ಮೇಲೆ ಬೇಕಾದರೆ ತಮ್ಮ ಛೇಂಬರ್‌ನಲ್ಲಿ ರೂರಲ್ ಡೆವಲಪ್‌ಮೆಂಟ್ ಮಿನಿಸ್ಟರ್ ಅನ್ನು ಕರೆಸಿ, ನಾನೂ ಕೂಡ ಕಾವೇರಿ ನೀರಾವರಿ ನಿಗಮದ ಎಂ.ಡಿ.ಯವರನ್ನು ಕರೆಸುತ್ತೇನೆ. ಅವರನ್ನು ಒಪ್ಪಿಸಿ, ಇದನ್ನು ಬಗೆಹರಿಸೋಣ. ನನ್ನ ಭಾಗದ ಹಣವನ್ನು ಕೊಡಬೇಕೆಂದು ಆ ದಿವಸ ತಮ್ಮ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ತೀರ್ಮಾನವಾಯಿತು. ಅದರಂತೆ, ಕೊಡಲು ನಾನು ರೆಡಿ ಇದ್ದೇನೆ.

ಅಧ್ಯಕ್ಷರು : ತಾತ್ವಿಕವಾಗಿ ತಾವು ಒಪ್ಪಿದ್ದೀರಿ. ಅರ್ಧ ಭಾಗದ ಹಣವನ್ನು ರೂರಲ್ ಡೆವಲಪ್‌ಮೆಂಟಿನವರು ಕೊಡಬೇಕು ಎಂದು ಹೇಳುತ್ತಿದ್ದೀರಿ. ಇದು ಕುಡಿಯುವ ನೀರಿನ ಸಮಸ್ಯೆಯಾಗಿದೆ. ಈಗ ಮುಖ್ಯಮಂತ್ರಿಗಳೂ ಇಲ್ಲೇ ಇದ್ದಾರೆ. ಅವರು ಇದರ ಬಗ್ಗೆ ಹೇಳಬೇಕು.

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) : ಕುಡಿಯುವ ನೀರಿನ ಸಮಸ್ಯೆ ಇದ್ದರೆ, ಅದು ರೂರಲ್‌ನಲ್ಲಾಗಲೀ, ಅರ್ಬನ್‌ನಲ್ಲಾಗಲೀ ವ್ಯವಸ್ಥೆ ಮಾಡುತ್ತೇವೆ. ಕೆಲವು ಕಡೆ ಅರ್ಬನ್‌ನಲ್ಲೂ ಸಮಸ್ಯೆ ಇದೆ. ಅಲ್ಲೂ ಕೂಡ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಸಿ.ಎಸ್. ಪುಟ್ಟರಾಜು : ಮಾನ್ಯ ಅಧ್ಯಕ್ಷರೇ, ತಮ್ಮ ಅಧ್ಯಕ್ಷತೆಯಲ್ಲಿ ನಡೆದಂಥ ಒಂದು ಸಮಾರಂಭಕ್ಕೆ ನೀರಾವರಿ ಸಚಿವರು ಬಂದಂಥ ಸಂದರ್ಭದಲ್ಲಿ, ಆ ಭಾಗದ ಕನ್ನಂಬಾಡಿ ಕಟ್ಟೆಗೆ ಹೊಂದಿಕೊಂಡಿರುವಂಥ ಹಳ್ಳಿಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡುತ್ತೇವೆ ಎಂದು ನಿಮ್ಮ ಸಮ್ಮುಖದಲ್ಲಿ ಭರವಸೆ ಕೊಟ್ಟಿದ್ದರು. ಇವತ್ತು ಕನ್ನಂಬಾಡಿ ಕಟ್ಟೆಯಿಂದ ಇಡೀ ರಾಜ್ಯಕ್ಕೆ ಕುಡಿಯುವ ನೀರನ್ನು ಒದಗಿಸುವ ವ್ಯವಸ್ಥೆ ಆಗುತ್ತಿದ್ದರೂ ಕೂಡ, ಶ್ರೀರಂಗಪಟ್ಟಣದ ಶಾಸಕರಾದ ಶ್ರೀಮತಿ ವಿಜಯಲಕ್ಷ್ಮಿ ಬಂಡಿಸಿದ್ದೇಗೌಡರವರು ಹೇಳಿದ ಹಾಗೆ, ಕೆ.ಆರ್.ಎಸ್. ಗ್ರಾಮ ಪಂಚಾಯಿತಿ ಮತ್ತು ಕನ್ನಂಬಾಡಿ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿನ ಜನರು ಕುಡಿಯುವ ನೀರಿಗೆ ಬಹಳ ಕಷ್ಟ ಪಡುತ್ತಿರತಕ್ಕಂಥಾದ್ದನ್ನು ನಾವು ಕಾಣುತ್ತಿದ್ದೇವೆ. ಐತಿಹಾಸಿಕವಾಗಿರುವಂಥ ಕನ್ನಂಬಾಡಿ ಕಟ್ಟೆಯನ್ನು ನೋಡಲು ರಾಷ್ಟ್ರಮಟ್ಟದಿಂದ ಪ್ರವಾಸಿಗರು ಬರುವಂಥ ಸಂದರ್ಭದಲ್ಲಿ, ಅಲ್ಲಿ ಕುಡಿಯುವ ನೀರಿನ ಬವಣೆ ಇರುವುದರಿಂದ, ಪ್ರವಾಸಿಗರಿಗೆ ತೊಂದರೆಯಾಗುತ್ತಿದೆ. ದಯಮಾಡಿ ಕೆ.ಆರ್.ಎಸ್. ಗ್ರಾಮ ಪಂಚಾಯಿತಿಗೆ ಮತ್ತು ಕನ್ನಂಬಾಡಿ ಗ್ರಾಮ ಪಂಚಾಯಿತಿಗೆ ನೀರಾವರಿ ಇಲಾಖೆ ಮುಖಾಂತರವೇ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಿಕೊಟ್ಟು, ಅದರ ನಿರ್ವಹಣೆ ಮಾಡತಕ್ಕಂಥ ಕೆಲಸವನ್ನು ನೀರಾವರಿ ಇಲಾಖೆ ಮಾಡಿದಾಗ ಮಾತ್ರ ಅದು ಸಮರ್ಪಕವಾಗಿ ನಡೆಯಲು ಸಾಧ್ಯವಾಗುತ್ತದೆ. ಗ್ರಾಮ ಪಂಚಾಯಿತಿಗೆ ವಹಿಸಿದರೆ, ಅದನ್ನು ನಿರ್ವಹಣೆ ಮಾಡಲು ಸಾಧ್ಯವಾಗುವುದಿಲ್ಲ. ದಯಮಾಡಿ ಅದನ್ನು ನೀರಾವರಿ ಇಲಾಖೆಯ ಮುಖಾಂತರ ಮಾಡಿಸಿ ಕೊಡಬೇಕು ಎಂದು ನೀರಾವರಿ ಸಚಿವರು ಮತ್ತು ಮುಖ್ಯಮಂತ್ರಿಗಳಿಗೆ ತಮ್ಮ ಮುಖಾಂತರ ನಾನು ಮನವಿ ಮಾಡುತ್ತಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಾನು ಈಗಾಗಲೇ ಹೇಳಿದ್ದೇನೆ. ಯಾವ ಕೆಲಸ ನಮ್ಮ ವ್ಯಾಪ್ತಿಗೆ ಬರುವುದಿಲ್ಲ, ಅದನ್ನು ನಾನು ವಹಿಸಿಕೊಂಡು, ಎಲ್ಲಾ ಕಡೆಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮಾಡುತ್ತೇನೆ ಎಂದರೆ ಅದು ತಪ್ಪಾಗುತ್ತದೆ. ಆದರೂ ಸಹ, ಅಲ್ಲಿಗೆ ಪ್ರವಾಸಿಗರು ಬರುವುದರಿಂದ ಅದಕ್ಕೆ ಕಾಂಟ್ರಿಬ್ಯೂಟ್ ಮಾಡಲು ನಾವು ಒಪ್ಪಿಕೊಂಡಿದ್ದು, ಅರ್ಧ ಭಾಗದಷ್ಟು ನಿಮ್ಮ ವಚ್ಚೆಯನ್ನು ಹೊರುತ್ತೇವೆ, ಕಾಸ್ಟ್‌ಅನ್ನು ಶೇರ್ ಮಾಡುತ್ತೇವೆ, ಉಳಿದುದ್ದನ್ನು ತಾವು ಪಂಚಾಯಿತಿಯಿಂದ ಮಾಡಿಸಬೇಕು ಎಂದು ಕೇಳಿಕೊಂಡಿದ್ದೇನೆ. ಅದಕ್ಕೆ ಮುಖ್ಯಮಂತ್ರಿಯವರೂ ಒಪ್ಪಿದ್ದಾರೆ. ಆ ಯೋಜನೆಯ ಅಂದಾಜಿನ 3 ಕೋಟಿ 15 ಲಕ್ಷ ರೂಪಾಯಿಗಳಲ್ಲಿ ಅರ್ಧ ಭಾಗದಷ್ಟು ಎಂದರೆ ಸುಮಾರು ಒಂದು ಕೋಟಿ 60 ಲಕ್ಷ ರೂಪಾಯಿಗಳಷ್ಟು ಅಥವಾ ಎಷ್ಟು ಬರುತ್ತದೋ ಅದನ್ನು ನಾನು ಕಾವೇರಿ ನೀರಾವರಿ ನಿಗಮದಿಂದ ಕೊಡಿಸುತ್ತೇನೆ. ಉಳಿದುದ್ದನ್ನು ಪಂಚಾಯಿತಿಯವರು ಕೊಟ್ಟರೆ ಈ ಸಮಸ್ಯೆ ಬಗೆಹರಿಯುತ್ತದೆ. ಇದರಲ್ಲೇನೂ ಬಹಳ ದೊಡ್ಡ ಸಮಸ್ಯೆ ಇಲ್ಲ. ಮುಖ್ಯ ಮಂತ್ರಿಯವರೂ ಇದನ್ನು ಒಪ್ಪಿದ್ದಾರೆ. ಈಗಾಗಲೇ 52 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ,

'ಬೃಂದಾವನ' ಹಿಂದೆ ಯಾವ ರೀತಿ ಇತ್ತು. ಅದೇ ರೀತಿ ಕೇವಲ 9 ತಿಂಗಳುಗಳಲ್ಲಿ ಅದನ್ನು ಸರಿಪಡಿಸಿ ತಯಾರು ಮಾಡಿದ್ದೇವೆ. ಅದನ್ನು ತಾವೂ ಕೂಡ ನೋಡಿದ್ದೀರಿ. ಪ್ರತಿದಿನ ಅಲ್ಲಿಗೆ ಸಾವಿರಾರು ಜನ ಪ್ರವಾಸಿಗರು ಬರುತ್ತಿದ್ದಾರೆ ಮತ್ತು ಸುಮಾರು 2 ಕೋಟಿಯಿಂದ ಎರಡೂವರೆ ಕೋಟಿ ರೂಪಾಯಿಗಳಷ್ಟು ಹಣ ಅಲ್ಲಿ ಕಲೆಕ್ಟ್ ಆಗುತ್ತಿದೆ. ಪ್ರತಿದಿನ ಸರಾಸರಿ ಒಂಭತ್ತು ಸಾವಿರ ಜನ ಅಲ್ಲಿಗೆ ವಿಸಿಟ್ ಮಾಡುತ್ತಿದ್ದಾರೆ. ಇಷ್ಟೊಂದು ಸಾಧನೆಯನ್ನು 6–7 ತಿಂಗಳಲ್ಲಿ ನಾವು ಮಾಡಿದ್ದೇವೆ. ಅವರೂ ಅದನ್ನು ನೋಡಿದ್ದಾರೆ. ಆದರೂ ಕೂಡ ಪದೇಪದೇ, ಕುಡಿಯುವ ನೀರಿನ ವ್ಯವಸ್ಥೆಯನ್ನು ನೀವೇ ಮಾಡಿ ಎಂದು ಹೇಳುತ್ತಿದ್ದಾರೆ. ನಾನು ಅರ್ಧ ಭಾಗದ ಹಣ ಕೊಡಲು ಒಪ್ಪಿಕೊಂಡಿದ್ದೇನೆ. ಉಳಿದುದ್ದನ್ನು ಮುಖ್ಯಮಂತ್ರಿಗಳು ಹೇಳಿದ್ದಾರೆ. ನಾವು ನಮ್ಮ ಪಾಲಿನ ಹಣವನ್ನು ಕಾವೇರಿ ನೀರಾವರಿ ನಿಗಮದಿಂದ ಕೊಡಿಸುತ್ತೇವೆ.

ಅಧ್ಯಕ್ಷರು : ತಾವು ಗ್ರಾಮೀಣಾಭಿವೃದ್ಧಿ ಸಚಿವರನ್ನು ಕರದು, ಆ ಇಬ್ಬರು ಶಾಸಕರನ್ನೂ ಕರೆದು ಒಂದು ತೀರ್ಮಾನ ಮಾಡಿದರೆ ಸಮಸ್ಯೆ ಪರಿಹಾರವಾಗುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಆಯಿತು.

ಕೃಷ್ಣ 'ಬಿ' ಸ್ಕೀಂ ನೀರನ್ನು ಬಯಲು ಸೀಮೆ ಜಿಲ್ಲೆಗಳಿಗೆ ಹರಿಸುವುದು

79 (1020) ಶ್ರೀ ರಾಮರೆಡ್ಡಿ ಜಿ.ವಿ. (ಬಾಗೇಪಲ್ಲಿ) ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೃಷ್ಣಾ 'ಬಿ' ಸ್ಕೀಂ ಅನ್ವಯ ಬಯಲು ಸೀಮೆ ಜಿಲ್ಲೆಗಳ ಪಾಲನ್ನು ಆಯಾಯ ಜಿಲ್ಲೆಗಳಿಗೆ ಹರಿಸಲು ಸರ್ಕಾರ ಉದ್ದೇಶಿಸಿದೆಯೇ;

ಆ) ಇದ್ದಲ್ಲಿ ಈ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ದಿನಾಂಕ: 2.4.04ರಂದು ಕೇಂದ್ರ ಸರ್ಕಾರ ರಚಿಸಿರುವ ಕೃಷ್ಣಾ ಜಲ ವಿವಾದ ನ್ಯಾಯಾಧೀಕರಣ, ಕಾರ್ಯ ಆರಂಭಿಸಬೇಕಾಗಿರುತ್ತದೆ.
ಆದ್ದರಿಂದ ಈ ಹಂತದಲ್ಲಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಆ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಸನ್ಮಾನ್ಯ ಅಧ್ಯಕ್ಷರೆ, ನಾನು ಕೇಳಿದಂಥ ಪ್ರಶ್ನೆಗೆ ಉತ್ತರ ಕೊಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲವೆಂದು ಹೇಳಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಇವರು ಹೇಳುವುದಕ್ಕೆ ಬ್ರಹ್ಮಚಾರಿ ಇವರು ಹಾಕಿಕೊಂಡಿರುವ ಉಡುಪು ನೋಡಿದರೆ ಒಳ್ಳೆಯ ಮದುವೆ ಗಂಡು ಉಡುಪು ಹಾಕಿಕೊಂಡಿರುವ ಹಾಗೆ ಹಾಕಿಕೊಂಡಿದ್ದಾರೆ. ಇವರಿಗೆ ನೀವು ಎಲ್ಲಾ ಸೇರಿ ದಯವಿಟ್ಟು ಮದುವೆ ಮಾಡಿಸಿ. ಇಲ್ಲದಿದ್ದರೆ ದಯವಿಟ್ಟು ಅವರ ಉಡುಪನ್ನು ಬದಲಾವಣೆ ಮಾಡಿಸಿ ಎಂದು ತಮಗೆ ಕಳಕಳಿಯಿಂದ ಮನವಿ ಮಾಡುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಇವರಿಗೆ ಎಲ್ಲಾದರೂ ಮದುವೆ ಮಾಡಿಸುವ ಶಾಪ್ ಓಪನ್ ಮಾಡಲಿಕ್ಕೆ ಹೇಳಬೇಕು ಸರ್.

ಶ್ರೀ ವಾಟಾಳ್ ನಾಗರಾಜ್ : ಪ್ರಾಮಾಣಿಕವಾಗಿ ನಮಗೊಂದು ಹೆಣ್ಣು ನೋಡಿ ಎಂದು ಹೇಳಿದರೆ, ನಾವು ಮತ್ತು ಮಾಧುಸ್ವಾಮಿ ನೋಡಿಬಿಡುತ್ತೇವೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ಬಯಲುಸೀಮೆಯ ಪ್ರದೇಶಗಳಿಗೆ ಕೃಷ್ಣಾ ನದಿ ಪಾತ್ರದಿಂದ ಎಷ್ಟು ನೀರು ಕೊಟ್ಟಿದ್ದೀರೆಂದು ನಾನು ಪ್ರಶ್ನೆ ಕೇಳಿದರೆ ಅದಕ್ಕೆ 'ಬಿ' ಸ್ಕೀಂನಲ್ಲಿ ಆ ಪ್ರಶ್ನೆ ಉದ್ಭವಿಸುವುದಿಲ್ಲವೆಂದು ಹೇಳಿದ್ದಾರೆ. 'ಬಿ' ಸ್ಕೀಂಗೆ ಸಂಬಂಧಿಸಿದಂತೆ 2004ರ ಸಾಲಿನಲ್ಲಿ ಇನ್ನೂ ಸಹ ಕೆಲಸವನ್ನೇ ಪ್ರಾರಂಭ ಮಾಡಿಲ್ಲ. ಆದರೂ ಕೂಡ ಕರ್ನಾಟಕ ಸರ್ಕಾರ ಒಂದು ಕಮಿಟಿ ನೇಮಕ ಮಾಡಿ ಅನಧಿಕೃತವಾಗಿ ಅಲಾಟ್‌ಮೆಂಟ್ ಮಾಡಿದೆ. ಅದರಿಂದ ನಮಗೆ ನೀರು ಸಿಗುತ್ತಿಲ್ಲ. 'ಎ' ಸ್ಕೀಂನಲ್ಲೂ ನಮಗೆ ನೀರು ಸಿಕ್ಕಿಲ್ಲ. 'ಬಿ' ಸ್ಕೀಂನಲ್ಲೂ ನಮಗೆ ನೀರು ಇಲ್ಲದೇ ಹೋದರೆ ಹಳೆ ಮೈಸೂರು ಪ್ರದೇಶದಲ್ಲಿರತಕ್ಕಂಥ ಜಿಲ್ಲೆಗಳಿಗೆ 'ಎ' ಸ್ಕೀಂನಲ್ಲಿ ಕೊಟ್ಟಿರುವುದು ಕೇವಲ 8 ಟಿ.ಎಂ.ಸಿ. ನೀರನ್ನು ಮಾತ್ರ. 'ಬಿ' ಸ್ಕೀಂನಲ್ಲಿ ನೀರೇ ಇಲ್ಲ. ನಮ್ಮಲ್ಲಿ ಇವತ್ತು ಆ 'ಎ' ಸ್ಕೀಂ ಪ್ರಾರಂಭವಾಗುವುದಕ್ಕೆ ಮೊದಲೇ ಎಲ್ಲಾ ಉಪಯೋಗಿಸಿಕೊಂಡು ಉಳಿದಂಥ 539 ಟಿ.ಎಂ.ಸಿ. ನೀರನ್ನು ನಮಗೆ ಕೊಟ್ಟಿರತಕ್ಕಂಥದ್ದು, ಅದರಲ್ಲಿ ಹಳೆ ಮೈಸೂರಿಗೆ 8 ಟಿ.ಎಂ.ಸಿ. ನೀರನ್ನು ಮಾತ್ರ ಕೊಡಲಾಗಿದೆ. ಅದೇ ರೀತಿಯಲ್ಲಿ 539 ಟಿ.ಎಂ.ಸಿ. ಮತ್ತು 'ಬಿ' ಸ್ಕೀಂನಲ್ಲಿ ನಿರೀಕ್ಷೆ ಮಾಡುತ್ತಿರತಕ್ಕಂಥ 278 ಟಿ.ಎಂ.ಸಿ. ಹೀಗೆ ಒಟ್ಟು 817 ಟಿ.ಎಂ.ಸಿ.ಯಲ್ಲಿ ಇದುವರೆಗೂ ನಮಗೆ 93 ಟಿ.ಎಂ.ಸಿ. ನೀರು ಮಾತ್ರ ಕೊಟ್ಟಿದ್ದಾರೆ. ಈಗ ಬಯಲು ಸೀಮೆ ಪ್ರದೇಶದಲ್ಲಿ ಹಳೆ ಮೈಸೂರು ಪ್ರದೇಶಗಳಲ್ಲಿರತಕ್ಕಂಥ ಎಲ್ಲಾ ಜಿಲ್ಲೆಗಳಿಗೂ ಸಂಪೂರ್ಣವಾಗಿ ಬರ ಬಂದು ಕುಡಿಯಲಿಕ್ಕೆ ಸಹ ನೀರು ಇಲ್ಲದಿರುವ ಸಂದರ್ಭದಲ್ಲಿ ನಾವು ಬಹಳ ಅಪಾಯಕಾರಿ ಸ್ಥಿತಿಯಲ್ಲಿದ್ದೇವೆ. ನಾವು ಕೇಳುತ್ತಿರುವ ನೀರನ್ನು ನಮಗೆ ಕೊಡುವ ವ್ಯವಸ್ಥೆ ಬಗ್ಗೆ ಜಲಸಂಪನ್ಮೂಲ ಸಚಿವರು ಏನಾದರೂ ಕಾರ್ಯಕ್ರಮ ಹಾಕಿದ್ದಾರೆಯೇ? ನಮಗೆ 145 ಟಿ.ಎಂ.ಸಿ. ನೀರನ್ನು ಸಧ್ಯಕ್ಕೆ ಕೊಡಿ ಎಂದು ನಾವು ಈಗ ಕೇಳುತ್ತಿದ್ದೇವೆ. ಮಾನ್ಯ ಅಧ್ಯಕ್ಷರೆ, ಅದೇ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುವ ವಿಚಾರವೇನೆಂದರೆ, ಹಳೆ ಮೈಸೂರು ಪ್ರದೇಶದಿಂದ ಕೃಷ್ಣಾ ಬೇಸಿನ್‌ಗೆ ಅಂತರ್‌ಜಲ ಎಲ್ಲಾ ಸೇರಿಸಿ ಒಟ್ಟು 500 ಟಿ.ಎಂ.ಸಿ. ನೀರು ನಮ್ಮ ಕೊಡುಗೆಯಾಗಿದೆ. ಅದರಲ್ಲಿ ನಮ್ಮ ಹಳೆ ಮೈಸೂರು ಪ್ರದೇಶಕ್ಕೆ ಸಂಬಂಧಿಸಿರುವಂಥದ್ದು ಸುಮಾರು 93 ಟಿ.ಎಂ.ಸಿ. ಮಾತ್ರವಾಗಿದೆ. ಉಳಿದುದ್ದೆಲ್ಲಾ ಹೊಸ ಮೈಸೂರು ಪ್ರದೇಶಕ್ಕೆ ಹೋಗಿದೆ. ಹಾಗಾಗಿ ನಾವು ಇಲ್ಲಿ ಪ್ರಶ್ನೆ ಕೇಳುತ್ತಿರುವುದೇನೆಂದರೆ, ಕೃಷ್ಣಾ ನದಿಯ ಪಾತ್ರಕ್ಕೆ ಬರತಕ್ಕಂಥ ಹಳೆ ಮೈಸೂರಿನ ಜಿಲ್ಲೆಗಳಲ್ಲಿ ನಮಗೆ ಅನ್ಯಾಯವಾಗಿದೆ. ನಮಗೆ ನೀರನ್ನು ಕೊಡಲೇಬೇಕು. ಇದು ನಮ್ಮ ಬೇಡಿಕೆಯಾಗಿದ್ದು, ದಯವಿಟ್ಟು ಇದನ್ನು ಈಡೇರಿಸಬೇಕು ಮತ್ತು ಇದಕ್ಕೆ ಸರ್ಕಾರ ಏನು ಕಾರ್ಯಕ್ರಮ ಹಾಕಿದೆ ಎನ್ನುವುದನ್ನು ಹೇಳಬೇಕೆಂದು ತಮ್ಮ ಮೂಲಕ ಕೇಳಬಯಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಸನ್ಮಾನ್ಯ ಅಧ್ಯಕ್ಷರೆ, ಕೃಷ್ಣಾ ನದಿ ನೀರು 'ಬಿ' ಸ್ಕೀಂನಲ್ಲಿ ನಮಗೆ ಎಷ್ಟು ನೀರು ಸಿಗುತ್ತದೆ ಎನ್ನುವುದನ್ನು ಇನ್ನೂ ನಿಗದಿಪಡಿಸಿಲ್ಲ. ಏಕೆಂದರೆ ಇತ್ತೀಚೆಗೆ Krishna Tribunal constitute ಮಾಡಿದ್ದಾರೆ. ಸರ್ಕಾರದ Notification dated 02-04-2004. ಅವರು ಇನ್ನೂ ಒಂದು ಸಿಟ್ಟಿಂಗ್ ಸಹ ಕುಳಿತಿಲ್ಲ. ಈಗ ಕೇವಲ office accommodation ಹುಡುಕುವ ಆ ಗುಂಗಿನಲ್ಲಿಯೇ ಇನ್ನೂ ಸಹ ಅದು ಇದೆ. ಆ Tribunal

ನವರು ಕುಳಿತು ಆ ಮೇಲೆ ಎಷ್ಟು 'ಬಿ' ಸ್ಕೀಂಗೆ ಬಚಾವತ್ ಅವಾರ್ಡ್‌ನಲ್ಲಿ ಅಲಾಟ್ ಮಾಡುತ್ತಾರೋ, ಅದರ ಮೇಲೆ ಮುಂದಿನ ಯೋಜನೆಗಳು ಅವಲಂಬಿಸಿವೆ. ಅದನ್ನು ಈಗಲೇ ನಾವು ಹೇಳುವುದಕ್ಕಾಗುವುದಿಲ್ಲ. ಅದರೊಳಗೆ ನಮಗೇನಾದರೂ surplus water 200 ಟಿ.ಎಂ.ಸಿ. ನೀರು ಬರುತ್ತದೋ, 300 ಟಿ.ಎಂ.ಸಿ. ನೀರು ಬರುತ್ತದೋ, ಅಥವಾ 100 ಟಿ.ಎಂ.ಸಿ. ನೀರು ಬರುತ್ತದೋ ಅದು ಅವರ ನಿರ್ಣಯದ ಮೇಲೆ ಅವಲಂಬಿಸಿದೆ. ಅದಕ್ಕಾಗಿ 'ಬಿ' ಸ್ಕೀಂನ ನೀರಿನ ಬಗ್ಗೆ ಈಗಲೇ ನಾನು ಹೇಳಿದರೆ ಅದು ಅಷ್ಟು ಸಮಂಜಸವಾಗುವುದಿಲ್ಲ ಮತ್ತು ಬರೀ ಪೇಪರ್ ಮೇಲೆ ನಾನು ಹೇಳಿಕೆ ಕೊಟ್ಟ ಹಾಗೆ ಆಗುವುದರಿಂದ ಅದು ತಪ್ಪಾಗುತ್ತದೆ. ಈಗ 'ಎ' ಸ್ಕೀಂನಲ್ಲಿ ಯಾವ ಯಾವ ಪ್ರಾಜೆಕ್ಟ್‌ಗಳು ಅಪ್ರೂವ್ ಆಗಿವೆ ಅಥವಾ ನಮಗೆ 734 ಟಿ.ಎಂ.ಸಿ. ನೀರು ಏನು ಹಂಚಿಕೆಯಾಗಿತ್ತು ಅದರಲ್ಲಿ 5 ಟಿ.ಎಂ.ಸಿ. ನೀರನ್ನು ನಾವೇನು ಮದ್ರಾಸ್‌ಗೆ ಕುಡಿಯುವ ನೀರಿಗಾಗಿ ಕೊಟ್ಟಿದ್ದೇವೆ. ಉಳಿದ 739 ಟಿ.ಎಂ.ಸಿ.ಗೆ ನಾವು ಏನು ಯೋಜನೆ ಹತ್ತಾರು ವರ್ಷಗಳಿಂದ ಮಾಡಿಕೊಂಡು ಹೊರಟಿದ್ದೇವೆ, ಅದೆಲ್ಲಾ ಕಂಪ್ಲೀಟ್ ಆದಮೇಲೆ 'ಬಿ' ಸ್ಕೀಂನಲ್ಲಿ ಮುಂದೆ ಎಷ್ಟು ನೀರನ್ನು allocate ಮಾಡುತ್ತಾರೆ ಅದನ್ನು ಯಾವ ರೀತಿಯಾಗಿ ಉಪಯೋಗಿಸಬೇಕೆನ್ನತಕ್ಕಂಥದ್ದಕ್ಕೆ ಒಂದು ರೂಪುರೇಷೆಯನ್ನು ನಾವು ನಿಶ್ಚಿತವಾಗಿ ನಮ್ಮ ಮುಂದಿಟ್ಟುಕೊಂಡು ಇಂಥಿಂಥದ್ದಕ್ಕೆ ಇಷ್ಟು ಎಂದು ನಾವು ಮಾಡಬಹುದು. ಅದನ್ನು ತಕ್ಷಣವೇ 'ನಮ್ಮ ಭಾಗದಲ್ಲಿ ಕೊಡಿ ನಿಮ್ಮ ಭಾಗದಲ್ಲಿ ಕೊಡಿ, ನಮ್ಮಲ್ಲಿ ಇಷ್ಟು ನೀರು ತೆಗೆದುಕೊಂಡಿದ್ದೀರಿ' ಎಂದು ಈಗ ನಾವು ಹೇಳಿಕೊಳ್ಳುವುದಕ್ಕಾಗುವುದಿಲ್ಲವೆನ್ನುವುದು ಅವರಿಗೂ ಸಹ ಗೊತ್ತಿದೆ. ಕಾವೇರಿಯ ಉಗಮ ಸ್ಥಾನ ನಮ್ಮಲ್ಲಿ ಇದ್ದರೂ ಸಹ ಇದರ ನೀರನ್ನು ಮದ್ರಾಸ್‌ಗೆ ಕೊಡುತ್ತೇವೆ. ಹಾಗಾದರೆ ಉಗಮ ಸ್ಥಾನ ಚಿಕ್ಕಮಗಳೂರು ಇರಬಹುದು, ಅಥವಾ ಶಿವಮೊಗ್ಗ ಇರಬಹುದು, ಆದರೆ ಅಲ್ಲಿಂದ ನೀರು ತುಂಗಾಕ್ಕೆ ಬರುತ್ತದೆ, ಭದ್ರಾ ನದಿಗೆ ಬರುತ್ತದೆ, ತುಂಗಭದ್ರಾಕ್ಕೆ ಬರುತ್ತದೆ, ಅದನ್ನು ರಾಯಚೂರಿನವರು ಬಳ್ಳಾರಿಯವರು, ದಾವಣಗೆರೆಯವರು ಹೀಗೆ ಎಲ್ಲರೂ ಸಹ ಮುಂದೆ ಉಪಯೋಗ ಮಾಡುತ್ತಾರೆ. ಅದಕ್ಕಾಗಿ ಇದರಲ್ಲಿ ನಮಗೆ 'ಇದು ಸಿಗಲಿಲ್ಲ ಅದು ಸಿಗಲಿಲ್ಲ' ಎನ್ನತಕ್ಕಂಥ ಪ್ರಶ್ನೆ ಬರುವುದಿಲ್ಲ. ಕೃಷ್ಣಾ ಬೇಸಿನ್‌ನಲ್ಲಿ ಏನು allocation ಬರಬೇಕೋ ಅದು ಬಂದ ಮೇಲೆ ಅದರ ಬಗ್ಗೆ ಯೋಚನೆ ಮಾಡಲಾಗುವುದು.

ಶ್ರೀ ವೈಜನಾಥ ಪಾಟೀಲ್ (ಚಿಂಚೋಳಿ) : ಮಾನ್ಯ ಅಧ್ಯಕ್ಷರೆ, 'ಎ' ಸ್ಕೀಂನಲ್ಲಿ ಬಂದಿದ್ದ ನೀರಿನ ಹಂಚಿಕೆ ಬಗ್ಗೆ ಕೂಡ ಏನು Tribunal constitute ಆಗಿದೆ, ಹಾಗೆಯೇ 'ಬಿ' ಸ್ಕೀಂಗೆ ಅಷ್ಟೇ ಹಂಚಿಕೆಯಾಗುತ್ತದೆಯೇ ಎನ್ನುವುದನ್ನು ಸರ್ಕಾರ clarify ಮಾಡಬೇಕು. ಈ ಹಂಚಿಕೆಯನ್ನು ಯಾವ ತರಹ ಮಾಡುತ್ತದೆ, ಅಂದರೆ surplus water ಅಷ್ಟೆನಾ ಅಥವಾ 'ಎ' ಸ್ಕೀಂನಲ್ಲಿ ಉಳಿದಿರುವ ವಾಟರ್‌ನ್ನು ಕೂಡ ಹಂಚಿಕೆ ಮಾಡುತ್ತಾರಾ?

ಶ್ರೀ ಮಲ್ಲಿಕಾರ್ಜುನ ಖರ್ಗೆ : ಈಗಾಗಲೇ ತಮಗೆ ಗೊತ್ತಿದ್ದ ಹಾಗೆ ಕೇಂದ್ರ ಸರ್ಕಾರ ಹಿಂದೆ ಒಂದು reference ಮಾಡಿ ಇದರಲ್ಲಿರತಕ್ಕಂಥ surplus ನೀರನ್ನೂ ಸಹ ತಾವು ಗಣನೆಗೆ ತೆಗೆದುಕೊಳ್ಳಬೇಕು, ಎರಡನೇ Tribunalಗೆ ತೆಗೆದುಕೊಂಡು ಹೋಗಬೇಕೆನ್ನುವಂಥ ಮಾತನ್ನು ಹೇಳಿದ್ದಾರೆ. ಅದಕ್ಕೆ ನಮ್ಮ ಸರ್ಕಾರ ಎಂದೂ ಕೂಡ ಒಪ್ಪಿಲ್ಲ ಮತ್ತು ನಾವು ಒಪ್ಪುವುದೂ ಇಲ್ಲ.

ಆದರೂ ಕೂಡ 'ಬಿ' ಸ್ಕೀಂಗೆ ಯಾವ ರೀತಿಯಾಗಿ ಮುಂದೆ ಎರಡನೇ Tribunal ನವರು ಅಲೊಕೇಷನ್ ಮಾಡುತ್ತಾರೆ ಎನ್ನತಕ್ಕಂಥದನ್ನು ನಾವು ಕಾದು ನೋಡಬೇಕು.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ಬಯಲು ಸೀಮೆಗೆ ನೀರು ಕೊಡುವುದಕ್ಕೆ ಒಂದನೆಯದು, ನಿಮ್ಮ ಕೃಷ್ಣಾ ಬೇಸಿನ್‌ನಲ್ಲಿರುವ surplus ನೀರಿಗೆ ಏನು temporary allocation ಆಗಿದೆ ಅದು. ಇನ್ನೊಂದು ಕಾವೇರಿನಲ್ಲಿ ಕೂಡ surplus ನೀರಿದೆ, ಅದನ್ನೂ ಇದನ್ನೂ ಹೀಗೆ ಎರಡನ್ನೂ ಸೇರಿಸಿ 8 ಜಿಲ್ಲೆಗೆ ನೀರು ಕೊಡಬೇಕೆಂದು ತಮ್ಮ ಸರ್ಕಾರವೇ ಒಂದು ಆಲೋಚನೆ ಮಾಡಿತ್ತೆಂದು ನನ್ನ ಭಾವನೆ. ಜೊತೆಗೆ ನೇತ್ರಾವತಿ, ಕುಮಾರಧಾರಾ ನದಿಯ ನೀರನ್ನು ಕೂಡ ಈ ಕಡೆಗೆ ಹರಿಸುತ್ತೇವೆಂದು 5 ಕೋಟಿ ರೂಪಾಯಿಗಳ ಬಜೆಟ್ ಪ್ರಾವಿಜನ್ ಮಾಡಿ ನೀರು ತರುತ್ತೇವೆ ಈ ಭಾಗಕ್ಕೆ ಕುಡಿಯುವ ನೀರು ಕೊಡುತ್ತೇವೆಂದು ಹೇಳಿದವರು ಆ ಯೋಜನೆಯನ್ನು ಇನ್ನೂ ಕೂಡ ಎಲ್ಲೂ ಆರಂಭ ಮಾಡಿಲ್ಲ. ಈ ಎರಡು ಯೋಜನೆಗಳನ್ನು ಏನಾದರೂ ಒಟ್ಟಾಗಿ ಮಾಡಿ ಸುಮಾರು 80 ಟಿ.ಎಂ.ಸಿ. ನೀರು ಈ ಭಾಗಕ್ಕೆ ತರಬಹುದೆಂದು ನಿಮ್ಮ ಹತ್ತಿರ ಏನು ಒಂದು ವರದಿ ಇದೆ, ಅದನ್ನು ಅನುಷ್ಠಾನಗೊಳಿಸುವುದಕ್ಕೆ ತಮಗಿರುವ ತೊಂದರೆ ಏನು ಎನ್ನುವುದನ್ನು ಹೇಳಬೇಕು. ಮೂರು ವರ್ಷದ ಹಿಂದೆ ಈ ಯೋಜನೆಗೆಂದು ಬಜೆಟ್‌ನಲ್ಲಿ 5 ಕೋಟಿ ರೂ ಇಟ್ಟಿದ್ದು ಈ ಬಗ್ಗೆ ಇವತ್ತಿನವರೆವಿಗೂ ಸರ್ವೆ ಕೆಲಸವನ್ನು ಸಹ ಸರ್ಕಾರದಿಂದ ಮಾಡಿಲ್ಲ. ಸರ್ವೆ ಕೆಲಸವನ್ನಾದರೂ ಮಾಡಿಸಿದ್ದರೆ ಯಾವಾಗ ನಿಮಗೆ ನೀರು ಸಿಗುತ್ತದೆ, ಯಾವಾಗ ಟ್ರಿಬ್ಯುನಲ್ ಅವಾರ್ಡ್ ಆಗಿ ಫೈನಲ್ ಅವಾರ್ಡ್ ಆಗುತ್ತಿತ್ತೋ ಆಗ ಬಳಸಬಹುದಾಗಿತ್ತು. ಹಾಗಾಗಿ ಇದರ ಬಗ್ಗೆ ಸರ್ಕಾರಕ್ಕೆ ನಿಜವಾದ ಆಸಕ್ತಿ ಇದೆಯೇ ಎಂದು ಕೇಳಬಯಸುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ನಾನು ಪ್ರಶ್ನೆ ಕೇಳಿರತಕ್ಕಂಥದ್ದು ಏನೆಂದರೆ, 'ಎ ಸ್ಕೀಂ ಮತ್ತು ಬಿ ಸ್ಕೀಂ' ಎರಡರಲ್ಲೂ ಸೇರಿ ನಮ್ಮ ಹಳೆ ಮೈಸೂರು ಜಿಲ್ಲೆಗಳಿಗೆ ಅನ್ಯಾಯವಾಗಿದೆ. 'ಎ' ಸ್ಕೀಂನಲ್ಲಿ ನಮಗೆ ಕೇವಲ 8 ಟಿ.ಎಂ.ಸಿ. ನೀರು ಮಾತ್ರ ಬಂದಿದ್ದು ಅದೂ ಸಹ ಉಪಯೋಗವಾಗುತ್ತಿಲ್ಲ. 'ಬಿ' ಸ್ಕೀಂನಲ್ಲಿ ಈಗಾಗಲೇ temporary allotment ಕೊಟ್ಟಿದ್ದಾರೆ, surplus water ಬಂದಂಥ ಲೆಕ್ಕದಲ್ಲೋ, ಇನ್ನೊಂದು ಲೆಕ್ಕದಲ್ಲಿ already temporary allotment ಮಾಡಿದ್ದಾರೆ. ಆದರೆ ಅದರಲ್ಲಿ ನಮಗೆ ಕೊಟ್ಟಿರತಕ್ಕಂಥ ನೀರು ಎಷ್ಟು? ನಮಗೆ ಒಟ್ಟು ನೀರಿನಲ್ಲಿ ಕೃಷ್ಣಾ ಬೇಸಿನ್‌ನಲ್ಲಿ ಇರತಕ್ಕಂಥ ನೀರು ಹಳೆ ಮೈಸೂರು ಜಿಲ್ಲೆಗಳಿಗೆ ಎಷ್ಟು ನ್ಯಾಯಯುತವಾಗಿ ಸಿಗಬೇಕಾಗಿತ್ತೋ ಅಷ್ಟು ಸಿಕ್ಕಿಲ್ಲ, ಅದನ್ನು ಈಗಲಾದರೂ ಕೊಡಬೇಕು ಎನ್ನುವಂಥದ್ದು ನಮ್ಮ ಪ್ರಶ್ನೆಯಾಗಿದೆ. ನೀವು 'ಬಿ' ಸ್ಕೀಂ ಅವಾರ್ಡ್‌ಗೋಸ್ಕರ ಕಾಯತಕ್ಕಂಥದ್ದು ಅವೆಲ್ಲಾ ಬೇರೆ ಪ್ರಶ್ನೆಗಳು.

ಶ್ರೀ ವೈಜನಾಥ ಪಾಟೀಲ್ : ಮಾನ್ಯ ಅಧ್ಯಕ್ಷರೆ, ಇವತ್ತಿನ ಸರ್ಕಾರದ ನೀತಿಯಿಂದ ಹಳೆ ಮೈಸೂರು ಭಾಗಕ್ಕೆ ಮಾತ್ರವಲ್ಲ ಬಾಂಬೆ ಕರ್ನಾಟಕ ಹೈದರಾಬಾದ್ ಕರ್ನಾಟಕ ಆ ಭಾಗಕ್ಕೆ ಬಹಳ ತೊಂದರೆಯಾಗುತ್ತಿದೆ. ಬರೀ ಹಳೆ ಮೈಸೂರಿಗೆ ಅಷ್ಟೇ ಅಲ್ಲ, ತೆಲಗುಗಂಗಾ ಮುಂತಾದ ಯೋಜನೆಗಳು, ಈಗಾಗಲೆ ಆಂಧ್ರಪ್ರದೇಶದವರು ಎಷ್ಟೋ ಯೋಜನೆಗಳನ್ನು ನಿರ್ಮಿಸಿಕೊಂಡಿದ್ದಾರೆ. ಅದೇ ದೃಷ್ಟಿಯಿಂದ ಈಗ 'ಬಿ' ಸ್ಕೀಂನಲ್ಲಿ ಅಷ್ಟೇ ಅಲ್ಲ 'ಎ' ಸ್ಕೀಂನಲ್ಲೂ ಹಂಚಿಕೆ ಮಾಡಬೇಕಾಗುತ್ತದೆ.

ಬಹುಶಃ ಮುಂದೆ ಅಲ್ಲಿ ಯಾವುದೇ ಪ್ರಾಜೆಕ್ಟ್ ಇಟ್ಟುಕೊಂಡು ಕನ್‌ಸ್ಟ್ರಕ್ಟ್ ಮಾಡುವುದಕ್ಕೆ ಸಾಧ್ಯವಿಲ್ಲವೆಂದು ಅನಿಸುತ್ತದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನೀರಾವರಿ ಹಂಚಿಕೆಯಲ್ಲಿ ಎಲ್ಲರಿಗೂ ಅನ್ಯಾಯವಾಗಿದೆ. ಆದರೆ, ನಮಗೆ ಜಾಸ್ತಿ ಅನ್ಯಾಯವಾಗಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅವರು ಕೇಳಿದ ಪ್ರಶ್ನೆ ಸ್ಪಷ್ಟವಿದೆ. ಅವರು ಕೇಳಿರುವ (ಅ) ಮತ್ತು (ಆ) ಪ್ರಶ್ನೆಗಳಿಗೆ ನಾನು ಬಹಳ ಸ್ಪಷ್ಟವಾಗಿ ಉತ್ತರ ಹೇಳಿದ್ದೇನೆ. 'ಬಿ' ಸ್ಕೀಂನಲ್ಲಿ ಅದರ ಬಗ್ಗೆ ಇನ್ನೂ ನಮ್ಮ ತೀರ್ಮ ಬಂದಿಲ್ಲ. 'ಬಿ' ಸ್ಕೀಂನಲ್ಲಿ ಎಷ್ಟು ನೀರು ಬರುತ್ತದೆ, ಅದರ ಮೇಲೆ ಯಾವ್ಯಾವ ಜಿಲ್ಲೆಯಲ್ಲಿ ಮತ್ತು ಯಾವ್ಯಾವ ಭಾಗದಲ್ಲಿ, ಯಾವ್ಯಾವ ಯೋಜನೆಗಳಿಗೆ ಎಷ್ಟು ಕೊಡಬೇಕೆನ್ನುವುದನ್ನು ನಾನು ಚಿಂತನೆ ಮಾಡುತ್ತೇವೆ. ಆದರೆ, ಈಗಲೇ ಅದನ್ನು ಹೇಳಿ ಎಂದರೆ ಕಷ್ಟವಾಗುತ್ತದೆ. ಅದಕ್ಕೆ ನಾನು ಹೇಳಿದೆ. 'ಎ' ಸ್ಕೀಂನಲ್ಲಿರುವ ಯೋಜನೆಗಳಿಂದ ನಿಗದಿ ಪಡಿಸುವುದಿದೆ. ಯಾವ್ಯಾವ ಸ್ಕೀಂಗೆ ಎಷ್ಟು ನೀರು ಎನ್ನುವುದನ್ನೂ ಕೂಡ ಅಲೋಕೇಷನ್ ಮಾಡಿ, ಇವತ್ತು ಎಲ್ಲಾ ಕಡೆ ಕೆಲಸಗಳು ನಡೆದಿವೆ, ಹಂಚಿಕೆಯಾಗಿದೆ. ಕೆಲವು ಇನ್ನೂ ಸ್ಟಾರ್ಟ್ ಮಾಡುವುದರಲ್ಲಿವೆ. ಅದಕ್ಕಾಗಿ ನಾವು ಈಗಾಗಲೇ 'ಬಿ' ಸ್ಕೀಂ ಬಗ್ಗೆ ಹೇಳುವುದು ಅಷ್ಟೊಂದು ಸೂಕ್ತವಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಇದರ ಬಗ್ಗೆ ನೀವೇನು ಮಾಡುತ್ತೀರೆಂದು ಹೇಳಿ.

ಅಧ್ಯಕ್ಷರು : ಈಗ ಮುಂದಕ್ಕೆ ಹೋಗೋಣ, ಬಹಳ ಕಾಲವಾಯಿತು.

ಪ್ರಶ್ನೆ ಸಂ:80(1538)

(ಮಾನ್ಯ ಸದಸ್ಯರು ಗೈರುಹಾಜರಾಗಿರುತ್ತಾರೆ)

ಪ್ರಶ್ನೆ ಸಂ: 82(1024)

(ಮಾನ್ಯ ಸದಸ್ಯರು ಗೈರುಹಾಜರಾಗಿರುತ್ತಾರೆ)

ಬೆಂಗಳೂರಿನ ಜಯನಗರದ ಅಶೋಕಪಿಲ್ಲರ್ ಬಳಿ ಟ್ರಾಫಿಕ್ ಕಾನ್‌ಸ್ಟೇಬಲ್ ನಿಯೋಜಿಸುವುದು

83 (1175) ಶ್ರೀ ಸರಿಕಾರ ಭೀಮಪ್ಪ ಚನ್ನಪ್ಪ (ರಾಯಭಾಗ್) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರಿನ ಜಯನಗರದ ಅಶೋಕ ಪಿಲ್ಲರ್ ವೃತ್ತದ ಬಳಿ ಬೆಳಿಗ್ಗೆ ಹಾಗೂ ಸಂಜೆ ಹೆಚ್ಚು ವಾಹನಗಳ ಸಂಚಾರವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಸಂಚಾರ ನಿಯಂತ್ರಿಸಲು ಒಬ್ಬ ಟ್ರಾಫಿಕ್ ಕಾನ್‌ಸ್ಟೇಬಲ್‌ನ್ನು ಸ್ಥಳದಲ್ಲಿ ಕಾರ್ಯ ನಿರ್ವಹಿಸಲು ಯೋಜಿಸಲಾಗುವುದೇ;

ಇ) ಬಂದಿದ್ದಲ್ಲಿ ಸುತ್ತಮುತ್ತಲಿನ ಶಾಲಾ ಮಕ್ಕಳು, ಸಾರ್ವಜನಿಕರು ರಸ್ತೆ ದಾಟಲು ತೊಂದರೆ ಪಡುವುದನ್ನು ತಡೆಗಟ್ಟಲು ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ?

ಶ್ರೀ ಎನ್. ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ಗಮನಕ್ಕೆ ಬಂದಿರುತ್ತದೆ.

ಆ) ಈ ಸ್ಥಳದಲ್ಲಿ ಪ್ರಸ್ತುತ ಸಂಚಾರಿ ಸಿಬ್ಬಂದಿ ನೇಮಕ ಮಾಡಿ ಸಂಚಾರ ನಿಯಂತ್ರಣ ಮಾಡುವಷ್ಟು ಪ್ರಮಾಣದಲ್ಲಿ ಸಂಚಾರದಟ್ಟಣೆ ಇರುವುದಿಲ್ಲ. ಆದರೂ ಸಹ, ಬೆಳಿಗ್ಗೆ ಮತ್ತು ಸಂಜೆ ವೇಳೆಯಲ್ಲಿ ಹೆಚ್ಚಿನ ಸಂಖ್ಯೆ ವಾಹನ ಸಂಚಾರ ಇರುವಾಗಲೂ ಮತ್ತು ಅವಶ್ಯಕತೆ ಬಿದ್ದಾಗಲೂ

ಹಾಗೂ ಸಂದರ್ಭಕ್ಕೆ ಅನುಸಾರವಾಗಿ, ಈ ಸ್ಥಳಕ್ಕೆ ಸಂಚಾರ ಸಿಬ್ಬಂದಿಯನ್ನು ನೇಮಕ ಮಾಡಿ ಸುಗಮ ಸಂಚಾರಿ ವ್ಯವಸ್ಥೆಗಾಗಿ ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ಈ ಸ್ಥಳದ ಸುತ್ತಮುತ್ತಲಿನ ಶಾಲಾ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಸುರಕ್ಷಿತವಾಗಿ ರಸ್ತೆ ದಾಟಲು ಅನುಕೂಲವಾಗುವಂತೆ ಶಾಲೆಗಳ ಮಾರ್ಗಗಳನ್ನು ಸ್ಪಷ್ಟವಾಗಿ ಗುರ್ತಿಸಲು ಅನುವಾಗುವಂತೆ ರಸ್ತೆಗೆ ಬಣ್ಣ ಬಳಿದು ಗುರ್ತಿಸಲಾಗಿದೆ. ಶಾಲೆಗಳ ಸಮೀಪ 'ಶಾಲಾ ವಲಯ' ಎಂಬ ಎಚ್ಚರಿಕೆ ಫಲಕಗಳನ್ನು ವಾಹನಗಳ ಚಾಲಕರಿಗೆ/ಸವಾರರಿಗೆ ತಿಳಿಯುವ ರೀತಿ ಅಗತ್ಯ ಸ್ಥಳಗಳಲ್ಲಿ ಅಳವಡಿಸಲಾಗಿದೆ.

ಶಾಲಾ ವಿದ್ಯಾರ್ಥಿಗಳಿಗೆ ರಸ್ತೆ ಸುರಕ್ಷತೆ ಬಗ್ಗೆ ಹಾಗೂ ಸಂಚಾರ ನಿಯಮಗಳ ಅರಿವು ಮೂಡಿಸುವುದಕ್ಕಾಗಿ ಉತ್ತಮ ಅನುಭವವುಳ್ಳ ಸಿಬ್ಬಂದಿಯನ್ನು ನೇಮಕ ಮಾಡಿ ಅಗತ್ಯ ತರಬೇತಿಯನ್ನು ಸಹ ನೀಡಲಾಗುತ್ತಿದೆ.

ಶ್ರೀ ಸರಿಕಾರ್ ಭೀಮಪ್ಪ ಚನ್ನಪ್ಪ : ಉತ್ತರವನ್ನು ಒದಗಿಸಿದ್ದಾರೆ. ಆದರೆ, ಈ ಮೊದಲು ಜಯನಗರದ ಅಶೋಕ ಪಿಲ್ಲರ್ ವೃತ್ತದ ಹತ್ತಿರ ಪೋಲೀಸ್ ಠಾಣೆ ಇತ್ತು. ಅಲ್ಲಿಂದ ಅದನ್ನು ಸೋಮೇಶ್ವರ ನಗರಕ್ಕೆ ಸ್ಥಳಾಂತರಿಸಿದ್ದಾರೆ. ಅಲ್ಲಿ ಅಶೋಕ ಪಿಲ್ಲರ್ ಹತ್ತಿರವಿರುವ ಜನಾಂಗಕ್ಕೆ ತ್ರಾಸವಿದೆ. ಅದಕ್ಕಾಗಿ ತಾವು ಉಪ ಆರಕ್ಷಕ ಠಾಣೆಯನ್ನು ಅಶೋಕ ಪಿಲ್ಲರ್ ಹತ್ತಿರ ಮಾಡಿದರೆ, ಜಯನಗರದ 1 ಮತ್ತು 2ನೇ ಬ್ಲಾಕ್ ಮತ್ತು ಸಿದ್ದಾಪುರದಲ್ಲಿ ನಡೆಯುವ ಗೂಂಡಾಗಿರಿ, ಕಳ್ಳತನವನ್ನು ನಿಲ್ಲಿಸಬಹುದೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎನ್. ಧರ್ಮಸಿಂಗ್ : ಮಾನ್ಯ ಸದಸ್ಯರು ಅಶೋಕ ಪಿಲ್ಲರ್ ಹತ್ತಿರ ಸ್ವಲ್ಪ ತೊಂದರೆಯಾಗುತ್ತಿದೆ ಎಂದು ಹೇಳಿದ್ದಾರೆ. ಇಡೀ ಬೆಂಗಳೂರಿನಲ್ಲಿ ಸಂಚಾರ ವ್ಯವಸ್ಥೆಯನ್ನು ಸಮರ್ಪಕವಾಗಿ, ಪರಿಣಾಮಕಾರಿಯಾಗಿ ಮಾಡಬೇಕೆಂಬುದು ಸರ್ಕಾರದ ಗಮನದಲ್ಲಿದೆ. ಅದಕ್ಕೆ ಬಹಳ ತೀವ್ರತರವಾಗಿ ಕಾರ್ಯಗತ ಮಾಡುತ್ತಿದ್ದಾರೆ. ಅದಕ್ಕೆ ನನ್ನ ಅಧ್ಯಕ್ಷತೆಯಲ್ಲಿ ಹೈ ಲೆವೆಲ್ ಎಂಪವರ್ ಕಮಿಟಿ ಮಾಡಬೇಕೆಂದಿದೆ. ಶಾಲಾ ಮಕ್ಕಳ ದೃಷ್ಟಿಯಿಂದ "ಸೇಫ್ ರೂಟ್ ಟು ಸ್ಕೂಲ್" ಎಂದು ಮಾಡಬೇಕೆಂದಿದ್ದೇವೆ ಫಾರ್ ಎಗ್ಜಾಂಪಲ್, ಈಗ ಮೌಂಟ್ ಕಾರ್ಮೆಲ್ ಕಾಲೇಜ್ ಇದೆ. ಅಲ್ಲಿ ಬಸ್‌ಗಳು ವೆಹಿಕಲ್ ಎಲ್ಲಾ ಸೇರಿ 600 ಸಂಖ್ಯೆಯಲ್ಲಾಗುತ್ತದೆ. ಅದಕ್ಕೆ ಒಂದೇ ಬಸ್‌ನಲ್ಲಿ ಹೋಗುವ ವ್ಯವಸ್ಥೆ ಮಾಡಿದರೆ ಕೇವಲ 35 ಬಸ್‌ಗಳಲ್ಲಿ ಹೋಗಿ ಬರುವುದಾಗುತ್ತದೆ. ಟ್ರಾಫಿಕ್ ಬಗ್ಗೆ ನಾನು ಮೊದಲೇ ಹೇಳಿದ್ದೇನೆ. This is the fastest growing city in the Country. 74 ಪರ್ಸೆಂಟ್ ಆಗುತ್ತಾ ಇದೆ. ಬಹಳ ಜನಸಂಖ್ಯೆ ಬೆಳೆಯುತ್ತಿದೆ. ಇವತ್ತು ನಾವು ಟ್ರಾಫಿಕ್ ನಿಯಂತ್ರಣವನ್ನು ಮಾಡಬೇಕಾಗಿದೆ. ಇದಕ್ಕೆ ಯಾರೂ ಕೂಡ ವೆಹಿಕಲ್ ಹಿಡಿದ ಮೇಲೆ ನಾವು ಅವರ ಮೇಲೆ ಕೇಸ್ ಹಾಕಿ ಕೋರ್ಟ್‌ಗೆ ಹೋಗುವುದು ಇಲ್ಲ. ಅಲ್ಲೇ ಫೈನ್ ಹಾಕಿ ಮಾಡುವುದಿದೆ. Out of that we are getting 14 crores. ಇದಕ್ಕೆ ಹಣವನ್ನು ಅವರು ಕೊಟ್ಟರು. ಶಾಲಾ ಮಕ್ಕಳು ಇತ್ತೀಚಿನ ದಿನಗಳಲ್ಲಿ ಆಕ್ಸಿಡೆಂಟ್‌ಗಳಲ್ಲಿ ಸಾಯುತ್ತಿದ್ದಾರೆ. ಅದರ ಬಗ್ಗೆ ನಿಯಂತ್ರಣ ಮಾಡುತ್ತಿದ್ದೇವೆ. ವಿಶೇಷವಾದ ರೀತಿಯಲ್ಲಿ ಟ್ರಾಫಿಕ್ ನಿಯಂತ್ರಣ ಮಾಡುವುದಕ್ಕೆ ಸರ್ಕಾರ ಹೆಚ್ಚಿನ ಗಮನ ಕೊಡುತ್ತದೆ.

ಶ್ರೀ ಆರ್. ಅಶೋಕ್ : 3ನೇ ಪ್ರಶ್ನೆಯನ್ನು ನಮ್ಮ ಮಾನ್ಯ ಭೀಮಪ್ಪನವರು ಕೇಳಿದ್ದಾರೆ. ಈಗಾಗಲೇ ಶಾಲಾ ವಿದ್ಯಾರ್ಥಿಗಳು ಓಡಾಡುವ ಸ್ಥಳದಲ್ಲಿ ಬಹಳ ಅಚ್ಚುಕಟ್ಟಾಗಿ ಏನು ಹಂಪ್ಸ್ ಬರುತ್ತದೆ, ಸಿಗ್ನಲ್ ಲೈಟ್ಸ್ ಬರುತ್ತದೆ, ಅಲ್ಲಿ ಬಹಳ ಮಾರ್ಕಿಂಗ್, ಎಲ್ಲಾ ಬಹಳ ವ್ಯವಸ್ಥಿತವಾಗಿ ಮಾಡಿದ್ದೀರಿ. ಪ್ರಿಕಾಷನರಿ ತೆಗೆದುಕೊಂಡಿದ್ದೀರಿ. ಮೊನ್ನೆ 15 ದಿನಗಳ ಹಿಂದೆ, ಲಿಟಲ್ ಫ್ಲವರ್ಸ್ ಸ್ಕೂಲ್ ಶ್ರೀನಿವಾಸನಗರ, ಪದ್ಮನಾಭನಗರದ ಹತ್ತಿರ, 8 ವರ್ಷದ ಬಾಲಕಿ ಶಾಲೆಗೆ ಹೋಗಿ ಬರುತ್ತಿರಬೇಕಾದರೆ ಸತ್ತಿದ್ದಾಳೆ. ಇವರು ಹಂಪ್ಸ್ ಹಾಕಿದ್ದಾರೆ. ಬಣ್ಣ ಬಳಿದೇ ಇಲ್ಲ. ಬೇಕಾದರೆ ಇವತ್ತೇ ಯಾರನ್ನಾದರೂ ಕಳುಹಿಸಿ. ಅಲ್ಲಿ ಬಣ್ಣ ಬಳಿದಿಲ್ಲ. ಹಾಗೇ ಇದೆ. ಅಲ್ಲಿ ಸಿಗ್ನಲ್ ಲೈಟ್ಸ್ ಇಲ್ಲ. ಹಂಪ್ಸ್ ಇದೆ ಎನ್ನುವ ಬೋರ್ಡ್ ಇಲ್ಲ. ಆಮೇಲೆ, ಮೌಂಟ್ ಕಾರ್ಮೆಲ್ ಕಾಲೇಜ್ ಹತ್ತಿರ ಒಬ್ಬ ಹುಡುಗಿ ಸತ್ತಳು. ಅಲ್ಲಿ ಬೆಂಕಿ ಹಾಕಿ ವೆಹಿಕಲ್ ಸುಟ್ಟರು. ಇವತ್ತು ಬೆಂಗಳೂರಿನಲ್ಲಿ ದಿನನಿತ್ಯ ಒಂದು ರೀತಿಯ ದಟ್ಟಣೆಯ ವಾಹನ ಸಂಚಾರವಿರುವುದರಿಂದ, ಮಕ್ಕಳು ಓಡಾಡುವುದಕ್ಕೆ ಬಹಳ ಕಷ್ಟವಾಗುತ್ತಿದೆ. ತಂದೆ-ತಾಯಿಗಳು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಿದರೆ, ಅವರು ಬರುವವರೆಗೂ ಕಾಯಬೇಕಾಗುತ್ತದೆ. ನಿಮ್ಮ ಪೊಲೀಸ್ ಅಧಿಕಾರಿಗಳನ್ನು ಕೇಳಿದಾಗ, ಸ್ಟಾಫ್ ಇಲ್ಲವೆಂದು ಹೇಳುತ್ತಾರೆ. ಯಾವುದೇ ಪೊಲೀಸ್ ಠಾಣೆ, ಡಿಸಿಪಿಯವರಲ್ಲಿ ಕೇಳಿದರೆ, ನಮ್ಮ ಹತ್ತಿರ ಟ್ರಾಫಿಕ್ ಸ್ಟಾಫ್ ಇಲ್ಲವೆನ್ನುತ್ತಾರೆ. ಅಟ್‌ಲೀಸ್ಟ್, ಮಕ್ಕಳು ಶಾಲೆಗೆ ಹೋಗುವ ಸಮಯದಲ್ಲಿ ಬೆಳಿಗ್ಗೆ 8 ಗಂಟೆಯಿಂದ 10 ಗಂಟೆಯೊಳಗೆ, ಮತ್ತೆ ಶಾಲೆಯಿಂದ ಬರುವಾಗ 4 ಗಂಟೆಯಿಂದ 6 ಗಂಟೆಯೊಳಗೆ ಟ್ರಾಫಿಕ್ ಪೊಲೀಸರನ್ನು ಹಾಕಬೇಕು. ಬೆಂಗಳೂರಿನಲ್ಲಿ ಬಹಳ ಕಡಿಮೆ ಡೊನೇಷನ್ ತೆಗೆದುಕೊಳ್ಳುತ್ತಾರೆ. ಒಂದು ಲಕ್ಷ, ಒಂದೂವರೆ ಲಕ್ಷ ರೂಪಾಯಿ ತೆಗೆದುಕೊಳ್ಳುತ್ತಾರೆ. ಆ ಶಾಲೆಯವರಿಗೇ ಇನ್‌ಸಿಸ್ಟ್ ಮಾಡಿ, ಶಾಲೆಬಿಡುವ, ಬರುವ ಸಮಯಕ್ಕೆ ಅವರೇ ಅದನ್ನು ಕಂಟ್ರೋಲ್ ಮಾಡಬೇಕು. ಆ ರೀತಿ ಅವರಿಗೆ ಪೊಲೀಸರಿಂದ ತರಬೇತಿ ಕೊಡುವುದನ್ನು ಮಾಡಬೇಕು. ಇದನ್ನು ಮಾಡಲಿಲ್ಲವೆಂದರೆ, ಬೆಂಗಳೂರಿನಲ್ಲಿ ನಿಜಕ್ಕೂ ಶಾಲಾ ಮಕ್ಕಳಿಗೆ ಕಷ್ಟವಾಗುತ್ತದೆ. ಇವತ್ತು ಇಬ್ಬರು ಸತ್ತಿದ್ದಾರೆ. ಒಬ್ಬರು ನನ್ನ ಕಾನ್‌ಸ್ಟಿಟ್ಯೂಯೆನ್ಸಿಯಲ್ಲಿ ಸತ್ತಿದ್ದಾರೆ. ಆ ಮಕ್ಕಳು ಸತ್ತಿರುವುದನ್ನು ನೋಡಿದಾಗ ನನಗೆ ನೋವಾಯಿತು. ಮಕ್ಕಳು ಇವತ್ತು ಶಾಲೆಗೆ ಹೋಗುವುದಕ್ಕೆ ಭಯ ಬೀಳುತ್ತಾರೆ. ಒಂದು ರೀತಿ ಬೆಂಗಳೂರಿನಲ್ಲಿ ಟ್ರಾಫಿಕ್ಕೇ ಅಧ್ವಾನವಾಗಿದೆ. ಒನ್-ವೇ ಮಾಡಿದ್ದಾರೆ. ಏನಾದರೂ ಒಂದು ಸಿಗ್ನಲ್ ಲೈಟ್ ಮಿಸ್ ಆದರೆ, 4 ಕಿಲೋಮೀಟರ್ ಸುತ್ತಿಕೊಂಡು ಬರಬೇಕು. ಭಾರತದ ಮೇಲೆ ಐತಿಹಾಸದಲ್ಲಿಯೇ ಬೆಂಗಳೂರಿನಲ್ಲಿ ಫ್ಲೈ-ಓವರ್ ಮೇಲೆ ಸಿಗ್ನಲ್ ಲೈಟ್ ಇದೆ. ಬೆಂಗಳೂರಿನಲ್ಲಿ ಫ್ಲೈ-ಓವರ್ ಮೇಲೆ ಒನ್-ವೇ ಮಾಡಿದ್ದಾರೆ. ಯಾವುದೇ ವೈಜ್ಞಾನಿಕ ಸಮೀಕ್ಷೆ ಮಾಡಿಲ್ಲ. ಜನಪ್ರತಿನಿಧಿಗಳಿರಬಹುದು, ಸಾರ್ವಜನಿಕರಿರಬಹುದು, ಅಲ್ಲಿನ ಅಂಗಡಿ ಮಾಲೀಕರಿರಬಹುದು, ಯಾರದ್ದಾದರೂ, ಒಪೀನಿಯನ್ ಅನ್ನು ತೆಗೆದುಕೊಂಡು ಮಾಡಬೇಕು. ನೀವೇ ಏಕಾಏಕಿಯಾಗಿ ಒನ್-ವೇ ಮಾಡುವುದರಿಂದ, ಬೆಂಗಳೂರಿನ ಟ್ರಾಫಿಕ್ ಅಧ್ವಾನವಾಗಿದೆ. ವಿಶೇಷವಾಗಿ ಮಕ್ಕಳಿಗೆ ಬಹಳ ತೊಂದರೆಯಾಗುತ್ತಿದೆ. ಇದರ ಬಗ್ಗೆ ಮುಖ್ಯಮಂತ್ರಿಗಳು ಗಮನಹರಿಸಿ, ಇದನ್ನು ಕೂಡಲೇ ನಿವಾರಣೆ ಮಾಡಬೇಕು. ಈಗ ಮಕ್ಕಳು ಸತ್ತಿದ್ದಾರೆ. ಇನ್ನೊಂದು ಸಾರಿ ಇನ್ಯಾರ ಮಕ್ಕಳೂ ಸಾಯಬಾರದು. ಅದಕ್ಕೋಸ್ಕರ, ಯಾವ ಕ್ರಮವನ್ನು ತಾವು ಕೈಗೊಳ್ಳುತ್ತೀರಾ ಎಂಬುದನ್ನು ದಯವಿಟ್ಟು ತಿಳಿಸಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀ ಧರ್ಮಸಿಂಗ್ : ಮಾನ್ಯ ಅಶೋಕ್‌ರವರು ಹೇಳಿದಂತೆ, ಶಾಲಾ ಮಕ್ಕಳು ಇತ್ತೀಚಿನ ದಿನಗಳಲ್ಲಿ ಬಹಳಷ್ಟು ಇದರಲ್ಲಿ ಸಾವಿಗೀಡಾಗಿದ್ದಾರೆ. ಅದಕ್ಕೆ ಹೆಚ್ಚಿನ ಕಾನ್‌ಸ್ಟೇಬಲ್‌ಗಳನ್ನು ಹಾಕಬೇಕೆಂದಿದೆ. ಎಕಾನಮಿ ಆರ್ಡರ್ ಏನಿದೆ, ಅದನ್ನು ಸಡಿಲಗೊಳಿಸಿ, 2 ಸಾವಿರ ಟ್ರಾಫಿಕ್ ಕಾನ್ಸ್‌ಟೇಬಲ್‌ಗಳನ್ನು ಭರ್ತಿ ಮಾಡುತ್ತಿದ್ದೇವೆ. ಪ್ರೊಫೆಸರ್ ಶ್ರೀನಿವಾಸನ್ ಕಮಿಟಿ ಕಾನ್ಸ್‌ಟಿಟ್ಯೂಟ್ ಮಾಡಿ, ಅವರೇನು ರಿಪೋರ್ಟ್ ಕೊಟ್ಟಿದ್ದಾರೆ, ಅದನ್ನೂ ಕೂಡ ಅನುಷ್ಠಾನಕ್ಕೆ ತರುವುದಕ್ಕೆ ಮಾಡುತ್ತೇನೆ. ಬಹಳ ಜಾಗ್ರತೆಯಿಂದ ಕೆಲವೇ ದಿನಗಳಲ್ಲಿ ಇದನ್ನು ಜಾರಿಗೊಳಿಸುವ ವ್ಯವಸ್ಥೆ ಮಾಡಿ, ನಿಯಂತ್ರಣ ಮಾಡುತ್ತೇವೆ.

ಶ್ರೀ ಆರ್. ಅಶೋಕ್ : ಟ್ರಾಫಿಕ್ ಪೋಲೀಸರನ್ನು ಯಾವಾಗ ನೇಮಕಾತಿ ಮಾಡುತ್ತೀರಿ ಎನ್ನುವುದನ್ನು ತಿಳಿಸಬೇಕೆಂದು ಕೇಳುತ್ತೇನೆ.

ಶ್ರೀ ಧರ್ಮಸಿಂಗ್ : ಎಕಾನಮಿ ಆರ್ಡರ್ ಅನ್ನು ಸಡಿಲಗೊಳಿಸಿ, 2 ಸಾವಿರ ಟ್ರಾಫಿಕ್ ಕಾನ್ಸ್‌ಸ್ಟೇಬಲ್‌ಗಳನ್ನು ಪ್ರತ್ಯೇಕವಾಗಿ ಇದಕ್ಕೆ ನಿಗದಿಪಡಿಸಿ ಮಾಡುತ್ತೇನೆ.

ನಕ್ಸಲೀಯರಿಂದ ಶಾಸಕರುಗಳಿಗೆ ಪ್ರಾಣ ಬೆದರಿಕೆ

84 (1558) ಶ್ರೀ ರಘುಪತಿ ಭಟ್ ಕೆ. (ಉಡುಪಿ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ನಕ್ಸಲೀಯರಿಂದ ಶಾಸಕರುಗಳಿಗೆ ಪ್ರಾಣ ಬೆದರಿಕೆಯಿರುವುದು ಸರಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ ಸರಕಾರವು ಕೈಗೊಂಡ ಕ್ರಮವೇನು (ವಿವರ ನೀಡುವುದು)?

ಶ್ರೀ ಎನ್. ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ಬಂದಿದೆ.

ಆ) ನಕ್ಸಲೀಯರ ಚಟುವಟಿಕೆ ಕಂಡುಬಂದಿರುವ ಪ್ರದೇಶಗಳಲ್ಲಿ ಶಾಸಕರುಗಳಿಗೆ ಸೂಕ್ತ ರಕ್ಷಣೆಯನ್ನು ನೀಡಲು ಪೊಲೀಸ್ ಅಧಿಕಾರಿಗಳಿಗೆ ಅಗತ್ಯ ಸೂಚನೆ ನೀಡಲಾಗಿದೆ.

ಶ್ರೀ ಕೆ. ರಘುಪತಿ ಭಟ್ : ನಕ್ಸಲೀಯರಿಂದ ಶಾಸಕರುಗಳಿಗೆ ಪ್ರಾಣ ಬೆದರಿಕೆ ಇರುವ ಬಗ್ಗೆ ನಾನು ಪ್ರಶ್ನೆ ಕೇಳಿದ್ದೇನೆ. ಇದರಲ್ಲಿ ರಕ್ಷಣೆ ನೀಡಲು ಪೊಲೀಸ್ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂಬ ಉತ್ತರ ಬಂದಿದೆ. ಆದರೆ, ಪೊಲೀಸ್ ರಕ್ಷಣೆಗಿಂತ ಜಾಸ್ತಿ, ಇವತ್ತು ಸುಮಾರು 2–3 ಜಿಲ್ಲೆಗಳಲ್ಲಿ ನಕ್ಸಲೀಯ ಚಟುವಟಿಕೆಗಳು ಬಹಳ ದೊಡ್ಡ ಸಮಸ್ಯೆಯಾಗುತ್ತಿವೆ. ರಾಜಾರೋಷವಾಗಿ ನಕ್ಸಲೀಯರು ಬಂದೂಕುಗಳನ್ನು ಹಿಡಿದುಕೊಂಡು ಗ್ರಾಮಾಂತರ ಪ್ರದೇಶಗಳಲ್ಲಿ ತಿರುಗಾಡುವುದನ್ನು ನಾವು ನೋಡುತ್ತಿದ್ದೇವೆ. ಇನ್ನು ವಿಶೇಷವಾಗಿ ನಮ್ಮ ಕೆಲವು ಶಾಸಕರುಗಳ ಮೇಲೆ ನೇರವಾಗಿ ಗೋಡೆ ಬರಹದ ಮೂಲಕ ಎಚ್ಚರಿಕೆ ಕೊಡುವುದನ್ನು ಮಾಡುತ್ತಿದ್ದಾರೆ. ಉದಾಹರಣೆಗೆ, ನಮ್ಮ ನಾಡಪಾಲ ಗ್ರಾಮದಲ್ಲಿನ ನೆಲ್ಲಿಕಟ್ಟೆ ಬಸ್ ನಿಲ್ದಾಣದ ಬಳಿ ಒಂದು ಕಡೆ, ಮೇಗದ್ದೆ ಹಿರಿಯ ಪ್ರಾಥಮಿಕ ಶಾಲೆಯ ಹತ್ತಿರ ಎರಡೂ ಕಡೆ ನಮ್ಮ ಕುಂದಾಪುರ ಶಾಸಕರಾದ ಹಾಲಾಡಿ ಶ್ರೀನಿವಾಸ ಶೆಟ್ಟಿಯ ಮೇಲೆ, ಅವರಲ್ಲಿರುವ ಆಸ್ತಿಗಳನ್ನು ಎಲ್ಲಾ ಬಡವರಿಗೆ ಹಂಚಿ ಕೊಡಬೇಕೆಂದು ಇಲ್ಲದಿದ್ದರೆ ಅವರಿಗೆ ಜೀವ ಬೆದರಿಕೆ ಒಡ್ಡಿದ್ದಾರೆ. ಇದೇ ತರಹ, ನಮ್ಮ ಭಾರತೀಯ ಜನತಾ ಪಕ್ಷದ ಜಿಲ್ಲಾ

ಕಾರ್ಯದರ್ಶಿಯವರಾದ ವಿಕ್ರಮಾರ್ಜುನ ಹೆಗಡೆಯವರ ಮೇಲೆ ಮಾಡಿದ್ದಾರೆ. ಅಲ್ಲಿ ಆಸ್ತಿ ಇದ್ದವರೆಲ್ಲಾ ಹಂಚಿಕೊಡಬೇಕೆಂದು ಅವರ ಬೇಡಿಕೆಗಳನ್ನು ಇಟ್ಟಿದ್ದಾರೆ. ಒಟ್ಟಾರೆ, ಅಲ್ಲಿಯ ಜನರು ಇವತ್ತು ಭಯಭೀತರಾಗಿದ್ದಾರೆ. ಸರ್ಕಾರದವರು ನಿನ್ನೆ, ಇವತ್ತು ಪತ್ರಿಕೆಗಳಲ್ಲಿ ಬಂದ ಹಾಗೆ, ಎಸ್‌ಟಿಎಫ್ ಅನ್ನು ನೇಮಕ ಮಾಡುತ್ತಿದ್ದೇವೆಂದು ಹೇಳಿದ್ದರು. ನಿನೆ 2 ದಿವಸಗಳಿಂದ ಬಂದೂಕುಗಳನ್ನು ಹಿಡಿದುಕೊಂಡು ನೆಲ್ಲಿ ಕಟ್ಟೆ ಪ್ರದೇಶದಲ್ಲಿ ಆ ನಕ್ಸಲೀಯರು ರಾಜಾರೋಷವಾಗಿ ತಿರುಗಾಡುತ್ತಿದ್ದಾರೆ. ಇವತ್ತು ಪೋಲೀಸ್ ಇಲಾಖೆಯು ಅವರ ಬಗ್ಗೆ ಯಾವುದೇ ಕ್ರಮವನ್ನು ಕೈಗೊಳ್ಳುತ್ತಿಲ್ಲ. ಸರ್ಕಾರ ಇದನ್ನು ಏನು ಮಾಡಲಿಕ್ಕೆ ಬಯಸುತ್ತದೆ ಎಂಬುದನ್ನು ಹೇಳಬೇಕು. ಇನ್ನು ನಮ್ಮ ಕಾರ್ಕಳದ ಶಾಸಕರಾದ ಸುನೀಲ್ ಕುಮಾರ್ ರವರ ಮೆಲೆ, ಅವರು ಏಳು ಗ್ರಾಮದಲ್ಲಿ ತಿರುಗಿ ಜನಾಭಿಪ್ರಾಯ ರೂಪಿಸಲಿಕ್ಕೆ ನಕ್ಸಲಿಯರ ವಿರುದ್ಧವಾಗಿ ಮಾಡುವುದನ್ನು ಮಾಡುತ್ತಿದ್ದಾರೆ. ಆದರೂ ಇವತ್ತು ಅವರ ಮೇಲೆ ಗೋಡೆಯ ಮೇಲೆ ಬರಹಗಳನ್ನು ಬರೆಯುವುದು, ಕರಪತ್ರಗಳನ್ನು ಹಂಚಿಸುವುದು, ಅವರ ಮೇಲೆ ನಾವು ಕ್ರಮ ಕೈಗೊಳ್ಳುತ್ತೇವೆ ಎಂದು ಹೇಳುವುದು ಮತ್ತು ಶಾಸಕರುಗಳಿಗೆ ಪತ್ರಗಳನ್ನು ಬರೆದು ಎಚ್ಚರಿಕೆ ಕೊಡುವುದು, ಅಂದರೆ ಯಾರೂ ಅವರ ವಿರುದ್ಧವಾಗಿ ಜನಜಾಗೃತಿಯನ್ನು ರೂಪಿಸುತ್ತಾರೋ ಅವರ ಮೇಲೆ ವಿರೋಧವಾಗಿ ಮಾಡುವುದನ್ನು ಮಾಡುತ್ತಿದ್ದಾರೆ. ಇದಕ್ಕೆ ಸರ್ಕಾರ ಕಠಿಣವಾದ ನಿಲುವನ್ನು ತೆಗೆದುಕೊಳ್ಳದೇ ಹೋದರೆ ಬಹಳ ತೊಂದರೆಯಾಗಬಹುದು. ಇದರ ಬಗ್ಗೆ ಸರ್ಕಾರ ಉತ್ತರ ಕೊಡಬೇಕು.

ಶ್ರೀ ಧರ್ಮಸಿಂಗ್ : ಈಗ ನಕ್ಸಲೈಟ್ ಚಟುವಟಿಕೆ ಬಗ್ಗೆ ಸರ್ಕಾರ ಬಹಳ ಎಚ್ಚರಿಕೆ ವಹಿಸಿದೆ. ಮತ್ತು ನಕ್ಸ್‌ಲೈಟ್ ಚಟುವಟಿಕೆ ಬೆಳೆಯತಕ್ಕಂಥ ರೀತಿಯಲ್ಲಿ ಕಾರಣಗಳನ್ನು ಕೂಡ ಈಗಾಗಲೇ ನಾನು ಹೊರಗಡೆ ಹಾಗೂ ಈ ಸದನದಲ್ಲಿ ಹೇಳಿದ್ದೇನೆ. ಇವತ್ತು ಏನು ನಮ್ಮ ಶಾಸಕರಾದ ರಘುಪತಿ ಭಟ್‌ರವರು ಏನು ಕೇಳುತ್ತಿದ್ದಾರೆ, ಪ್ರಾಣ ಬೆದರಿಕೆ ಇದೆ, ಕಾರ್ಕಳದಲ್ಲಿ ಮತ್ತು ಆ ಭಾಗದಲ್ಲಿ ಇರತಕ್ಕಂಥ ಶಾಸಕರಿಗೆ ಭಯದ ವಾತಾವರಣ ಇದೆ ಎಂದು ಹೇಳಿದ್ದಾರೆ. ಇಲ್ಲಿ ಸರ್ಕಾರ ಇದೆ, ಪೋಲೀಸ್ ಇಲಾಖೆ ಇದೆ, ನಾವು ಸಮಗ್ರ ರೀತಿಯಲ್ಲಿ ನಿರ್ವಹಿಸುತ್ತೇವೆ. ಯಾವುದೇ ಬೆದರಿಕೆಗೂ ಕೂಡ ನೀವು ಹೆದರಬೇಕಾಗಿಲ್ಲ. ಅದಕ್ಕೆ ನಾನು ಮೊನ್ನೆ ವಿಧಾನ ಪರಿಷತ್ತಿನಲ್ಲಿ ಹೇಳಿದ್ದೆ ಉಡುಪಿ, ಮಂಗಳೂರು, ಚಿಕ್ಕಮಗಳೂರಿನಲ್ಲಿ ದಿನೇ ದಿನೇ ಇದು ಬೆಳೆಯುತ್ತಿದೆ, ಇದನ್ನು ನಿಯಂತ್ರಣಗೊಳಿಸುವುದಕ್ಕೆ ಸ್ಪೆಷಲ್ ಟಾಸ್ಕ್ ಫೋರ್ಸ್‌ಗೆ ವಹಿಸುವ ಬಗ್ಗೆ ಈಗಾಗಲೇ ಘೋಷಣೆ ಮಾಡಿದ್ದೇನೆ. ಅದು ಕಾರ್ಯಗತದಲ್ಲಿ ಕೂಡ ಬರುತ್ತದೆ. ಶಾಸಕರ ಮತ್ತು ಸಾಮಾನ್ಯ ಜನರ ಸಂರಕ್ಷಣೆ ಮಾಡುವುದು ನಮ್ಮ ಸರ್ಕಾರದ ಕರ್ತವ್ಯ ಇದೆ ಅದನ್ನು ನಾವು ಮಾಡುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಮುಖ್ಯಮಂತ್ರಿಗಳಿಗೆ ಗೊತ್ತಿದೆ. ಈ ನಕ್ಸಲೀಯ ಚಟುವಟಿಕೆ ಎಲ್ಲಿ ಹೆಚ್ಚು ಆಗುತ್ತಿದೆ ಎಂದರೆ, ಗ್ರಾಮೀಣ ಪ್ರದೇಶದಲ್ಲಿ, ಅರಣ್ಯ ಪ್ರದೇಶದಲ್ಲಿ ವಾಸ ಮಾಡುವಂಥವರಿಗೆ ರಕ್ಷಣೆ ಸಿಗಲಿಲ್ಲ ಎನ್ನುವ ಭಾವನೆ ಬಂದಾಗ, ನಾವು ನಿಮಗೆ ರಕ್ಷಣೆ ಕೊಡುತ್ತೇವೆ. ನಿಮ್ಮ ಪರವಾಗಿ ಹೋರಾಟ ಮಾಡುತ್ತೇವೆ, ಎನ್ನುವಂಥ ವಾತಾವರಣ ನಿರ್ಮಾಣ ಮಾಡುವಂಥದ್ದು ನಕ್ಸಲೀಯರು ಮಾಡುತ್ತಿದ್ದಾರೆ. ನಾನು ನಿಮ್ಮನ್ನು ವೈಯಕ್ತಿಕವಾಗಿ ಭೇಟಿ ಮಾಡಿ ಹೇಳುತ್ತೇನೆ. ಕೆಲವು ಪೋಲೀಸ್ ಉನ್ನತ ಅಧಿಕಾರಿಗಳು ಈ ನಕ್ಸಲೀಯ ಚಟುವಟಿಕೆಗಳಿಗೆ ಒಂದು ರೀತಿಯಲ್ಲಿ

ಇನ್‌ಡೈರೆಕ್ಟ್ ಆಗಿ ಪ್ರೋತ್ಸಾಹ ಕೊಡುವಂಥ ಆ್ಯಟಿಟ್ಯೂಡ್ ಅಲ್ಲಿ ನಡೆಯುತ್ತಿದೆ. ನಾನು ನಿಮಗೆ ಆ ವಿವರವನ್ನು ಕೊಡುತ್ತೇನೆ. ಇವತ್ತು ವಿಶೇಷವಾಗಿ ಶಾಸಕರಾದ ಸುನೀಲ್ ಕುಮಾರ್‌ರವರ ಕ್ಷೇತ್ರವಾದ ಕಾರ್ಕಳದಲ್ಲಿ ಬಹಿರಂಗವಾಗಿ ಬೋರ್ಡ್‌ಗಳನ್ನು ಬರೆಯುವುದರ ಮೂಲಕ ಅವರು ಯಾವುದೇ ಕಾರಣಕ್ಕೆ ಸುನೀಲ್ ಕುಮಾರ್‌ರವರನ್ನು ಸುಮ್ಮನೆ ಬಿಡುವುದಿಲ್ಲ. ನಿಮ್ಮ ಊರಿನೊಳಗೆ ಸೇರಿಸಕೂಡದು, ಈ ರೀತಿ ಬೆದರಿಕೆ ಹಾಕುತ್ತಿರುವುದನ್ನು ನೀವು ಯಾವುದೇ ಪೊಲೀಸ್ ಅಧಿಕಾರಿಗಳಿಂದ ತಾವು ವರದಿಯನ್ನು ತರಿಸಿಕೊಳ್ಳಬಹುದು. ಶಾಸಕರಾದ ಸುನೀಲ್ ಕುಮಾರ್ ಅವರನ್ನು ನಿಮ್ಮ ಗ್ರಾಮಕ್ಕೆ ಬರಲಿಕ್ಕೆ ಬಿಡಬೇಡಿ ಎಂದು ಹೇಳುತ್ತಾರೆ. ಈಗಾಗಲೇ ಇದು ಕಳೆದ ನಾಲ್ಕೈದು ತಿಂಗಳಿನಿಂದ ಪ್ರಾರಂಭವಾಗಿದೆ. ಇದು ಈ ರೀತಿ ಮುಂದುವರಿದರೆ ಪರಿಣಾಮ ಎಲ್ಲಿಗೆ ಹೋಗುತ್ತದೆ ಎಂಬುದನ್ನು ನಾವು ನೀವು ಎಲ್ಲರೂ ಯೋಚಿಸಬೇಕಾಗುತ್ತದೆ. ಆದುದರಿಂದ, ನಾನು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಕೈಮುಗಿದು ಕೇಳಿಕೊಳ್ಳುವುದೇನೆಂದರೆ, ಇವತ್ತು ಆ ಭಾಗದ ಶಾಸಕರು ಪ್ರಾಣ ಭಯದಿಂದ ಇದ್ದಾರೆ. ಅವರಿಗೆ ರಕ್ಷಣೆ ಇಲ್ಲ. ಶಾಸಕರಿಗೆ ರಕ್ಷಣೆ ಇಲ್ಲವೆಂದರೆ ಇನ್ನು ಜನ ಸಾಮಾನ್ಯರ ಪಾಡೇನು? ಈ ಸಮಸ್ಯೆಯನ್ನು ಆದಷ್ಟು ಬೇಗ ಪರಿಹರಿಸಬೇಕು. ಅವರ ತೊಂದರೆಗಳು ಏನು ಇದೆ ಅದನ್ನು ಚರ್ಚಿಸಿ, ಇದರ ಬಗ್ಗೆ ಗಂಭೀರವಾದ ಚಿಂತನೆ ಮಾಡಿ ಇದನ್ನು ಅಂತ್ಯಗೊಳಿಸುವಂಥ ದಿಟ್ಟ ನಿಲುವನ್ನು ಸರ್ಕಾರ ಇಂದು ಪ್ರದರ್ಶಿಸಬೇಕಾಗಿದೆ. ಇದೊಂದು ಸಾಮಾಜಿಕ ಪಿಡುಗು ಆಗಿ ಪರಿಣಮಿಸಿದೆ. ಅವರ ಸಮಸ್ಯೆಗಳು ಏನು ಇದೆ, ಅದನ್ನು ತಿಳಿದುಕೊಂಡು ಇದನ್ನು ತಹಬದಿಗೆ ತರುವ ನಿಟ್ಟಿನಲ್ಲಿ ಸರ್ಕಾರದಿಂದ ಸ್ಪಷ್ಟ ಉತ್ತರವನ್ನು ನಾನು ಕೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಧರ್ಮಸಿಂಗ್ : ಇದೊಂದು ಸಾಮಾಜಿಕ ಸಮಸ್ಯೆ. ಆ ಭಾಗದಲ್ಲಿರುವ ಸಮಸ್ಯೆಗಳ ಬಗ್ಗೆ ಅದರಲ್ಲೂ ಹೆಚ್ಚಿನ ಭಾಗ ಈ ನಕ್ಸಲೈಟ್ ಸಮಸ್ಯೆ ಕುರಿತಂತೆ ನಾನು ಈಗಾಗಲೇ 3–4 ಸಭೆಗಳನ್ನು ಮಾಡಿದ್ದೇನೆ. ಡೆವಲಪ್‌ಮೆಂಟ್ ಕಮಿಷನರ್ ಚಿರಂಜೀವಿ ಸಿಂಗ್ ಹಾಗೂ ಆರ್‌ಡಿಪಿಆರ್ ಸೆಕ್ರೆಟರಿ ಬಳಿಗಾರ್ ಹಾಗೂ ಇನ್ನೊಬ್ಬ ಅಧಿಕಾರಿಯಾದ ಶ್ರೀನಿವಾಸ ಕುಮಾರ್ ರವರ ನೇತೃತ್ವದಲ್ಲಿ ಇದರ ಬಗ್ಗೆ ಚರ್ಚಿಸಿ ಸರ್ಕಾರಕ್ಕೆ ಹಲವಾರು ಶಿಫಾರಸ್ಸುಗಳನ್ನು ಮಾಡಿದ್ದಾರೆ. ಈ ಎಲ್ಲಾ ಸಮಸ್ಯೆಗಳನ್ನು ಹತೋಟಿಗೆ ತರಬೇಕಾಗಿದೆ. ಇದು ನಾಗರೀಕ ಸರ್ಕಾರದ ಜವಾಬ್ದಾರಿ ಕೂಡ ಅದರಲ್ಲಿ ಎರಡು ಮಾತಿಲ್ಲ. ಅದೇ ರೀತಿಯಾಗಿ ಇದಕ್ಕೆ ಪ್ರೋತ್ಸಾಹ ನೀಡಿದಂಥವರ ಬಗ್ಗೆಯೂ ಸರ್ಕಾರ ಕ್ರಮ ತೆಗೆದುಕೊಳ್ಳುವುದಕ್ಕೆ ಹಿಂದೆ ಮುಂದೆ ನೋಡುವುದಿಲ್ಲ. ಅವರು ಯಾರೇ ಆದರೂ ಅವರ ವಿರುದ್ಧ ಕ್ರಮ ತೆಗೆದುಕೊಳ್ಳುತ್ತೇವೆ. ಇದನ್ನು ಬಗ್ಗು ಬಡಿಯಲೇ ಬೇಕು ಎನ್ನುವ ದೃಢ ನಿರ್ಧಾರದಿಂದಲೇ ಎಸ್‌ಟಿಎಫ್ ಅನ್ನು ಅಲ್ಲಿಗೆ ನಿಯೋಜಿಸಬೇಕೆನ್ನುವ ಆಲೋಚನೆ ಮಾಡಿದ್ದು. ಏಕೆಂದರೆ, ಅದು ಪರಿಣಾಮಕಾರಿಯಾಗಿ ಎಫೆಕ್ಟ್ ಆಗುತ್ತದೆ. ಆ ನಿಟ್ಟಿನಲ್ಲಿ ನಾವು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಸರ್ಕಾರ ಈ ಬಗ್ಗೆ ಈಗಾಗಲೇ ಏನು ಕ್ರಮ ಕೈಗೊಳ್ಳಬೇಕು ಅದನ್ನು ಕಾರ್ಯಗತ ಮಾಡಿದೆ, ಶಾಸಕರಿಗೆ ಹಾಗೂ ಜನ ಸಾಮಾನ್ಯರಿಗೂ ಕೂಡ ರಕ್ಷಣೆ ಒದಗಿಸುವಂಥ ಕೆಲಸ ಸರ್ಕಾರದ ಕರ್ತವ್ಯವಾಗಿದೆ. ನಾನು ಈಗಾಗಲೇ ಹೇಳಿರುವಂತೆ ಅಲ್ಲಿ ಐಜಿ ಯವರನ್ನೇ ನೋಡಲ್ ಆಫೀಸರ್‌ನ್ನಾಗಿ ಮಾಡಿದ್ದೇವೆ. ಈ ಪರಿಸ್ಥಿತಿಯನ್ನು ಹತೋಟಿಗೆ ತರುವ ಕೆಲಸ ಮಾಡುತ್ತಿದ್ದೇವೆ. ಇದರಲ್ಲಿ ಯಾರೂ ಸಂಶಯಪಡುವ ಅಗತ್ಯವಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಇದರ ಬಗ್ಗೆ ಸಮಗ್ರವಾದ ಚಿಂತನೆ ಆಗಬೇಕಾಗಿದೆ.

ಅಧ್ಯಕ್ಷರು : ವಾಟಾಳ್‌ರವರೇ, ಈಗಾಗಲೇ ಸಮಗ್ರವಾದ ಉತ್ತರವನ್ನು ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಿದ್ದಾರೆ, ಹೀಗಿರುವಾಗ ನೀವು ಪುನಃ ಪ್ರಶ್ನೆ ಕೇಳಿದರೆ ಹೇಗೆ? ಪ್ರಶ್ನೋತ್ತರವನ್ನು ನಾಲ್ಕು ಗಂಟೆ ಮಾಡಬೇಕೆ?

ಶ್ರೀ ವಾಟಾಳ್ ನಾಗರಾಜ್ : ಒಂದೇ ಒಂದು ನಿಮಿಷ. ಈ ನಕ್ಸಲೈಟ್ ಸಮಸ್ಯೆ ಬಗ್ಗೆ ಈಗಾಗಲೇ ಸರ್ಕಾರ ಗಮನಹರಿಸಿದೆ ಎಂದು ಹೇಳಿದಿರಿ, ಅವರ ಸಮಸ್ಯೆ ಏನು ಎಂದು ಗುರ್ತಿಸಿದ್ದೀರಾ? ಅವರ ಜೊತೆಗೆ ಅವರ ಮುಖಂಡರ ಜೊತೆಗೆ ಮಾತುಕತೆ ಮಾಡಿದ್ದಿರಾ? ಅವರಿಂದ ಬಂದಿರತಕ್ಕಂಥ ಬೇಡಿಕೆಗಳು ಏನು? ಇದನ್ನು ನೀವು ಹೇಗೆ ನಿಭಾಯಿಸುತ್ತೀರಿ? ಅವರ ದಮನ ಕಾರ್ಯಕ್ಕೆ ನೀವು ಎಸ್‌ಟಿಎಫ್ ಯನ್ನು ಬಳಸುತ್ತಿರುವುದು ಉಚಿತವೇ? ಏಕೆಂದರೆ, ಇಂಥ ಸಮಸ್ಯೆಗಳಿಗೆ ಮೂಲ ಕಾರಣ ಯಾವುದು? ಅವರ ಸಾಮಾಜಿಕ ಕಾರಣಗಳು ಏನು? ಇಂಥವರ ದಮನ ಕಾರ್ಯಕ್ಕೆ ನೀವು ಎಸ್‌ಟಿಎಫ್ ರವನ್ನು ಹಾಕುವುದಾದರೆ ಅದು ವೀರಪ್ಪನ್ ಅಂತ್ಯಕ್ಕೆ ಅದು ಬೇರೆ ವಿಷಯವಾಯಿತು, ಅದಕ್ಕೂ ಇದಕ್ಕೂ ವ್ಯತ್ಯಾಸ ಇದೆ. ಆ ಭಾಗದಲ್ಲಿರುವ ಸಮಸ್ಯೆಗಳೇನು, ರಸ್ತೆ ಕೆಲಸವಾಗಿರಬಹುದು, ಅಭಿವೃದ್ಧಿ ಕೆಲಸವಾಗಿರಬಹುದು, ಇಂಥ ಪರಿಸ್ಥಿತಿಯಲ್ಲಿ ಶಾಸಕರಿಗೆ ಪ್ರಾಣ ಬೆದರಿಕೆ ಬರುವಂಥದ್ದು ಅಂದರೆ ಏನು? ಎಸ್‌ಟಿಎಫ್ ನಿಯೋಜಿಸುವುದು ಸರಿಯೇ? ದಮನ ಮಾಡಬೇಕು ಅದಕ್ಕೆ ಎರಡು ಮಾತಿಲ್ಲ, ಆದರೆ ಅದಕ್ಕಾಗಿ ಎಸ್‌ಟಿಎಫ್ ನಿಯೋಜಿಸುವುದು ಎಷ್ಟರಮಟ್ಟಿಗೆ ಸರಿ? ಇದರ ಬಗ್ಗೆ ತಾವು ಸ್ಪಷ್ಟವಾದ ನಿಲುವು ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಅರಗ ಜ್ಞಾನೇಂದ್ರ : ನನ್ನ ಕ್ಷೇತ್ರದಲ್ಲೂ ಈ ಸಮಸ್ಯೆ ಇದೆ. ಇದೊಂದು ಸಾಮಾಜಿಕ ಪಿಡುಗು, ನಾವು ಯಾವ ಯುಗದಲ್ಲಿ ಇದ್ದೇವೆ ಎಂದು ನಮ್ಮನ್ನು ನಾವೇ ಪ್ರಶ್ನಿಸಿಕೊಳ್ಳಬೇಕಾಗಿದೆ. ಇವತ್ತು ಆ ಭಾಗದಲ್ಲಿರುವ ಶಾಸಕರು ಪ್ರಾಣದ ಭಯದಿಂದ ಓಡಾಡುವಂಥ ಪರಿಸ್ಥಿತಿ ನಿರ್ಮಾಣವಾಗಿದೆ. ನಾಗರೀಕ ಸರ್ಕಾರ ಇದರ ಬಗ್ಗೆ ಎಚ್ಚೆತ್ತುಕೊಂಡು ನಕ್ಸ್‌ಲೈಟ್ಸ್ ಅನ್ನು ದಮನ ಮಾಡುವಂಥ ನಿಟ್ಟಿನಲ್ಲಿ ಅಗತ್ಯಕ್ರಮ ತೆಗೆದುಕೊಳ್ಳುವುದು ಸೂಕ್ತವಾಗಿದೆ. ಅಲ್ಲಿ ಅಭಿವೃದ್ಧಿ ಕೆಲಸವಾಗಿಲ್ಲ ಮತ್ತೊಂದು ಆಗಿಲ್ಲ ಎಂದರೆ ಅದಕ್ಕೆ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಬೇರೆ ವ್ಯವಸ್ಥೆ ಇದೆ, ಅಲ್ಲಿ ಕೆಲಸವಾಗಿಲ್ಲವೆಂದರೆ ಸರ್ಕಾರ ಬದಲಾಯಿಸಬಹುದು, ಆದರೆ ಅದು ಬಿಟ್ಟು ಇಂಥ ಚಟುವಟಿಕೆಗಳಲ್ಲಿ ತೊಡಗಿ ಆ ಮೂಲಕ ಸಾರ್ವಜನಿಕರಿಗೆ ತೊಂದರೆ ಕೊಡುವಂಥದ್ದು ಎಷ್ಟರಮಟ್ಟಿಗೆ ಸರಿ? ಸರ್ಕಾರ ಇಂಥ ಚಟುವಟಿಕೆಗಳಿಗೆ ಮಟ್ಟ ಹಾಕಬೇಕಾಗುತ್ತದೆ. ಇದರ ಬಗ್ಗೆ ನೀವು ಯಾವುದೇ ಮುಲಾಜಿಲ್ಲದೆ ಇದರ ಬಗ್ಗೆ ದಿಟ್ಟ ನಿಲುವನ್ನು ತಾಳಬೇಕಾಗಿದೆ. ಏಕೆಂದರೆ, ಅವರದೇ ಸರ್ಕಾರ ಅವರು ಬಹಿರಂಗವಾಗಿ ಈ ರೀತಿ ಬೋರ್ಡ್ ಹಾಕುವುದಾದರೆ ಏನರ್ಥ? ಇಂಥದ್ದನ್ನು ಪ್ರೋತ್ಸಾಹಿಸಲೇಬಾರದು, ಇಂಥದ್ದನ್ನು ಖಂಡಿಸಬೇಕು ಹಾಗೂ ಇದರ ಬೇರು ಎಲ್ಲಿಯವರೆಗೆ ಇದೆ ಅದನ್ನೇನು ಬುಡ ಸಮೇತ ಕಿತ್ತು ಬಿಸಾಕಬೇಕು. ಏಕೆಂದರೆ ಅವರು ಅಷ್ಟು ವ್ಯವಸ್ಥೆಯಿಂದ ಕೂಡಿದ್ದಾರೆ. ಅವರ ಹತ್ತಿರ ಎಲ್ಲಾ ದವಸ ಧಾನ್ಯಗಳು, ಅಕ್ಕಿ, ಬೇಳೆ, ಬಂದೂಕು, ಮದ್ದುಗುಂಡುಗಳು, ನಿರೋಧ್, ಮೆನ್ಸಸ್ ಪೋಸ್ಟ್ ಫೋನ್‌ಮೆಂಟ್ ಟ್ಯಾಬ್ಲೆಟ್ಸ್, ಇಂಥ ಎಲ್ಲಾ ಐಟಂಗಳನ್ನು ಅವರು ತೆಗೆದುಕೊಂಡು ಕಾಡಿನೊಳಗೆ ಅನೇಕ ಯುವಕರು ಅವರ ಜೊತೆಗೆ ಕೆಲವು ಯುವತಿಯರು ಹೋಗುತ್ತಾರೆ. ಇವರು ಸರಕಾರದ

ರೀತಿಯಲ್ಲಿ ಅಲ್ಲಿರತಕ್ಕಂಥ ಒಬ್ಬ ಗಾರ್ಡ್ ಅನ್ನು ಜನಗಳ ಎದುರೇ ಕಟ್ಟಿ ಹಾಕಿ ಇವನು ನಿಮಗೆ ಯಾವುದಾದರೂ ರೀತಿಯಲ್ಲಿ ತೊಂದರೆ ಕೊಡುತ್ತಿದ್ದಾನೆಯೇ ಎಂದು ಪ್ರಶ್ನಿಸುತ್ತಿದ್ದಾರೆ, ಅವರಿಗೆ ಅನ್ಯಾಯ ಆಗಿದ್ದರೆ ಸರ್ಕಾರದ ವಿರುದ್ಧ ಪ್ರತಿಭಟನೆ ಮಾಡಬಹುದು, ಆದರೆ ಅವರೇ ಸರಕಾರ ಎನ್ನುವ ರೀತಿಯಲ್ಲಿ ನಡೆದುಕೊಂಡರೆ ಜನತಂತ್ರ ವ್ಯವಸ್ಥೆಯಲ್ಲಿ ಜನ ಸಾಮಾನ್ಯರು ಬದುಕುವುದು ಹೇಗೆ ಇದರ ಬಗ್ಗೆ ಚಿಂತನೆ ಮಾಡಿ ಇದನ್ನು ಹತ್ತಿಕ್ಕಬೇಕು. ಹಾಗೂ ಆ ಭಾಗದ ಶಾಸಕರಿಗೂ ಮತ್ತು ಜನ ಸಾಮಾನ್ಯರಿಗೂ ರಕ್ಷಣೆ ಕೊಡುವಂಥ ಕೆಲಸ ಸರ್ಕಾರದ ಕಡೆಯಿಂದ ಆಗಬೇಕು ಎಂದು ಕೇಳಿಕೊಂಡು ನಾನು ಈ ಸಮಸ್ಯೆಯನ್ನು ಶೀಘ್ರವಾಗಿ ಶಮನ ಮಾಡುವಂಥ ಕಾರ್ಯವನ್ನು ಕೈಗೊಳ್ಳಬೇಕೆಂದು ಆಗ್ರಹಪಡಿಸುತ್ತೇನೆ. ಧೈರ್ಯವಂತ ಪೊಲೀಸ್ ಅಧಿಕಾರಿಗಳನ್ನು ಅಲ್ಲಿಗೆ ಹಾಕಬೇಕು.

ಶ್ರೀ ಧರ್ಮಸಿಂಗ್ : ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದ ಹಾಗೆ, ಈ ಸಾಮಾಜಿಕ ಸಮಸ್ಯೆಯನ್ನು ಬಗೆಹರಿಸುವಲ್ಲಿ ಸರ್ಕಾರ ಗಮನಹರಿಸಿದೆ. ಈಗಾಗಲೇ ಈ ಬಗ್ಗೆ ಹಲವಾರು ಸಭೆಗಳನ್ನು ನಡೆಸಿದ್ದು ಸೂಕ್ತ ಕ್ರಮವನ್ನೂ ಕೂಡ ಜರುಗಿಸಲಾಗಿದೆ. ವಿಶೇಷವಾಗಿ ಹೇಳಬೇಕು ಎಂದರೆ, ಈ ಎಸ್‌ಟಿಎಫ್ ಅನ್ನು ಏಕೆ ನಿಯೋಜಿಸಿದೆವು ಎಂದು ಹೇಳಿದರೆ, ಈ ಸಮಸ್ಯೆ ಚಿಕ್ಕದಾಗಿರುವಾಗಲೇ ಅದನ್ನು ಸರಿಮಾಡಬೇಕು, ದೊಡ್ಡದಾದರೆ ಬಹಳ ಕಷ್ಟವಾಗುತ್ತದೆ, ಆದ್ದರಿಂದ ಇದನ್ನು ಬುಡಸಮೇತ ಕಿತ್ತು ಹಾಕಬೇಕು ಎನ್ನುವ ಹಿನ್ನೆಲೆಯಲ್ಲಿ ನಮ್ಮ ಸರ್ಕಾರ ಎಸ್‌ಟಿಎಫ್‌ಗೆ ಈ ಕಾರ್ಯವನ್ನು ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ. ಇದು ಸ್ವಲ್ಪ ಸಮಯ ಬೇಕಾಗುತ್ತದೆ. ಎಲ್ಲಾ ಒಂದೇ ಸಾರಿ ಆಗುವುದಿಲ್ಲ. ಪಕ್ಕದ ರಾಜ್ಯವಾದ ಆಂಧ್ರದಲ್ಲಿ ಕೂಡ ಈ ಸಮಸ್ಯೆ ಇದ್ದು ಅಲ್ಲಿನ ಮುಖ್ಯಮಂತ್ರಿಗಳಾದ ಶ್ರೀ ರಾಜಶೇಖರ ರೆಡ್ಡಿಯವರೂ ಕೂಡ ಅವರ ಮುಖಂಡರ ಜೊತೆಗೆ ಮಾತನಾಡಿದ್ದಾರೆ. ಆದರೂ ಅಲ್ಲಿ ಹಿಂಸೆ ನಿಂತಿಲ್ಲ. ಇತ್ತೀಚಿಗೆ ನಡೆದಂಥ ಘಟನಾವಳಿಗಳನ್ನು ತಾವೂ ಕೂಡ ಗಮನಿಸಿರಬಹುದು. ಒಟ್ಟಾರೆಯಾಗಿ ಹೇಳುವುದಾದರೆ, ಈ ಬಗ್ಗೆ ಸಮಗ್ರವಾದ ಚಿಂತನೆ ಮಾಡಿ ಈ ಸಮಸ್ಯೆಯನ್ನು ಕಿತ್ತು ಹಾಕುವುದಕ್ಕೆ ಸರ್ಕಾರ ಸಮಯೋಚಿತ ನಿರ್ಧಾರವನ್ನು ತೆಗೆದುಕೊಳ್ಳುತ್ತದೆ. ಆ ಮೂರು ಜಿಲ್ಲೆಗಳಲ್ಲಿ ಏನು ಸಮಸ್ಯೆ ಇದೆ ಅದನ್ನು ಬಗೆಹರಿಸುವತ್ತ ಸರ್ಕಾರ ಗಮನ ನೀಡುತ್ತದೆ. ಈ ಸಮಸ್ಯೆಯನ್ನು ಹತೋಟಿಗೆ ತರತಕ್ಕಂಥ ನಿಟ್ಟಿನಲ್ಲಿ ಸರ್ಕಾರ ಕ್ರಮ ಜರುಗಿಸುತ್ತದೆ. ಇದರಲ್ಲಿ ಎರಡು ಮಾತಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಈ ಸಮಸ್ಯೆಯನ್ನು ಮಾತುಕತೆಯ ಮೂಲಕ ಬಗೆಹರಿಸಬಹುದಾಗಿತ್ತು. ಇದಕ್ಕೆ ಏಕೆ ಎಸ್‌ಟಿಎಫ್ ಅನ್ನು ನಿಯೋಜಿಸುವುದು; ಇದು ಎಷ್ಟರಮಟ್ಟಿಗೆ ಸರಿ?

ಶ್ರೀ ಧರ್ಮಸಿಂಗ್ : ನಾನು ಈ ಬಗ್ಗೆ ಈಗಾಗಲೇ ಸಂಪೂರ್ಣವಾದ ವಿವರಗಳನ್ನು ಒದಗಿಸಿದ್ದೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಎಸ್‌ಟಿಎಫ್‌ನ ಅವಶ್ಯಕತೆ ಏಕೆ ಎಂಬುದೇ ನನ್ನ ಪ್ರಶ್ನೆ... ವೀರಪ್ಪನ್ ಸಮಸ್ಯೆ ಬೇರೆ, ಈ ಸಮಸ್ಯೆ ಬೇರೆ, ಹೀಗಿರುವಾಗ ಅದರ ಅವಶ್ಯಕತೆ ಏನು?

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ಸಮಗ್ರವಾದ ಉತ್ತರವನ್ನು ಕೊಟ್ಟಿರುತ್ತಾರೆ. ತಾವು ದಯಮಾಡಿ ಕುಳಿತುಕೊಳ್ಳಿ. ಮುಂದಿನ ಪ್ರಶ್ನೆಗೆ ಹೋಗೋಣ. ಮಾನ್ಯ ರಮೇಶ್ ಕುಮಾರ್, ತಾವು ಪ್ರಶ್ನೆ ಕೇಳಿ.

ಕಬ್ಬಿಣ ಅದಿರು ಗಣಿಗಾರಿಕೆಗೆ ಪರವಾನಗಿ ಕೊಟ್ಟಿರುವ ಬಗ್ಗೆ

85 (1520) ಶ್ರೀ ರಮೇಶ್ ಕುಮಾರ್ ಕೆ.ಆರ್ (ಶ್ರೀನಿವಾಸಪುರ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಳೆದ ಮೂರು ವರ್ಷಗಳಿಂದೀಚೆಗೆ ಸರ್ಕಾರದ ಮುಖಾಂತರ ಕಬ್ಬಿಣದ ಅದಿರು ಗಣಿಗಾರಿಕೆಗಾಗಿ ಗುತ್ತಿಗೆ ಆಧಾರದ ಮೇಲೆ ಕೊಟ್ಟಿರುವ ಪರವಾನಗಿ ಎಷ್ಟು; ಗುತ್ತಿಗೆದಾರರ ಹೆಸರು ಮತ್ತು ವಿಳಾಸಗಳನ್ನು ಒದಗಿಸುವುದು?

ಶ್ರೀ ಎನ್. ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ರಾಜ್ಯದಲ್ಲಿ ಕಳೆದ 3 ವರ್ಷಗಳಿಂದೀಚೆಗೆ ಹೊಸದಾಗಿ ಕಬ್ಬಿಣದ ಅದಿರಿಗಾಗಿ ಈ ಕೆಳಕಂಡ 4 ವ್ಯಕ್ತಿಗಳಿಗೆ/ಸಂಸ್ಥೆಗಳಿಗೆ ಗಣಿ ಗುತ್ತಿಗೆಗಳನ್ನು ನೀಡಲಾಗಿದೆ.

ಕ್ರಮ ಸಂಖ್ಯೆ	ಹೆಸರು/ವಿಳಾಸ ಮತ್ತು ಗುತ್ತಿಗೆ ನೀಡಿದ ದಿನಾಂಕ	ವಿಸ್ತೀರ್ಣ	ಪ್ರದೇಶ
1.	ಶ್ರೀ ಅಲ್ಲಂ ಪ್ರಶಾಂತ್, ಬಳ್ಳಾರಿ ದಿ: 06-02-2002	72.87	ಹರಗಿನ ದೋಣಿ ಹಳ್ಳಿ, ಬಳ್ಳಾರಿ ಜಿಲ್ಲೆ.
2.	ಶ್ರೀಮತಿ ಅಂಬಿಕಾ ಘೋರ್ಪಡೆ ಸಂಡೂರು ದಿ: 13-06-2002	12.24 ಎಕರೆ	ಕಮ್ಮತ್ತಿರುಹಳ್ಳಿ, ಸಂಡೂರು ತಾ:
3.	ಮೆ: ಆದರ್ಶ ಎಂಟರ್ ಪ್ರೈಸಸ್, 3ನೇ ವಾರ್ಡ್ ಸಂಡೂರು ದಿ: 18-7-2002	7.20 ಎಕರೆ	ರಾಮಘಡ ಹಳ್ಳಿ ಬಳ್ಳಾರಿ ಜಿಲ್ಲೆ.
4.	ಶ್ರೀ ವಿ. ವೆಂಕಟೇಶಲು ನಂ. 70, ರಾಮಕೃಷ್ಣ ಕಾಂಪ್ಲೆಕ್ಸ್ ಸಿರಗುಪ್ಪ ಮುಖ್ಯ ರಸ್ತೆ ಬಳ್ಳಾರಿ. ದಿ: 19-7-2002.	140.20 ಎಕರೆ	ಜಾನೇಗುಂಟೆಹಳ್ಳಿ ಬಳ್ಳಾರಿ ಜಿಲ್ಲೆ.

ಶ್ರೀ ಕೆ.ಆರ್. ರಮೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರಲ್ಲಿ ನಾನು ಕೇಳುವುದಕ್ಕೆ ಬಯಸುವುದೇನೆಂದರೆ, ಇವತ್ತಿನದಿವಸ ಕಬ್ಬಿಣದ ಅದಿರಿಗೆ ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ಚಿನ್ನದ ಬೆಲೆ ಇದೆ. ನಾನು ಕೇಳಿರತಕ್ಕಂಥ ಪ್ರಶ್ನೆಗೆ ನಾಲ್ಕು ಜನರಿಗೆ ಮಾತ್ರ ಗಣಿ ಗುತ್ತಿಗೆಗೆ ಅವಕಾಶ ನೀಡಲಾಗಿದೆ ಎಂದು ಉತ್ತರ ಕೊಟ್ಟಿದ್ದಾರೆ. ಗಣಿ ಗುತ್ತಿಗೆ ಪಡೆಯಲು ಒಟ್ಟು ಎಷ್ಟು ಅರ್ಜಿಗಳು ಬಂದಿದ್ದವು? ಮತ್ತೆ ಗಣಿ ಗುತ್ತಿಗೆ ನೀಡುವುದಕ್ಕೆ ಇರತಕ್ಕಂಥ ಕ್ರೈಟೀರಿಯಾವನ್ನು ಸರ್ಕಾರ ಅನುಸರಿಸಿದೆಯೆ? ಇದಕ್ಕೆ ಸಂಬಂಧಪಟ್ಟಂತೆ ಮಾಹಿತಿ ಕೊಡಬೇಕೆಂದು ಮಾನ್ಯ ಮುಖ್ಯಮಂತ್ರಿಯವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಮೈನರ್ ಮಿನರಲ್ಸ್ 1957ರ ಕನ್ಸರ್ವೇಷನ್ ಆಕ್ಟ್ ಪ್ರಕಾರ ಇದನ್ನು ಮಾಡಿದ್ದೇವೆ. ಎಷ್ಟು ಜನರಿಗೆ ಗಣಿ ಗುತ್ತಿಗೆ ನೀಡಲಾಗಿದೆ ಎಂಬ ವಿವರವನ್ನು ಈಗಾಗಲೇ ಮಾನ್ಯ ಸದಸ್ಯರಿಗೆ ಕೊಟ್ಟಿದ್ದೇವೆ. ಮೊದಲು ಯಾರ ಅರ್ಜಿ ಬರುತ್ತದೆಯೋ ಅವರಿಗೆ ಕೊಡತಕ್ಕಂಥ ಪದ್ಧತಿ ಮೊದಲಿನಿಂದಲೂ ನಡೆದುಕೊಂಡು ಬಂದಿದೆ. ಇದರ ಪ್ರಕಾರ ಮತ್ತು 1957ರ ಮೈನರ್ ಮಿನರಲ್ಸ್ ಕನ್ಸರ್ವೇಷನ್ ಆ್ಯಕ್ಟ್ ಪ್ರಕಾರ ಗುತ್ತಿಗೆಯನ್ನು 2002ನೇ ಇಸವಿಯಲ್ಲಿ ಕೊಟ್ಟಿದ್ದೇವೆ.

ಶ್ರೀ ಕೆ.ಆರ್. ರಮೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, ಈ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಯವರಲ್ಲಿ ಕೇಳುವುದೇನೆಂದರೆ, ಗಣಿ ಗುತ್ತಿಗೆಗೆ ಪರವಾನಿಗೆ ಕೊಡತಕ್ಕಂಥದ್ದರ ಬಗ್ಗೆ ರೂರಲ್ ಲೆವೆಲ್ ಕಮಿಟಿಯ ಒಪ್ಪಿಗೆಗೆ ಬರುತ್ತದೆಯೆ? ಮತ್ತೆ ಈ ಸಂದರ್ಭದಲ್ಲಿ ನಾನು ಹೇಳುವುದೇನೆಂದರೆ, ಕಬ್ಬಿಣದ ಅದಿರು ಅಥವಾ ಇತರೇ ಯಾವುದೇ ಅದಿರು ಹೊಂದಿರತಕ್ಕಂಥ ಭೂಮಿಯನ್ನು ಲೀಜ್ ಕೊಡತಕ್ಕಂಥದ್ದು ಸಾರ್ವಜನಿಕರಿಗೆ ಗೊತ್ತಾಗಬೇಕು. ಆದರೆ, ಅರ್ಜಿ ಕರೆದಿರುವ ಬಗ್ಗೆ ಸರಿಯಾಗಿ ಯಾರಿಗೂ ಗೊತ್ತಾಗುತ್ತಿಲ್ಲ. ಆದ್ದರಿಂದ, ಅರ್ಜಿ ಕಾಲ್ ಮಾಡಿರುವ ಬಗ್ಗೆ ಪತ್ರಿಕೆಗಳಲ್ಲಿ ಜಾಹೀರಾತು ಮುಖಾಂತರ ಪ್ರಚಾರ ಮಾಡಿದ್ದರೆ ಬಹಳಷ್ಟು ಅರ್ಜಿಗಳು ಬರುತ್ತಿದ್ದವು ಮತ್ತೆ ಅರ್ಜಿ ಕಾಲ್ ಮಾಡಿದ್ದಾರೆಂಬುದು ಗೊತ್ತಾಗಬೇಕು. ಮತ್ತೆ ಅತ್ಯಂತ ಬೆಲೆ ಬಾಳತಕ್ಕಂಥ ಕಬ್ಬಿಣದ ಅದಿರಿನ ಗಣಿಗೆ ಫರ್ಸ್ಟ್ ಕಮ್ ಫರ್ಸ್ಟ್ ಸರ್ವ್ ರೀತಿಯಲ್ಲಿ ಆದ್ಯತೆ ಕೊಡತಕ್ಕಂಥದ್ದು ಸರಿಯಲ್ಲ. ಏಕೆಂದರೆ ಇದನ್ನು ಮಾಡುವುದಕ್ಕೆ ಯೋಗ್ಯತೆ ಇರತಕ್ಕಂಥ ಅನೇಕ ಜನರಿಗೆ ಇದರಿಂದ ಅನ್ಯಾಯವಾಗುತ್ತದೆ.

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಇಲ್ಲಿಯವರೆಗೆ ಯಾವ ಪದ್ಧತಿಯನ್ನು ಅನುಸರಿಸುತ್ತಿದ್ದೆವು ಎಂಬುದರ ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ. ಆದರೆ, ನಾನು ಬಂದ ಮೇಲೆ ಇದರಲ್ಲಿರತಕ್ಕಂಥ ನ್ಯೂನತೆ ಪತ್ತೆಹಚ್ಚತಕ್ಕಂಥ ಕೆಲಸ ಮಾಡಿದ್ದೇನೆ. ಮತ್ತೆ ರಾಜ್ಯದಲ್ಲಿ ಯಾವ್ಯಾವ ಪ್ರದೇಶದಲ್ಲಿ ಎಷ್ಟು ಪರ್ಸೆಂಟ್ ಯಾವ್ಯಾವ ರೀತಿಯ ಅದಿರು ಇದೆ ಎಂಬುದನ್ನೂ ಕೂಡ ಗುರುತು ಮಾಡಿದ್ದೇವೆ. ಮತ್ತೆ ಇಲ್ಲಿಯವರೆಗೆ ನಾನು ಹೇಳಿದ ರೀತಿಯಲ್ಲಿ ಗಣಿಗಾರಿಕೆಗೆ ಪರವಾನಿಗೆ ಕೊಡತಕ್ಕಂಥ ಪದ್ಧತಿ ಇತ್ತು. ಈಗ ಇದರಲ್ಲಿ ಸಾಕಷ್ಟು ಬದಲಾವಣೆ ಮಾಡಿದ್ದೇವೆ. ಇದರಲ್ಲಿ ಈಗ ಏನು ಮಾಡಿದ್ದೇವೆಂದರೆ, ಯಾರು ಅರ್ಜಿ ಹಾಕುತ್ತಾರೆಯೋ ಅವರ ಆರ್ಥಿಕ ಮಟ್ಟ ಯಾವರೀತಿ ಇದೆ ಎಂಬುದನ್ನು ಮತ್ತು ತೆಗೆಯತಕ್ಕಂಥ ಅದಿರನ್ನು ಏತಕ್ಕಾಗಿ ಉಪಯೋಗ ಮಾಡುತ್ತಾರೆಂಬುದನ್ನು ಹಾಗೂ ಇದನ್ನು ಎಕ್ಸ್‌ಪೋರ್ಟ್ ಮಾಡುತ್ತಾರೆಯೇ ಎಂಬುದನ್ನೆಲ್ಲಾ ಗಮನಿಸುತ್ತೇವೆ. ಮಾನ್ಯ ಸದಸ್ಯರು ಈಗಾಗಲೇ ಕೇಳಿರತಕ್ಕಂಥ ಪ್ರಶ್ನೆಯನ್ನು ನಾನು ಒಪ್ಪಿಕೊಳ್ಳುತ್ತೇನೆ. ಮತ್ತೆ ಸರ್ಕಾರ ಈಗಾಗಲೇ ಕೆಲವು ಮಾರ್ಪಾಡುಗಳನ್ನು ಮಾಡಿದೆ. ಫೇವರಿಟಿಸಂ ಮತ್ತು ನೆಪಾಟಿಸಂ ಆಗಬಾರದೆಂಬ ದೃಷ್ಟಿಯಿಂದ ನಾವು ಈ ಕ್ರಮ ತೆಗೆದುಕೊಂಡಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ನಮ್ಮ ರಾಜ್ಯದಲ್ಲಿ ಗಣಿ ಕೈಗಾರಿಕೆಗಳಿಂದ ಅದಿರನ್ನು ಸಾಗಾಣಿಕೆ ಮಾಡುವುದರಿಂದ ಇರತಕ್ಕಂಥ ರಸ್ತೆಗಳೆಲ್ಲಾ ಹಾಳಾಗುತ್ತಿವೆ. ಮತ್ತೆ ನಿಗದಿ ಮಾಡಿರುವುದಕ್ಕಿಂಥ ಹೆಚ್ಚು ಲೋಡ್ ಮಾಡುವುದರಿಂದ ರಸ್ತೆಗಳು ಬೇಗ ಹಾಳಾಗುತ್ತಿವೆ. ಮತ್ತೆ ರಾಯಲ್ಟಿ ಕೊಡದೇ ಇರತಕ್ಕಂಥ ಪ್ರಸಂಗಗಳೂ ಕೂಡ ಗಮನಕ್ಕೆ ಬಂದಿವೆ. ಆದ್ದರಿಂದ, ಇವುಗಳನ್ನು

ಸರಿಪಡಿಸುವುದಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ ಮತ್ತು ರಾಯಲ್ಟಿ ಕೊಟ್ಟಿದ್ದಾರೆಯೇ ಅಥವಾ ಇಲ್ಲವೇ ಎಂಬುದನ್ನು ಚೆಕ್ ಮಾಡತಕ್ಕಂಥ ಅಗತ್ಯತೆ ಇದೆ.

ಶ್ರೀ ಧರ್ಮಸಿಂಗ್ : ಮಾನ್ಯ ಅಧ್ಯಕ್ಷರೆ, ಎಷ್ಟು ಅರ್ಜಿಗಳು ಬಂದಿದ್ದವೆಂದು ಈಗಾಗಲೇ ಮಾನ್ಯ ರಮೇಶ್ ಕುಮಾರ್‌ರವರೇ ಕೇಳಿದ್ದರು. ಇದಕ್ಕೆ ಸಂಬಂಧಪಟ್ಟಂತೆ ಹೇಳುತ್ತಿದ್ದೇನೆ. ಒಟ್ಟು 1500 ಅರ್ಜಿಗಳು ಬಂದಿದ್ದವು. ಇದರ ಬಗ್ಗೆ ನಾವು ತೀರ್ಮಾನ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ನಾವು ರೆಕಮೆಂಡ್ ಮಾಡಿ ಕೇಂದ್ರಕ್ಕೆ ಕಳುಹಿಸಿ ಕೊಡುತ್ತೇವೆ. ಇದಕ್ಕೆ ಕೇಂದ್ರ ಸರ್ಕಾರವೇ ಅಂತಿಮ ಒಪ್ಪಿಗೆ ಕೊಡಬೇಕಾಗುತ್ತದೆ. ಇದರಲ್ಲಿ ಸಾಕಷ್ಟು ಅರ್ಜಿಗಳನ್ನು ಕೇಂದ್ರ ಸರ್ಕಾರ ಒಪ್ಪಿಕೊಂಡಿಲ್ಲ. ಅದನ್ನು ಮತ್ತೆ ನಮ್ಮ ಕಮಿಟಿಗೆ ಕಳುಹಿಸಿಕೊಟ್ಟಿದ್ದಾರೆ. ಮತ್ತೆ ಮಾನ್ಯ ಯಡಿಯೂರಪ್ಪನವರು ಮಾತನಾಡುತ್ತಾ ಓವರ್ ಲೋಡ್ ಅದಿರು ಸಾಗಾಣಿಕೆಯಿಂದ ರಸ್ತೆಗಳು ಹಾಳಾಗುತ್ತಿವೆ ಆದ್ದರಿಂದ ಇದರ ಬಗ್ಗೆ ಕ್ರಮ ತೆಗೆದುಕೊಳ್ಳುವಂತೆ ಕೇಳಿಕೊಂಡಿದ್ದಾರೆ. ಸಾರಿಗೆ ಸಚಿವರಾಗಿರತಕ್ಕಂಥ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಇದರ ಬಗ್ಗೆ ಸಭೆ ಕೂಡ ನಡೆಸಿದ್ದಾರೆ. ಮತ್ತೆ ನಾನು ಒಂದು ಸಾರಿ ಮಾನ್ಯ ವಿಶ್ವೇಶ್ವರ ಹೆಗಡೆಯವರ ಕ್ಷೇತ್ರಕ್ಕೆ ಹೋದಾಗ ಅದಿರನ್ನು ಸಾಗಾಣಿಕೆ ಮಾಡುತ್ತಿರುವುದರಿಂದ ರಸ್ತೆಗಳು ಹಾಳಾಗುತ್ತಿವೆ ಎಂದು ಮಾನ್ಯ ಶಾಸಕರು ಹೇಳಿದಾಗ ನಾನು ಅಲ್ಲಿದ್ದಂಥ ಡಿ.ಸಿ. ಮತ್ತು ಎಸ್.ಪಿ. ಯವರು ಇದರ ಇನ್ಸ್‌ಪೆಕ್ಷನ್ ಮಾಡುವುದಕ್ಕೆ ಸೂಚಿಸಿದೆ. ಕೆಲವು ಕಡೆ ಈ ಕೆಲಸ ಆಗಿವೆ.

ಶ್ರೀ ಅರಗಜ್ಞಾನೇಂದ್ರ : ರಾಯಲ್ಟಿ ಕಲೆಕ್ಟ್ ಮಾಡುವುದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಯವರು ಏನನ್ನೂ ಹೇಳಲಿಲ್ಲ?

ಶ್ರೀ ಧರ್ಮಸಿಂಗ್ : ಇದರ ಬಗ್ಗೆ ನನ್ನ ಗಮನಕ್ಕೆ ಬಂದಿದೆ.

ಶ್ರೀ ಎನ್. ಯೋಗೀಶ್ ಭಟ್ : ಮಾನ್ಯ ಅಧ್ಯಕ್ಷರೆ, ಅದಿರು ಸಾಗಾಣಿಕೆಯಿಂದ ಮಂಗಳೂರು ನಗರದಲ್ಲಿ..

ಅಧ್ಯಕ್ಷರು : ಮಾನ್ಯ ಯೋಗೀಶ್ ಭಟ್‌ರವರೆ, ತಾವು ದಯವಿಟ್ಟು ಕುಳಿತುಕೊಳ್ಳಿ. ಒಂದು ಪ್ರಶ್ನೆಗೆ ನಾನು ಎಲ್ಲರಿಗೂ ಅವಕಾಶ ಕೊಡುವುದಕ್ಕೆ ಆಗುವುದಿಲ್ಲ. ಈ ಪ್ರಶ್ನೆಯನ್ನು ಮಾನ್ಯ ರಮೇಶ್ ಕುಮಾರ್‌ರವರು ಕೇಳಿದ್ದಾರೆ. ಆದ್ದರಿಂದ, ಅವರಿಗೆ ಮೊದಲು ಅವಕಾಶ ಕೊಡಬೇಕು.

ಶ್ರೀ ಕೆ.ಆರ್. ರಮೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, ಈ ಸಂದರ್ಭದಲ್ಲಿ ಒಂದು ವಿಷಯವನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಅದೇನೆಂದರೆ, ಸರ್ಕಾರಿ ಸ್ವಾಮ್ಯದಲ್ಲಿರತಕ್ಕಂಥ ಮೈಸೂರು ಮಿನರಲ್ಸ್ ಲಿಮಿಟೆಡ್ ಸಂಸ್ಥೆ ತೀವ್ರ ಆರ್ಥಿಕ ಮುಗ್ಗಟ್ಟಿನಿಂದ ಅಲ್ಲಿರತಕ್ಕಂಥ ಕೆಲಸಗಾರರಿಗೆ ಸಂಬಳ ಕೊಡುವುದಕ್ಕೆ ಆಗದೇ ಲೇಆಫ್ ಮಾಡಿರುವುದಲ್ಲದೆ ಈಗಾಗಲೇ ಸಾಕಷ್ಟು ನೌಕರರು ವಿ.ಆರ್.ಎಸ್. ತೆಗೆದುಕೊಂಡಿದ್ದಾರೆ. ನಾನು ಈ ಮಾತನ್ನು ಏಕೆ ಹೇಳುತ್ತಿದ್ದೇನೆಂದರೆ, ಮೊದಲು ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಗೆ ಪ್ರಾಧಾನ್ಯತೆ ಕೊಡುವ ಬದಲು ಖಾಸಗಿ ಗಣಿ ಕೈಗಾರಿಕೆಗಳಿಗೆ ಏಕೆ ಪ್ರಾಮುಖ್ಯತೆ ಕೊಡುತ್ತಿದ್ದೀರಿ?

ಶ್ರೀ ಧರ್ಮಸಿಂಗ್ : ಮಾನ್ಯ ಅಧ್ಯಕ್ಷರೆ, ಈಗಾಗಲೇ ಪ್ರಕಟ ಮಾಡಿದ ಪ್ರಕಾರ ಅಲ್ಲಿರತಕ್ಕಂಥ ನೌಕರರಲ್ಲಿ ಕೆಲವರು ವಿ.ಆರ್.ಎಸ್. ತೆಗೆದುಕೊಂಡಿದ್ದಾರೆ. ಮತ್ತೆ ಅಲ್ಲಿರತಕ್ಕಂಥ ಶಾರ್ಟೇಜ್‌ನ್ನು ಫುಲ್ ಫಿಲ್ ಮಾಡುವುದಕ್ಕೆ ಕ್ರಮ ತೆಗೆದುಕೊಂಡಿದ್ದೇವೆ. ಮತ್ತೆ ಇದಕ್ಕೆ ಸಂಬಂಧಪಟ್ಟಂತೆ ಮಾನ್ಯ ಸದಸ್ಯರು ನೀಡಿರತಕ್ಕಂಥ ಸಲಹೆ ಬಗ್ಗೆ ವಿಚಾರ ಮಾಡಿ ಕಾರ್ಯಗತ ಮಾಡುವ ಬಗ್ಗೆ ಪ್ರಯತ್ನ ಮಾಡುತ್ತೇವೆ.

ಅಧ್ಯಕ್ಷರು : ಮಾನ್ಯ ರಾಜೇಂದ್ರನ್‌ರವರೆ, ತಮ್ಮ ಪ್ರಶ್ನೆಯ ಬಗ್ಗೆ ಕೇಳಿ.

ಶ್ರೀ ಶಶಿಕಾಂತ್ ಅಕ್ಕಪ್ಪ ನಾಯಕ್ : ಮಾನ್ಯ ಅಧ್ಯಕ್ಷರೆ, ಮೊದಲು ನನ್ನ ಪ್ರಶ್ನೆ ಇದೆ. ಆದ್ದರಿಂದ, ಮೊದಲು ನನಗೆ ಅವಕಾಶ ಕೊಡಬೇಕು.

ಅಧ್ಯಕ್ಷರು : ಮಾನ್ಯ ರಮೇಶ್ ಕುಮಾರ್‌ರವರ ಪ್ರಶ್ನೆಯಾದ ನಂತರ ಮಾನ್ಯ ರಾಜೇಂದ್ರನ್ ಪ್ರಶ್ನೆ ಇದೆ. ನನ್ನ ಹತ್ತಿರ ಇರತಕ್ಕಂಥ ಪಟ್ಟಿಯಲ್ಲಿ ನಿಮ್ಮ ಪ್ರಶ್ನೆ ಇಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ನಮ್ಮ ಹತ್ತಿರ ಇರತಕ್ಕಂಥ ಪ್ರಶ್ನೆಗಳ ಪಟ್ಟಿಯಲ್ಲಿ ಮಾನ್ಯ ರಮೇಶ್ ಕುಮಾರ್‌ರವರ ಪ್ರಶ್ನೆ ಆದ ನಂತರ ಶ್ರೀ ಶಶಿಕಾಂತ್ ಅಕ್ಕಪ್ಪ ನಾಯಕ್‌ರವರ ಪ್ರಶ್ನೆ ಇದೆ. ಆದ್ದರಿಂದ ನನಗೆ ಮೊದಲು ಅವಕಾಶ ಕೊಡಿ ಎಂದು ಮಾನ್ಯ ಸದಸ್ಯರು ತಮಗೆ ನೆನಪು ಮಾಡುತ್ತಿದ್ದಾರೆ.

ಅಧ್ಯಕ್ಷರು : ನಾನು ಕೂಗಿದ ಸಂದರ್ಭದಲ್ಲಿ ಅವರು ಇಲ್ಲಿ ಇರಲಿಲ್ಲವೆಂದು ಕಾಣುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಪ್ರಶ್ನೆಗಳ ಪಟ್ಟಿಯಲ್ಲಿ ಮಾನ್ಯ ಶಶಿಕಾಂತ್ ಅಕ್ಕಪ್ಪ ನಾಯಕ್‌ರವರ ಪ್ರಶ್ನೆಯನ್ನು ಹೊಡೆದು ಹಾಕಲಾಗಿದೆ.

ಶ್ರೀ ಧರ್ಮಸಿಂಗ್ : ಮಾನ್ಯ ಅಧ್ಯಕ್ಷರೆ, ಈ ಪ್ರಶ್ನೆಯನ್ನು ಲೋಕೋಪಯೋಗಿ ಇಲಾಖೆಗೆ ವರ್ಗಾಯಿಸಲಾಗಿದೆ. ಸದರಿ ಪ್ರಶ್ನೆಗೆ ಈ ಸದನದಲ್ಲಿಯೇ ಉತ್ತರ ಕೊಡಿಸಲಾಗುತ್ತದೆ.

ಅಧ್ಯಕ್ಷರು : ಇದು ಏನಾಗಿದೆ ಎಂದರೆ, ಮಾನ್ಯ ಸದಸ್ಯರ ಪ್ರಶ್ನೆ ನೆನ್ನೆ ದಿವಸವೇ ಬಂದಿತ್ತು. ಆದರೆ, ತಪ್ಪಾಗಿ ಇವತ್ತಿನ ಪ್ರಶ್ನೆಗಳ ಪಟ್ಟಿಯಲ್ಲಿ ಸೇರಿಕೊಂಡಿದೆ. ಆದ್ದರಿಂದ ಇವತ್ತಿನ ಪ್ರಶ್ನೆಗಳ ಪಟ್ಟಿಯಲ್ಲಿ ಹೊಡೆದು ಹಾಕಲಾಗಿದೆ. ಇದು ಸಾರಿಗೆ ಸಚಿವರಿಗೆ ಸಂಬಂಧಪಟ್ಟ ಪ್ರಶ್ನೆಯಾಗಿದ್ದು, ಮಾನ್ಯ ಸಚಿವರೂ ಕೂಡ ಇಲ್ಲಿಯೇ ಇರುವುದರಿಂದ ಸದರಿ ಪ್ರಶ್ನೆಗೆ ಕೊನೆಯಲ್ಲಿ ಅವಕಾಶ ಕೊಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಸದರಿ ಪ್ರಶ್ನೆಗೆ ಮಾನ್ಯ ಹಣಕಾಸಿನ ಸಚಿವರಾಗಿರತಕ್ಕಂಥ ಉಪ ಮುಖ್ಯಮಂತ್ರಿಯವರು ಉತ್ತರ ಕೊಡಬೇಕಾಗುತ್ತದೆ. ಬಹುಶಃ ಇದಕ್ಕೆ ಉತ್ತರ ಬಂದಿಲ್ಲದೆ ಇರುವುದರಿಂದ ಈ ಪ್ರಶ್ನೆಯನ್ನು ಹೊಡೆದು ಹಾಕಿರಬೇಕು. ಮಾನ್ಯ ಹಣಕಾಸಿನ ಸಚಿವರಾಗಿರತಕ್ಕಂಥ ಉಪ ಮುಖ್ಯಮಂತ್ರಿಯವರು ಬಂದರೆ ಇದಕ್ಕೆ ಉತ್ತರ ಕೊಡುತ್ತಾರೆ.

ಅಧ್ಯಕ್ಷರು : ಮಾನ್ಯ ರಾಜೇಂದ್ರನ್‌ರವರೆ, ತಮ್ಮ ಪ್ರಶ್ನೆಯನ್ನು ಪ್ರಸ್ತಾಪ ಮಾಡಿ.

ಕೆ.ಜಿ.ಎಫ್.ನಲ್ಲಿ ರೌಡಿಗಳ ಹಾವಳಿ ತಪ್ಪಿಸುವುದು

87 (843) ಶ್ರೀ ರಾಜೇಂದ್ರನ್ ಎಸ್. (ಕೆ.ಜಿ.ಎಫ್) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೆ.ಜಿ.ಎಫ್.ನಲ್ಲಿ ರೌಡಿಗಳಿಂದ ಅಮಾಯಕ ಜನರ ಮೇಲೆ ಕ್ರೂರ ಉಪಟಳ ಸದಾ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಅಲ್ಲಿನ ಎಲ್ಲಾ ಪೊಲೀಸ್ ಠಾಣೆಗಳಲ್ಲಿ ರೌಡಿಗಳ ಭಾವ ಚಿತ್ರಗಳನ್ನು ಪ್ರಕಟಿಸಲಾಗಿದೆಯೇ; (ಠಾಣಾವಾರು ಪಟ್ಟಿ ಲಗತ್ತಿಸುವುದು)

ಇ) ಅಂತಹ ರೌಡಿಗಳ ಮೇಲೆ ಕೈಗೊಂಡ ಕ್ರಮಗಳೇನು?

ಶ್ರೀ ಎನ್. ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ಪ್ರಸ್ತುತ ಕೆ.ಜಿ.ಎಫ್. ನಗರದಲ್ಲಿ ರೌಡಿಗಳಿಂದ ಅಮಾಯಕ ಜನರ ಮೇಲೆ ಯಾವುದೇ ಕ್ರೂರ ಉಪಟಳ ನಡೆದಿರುವ ಪ್ರಕರಣಗಳು ಇತ್ತೀಚೆಗೆ ವರದಿಯಾಗಿರುವುದಿಲ್ಲ. ಕಳೆದ ಒಂದೂವರೆ ವರ್ಷದಿಂದ 82 ರೌಡಿಗಳನ್ನು ಅರೆಸ್ಟ್ ಮಾಡಿ ನ್ಯಾಯಾಲಯದಲ್ಲಿ ಹಾಜರುಪಡಿಸಲಾಗಿದೆ.

ಆ) ಹೌದು.

ಠಾಣಾವಾರು ಪಟ್ಟಿ ಈ ಕೆಳಕಂಡಂತೆ ಇದೆ.

1. ಚಾಂಪಿಯನ್ ರೀಫ್ ಪೊಲೀಸ್ ಠಾಣೆ – 19
2. ಬಂಗಾರಪೇಟೆ ಪೊಲೀಸ್ ಠಾಣೆ – 38
3. ಉರಿಗಾಂ ಪೊಲೀಸ್ ಠಾಣೆ – 15
4. ಮಾರಿಕುಪ್ಪ ಪೊಲೀಸ್ ಠಾಣೆ – 10
5. ಬೆಮೆಲ್‌ನಗರ ಪೊಲೀಸ್ ಠಾಣೆ – 10
6. ಕಾಮಸಮುದ್ರ ಪೊಲೀಸ್ ಠಾಣೆ – 03
7. ಅಂಡರ್‌ಸನ್ ಪೇಟೆ ಪೊಲೀಸ್ ಠಾಣೆ – 21
8. ಬೇತಮಂಗಲ ಪೊಲೀಸ್ ಠಾಣೆ – 22
9. ರಾಬರ್ಟ್‌ಸನ್ ಪೊಲೀಸ್ ಠಾಣೆ – 96

ಇ) ರೌಡಿಗಳ ಚಟುವಟಿಕೆಗಳ ಬಗ್ಗೆ ನಿಗಾವಹಿಸಿ ಹತೋಟಿಯಲ್ಲಿಡುವಂತೆ ಸ್ಥಳೀಯ ಪಿ.ಎಸ್.ಐ/ಸಿ.ಪಿ.ಐ. ರವರುಗಳಿಗೆ ಸೂಚಿಸಲಾಗಿದೆ ಮತ್ತು ರೌಡಿ ಚಟುವಟಿಕೆಗಳೇನಾದರೂ ಕಂಡು ಬಂದಲ್ಲಿ ಅಂತಹವರ ವಿರುದ್ಧ ಕ್ರಮ ಕೈಗೊಳ್ಳಲು ಸಹ ಸೂಚಿಸಿದೆ. ಅದರಂತೆ ಪಿ.ಎಸ್.ಐ/ಸಿ.ಪಿ.ಐ. ರವರುಗಳು ಸೂಕ್ತ ಕ್ರಮ ಕೈಗೊಳ್ಳುತ್ತಿದ್ದಾರೆ. ಸಿ.ಆರ್.ಪಿ.ಸಿ. 110ನೇ ಸೆಕ್ಷನ್ ಪ್ರಕಾರ ಪ್ರಿವೆಂಟಿವ್ ಕ್ರಮ ಸಹಾ ತೆಗೆದುಕೊಳ್ಳಲಾಗಿದೆ.

ಶ್ರೀ ಎನ್. ರಾಜೇಂದ್ರನ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ. 96 ಜನರು ರೌಡಿಲಿಸ್ಟ್‌ನಲ್ಲಿದ್ದಾರೆ, ಅವರನ್ನು ಅರೆಸ್ಟ್ ಮಾಡಿ ಅದರ ಆಧಾರದ ಮೇಲೆ ಪ್ರಿವೆಂಟಿವ್ ಆಗಿ ಕ್ರಮ ಕೈಗೊಂಡಿರುತ್ತೇವೆಂದು ಹೇಳಿರುತ್ತಾರೆ. ಎಷ್ಟೆಷ್ಟು ಕೇಸ್‌ಗಳಲ್ಲಿ ಯಾವ್ಯಾವ ರೀತಿಯ ಕ್ರಮ ತೆಗೆದುಕೊಂಡಿದ್ದಾರೆಂದು ಮಾತ್ರ ಹೇಳಿರುವುದಿಲ್ಲ. 1996 ರಿಂದ (ಎ) ಕೆಟಗರಿಯಲ್ಲಿ ಎಷ್ಟು? (ಬಿ) ಕೆಟಗರಿಯಲ್ಲಿ ಎಷ್ಟು? (ಸಿ) ಕೆಟಗರಿಯಲ್ಲಿ ಎಷ್ಟು? ಯಾವ್ಯಾವ ರೀತಿಯ ಕ್ರಮವನ್ನು ತೆಗೆದುಕೊಂಡಿದ್ದಾರೆ. ಸುಮ್ಮನೆ 96 ಜನರಿದ್ದಾರೆ ಅವರ ಮೇಲೆ ಕ್ರಮ ಕೈಗೊಳ್ಳಲಾಗಿದೆ ಎನ್ನುವ ಒಂದು ಉತ್ತರವನ್ನು ಕೊಟ್ಟಿದ್ದಾರೆ. ಅಲ್ಲಿ ಯಾವ ಪೊಲೀಸ್ ಸ್ಟೇಶನ್‌ನಲ್ಲಿಯೂ ಕೂಡ ರೌಡಿಗಳ ಲಿಸ್ಟ್ ಇರುವುದಿಲ್ಲ. ರೌಡಿಗಳೂ ಕೂಡ ಪೊಲೀಸ್‌ನವರ ಜೊತೆಯಲ್ಲಿ ಶಾಮೀಲಾಗಿ ಹೊರಗಡೆ ಇರುತ್ತಾರೆ, ಎಷ್ಟು ಜನರ ಮೇಲೆ ಇವರು ಯಾವ ರೀತಿಯ ಕ್ರಮ ಕೈಗೊಂಡಿದ್ದಾರೆಂದು ಉತ್ತರವನ್ನು ಕೊಟ್ಟರೆ ಅನುಕೂಲವಾಗುತ್ತದೆ.

ಶ್ರೀ ಧರ್ಮಸಿಂಗ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಶಾಸಕರಾದ ಎನ್. ರಾಜೇಂದ್ರನ್‌ರವರು ಈ ಒಂದು ಸ್ಪೆಸಿಫಿಕ್ಕಾದ ಪ್ರಶ್ನೆಯನ್ನು ಕೇಳಿರುತ್ತಾರೆ. ಅವರ ಪ್ರಶ್ನೆಗೆ ಅನುಗುಣವಾಗಿ ರೌಡಿಗಳ ಪೊಲೀಸ್ ಠಾಣಾವಾರು ಪಟ್ಟಿಯನ್ನೂ ಕೂಡ ಕೊಡಲಾಗಿದೆ. ಸಾರ್ವಜನಿಕರನ್ನು ಸುಲಿಗೆ ಮಾಡುತ್ತಿರುವ ಬಗ್ಗೆ ನಮ್ಮ ನೋಟೀಸ್‌ಗೆ ಬಂದಿರುತ್ತದೆ. 1998ರಲ್ಲಿ ರೌಡಿ ತಂಗಂನಿಂದ ಆಗಾಗ ಆ

ಭಾಗದಲ್ಲಿ ಕೊಲೆ ಸುಲಿಗೆಗಳು ಆಗುತ್ತಿತ್ತು. ಅದಕ್ಕಾಗಿ ಮಾನ್ಯ ಶಾಸಕರು ಈ ಪ್ರಶ್ನೆಯನ್ನು ಕೇಳಿ ಸರ್ಕಾರಕ್ಕೆ ಒಂದು ಒತ್ತಾಯವನ್ನು ಮಾಡುತ್ತಿದ್ದಾರೆ. ಇವತ್ತು ಸಿಆರ್‌ಪಿಸಿ ಪ್ರಕಾರ ಒಟ್ಟು 110 ಜನರ ಮೇಲೆ ಕೇಸ್‌ಗಳನ್ನು ಹಾಕಲಾಗಿದೆ. 2002ರಲ್ಲಿ 10, 2003ರಲ್ಲಿ 3 ಮತ್ತು 2004ರಲ್ಲಿ – 2ಕೇಸ್‌ಗಳು ದಾಖಲಾಗಿವೆ ಅದರ ಪ್ರಕಾರ ಮುಂಜಾಗ್ರತಾ ಕ್ರಮವನ್ನು ಕೂಡ ಕೈಗೊಳ್ಳಲಾಗಿದೆ. ಆದರೆ ಇವತ್ತು ಗೂಂಡಾ ಕಾಯಿದೆ ಪ್ರಕಾರ ಕೇಸ್‌ಗಳು ರಿಜಿಸ್ಟರ್ ಆಗಿಲ್ಲವೆನ್ನುವ ಒಂದು ಭಾವನೆ ಅವರಲ್ಲಿ ಇದೆ. ಅದರ ಬಗ್ಗೆ ಗೂಂಡಾ ಕಾಯಿದೆ. Goonda Act is out-dated and it is not being fully implemented. SP, KGF has been advised to take stern and firm action against the rowdies and photographs of such rowdies have been displayed in the police station ಎನ್ನುವಷ್ಟು ಶಕ್ತಂಥದ್ದು ಇದೆ. ಮಾನ್ಯ ರಾಜೇಂದ್ರನ್‌ರವರು ಹಾಗೂ ಮಾನ್ಯ ವಾಟಾಳ್ ನಾಗರಾಜ್‌ರವರು ಇಂಡಿಪೆಂಡೆಂಟ್ ಶಾಸಕರಾದರೂ ಕೂಡ ಅವರು ಪ್ರಭಾವ ಬೀರುವ ಶಾಸಕರುಗಳಾಗಿದ್ದಾರೆ. ಇಂತಹ ಪರ್ಟಿಕ್ಯುಲರ್ ಕೇಸ್‌ನಲ್ಲಿ ಇಂತಿಷ್ಟು ಜನರ ಮೇಲೆ ಕೇಸ್ ಮಾಡಿಲ್ಲವೆಂದು ಏನಾದರೂ ಹೇಳಿದರೆ ಅಥವಾ ಗೂಂಡಾ ಕಾಯಿದೆ ಪ್ರಕಾರ ಇದ್ದರೂ I will have a meeting with you. Otherwise I will direct the DG & IG concerned. ಇನ್ನೂ ಕೂಡ ಹೆಚ್ಚು ಪ್ರಕರಣಗಳು ಆಗಿಲ್ಲವೆಂದರೆ, we will take full care.

ಶ್ರೀ ಎನ್. ರಾಜೇಂದ್ರನ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳು ಕೊಟ್ಟಿರುವ ಉತ್ತರಕ್ಕೆ ಸಂತೋಷ, ಇನ್ನೊಂದು ಕ್ಲಾರಿಫಿಕೇಶನ್ ಅವರನ್ನು ಕೇಳುತ್ತೇನೆ. ಒಂದು ಗೋಲ್ಡನ್‌ವ್ಯಾಲಿ ಎಜ್ಯುಕೇಶನ್ ಟ್ರಸ್ಟ್ ಎನ್ನುವ ಒಂದು ಇನ್‌ಸ್ಟಿಟ್ಯೂಷನ್ ಇದೆ. ಆ ಇನ್‌ಸ್ಟಿಟ್ಯೂಷನ್‌ಗೆ ಗೇಟ್‌ನಲ್ಲಿ ರೌಡಿಗಳನ್ನು ಹೆಣ್ಣುಮಕ್ಕಳು ಕಲಿಯುವಂಥ ಕಾಲೇಜಿನಲ್ಲಿ ಇವರನ್ನು ವಾಚ್‌ಮೆನ್‌ಗಳೆಂದು ಹಾಕಿರುತ್ತಾರೆ. ರೌಡಿಗಳಿಗೆ ರೀಹ್ಯಾಬಿಲಿಟೇಟ್ ಮಾಡಿದ್ದಾರೆ. ಆದಕಾರಣ ಅಲ್ಲಿ ಎರಡೆರಡು ಗುಂಪುಗಳಾಗಿವೆ. ಅದು ಗ್ರ್ಯಾಂಟ್ ಇನ್ ಏಡ್ ಇನ್‌ಸ್ಟಿಟ್ಯೂಶನ್ ವಾಚ್‌ಮೆನ್ ತರಹ ಇನ್‌ಡೈರೆಕ್ಟಾಗಿ ರೌಡಿಗಳನ್ನು ಬಿಟ್ಟು ಈ ವಾಚ್‌ಮನ್ ಕೆಲಸ ನಡೆಯುತ್ತಿದೆ. ಅದೊಂದು ಕೋ–ಎಜ್ಯುಕೇಶನ್ ಕಾಲೇಜ್. ರೌಡಿಶೀಟ್ ಲಿಸ್ಟ್‌ನಲ್ಲಿರುವವರು ಇದ್ದಾರೆ. ಕಾಲೇಜ್ ಜನರಲ್ ಸೆಕ್ರೆಟರಿಯವರೂ ಕೂಡ ರೌಡಿಶೀಟ್‌ನಲ್ಲಿದ್ದಾರೆ. What a shame? How the police administration is doing in my constituency? I was really happy that I have brought it to the notice of the Education Minister. I have very clearly said it that till now they are encouraging rowdies in my constituency. I have brought it to his notice also. Where is the security for the women students in my constituency? ಇದನ್ನು ಮಾನ್ಯ ಮುಖ್ಯಮಂತ್ರಿಗಳ ನೋಟೀಸ್‌ಗೆ ನಾನು ತರುತ್ತಿದ್ದೇನೆ. ಕಾಲೇಜಿನ ವಾಚ್‌ಮೆನ್‌ಗಳನ್ನು ರೌಡಿಲಿಸ್ಟ್‌ಗೆ ಸೇರಿಸಿರುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಧರ್ಮಸಿಂಗ್ : ಮಾನ್ಯ ಅಧ್ಯಕ್ಷರೆ, ಸ್ಪೆಸಿಫಿಕ್ಕಾಗಿ ಶಿಕ್ಷಣ ಕಲಿಯುವಂಥ ಕಾಲೇಜಿಗೆ ರೌಡಿಲಿಸ್ಟ್‌ನಲ್ಲಿ ಇರುವಂಥವರನ್ನು ವಾಚ್‌ಮೆನ್‌ಗಳಾಗಿ ಹಾಕಿರುತ್ತಾರೆಂದು ನಮ್ಮ ನೋಟೀಸ್‌ಗೆ ತಂದಿರುತ್ತಾರೆ. I fully agree with Sri Rajendran's version. ಇದರ ಬಗ್ಗೆ ತಮಗೆ ಮಾನ್ಯ ಅಧ್ಯಕ್ಷರ ಮೂಲಕ ಆಶ್ವಾಸನೆಯನ್ನು ಕೊಡುತ್ತಿದ್ದೇನೆ. ಅವರು ಕೇಳಿರುವಂತೆ immediately I am going to take action.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಮಾನ್ಯ ಅಧ್ಯಕ್ಷರೆ, ಈ ವಿಷಯದ ಬಗ್ಗೆ ಒಂದು ವಿಚಾರವನ್ನು ಹೇಳುತ್ತಿದ್ದೇನೆ. ಪ್ರತಿಯೊಂದು ಪೊಲೀಸ್ ಸ್ಟೇಶನ್‌ನಲ್ಲಿ ಯಾವ್ಯಾವ ಕೇಸ್‌ಗಳಲ್ಲಿ ಯಾರ‍್ಯಾರು ಅರೆಸ್ಟ್ ಆಗಿದ್ದಾರೆ ಅವರ ಚಟುವಟಿಕೆಗಳು ಏನು ಎನ್ನುವುದರ ಬಗ್ಗೆ ಅವರ ಫೋಟೋ ತೆಗೆಸಿ ಪೊಲೀಸ್ ಸ್ಟೇಶನ್‌ನಲ್ಲಿ ಅದನ್ನು ಡಿಸ್‌ಪ್ಲೇ ಮಾಡಬೇಕು. ಇನ್ನೊಂದು ಹಿಟ್‌ಲಿಸ್ಟ್ ಎಂದು ಒಂದು ಪ್ರತ್ಯೇಕ ಫೈಲನ್ನು ಮಾಡಲೇಬೇಕು. ಸೆಕ್ಷನ್ 107 ರಿಂದ 110 ರವರೆಗೆ ಕೆಲವೊಂದು ಕೇಸ್‌ಗಳನ್ನು ಹಾಕುತ್ತಾರೆ, ಇದರಿಂದ ಪೊಲೀಸ್‌ರಿಗೆ ಅವರನ್ನು ಕಂಟ್ರೋಲ್ ಮಾಡುವುದಕ್ಕಾಗಲಿಲ್ಲವೆಂದರೆ, ಜಿಲ್ಲಾಧಿಕಾರಿಗಳ ಮೂಲಕ ಅವರು ಮಾಡಿಸಬೇಕು. ಒಂದು ಪೊಲೀಸ್ ಸ್ಟೇಶನ್‌ದಿಂದ ವರ್ಗಾವಣೆಯಾಗಿ ಹೋಗುವಾಗ ಆ ಸಬ್‌ಇನ್ಸ್‌ಪೆಕ್ಟರ್ ಚಾರ್ಜ್ ಕೊಡುವಾಗ ಅಲ್ಲಿಗೆ ಹೊಸದಾಗಿ ಬರುವ ಸಬ್‌ಇನ್ಸ್‌ಪೆಕ್ಟರ್‌ಗೆ ಅದರ ಮಾಹಿತಿಯನ್ನು ನೀಡಿ ಯಾರು ರೌಡಿ ಹಿಟ್‌ಲಿಸ್ಟ್‌ನಲ್ಲಿದ್ದಾರೆ ಅವರ ಬಗ್ಗೆ ಇರುವ ಹಿಸ್ಟರಿ ಏನಿದೆ, ಇಂಥಿಂಥ ಕೇಸ್‌ಗಳು ಇವೆ. ಇಂಥವರ ಬಗ್ಗೆ ಎಲ್ಲಾ ಜಾಗ್ರತೆಯಾಗಿ ಇರಲು ಹೇಳಬೇಕೆಂದು ನಾನು ಹೇಳುತ್ತೇನೆ. ಇನ್ನೊಂದು ಏನಾಗಿದೆ ಎಂದರೆ, ತಾಲ್ಲೂಕು ದಂಡಾಧಿಕಾರಿಗಳಾದ ತಹಸೀಲ್ದಾರ್‌ರವರಿಗೆ ಇಂತಹ ಅಧಿಕಾರ ಇರುವಂತವರು, ಇವರ ಮತ್ತು ಪೊಲೀಸ್‌ರಿಗೆ ಕೋ–ಆರ್ಡಿನೇಶನ್ ಇರುವುದಿಲ್ಲ. ಯಾರು ಇದರಲ್ಲಿ ಜವಾಬ್ದಾರಿ ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ. ಸೆಷನ್ಸ್ ಕೋರ್ಟಿಗೆ ಹೋಗಿ ಅವರು ಸ್ಟೇ ತರುತ್ತಾರೆ. Further the habitual offenders continue to indulge in committing offences. ಪೊಲೀಸ್ ಸ್ಟೇಶನ್‌ನಲ್ಲಿ ಕೂಡ ರೌಡಿಗಳ ಹಿಟ್‌ಲಿಸ್ಟ್‌ನ ಫೈಲ್ ಅಪ್–ಟು–ಡೇಟ್ ಮಾಡುವುದಿಲ್ಲ. ರೋಗ್ಸ್ ಗ್ಯಾಲರಿಯಲ್ಲಿ ಪಿಕ್ಚರ್‍ಸ್‌ನ್ನು ಡಿಸ್‌ಪ್ಲೇ ಮಾಡಬೇಕು. ಪ್ರಾಮಾಣಿಕವಾಗಿ ಇರುವವರ ಬಗ್ಗೆ ಕನ್ಸಿಡರೇಶನ್ ಮಾಡಬೇಕು... ಪೊಲೀಸ್ ಸ್ಟೇಶನ್‌ನಲ್ಲಿ ಕಾನ್ಸ್‌ಟೇಬಲ್ ಹಂತ ಮತ್ತು ಹೆಡ್‌ಕಾನ್ಸ್‌ಟೇಬಲ್ ಹಂತದಲ್ಲಿ ಹಿಡಿದುಕೊಂಡು ನಮ್ಮ ನಿಮ್ಮಂಥವರನ್ನು ಹಿಡಿದುಕೊಂಡು ಕೆಲಸಕ್ಕೆ ಬರುತ್ತಾರೆ. ಅವರು ರಾಜಕೀಯವಾಗಿ ಹಾಗೂ ಜಾತಿಯಿಂದ ಕೂಡ ಅವರಿಗೆ ರಕ್ಷಣೆ ಖಾಸಗಿಯಾಗಿ ಇರುತ್ತದೆ. ಅವರೆ ಇದರಲ್ಲಿ ಅರ್ಧ ಮಿಸ್ಟೇಕ್ ಮಾಡುತ್ತಾರೆ. ದಯವಿಟ್ಟು ಮಾನ್ಯ ಮುಖ್ಯಮಂತ್ರಿಗಳು ಇದೊಂದು ಸಣ್ಣ ವಿಚಾರವಾದರೂ ಕೂಡ ಹಳ್ಳಿಗಾಡಿನಲ್ಲಿ ಅನೇಕ ವೇಳೆ ಇಂತಹದ್ದರಿಂದಲೇ ಹಿಂಸೆಗಳು ಅಶಾಂತಿಗಳು ತಲೆದೋರುತ್ತವೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರವನ್ನು ಬಯಸುತ್ತೇನೆ.

ಶ್ರೀ ಧರ್ಮಸಿಂಗ್ : ಮಾನ್ಯ ಅಧ್ಯಕ್ಷರೆ, ಮಾನ್ಯ ರಮೇಶ್ ಕುಮಾರ್‌ರವರು ಹೇಳಿದಂತೆ ಪೊಲೀಸ್ ಸ್ಟೇಶನ್‌ನಲ್ಲಿ ಈ ಕೆಲಸ ಆಗಬೇಕು ಅದರ ಬಗ್ಗೆ ನಾನು ಒಪ್ಪುತ್ತೇನೆ. ಅವ್ಯವಹಾರಗಳು ಲೋಯರ್ ಲೆವಲ್‌ನಲ್ಲಿ ಆಗುತ್ತದೆ. ಅದಕ್ಕಾಗಿ ಒಂದು ಮಾತನ್ನು ಹೇಳಬೇಕೆಂದರೆ, ಕೆಲವೊಂದು ಸಮಯದಲ್ಲಿ ಜನಪ್ರತಿನಿಧಿಗಳು ಇದರಲ್ಲಿ ಪ್ರಭಾವ ಬೀರುವುದನ್ನು ಬಿಟ್ಟರೆ ಮತ್ತು ಅದರಲ್ಲಿ ಹಸ್ತಕ್ಷೇಪ ಮಾಡದಿದ್ದರೆ ಕಾನೂನು ವ್ಯವಸ್ಥೆಯನ್ನು ಪರಿಪಾಲನೆ ಮಾಡುವುದಕ್ಕೆ ಸರಿಹೋಗುತ್ತದೆ. ನಕ್ಸಲೇಟ್ ಎಫೆಕ್ಟೆಡ್ ಏರಿಯಾದಲ್ಲಿ ಇಂತಹ ಇನ್ಸ್‌ಪೆಕ್ಟರ್‌ಗಳನ್ನು ಹಾಕಬೇಕು. ಇದು ಕೆಳಹಂತದಲ್ಲಿ ನಡೆಯುವಂಥದ್ದು ಇದನ್ನು ಬೇಕಾದರೆ ಐಜಿ ಡಿಜಿ ಯವರಿಗೆ ಹೇಳಬಹುದು, ಆದರೆ ಕೆಳಹಂತದಲ್ಲಿ ಇದನ್ನು ಸರಿ ಮಾಡುವುದಕ್ಕಾಗುವುದಿಲ್ಲ. ಇದರ ಬಗ್ಗೆ ಮಾನ್ಯ ಅಧ್ಯಕ್ಷರಿಗೂ ಕೂಡ ಗೊತ್ತಿದೆ, ಏಕೆಂದರೆ ಅವರು ಮುಗುಳ್ನಗುವುದನ್ನು ನೋಡಿದರೆ ಅವರಿಗೂ ಅನುಭವ ಆಗಿರಬಹುದು. ಕೆಳಹಂತದಲ್ಲಿ ಎಲ್ಲಾ ಅವ್ಯವಹಾರ ನಡೆಯುತ್ತದೆ. ಇಲ್ಲವೆಂದು ನಾನು ಹೇಳುವುದಕ್ಕೆ ಇಚ್ಛೆಪಡುವುದಿಲ್ಲ.

ಅದಕ್ಕಾಗಿ ನಾನು ಒಂದು ವಿಚಾರವನ್ನು ಹೇಳುತ್ತಿದ್ದೇನೆ, ಇದಕ್ಕೆ ಒಂದು ಸರಿಯಾದ ರೀತಿಯಲ್ಲಿ ವ್ಯವಸ್ಥಿತವಾದ ಒಂದು ಕ್ರಮವನ್ನು ಹಾಕಿಕೊಳ್ಳಬೇಕಾಗಿದೆ. ಇದರ ಬಗ್ಗೆ ಕೂಡ ಸಾಕಷ್ಟು ಅನುಷ್ಠಾನ ಕೂಡ ನಡೆಯುತ್ತಿದೆ, ಇದನ್ನು ನಿಲ್ಲಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಕೃಷ್ಣ ನದಿಗೆ ಬಿಜಾಪುರದ ಬಳಿ ನಿರ್ಮಿಸುತ್ತಿರುವ ಕೋರ್ತಿ-ಕೊಲ್ಹಾರ ಸೇತುವೆಯನ್ನು ಪೂರ್ಣಗೊಳಿಸುವುದು

88(1481) Sri. Shivananda Patil (Basavanabagewadi) will Minister for water Resources and Transport be pleased to state?

A) When is the Korthi-Kolhara bridge being constructed across river Krishna in Bijapur will be completed;

B) What are the reasons for not completing this bridge;

C) What is the present stage of progress of this work

D) Whether any definite date for completion for this work has been fixed?

Sri. Mallikarjuna Kharge (Minister for Water Resources and Transport)

A) It is programmed to complete by August 2005.

B) Due to slow progress of work by contractor.

C) Out of 450 girders to be provided for the bridge 339 are casted and 312 girders are launched. Also, out of 75 spans of the bridge concreting for 52 spans are completed.

D) As per the supplementary agreement made with the contractor the work is to be completed by March 2005.

ಶ್ರೀ ಶಿವಾನಂದ ಪಾಟೀಲ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಆದರೆ ಈ ಕಾಮಗಾರಿ 2003ನೇ ಸಾಲಿಗೆ ಮುಕ್ತಾಯವಾಗಬೇಕಾಗಿತ್ತು. ಕಾರಣಾಂತರಗಳಿಂದ ಇದನ್ನು 2003–04ನೇ ಸಾಲಿಗೆ ಮುಗಿಸುತ್ತೇವೆಂದು ಪ್ರಾಮಿಸ್ ಮಾಡಿರುತ್ತಾರೆ. ಆದರೆ 2005ರೊಳಗೆ ಪೂರ್ಣಗೊಳಿಸುತ್ತೇನೆಂದು ಹೇಳಿದ್ದಾರೆ. ನಾನು ಮೊದಲು ಸರ್ಕಾರಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಈಗಾಗಲೇ ಪ್ರಥಮವಾಗಿ 3 ಕಿ.ಮೀನಷ್ಟು ಬ್ರಿಡ್ಜನ್ನು ಊರಿನಲ್ಲಿ ಸರ್ಕಾರ ಮಾಡುತ್ತಿದೆ. ಅದರ ಅವಶ್ಯಕತೆ ಇದೆ. ಆ ಬ್ರಿಡ್ಜ್ ಆದರೆ ಕನಿಷ್ಠ 35–40 ಕಿ.ಮಿ. ಬಿಜಾಪುರ–ಹುಬ್ಬಳ್ಳಿಯವರೆಗೆ ಅಂತರ ಕಡಿಮೆಯಾಗುತ್ತದೆ. ಜನರಿಗೂ ಕೂಡ ಇದರ ಅವಶ್ಯಕತೆ ಇದೆ. ಮಾನ್ಯ ಸಚಿವರಿಗೆ ಗೊತ್ತಿರುವಂತೆ ಗುತ್ತಿಗೆದಾರ ಈಗಾಗಲೇ 80 ರಷ್ಟು ಕೆಲಸವನ್ನು ಮುಗಿಸಿದ್ದಾನೆ. ಇನ್ನು 20 ಪರ್ಸೆಂಟ್‌ನಷ್ಟು ಕೆಲಸ ಬಾಕಿ ಇರುತ್ತದೆ. ದುರ್ದೈವ ಎಂದರೆ ಟೈಮ್, ಕಾಸ್ಟ್ ಎಸ್ಕಲೇಷನ್‌ನನ್ನು ಕೊಟ್ಟಿರುವುದಿಲ್ಲ. ಆದ್ದರಿಂದ ಮಧ್ಯದಲ್ಲಿಯೇ ಬಿಟ್ಟುಹೋಗುತ್ತಿದ್ದಾನೆಂದು ಹೇಳುತ್ತಿದ್ದಾನೆ. ಏಕೆಂದರೆ ಕೆಲಸ ಮಾಡಿದರೆ 4 ಕೋಟಿ ರೂಪಾಯಿಗಳು ಲುಕ್ಸಾನ್ ಆಗುತ್ತದೆ. ಕೆಲಸ ಮಾಡದೆ ಇದ್ದರೆ

ಒಂದು ಕೋಟಿ ರೂಪಾಯಿಗಳು ಲುಕ್ಸಾನ್ ಆಗುತ್ತದೆ. ಈ ತರಹ ಸನ್ನಿವೇಶ ಬಂದಿರುತ್ತದೆ. ಮಾನ್ಯ ಮಂತ್ರಿಗಳು ಅವರನ್ನು ಬೇರೆ ರೀತಿಯಿಂದ ಕರೆದು ಟೆಕ್ನಿಕಲ್ ಅಡ್ವೈಸರಿ ಕಮಿಟಿ ಹಾಗೂ ಎಂ.ಡಿ. ಹಾಗೂ ಕಂಟ್ರಾಕ್ಟ್‌ದಾರರನ್ನು ಕರೆದು ಮೀಟಿಂಗ್ ಮಾಡಿ ಇದರಲ್ಲಿ ಸ್ವಲ್ಪ ಆಸಕ್ತಿ ವಹಿಸಿ ತೀರ್ಮಾನ ತೆಗೆದುಕೊಂಡರೆ ಅಲ್ಲಿ ಕೆಲಸವನ್ನು ಮಾಡಿ ಮುಗಿಸಬಹುದು ಎಂದು ನನಗನ್ನಿಸುತ್ತದೆ. ಮಾನ್ಯ ಸಚಿವರು ಏನು ಉತ್ತರವನ್ನು ಕೊಡುತ್ತಾರೆ ನಂತರ ಅದರ ಬಗ್ಗೆ ನಾನು ವಿಚಾರ ಮಾಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೇ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳುತ್ತಿರುವುದು ನಿಜ. ಈ ಕೆಲಸವು ಮಧ್ಯದಲ್ಲಿಯೇ ನಿಂತುಹೋಗಿತ್ತು. ಏಕೆಂದರೆ ಒಂದು ಕಡೆ ಹಣವಿಲ್ಲ. ಇನ್ನೊಂದು ಕಡೆ ಕಾಸ್ಟ್ ಎಸ್ಕಲೇಷನ್ ಮಾತು, ಅವರು ಏನು ಹೇಳುತ್ತಿದ್ದಾರೆ ಬಹುಶಃ ಅದು ಒಂದು ಕಾರಣವಿರಬಹುದು. ಆದರೆ ಅವರು ಟೈಮ್ ಎಕ್ಸ್‌ಟೆಂಡ್ ಮಾಡಬೇಕು ಹಾಗೂ ಚಾರ್ಜಸ್ ಕೊಡಬೇಕೆಂದು ಹೇಳಿದ್ದಾರೆ. ಆಗಸ್ಟ್ 2005 ರವರೆಗೆ ಕೊಟ್ಟಿದ್ದೇವೆ. ಮತ್ತೆ ಅವರು ಆಗಸ್ಟ್ 2005ರೊಳಗೆ ಈ ಕೆಲಸವನ್ನು ಕಂಪ್ಲೀಟ್ ಮಾಡಿಕೊಡುತ್ತೇವೆಂದು ನಮಗೆ ವಾಗ್ದಾನ ಮಾಡಿದ್ದಾರೆ. ಅದಕ್ಕಾಗಿ ಅಡ್ವಾನ್ಸ್ ಮೊಬಿಲೈಜೇಷನ್ ಒಂದು ಕೋಟಿ ರೂಪಾಯಿಗಳ ಹಣವನ್ನೂ ಕೂಡ ನಮ್ಮ ನಿಗಮದವರು ಕೊಟ್ಟಿದ್ದಾರೆ. ಈ ರೀತಿಯಾಗಿ ಅವರಿಗೆ ಯಾವ ರೀತಿಯಾದ ಕಾನೂನು ಬದ್ಧವಾದ ಸಹಾಯವನ್ನು ಮಾಡಬೇಕೋ ಅದನ್ನು ಮಾಡಿದ್ದೇವೆ. ಆದರೆ ಉಳಿದ ಕಾಸ್ಟ್ ವಿಚಾರದ ಬಗ್ಗೆ ಹೇಳುವುದಾದರೆ ಟೆಕ್ನಿಕಲ್ ಕಮಿಟಿ ಇರುತ್ತದೆ. ಅದು ಅಲ್ಲಿಗೆ ಬಂದ ನಂತರ ಅದರ ಬಗ್ಗೆ ನಿರ್ಣಯ ತೆಗೆದುಕೊಂಡು ಮುಂದಿನ ಕೆಲಸವನ್ನು ಮಾಡಬಹುದು. ತಕ್ಷಣವೇ ನಾವು ಸುಮೋಟೋ ಮಾಡಿ ಬೇಗನೆ ಕೆಲಸ ಮುಗಿಸಬೇಕೆಂದು ಹೇಳಿದರೆ ಅನೇಕಸಾರಿ ಅದು ತಪ್ಪು ತಿಳುವಳಿಕೆಯಾಗುತ್ತದೆ. ಕೆಲವರು ಇದರ ಬಗ್ಗೆ ಫೇವರ್ ಮಾಡುತ್ತಾರೆಂದು ಹೇಳುತ್ತಾರೆ. ಸಧ್ಯಕ್ಕೆ ಅವರು ಕೊಟ್ಟ ಮಾತಿನ ಪ್ರಕಾರ 2005 ಆಗಸ್ಟ್‌ರಲ್ಲಿ ಕಂಪ್ಲೀಟ್ ಮಾಡಿಕೊಡುತ್ತೇವೆಂದು ಹೇಳಿದ್ದಾರೆ. ಅವರು ಒಂದು ವೇಳೆ ಕೆಲಸವನ್ನು ನಿಧಾನವಾಗಿ ಮಾಡಿದರೆ ಅವರಿಗೆ 5 ಸಾವಿರ ರೂಪಾಯಿಗಳ ಪೆನಾಲ್ಟಿಯನ್ನು ಹಾಕುತ್ತೇವೆ. ಆದರೆ ಆತನು ಕೆಲಸವನ್ನು ಮಾಡದೆ ಮಧ್ಯದಲ್ಲಿಯೇ ಬಿಟ್ಟು ಹೋಗುವುದಕ್ಕೆ ಬರುವುದಿಲ್ಲ. ಆದರೂ ಕೂಡ ಕೆಲಸವನ್ನು ನಿಧಾನವಾಗಿ ಮಾತ್ರ ಮಾಡಬಹುದು. ಇದರಲ್ಲಿ ಅಡೆತಡೆಗಳು ಇರುವುದಿಲ್ಲ, ಅಡ್ಮಿನಿಸ್ಟ್ರೇಷನ್ ವಿಷಯದಲ್ಲಿ ಏನಾದರೂ ಸಹಾಯ ಮಾಡುವುದಿದ್ದರೆ ಅದನ್ನು ಮಾಡಬಹುದು. in the interest of this work definitely ಎಂ.ಡಿ. ಕೆಬಿಜೆಎನ್‌ಎಲ್‌ರವರು ಇದರ ಬಗ್ಗೆ ಸೂಕ್ತ ಕ್ರಮ ಜರುಗಿಸಬಹುದು.

ಅಧ್ಯಕ್ಷರು : ದಯಮಾಡಿ ತಾವು ಮಾನ್ಯ ಮಂತ್ರಿಗಳ ಜೊತೆ ಈ ವಿಚಾರದ ಬಗ್ಗೆ ಚರ್ಚೆ ಮಾಡಬಹುದು. ಅವರು ಉತ್ತರದಲ್ಲಿಯೇ ಹೇಳಿದ್ದಾರಲ್ಲಾ. ಆಗ ಇದನ್ನು ತಾವು ಬಗೆಹರಿಸಿಕೊಳ್ಳಬಹುದು.

ಶ್ರೀ ಶಿವಾನಂದ ಪಾಟೀಲ್ : ನೀವು ಪರ್ಸನಲ್ ಅಟೆನ್‌ಷನ್ ಕೊಟ್ಟರೆ ಈ ಕೆಲಸವು ಬರುವ ಆಗಸ್ಟ್‌ನೊಳಗಾಗಿಯೇ ಮುಗಿದುಹೋಗಿಬಿಡುತ್ತದೆ. 2002–03ರಲ್ಲಿ ಮುಗಿಯಬೇಕಾದ ಕೆಲಸವು ಈಗ 2005ನೇ ಇಸವಿ ಬಂತು. ಅದಕ್ಕಾಗಿ ನಾನು ಏನು ಹೇಳುತ್ತೇನೆಂದರೆ, ಆತನು

ಮೇಲಿಂದ ಮೇಲೆ ಪತ್ರವನ್ನು ಕೊಡುತ್ತಿದ್ದಾನೆ. ಈಗ ಸ್ಟೀಲ್ ಪ್ರೈಸ್ ಇನ್‌ಕ್ರೀಸ್ ಆಗಿದ್ದು ಅವರ ಕಂಡಿಷನ್‌ನಲ್ಲಿ ಅದು ಇಲ್ಲ. ಆಗ ಸ್ಟೀಲ್ ಪ್ರೈಸ್ 18 ಸಾವಿರ ರೂಪಾಯಿಗಳು ಇತ್ತು. ಅದು ಈಗ 25 ರಿಂದ 26 ಸಾವಿರ ರೂಪಾಯಿಗಳಾಗಿದೆ. ಅದು ಜಾಸ್ತಿಯಾಗಿದೆ ಎಂದು ಅದನ್ನು ಕೋಟ್ ಮಾಡಿ ಅವನು ಎಸ್ಕಲೇಷನ್ ವಿತ್ ಟೈಮ್‌ನ್ನು ಕೇಳುತ್ತಿದ್ದಾನೆ. ಆದ್ದರಿಂದ ಮಾನ್ಯ ಮಂತ್ರಿಗಳು ಇದರಲ್ಲಿ ಯಾರಿಗೂ ಫೇವರಿಸಂ ಮಾಡುವುದು ಬೇಡ. ನಿಮಗೆ ಗೊತ್ತಿದೆ ಈ ಕೆನಾಲ್ ವರ್ಕ್‌ನಲ್ಲಿ 108 ಅಡೆತಡೆಗಳು ಬರುತ್ತವೆ ಅಲ್ಲಿ ಟಿ.ಎ.ಸಿ.ಯವರು ಸಹಾಯವನ್ನು ಮಾಡಿದ್ದಾರೆ ನಾನು ಇಲ್ಲವೆಂದು ಹೇಳುವುದಿಲ್ಲ. ಅಲ್ಲಿ ಕೂಡ ನಡೆಯುತ್ತದೆ. ಇಲ್ಲಿ ಪ್ರೆಸ್ಟೀಜಿಯಸ್ ಬ್ರಿಡ್ಜ್ ಇರುವುದರಿಂದ ಇದರಲ್ಲಿ 35 ಕೋಟಿ ರೂಗಳು ಬಹಳ ಅಂದರೆ ಒಂದೆರಡು ಕೋಟಿ ರೂಪಾಯಿಗಳು ಹೆಚ್ಚಿಗೆ ಆಗಬಹುದು. ಅದರ ಬಗ್ಗೆ ತಾವು ಪರ್ಸನಲ್ ಆಗಿ ಮೀಟಿಂಗ್ ಕರೆದರೆ ಅದು ನಿಮ್ಮ ಗಮನಕ್ಕೂ ಕೂಡ ಬರುತ್ತದೆ. ಇದರ ಬಗ್ಗೆ ತಾವು ಡಿಸಿಷನ್‌ನ್ನು ತೆಗೆದುಕೊಳ್ಳಬಹುದು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಮ್ಮ ಕೆಬಿಜೆಎನ್‌ಎಲ್ ಎಂಡಿಯವರಿಗೆ ಯಾವ ರೀತಿಯಾಗಿ ಇದನ್ನು ಕಾನೂನಿನ ಒಳಗಡೆ ತಂದು ಮಾಡಬೇಕು ಎಂಬುದನ್ನು ಕೇಳುತ್ತೇನೆ. ಟಿಎಸಿಯವರನ್ನು ಸಹ ಕೇಳಬೇಕಾಗುತ್ತದೆ. ತದನಂತರ ಇದನ್ನು ಬೋರ್ಡ್ ಮುಂದೆ ಇಟ್ಟು ಇದರ ಬಗ್ಗೆ ಮುಂದಿನ ಕೆಲಸ ಮಾಡುವ ಬಗ್ಗೆ ಅವಕಾಶವನ್ನು ಮಾಡಿಕೊಡಬೇಕಾಗುತ್ತದೆ. ಸುಮೋಟೋ ನಾನು ಒಬ್ಬನೇ ನಿರ್ಣಯವನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಇದರ ಬಗ್ಗೆ ತಮಗೆ ಗೊತ್ತಿರುವ ಹಾಗೆ ಕೆಬಿಜೆಎನ್‌ಎಲ್ ಅಧ್ಯಕ್ಷರು ಮುಖ್ಯಮಂತ್ರಿಗಳಾಗಿರುತ್ತಾರೆ, ಎಂಡಿಗಳು ಇರುತ್ತಾರೆ ಫೈನಾನ್ಸ್ ಡಿಪಾರ್ಟ್‌ಮೆಂಟಿನ ಸೆಕ್ರೆಟರಿಯವರು ಇರುತ್ತಾರೆ. ಚೀಫ್ ಸೆಕ್ರೆಟರಿಯವರು ಇರುತ್ತಾರೆ, ಇವರೆಲ್ಲರೂ ಕೂಡಿಯೇ ನಾವು ಎಸ್ಕಲೇಷನ್ ಇದ್ದರೆ ನಿರ್ಣಯವನ್ನು ತೆಗೆದುಕೊಂಡು ಕೊಡಬೇಕಾಗುತ್ತದೆ. ಅದರ ಬಗ್ಗೆ ನಾನು ಈಗಾಗಲೇ ತಮಗೆ ಹೇಳಿದ್ದೇನೆ. In the interest of people of that area... ಇದು ಬಹಳ ದೊಡ್ಡ ಕೆಲಸವಿದೆ. ಸ್ಟೀಲ್ ರೇಟ್ ಮತ್ತೆ ಎನ್‌ಹಾನ್ಸ್ ಆಗಿದ್ದರೆ ಖಂಡಿತವಾಗಿ ಆ ಟೆಕ್ನಿಕಲ್ ಕಮಿಟಿಯವರು ಇದರ ಬಗ್ಗೆ ಎಕ್ಸಾಮಿನ್ ಮಾಡುತ್ತಾರೆ. ಅದನ್ನು ಮಾಡಿ ಎಂದು ನಾವು ಅವರಿಗೆ ಹೇಳುತ್ತೇವೆ. ಅವರು ನಮಗೆ ಸೂಕ್ತವಾದಂತಹ ಸಲಹೆಯನ್ನು ಕೊಟ್ಟರೆ ಕಾನೂನು ಬದ್ಧವಾಗಿ ಏನು ಸಹಾಯವನ್ನು ಮಾಡಬೇಕೋ ಅದನ್ನು ಕಮಿಟಿಯವರು ಮಾಡುತ್ತಾರೆ.

ಮಡಿಕೇರಿ ವಿಧಾನಸಭಾ ಕ್ಷೇತ್ರದಲ್ಲಿ ಸಣ್ಣ ನೀರಾವರಿ ಯೋಜನೆಯ ಅನುಷ್ಠಾನ ಹಾಗೂ ತಡೆಗೋಡೆ ನಿರ್ಮಾಣ

89 (1021) ಶ್ರೀ ಬೋಪಯ್ಯ ಕೆ.ಜಿ. : ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮಡಿಕೇರಿ ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ 2004-05ನೇ ಸಾಲಿನಲ್ಲಿ ಸಣ್ಣ ನೀರಾವರಿಯ ಎಷ್ಟು ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದೆ (ವಿವರಗಳನ್ನು ನೀಡುವುದು):

ಆ) 2002-03ನೇ ಸಾಲಿನಲ್ಲಿ ಈವರೆಗೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ (ವಿವರಗಳನ್ನು ನೀಡುವುದು):

ಇ) ಮಡಿಕೇರಿ ತಾಲ್ಲೂಕು ಪಾಲೂರು ಗ್ರಾಮದ ಹರಿಶ್ಚಂದ್ರ ದೇವಾಲಯದ ಬಳಿ ಕಾವೇರಿ ನದಿಗೆ ತಡೆಗೋಡೆ ನಿರ್ಮಾಣಕ್ಕಾಗಿ ಸರ್ಕಾರಕ್ಕೆ ಪ್ರಸ್ತಾವನೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಸರ್ಕಾರದ ಕ್ರಮವೇನು (ವಿವರಗಳನ್ನು ಒದಗಿಸುವುದು)?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) 2004–05ನೇ ಸಾಲಿನಲ್ಲಿ ಹೊಸದಾಗಿ ಯಾವುದೇ ಸಣ್ಣ ನೀರಾವರಿ ಯೋಜನೆಗಳನ್ನು ಕೈಗೆತ್ತಿಕೊಂಡಿರುವುದಿಲ್ಲ.

ಆ) ಬಿಡುಗಡೆಯಾದ ಅನುದಾನ (ಲಕ್ಷ ರೂ.ಗಳಲ್ಲಿ)

2002–03	2003–04	2004–05
ಇಲ್ಲ	9.67	ಇಲ್ಲ

ಇ) ಮನವಿ ಬಂದಿದೆ.

ಈ) ಅನುದಾನ ಲಭ್ಯವಿಲ್ಲದ ಕಾರಣ ಸಧ್ಯಕ್ಕೆ ಈ ಕಾಮಗಾರಿಯನ್ನು ತೆಗೆದುಕೊಳ್ಳಲು ಸಾಧ್ಯವಿಲ್ಲ.

ಶ್ರೀ ಕೆ.ಜಿ. ಬೋಪಯ್ಯ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಆದರೆ ಉತ್ತರವನ್ನು ನೋಡಿದಾಗ ಸಣ್ಣ ನೀರಾವರಿ ಇಲಾಖೆಯಿಂದ ನನ್ನ ಕ್ಷೇತ್ರವನ್ನು ಸಂಪೂರ್ಣವಾಗಿ ಕಡೆಗಣಿಸಿದ್ದಾರೆಂದು ಕಾಣುತ್ತದೆ. 2001ನೇ ಇಸವಿಯಲ್ಲಿ ಪಾಲೂರು ಗ್ರಾಮದ ಹರಿಶ್ಚಂದ್ರ ದೇವಸ್ಥಾನ ಭಗ್ನವಾಗಿದೆ. ಆ ನಂತರ 3 ವರ್ಷಗಳು ಕಳೆದ ಮೇಲೆ ಸರ್ಕಾರದಿಂದ ಅನುದಾನ ದೊರಕಿ ದೇವಸ್ಥಾನ ಇವತ್ತು ಪುನರ್ ನಿರ್ಮಾಣವಾಗುತ್ತದೆ. ಅದು ಕಾವೇರಿ ಹೊಳೆಯ ದಂಡೆಯ ಬಳಿ ಇದೆ. ಅದಕ್ಕೆ ತಡೆಗೋಡೆ ನಿರ್ಮಾಣ ಮಾಡಬೇಕೆಂದು ಪ್ರಸ್ತಾವನೆಯನ್ನೂ ಕೂಡ ಕೊಟ್ಟಿತ್ತು. ಆದರೆ ಅನುದಾನ ಬಿಡುಗಡೆಯಾಗಿಲ್ಲವೆಂದು ಇವತ್ತೂ ಕೂಡ ಹೇಳುತ್ತಿದ್ದಾರೆ. ಕೆಲಸವನ್ನು ಕೈಗೆತ್ತಿಕೊಳ್ಳುವುದಕ್ಕೆ ಸಾಧ್ಯವಿಲ್ಲವೆಂದು ಹೇಳುತ್ತಿದ್ದಾರೆ. ಇದನ್ನು ಕಟ್ಟದೆ ಹೋದರೆ ದೇವಸ್ಥಾನವು ಪುನರ್ ನಿರ್ಮಾಣವಾದರೂ ಕೂಡ ಉಪಯೋಗವಾಗುವುದಿಲ್ಲ. ನಮ್ಮ ಜಿಲ್ಲೆಯನ್ನು ಕಾವೇರಿ ನೀರಾವರಿ ನಿಗಮಕ್ಕೆ ಸೇರಿಸಿದ್ದಾರೆ. ಆದರೆ ಕಾವೇರಿ ನೀರಾವರಿ ನಿಗಮದಿಂದ ನಮ್ಮ ಜಿಲ್ಲೆಯಲ್ಲಿ ನೀರಾವರಿಗೆ ಸಂಬಂಧಪಟ್ಟ ಹಾಗೆ ಯಾವುದೇ ಕಾಮಗಾರಿಯನ್ನು ಕೈಗೆತ್ತಿಕೊಳ್ಳುತ್ತಿಲ್ಲ. ನಾವು ಕೇಳುವುದಕ್ಕೆ ಹೋದರೆ ಸಣ್ಣ ನೀರಾವರಿ ಇಲಾಖೆಯಿಂದ 80 ಲಕ್ಷ ರೂಪಾಯಿಗಳು ಬಾಕಿ ಇದೆ. ಅದನ್ನು ಮೊದಲು ಬಿಡುಗಡೆ ಮಾಡಬೇಕು ಅನಂತರ ಈ ಕೆಲಸಗಳನ್ನು ಕೈಗೆತ್ತಿಕೊಳ್ಳುತ್ತೇವೆನ್ನುವಂತಹ ಮಾತನ್ನು ಅವರು ಹೇಳುತ್ತಿದ್ದಾರೆ. ಕಾವೇರಿ ನದಿ ಕೊಡಗಿನ ನನ್ನ ಕ್ಷೇತ್ರದಲ್ಲಿ ಹುಟ್ಟಿ ಹರಿದರೂ ಕೂಡ ಆ ನೀರನ್ನು ಉಪಯೋಗ ಮಾಡುವ ಬಗ್ಗೆ ಯಾವುದೇ ರೀತಿಯ ಅವಕಾಶವಿರುವುದಿಲ್ಲ. ಈ ವರ್ಷ ಸುಮಾರು 15 ಪ್ರಸ್ತಾವನೆಯನ್ನು ಕೊಟ್ಟಿದ್ದೇವೆ. ಅದರಲ್ಲಿ ಒಂದನ್ನೂ ಕೂಡ ಕೈಗೆತ್ತಿಕೊಳ್ಳಲಿಲ್ಲ. ಈ ರೀತಿಯಾಗಿ ಏನಾಗಿದೆ ಎಂದರೆ ನಿನ್ನೆ ಮೊನ್ನೆಯಿಂದಲೂ ಕೂಡ ಮಳೆ ಬರುತ್ತಿದೆ, ಮಳೆ ಬಂದರೆ ಬಹುಶಃ ಮಂಡ್ಯ, ಮೈಸೂರು ಮತ್ತು ಬೆಂಗಳೂರು ಜನರು ಸಂತೋಷವನ್ನು ಪಡುತ್ತಾರೆ. ಕೊಡಗಿನ ಜನ ಶಾಪವನ್ನು ಹಾಕುವಂತಹ ಪರಿಸ್ಥಿತಿ ಇವತ್ತು ಈ ಇಲಾಖೆಯ ನಿರ್ಲಕ್ಷತನದಿಂದ ಆಗಿದೆ. ಆದ್ದರಿಂದ ನಾನು ಮಾನ್ಯ ಸಚಿವರಲ್ಲಿ ಒತ್ತಾಯವನ್ನು ಮಾಡುತ್ತಿದ್ದೇನೆ. ಆ ತಡೆಗೋಡೆಯನ್ನು ಪಾಲೂರು ಹರಿಶ್ಚಂದ್ರ ದೇವಸ್ಥಾನಕ್ಕೆ ಏನು ಪ್ರಸ್ತಾವನೆ ಇದೆ ಅದನ್ನು ತಕ್ಷಣ ಕೈಗೆತ್ತಿಕೊಳ್ಳಬೇಕು.

ಹಾಗೆಯೇ ಸುಮಾರು 15 ಸಣ್ಣ ನೀರಾವರಿ ಕಾಮಗಾರಿಗಳ ಪ್ರಸ್ತಾವನೆ ಕೂಡ ಬಂದಿದೆ. ಅವುಗಳನ್ನು ಕೂಡ ಕೈಗೆತ್ತಿಕೊಳ್ಳಬೇಕೆಂದು ನಾನು ಒತ್ತಾಯವನ್ನು ಮಾಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳುವುದರಲ್ಲಿ ಅರ್ಥವಿದೆ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಯಾವ ಒಂದು ದೃಷ್ಟಿಯಿಂದ ಈ ಒಂದು ಜಿಲ್ಲೆಗೆ ಸಹಾಯವನ್ನು ಮಾಡಬೇಕಾಗಿತ್ತೋ ಅದು ಆಗಿಲ್ಲ. ತಾವು ಹೇಳುತ್ತಿರುವ ಈ ಹರಿಶ್ಚಂದ್ರ ದೇವಾಲಯದಲ್ಲಿ ಸುಮಾರು 200 ಮೀಟರ್ ತಡೆಗೋಡೆ 21 ಲಕ್ಷ ರೂಗಳ ವೆಚ್ಚದಲ್ಲಿ ಕಟ್ಟತಕ್ಕಂತಹ ಪ್ರಸ್ತಾವನೆ ಇದೆ. ಆದರೆ ಆರ್ಥಿಕ ಇಲಾಖೆಗೆ ಈಗಾಗಲೇ 4711-01 ಈ ಹೆಡ್‌ನ ಕೆಳಗಡೆ ನಾವು ಹಣವನ್ನು ಕೇಳಿದ್ದೇವೆ. ಆದರೆ ನಮಗೆ ಈ ಹೆಡ್‌ನಲ್ಲಿ ಹಣ ಸಿಗಲಿಲ್ಲ. ಮೊನ್ನೆ ನಾನು ಪುನಃ ಈ ಪ್ರಶ್ನೆ ಬಂದಾಗ ಪುನಃ ನಾವು ಆರ್ಥಿಕ ಇಲಾಖೆಯ ಸೆಕ್ರೆಟರಿಯವರನ್ನು ಕರೆದು ಇದಕ್ಕೆ ಏನಾದರೂ ಮಾಡಬೇಕೆಂದು ಹೇಳಿದೆ. ಸಪ್ಲಿಮೆಂಟರಿ ಬಜೆಟ್‌ನಲ್ಲಿ ಕೆಲವು ಹಣ ಇದಕ್ಕಾಗಿ ಇಡುತ್ತಿದ್ದಾರೆ. ಆ ಹಣ ಬಂದ ಮೇಲೆ ಅಲ್ಲಿರುವಂತಹ ಮೊದಲು ಕೆಲಸ ಮಾಡಿದ ಏನು ಬಾಕಿ ಹಣವಿದೆ ಅದನ್ನು ಕೊಡತಕ್ಕಂತಹ ಪ್ರಯತ್ನ ನಾನು ಮಾಡುತ್ತೇನೆ. ಎರಡನೆಯದಾಗಿ ಕಾವೇರಿ ನೀರಾವರಿ ನಿಗಮದಿಂದಲೂ ಕೂಡ ಕೆಲವು ಕೆಲಸಗಳನ್ನು ತೆಗೆದು ಕೊಳ್ಳತಕ್ಕಂಥಾದ್ದಕ್ಕೆ ನಾನು ಆದೇಶ ಕೊಡುತ್ತೇನೆ. ಏಕೆಂದರೆ ಅಲ್ಲಿ ಸಣ್ಣ ನೀರಾವರಿಗೆ ನಮ್ಮ ಬಜೆಟ್‌ನಲ್ಲಿ ಹಣ ಇಲ್ಲದ ಕಾರಣ ನಾವು ಯಾವುದಕ್ಕೂ ಕೂಡ ನೇರವಾಗಿ ಈ 4702ರ ಕೆಳಗೆ ತೆಗೆದುಕೊಳ್ಳುವುದಕ್ಕೆ ಆಗುತ್ತಿಲ್ಲ. ಅದಕ್ಕೆ ನಬಾರ್ಡ್ ಯೋಜನೆ ನಿಮ್ಮಲ್ಲಿ ಬರುವುದಿಲ್ಲ. ಏಕೆಂದರೆ ಅದು ಕಾವೇರಿ ಬೇಸಿನ್ ಬರುತ್ತದೆ. ಇದೆಲ್ಲಾ ನಾನೂ ಕೂಡ ಸ್ವಲ್ಪ ಅರ್ಥಮಾಡಿಕೊಂಡಿದ್ದೇನೆ. ಖಂಡಿತವಾಗಿ ಯಾವುದೇ ಒಂದು ರೂಪದಲ್ಲಿ ನಿಮ್ಮ ಒಂದೇ ಕ್ಷೇತ್ರ ಅಲ್ಲ, ಆ ಜಿಲ್ಲೆಗೆ ಸಹಾಯ ಮಾಡತಕ್ಕಂಥ ಪ್ರಯತ್ನವನ್ನು ನಾನು ಮಾಡುತ್ತೇನೆ.

ಶ್ರೀ ಕೆ. ಪದ್ಮನಾಭ ಕೊಠಾರಿ : ನನ್ನ ಜಿಲ್ಲೆಯಲ್ಲಿ ಸಣ್ಣ ನೀರಾವರಿ ಇಲಾಖೆಗೆ ಸಂಬಂಧಪಟ್ಟ ಹಾಗೆ ನಬಾರ್ಡ್‌ನಿಂದ ಮಂಜೂರು ಆಗಿರುವಂತಹ ಎರಡು ದೇವಸ್ಥಾನಗಳ ನದಿ ಬದಿಯಲ್ಲಿ ತಡೆಗೋಡೆ ಕಟ್ಟುವಂತಹ ಕಾಮಗಾರಿ ಬಗ್ಗೆ, ನಬಾರ್ಡ್‌ನಿಂದ ಮಂಜೂರಾಗಿ ಎರಡು ವರ್ಷ ಕಳೆದಿದೆ. ಸರ್ಕಾರದಿಂದ ಅದಕ್ಕೆ 30 ಪರ್ಸೆಂಟ್ ಒದಗಿಸಿಕೊಡುವುದನ್ನು ಬಜೆಟ್‌ನಲ್ಲಿ ಇಡದ ಕಾರಣ ಆ ಕಾಮಗಾರಿ ಬಾಕಿಯಾಗಿದೆ. ದಯವಿಟ್ಟು ಈ ವರ್ಷದಲ್ಲಿಯಾದರೂ ಅದಕ್ಕೆ ಸಂಬಂಧಪಟ್ಟಂತೆ ಮಾನ್ಯ ಸಚಿವರು ಈಗಾಗಲೇ ಹೇಳಿದಹಾಗೆ ಹಣ ಒದಗಿಸಿಕೊಡಲಿಕ್ಕೆ ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅದು ಯಾವ ಕೆಲಸ ಎಂದು ಹೇಳಿ ತಾವು ಬರೆದುಕೊಟ್ಟರೆ ಈ ಸಪ್ಲಿಮೆಂಟರಿ ಬಜೆಟ್‌ನಲ್ಲಿ ಅದಕ್ಕೆ ಒನ್‌ಥರ್ಡ್ ಪ್ರಾವಿಶನ್ ಮಾಡಿ ಪ್ರಾರಂಭ ಮಾಡಿಸೋಣ. ದಯವಿಟ್ಟು ತಾವು ಬರೆದುಕೊಡಿ.

ಅಧ್ಯಕ್ಷರು : ಈಗ ಒಂದೂವರೆ ಗಂಟೆಯಾಗಿದೆ. ಈಗ ಪ್ರಶ್ನೋತ್ತರವನ್ನು ನಾನು ಮುಗಿಸುತ್ತಿದ್ದೇನೆ. ಈಗ ದಯಮಾಡಿ ನಾನು ಪದೆಪದೇ ಸದಸ್ಯರುಗಳಲ್ಲಿ ಮನವಿ ಮಾಡಿದ್ದೇನೆ. ಆದರೂ ಕೂಡ ಒಂದೊಂದು ಪ್ರಶ್ನೆಗೆ ಹತ್ತು-ಹದಿನೈದು ನಿಮಿಷ ತೆಗೆದುಕೊಳ್ಳುತ್ತಿದ್ದೀರಿ. ಆದ್ದರಿಂದ ನನಗೆ ಬೇರೆ ವಿಧಿನೇ ಇಲ್ಲ....

ಶ್ರೀ ಎ.ಟಿ. ರಾಮಸ್ವಾಮಿ : ಇನ್ನು ನನ್ನದು ಒಂದೇ ಪ್ರಶ್ನೆ ಇದೆ.

ಶ್ರೀ ಎಸ್.ಎಸ್. ಪಾಟೀಲ್ : ಗ್ರಾಮೀಣ ಕೃಪಾಂಕದ್ದು ಬಹಳ ಮಹತ್ವವಾದದ್ದು. ಅದು ಮೊನ್ನೆಯೂ ಮುಂದುಹೋಗಿತ್ತು, ಇವತ್ತು ಬಂದಿದೆ. ಇನ್ನೊಂದು ಪ್ರಶ್ನೆ ಮಾತ್ರ ಇದೆ.

ಅಧ್ಯಕ್ಷರು : ಏನು ಈಗ ಪ್ರಶ್ನೋತ್ತರವನ್ನು ಮೂರು ಗಂಟೆ ಮಾಡಬೇಕಾ? ನೀವೇ ದಯಮಾಡಿ ಹೇಳಿ.

(ಗೊಂದಲ)

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಅದು ಇವತ್ತು ಅಜೆಂಡಾದಲ್ಲಿ ಬಂದಿದೆ....

ಅಧ್ಯಕ್ಷರು : ರಮೇಶ್‌ಕುಮಾರ್‌ರವರೇ ಅದನ್ನು ನಾನು ಒಪ್ಪುತ್ತೇನೆ. ಈಗ ಏನಾಗಿದೆ ಎಂದರೆ ಮೊನ್ನೆ ತಮ್ಮನ್ನೆಲ್ಲಾ ಕೇಳಿದ್ದೆ, ತಾವೂ ಒಪ್ಪಿದ್ದೀರಿ. ಒಂದೂವರೆ ಗಂಟೆಯಿಂದ ಯಾವುದೇ ಕಾರಣಕ್ಕೆ ಜಾಸ್ತಿಗೊಳಿಸುವುದಕ್ಕೆ ಆಗುವುದಿಲ್ಲ ಅಂತ ತೀರ್ಮಾನ ಮಾಡಿದ್ದೇವೆ. ಈಗ ಒಂದೂವರೆ ಗಂಟೆ ಮುಗಿದಿದೆ. ಅದೇ ರೀತಿ ಮಾಡಿಕೊಂಡುಹೋದರೆ ಪ್ರಶ್ನೋತ್ತರಕ್ಕೆ ಎರಡು-ಎರಡೂವರೆ ಗಂಟೆ ಆಗುತ್ತದೆ. ರಮೇಶ್‌ಕುಮಾರ್ ಅವರೇ ಕೇಳಿ. ದಿನದಿನ ಇದೇ ಪದ್ಧತಿಯನ್ನು ಮುಂದುವರೆಸುವುದಕ್ಕೆ ಸಾಧ್ಯವಾಗುವುದಿಲ್ಲ. ದಯವಿಟ್ಟು ತಾವು ಸಹಕರಿಸಬೇಕು.

ಶ್ರೀ ಅರಗ ಜ್ಞಾನೇಂದ್ರ : ಸದನ ಸೇರುವ ಸಮಯ ಹೆಚ್ಚು ಮಾಡುವುದಕ್ಕೆ, ಹೆಚ್ಚು ದಿವಸ ಅಧಿವೇಶನ ಕರೆಯುವುದಕ್ಕೆ ತಾವು ಸರ್ಕಾರಕ್ಕೆ ಆದೇಶವನ್ನು ಕೊಡಬೇಕು. ಇಲ್ಲದಿದ್ದರೆ ನಮಗೆ ಇಲ್ಲಿ ಉಸಿರು ಕಟ್ಟಿದಂಥ ವಾತಾವರಣ ಇದೆ. ಏನು ನಮ್ಮ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಪ್ರಶ್ನೆ ಕೇಳುವುದಕ್ಕೆ ಆಗುವುದಿಲ್ಲ, ಅದು ಬರುವುದಿಲ್ಲ ಅಂತ ಆದರೆ ನಾವು ಕೆಲಸ ಮಾಡುವುದು ಹೇಗೆ?

ಅಧ್ಯಕ್ಷರು : ಜ್ಞಾನೇಂದ್ರರವರೇ, ಹಾಗಲ್ಲ. ಒಂದು ನಿಗದಿತ ಅವಧಿಯಲ್ಲಿ ಪ್ರಶ್ನೋತ್ತರ ವೇಳೆಯನ್ನು ಮುಗಿಸುವುದಕ್ಕೆ ನಾವು ಪ್ರಯತ್ನ ಮಾಡಬೇಕು. ಸದಸ್ಯರು ಎಲ್ಲಾ ಮನಸ್ಸು ಮಾಡಿದರೆ ಇದು ಆಗುತ್ತದೆ. ಆದರೆ ಅಗತ್ಯ ಇಲ್ಲದೇ ಇದ್ದರೂ ಎಲ್ಲರೂ ನಿಂತುಕೊಳ್ಳುವುದು, ಎಲ್ಲರೂ ಕೇಳತಕ್ಕಂಥಾದ್ದು ನಡೆದಿದೆ. ಒಂದೇ ಪ್ರಶ್ನೆಯನ್ನು ನಾಲ್ಕು ನಿಮಿಷ ತೆಗೆದುಕೊಳ್ಳುವುದು, ಈ ತರಹ ಆದರೆ ಇದು ಸಾಧ್ಯವಾಗುವುದಿಲ್ಲ.

ಶ್ರೀ ಅರಗ ಜ್ಞಾನೇಂದ್ರ : ಜಾಸ್ತಿ ದಿವಸ ಆದರೆ ನಾವು ಕೇಳುವ ಪ್ರಶ್ನೆಗಳೂ ಸ್ಟಾರ್ಡ್ ಆಗುತ್ತವೆ.

ಅಧ್ಯಕ್ಷರು : ಅದನ್ನು ನಾನು ಒಪ್ಪುತ್ತೇನೆ. ಆದರೆ ಇದನ್ನು ಒಂದು ನಿಗದಿತ ಅವಧಿಯಲ್ಲಿ ಮಾಡಬೇಕಲ್ಲಾ? ರಾಮಸ್ವಾಮಿಯವರೇ ನೀವು ಕೇಳಿ.

[ಉತ್ತರವನ್ನು ಹಿಂದಕ್ಕೆ ಪಡೆಯಲು ಅಧ್ಯಕ್ಷರು ಅನುಮತಿ ನೀಡಿರುವುದರಿಂದ – ಹಿಂದಕ್ಕೆ ಪಡೆಯಲಾಗಿದೆ.]

ಶ್ರೀ ಎ.ಟಿ. ರಾಮಸ್ವಾಮಿ : ಸನ್ಮಾನ್ಯ ಅಧ್ಯಕ್ಷರೇ, ಈ ಉತ್ತರ ನೋಡಿ ನನಗಂತೂ ಮನಸ್ಸಿಗೆ ತುಂಬಾ ನೋವಾಗಿದೆ. ನ್ಯಾಯಾಂಗ ಇಲಾಖೆಯವರು ಹಣಕಾಸಿನ ಸ್ವಾಯತ್ತತೆಯನ್ನು ಕೇಳಿದ್ದರು. ನಮ್ಮ ಸರ್ಕಾರದವರು ಬಹಳ ವಿಶಾಲ ಮನೋಭಾವನೆಯಿಂದ ಹಣಕಾಸಿನ

ಸ್ವಾಯತ್ತತೆಯನ್ನು ನ್ಯಾಯಾಂಗ ಇಲಾಖೆಗೆ ಕೊಟ್ಟಿದ್ದೇವೆ ಅಂತ ಹೇಳಿ ಉತ್ತರವನ್ನು ಒದಗಿಸಿದ್ದಾರೆ. ಸನ್ಮಾನ್ಯ ಅಧ್ಯಕ್ಷರೇ, ತಮ್ಮ ಗಮನಕ್ಕೂ ಮತ್ತು ತಮ್ಮ ಮೂಲಕ ಸದನದ ಗಮನಕ್ಕೆ ತರುವುದಕ್ಕೆ ನಾನು ಇಚ್ಛಿಸುತ್ತಿದ್ದೇನೆ. ರಾಷ್ಟ್ರದ ಸುಪ್ರೀಂ ಕೋರ್ಟಿನ ನ್ಯಾಯಾಧೀಶರೇ ಹತ್ತು ಹಲವಾರು ಬಾರಿ ವೇದಿಕೆಗಳಲ್ಲಿ ನ್ಯಾಯಾಂಗ ಇಲಾಖೆಯಲ್ಲಿ ಭ್ರಷ್ಟಾಚಾರ ಇದೆ ಅಂತ ಹೇಳಿ ಅವರೇ ಒಪ್ಪಿಕೊಂಡಿದ್ದಾರೆ ಮತ್ತು ಹೇಳಿದ್ದಾರೆ. ಎಷ್ಟೋ ನ್ಯಾಯವಾದಿಗಳನ್ನು ಭ್ರಷ್ಟಾಚಾರದ ಆರೋಪದ ಮೇಲೆ ಸೇವೆಯಿಂದಲೇ ವಜಾ ಮಾಡಿರುವುದನ್ನು ನಾವೆಲ್ಲಾ ಕೇಳಿದ್ದೇವೆ. ಹೀಗೆ ಇರುವಾಗ ನ್ಯಾಯಾಂಗ ಇಲಾಖೆಯವರಿಗೆ ಈ ಹಣಕಾಸಿನ ಸ್ವಾಯತ್ತತೆಯನ್ನು ಕೊಟ್ಟಿದ್ದು ಎಷ್ಟರಮಟ್ಟಿಗೆ ಸರಿ? ನ್ಯಾಯಾಂಗ ಇಲಾಖೆಯವರು ಶುದ್ಧಹಸ್ತರಾಗಿ ಎಲ್ಲರೂ ಕೂಡ ಇವತ್ತು ಉಳಿದಿದ್ದಾರೆಯೆ? ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಎಲ್ಲಾ ಮೂರು ಅಂಗಗಳಿಗೂ ಕೂಡ ಎಲ್ಲಿಯಾದರೂ ಒಂದು ಕಡೆ checks and balance ಇರಲೇಬೇಕಾಗುತ್ತದೆ. ಹಾಗಾದರೆ checks and balance ನ್ಯಾಯಾಂಗ ಇಲಾಖೆಯವರಿಗೆ ಇರುವುದು ಬೇಡವೇ? "They are above the law" - ಅಂತ ಏನಾದರೂ ಸರ್ಕಾರದವರು ತಿಳಿದುಕೊಂಡಿದ್ದಾರೆಯೆ? Whether judiciary is accountable or not - ಅದನ್ನು ದಯಮಾಡಿ ಮಾನ್ಯ ಸಚಿವರು ಹೇಳಬೇಕು. ಇದರಿಂದ ಅವರಿಗೆ accountability ಇಲ್ಲದ ಹಾಗೆ ಆಗಲಿಲ್ಲವೆ? ದಯವಿಟ್ಟು ಉತ್ತರಿಸಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರನ್ನು ವಿನಂತಿಮಾಡುತ್ತಿದ್ದೇನೆ.

ಶ್ರೀ ಹೆಚ್.ಕೆ. ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಸನ್ಮಾನ್ಯ ಅಧ್ಯಕ್ಷರೇ, ಮೊಟ್ಟಮೊದಲಿಗೆ ಈ ಹಣಕಾಸಿನ ಸ್ವಾಯತ್ತತೆಯನ್ನು ನೀಡಬೇಕೆಂದು ಕೇಳಿರುವುದು ನಿಜವೆ ಎನ್ನುವಂಥ ಪ್ರಶ್ನೆ ಏನಿದೆ, ಅವರು full autonomy ಏನೂ ಕೇಳಿಲ್ಲ. ಪೂರ್ಣ ಸ್ವಾಯತ್ತತೆಯನ್ನು ಅವರು ಕೇಳಿಲ್ಲ. ತಾವು Chief Justice of India - ಅವರು ಮಾಡಿರತಕ್ಕಂಥ ಒಂದು ಪ್ರಸ್ತಾಪದ ಬಗ್ಗೆ ಹೇಳಿದಿರಿ. ಆ ವಿಷಯಕ್ಕೆ ಬರುವ ಮೊದಲು ತಮ್ಮ ಗಮನಕ್ಕೆ ತರುವುದಕ್ಕೆ ನಾನು ಇಚ್ಛೆಪಡುತ್ತೇನೆ. ಮಾನ್ಯ ಹೈಕೋರ್ಟಿನವರು ರಾಜ್ಯಸರ್ಕಾರಕ್ಕೆ ಕೇಳಿರತಕ್ಕಂಥ ವಿಚಾರ– it is for more financial powers, for conferring of more financial powers on Chief Justice of High Courts in pursuance of the resolution passed by Chief Justices' Conference held in November 1997. Chief Justices' Conferenceನಲ್ಲಿ ಏನು ಠರಾವು ಆಗಿತ್ತು, ಏನು ಒಂದು ನಿರ್ಣಯ ಆಗಿತ್ತು ಆ ಹಿನ್ನೆಲೆಯಲ್ಲಿ for more financial powers ಸಲುವಾಗಿ ರಾಜ್ಯಸರ್ಕಾರಕ್ಕೆ ಅವರು ಒಂದು ಪ್ರಸ್ತಾವನೆಯನ್ನು ಕಳುಹಿಸಿಕೊಟ್ಟಿದ್ದರು. 1997ರಲ್ಲಿ ನಡೆದಿರತಕ್ಕಂಥ ಆ ಕಾನ್ಫರೆನ್ಸ್‌ನ ನಿರ್ಣಯವನ್ನು ಅನುಷ್ಠಾನ ಮಾಡುವುದಕ್ಕೆ 1999ರಲ್ಲಿ ಪತ್ರ ಬರೆದಿದ್ದರು. 2001ರಲ್ಲಿ ನಮಗೆ ಅವರು ಮತ್ತೊಂದು ಪತ್ರವನ್ನು ಕಳಿಸಿ ಈ delegation of financial powers ಮಾಡಬೇಕು ಹಾಗೆ ಎಂದು ಹೇಳಿ ಏನು ಅವರು ಪತ್ರ ಕಳುಹಿಸಿದ್ದರೋ ಅದಕ್ಕೆ ರಾಜ್ಯ ಸರ್ಕಾರ ಸ್ಪಂದಿಸಿ 2002ರಲ್ಲಿ ಒಂದು ನೋಟಿಫಿಕೇಶನ್‌ನ್ನು ಮಾಡಿ ಕೆಲವು ಏನು ರೂಲ್ಸ್ ಇತ್ತು ಅವನ್ನು ಅಮೆಂಡ್ ಮಾಡಿ ಕೆಲವು ಹೆಚ್ಚಿನ ಅಧಿಕಾರವನ್ನು ಹೈಕೋರ್ಟಿನವರಿಗೆ ನಾವು ಕೊಟ್ಟಿದ್ದೇವೆ. ಅದು ಇರತಕ್ಕಂಥ ವಾಸ್ತವಿಕ ಪರಿಸ್ಥಿತಿ.

It is not full autonomy. There are some additional/more financial powers given to the High Court in pursuance of the resolution passed in Chief Justices' Conference.

ಶ್ರೀ ಎ.ಟಿ. ರಾಮಸ್ವಾಮಿ : ಸನ್ಮಾನ್ಯ ಅಧ್ಯಕ್ಷರೇ, ಅದನ್ನೇ ನಾನು ಕೇಳಿದ್ದು. ಈಗ more financial powers - ಅವರು ಕೇಳಿದರು ಅಂತ ಹೇಳಿ ಕೊಟ್ಟಿದ್ದೇವೆ ಎಂದು ಹೇಳಿದರು. ಈಗ ನ್ಯಾಯಾಂಗದ ಖರ್ಚುವೆಚ್ಚಕ್ಕೆ ಶಾಸಕಾಂಗ ಒಪ್ಪಿಗೆಯನ್ನು ಕೊಡಬೇಕು; ಹಣ ಮಂಜೂರು ಮಾಡಿ ಕೊಡಬೇಕು. ಹೀಗಿರುವಾಗ ನೀವು ನ್ಯಾಯಾಂಗಕ್ಕೆ more financial powers ಕೊಡುತ್ತೇವೆ ಎಂದು ಹೇಳಿದ ಮೇಲೆ ಶಾಸಕಾಂಗಕ್ಕೂ ಸ್ವಾಯತ್ತತೆಯನ್ನು ಕೊಟ್ಟುಬಿಡಿ, more financial powers ಕೊಟ್ಟುಬಿಡಿ. ಹೀಗೆ ಮಾಡುತ್ತಾ ಹೋದರೆ ಹಣಕಾಸಿನ ವ್ಯವಸ್ಥೆ ಏನಾಗುತ್ತದೆ? ಈ Voted Demands ಗಳ ಪಾವಿತ್ರ್ಯತೆ ಏನು ಉಳಿಯಿತು ಅಂತ ನೀವೇ ಹೇಳಿ. ಸ್ವಾಯತ್ತತೆಯನ್ನು ಕೊಟ್ಟಿದ್ದೇವೆ ಎಂದು ಹೇಳಿದಿರಲ್ಲಾ, ಅದರ ಕಲ್ಪನೆ ಏನೆಂದು ನೀವು ಹೇಳಿ. ಈಗ ಅದರ ಆಡಿಟ್ ಮಾಡಿಸುತ್ತಾರೆಯೆ? ಮಾಡಿಸಿದರೆ ಯಾರು ಮಾಡುತ್ತಾರೆ? ನಿಮ್ಮ ಸರ್ಕಾರದಿಂದ ಎ.ಜಿ.ಎಸ್ ಆಫೀಸಿನಿಂದ ಹೋಗಿ ಮಾಡುತ್ತಾರಾ ಅಥವಾ ಅವರೇ ಇಂಟರ್ನಲ್ ಆಡಿಟ್ ಮಾಡಿಕೊಳ್ಳುತ್ತಾರಾ? ಅದರ ಖರ್ಚು ಡೀವಿಯೇಷನ್ ಆದರೆ ಅಥವಾ ದುರುಪಯೋಗ ಆದರೆ ಶಾಸಕಾಂಗದ ಪಾತ್ರ ಏನು? ನಾವು ಆ ಡಿಮ್ಯಾಂಡ್ಸ್‌ಗೆ ಒಪ್ಪಿಗೆ ಕೊಡುತ್ತೇವಲ್ಲಾ, ವೋಟೆಡ್ ಅಂತ ಮಾಡ್ತೀವಲ್ಲಾ, ಅದರ ಕರ್ತವ್ಯ ಏನು? ಈಗ ನಾವು ಸುಮ್ಮನೆ ಒಪ್ಪಿಕೊಂಡು ಬಿಡೋದಾ? ಸುಮ್ಮನೆ ಒಪ್ಪಿಕೊಳ್ಳಬೇಕು ಅಂತಾದರೂ ಹೇಳಿಬಿಡಿ.

ಶ್ರೀ ಹೆಚ್.ಕೆ. ಪಾಟೀಲ್ : ಬಜೆಟ್‌ನಲ್ಲಿ ಅಲಾಟ್‌ಮೆಂಟ್ಸ್ ಇರುತ್ತದೆಯಲ್ಲಾ, ಆ ಅಲಾಟ್‌ಮೆಂಟ್ಸ್‌ನ್ನು ಖರ್ಚು ಮಾಡತಕ್ಕಂಥ ಸಂದರ್ಭದಲ್ಲಿ ಆ ಅಧಿಕಾರವನ್ನು ಚಲಾಯಿಸುವುದಕ್ಕೆ ಅವರಿಗೆ ಕೊಟ್ಟಿರುವುದು....

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಮಾನ್ಯ ಹೆಚ್.ಕೆ. ಪಾಟೀಲರೇ, ದಯಮಾಡಿ ಕನ್‌ಫ್ಯೂಸ್ ಮಾಡಿಕೊಳ್ಳಬೇಡಿ.

ಶ್ರೀ ವಾಟಾಳ್ ನಾಗರಾಜ್ : ಇದು ಬಹಳ ಅಪಾಯಕಾರಿ ಬೆಳವಣಿಗೆಯಾಗುತ್ತದೆ. ಈ ಸದನದ ಘನತೆ, ಗಾಂಭೀರ್ಯ, ಸದನಕ್ಕೆ ಇರತಕ್ಕಂಥ ಶಕ್ತಿಯೂ ಹೊರಟುಹೋಗುತ್ತದೆ.

ಶ್ರೀ ಕೆ.ಆರ್. ರಮೇಶ್ ಕುಮಾರ್ : ಸನ್ಮಾನ್ಯ ಮಂತ್ರಿಗಳೇ, ಈಗ ಅವರ ಮಾತಿನ ಹಿಂದೆ ಇರತಕ್ಕಂಥ ಅರ್ಥ ತಮಗೆ ಆಗಿದೆ. ತಾವು ಜಾಣತನದಿಂದ ಅರ್ಥ ಆಗಿಲ್ಲ ಎನ್ನುವ ತರಹ ಬೇರೆ ರೀತಿಯಿಂದ ಉತ್ತರ ಕೊಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೀರಿ. ಈಗ ಅವರು ಆಲ್‌ಮೋಸ್ಟ್ ನಮ್ಮಜತೆಯಲ್ಲಿ ಕಾಂಪಿಟೇಶನ್‌ನಲ್ಲಿ ಇದ್ದಾರೆ. ಇವರಿಗೂ ಮಂತ್ರಿಗಳಿಗೆ ಇದ್ದಂತೆ ಮೇಲೆ ಕೆಂಪು ಲೈಟ್ ಬೇಕಂತೆ. ಇವರಿಗೂ ಟೆಲಿಫೋನ್‌ಗಳಿಗೆ ಎಸ್.ಟಿ.ಡಿ. ಐ.ಎಸ್.ಡಿ. ಸೌಲಭ್ಯ ಬೇಕಂತೆ, ಇವರಿಗೂ ಸರ್ಕಾರದ ಮಂತ್ರಿಗಳಿಗೆ ಕಟ್ಟಿರತಕ್ಕಂಥ ಬಂಗಲೆಗಳೇ ಬೇಕಂತೆ. ಅವರು ಈ ಯುಗಕ್ಕೆ ಬಂದಿಳಿದಿದ್ದಾರೆ. ಅವರು ಕೇಳತಕ್ಕಂಥಾದ್ದು, ನಾವಿಲ್ಲಿ ಶಾಸನ ಸಭೆಯಲ್ಲಿ ಕುಳಿತು ಏನು ಡಿಮ್ಯಾಂಡ್ಸ್

ಮಂಜೂರು ಮಾಡುತ್ತಿದ್ದೇವೆ, ರಾಜ್ಯಪಾಲರು, ಜಡ್ಜಸ್, ಪ್ರಿಸೈಡಿಂಗ್ ಆಫೀಸರ್ಸ್ ಇವರುಗಳನ್ನು ಚಾರ್ಜ್ಡ್ ಎಂದು ಟ್ರೀಟ್ ಮಾಡುತ್ತಿದ್ದೇವೆ. ಉಳಿದ ಯಾರೇ ಆದರೂ ಕೂಡ, ಸದನದಲ್ಲಿ ಚರ್ಚೆ ಮಾಡಿ ನಾವು ಅನುದಾನ ಕೊಡುತ್ತಾ ಇದ್ದೇವೆ. ಇವರಿಗೆ ಸ್ಕ್ರೂಟಿನಿ ಇಲ್ಲದೇ ಹೇಗೆ ಕೊಡುತ್ತೀರಿ? ಅವರಿಗೆ ಅಕೌಂಟಬಲಿಟಿ ಇಲ್ಲವೇ? ಅವರೇ ಒಪ್ಪಿಕೊಳ್ಳುತ್ತಾ ಇದ್ದಾರಲ್ಲಾ, about the lapses, lacuna within the judiciary. Are they beyond suspicion ಇವತ್ತಿಗೆ ಇಡೀ ದೇಶದಲ್ಲಿ ಒಬ್ಬ ಜಡ್ಜ್ impeach ಆದದ್ದು ಇಲ್ಲ, ಕರಪ್ಷನ್ ಇಲ್ಲವೇ? ಮಾತನಾಡುವುದು ಬೇಡವೇ? We are not trying to indulge in critical functioning of judiciary which amounts ultimately to the contempt of the court. No. But they cannot take shelter under the clause of contempt of court and go away with these things. ಅವರೇ ಹೇಳುತ್ತಾರೆ. ಈಗ ಲೋಕಪಾಲ್ ವ್ಯವಸ್ಥೆಗೆ ತರಬೇಕು ಇವರನ್ನು ಎಂದು ಸಜೆಸ್ಟ್ ಮಾಡಿದ್ದಾರೆ. In view of these things, ಮಾನ್ಯ ರಾಮಸ್ವಾಮಿಯವರು ಕೇಳಿದಂತೆ ಹೆಚ್ಚು ಹೆಚ್ಚು ಫೈನಾನ್ಷಿಯಲ್ ಪವರ್ ಅವರಿಗೆ ಕೊಡತಕ್ಕಂಥಾದ್ದು ಸಾಧುವೇ ಅಲ್ಲವೇ?

ಶ್ರೀ ಜೆ.ಸಿ. ಮಾಧುಸ್ವಾಮಿ : ಅಧ್ಯಕ್ಷರೇ, ಇಡೀ ಸಮಾಜದಲ್ಲಿ ಟ್ಯಾಕ್ಸ್ ಕಲೆಕ್ಟ್ ಮಾಡಿದ್ದನ್ನು ವಿನಿಯೋಗ ಮಾಡಲಿಕ್ಕೆ ಶಾಸಕಾಂಗ ಅಥವಾ ಸಂವಿಧಾನಾತ್ಮಕವಾದ ಸಭೆ ಇದು If you declare autonomy ಹಾಗಾದರೆ, ರೆವಿನ್ಯೂ ಕೂಡ ಅವರೇ ಮಾಡಿಕೊಳ್ಳಬೇಕಲ್ಲಾ. ಎಸ್ಟಿಮೇಟ್ಸ್, ಡಿಮ್ಯಾಂಡ್ಸ್ ಮತ್ತು ಬಜೆಟ್ ಅವರೇ ಮಾಡಿಕೊಳ್ಳಬೇಕಾಗುತ್ತೆ. ಇಡೀ ಪಿ.ಡಬ್ಲ್ಯೂ.ಡಿ. ಇಲಾಖೆ ಅವರಿಗೆ ನೀವು ಸಪರೇಟಾಗಿ ಕೊಡಬೇಕಾಗುತ್ತೆ. ಇಡೀ ಅಕೌಂಟೆಂಟ್ ಜನರಲ್ ಆಫೀಸ್ ನೀವು ಸಪರೇಟಾಗಿ ಕೊಡಬೇಕಾಗುತ್ತೆ. When they have no their own income. how can they make their expenditure? ಈ ಸಭೆಗೆ ಈ ರಾಜ್ಯದ ಟ್ಯಾಕ್ಸ್ ಪೇಯರ್ಸ್‌ನಿಂದ ತೆಗೆದುಕೊಂಡಿದ್ದನ್ನು ಖರ್ಚು ಮಾಡಲಿಕ್ಕೆ ಸಂವಿಧಾನ ಕೊಟ್ಟಿರುವ ಹಕ್ಕನ್ನು ತಾವು ಮೊಟಕು ಮಾಡಬಾರದು. ಜ್ಯುಡಿಷಿಯರಿ ಏನು ಪ್ರಪಂಚದಿಂದ ಮೇಲೆ ಇಲ್ಲ. ಅಲ್ಲಿ ಕುಳಿತುಕೊಳ್ಳುವವರೂ ಮನುಷ್ಯರೇ. Let them be responsible to citizens in some forum and Assembly is that forum. ಯಾವುದಾದರೊಂದು ಫೋರಂ ಕೆಳಗೆ ಎಲ್ಲರೂ ಒಬ್ಬರಿಗೊಬ್ಬರಿಗೆ ಜವಾಬ್ದಾರರಾಗಲೇಬೇಕು. ದಯಮಾಡಿ, ಈ ಶಾಸನ ಸಭೆಯ ಜವಾಬ್ದಾರಿ ಒಳಗೇ ಖರ್ಚುವೆಚ್ಚಗಳನ್ನು ತಾವು ಇಡಬೇಕಾಗುತ್ತದೆ. ಈಗ ನೀವು ದೊಡ್ಡ ಗಂಡಾಂತರ ಸೃಷ್ಟಿ ಮಾಡುತ್ತಿದ್ದೀರಿ. It is against the Constitution.

ಶ್ರೀ ವಾಟಾಳ್ ನಾಗರಾಜ್ : ಇದೊಂದೇ ಅಲ್ಲ. ನಾವು ಲೋಕಾಯುಕ್ತರನ್ನೂ ಇದಕ್ಕೆ ತರಲೇಬೇಕಾಗುತ್ತೆ. ಲೋಕಸೇವಾ ಆಯೋಗವನ್ನೂ ಇದಕ್ಕೇ ತರಲೇಬೇಕಾಗುತ್ತೆ. ಮತ್ತು ನ್ಯಾಯಾಲಯವನ್ನೂ ತರಲೇಬೇಕಾಗುತ್ತೆ. ಅವರೇನೂ ಪರಮ ಪವಿತ್ರರೇನಲ್ಲ. ಏನು ಅವರದೇ ಆದಂಥ ಲೋಕವನ್ನು ನಿರ್ಮಾಣ ಮಾಡಿಕೊಂಡು ಈ ಸಭೆಯ ಘನತೆ ಮತ್ತು ಈ ಸಭೆಯ ಶಕ್ತಿಯನ್ನು ಕಳೆಯತಕ್ಕ ವಿಚಾರ ಇದೆಯಲ್ಲಾ ಅದು ಒಳ್ಳೆಯದಲ್ಲ.

ಶ್ರೀ ಕೆ. ಜಯಪ್ರಕಾಶ ಹೆಗ್ಡೆ : ಈಗ ಇರತಕ್ಕ ಅಧಿಕಾರ ಏನು ಕಡಿಮೆ ಇದೆ? ಹೆಚ್ಚು ಡೆಲಿಗೇಷನ್ ಆಫ್ ಪವರ್ ಏನು ಕೇಳಿದ್ದಾರೆ, ಅದು ಬೇಕಲ್ಲಾ. ಫೈನಾನ್ಷಿಯಲ್ ಪವರ್‌ನಲ್ಲಿ ಹೆಚ್ಚು ಅಧಿಕಾರವನ್ನು ಕೇಳಿದ್ದಾರೆಂದು ಮಂತ್ರಿಗಳು ಹೇಳಿದರು. ಅದು ಯಾವುದು ಎಂದು ಹೇಳಲಿ.

Sri. A.T. Ramaswamy :- More financial powers ಕೊಟ್ಟಿದ್ದೇವೆಂದು ಹೇಳುತ್ತಾರೆ. ಅದರ ಕಲ್ಪನೆಯಾದರೂ ಏನು ಹೇಳಿ. ಹಾಗಾದರೆ ಅವರದನ್ನು ಆಡಿಟ್ ಮಾಡಿಸುವುದು ಬೇಡವೇ? Whether they are not accountable? Checks and balances ಅವರಿಗೇನೂ ಬೇಡವೇ? ಅವರೇನು ಶುದ್ಧ ಹಸ್ತರೇ? ಅದನ್ನು ಸರ್ಕಾರ ಒಪ್ಪಿಕೊಂಡರೆ, ಶುದ್ಧ ಹಸ್ತರಾದರೂ ಚೆಕ್ಸ್ ಅಂಡ್ ಬ್ಯಾಲೆನ್ಸ್ ಇರಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ಈ ಮನೆಯಲ್ಲಿ ನಾವು ಮಂಜೂರು ಮಾಡಿಕೊಡುವಂಥ ಹಣಕ್ಕೆ, ಅದು ಜ್ಯುಡಿಷಿಯರಿ ಆಗಲೀ ಅಥವಾ ಬೇರೆ ಯಾವುದೇ ಇಲಾಖೆ ಆಗಲೀ, ಇಲ್ಲಿ ರಾಮಸ್ವಾಮಿಯವರು ಹೇಳಿದಂತೆ ಅದು ಸ್ಕ್ರೂಟಿನಿಗೆ ಬರುವುದು ಬೇಡವೇ? ಅದು ನಮ್ಮ ಹತೋಟಿಯಲ್ಲಿ ಇರಬೇಕು ತಾನೇ? ನಾವು ನ್ಯಾಯಾಧೀಶರು ಹೇಗೆ ಕೆಲಸ ಮಾಡಬೇಕೆಂಬುದನ್ನು ಮಾತನಾಡುತ್ತಾ ಇಲ್ಲ. ನಾವು ಮಂಜೂರು ಮಾಡಿಕೊಡುವಂಥ ಹಣ, ನಮ್ಮ ಚೌಕಟ್ಟಿನಲ್ಲಿ ಇರಬೇಕು. ಅವರಿಗೆ ಸ್ಪೆಷಲ್ ಪವರ್ಸ್ ಏಕೆ ಕೊಡುತ್ತೀರಿ? ಅದಕ್ಕೆ ಕಾರಣ ಏನು? ಅನೇಕ ಜನ ಪ್ರಾಮಾಣಿಕ ನ್ಯಾಯಾಧೀಶರು ಇದ್ದಾರೆ. ಈ ಸ್ಕ್ರೂಟಿನಿ ಒಳಗಡೆ ಇರಬೇಕು, ಆಡಿಟ್ ಆಗಬೇಕು ಎನ್ನುವುದರಲ್ಲಿ ಅವರ ಅಭಿಪ್ರಾಯವೂ ಇರುತ್ತೆ. ಅವರು ಯಾರೂ, ಅದರ ಮೇಲಿರಬೇಕೆಂದು ಅಪೇಕ್ಷೆಪಡುವುದಿಲ್ಲ.

ಶ್ರೀ ಹೆಚ್.ಕೆ. ಪಾಟೀಲ್ : ಸನ್ಮಾನ್ಯ ಅಧ್ಯಕ್ಷರೇ, ಒಟ್ಟು ಚರ್ಚೆ ತಪ್ಪು ಗ್ರಹಿಕೆ ಮೇಲೆ ಹೋಗುತ್ತಾ ಇದೆ. ಈಗ ನಮ್ಮ ಎದುರಿಗೆ ಇರತಕ್ಕ ಈ ವಿಷಯದಲ್ಲಿ, ನಾನು ಮೊದಲೇ ಪ್ರಸ್ತಾಪ ಮಾಡಿದೆ. More powers - ಸಲುವಾಗಿ, ಚೀಫ್ ಜಸ್ಟೀಸಸ್ ಕಾನ್‌ಫರೆನ್ಸ್‌ನವರು ಏನೊಂದು ನಿರ್ಣಯ ಮಾಡಿದರು, ಆ ಹಿನ್ನೆಲೆಯೊಳಗೆ ಹೈಕೋರ್ಟ್‌ನವರು ನಮಗೆ ಬರೆದಿರತಕ್ಕ ಪತ್ರದ ಮೇಲೆ, ಕೆಲವು ನಿಯಮಾವಳಿಗಳನ್ನು ನಾವು ಬದಲಾಯಿಸಿ ಅವರಿಗೆ ಆ ಒಂದು ಹೆಚ್ಚಿನ ಅಧಿಕಾರವನ್ನು ಕೊಟ್ಟಿದ್ದೇವೆ. ಈ ಶಾಸನ ಸಭೆಯ ಅಧಿಕಾರವನ್ನು ಯಾವ ಕಾರಣಕ್ಕೂ ಮೊಟಕುಗೊಳಿಸುವಂಥಾದ್ದು, ಈ ಪ್ರಕ್ರಿಯೆಯಿಂದ ಆಗುವುದಿಲ್ಲ. ನೀವೇನು ಹಣಕಾಸನ್ನು ಅವರಿಗೆ ಮಂಜೂರಿ ಮಾಡಿರುತ್ತೀರಿ, ಆ ಹಣದೊಳಗೇ ಅವರು ಕೆಲಸ ಮಾಡಬೇಕಾಗುತ್ತದೆ. ನಿಮಗೆ ಒಂದು ಉದಾಹರಣೆ ಹೇಳುತ್ತೇನೆ. ಯಾವುದೋ ಒಂದು ಡಿಸ್ಟ್ರಿಕ್ಟ್ ಲೆವಲ್ ಕಾನ್‌ಫರೆನ್ಸ್‌ಗೆ ಹೈಕೋರ್ಟ್ ಮಟ್ಟದಲ್ಲಿ ಮೊದಲು ಐದು ಸಾವಿರ ರೂಪಾಯಿ ಕೊಡಬಹುದೆಂದು ಇತ್ತು. ಅದನ್ನು ಈಗ ಹೆಚ್ಚುವರಿ ಮಾಡಿದ್ದಾರೆ. ಸ್ಟೇಟ್ ಕಾನ್‌ಫರೆನ್ಸ್ ಮಾಡಿದಂಥ ಸಂದರ್ಭದಲ್ಲಿ ಅದು ಕಡಿಮೆ ಇತ್ತು, ಅದನ್ನು ನಾಲ್ಕು ಲಕ್ಷ ರೂಪಾಯಿವರೆಗೆ ಹೆಚ್ಚು ಮಾಡಿರತಕ್ಕಂಥಾದ್ದು. ಈ ರೀತಿಯಾಗಿರತಕ್ಕಂಥ ಹಲವಾರು.....

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಚೀಫ್ ಜಸ್ಟೀಸ್ ಕಾನ್‌ಫರೆನ್ಸ್‌ನಲ್ಲಿ ಮಾಡಿರತಕ್ಕ ನಿರ್ಣಯ ಯಾವುದು? ಅವರು ಯಾವ ವಿಭಾಗದಲ್ಲಿ, ಯಾವ ವಿಧಾನದಲ್ಲಿ ಅಧಿಕಾರವನ್ನು ಕೇಳಿದ್ದಾರೆ. ಮತ್ತು ಯಾವ ಯಾವ ಅಧಿಕಾರ ಬೇಕೆಂದು ಕೇಳಿದ್ದಾರೆ? ಯಾವುದರಲ್ಲಿ ಅವರು ಅಟಾನಮಿ ಕೇಳಿದ್ದಾರೆ?

Sri. K.R. Rameshkumar : Did they ask for more money or for financial autonomy?

ಅಧ್ಯಕ್ಷರು : ಮಾನ್ಯ ಸಚಿವರೇ, ಬಹಳ ಜನ ಸದಸ್ಯರು ಬೇರೆ ಬೇರೆ ಪ್ರಶ್ನೆಗಳನ್ನು ಕೇಳುತ್ತಿದ್ದಾರೆ. ಇದರಲ್ಲಿ ಮೂಲಭೂತವಾದ ವಿಚಾರಗಳು ಇದ್ದ ಹಾಗೆ ಇದೆ. ಆದ್ದರಿಂದ, ಇದನ್ನು ಅರ್ಧಗಂಟೆ ಚರ್ಚೆಗೆ ಅವಕಾಶ ಮಾಡುವ ಅಗತ್ಯ ಇದೆಯೆಂದು ಅನ್ನಿಸುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಇದು ಖಂಡಿತ ಅರ್ಧ ಗಂಟೆ ಚರ್ಚೆಯಾಗಲಿ. ಸ್ವಾಯುತ್ತತೆಯನ್ನು ಕೊಡುವುದು ಈ ಸದನದ ಗೌರವಕ್ಕೆ ಮತ್ತು ಸದನದ ಶಕ್ತಿಗೆ ಕುಂದು ತರುವಹಾಗೆ ಆಗುತ್ತೆ.

ಶ್ರೀ ಹೆಚ್.ಕೆ. ಪಾಟೀಲ್ : ನಾನು ಒಂದು ಪಾಯಿಂಟ್ ಕ್ಲಿಯರ್ ಮಾಡುತ್ತೇನೆ. ನಾವು ಹೈಕೋರ್ಟಿಗೆ ಫುಲ್ ಅಟಾನಮಿ ಇನ್ ಫೈನಾನ್ಷಿಯಲ್ ಮ್ಯಾಟರ್ಸ್ ಕೊಟ್ಟಿಲ್ಲ.

Sri. K.R. Rameshkumar : Have they sought for additional financial powers or precisely have they asked for financial autonomy? That is the question. If they have asked for financial autonomy? what is the status? Is it under consideration or have you ruled out the possibility or have they just ask for additional financial powers?

Sri. H.K. Patil : There is no proposal from the High Court regarding full autonomy of financial matters. But there was a reference for more powers in this matter and that was considered right from 1999. In 1997, there was a Chief Justices' conference in which they have sought for more financial powers on which the Government of Karnataka has responded and given those additional or more financial powers. More financial power does not mean the autonomy. ದಯಮಾಡಿ, ತಾವು ಇದನ್ನು ಗಮನಿಸಬೇಕು.

Sri K.R. Rameshkumar : In which case, what is the course open ನಮ್ಮ ಪಾರ್ಲಿಮೆಂಟರಿ ಡೆಮಾಕ್ರಸಿಯಲ್ಲಿ ಡಿಮ್ಯಾಂಡ್ ಆನ್ ಗ್ರಾಂಟ್ಸ್ ಪ್ರಸೆಂಟ್ ಮಾಡುವಾಗ, you have to show all these things and ask for more money, and then allocate.

Sri H.K. Patil : No, they have not asked for more money also, They have asked for more powers. For example....

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಇಲ್ಲಿ ನೀವು ಕೊಟ್ಟಿರತಕ್ಕ ಉತ್ತರಕ್ಕೆ ಕ್ಲಾರಿಫಿಕೇಷನ್ ಕೊಟ್ಟರೆ ಸಾಕು. ತಾವು ಹೇಳಿದ್ದೀರಿ. ಹೈಕೋರ್ಟ್ ರಿಜಿಸ್ಟ್ರಾರ್ ಜನರಲ್‌ರವರಿಂದ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದಾರೆ. ಏನು ಸಲ್ಲಿಸಿದ್ದಾರೆ? ನೀವು ತೆಗೆದುಕೊಂಡಿರತಕ್ಕ ತೀರ್ಮಾನ ಏನು? ಅಧಿಸೂಚನೆ ಹೊರಡಿಸಲಾಗಿದೆ ಎಂದು ಇಲ್ಲಿ ಹೇಳಿದ್ದೀರಿ. ಏನು ಹೊರಡಿಸಿದ್ದೀರಿ ಅಷ್ಟು ಹೇಳಿ ಸಾಕು.

(ಗೊಂದಲ)

ಅಧ್ಯಕ್ಷರು : ಎಲ್ಲರೂ ಎದ್ದು ಮಾತನಾಡಿದರೆ ಹೇಗೆ? ಮೊದಲು ಮಾನ್ಯ ಮಂತ್ರಿಗಳು ಉತ್ತರ ಕೊಡಲಿ, ಅನಂತರ ಏನಾದರೂ ಕ್ಲಾರಿಫಿಕೇಷನ್ ಇದ್ದರೆ ಕೇಳಿ.

ಶ್ರೀ ಹೆಚ್.ಕೆ. ಪಾಟೀಲ್ : ಈಗೇನು ಅವರು ಪ್ರಸ್ತಾವನೆಗಳನ್ನು ಕಳುಹಿಸಿದ್ದಾರೆ ಆ ಪ್ರಸ್ತಾವನೆಗಳು ಬಹಳಷ್ಟು......

ಶ್ರೀ ವಾಟಾಳ್ ನಾಗರಾಜ್ : ಆ ಅಧಿಸೂಚನೆ ಏನು ಎಂದು ಹೇಳಿಬಿಡಲಿ.

ಅಧ್ಯಕ್ಷರು : ದಯಮಾಡಿ ಕೇಳಿ. ಅವರು ಉತ್ತರ ಹೇಳುವುದಕ್ಕೆ ಬಿಡದೆ ಮಧ್ಯಮಧ್ಯದಲ್ಲಿ ಬಾಯಿ ಹಾಕಿದರೆ ಹೇಗೆ? ಅವರು ಉತ್ತರ ಹೇಳುವುದಕ್ಕೂ ಬಿಡುವುದಿಲ್ಲ. ನಿಮ್ಮ ಪ್ರಶ್ನೆ ಏನು ಎಂಬುದೂ ಅರ್ಥವಾಗುವುದಿಲ್ಲ. ಈ ತರಹ ಆದರೆ ಹೇಗೆ? ದಯಮಾಡಿ ಕುಳಿತುಕೊಳ್ಳಿ, ಅವರು ಮೊದಲು ಉತ್ತರ ಹೇಳಲಿ, ಅನಂತರ ಕ್ಲಾರಿಫಿಕೇಷನ್ ಕೇಳಿ.

ಶ್ರೀ ಹೆಚ್.ಕೆ. ಪಾಟೀಲ್ : ಸನ್ಮಾನ್ಯ ಅಧ್ಯಕ್ಷರೇ, ಹೈಕೋರ್ಟಿನವರು delegation of financial power to Hon'ble Chief Justice of Karnataka in respect of subordinate courts ಎಂಬುದಾಗಿ ಒಂದು ಪತ್ರ ಏನು ಕಳುಹಿಸಿದ್ದರು, ಅದಕ್ಕೆ ನಾವು ಮಾಡಿರತಕ್ಕ ಕರಡು ನಿಯಮಾವಳಿಗಳನ್ನು ಬೇಕಾದರೆ ತಮ್ಮ ಕಛೇರಿಯಲ್ಲಿ ಆಸಕ್ತ ಸದಸ್ಯರಿಗೆ ಇದನ್ನು ತೋರಿಸುತ್ತೇನೆ. It is a very simple matter. ಆದ್ದರಿಂದ, ಇದು ಇಷ್ಟು ಚರ್ಚೆಗೆ ಹೋಗತಕ್ಕಂಥದ್ದಕ್ಕೆ ಕಾರಣವೇ ಇಲ್ಲ. ನಾವು ಸ್ವಾಯುತ್ತತೆಯನ್ನು ನೀಡಿಲ್ಲ, ಅವರು ಕೇಳಿಯೂ ಇಲ್ಲ. ಅವರೇನು ಹೆಚ್ಚಿನ ಅಧಿಕಾರವನ್ನು ಕೇಳಿದ್ದರು, ಒಂದು ಸಣ್ಣ ಉದಾಹರಣೆಯನ್ನು ನಿಮಗೆ ಹೇಳುತ್ತೇನೆ. ಮೊದಲೆಲ್ಲಾ, expenditure on entertainment at meetings and conferences, it was up to Rs. 10,000 for each meeting subject to a maximum. Now it has increased to maximum of one lakh rupees per annum and similar State conferenceನಲ್ಲಿ ನಾಲ್ಕು ಲಕ್ಷ ರೂಪಾಯಿಗಳವರೆಗೆ ಹೆಚ್ಚುವರಿ ಮಾಡಲಾಗಿದೆ. ಒಂದು ಉದಾಹರಣೆ ಹೇಳಿದೆ. ಈಗ ತಮಗೆ ಹೇಳುತ್ತೇನೆ. Full powers subject to availability of funds by valid appropriation or re-appropriation within sanctioned budget allotment. This is as regards installation of new telephones to the courts and residences of judicial officers. This is all within the ambit of the budget that you sanction. ನೀವೇನು ಸ್ಯಾಂಕ್ಷನ್ ಮಾಡಿರುತ್ತೀರೋ, ಅದನ್ನು ಹೊರತುಪಡಿಸಿ ಅವರಿಗೆ ಸ್ವಾಯತ್ತತೆ ಇರತಕ್ಕಂಥದ್ದು ಇಲ್ಲ ಎನ್ನುವುದನ್ನು ನಾನು ತಮ್ಮ ಗಮನಕ್ಕೆ ತರಲಿಕ್ಕೆ ಇಚ್ಛೆ ಪಡುತ್ತೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ತಮ್ಮ ಉತ್ತರವೇ confusing. ತಾವು ಸದನಕ್ಕೆ ಕೊಟ್ಟಂತಹ ಉತ್ತರ ಏನಿದೆ, ಅದನ್ನು ನಾನು ತಮಗೆ ಓದಿ ಹೇಳುತ್ತೇನೆ. ತಾವು ಅದನ್ನು ಕ್ಲಾರಿಫೈ ಮಾಡಿ. ತಾವೇನು ಹೇಳುತ್ತೀರಿ ಎಂದರೆ, ನ್ಯಾಯಾಂಗ ಇಲಾಖೆಯವರು ಹಣಕಾಸಿನ ಸ್ವಾಯತ್ತತೆಯನ್ನು ನೀಡಬೇಕೆಂದು ಕೇಳಿರುವುದು ನಿಜವೇ? ಎಂಬ ಪ್ರಶ್ನೆಗೆ 'ಹೌದು, ರಿಜಿಸ್ಟ್ರಾರ್ ಜನರಲ್, ಕರ್ನಾಟಕ

ಉಚ್ಚ ನ್ಯಾಯಾಲಯದವರು 1.10.99ರ ಪತ್ರ ಸಂಖ್ಯೆ so and so ನಲ್ಲಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದರು' ಎಂದು ಹೇಳಿದ್ದೀರಿ. Next ಉತ್ತರದಲ್ಲಿ 'ಉಚ್ಚ ನ್ಯಾಯಾಲಯವು ಸಲ್ಲಿಸಿದ್ದ ಪ್ರಸ್ತಾವನೆಯನ್ನು ಪರಿಶೀಲಿಸಿ, ಹಣಕಾಸಿನ ಸ್ವಾಯತ್ತತೆಯನ್ನು ನೀಡುತ್ತಾ, ಕರ್ನಾಟಕ ನ್ಯಾಯಾಂಗ ಇಲಾಖೆ ಆಡಳಿತಾತ್ಮಕ ವೆಚ್ಚ ನಿಯಮಗಳು 1999ನ್ನು ಅಧಿಸೂಚನೆ ಮೂಲಕ ಹೊರಡಿಸಲಾಗಿದೆ' ಎಂದು ಹೇಳಿದ್ದೀರಿ. ಅದೇನು?

ಶ್ರೀ ಹೆಚ್.ಕೆ. ಪಾಟೀಲ್ : ಮಾನ್ಯ ಜಯಪ್ರಕಾಶ್ ಹೆಗ್ಡೆಯವರು ಹೇಳಿರತಕ್ಕ ಮಾತನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ನಮ್ಮ ಉತ್ತರದಲ್ಲಿ ನಾವು ತಪ್ಪು ಮಾಡಿದ್ದೇವೆ. ಈ ಉತ್ತರವನ್ನು I prefer to withdraw Sir. ಈ ಉತ್ತರ ತಪ್ಪು ಅರ್ಥ ಹಾಗೂ ಈ ಚರ್ಚೆಯ ಹಿನ್ನೆಲೆಯೊಳಗೆ ಯಾವುದನ್ನು ಹೈಕೋರ್ಟ್‌ನವರು ಕೇಳಿಲ್ಲ ಅದನ್ನು ನಾವು ಕೇಳಿದ್ದಾರೆ, ನಾವು ಕೊಟ್ಟಿದ್ದೇವೆ, ಕೊಟ್ಟಿಲ್ಲ, ಕೊಡುತ್ತಿದ್ದೇವೆ, ಈ ಚರ್ಚೆಗೆ ಆಸ್ಪದ ಮಾಡಿಕೊಡುತ್ತದೆ, ಆದ್ದರಿಂದ ತಾವು ನನಗೆ ಒಪ್ಪಿಗೆ ಕೊಡುವುದಾದರೆ ಈ ಉತ್ತರವನ್ನು ವಾಪಸ್ ಪಡೆದುಕೊಳ್ಳುತ್ತೇವೆ. ವಿವರವಾಗಿರತಕ್ಕ ಉತ್ತರ, ತಮಗೇನು ಕೆಲವು confusions ಇದೆ ಅಥವಾ clarifications ನಮ್ಮಿಂದ ಬೇಕೆಂದು ಹೇಳುತ್ತೀರಿ ಅದಕ್ಕೆ ರೂಲ್ಸ್ ಕಾಪಿಯನ್ನೇ ತೋರಿಸಿಬಿಟ್ಟರೆ ತಮಗೆ ಅರ್ಥವಾಗುತ್ತದೆ, ಅದರಲ್ಲಿ ಅಂಥ ವಿಶೇಷತೆಯೇನೂ ಇಲ್ಲ.

ಅಧ್ಯಕ್ಷರು : ಹಾಗಾದರೆ ಇದನ್ನು ಇಲ್ಲಿಗೆ ಮುಗಿಸೋಣ. ಅದನ್ನು withdraw ಮಾಡಿಕೊಂಡಿದ್ದೇನೆಂದು ಹೇಳಿದ್ದಾರೆ, ಏನು ಉತ್ತರಕೊಟ್ಟಿದ್ದಾರೆ ಅದು controversial ಆಗಿದೆ ಅದನ್ನು withdraw ಮಾಡಿಕೊಳ್ಳಲು ಅವಕಾಶ ಕೇಳಿದ್ದಾರೆ, ನಾನು ಅದಕ್ಕೆ ಅವಕಾಶ ಕೊಟ್ಟಿದ್ದೇನೆ, ಅವರು ಅದನ್ನು withdraw ಮಾಡಿಕೊಂಡಿದ್ದಾರೆ, ಇನ್ನು ಏನಾದರೂ ಅದರ ಬಗ್ಗೆ doubts ಇದ್ದರೆ ಮಾನ್ಯ ಮಂತ್ರಿಗಳು ನನ್ನ ಕೊಠಡಿಗೆ ಬಂದು ಎಲ್ಲವನ್ನೂ ತೋರಿಸುತ್ತೇನೆ ಎಂದು ಹೇಳಿದರು.

ಶ್ರೀ ಎ.ಟಿ. ರಾಮಸ್ವಾಮಿ : ಇಲ್ಲೇ ಚರ್ಚೆ ಮಾಡೋಣ.

ಅಧ್ಯಕ್ಷರು : ಸಮಯ ಇದ್ದರೆ ಇಲ್ಲೇ ಚರ್ಚೆ ಮಾಡಬಹುದು. ಆದರೆ ಸಮಯದ ಪ್ರಶ್ನೆ ಇದೆಯಲ್ಲಾ?

ಶ್ರೀ ಎ.ಟಿ ರಾಮಸ್ವಾಮಿ : ಇನ್ನೊಂದು ದಿವಸ ಚರ್ಚೆ ಮಾಡೋಣ.

ಅಧ್ಯಕ್ಷರು : ಇನ್ನೊಂದು ದಿವಸ ಎಂದರೆ ಬೇಕಾದಷ್ಟು ಪ್ರಶ್ನೆಗಳು ಬರುತ್ತದೆ, ಅದು ಹೇಗಾಗುತ್ತದೆ? ನೀವು ನಾಲ್ಕೈದು ಜನ ಸದಸ್ಯರುಗಳು ಇದರ ಬಗ್ಗೆ ನೋಡಲು ಕಾತುರರಾಗಿದ್ದೀರಿ, ಮಾನ್ಯ ಸಚಿವರು ದಾಖಲೆಗಳನ್ನು ತೋರಿಸಲು ಸಿದ್ಧರಿದ್ದಾರೆ, ತಾವುಗಳು ಕುಳಿತುಕೊಂಡು ನೋಡಬಹುದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅದರ ಬಗ್ಗೆ ಇಲ್ಲೇ ಚರ್ಚೆಯಾಗಬೇಕು.

ಶ್ರೀ ಎ.ಟಿ. ರಾಮಸ್ವಾಮಿ : ದಾಖಲೆಗಳನ್ನು ನೋಡೋಣ, ಅನಂತರ ಚರ್ಚೆ ಮಾಡಲು ಅವಕಾಶ ಕೊಡಬೇಕು.

ಅಧ್ಯಕ್ಷರು : ಮಾನ್ಯ ಅಕ್ಕಿಯವರೇ ತಾವು ಪ್ರಶ್ನೆ ಕೇಳಿ.

ಧಾರವಾಡ ಜಿಲ್ಲೆಯಲ್ಲಿ ಕಲಾಭವನಗಳ ನಿರ್ಮಾಣ

80 (1538) ಶ್ರೀ ಅಕ್ಕಿ ಮಲ್ಲಿಕಾರ್ಜುನ ಸಹದೇವಪ್ಪ (ಕುಂದಗೋಳ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಧಾರವಾಡ ಜಿಲ್ಲೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಕಟ್ಟಿಸಿದ ಕಲಾ ಭವನಗಳ ಸಂಖ್ಯೆ ಎಷ್ಟು?

ಆ) ಈ ವರ್ಷ ಇಲಾಖೆಯಲ್ಲಿ ಧಾರವಾಡ ಜಿಲ್ಲೆಗೆ ಬಿಡುಗಡೆಯಾದ ಹಣ ಎಷ್ಟು?

ಶ್ರೀ ಎನ್ ಧರ್ಮಸಿಂಗ್ (ಮುಖ್ಯ ಮಂತ್ರಿಗಳು)

ಅ) ಧಾರವಾಡದಲ್ಲಿನ ಕರ್ನಾಟಕ ವಿದ್ಯಾರ್ಥಿಗಳ ಸಂಘದಲ್ಲಿನ ರಾ.ಹ. ದೇಶಪಾಂಡೆ ಸಭಾಂಗಣ ಡಾ: ಪಾಟೀಲ್ ಪುಟ್ಟಪ್ಪ ಸಭಾಭವನ ಕರ್ನಾಟಕ ವಿಶ್ವವಿದ್ಯಾಲಯದಲ್ಲಿನ ಗಾಂಧಿಭವನ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಡಾ: ಮಲ್ಲಿಕಾರ್ಜುನ ಮನ್ಸೂರ ಕಲಾಭವನ, ಕನ್ನಡ ಸಾಹಿತ್ಯ ಪರಿಷತ್ತಿನ ಸಾಹಿತ್ಯ ಭವನ ಮತ್ತು ಕರ್ನಾಟಕ ಕಾಲೇಜಿನಲ್ಲಿನ ಶಿರೂರು ಕಲಾಭವನ ಬಸವರಾಜ ರಾಜಗುರು ಬಯಲು ರಂಗಮಂದಿರ ಇವುಗಳು ನಡೆಯುವ ಸಾಂಸ್ಕೃತಿಕ ಕಾರ್ಯಕ್ರಗಳಿಗೆ ಲಭ್ಯವಿದೆ ಹುಬ್ಬಳ್ಳಿಯಲ್ಲಿ ಸವಾಯಿ ಗಂಧರ್ವ ಕಲಾಮಂದಿರ ಮತ್ತು ಮರಾಠ ಮಂದಿರ್ಲ ಕಲಾಭವನ ಸಹಾ ಕಾರ್ಯನಿರ್ವಹಿಸುತ್ತಿವೆ.

ಆ) ಇದಲ್ಲದೆ ಬಯಲು ರಂಗಮಂದಿರ ನಿರ್ಮಾಣ ಯೋಜನೆಯಡಿ, ಮಾಳ ಮಡ್ಡಿಯಲ್ಲಿ ಬಯಲು ರಂಗಮಂದಿರ ನಿರ್ಮಾಣಕ್ಕೆ ಮೊದಲ ಕಂತಾಗಿ 50,000–00 ಮತ್ತು ಜಿಲ್ಲೆಯ ವಿವಿಧ ಪ್ರದೇಶಗಳಲ್ಲಿ 7 ಬಯಲು ರಂಗಮಂದಿರಗಳನ್ನು ನಿರ್ಮಿಸಲು 4,00,000–00 ಒಟ್ಟು ಸಹಾಯಧನ ನೀಡಿದೆ.

ಶ್ರೀ ಅಕ್ಕಿಮಲ್ಲಿಕಾರ್ಜುನ ಸಹದೇವಪ್ಪ : ಮಾನ್ಯ ಅಧ್ಯಕ್ಷರೆ, ಕನ್ನಡ ಸಂಸ್ಕೃತಿ ಇಲಾಖೆಯಿಂದ ಕಟ್ಟಿಸಿದ ಕಲಾ ಭವನಗಳು ಕೇವಲ ಪಟ್ಟಣ ಪ್ರದೇಶಕ್ಕೆ ಸಂಬಂಧಪಟ್ಟಿಲ್ಲ, ಇದು ಎಲ್ಲಾ ಗ್ರಾಮೀಣ ಪ್ರದೇಶಕ್ಕೂ ಸಂಬಂಧಪಡುತ್ತದೆ. ಪ್ರಶ್ನೆಗೆ ಹುಬ್ಬಳ್ಳಿ ಧಾರವಾಡದಲ್ಲಿ ಕಲಾ ಭವನವನ್ನು ಕಟ್ಟಿದ್ದೇವೆಂದು ಉತ್ತರ ಕೊಟ್ಟಿದ್ದೀರಿ. ಇವತ್ತು ಕನ್ನಡ ಮತ್ತು ಸಂಸ್ಕೃತಿ ಉಳಿಯಬೇಕಾದರೆ ಗ್ರಾಮೀಣ ಪ್ರದೇಶದಲ್ಲಿ ಇಂಥ ಸಂಸ್ಕೃತಿಯ ಕಲಾ ಭವನಗಳನ್ನು ಕಟ್ಟಬೇಕಾಗಿದೆ. ಶಾಸಕರ ಅನುದಾನದಲ್ಲಿ ಕಲಾ ಭವನವನ್ನು ನಾವು ಕಟ್ಟಬಹುದಿತ್ತು. ಆದರೆ ಈಗ ಶಾಸಕರ ಅನುದಾನವನ್ನೂ ಬಂದ್ ಮಾಡಿದ್ದೀರಿ. ಕಲಾ ಭವನಗಳನ್ನು ಗ್ರಾಮೀಣ ಪ್ರದೇಶದಲ್ಲಿ ಮಾಡಿದರೆ ಗ್ರಾಮೀಣ ಭಾಗದಲ್ಲಿರುವ ಕಲಾವಿದರಿಗೆ ಅನುಕೂಲ ಮಾಡಿಕೊಟ್ಟಂತೆ ಆಗುತ್ತದೆ. ಗ್ರಾಮೀಣ ಪ್ರದೇಶದಲ್ಲಿ ಆ ರೀತಿ ಕಲಾ ಭವನ ಕಟ್ಟಲು ಹಣವನ್ನು ಬಿಡುಗಡೆ ಮಾಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳುತ್ತಿದ್ದೇನೆ.

ಶ್ರೀ ಧರ್ಮಸಿಂಗ್ : ಮಾನ್ಯ ಅಧ್ಯಕ್ಷರೆ, ಧಾರವಾಡ ಜಿಲ್ಲೆಯಲ್ಲಿ ಕಲಾಭವನದ ಬಗ್ಗೆ ಕೇಳಿದ್ದಾರೆ. ಐದು ಕಲಾಭವನಗಳು ಈಗಾಗಲೇ ಇದೆ. ಹುಬ್ಬಳ್ಳಿಯಲ್ಲಿ ಎರಡು ಕಲಾ ಮಂದಿರಗಳು ಇದೆ. ಮಾಳ ಮಡ್ಡಿಯಲ್ಲಿ ಐವತ್ತು ಸಾವಿರ ರೂಪಾಯಿಗಳನ್ನು ಬಯಲು ರಂಗಮಂದಿರ ನಿರ್ಮಾಣಕ್ಕೆ ಕೊಟ್ಟಿದ್ದೇವೆ. ಮತ್ತು ರೊಟ್ಟಿಗಾಡ, ಕಲಗಟಗಿ, ರಾಯನಾಡ್, ದರ್ಶಾಪುರ್, ಮನ್‌ಸೂರ್ ಮತ್ತು ಅಮೀವುಲ್‌ಬಾವಿ ಇಲ್ಲಿ ರಂಗ ಮಂದಿರ ನಿರ್ಮಿಸಲು ನಾಲ್ಕು ಲಕ್ಷ ರೂಪಾಯಿಗಳ ಧನಸಹಾಯವಾಗಿದೆ. ಜಿಲ್ಲೆಗೆ ಒಂದು ರಂಗ ಮಂದಿರ ಕೊಡಬೇಕೆಂಬುದು ಸರ್ಕಾರದ ಉದ್ದೇಶವಿದೆ.

ಕರ್ನಾಟಕದ ಸುವರ್ಣ ಜಯಂತಿಯ ಅಂಗವಾಗಿ ಪ್ರತಿಯೊಂದು ಜಿಲ್ಲೆಯಲ್ಲಿ ರಂಗ ಮಂದಿರವನ್ನು ಕಟ್ಟಿಸಬೇಕೆಂದು ಆಗಿದೆ. ಇದು ಪ್ರತಿಯೊಂದು ಜಿಲ್ಲೆಯಲ್ಲಿ ಮುಗಿಯುತ್ತಾ ಬರುತ್ತಿದೆ. ಇಲ್ಲೂ ಸಹ ನಾವು ಕೊಡುತ್ತಿದ್ದೇವೆ. ಇಲ್ಲಿ ವಿಶೇಷವಾಗಿ ಪಾಟೀಲ್‌ಪುಟ್ಟಪ್ಪನವರ ಹೆಸರಿನಲ್ಲಿರುವ ಕಲಾ ಮಂದಿರಕ್ಕೆ ಬೇರೆ ಕಡೆ ಕೂಡ ಹೆಚ್ಚಿನ ಹಣವನ್ನು ಕೊಟ್ಟು ಮಾಡಿದ್ದೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ಅವರು ಏನು ಪ್ರಶ್ನೆ ಕೇಳಿದ್ದಾರೆಂದರೆ, ಧಾರವಾಡ ಜಿಲ್ಲೆ ಸಾಂಸ್ಕೃತಿಕವಾಗಿ ಗ್ರಾಮೀಣ ಭಾಗದಲ್ಲಿ ಬೆಳೆದಿರುವಂಥ ಜಿಲ್ಲೆ. ಧಾರವಾಡ ಮತ್ತು ಹುಬ್ಬಳ್ಳಿಯಲ್ಲಿರುವ ಮಂದಿರಗಳ ಬಗ್ಗೆ ಮಾಹಿತಿ ಕೊಟ್ಟಿದ್ದೀರಿ, ಅದು ನಿಜ. ಗ್ರಾಮೀಣ ಪ್ರದೇಶಕ್ಕೆ ಮತ್ತು ತಾಲ್ಲೂಕು ಕೇಂದ್ರಗಳಿಗೆ ಅಂಥ ಕಡೆ ಏನಾದರೂ ಈ ರೀತಿ ಕಲಾ ಮಂದಿರಗಳನ್ನು ಮಾಡಿ ಅಲ್ಲಿನ ಕಲೆಯನ್ನು ಉಳಿಸಲು ಆಗುತ್ತದೆಯೇ ಎಂದು ಅವರು ಕೇಳಿದ್ದಾರೆ, ಅದಕ್ಕೆ ಸ್ಪಷ್ಟವಾದ ಉತ್ತರವನ್ನು ತಾವು ಕೊಡಬೇಕು.

ಶ್ರೀ ಧರ್ಮಸಿಂಗ್ : ಧಾರವಾಡ ಜಿಲ್ಲೆಯಲ್ಲಿರುವ ಬಗ್ಗೆ ಹೇಳಿದ್ದೇನೆ. ಹುಬ್ಬಳ್ಳಿ ಮತ್ತು ಬೇರೆ ಬೇರೆ ಕಡೆಗೆ ಎಷ್ಟು ಹಣವನ್ನು ಕೊಟ್ಟಿದ್ದೇವೆ ಎಂಬ ಬಗ್ಗೆ ಹೇಳಿದ್ದೇನೆ. ಅದರಲ್ಲಿ ಮನ್ಸೂರ್, ಅಮೀಮ್‌ಬಾವಿ, ರೆಟ್ಟಿವಾಡದಲ್ಲಿದೆ ಕಲಘಟಗಿಯಲ್ಲಿದೆ, ರಾಯನಾಡ್‌ದಲ್ಲಿದೆ, ದರ್ಶಾಪುರ್‌ನಲ್ಲಿದೆ, ಇವೆಲ್ಲಾ ರಂಗ ಮಂದಿರಕ್ಕೆ ನಾಲ್ಕು ಲಕ್ಷ ರೂಪಾಯಿ ಧನ ಸಹಾಯ ಕೊಟ್ಟಿದ್ದೇವೆ.

ಶ್ರೀ ಅಕ್ಕಿಮಲ್ಲಿಕಾರ್ಜುನ ಸಹದೇವಪ್ಪ : ಧಾರವಾಡ ಜಿಲ್ಲೆಯ ಬಗ್ಗೆ ಹೇಳಿದ್ದಾರೆ. ನಾಲ್ಕೈದು ಲಕ್ಷ ರೂಪಾಯಿಗಳು ಎಲ್ಲಾದಕ್ಕೂ ಸಾಕಾಗುವುದಿಲ್ಲ. ಎಲ್ಲಾ ಗ್ರಾಮಗಳಿಗೂ ಮಾಡಲು ಕನಿಷ್ಟ ಒಂದು ಕೋಟಿ ರೂಪಾಯಿಯಾದರೂ ಬಿಡುಗಡೆ ಮಾಡಬೇಕು.

ಅಧ್ಯಕ್ಷರು : ಈಗ ಲಿಖಿತ ಮೂಲಕ ಉತ್ತರಿಸುವ.....

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ತಡೆಹಿಡಿಯಲಾದ ಪ್ರಶ್ನೆಗಳಲ್ಲಿ ನನ್ನ ಪ್ರಶ್ನೆಯನ್ನು ಕೇಳುತ್ತೇನೆ, ಗ್ರಾಮೀಣ ಕೃಪ ಬಹಳ ಮಹತ್ವದ್ದು ಒಂದು ಐದು ನಿಮಿಷಗಳಲ್ಲಿ ಕೇಳಿಬಿಡುತ್ತೇನೆ.

ಅಧ್ಯಕ್ಷರು : ಪ್ರಶ್ನೋತ್ತರ ಆರಂಭವಾಗಿ ಈಗಾಗಲೇ ಎರಡು ಗಂಟೆಗಳಾಗಿವೆ. ಇನ್ನೂ ಮೂರು ಆ ರೀತಿ ಪ್ರಶ್ನೆಗಳು ಇದ್ದಾವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅವಕಾಶ ಕೊಟ್ಟುಬಿಡಿ. ನೇರವಾಗಿ ಪ್ರಶ್ನೆ ಕೇಳಲು ಅವಕಾಶ ಕೊಟ್ಟುಬಿಡಿ.

ಅಧ್ಯಕ್ಷರು : ಇದೇ ರೀತಿಯಾದರೆ ಬಹಳ ಕಷ್ಟವಾಗುತ್ತದೆ. ಇವತ್ತೇನೋ ನಿಜ ಮೂರು ಪ್ರಶ್ನೆಗಳು ಇದ್ದಾವೆ, ಅವಕಾಶ ಕೊಟ್ಟುಬಿಡುತ್ತೇನೆ, ಆದರೆ ಇದೇ ರೀತಿ ಪ್ರತಿ ದಿನ ಆದರೆ ಕಷ್ಟವಾಗುತ್ತದೆ.

ವಿಧಾನಸೌಧ ಬಡಾವಣೆಯಿಂದ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಗಳ ಬಸ್‌ಗಳನ್ನು ವೇಳಾಪಟ್ಟಿಯಂತೆ ಓಡಿಸುವ ಬಗ್ಗೆ

(889) ಶ್ರೀ ಬಸವರಾಜ ಭೀಮಪ್ಪ ಹಿತ್ನಾಳ್ ಕೆ. : ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರು ನಗರದ ದಾಸರಹಳ್ಳಿ ನಗರ ಸಭೆ ವ್ಯಾಪ್ತಿಯಲ್ಲಿ ಬರುವ ವಿಧಾನಸೌಧ ಬಡಾವಣೆಯಿಂದ ಕೃಷ್ಣ ರಾಜೇಂದ್ರ ಮಾರುಕಟ್ಟೆ ಬೆಂಗಳೂರು ಬಸ್ ನಿಲ್ದಾಣಕ್ಕೆ ಓಡಾಡುತ್ತಿರುವ

ಬಿ.ಎಂ.ಟಿ.ಸಿ. ಬಸ್ಸುಗಳು ವೇಳಾಪಟ್ಟಿಯಂತೆ ಓಡಿಸದೇ ಇರುವುದರಿಂದ ಸದರಿ ಬಡಾವಣೆಯ ಹಾಗೂ ಸುತ್ತ ಮುತ್ತಲಿನ ಬಡಾವಣೆಯ ನಿವಾಸಿಗಳಿಗೆ ಅದರಲ್ಲೂ ಮುಖ್ಯವಾಗಿ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ರೀತಿ ತೊಂದರೆಯಾಗುತ್ತಿರುವುದನ್ನು ಸರಿಪಡಿಸುವಂತೆ ನಿವಾಸಿಗಳು ಹಾಗೂ ಸಾರ್ವಜನಿಕರು ಬಿ.ಎಂ.ಟಿ.ಸಿ. ಪ್ರಧಾನ ಸಂಚಾರಿ ನಿಯಂತ್ರಕರಿಗೆ ಹಾಗೂ ನಿರ್ದೇಶಕರುಗಳಿಗೆ ಸಾಕಷ್ಟು ಬಾರಿ ದೂರುಗಳನ್ನು ನೀಡಿದ್ದರೂ ಸಹ ಇದುವರೆಗೂ ಯಾವುದೇ ಕ್ರಮ ಕೈಗೊಳ್ಳದಿರಲು ಕಾರಣವೇನು;

ಇ) ಬಸ್‌ಗಳ ಚಾಲಕರು ಹಾಗೂ ನಿರ್ವಾಹಕರು ವೇಳಾಪಟ್ಟಿಯಂತೆ ಬಸ್‌ಗಳನ್ನು ಓಡಿಸಲು ಪ್ರಯಾಣಿಕರು ಕೇಳಿಕೊಂಡಾಗ ಪ್ರಯಾಣಿಕರೊಂದಿಗೆ ದುರ್ವರ್ತನೆಯಿಂದ ವರ್ತಿಸುತ್ತಿರುವ ಬಗ್ಗೆ ದೂರುಗಳನ್ನು ಸಲ್ಲಿಸಿದ್ದಾಗ್ಯೂ ಸಹ ಅಂತಹವರ ಮೇಲೆ ಯಾವುದೇ ರೀತಿಯ ಕ್ರಮ ಕೈಗೊಳ್ಳದೇ ಇರಲು ಕಾರಣವೇನು;

ಈ) ಪ್ರಯಾಣಿಕರಿಗೆ ಏನಾದರೂ ತೊಂದರೆಯಾದಲ್ಲಿ ದೂರವಾಣಿಯ ಮೂಲಕ ನೇರವಾಗಿ ದೂರು ಸಲ್ಲಿಸಿದಲ್ಲಿ ತತ್‌ಕ್ಷಣ ಕ್ರಮ ಕೈಗೊಳ್ಳಲಾಗುವುದೆಂದು ದಿನಪತ್ರಿಕೆಗಳಲ್ಲಿ ಪ್ರಕಟಿಸುತ್ತಿರುವುದು ನಿಜವಲ್ಲವೇ ಹಾಗಿದ್ದಲ್ಲಿ, ಇದುವರೆವಿಗೂ ಯಾವುದೇ ರೀತಿಯ ಕ್ರಮ ಕೈಗೊಳ್ಳದೇ ಇರಲು ಕಾರಣವೇನು;

ಉ) ಹಾಗಿದ್ದಲ್ಲಿ, ಈಗಲಾದರೂ ಸರ್ಕಾರದವರು ಇಂತಹ ಅಧಿಕಾರಿಗಳು ಹಾಗೂ ಬಸ್‌ಗಳ ಚಾಲಕ/ನಿರ್ವಾಹಕರ ಮೇಲೆ ಶಿಸ್ತಿನ ಕ್ರಮ ಕೈಗೊಂಡು ವೇಳಾಪಟ್ಟಿಯಂತೆ ಬಸ್‌ಗಳನ್ನು ಓಡಿಸಲು ಕ್ರಮ ಕೈಗೊಳ್ಳುವುದೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ(ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ಹೌದು.

ಆ) ವಿಧಾನಸೌಧ ಲೇಔಟ್‌ನ ಪ್ರಯಾಣಿಕರಿಂದ ಒಂದು ದೂರನ್ನು ಸ್ವೀಕರಿಸಲಾಗಿದೆ. ಶಿವಾನಂದಾ ಸ್ಟೋರ್ಸ್ ಬಳಿ ಕೆಳ ಸೇತುವೆ ಕೆಲಸ ಪ್ರಗತಿಯಲ್ಲಿರುತ್ತದೆ. ಆದ್ದರಿಂದ, ವಿಧಾನಸೌಧ ಲೇಔಟ್‌ನಿಂದ ಕೃ.ರಾ.ಮಾರುಕಟ್ಟೆಗೆ ಕಾರ್ಯಾಚರಣೆಯಾಗುತ್ತಿದ್ದ ಮಾರ್ಗ ಸಂಖ್ಯೆ. 77–ಡಿ ಬಸ್ಸನ್ನು ಮತ್ತು ಶಿವಾಜಿನಗರಕ್ಕೆ ಕಾರ್ಯಾಚರಣೆಯಾಗುತ್ತಿದ್ದ. 79–ಜಿ ಬಸ್ಸನ್ನು ಮಾರ್ಗ ಬದಲಾವಣೆ ಮಾಡಿ ಆನಂದರಾವ್ ಸರ್ಕಲ್ ಮೂಲಕ ಕಾರ್ಯಾಚರಣೆ ಮಾಡುತ್ತಿದ್ದು, ಇದರಿಂದ 2 ಕಿ.ಮೀ. ಮಾರ್ಗದ ದೂರ ಹೆಚ್ಚಾಗಿ ಪ್ರತಿ ಸುತ್ತುವಳಿಗೆ 5 ರಿಂದ 10 ನಿಮಿಷ ಸಂಚಾರದ ವೇಳೆ ಹೆಚ್ಚಾಗಿ ಬೇಕಾಗುತ್ತದೆ. ಅಲ್ಲದೆ, ರಸ್ತೆಗಳಲ್ಲಿ ಸಂಚಾರದ ಒತ್ತಡ ಮತ್ತು ಸಿಗ್ನಲ್ ದೀಪಗಳಿಂದ ನಿಗದಿತ ವೇಳೆಗೆ ತಲುಪುವುದು ಕಷ್ಟವಾಗಿರುತ್ತದೆ. ಈ ಕಾರಣದಿಂದ ಈ ಬಸ್ಸುಗಳ ಕಾರ್ಯಾಚರಣೆ ವೇಳಾ ಪಟ್ಟಿಯ ಪ್ರಕಾರ ಆಗುವುದರಲ್ಲಿ ವ್ಯತ್ಯಾಸವಿರುತ್ತದೆ. ಒಬ್ಬರು ಸಂಚಾರ ನಿಯಂತ್ರಕರನ್ನು ನಿಯೋಜಿಸಿ ಈ ಮಾರ್ಗಗಳ ಬಸ್ಸುಗಳ ಕಾರ್ಯಚರಣೆಯನ್ನು ಉಸ್ತುವಾರಿ ಮಾಡಿ ಸರಿಪಡಿಸಲಾಗುವುದು.

ಇ) ಈ ಬಗ್ಗೆ ನಿರ್ದಿಷ್ಟ ದೂರು ಬಂದಿರುವುದಿಲ್ಲ. ಚಾಲಕರು ನಿರ್ವಾಹಕರು ಪ್ರಯಾಣಿಕರೊಂದಿಗೆ ಅನುಚಿತವಾಗಿ ವರ್ತಿಸಿರುವ ಬಗ್ಗೆ ಯಾವುದೇ ನಿರ್ದಿಷ್ಟ ದೂರು ಬಂದಲ್ಲಿ ಕೂಡಲೇ ಅವರ ಮೇಲೆ ಕ್ರಮ ತೆಗೆದುಕೊಳ್ಳಲಾಗುವುದು.

ಈ) ಹೌದು. ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ. ದೂರವಾಣಿ ಮೂಲಕ ಯಾವುದೇ ನಿರ್ದಿಷ್ಟ ದೂರು ಬಂದಲ್ಲಿ ಕೂಡಲೇ ಅಗತ್ಯ ಕ್ರಮ ತೆಗೆದುಕೊಳ್ಳಲಾಗುವುದು. ಆದರೆ, ಈ ವಿಷಯದಲ್ಲಿ

ನಿರ್ದಿಷ್ಟವಾದ ದೂರು ದೂರವಾಣಿ ಮುಖಾಂತರ ಬಂದಿರುವುದಿಲ್ಲ.

ಉ) ವಿಧಾನಸೌಧ ಲೇಔಟ್‌ನಿಂದ ಕೃ.ರಾ. ಮಾರುಕಟ್ಟೆ, ಶಿವಾಜಿನಗರ, ಕೆಂಪೇಗೌಡ ಬಸ್ ನಿಲ್ದಾಣಕ್ಕೆ ಕಾರ್ಯಾಚರಣೆಯಾಗುವ ಬಸ್ಸುಗಳ ವೇಳಾ ಪಟ್ಟಿಯನ್ನು ಬದಲಾವಣೆ ಮಾಡುವ ಬಗ್ಗೆ ಕೂಡಲೇ ಕ್ರಮ ತೆಗೆದುಕೊಂಡು ಒಬ್ಬರು ಸಂಚಾರ ನಿಯಂತ್ರಕರನ್ನು ನಿಯೋಜಿಸಿ ಈ ಮಾರ್ಗಗಳ ಕಾರ್ಯಾಚರಣೆಯನ್ನು ಉಸ್ತುವಾರಿ ಮಾಡಿ ಸರಿಪಡಿಸಲಾಗುವುದು

ಚಾಲಕರ, ನಿರ್ವಾಹಕರ ಮತ್ತು ಅಧಿಕಾರಿಗಳ ಮೇಲೆ ಯಾವುದೇ ನಿರ್ದಿಷ್ಟ ದೂರು ಬಂದಲ್ಲಿ ಅದರ ಬಗ್ಗೆ ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಕೆ. ಬಸವರಾಜ ಭೀಮಪ್ಪ ಹಿತ್ನಾಳ್ : ಮಾನ್ಯ ಅಧ್ಯಕ್ಷರೆ, ಬೆಂಗಳೂರು ನಗರದ ದಾಸರಹಳ್ಳಿ ನಗರ ಸಭೆ ವ್ಯಾಪ್ತಿಯಲ್ಲಿ ಬರುವ ವಿಧಾನಸೌಧ ಬಡಾವಣೆಯಿಂದ ಕೃಷ್ಣ ರಾಜೇಂದ್ರ ಮಾರುಕಟ್ಟೆ ಬೆಂಗಳೂರು ಬಸ್ ನಿಲ್ದಾಣಕ್ಕೆ ಓಡಾಡುತ್ತಿರುವ ಬಿ.ಎಂ.ಟಿ.ಸಿ. ಬಸ್ಸುಗಳು ಸರಿಯಾದ ಸಮಯಕ್ಕೆ ಬಾರದಿರುವುದರಿಂದ ಅಲ್ಲಿಂದ ಬರತಕ್ಕ ಎಲ್ಲಾ ವಿದ್ಯಾರ್ಥಿಗಳಿಗೆ ಸಾಕಷ್ಟು ತೊಂದರೆಯಾಗುತ್ತದೆ. ಈ ರೀತಿ ತೊಂದರೆಯಾಗುವುದನ್ನು ಸರಿಪಡಿಸುವಂತೆ ಅನೇಕ ಸಲ ಅಲ್ಲಿನ ನಿವಾಸಿಗಳು ಹಾಗೂ ಸಾರ್ವಜನಿಕರು ಬಿ.ಎಂ.ಟಿ.ಸಿ. ಪ್ರಧಾನ ಸಂಚಾರಿ ನಿಯಂತ್ರಕರಿಗೆ ದೂರನ್ನು ಸಲ್ಲಿಸಿದರೂ ಯಾವುದೇ ಕ್ರಮ ಜರುಗಿಸಿರುವುದಿಲ್ಲ. ಬಸ್ ಚಾಲಕರು ನಿರ್ವಾಹಕರು ವೇಳಾಪಟ್ಟಿಯಂತೆ ಬಸ್ಸುಗಳನ್ನು ಓಡಾಡಿಸುವಂತೆ ಪ್ರಯಾಣಿಕರು ಕೇಳಿಕೊಂಡಾಗ ದುರ್ವರ್ತನೆಯಿಂದ ವರ್ತಿಸಿದ್ದರ ಬಗ್ಗೆ ದೂರನ್ನು ಸಲ್ಲಿಸಿದ್ದಾರೆ, ಅಂಥವರ ಮೇಲೆ ಯಾವುದೇ ಕ್ರಮ ಜರುಗಿಸಿರುವುದಿಲ್ಲ. ಪ್ರಯಾಣಿಕರಿಗೆ ಏನಾದರೂ ತೊಂದರೆಯಾದಲ್ಲಿ ದೂರವಾಣಿಯ ಮೂಲಕ ನೇರವಾಗಿ ದೂರು ಸಲ್ಲಿಸಿದ್ದಲ್ಲಿ ತಕ್ಷಣ ಕ್ರಮ ಕೈಗೊಳ್ಳಲಾಗುವುದೆಂದು ದಿನಪತ್ರಿಕೆಗಳಲ್ಲಿ ಪ್ರಕಟಿಸಿರುವುದು ನಿಜವಲ್ಲವೇ? ಇದಕ್ಕೂ ಕೂಡ ಸರ್ಕಾರ ಯಾವುದೇ ರೀತಿಯ ಕ್ರಮ ತೆಗೆದುಕೊಂಡಿರುವುದಿಲ್ಲ. ಆ ಭಾಗದಲ್ಲಿರುವ ಜನರಿಗೆ ಅನುಕೂಲವಾಗುವ ರೀತಿಯಲ್ಲಿ ಮಾನ್ಯ ಸಚಿವರು ಆ ಭಾಗಕ್ಕೆ ಹೆಚ್ಚಿನ ಬಸ್ಸುಗಳನ್ನು ಹಾಕಲು ಅವಕಾಶ ಮಾಡಿಕೊಡಬೇಕಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಅವರು ಕೇಳಿರುವ ಪ್ರಶ್ನೆಗೆ ನಾವು ಈಗಾಗಲೆ ಉತ್ತರ ಕೊಟ್ಟಿದ್ದೇವೆ. ದೂರುಗಳು ಬಂದಿವೆಯೇ ಎಂಬ ಪ್ರಶ್ನೆಗೆ ಹೌದು ಎಂದು ಉತ್ತರ ಕೊಟ್ಟಿದ್ದೇವೆ. ಅದಕ್ಕೆ ಕಾರಣ ಏನೆಂದರೆ, ಶಿವಾನಂದ ಸರ್ಕಲ್ ಹತ್ತಿರ ಹೊಸ ಅಂಡರ್ ಗ್ರೌಂಡ್ ಬ್ರಿಡ್ಜ್ ಆಗುತ್ತಿದೆ. ಅದು ಪೂರ್ಣವಾದಮೇಲೆ ಬಸ್ಸು ನೇರವಾಗಿ ಆ ಕಡೆಗೆ ಹೋಗಲು ಸಾಧ್ಯವಾಗುತ್ತದೆ. ಕೆಂಪೇಗೌಡ ಬಸ್ ನಿಲ್ದಾಣದಿಂದ ಶಾಸಕರ ಲೇಔಟ್ ಕಡೆಗೆ ಹೋಗತಕ್ಕ ಬಸ್ಸುಗಳೇನು ಹೆಚ್ಚಿನ ಸಮಯವನ್ನು ತೆಗೆದುಕೊಳ್ಳುತ್ತಿವೆ ಅದು ಕಡಿಮೆಯಾಗುತ್ತದೆ. ಅದಕ್ಕಾಗಿ ಅಲ್ಲಿ ಹೊಸದಾಗಿ ಕಂಟ್ರೋಲರ್‌ರನ್ನು ನೇಮಿಸಿ ವೇಳಾಪಟ್ಟಿಯ ಪ್ರಕಾರವೇ ಹೋಗಬೇಕು. ಆದಷ್ಟು ತೊಂದರೆ ಕಡಿಮೆಯಾಗಬೇಕು, ಎಂದು night halt bus ನ್ನೇ ವಿಶೇಷವಾಗಿ ಮಾಡಿಸಿ ಆ ಒಂದು ಮಾರ್ಗದಲ್ಲಿ ಸುಸೂತ್ರವಾಗಿ ನಡೆಸಲು ಬಯಸುತ್ತೇವೆ. ಅದಕ್ಕೆ ಆದೇಶ ಕೊಟ್ಟಿದ್ದೇವೆ. ಅದು ಇಂದಿನಿಂದ ಪ್ರಾರಂಭವಾಗುತ್ತದೆ.

ವಿಷಯ : ಗ್ರಾಮೀಣ ಕೃಪಾಂಕದ ಆಧಾರದ ಮೇಲೆ ನೌಕರಿ ಪಡೆದುಕೊಂಡವರ ಪುನರ್ ನೇಮಕಾತಿ ಬಗ್ಗೆ.

892 Sri. S.S. Patil : will the chief Minister be please to State.

A) What is the number of rural weightage unemployed candidates in the State;

B) Why has the Government not provided employment to these candidates, though it had agreed to provide emplovment; when will it be given;

C) What is the No. of rural weightage un-employed candidates in Dharwad, Gadag and Haveri Districts(particulars be given);

D) Whether the officers of Education Department and Other Departments are responsible to issue orders of appointment a few and not issuing the orders of appointment to others in Dharwad, Gadag and Haveri Districts. If so, what action would be taken?

Sri. Dharam Singh (Chief Minister)

A) The Number of persons yet to be reappointed under Karnataka Civil Services (Absorption of Persons appointed to the State Civil Services with the benefit of Rural Weightage) (Special) Rules 2003 is about 600.

b) In writ Petition No. 536/2003 and 562/2003 filed by Sri Mohan K.N. & Others and Sri Kiran Vishnu Kamble & Others respectively, the Hon'ble Supreme Court by its order dated 12-12-2003 has stayed the operation of the aforesaid Rules. The case had come up for hearing on 17-12-04 and the Hon'ble Supreme Court has transferred all the related cases to Karnataka Administrative Tribunal, Further action will be taken in accordance with the orders of KAT.

c) Number of Primary School Teachers to be reappointed in accordance with the aforesaid rules in Dharwad, Gadag and Haveri districts, is 182.

d) There were no vacant posts to reappoint the rural weightage terminated candidates, in accordance with the aforesaid rules, in

Dharwad, Gadag and Haveri districts. When the proposal to creat supernumerary posts to reappoint these candidates was under consideration, the Supreme Court in its order dated 12-12-2003 stayed the operation of the aforesaid rules, as such it has not been possible to reappoint these candidates.

ಶ್ರೀ ಎಸ್.ಎಸ್. ಪಾಟೀಲ್ : ರಾಜ್ಯದಲ್ಲಿ ಗ್ರಾಮೀಣ ಕೃಪಾಂಕ ವಂಚಿತ ನಿರುದ್ಯೋಗಿ ನೌಕರರ ಸಂಖ್ಯೆ ಎಷ್ಟೆಂದು ಕೇಳಿದರೆ 600 ಜನ ಎಂದು ಹೇಳಿದ್ದಾರೆ, ಅಂದರೆ ಗ್ರಾಮೀಣ ಕೃಪಾಂಕದಿಂದ ಸುಮಾರು 14000 ಜನರಿಗೆ ನೌಕರಿಯಾಗಿದೆ, ಕೇವಲ 600 ಜನರು ವಂಚಿತರಾಗಿದ್ದಾರೆ, ಹೈಕೋರ್ಟ್ ಆದೇಶ ಪೂರ್ವದಲ್ಲಿ ಏನು ಆದೇಶ ಮಾಡಬೇಕಾಗಿತ್ತು, ಸುಮಾರು 13000 ಜನರಿಗೆ ಕೊಟ್ಟರು, ಈ 600 ಜನರಿಗೆ ಕೆಲವು ಅಧಿಕಾರಿಗಳು ಏನೋ ಕಾರಣದಿಂದ ತಮ್ಮ ಸ್ವಾರ್ಥಕ್ಕಾಗಿ ಉಳಿಸಿ, ಇವತ್ತು ಇವರು ಉದ್ಯೋಗದಿಂದ ವಂಚಿತರಾಗಿದ್ದಾರೆ, ಅವರು ಯಾವ ಕಾರಣಕ್ಕಾಗಿ ವಂಚಿತರಾಗಿದ್ದಾರೆಂಬುದು ತಿಳಿಯಬೇಕು, ಅದರಲ್ಲಿ ಅಧಿಕಾರಿಗಳ ತಪ್ಪಿದೆ, ಅವರ ಮೇಲೆ ತಾವು ಕ್ರಮ ತೆಗೆದುಕೊಳ್ಳುತ್ತೀರಾ? ಇನ್ನು ನಮ್ಮ ಹಳೆಯ ಧಾರವಾಡ ಜಿಲ್ಲೆಯಲ್ಲಿ ಸುಮಾರು 172 ಶಿಕ್ಷಕರು ಉದ್ಯೋಗದಿಂದ ವಂಚಿತರಾಗಿದ್ದಾರೆ, ಆ ಬಗ್ಗೆಯೂ ಪ್ರಶ್ನೆ ಕೇಳಿದ್ದೆ. ಬಹುಶಃ ಅಲ್ಲಿ ಒಬ್ಬ ಡಿಡಿಪಿಐ ಮಾಡಿದ ತಪ್ಪಿಗಾಗಿ, ಇವತ್ತು ಸರ್ಕಾರ ಹಾಗೂ ಆ ಬಡ ನೌಕರಿದಾರರು ತೊಂದರೆ ಅನುಭವಿಸಬೇಕಾಗಿದೆ. 29.11.2003 ರಂದು ಕೌನ್ಸಿಲಿಂಗ್ ಕರೆದು 256 ಜನರಿಗೆ ಆದೇಶವನ್ನು ಕೊಟ್ಟರು, ಅದರಲ್ಲಿ ನೇಮಿಸಿಕೊಂಡಿದ್ದು 74 ಜನರನ್ನು, ಇವರು ಯಾವ ಮಾನದಂಡದ ಮೇಲೆ ಆ 74 ಜನರನ್ನು ನೇಮಿಸಿಕೊಂಡರು? 182 ಜನರನ್ನು ಇವರು ಏತಕ್ಕೆ ಬಿಟ್ಟರು? ಇನ್ನು ಮೂರನೆಯದಾಗಿ, ಹಿಂದೆ ನಾವು ಇದೇ ಪ್ರಶ್ನೆಯನ್ನು ಕೇಳಿದಾಗ ಮಾನ್ಯ ಖರ್ಗೆಯವರು, ಎಲ್ಲಾ ನೌಕರರಿಗೆ ಯಾವುದೇ ರೀತಿಯಿಂದಲಾದರೂ ನೌಕರಿಯನ್ನು ಕೊಡುತ್ತೇವೆ, ಅವರು ವಂಚಿತರಾಗುವುದಿಲ್ಲವೆಂದು ಉತ್ತರವನ್ನು ಕೊಟ್ಟಿದ್ದರು. ಕಳೆದ ಅಧಿವೇಶನದಲ್ಲಿ ಮಾನ್ಯ ಪ್ರಕಾಶ್‌ರವರೂ ಕೂಡ ಕೊನೆಗೆ ಅವರನ್ನು ಗುತ್ತಿಗೆದಾರ ನೌಕರರನ್ನಾಗಿಯಾದರೂ ತೆಗೆದುಕೊಂಡು ನೌಕರಿ ಕೊಡುತ್ತೇವೆಂದು ಹೇಳಿದ್ದರು, ಇದುವರೆವಿಗೂ ಅವರಿಗೆ ನೌಕರಿಯನ್ನು ಕೊಡಲಿಲ್ಲ, ಅವರು ಹಾಗೆಯೇ ಅಡ್ಡಾಡುತ್ತಿದ್ದಾರೆ, ಆ ಕಾರಣದಿಂದ, ಮಾನ್ಯ ಮುಖ್ಯಮಂತ್ರಿಗಳನ್ನು ಕೇಳುತ್ತೇನೆ, 600 ಜನ ನೌಕರಿಯಿಂದ ವಂಚಿತರಾಗಲು ಕಾರಣವೇನು? ಆ ಕಾರಣಕ್ಕೆ ಒಳಪಟ್ಟ ಅಧಿಕಾರಿಗಳ ಮೇಲೆ ತಾವು ಏನಾದರೂ ಕ್ರಮವನ್ನು ತೆಗೆದುಕೊಳ್ಳುತ್ತೀರಾ? ಈ 182 ಜನರಿಗೂ ಕೂಡ, ಗುತ್ತಿಗೆ ಆಧಾರದ ಮೇಲೆ ಕೂಡಲೇ ನೌಕರಿಯನ್ನು ಕೊಡುತ್ತೀರಾ ಎನ್ನುವುದನ್ನು ಹೇಳಬೇಕು.

ಶ್ರೀ ಧರ್ಮಸಿಂಗ್ : ಮಾನ್ಯ ಸಭಾಧ್ಯಕ್ಷರೆ, ಈ ಗ್ರಾಮೀಣ ಕೃಪಾಂಕದ ಆಧಾರದ ಮೇಲೆ 16000 ಜನರನ್ನು ನಾವು ಗುರುತಿಸಿದ್ದೇವೆ, ಅದರಲ್ಲಿ 11000 ಜನರು ಈಗಾಗಲೇ ಮೆರಿಟ್ ಮೇಲೆ ಬಂದಿದ್ದಾರೆ, ಉಳಿದ ಗ್ರಾಮೀಣ ಅಭ್ಯರ್ಥಿಗೆ ಹೆಚ್ಚು ವೇಟೇಜ್ ಕೊಡಬೇಕೆಂದು 2003 ರಲ್ಲಿ ರಾಜ್ಯ ಸರ್ಕಾರ ತೀರ್ಮಾನವನ್ನು ತೆಗೆದುಕೊಂಡ ಮೇಲೆ 4400 ಜನರಿಗೆ ಉದ್ಯೋಗ ಕೊಡಲಾಗಿದೆ, ಪ್ರಪ್ರಥಮವಾಗಿ 600 ಅಲ್ಲ 16000 ಜನರಿದ್ದರು, 11000 ಜನರಿಗೆ ಮೆರಿಟ್‌ನಲ್ಲಿ ಸಿಕ್ಕಿದೆ, ಇನ್ನು ಉಳಿದಂಥ

5000 ಜನರಲ್ಲಿ ರೂರಲ್ ವೇಟೇಜ್ ಕೊಟ್ಟು 4400 ಜನರಿಗೆ ಉದ್ಯೋಗ ಸಿಕ್ಕಿದೆ, ಪ್ರೋಸೆಸ್ ಮಾಡುವ ಕಾಲದಲ್ಲಿ ಸುಪ್ರೀಂಕೋರ್ಟಿನ ತಡೆಯಾಜ್ಞೆ ಬಂದಿದೆ. ಅವರು ಹೇಳಿದ ಪ್ರಶ್ನೆ ಏನೆಂದರೆ, 4400 ಜನರಿಗೆ ಕೊಟ್ಟ ಮೇಲೆ 600 ಉಳಿಯಿತೆಂದು ಹೇಳುತ್ತಿದ್ದಾರೆ. ಹಾವೇರಿ, ಗದಗ್‌ನಲ್ಲಿರುವ ಡೆಪ್ಯೂಟಿ ಡೈರೆಕ್ಟರ್ ಏನಿದ್ದಾರೆ, ಅವರು ಸರಿಯಾದ ರೀತಿಯಲ್ಲಿ ಆಜ್ಞೆಯನ್ನು ಪರಿಪಾಲನೆ ಮಾಡಿದ್ದರೆ 600 ಜನರಿಗೆ ಕೂಡ ನೌಕರಿ ಕೊಡುತ್ತಿದ್ದೆವು. ಇಲ್ಲಿ ಸ್ವಲ್ಪ ತಪ್ಪಾಗಿದೆ. ಇದೊಂದು ಯಾವುದೋ ಒಂದು ಸಂದರ್ಭದಲ್ಲಿ ಸರ್ಕಾರ ತೆಗೆದುಕೊಳ್ಳುವ ಒಂದು ನಿರ್ಣಯ. ಇವತ್ತು ಗ್ರಾಮೀಣ ಕೃಪಾಂಕದ ಮೇರೆಗೆ ರೂರಲ್ ಏರಿಯಾದಲ್ಲಿರುವ ಜನರಿಗೆ ಸಹಾಯ ಮಾಡುವ ರೀತಿಯಲ್ಲಿ ಸರ್ಕಾರದ ಹಾಗೆ ಅಷ್ಟೇ ಸಮರ್ಪಣ ಮನೋಭಾವದಿಂದ ಅಧಿಕಾರಿಗಳು, ಕೆಲಸವನ್ನು ಮಾಡಬೇಕಾಗುತ್ತದೆ. ಅದೇನಾಗಿದೆ. ಎಂಬುದನ್ನು ಪರ್ಸನಲ್ ಆಗಿ ತಿಳಿಸಬೇಕೆಂದು ಕಾರ್ಯದರ್ಶಿಗಳಾದ ಮಾನ್ಯ ವಿಜಯ ಭಾಸ್ಕರ್‌ರವರಿಗೆ ಹೇಳಿದ್ದೇನೆ, 182 ಜನರಿಗೆ ಕೊಡಬೇಕಾಗಿದೆ. ಮತ್ತೆ ಈ ರೂರಲ್ ವೇಟೇಜ್ ಕೊಡುವ ಬಗ್ಗೆ ತಡೆಯಾಜ್ಞೆ ಬಂದಿದೆ. ತಡೆಯಾಜ್ಞೆ ಬಂದ ಮೇಲೆ 600 ಜನರಿಗೆ ಕೊಡಲಾಗಲಿಲ್ಲ. ಅವರದ್ದು ಸುಪ್ರೀಂ ಕೋರ್ಟ್‌ನಲ್ಲಿತ್ತು. ಅದನ್ನು ಕೆಎಟಿಗೆ ವರ್ಗಾಯಿಸಲಾಗಿದೆ, ಕೆಎಟಿನಲ್ಲಿದೆ, ಅದನ್ನು ಪರಿಶೀಲಿಸುತ್ತೇವೆ. ಮಾನ್ಯ ಎಸ್. ಎಸ್. ಪಾಟೀಲ್‌ರವರು ಆ ಕ್ಷೇತ್ರದ ಶಾಸಕರಾಗಿದ್ದಾರೆ, ಅಲ್ಲಿರುವ ಅಧಿಕಾರಿಗಳ ತಪ್ಪಿನಿಂದ ಇದಾಗಿದೆ ಎಂದು ಹೇಳಿದ್ದಾರೆ. ನಿಜವಾಗಿಯೂ ಈ ರೀತಿಯ ಬಡ ವಿದ್ಯಾರ್ಥಿಗಳಿಗೆ ಗ್ರಾಮೀಣ ಪ್ರದೇಶದಲ್ಲಿ ಆಗಬಾರದು, ಯಾರು ತಪ್ಪು ಮಾಡಿದ್ದಾರೆ ಅವರ ಮೇಲೆ ನಿರ್ದಾಕ್ಷಿಣ್ಯವಾಗಿ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್.ಎಸ್. ಪಾಟೀಲ್ : ಹಿಂದೆ ಮಾನ್ಯ ಹೊರಟ್ಟಿಯವರು ಈ ಬಗ್ಗೆ ಸಾಕಷ್ಟು ಹೋರಾಟ ಮಾಡಿದವರು ಅವರು ಈಗ ಸಚಿವರಾಗಿದ್ದಾರೆ, ಏನು ಅವ್ಯವಹಾರವಾಗಿದೆ ಎಂಬುದನ್ನು ಬಹುಶಃ ಸಚಿವಸಂಪುಟದಲ್ಲಿ ಕೇಳಿದರೆ ಹೇಳುತ್ತಾರೆ. ದಯಮಾಡಿ. ಆ ಅಧಿಕಾರಿಯ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಅವರಿಂದ ಸರ್ಕಾರ ಈ ಪರಿಸ್ಥಿತಿಯನ್ನು ಅನುಭವಿಸಬೇಕಾಗಿದೆ. ಪದೇ ಪದೇ ಬಂದು ಸರ್ಕಾರದ ಮುಂದೆ ಸತ್ಯಾಗ್ರಹ ಮಾಡಬೇಕು. ಇವತ್ತು ಗ್ರಾಮೀಣಕೃಪಾಂಕದ ಒಬ್ಬ ಹೆಣ್ಣುಮಗಳು, ಮಂಡ್ಯ ಜಿಲ್ಲೆಯಲ್ಲಿ ಟ್ರೈನ್‌ನಲ್ಲಿ ಹೋಗುತ್ತಿರುವಾಗ ಹೊಳೆಗೆ ಹಾರಿ ಸತ್ತಳು. ಇಂತಹ ಅನಾಹುತಗಳು ಇವತ್ತು ನಡೆಯುತ್ತಿದ್ದಾವೆ, ಆ ಕಾರಣದಿಂದ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು, 182 ಜನರಿಗೆ ನೌಕರಿ ಕೊಡಬೇಕು. ಎರಡನೆಯದಾಗಿ ನಾನು ತಮ್ಮಲ್ಲಿ ದಯವಿಟ್ಟು ವಿನಂತಿ ಮಾಡಿಕೊಳ್ಳುತ್ತೇನೆ, ಇನ್ನು ಮೇಲೆ ನಮ್ಮ ಗ್ರಾಮೀಣ ಹುಡುಗರಿಗೆ ನೌಕರಿ ಸಿಗುವುದಿಲ್ಲ, ಈ ಕೋರ್ಟ್ ಆದೇಶದ ಮೇಲೆ ಸಿಗುವ ಪ್ರಶ್ನೆಯೇ ಇಲ್ಲ. ಆ ಕಾರಣದಿಂದ ಹಿಂದಿನ ಅಧಿವೇಶನದಲ್ಲಿ ಶೇಕಡ 25 ರಷ್ಟು ಮೀಸಲಾತಿಯೊಳಗೆ ಮೀಸಲಾತಿಯನ್ನು ಗ್ರಾಮೀಣ ಪ್ರದೇಶದವರಿಗೆ ಕೊಡಬೇಕೆಂದು ಮಾಡಲಾಗಿತ್ತು. ಅದು ಇವತ್ತು ಸಿಗುತ್ತಿದೆ. ಅವತ್ತು ಇಲ್ಲಿ ಚರ್ಚೆಯಾಗಿ ನಾವು ವಿರೋಧಪಕ್ಷದಲ್ಲಿ ಕುಳಿತುಕೊಂಡು ಹಳ್ಳಿಗರಿಗೆ ಶೇಕಡ 70 ರಷ್ಟು ಮೀಸಲಾತಿ ಮಾಡಬೇಕೆಂದು ಹೇಳಿದೆವು. ಅವತ್ತು ನಮ್ಮ ಕಾನೂನು ಸಚಿವರು ಇದನ್ನು ಮೊದಲು ಮಾಡಿನೋಡೋಣ, ಇದು ಸರಿಯಾದರೆ ಮುಂದೆ ಶೇಕಡ 70 ರಷ್ಟು ಮಾಡೋಣ ಎಂದು ಒಪ್ಪಿಕೊಂಡಿದ್ದರು. ಆ ಕಾರಣಕ್ಕೆ ಮೀಸಲಾತಿಯಲ್ಲಿ ಮೀಸಲಾತಿಯನ್ನು ನಮ್ಮ ಹಳ್ಳಿಗರಿಗೆ ಶೇಕಡ 25 ರಷ್ಟು ಏನು ಮಾಡಿದ್ದೀರಿ ಅದನ್ನು ಶೇಕಡ 75ಕ್ಕೆ ಏರಿಸುತ್ತೀರಾ ಎನ್ನುವುದಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಉತ್ತರವನ್ನು ಹೇಳಬೇಕು.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಈ 182 ಜನರೇನು ಈ ಗ್ರಾಮೀಣ ಕೃಪಾಂಕದಿಂದ ವಂಚಿತರಾದರು, ಅದು ಎಸ್.ಎಸ್. ಪಾಟೀಲರು ಹೇಳಿದಂತೆ ಆ ಶಿಕ್ಷಣಾಧಿಕಾರಿಯ ತಪ್ಪಿನಿಂದ. ಸುಪ್ರೀಂ ಕೋರ್ಟಿನಿಂದ ತಡೆಯಾಜ್ಞೆ ಬರುವುದಕ್ಕಿಂತ ಮುಂಚೆಯೇ ಅವರನ್ನೆಲ್ಲಾ ನೇಮಕ ಮಾಡುವುದಕ್ಕೆ ಸಾಧ್ಯವಿತ್ತು. ಅವನ ತಪ್ಪಿನಿಂದ ಇವತ್ತು 182 ಜನರು ಹೊರಗೆ ಉಳಿಯುವಂತಹ ಪರಿಸ್ಥಿತಿ ಉಂಟಾಯಿತು. ಮಾನ್ಯ ಸಚಿವರಾದ ಹೊರಟ್ಟಿಯವರು ಇಲ್ಲೇ ಇದ್ದಾರೆ. ಅವರೂ ಕೂಡ ಅವತ್ತು ಆ ಹೋರಾಟಕ್ಕೆ ಬೆಂಬಲ ಕೊಟ್ಟರು ಅವತ್ತು ಕೆಡಿಬಿ ಮೀಟಿಂಗ್‌ನಲ್ಲಿ ನಾವು ಅವರೂ ಕೂಡಿ ಸರ್ಕಾರದಲ್ಲಿ ಏನಾದರೂ ಸರಿಯಾದ ರೀತಿಯಲ್ಲಿ ನೌಕರಿ ಕೊಡಲು ಮರುನೇಮಕ ಮಾಡುವ ವ್ಯವಸ್ಥೆ ಮಾಡಬೇಕೆಂದು ಒತ್ತಾಯ ಮಾಡಿದ್ದೆವು. ಹಾಗಾಗಿ ಮಾನ್ಯ ಮುಖ್ಯಮಂತ್ರಿಗಳಲ್ಲಿ ಒತ್ತಾಯ ಮಾಡುವುದೇನೆಂದರೆ, ಇದಕ್ಕೆ ಏನಾದರೂ ಒಂದು ದಾರಿಯನ್ನು ಹುಡುಕಿ ಆ 182 ಮಂದಿ ಏನು ವಂಚಿತರಾಗಿದ್ದಾರೆ, ಆ ಶಿಕ್ಷಕರನ್ನು ಮರುನೇಮಕ ಮಾಡುವ ನಿರ್ಣಯವನ್ನು ಕೈಗೊಳ್ಳಿ, ಯಾರು ಆ ಅಧಿಕಾರಿ ತಪ್ಪು ಮಾಡಿದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಈ ರೀತಿ ಗ್ರಾಮೀಣಕೃಪಾಂಕದಿಂದ ವಂಚಿತರಾದವರಿಗೆ ಆರೋಗ್ಯ ಇಲಾಖೆ ಮತ್ತು ಬೇರೆ ಬೇರೆ ಕಡೆಯಲ್ಲಿ ಗುತ್ತಿಗೆ ಆಧಾರದ ಮೇಲೆ ಮರುನೇಮಕ ಮಾಡುವ ಒಂದು ವ್ಯವಸ್ಥೆ ಮಾಡಲಾಗಿದೆ. ಆ ರೀತಿಯ ವ್ಯವಸ್ಥೆ ಕೋರ್ಟ್‌ನ ವ್ಯಾಜ್ಯವೆಲ್ಲಾ ಬಗೆಹರಿಯವವರೆಗೆ, ಅಥವಾ ಸರ್ಕಾರದ ಮಟ್ಟದಲ್ಲಿ ಅವರಿಗೆ ಪರಿಹಾರ ಸಿಗುವವರೆಗೆ ಅವರನ್ನು ಸ್ಥಳನಿಯುಕ್ತಿ ಮಾಡುವ ಕೆಲಸವಾಗಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಡಿ.ಆರ್. ಪಾಟೀಲ್ : ಇದರಲ್ಲಿ 182 ಮಂದಿ ಶಿಕ್ಷಕರಿದ್ದಾರೆ, ಪ್ರತಿ ವರ್ಷ 10,000 ಮಂದಿ ಶಿಕ್ಷಕರನ್ನು ನೇಮಕಾತಿ ಮಾಡುತ್ತೇವೆ. ಈ 182 ಮಂದಿಯನ್ನು ವಿಶೇಷ ಪ್ರಕರಣವೆಂದು ನೇಮಕಾತಿ ಮಾಡಿದರೆ ಈ ಸಮಸ್ಯೆ ಬಗೆಹರಿಯುತ್ತದೆ, ಅದಕ್ಕೆ ಯಾರೂ ಕೋರ್ಟ್‌ಗೆ ಹೋಗುವುದಿಲ್ಲ, ಮಾನವೀಯತೆ ದೃಷ್ಟಿಯಿಂದ ಯಾರೂ ಪ್ರಶ್ನೆ ಮಾಡುವುದಕ್ಕೆ ಹೋಗುವುದಿಲ್ಲ. ಆದುದರಿಂದ, ದಯವಿಟ್ಟು ಮುಖ್ಯಮಂತ್ರಿಗಳು, ಯಾರು 182 ಮಂದಿ ಶಿಕ್ಷಕರು ಯಾರು ಉಳಿದಿದ್ದಾರೆ ಅವರನ್ನು ವಿಶೇಷ ಪ್ರಕರಣವಾಗಿ ನೇಮಕಾತಿ ಮಾಡಬೇಕೆಂದು ಕೇಳುತ್ತೇನೆ. ಹಳೆ ಧಾರವಾಡ, ಹಾವೇರಿ, ಗದಗ್ ಈ ಮೂರು ಜಿಲ್ಲೆಯದ್ದು ಅದರಲ್ಲಿದೆ, ಆದುದರಿಂದ ದಯವಿಟ್ಟು ಅದನ್ನು ಮಾಡಿದರೆ ಬಹಳ ಅನುಕೂಲವಾಗುತ್ತದೆ. ಈ ಬಗ್ಗೆ ಹಿಂದೆ ಕಾನೂನು ಮಂತ್ರಿಯಾಗಿದ್ದ ಶ್ರೀ ಡಿ.ಬಿ. ಚಂದ್ರೇಗೌಡರು ಇದೇ ಸದನದಲ್ಲಿ ಅವರನ್ನೆಲ್ಲಾ ನಾವು ನೇಮಕಾತಿ ಮಾಡುತ್ತೇವೆನ್ನುವ ಭರವಸೆಯನ್ನು ಕೊಟ್ಟಿದ್ದರು. ಆ ಭರವಸೆ ಈಡೇರಿಸಿದಂತಾಗುತ್ತದೆ, ತಮಗೆ ಪುಣ್ಯ ಬರುತ್ತದೆ, ದಯವಿಟ್ಟು ಇದನ್ನು ಮಾಡಬೇಕು ಸಾಹೇಬರೆ.

ಶ್ರೀ ಧರ್ಮಸಿಂಗ್ : ಮಾನ್ಯ ಎಸ್.ಎಸ್. ಪಾಟೀಲ್‌ರವರು ಸ್ಪಷ್ಟವಾಗಿ ಅಲ್ಲಿಯ ಶಿಕ್ಷಣ ಅಧಿಕಾರಿಯಿಂದ 182 ಮಂದಿಗೆ ಕೆಲಸ ಸಿಗದಂತೆ ತೊಂದರೆಯಾಗಿದೆ ಎಂದು ಹೇಳಿದ್ದಾರೆ. ಮಾನ್ಯ ಹೊರಟ್ಟಿಯವರು ಮಂತ್ರಿಯಾಗಿಲ್ಲದಿದ್ದರೆ, ಈ ವಿಚಾರದ ಬಗ್ಗೆ ಎದ್ದೇಳುತ್ತಿದ್ದರು. ಮಾನ್ಯ ಹೊರಟ್ಟಿಯವರೇ, ತಾವು ಮಂತ್ರಿಯಾಗಿದ್ದೀರಿ, ಎದ್ದೇಳಬೇಡಿ ಎಂದು ಹೇಳಿದೆ, ಹೋರಾಟ ಮಾಡಿ ಮಾಡಿ ಅದೇ ಅಭ್ಯಾಸವಾಗಿದೆ. ಎಲ್ಲಿ ಎದ್ದೇಳುತ್ತಾರೆಂದು ಎದ್ದೇಳಬೇಡಿ ಎಂದು ಹೇಳಿದ್ದೆ. ನೀವು

ಸರ್ಕಾರದಲ್ಲಿದ್ದೀರಿ ಎದ್ದೇಳಬೇಡಿ ಎಂದು ಸನ್ನೆ ಮಾಡಿದೆ, ಈ ಬಗ್ಗೆ ಮಾನ್ಯ ಜಗದೀಶ ಶೆಟ್ಟರ್‌ರವರು ಹಾಗೂ ಮಾನ್ಯ ಡಿ.ಆರ್. ಪಾಟೀಲ್‌ರವರು ಕೇಳಿದ್ದಾರೆ. ಆ ಅಧಿಕಾರಿ ಸುಪ್ರೀಂ ಕೋರ್ಟ್ ತಡೆಯಾಜ್ಞೆ ಬರುವುದಕ್ಕಿಂತ ಮುಂಚೆ ಮಾಡಿದರೆ 182 ಜನರಿಗೆ ನೌಕರಿ ಸಿಕ್ಕುತ್ತಿತ್ತು. ನಾವು ಅವನನ್ನು ಸಸ್ಪೆಂಡ್ ಮಾಡುತ್ತೇವೆ. ಇನ್ನು 600 ಜನರದ್ದು ಕೆಎಟಿ ಮುಂದಿದೆ. ಕೆಎಟಿ ತೀರ್ಮಾನ ಬರಲಿ. ಕೆ.ಎ.ಟಿ ತೀರ್ಮಾನ ಬಂದನಂತರ 182 ಜನರಿಗೆ ಅವರ ಬಗ್ಗೆ ಸರ್ಕಾರ ಒಂದು ಸರಿಯಾದ ರೀತಿಯಲ್ಲಿ ವ್ಯವಸ್ಥೆಯನ್ನು ಮಾಡುತ್ತದೆ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ನಾನು ಒಳ ಮೀಸಲಾತಿಯ ಬಗ್ಗೆ ಪ್ರಶ್ನೆಯನ್ನು ಕೇಳಿದ್ದೆ. ಅದನ್ನು 70 ಪರ್‌ಸೆಂಟ್‌ಗೆ ಏರಿಸುತ್ತಾರೋ ಹೇಗೆ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕು.

ಶ್ರೀ ಧರ್ಮಸಿಂಗ್ : ಮಾನ್ಯ ಅಧ್ಯಕ್ಷರೇ, ಅದು ಬೇರೆ ಪ್ರಶ್ನೆ ಇದೆ. ಅದರ ಬಗ್ಗೆ ವಿಚಾರ ಮಾಡಿ ಮುಂದೆ ಹೇಳೋಣ. ಅದರ ಬಗ್ಗೆ ಬೇರೆ ನೋಟೀಸನ್ನು ಕೊಡಲಿ

ಬೆಂಗಳೂರು ಉತ್ತರ ತಾಲ್ಲೂಕಿನ ಕೆಲ ಗ್ರಾಮ ಪಂಚಾಯಿತಿಗಳನ್ನು ನಗರ ಸಭೆ ವ್ಯಾಪ್ತಿಗೆ ಒಳಪಡಿಸುವ ಬಗ್ಗೆ

139 ಶ್ರೀ ಆರ್. ಅಶೋಕ್(ಉತ್ತರಹಳ್ಳಿ) ಮಾನ್ಯ ಪೌರಾಡಳಿತ ಮತ್ತು ಕೆಯುಐಡಿಎಫ್‌ಸಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರು ಉತ್ತರ ತಾಲ್ಲೂಕು (ಉತ್ತರಹಳ್ಳಿ ಮತ ಕ್ಷೇತ್ರ) ಅಬ್ಬಿಗೆರೆ, ಚಿಕ್ಕಬಾಣಾವಾರ ಮತ್ತು ಹಾರೋಹಳ್ಳಿ ಗ್ರಾಮ ಪಂಚಾಯ್ತಿಗಳನ್ನು ನಗರಸಭೆಗಳ ವ್ಯಾಪ್ತಿಗೆ ಒಳಪಡಿಸಲು ಸರ್ಕಾರ ಏನು ಕ್ರಮ ಕೈಗೊಂಡಿದೆ;

ಆ) ಪ್ರಸಕ್ತ ಸಾಲಿನಲ್ಲಿ, ಈ ಪಂಚಾಯ್ತಿಗಳನ್ನು ನಗರಸಭೆಗೆ ಒಳಪಡಿಸಿಕೊಳ್ಳಲು ಯೋಜನೆ ಸಿದ್ಧಪಡಿಸಲಾಗಿದೆಯೇ;

ಇ) ಹಾಗಿಲ್ಲದಿದ್ದಲ್ಲಿ, ಗ್ರಾಮ ಪಂಚಾಯ್ತಿಗಳನ್ನು ನಗರಸಭೆ ವ್ಯಾಪ್ತಿಗೊಳಪಡಿಸಲಿರುವ ಕಾನೂನು ತೊಡಕುಗಳೇನು?

ಶ್ರೀ ಎಸ್.ಆರ್. ಮೋರೆ (ಪೌರಾಡಳಿತ ಮತ್ತು ಕೆಯುಐಡಿಎಫ್‌ಸಿ ಸಚಿವರು)

ಅ) ಅಂತಹ ಪ್ರಸ್ತಾವನೆ ಸರ್ಕಾರಕ್ಕೆ ಬಂದಿರುವುದಿಲ್ಲ.

ಆ) ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಂದ ಪ್ರಸ್ತಾವನೆ ಬಂದಲ್ಲಿ ನಿಯಮಾನುಸಾರ ಪರಿಶೀಲಿಸಲಾಗುವುದು.

ಇ) ಮೇಲಿನಂತೆ.

ಶ್ರೀ ಆರ್. ಅಶೋಕ್ : ಮಾನ್ಯ ಅಧ್ಯಕ್ಷರೇ, ಉತ್ತರವನ್ನು ಕೊಟ್ಟಿದ್ದಾರೆ. ನಾನು ಪ್ರಶ್ನೆಯನ್ನು ಕೇಳಿರುವುದಕ್ಕೆ ಪ್ರಸ್ತಾವನೆಯೇ ಬಂದಿಲ್ಲವೆಂದು ಹೇಳಿದ್ದಾರೆ. ಈಗಾಗಲೇ ನಾನು ಒಂದು ತಿಂಗಳ ಹಿಂದೆ ಜಿಲ್ಲಾಧಿಕಾರಿಗಳಿಗೆ ಕೊಟ್ಟಿದ್ದೇನೆ. ಸಾರ್ವಜನಿಕರೂ ಕೂಡ ಕೊಟ್ಟಿದ್ದಾರೆ. ನೀವು ಬಂದಿಲ್ಲವೆಂದು ಹೇಳುತ್ತೀರಿ. ಆದರೂ ನನ್ನ ಪ್ರಶ್ನೆ ಏನೆಂದು ಹೇಳಿದರೆ ಬೆಂಗಳೂರು ಸುತ್ತಮುತ್ತ ಇರುವ ಪಂಚಾಯಿತಿಗಳಲ್ಲಿ ಅದರ ಹಳ್ಳಿ ವಾತಾವರಣವೇ ಹೊರಟುಹೋಗಿದೆ. ಪೂರ್ತಿ ಬೆಂಗಳೂರಿಗೆ ಪಟ್ಟಣ ವಾತಾವರಣವೇ ಬಂದುಬಿಟ್ಟಿದೆ. ಒಂದು ದನ ಇಲ್ಲ, ಕರು ಇಲ್ಲ. ಹೊಲ ಇಲ್ಲ, ಗದ್ದೆ ಇಲ್ಲ,

ಏನೂ ಇಲ್ಲ, ಅಲ್ಲಿ ಎಲ್ಲಾ ಬಡಾವಣೆ ನಿರ್ಮಾಣವಾಗಿಬಿಟ್ಟಿದೆ. ನೀವು ಅದನ್ನೇ ಪಂಚಾಯಿತಿ ಎಂದು ಮಾಡುವುದಾದರೆ ಆ ಪಂಚಾಯಿತಿಗಳು ನಡೆಯುವುದು ಹೇಗೆ? ನೀವು ಪಂಚಾಯಿತಿಗೆ ಡಿಕ್ಲೇರ್ ಮಾಡಿದ್ದೀರಿ. 62 ಸೀಟು. ಒಂದೇ ಒಂದು ಪಂಚಾಯಿತಿಯಲ್ಲಿ 62 ಸೀಟು. ಹೇರೋಹಳ್ಳಿ ಪಂಚಾಯಿತಿ ಎಂದು ಹೇಳಿ ಇದೆ. 62 ಜನರು ಕುಳಿತುಕೊಳ್ಳುವುದು ಎಲ್ಲಿ? ನಗರಸಭೆಯಲ್ಲೇ 35 ಜನ ಲಾಸ್ಟ್. ಪಂಚಾಯಿತಿಯಲ್ಲಿ ನೀವು 65 ಜನ 80 ಜನರನ್ನು ಮಾಡಿದರೆ ಅವರುಗಳು ಕುಳಿತುಕೊಳ್ಳುವುದಕ್ಕೆ ನೀವು ಒಂದು ಟೌನ್‌ಹಾಲ್‌ನ್ನು ನೀವು ಕಟ್ಟಬೇಕಾಗುತ್ತದೆ. ಅದಕ್ಕೆ ನನ್ನ ಆಗ್ರಹ ಏನೆಂದರೆ ಯಾವ ಯಾವ ಪಂಚಾಯಿತಿಗಳು ನಗರ ಸುತ್ತ ಬರುತ್ತವೆ, ಅಲ್ಲೆಲ್ಲಾ ಪೂರ್ತಿ ಪಟ್ಟಣದ ವಾತಾವರಣ ಬಂದಿದೆ. ಅಲ್ಲಿ ಕಸ ಗುಡಿಸಬೇಕಾದರೂ 50 ಲಕ್ಷ ರೂಪಾಯಿಗಳು ಬೇಕು. ಕಸ ಗುಡಿಸುವುದಕ್ಕೆ ಆ ಪಂಚಾಯಿತಿ ವ್ಯಾಪ್ತಿಯಲ್ಲಿ ಡಾಂಬರೀಕರಣ ಮಾಡುವುದಕ್ಕೆ ಎರಡು ಕೋಟಿ ರೂಪಾಯಿಗಳು ಬೇಕು. ಪಂಚಾಯಿತಿಗಳಿಗೆ ಎಲ್ಲಿ ಆ ಶಕ್ತಿ ಇರುತ್ತದೆ? ಅದಕ್ಕೋಸ್ಕರ ಅಂಥ ಪಂಚಾಯಿತಿಗಳನ್ನು ಬೆಂಗಳೂರು ಸುತ್ತಮುತ್ತ ಇರುವ ಪಂಚಾಯಿತಿಗಳನ್ನು ದಯವಿಟ್ಟು ಕೂಡಲೇ ಪಕ್ಕದಲ್ಲಿರುವ ನಗರ ಸಭೆಗಳಿಗೆ ಪುರಸಭೆಗಳಿಗೆ ಸೇರಿಸಬೇಕು. ಆಗ ಅದಕ್ಕೆ ನಿಜವಾದಂಥ ರೀತಿ ನಾಗರೀಕರಿಗೆ ನ್ಯಾಯ ಕೊಡುವುದಕ್ಕಾಗುತ್ತದೆ. ಆ ದೃಷ್ಟಿಯಿಂದ ಸಚಿವರು ಇದರ ಬಗ್ಗೆ ಗಮನವನ್ನು ಹರಿಸಬೇಕು. ಅದನ್ನು ಸೇರಿಸಿ ಎಂದು ಈಗಾಗಲೇ ಅರ್ಜಿಗಳು ಬಂದಿದೆ. ಈಗಾಗಲೇ ಮೊನ್ನೆ ಎರಡು ಪಂಚಾಯಿತಿಗಳನ್ನು ಕಳೆದ ಮೂರು ತಿಂಗಳ ಹಿಂದೆ ಕೋಣನಕುಂಟೆ ಮತ್ತು ಕೊತ್ತನೂರು ಎನ್ನುವ ಪಂಚಾಯಿತಿಗಳನ್ನು ಈಗಾಗಲೇ ಬೊಮ್ಮನಹಳ್ಳಿ ನಗರಸಭೆಗೆ ಸೇರಿಸಿದ್ದಾರೆ. ಅದರಿಂದ ನಾನು ತಮ್ಮ ಮೂಲಕ ಸರ್ಕಾರಕ್ಕೆ ಆಗ್ರಹ ಮಾಡುತ್ತಿದ್ದೇನೆ. ಈ ರೀತಿ ಯಾವುದ್ಯಾವುದು ಪಂಚಾಯಿತಿಯ ವಾತಾವರಣ ಹೋಗಿದೆ, ನಗರದ ವಾತಾವರಣ ಬಂದಿದೆ, ಅದನ್ನೆಲ್ಲಾ ನಗರಸಭೆಗಳನ್ನಾಗಿ ಮಾಡಬೇಕು. ಅದರ ಬಗ್ಗೆ ಕಾನೂನು ಕೂಡ ಇದೆ. ಹತ್ತು ಸಾವಿರಕ್ಕೆ ಒಳಪಟ್ಟು ಪಂಚಾಯಿತಿ ಇರಬೇಕು. ಹತ್ತು ಸಾವಿರದಿಂದ ಹದಿನೆಂಟು ಸಾವಿರಕ್ಕೆ ಪುರಸಭೆ ಇರಬೇಕು. ಹದಿನೆಂಟು ಸಾವಿರ ಮೇಲೆ ಇರತಕ್ಕಂಥದ್ದು ನಗರಸಭೆ ಆಗಬೇಕು ಎಂದು ನಮ್ಮ ಆ್ಯಕ್ಟ್‌ನಲ್ಲೇ ಬಂದಿದೆ. ಇವೆಲ್ಲಾ ಹೇರೋಹಳ್ಳಿ ಪಂಚಾಯಿತಿಯಲ್ಲಿ ಸುಮಾರು ಮೂವತ್ತು ಸಾವಿರ ಜನ ಮತದಾರರಿದ್ದಾರೆ. ಒಂದೇ ಒಂದು ಪಂಚಾಯಿತಿಯಲ್ಲಿ ಅಷ್ಟು ಇದ್ದಾರೆ. ಅಲ್ಲಿ ಆಕ್ಟುಯಲಿ ಆಗಿ ಇರಬೇಕಾದುದು ಐದು ಸಾವಿರ. 36 ಸಾವಿರ ಜನರು ಇದ್ದಾರೆ. ಅದನ್ನು ನೀವು ಹೇಗೆ ಪಂಚಾಯಿತಿಯಾಗಿ ಪರಿಗಣಿಸುತ್ತೀರಿ? ದಯವಿಟ್ಟು ಅದನ್ನು ನಗರ ಪಂಚಾಯಿತಿಯನ್ನಾಗಿ ಮಾಡಿ ಎಂದು ನಾನು ಆಗ್ರಹ ಮಾಡುತ್ತೇನೆ.

ಶ್ರೀ ಎಸ್.ಆರ್. ಮೋರೆ : ಮಾನ್ಯ ಅಧ್ಯಕ್ಷರೇ, ಈಗ ಬೆಂಗಳೂರು ಸುತ್ತಮುತ್ತ ಇರುವ ಚಿಕ್ಕ ಬಾಣಾವರ, ಹಾರೋಹಳ್ಳಿ ಮತ್ತು ಅಬ್ಬಿಗೆರೆ ಇವುಗಳನ್ನು ನಗರಸಭೆಗೆ ಸೇರಿಸಬೇಕೆಂದರೆ ಮೊದಲೇ ಈ ಗ್ರಾಮಗಳು ಅಲ್ಲಿ ಠರಾವನ್ನು ಪಾಸು ಮಾಡಬೇಕು. ಆ ಠರಾವನ್ನು ಪಾಸು ಮಾಡಿ ಅಲ್ಲಿ ಡೆಪ್ಯುಟಿ ಕಮಿಷನರಿಗೆ ಕೊಟ್ಟರೆ ಡೆಪ್ಯುಟಿ ಕಮಿಷನರ್ ಅದನ್ನು ಸರ್ಕಾರಕ್ಕೆ ಕಳುಹಿಸುತ್ತಾರೆ. ಆದರೆ ಚಿಕ್ಕ ಬಾಣಾವರ ಮತ್ತು ಸ್ಥಳೀಯ ಸಂಸ್ಥೆಗಳು ಠರಾವನ್ನು ಪಾಸು ಮಾಡಿಲ್ಲ; ಬರೀ ಶಾಸನಸಭೆ ಮೂಲಕ ಅರ್ಜಿಯನ್ನು ಹಾಕಿದ್ದೀರಿ ಅಷ್ಟೆ. ಮತ್ತೆ ಇನ್ನೊಂದು ಈಗ ಲೋಕಸಭಾ ಮತ್ತು ವಿಧಾನಸಭೆಯನ್ನು ವಿಂಗಡಿಸಿ ಕಾರ್ಯಕ್ರಮ ವಿಂಗಡಣೆ ಕಾರ್ಯಕ್ರಮ ಅಂದರೆ ಸೆಂಟ್ರಲ್ ಎಲೆಕ್ಷನ್

ಕಮಿಷನ್ ಅವರು ಮಾಡುತ್ತಿರುವುದರಿಂದ ಈಗ ಸಧ್ಯಕ್ಕೆ ಅವರು ನಮಗೆ ಡೈರೆಕ್ಷನನ್ನು ಕೊಟ್ಟಿದ್ದಾರೆ. ಯಾವ ರೀತಿಯಾಗಿಯೂ ಇದನ್ನು ಮಾಡಬಾರದೆಂದು ಹೇಳಿದ್ದಾರೆ. ಆ ವಿಂಗಡಣೆ ಕಾರ್ಯಕ್ರಮವಾದಮೇಲೆ ಸೆಂಟ್ರಲ್ ಎಲೆಕ್ಷನ್ ಕಮಿಷನ್ ಅವರು ನಮಗೆ ಪರ್ಮಿಷನನ್ನು ಕೊಟ್ಟಮೇಲೆ ಇಂಥ ಗ್ರಾಮಗಳನ್ನೆಲ್ಲಾ ನಾವು ಈ ಪಟ್ಟಣ ಪಂಚಾಯಿತಿಗೆ ಸೇರಿಸುತ್ತೇವೆಂದು ಹೇಳಿ ಈ ಸಂದರ್ಭದಲ್ಲಿ ತಿಳಿಸುತ್ತೇನೆ.

ಶ್ರೀ ಆರ್. ಅಶೋಕ್ : ಮಾನ್ಯ ಅಧ್ಯಕ್ಷರೇ, ಈಗಾಗಲೇ ಕಳೆದ ಐದು ತಿಂಗಳ ಹಿಂದೆ ಬೊಮ್ಮನಹಳ್ಳಿ ನಗರಸಭೆಗೆ ಎರಡು ಪಂಚಾಯಿತಿಗಳನ್ನು ಸೇರಿಸಿದ್ದೀರಿ. ಅದನ್ಯಾಕೆ ಸೇರಿಸಿದಿರಿ? ಆಗ ಡಿವಿಷನ್ ಮಾಡುವುದು ಇರಲಿಲ್ಲವೇ? ಲೋಕಸಭೆ ಮತ್ತು ವಿಧಾನಸಭೆಗಳನ್ನು ಡಿವಿಜನ್ ಮಾಡುತ್ತಿರುವುದು ಇರಲಿಲ್ಲವೇ? ಆಗಲೂ ಇತ್ತಲ್ಲ. ಸೇರಿಸಿದ್ದೀರಲ್ಲಾ ಅದು ಆಗಿ ಸುಮಾರು ಒಂದು ವರ್ಷದ ಮೇಲ್ಪಟ್ಟು ಆಯಿತು. ಡೀ–ಲಿಮಿಟೇಷನ್ ಮಾಡತಕ್ಕದ್ದು. ವಿಧಾನಸಭೆ ಮತ್ತು ಲೋಕಸಭೆಯದು ಆಯಿತಲ್ಲಾ ಈಗ ಐದು ತಿಂಗಳ ಹಿಂದೆ ಸೇರಿಸಿದ್ದೀರಲ್ಲಾ. ಈಗ ಹೊಸದಾಗಿ ಯಾವ ಕಾನೂನು ಬಂದುಬಿಡುತ್ತದೆ? ಅದೇ ಕಾನೂನಿನ ಪ್ರಕಾರ ಈ ಹಳ್ಳಿಗಳನ್ನು ಸೇರಿಸಿ ಎಂದು ನಾನು ತಮ್ಮಲ್ಲಿ ಪ್ರಾರ್ಥನೆಯನ್ನು ಮಾಡಿಕೊಳ್ಳುತ್ತೇನೆ.

ಶ್ರೀ ಎಸ್.ಆರ್. ಮೋರೆ : ಮಾನ್ಯ ಅಧ್ಯಕ್ಷರೇ, ಆ ಗ್ರಾಮದ್ದಲ್ಲ ಅದು ಮುಂಚೆಯೇ ಡೀಲಿಮಿಟೇಷನ್ ಸರ್ಕ್ಯುಲರ್ ಬರುವ ಮುಂಚೆಯೇ ಅದನ್ನು ಕಳುಹಿಸಿರಬೇಕು. ಅದನ್ನು ನಾನು ಪರಿಶೀಲನೆ ಮಾಡುತ್ತೇನೆ. ಮತ್ತೆ ಈ ಡೀ–ಲಿಮಿಟೇಷನ್ ಮುಗಿಯುತ್ತದೆ. ಅದು ಮುಗಿದ ತಕ್ಷಣ ನಾವು ಅದನ್ನು ಪಟ್ಟಣಕ್ಕಾದರೂ ಸೇರಿಸುತ್ತೇವೆ. ಅಥವಾ ನಗರಸಭೆಗಾದರೂ ಅದನ್ನು ಸೇರಿಸುತ್ತೇನೆ.

ಶ್ರೀ ಆರ್. ಅಶೋಕ್ : ಅಷ್ಟರಲ್ಲಿ ಪಂಚಾಯಿತಿ ಚುನಾವಣೆ ನಡೆದುಬಿಡುತ್ತದಲ್ಲಾ ಆಮೇಲೆ ಹೇಗೆ ಸೇರಿಸುತ್ತೀರಿ?

ಶ್ರೀ ಎಸ್.ಆರ್. ಮೋರೆ : ಅದೇನೂ ಮಾಡುವುದಕ್ಕಾಗುವುದಿಲ್ಲ

ಶ್ರೀ ಆರ್. ಅಶೋಕ್ : ಆಮೇಲೆ ಛೇರ್ಮೆನ್‌ರು ಕೇಸ್ ಹಾಕುತ್ತಾರಲ್ಲಾ

ಅಧ್ಯಕ್ಷರು : ಆಯಿತು ಕುಳಿತುಕೊಳ್ಳಿ ಸ್ವಾಮಿ. ಒಂದು ಪ್ರಶ್ನೆಗೆ ಎಷ್ಟೊತ್ತು?

ಶ್ರೀ ಎಸ್.ಆರ್. ಮೋರೆ : ಮೊದಲೇ ಅವರು ನಮಗೆ ಒಂದು ಠರಾವನ್ನು ಪಾಸು ಮಾಡಿ ಕಳುಹಿಸಿ ಎಂದು ಹೇಳಿ.

ಶಿವಮೊಗ್ಗ ಜಿಲ್ಲೆಯಲ್ಲಿ ಸಣ್ಣ ಉಳಿತಾಯ ಏಜೆಂಟರ ಕಮೀಷನ್ ನೀಡುವಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರದ ಬಗ್ಗೆ.

82(1024) ಶ್ರೀ ಸಂಗಮೇಶ್ವರ ಬಿ.ಕೆ. (ಭದ್ರಾವತಿ) : ಮಾನ್ಯ ಸಣ್ಣ ಉಳಿತಾಯ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೇಂದ್ರ ಸರ್ಕಾರದ ಸಣ್ಣ ಉಳಿತಾಯ ಯೋಜನೆಯಡಿ ಶಿವಮೊಗ್ಗ ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧಿಕೃತ ಏಜೆಂಟರ ಸಂಖ್ಯೆ ಎಷ್ಟು;

ಆ) ಇದರಲ್ಲಿ ಮಹಿಳೆಯರ ಸಂಖ್ಯೆ ಎಷ್ಟು? (ತಾಲ್ಲೂಕುವಾರು ವಿವರ ನೀಡುವುದು)

ಇ) ಕಳೆದ ಮೂರು ವರ್ಷಗಳಲ್ಲಿ ಭದ್ರಾವತಿ ತಾಲ್ಲೂಕಿಗೆ ಸಂಬಂಧಿಸಿದಂತೆ, ಏಜೆಂಟರಿಗೆ ಕಮಿಷನ್ ಪಾವತಿಸಲು ಬಿಡುಗಡೆಯಾದ ಹಣವೆಷ್ಟು;

ಈ) ಏಜೆಂಟರಿಗೆ ಪಾವತಿಸಿದ ಕಮಿಷನ್/ಪ್ರೋತ್ಸಾಹ ಧನ ಎಷ್ಟು(ವಿವರ ನೀಡುವುದು);

ಉ) ಸಹಾಯಕ ನಿರ್ದೇಶಕರು ಸಣ್ಣ ಉಳಿತಾಯ ಭದ್ರಾವತಿ ರವರ ವಿರುದ್ಧ ಏಜೆಂಟರಿಗೆ ಕಮಿಷನ್/ಪ್ರೋತ್ಸಾಹ ಧನ ಪಾವತಿಸುವ ಸಂಬಂಧ ಅವ್ಯವಹಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಊ) ಹಾಗಿದ್ದಲ್ಲಿ, ಸರ್ಕಾರದ ಕ್ರಮಗಳೇನು?

ಶ್ರೀ ಬಸವರಾಜ್ ಎಸ್. ಹೊರಟ್ಟಿ (ಸಣ್ಣ ಉಳಿತಾಯ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು)

ಅ) 2669

ಆ) ಎಂ.ಪಿ.ಕೆ.ಬಿ.ವೈ. ಯೋಜನೆಯಡಿಯಲ್ಲಿ ತಾಲ್ಲೂಕುವಾರು ಮಹಿಳಾ ಏಜೆಂಟರ ವಿವರ ಕೆಳಕಂಡಂತೆ ಇದೆ.

ಶಿವಮೊಗ್ಗ	608
ಭದ್ರಾವತಿ	380
ಸಾಗರ	182
ತೀರ್ಥಹಳ್ಳಿ	86
ಹೊಸನಗರ	56
ಶಿಕಾರಿಪುರ	182
ಸೊರಬ	54
ಒಟ್ಟು	1548

ಇ) ಏಜೆಂಟರುಗಳಿಗೆ ಪ್ರೋತ್ಸಾಹ ಧನ ಪಾವತಿಸಲಾಗುತ್ತದೆ. ಅವರಿಗೆ ಕಮಿಷನ್ ನೀಡುವುದಿಲ್ಲ.

ಈ) ಭದ್ರಾವತಿಯಲ್ಲಿನ ಏಜೆಂಟರಿಗೆ ಪ್ರೋತ್ಸಾಹ ಧನವನ್ನು ಕಳೆದ ಮೂರು ಸಾಲುಗಳಲ್ಲಿ ಪಾವತಿಸಿದ ವಿವರ ಈ ಕೆಳಕಂಡಂತಿದೆ.

ಸಾಲು	ಕ್ಲೈಂಗಳ ಸಂಖ್ಯೆ	ಮೊತ್ತ
2000–2001	324	44.95 ಲಕ್ಷಗಳು
2001–2002	332	69.52 ಲಕ್ಷಗಳು
2002–2003	184	4052 ಲಕ್ಷಗಳು

(ಡಿಸೆಂಬರ್ 2004ರವರೆಗೆ ಪಾವತಿಸುವಂತೆ)

ಉ) ಭದ್ರಾವತಿಯಲ್ಲಿ ಸಣ್ಣ ಉಳಿತಾಯ ಸಹಾಯಕ ನಿರ್ದೇಶಕರ ಹುದ್ದೆ ಇರುವುದಿಲ್ಲ. ಆದರೆ ಅಲ್ಲಿ ಅಭಿವೃದ್ಧಿ ಅಧಿಕಾರಿ ಹುದ್ದೆ ಇದೆ. ಆ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ ಮೇಲೆ ದೂರು ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಊ) ಈ ಅಭಿವೃದ್ಧಿ ಅಧಿಕಾರಿ ಮೇಲಿನ ದೂರಿನ ಬಗ್ಗೆ ತನಿಖೆ ನಡೆಸಲಾಗಿದೆ. ತನಿಖಾ ವರದಿಯ ಆಧಾರದ ಮೇಲೆ ಸದರೀ ನೌಕರರನ್ನು ಭದ್ರಾವತಿಯಿಂದ ವರ್ಗಾವಣೆ ಮಾಡಲಾಗಿದೆ.

ಶ್ರೀ ಬಿ.ಕೆ. ಸಂಗಮೇಶ್ವರ್ : ಮಾನ್ಯ ಅಧ್ಯಕ್ಷರೇ, ಇದರಲ್ಲಿ ಕೆಲವು ವಿಚಾರಗಳಲ್ಲಿ ನನಗೆ ಸರಿಯಾಗಿ ಮಾಹಿತಿ ಸಿಕ್ಕಿಲ್ಲ. ಇಲ್ಲಿ ಭ್ರಷ್ಟಾಚಾರ ಮಾಡಿದ್ದಾರೆಂದು ಹಲವಾರು ದೂರುಗಳನ್ನು ಮಾನ್ಯ ಸಚಿವರಿಗೆ ಕೊಟ್ಟಿದ್ದೇವೆ. ಆದರೆ ಅವರು ಇದರ ಮೇಲೆ ಯಾವುದೇ ಒಂದು ಕ್ರಮವನ್ನು ಜರುಗಿಸಿಲ್ಲ. ದಯಮಾಡಿ ಅದನ್ನು ಪರಿಶೀಲಿಸಬೇಕಾಗಿ ಕೋರುತ್ತೇನೆ.

ಶ್ರೀ ಬಸವರಾಜ್. ಎಸ್. ಹೊರಟ್ಟಿ (ಸಣ್ಣ ಉಳಿತಾಯ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು) : ಮಾನ್ಯ ಅಧ್ಯಕ್ಷರೇ ಮಾನ್ಯ ಶಾಸಕರಿಂದ ಮತ್ತು ಸಾರ್ವಜನಿಕರಿಂದ ಸಾಕಷ್ಟು ದೂರುಗಳು ಸಂಬಂಧಪಟ್ಟ ಅಧಿಕಾರಿಯ ಮೇಲೆ ಬಂದಿದ್ದವು. ಅದು ಬಂದ ತಕ್ಷಣ ಅವರನ್ನು ಅಲ್ಲಿಂದ ವರ್ಗಾವಣೆ ಮಾಡಲಾಗಿದೆ. ಮತ್ತು ವಿಚಾರಣೆಗೆ ಈಗಾಗಲೇ ಆದೇಶವನ್ನು ಮಾಡಿದ್ದೇನೆ. ವಿಚಾರಣೆ ಮಾಡಿದ ನಂತರ ಅವರು ತಪ್ಪಿತಸ್ಥ ಆದರೆ ಅವರಮೇಲೆ ಖಂಡಿತವಾಗಿಯೂ ಕ್ರಮ ತೆಗೆದುಕೊಳ್ಳುವ ವ್ಯವಸ್ಥೆಯನ್ನು ಸರ್ಕಾರ ಮಾಡುತ್ತದೆ.

ಆ) ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

ಶ್ರೀ ಹೆಚ್.ಕೆ. ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು: ಮಾನ್ಯ ಅಧ್ಯಕ್ಷರೇ, ದಿನಾಂಕ: 31–01–2005 ರ 5ನೇ ಪಟ್ಟಿಯ ಸದನದಲ್ಲಿ ಉತ್ತರಿಸುವ 15 ಪ್ರಶ್ನೆಗಳ ಪೈಕಿ 13 ಉತ್ತರಗಳನ್ನು ಮತ್ತು ತಡೆಹಿಡಿಯಲಾದ 4 ಪ್ರಶ್ನೆಗಳ ಪೈಕಿ 4 ಉತ್ತರಗಳನ್ನು ಹಾಗೂ ಲಿಖಿತ ಮೂಲಕ ಉತ್ತರಿಸುವ 228 ಪ್ರಶ್ನೆಗಳ ಪೈಕಿ 170 ಪ್ರಶ್ನೆಗಳಿಗೆ ಉತ್ತರಗಳನ್ನು ದಿನಾಂಕ: 01–02–2005 ರಂದು ಸದನದಲ್ಲಿ ಮಂಡಿಸುತ್ತಿದ್ದೇನೆ. ಹಾಗೂ ದಿನಾಂಕ: 01–02–2005 ರ 6ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 210 ಪ್ರಶ್ನೆಗಳ ಪೈಕಿ 168 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

4. ಚುನಾವಣಾ ಪ್ರಸ್ತಾವ

ಶ್ರೀ ಹೆಚ್.ಕೆ. ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಸನ್ಮಾನ್ಯ ಅಧ್ಯಕ್ಷರೇ, ತಮ್ಮ ಪರವಾನಿಗೆಯನ್ನು ಪಡೆದು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವ್ಯವಸ್ಥಾಪನಾ ಮಂಡಳಿಗೆ ಚುನಾವಣೆಯ ಪ್ರಸ್ತಾಪ. ಮಾನ್ಯ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವನಾಗಿ ಈಗಾಗಲೇ ದಿನಾಂಕ: 24–01–2005 ರಂದು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವ್ಯವಸ್ಥಾಪನಾ ಮಂಡಳಿಗೆ ಚುನಾವಣೆಯ ಪ್ರಸ್ತಾವವನ್ನು ಮಂಡಿಸಿದ್ದು, ಚುನಾವಣಾ ಕಾರ್ಯಕ್ರಮ, ವೇಳಾಪಟ್ಟಿಯನ್ನು ಹೊರಡಿಸಲಾಗಿರುತ್ತದೆ. ಅದರಂತೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವ್ಯವಸ್ಥಾಪನಾ ಮಂಡಳಿಗೆ ಇಬ್ಬರು ವಿಧಾನಸಭೆಯ ಸದಸ್ಯರನ್ನು ನಾಮನಿರ್ದೇಶನ ಮಾಡಲು ಈ ಸದನವು ಮಾನ್ಯ ಸಭಾಧ್ಯಕ್ಷರಿಗೆ ಅಧಿಕಾರವನ್ನು ನೀಡಬೇಕೆಂದು ಕೋರುತ್ತೇನೆ.

(ಸದನವು ಸನ್ಮಾನ್ಯ ಸಭಾಧ್ಯಕ್ಷರಿಗೆ ನಾಮ ನಿರ್ದೇಶನ ಮಾಡುವ ಅಧಿಕಾರ ನೀಡಿತು)

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೇ, ಪ್ರಿವಿಲೇಜ್ ಮೋಷನ್ ಬಗ್ಗೆ ಮೂವ್ ಮಾಡುವುದಕ್ಕೆ ಅವಕಾಶವನ್ನು ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೇ, ಪ್ರಶ್ನೋತ್ತರ ಮುಗಿದ ನಂತರ ಆಲಮಟ್ಟಿಯ ಬಗ್ಗೆ ತೆಗೆದುಕೊಳ್ಳುತ್ತೇನೆಂದು ತಾವು ಹೇಳಿದ್ದೀರಿ.

ಅಧ್ಯಕ್ಷರು : ಅವಕಾಶವನ್ನು ಕೊಡುತ್ತೇನೆ. ಈಗ ಒಂದೇ ಒಂದು. ಸಭೆಯ ಮುಂದಿಡಲಾಗುವ ಕಾಗದಪತ್ರಗಳು ಆದಮೇಲೆ ನಿಮ್ಮದನ್ನು ತೆಗೆದುಕೊಳ್ಳೋಣ.

5. ಸಭೆಯ ಮುಂದಿಡಲಾದ ಕಾಗದಪತ್ರಗಳು

ಕಾರ್ಯದರ್ಶಿ (ವಿಧಾನಸಭೆ) : ಮಾನ್ಯ ಅಧ್ಯಕ್ಷರೇ, ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣಾ (ತಿದ್ದುಪಡಿ) ವಿಧೇಯಕ, 2005 ನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ಮಂಡಿಸಲಾಯಿತು.

6. ವರದಿಯನ್ನೊಪ್ಪಿಸುವುದು

ಶ್ರೀ ಎನ್.ಎಸ್. ಬೋಸರಾಜ್ (ಅಧ್ಯಕ್ಷರು, ಖಾಸಗಿ ಸದಸ್ಯರುಗಳ ವಿಧೇಯಕ ಹಾಗೂ ನಿರ್ಣಯಗಳ ಸಮಿತಿ) : ಮಾನ್ಯ ಅಧ್ಯಕ್ಷರೇ, ಖಾಸಗಿ ಸದಸ್ಯರುಗಳ ವಿಧೇಯಕ ಹಾಗೂ ನಿರ್ಣಯಗಳ ಸಮಿತಿಯ ಎರಡನೇ ವರದಿಯನ್ನು ಸಭೆಯ ಮುಂದೆ ಒಪ್ಪಿಸುತ್ತೇನೆ.

ಅಧ್ಯಕ್ಷರು : ವರದಿಯನ್ನು ಒಪ್ಪಿಸಲಾಯಿತು.

7. ಹಕ್ಕು ಚ್ಯುತಿ ನಿರ್ಣಯ ಮಂಡಿಸಲು ಅನುಮತಿ ಕೋರಿಕೆ

(1) ವಿಷಯ : ವಿಧಾನ ಪರಿಷತ್ ಸದಸ್ಯರೊಬ್ಬರು ಕೆ.ಡಿ.ಪಿ. ಸಭೆಯ ತೀರ್ಮಾನವನ್ನು ಪ್ರಶ್ನಿಸುತ್ತಿರುವ ಬಗ್ಗೆ.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಮಾನ್ಯ ಅಧ್ಯಕ್ಷರೇ, ಸರ್ಕಾರದ ಅಧಿಕಾರಿಗಳ ಸಭೆಯನ್ನು ಜಿಲ್ಲಾ ಮಟ್ಟದಲ್ಲಿ ಮತ್ತೆ ತಾಲ್ಲೂಕು ಮಟ್ಟದಲ್ಲಿ ಆ ತಾಲ್ಲೂಕಿನ ಕೆಡಿಪಿ ಅಧ್ಯಕ್ಷತೆ ವಹಿಸುವ ಶಾಸಕರು ಅಥವಾ ಇಪ್ಪತ್ತು ಅಂಶ ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವ ಶಾಸಕರನ್ನು ಬಿಟ್ಟು ಬೇರೆಯವರು ಯಾರೂ ಕರೆಯಬಾರದು ಎಂದು ಹೇಳಿ ಸರ್ಕಾರದ ಸುತ್ತೋಲೆ ಇದೆ. ಇದನ್ನು ಎರಡು ಸಲ ಪುನರುಚ್ಚರಿಸಿದ್ದಾರೆ. ಮತ್ತೆ ಆ ಕಾರ್ಯಕ್ರಮಕ್ಕೆ ಅಧ್ಯಕ್ಷರು ಯಾರು, ಸದಸ್ಯರು ಯಾರು ಎಂದೂ ಕೂಡ ಈ ಸರ್ಕಾರದ ಸುತ್ತೋಲೆ ಇದೆ. ಆ ಮಾಹಿತಿಯನ್ನು ನಾನು ತಮಗೆಲ್ಲಾ ಕೊಟ್ಟಿದ್ದೇನೆ. ಈ ಮಧ್ಯೆ ವಿಧಾನ ಪರಿಷತ್ತಿನ ಸನ್ಮಾನ್ಯ ಸದಸ್ಯರಾದ ಶ್ರೀ ಉಗ್ರಪ್ಪನವರು ನಮ್ಮ ಕ್ಷೇತ್ರಗಳಲ್ಲಿ ಏಕಾ ಏಕಿ ಸಭೆಯನ್ನು ಕರೆದು ಗ್ರಾಮ ಪಂಚಾಯತಿಯ, ತಾಲ್ಲೂಕು ಪಂಚಾಯತಿಯ, ಜಿಲ್ಲಾ ಪಂಚಾಯತಿಯ ಪುರಸಭೆಯ, ಎಲ್ಲಾ ಸಂಘಸಂಸ್ಥೆಗಳ ಸದಸ್ಯರನ್ನು ಒಳಗೊಂಡಂತೆ ಒಂದು ಪರಿಶೀಲನಾ ಸಭೆ ಮಾಡಬೇಕು ಎಂದು ಹೇಳಿ ಅವರ ಕಛೇರಿಯಿಂದ ಆದೇಶವನ್ನು ಹೊರಡಿಸುತ್ತಾರೆ. ತಾವು ಹೀಗೆ ಕರೆಯಬಾರದು, ಸರ್ಕಾರಿ ಸುತ್ತೋಲೆ ಇದೆ. ತಮಗೆ ಅಧಿಕಾರ ಇಲ್ಲ ಎಂದು ಹೇಳಿ ನಾವು ಅವರಿಗೆ ಉತ್ತರ ಕೊಡಿಸಿದ ಮೇಲೆ ಅಧಿಕಾರಿಗಳಿಗೆ ಹೇಳಿ, ಅದನ್ನು ಪರ್ಯಾಲೋಚನಾ ಸಭೆ ಎಂದು ನಾನು ಬದಲಾಯಿಸಿದ್ದೇನೆ, ನೀವು ಮತ್ತೆ ಕರೆಯಲೇಬೇಕು ಎಂದು ಕರೆಸುತ್ತಾರೆ. ನಾನು ಒಬ್ಬ ಶಾಸಕನಾಗಿ ಈ ಸಭೆಯಲ್ಲಿ ಈ ವಿಷಯ ಮಾತನಾಡಲಿಕ್ಕೆ ಬಹಳ ಸಣ್ಣವನಾಗುತ್ತೇನೆಂದು ಹೇಳಿ ರೈಸ್ ಮಾಡಲಿಲ್ಲ. ಆದರೆ ಯಾವ ಸ್ಥಿತಿ ನಿರ್ಮಾಣ ಆಗಿದೆ ಎಂದರೆ ಇಡೀ ಜಿಲ್ಲೆಗೆ ಅವರು ಟೂರ್ ಪ್ರೋಗ್ರಾಮ್ ಕೊಡುತ್ತಾರೆ. ಇಂಥಿಂಥ ದಿವಸ ಇಂಥಿಂಥ ತಾಲ್ಲೂಕಿನಲ್ಲಿ ಅವರ ಮತಕ್ಷೇತ್ರದ ಎಲ್ಲಾ ಸದಸ್ಯರನ್ನೂ ಒಳಗೊಂಡು....

ಶ್ರೀ ಹೆಚ್.ಕೆ. ಪಾಟೀಲ್ : (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಮಾಧುಸ್ವಾಮಿಯವರು ಹಕ್ಕುಚ್ಯುತಿ ನಿರ್ಣಯವನ್ನು ಮಂಡಿಸುವುದಕ್ಕೆ ಈಗಾಗಲೇ ತಮ್ಮ ಪರವಾನಗಿಯನ್ನು ಕೇಳಿದ್ದಾರೆ. ಅದರ ಬಗ್ಗೆ ಸೂಕ್ಷ್ಮವಾಗಿ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದರು. ನಾನು ತಮ್ಮ ಗಮನಕ್ಕೆ ಹಾಗೂ ಸನ್ಮಾನ್ಯ ಸದಸ್ಯರ ಗಮನಕ್ಕೆ ತರುತ್ತೇನೆ.

ಶ್ರೀ ಎಂ.ಟಿ. ಕೃಷ್ಣಪ್ಪ : ಹೇಳಲಿ ಬಿಡಿ. It is an individual issue.

ಶ್ರೀ ಹೆಚ್.ಕೆ. ಪಾಟೀಲ್ : ಸನ್ಮಾನ್ಯ ಅಧ್ಯಕ್ಷರೆ, ಈ ಸಂದರ್ಭದಲ್ಲಿ ನಮ್ಮ ನಿಯಮಾವಳಿಯನ್ನು ನಾವು ಗಮನಿಸಬೇಕಾಗುತ್ತದೆ. ಈ ಸದನದಲ್ಲಿ ತಾವು ಕೊಟ್ಟಿರತಕ್ಕಂಥ, ತಮ್ಮ ಪೀಠದಿಂದ ಬಂದಿರತಕ್ಕ ಹಲವಾರು ರೂಲಿಂಗ್ಸ್ ಏನು ಇದ್ದಾವೆ. ಅವುಗಳನ್ನು ಗಮನಿಸಬೇಕಾಗುತ್ತದೆ. ಅವುಗಳನ್ನು ಗಮನಿಸಿದಾಗ ಮತ್ತೊಂದು ಸದನದ ಸದಸ್ಯರ ಬಗ್ಗೆ ಈ ಮನೆಯಲ್ಲಿ ಯಾವುದೇ ರೀತಿ ಆಗಿರತಕ್ಕಂಥ ರಿಮಾರ್ಕನ್ನು ಪಾಸ್ ಮಾಡುವುದಾಗಲೀ ಅಥವಾ ಅದರ ಬಗ್ಗೆ ಚರ್ಚೆ ಮಾಡುವುದಾಗಲೀ, ನಮಗೆ ಚರ್ಚೆಮಾಡಬಾರದು ಹಾಗೆ ಎಂದು ಹೇಳಿ ಸೂಕ್ಷ್ಮವಾದ ನಿಯಮಾವಳಿಗಳನ್ನು ನಾವು ರೂಪಿಸಿಕೊಂಡಿದ್ದೇವೆ, ನಾನು ತಮ್ಮ ಗಮನಕ್ಕೆ ಈ ಸಂದರ್ಭದಲ್ಲಿ ತರುತ್ತೇನೆ, ಮಾನ್ಯ ಸದಸ್ಯರ ಗಮನಕ್ಕೂ ತರುತ್ತಿದ್ದೇನೆ.

"Neither House of Parliament can claim or exercise any authority over a member of the other House. Consequently, neither House can take upon itself to punish any breach of privilege or contempt offered to it by a member or officer of the other House.

No case of a breach of privilege or contempt of the House can be founded on a speech made by a member in the other House or in any State Legislature in India. because the proceedings of each House of Parliament and all Legislatures are privileged and no action can be taken in one House for anything that is said in another House."

ನಾನು ಮೊದಲನೇ ಪ್ಯಾರಾದಲ್ಲಿದ್ದ ಲೈನ್ ಅನ್ನು ಏನು ಓದಿದೆ, ಅದನ್ನು ಗಮನದಲ್ಲಿಟ್ಟುಕೊಂಡು....

Sri. J.C. MADHUSWAMY : This is the confusion.

ಲಾ ಮಿನಿಸ್ಟರ್ ಅವರೇ, ಮೊದಲನೇ ಪ್ಯಾರಾ ಅಲ್ಲ. ಪೂರಾ ಪ್ಯಾರಾವನ್ನು ಓದೇ ನಾನು ನಿಂತಿರುವುದು.

ಶ್ರೀ ಹೆಚ್.ಕೆ. ಪಾಟೀಲ್ : ಈ ವಿಷಯದಲ್ಲಿ ಏನಾದರೂ ತಾವು ಗಂಭೀರವಾಗಿ ಗಮನಿಸಬೇಕು ಎಂದು ಹೇಳಿ ಅನಿಸಿತು ಎಂದರೆ ತಾವು ಹಾಗೂ ನಮ್ಮ ಮೇಲ್ಮನೆಯ ಸಭಾಪತಿಗಳು ಇಬ್ಬರೂ ಚರ್ಚೆ ಮಾಡಿ, ಇಬ್ಬರೂ ಸದಸ್ಯರುಗಳನ್ನು ಕರೆಸಿ ಮಾತನಾಡಬಹುದೇ ವಿನಃ ಇಲ್ಲಿ ಮತ್ತೊಂದು ಮನೆಯ ಸದಸ್ಯರ ಬಗ್ಗೆ, ಹಕ್ಕುಚ್ಯುತಿ ವಿಚಾರವಾಗಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡತಕ್ಕಂಥದ್ದು ಸೂಕ್ತವಾದುದು ಆಗುವುದಿಲ್ಲ. ಆದ್ದರಿಂದ ಈ ಒಂದು ನಿಯಮಾವಳಿ ವಿಚಾರವನ್ನು ಹಾಗೂ ನಮ್ಮ ಶಿಷ್ಟಾಚಾರದ ವಿಚಾರವನ್ನು ತಮ್ಮ ಅವಗಾಹನೆಗೆ ತರುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಸಾರ್, ದಯವಿಟ್ಟು ಕೇಳಿ. ನಾವು ಆ ಮನೆಯಲ್ಲಿ ನಡೆದಿರುವಂತಹ ಯಾವುದೇ ವ್ಯವಹಾರವನ್ನು ಚರ್ಚೆಗೆ ತಂದಿಲ್ಲ. ನಾವು ಆ ಮನೆಯ ಸದಸ್ಯರು ಅಲ್ಲಿ ಏನು ಮಾತನಾಡುತ್ತಾರೆ? ಅಲ್ಲೇನು ವ್ಯವಹಾರ ನಡೆದಿದೆ? ಅದನ್ನು ಈ ಮನೆಯಲ್ಲಿ ಚರ್ಚೆ ಮಾಡುವಷ್ಟು ಕೆಳಕ್ಕೆ ನಾವು ಇಳಿದಿಲ್ಲ. ನಾವು ಒಬ್ಬ ಇಂಡಿವಿಜುಯಲ್, he may be a member of the other House. ನಮ್ಮ ಹಕ್ಕಿಗೆ ಚ್ಯುತಿ ತಂದಿದ್ದಾರೆ ಎಂದರೆ ನಾವು ಇಲ್ಲಿ ಪ್ರಶ್ನೆ ಮಾಡಬಾರದು ಎಂದು ಹೇಳಿ ಯಾವ ನಿಯಮವೂ ಇಲ್ಲ. ನಾನು ಅದಕ್ಕೇ ಮೊದಲೇ ಹೇಳಿದ್ದೇನೆ, ಸರ್ಕಾರಿ ಸುತ್ತೋಲೆಗಳನ್ನೆಲ್ಲಾ ವಾಯ್‌ಲೇಟ್ ಮಾಡಿ ಸಭೆ ಮಾಡುವುದು. ಈ ಸಂಪ್ರದಾಯಕ್ಕಿಂತ ಕೆಟ್ಟ ಸಂಪ್ರದಾಯನೋ ಅಥವಾ ಅಲ್ಲವೋ ಎಂದು ಹೇಳಿ ಈ ಸಭೆ ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ. ನಾನು ಸ್ಪಷ್ಟವಾಗಿ ಲಾ ಮಿನಿಸ್ಟರ್‌ಗೆ ಕೇಳುತ್ತಿದ್ದೇನೆ.

ಅಧ್ಯಕ್ಷರು : ದಯಮಾಡಿ. ಮಾನ್ಯ ವಿಧಾನ ಪರಿಷತ್ತಿನ ಸದಸ್ಯರೊಬ್ಬರ ಬಗ್ಗೆ ತಾವು ಪ್ರಸ್ತಾಪ ಮಾಡುತ್ತಿದ್ದೀರಿ, ವಿಧಾನ ಪರಿಷತ್ತಿನ ಸದಸ್ಯರು ಆ ಸದನದ ಒಳಗಡೆ ಏನು ಆಗಿದೆ ಎಂದು ಅದನ್ನೂ ಪ್ರಸ್ತಾಪ ಮಾಡುತ್ತಿಲ್ಲ, ಅಥವಾ ಇನ್ಯಾವುದಾದರೂ ಸಭೆಗಳಲ್ಲಿ, ಕಮಿಟಿ ಮೀಟಿಂಗ್ಸ್‌ನಲ್ಲೋ, ಅಥವಾ ಜಿಲ್ಲಾ ಪಂಚಾಯತ್ ಸಭೆಗಳಲ್ಲಿನ ವಿಚಾರವನ್ನೂ ಪ್ರಸ್ತಾಪ ಮಾಡುತ್ತಿಲ್ಲ. ಈಗ ಬೇರೆ ಕಡೆ ಹೊರಗಡೆ ಅವರು ಕೆಲವು ಅಧಿಕಾರಿಗಳ ಸಭೆಗಳನ್ನು ಕರೆದಿದ್ದಾರೆ. ಅವರಿಗೆ ಅಧಿಕಾರ ಇರಲಿಲ್ಲ. ನಡೆಸಿದ್ದಾರೆ, ಆದ್ದರಿಂದ ನನ್ನ ಬಗ್ಗೆ ಕಾಮೆಂಟ್ ಮಾಡಿದ್ದಾರೆಂದು ಹೇಳಿ ಹಕ್ಕುಚ್ಯುತಿ ಆಗಿದೆ ಎನ್ನುತ್ತಿದ್ದೀರಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ಹೌದು ಸಾರ್?

ಅಧ್ಯಕ್ಷರು : ಆದ್ದರಿಂದ ಈ ಹಕ್ಕುಚ್ಯುತಿ ಆ್ಯಂಬಿಟ್‌ನಲ್ಲಿ ಅದು ಬರುವುದಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ : ಬರುತ್ತದೆ ಸಾರ್. ನಾನು ಕನ್‌ವಿನ್ಸ್ ಮಾಡುತ್ತೇನೆ. ನಾನು ನಿಂತಿದ್ದೇನೆ ಸಾರ್. ನನಗೆ ಅವಕಾಶ ಕೊಡಿ.

ಅಧ್ಯಕ್ಷರು : ಈಗ ಚರ್ಚೆ ಆಗುವುದಕ್ಕೆ ಅವಕಾಶ ಇಲ್ಲ. ದಯಮಾಡಿ ಕೇಳಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ಅವಕಾಶ ಕೊಡಿ.

ಅಧ್ಯಕ್ಷರು : ನನ್ನ ಮಾತನ್ನೂ ತಾವು ಕೇಳಬೇಕು.

ಶ್ರೀ ಎಂ.ಟಿ. ಕೃಷ್ಣಪ್ಪ : ಆ ವಿಷಯದಲ್ಲಿ ಚರ್ಚೆ ಆಗಬೇಕು.

ಅಧ್ಯಕ್ಷರು : ದಯಮಾಡಿ ಕೇಳಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ಸಾರ್....

ಅಧ್ಯಕ್ಷರು : ದಯಮಾಡಿ ನನ್ನ ಮಾತನ್ನೂ ಕೇಳಿ. ಮಾನ್ಯ ಕಾನೂನು ಸಚಿವರು ಹೇಳಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಲಾ ಮಿನಿಸ್ಟರ್ ಅವರು ವಾದ ಇಟ್ಟಿದ್ದಾರೆ. ನನ್ನ ವಾದವನ್ನೂ ಕೇಳಿ, ತಾವು ತೀರ್ಮಾನ ಹೇಳಿ ಸಾರ್, ಅಷ್ಟೇ ನನ್ನ ವಾದ.

ಅಧ್ಯಕ್ಷರು : ತಡೆಯಿರಿ ಸ್ವಲ್ಪ.

ಶ್ರೀ ಜೆ.ಸಿ. ಮಾಧುಸ್ವಾಮಿ : ನನ್ನ ವಾದವನ್ನೂ ಕೇಳಿ, ತಾವು ತೀರ್ಮಾನ ಹೇಳಿ. ಇಷ್ಟೇ ನನ್ನ ವಾದ.

ಅಧ್ಯಕ್ಷರು : ಅದೇನೋ ಹೇಳುತ್ತಾರೆ. ಅನ್ನ ನೋಡುವಾಗ ಒಂದು ಅಕ್ಕಿ ಹಿಸುಕಿದರೆ ಸಾಕು.

ಶ್ರೀ ಜೆ.ಸಿ. ಮಾಧುಸ್ವಾಮಿ : ಇಲ್ಲ, ಇಲ್ಲ. ದಯಮಾಡಿ ನಮ್ಮ ವಾದ ಕೇಳಿ.

(ಗೊಂದಲ)

ಅಧ್ಯಕ್ಷರು : ಎಲ್ಲಾ ವಾದವನ್ನೂ ಕೇಳಿದ್ದೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ನಮ್ಮ ವಾದವನ್ನು ಕೇಳಿ ನಿರ್ಣಯ ಕೊಡಿ.

(ಗೊಂದಲ)

ಶ್ರೀ ಎಂ.ಟಿ. ಕೃಷ್ಣಪ್ಪ : ಈ ತರಹ ಬೇಕಾದಷ್ಟು ಕಡೆ ಆಗುತ್ತಿದೆ......

(ಗೊಂದಲ)

ಅಧ್ಯಕ್ಷರು : ನಮ್ಮದೇನು ವಾದ ಎಂದರೆ ಇದು ಹಕ್ಕುಚ್ಯುತಿ ಆಗುವುದಿಲ್ಲ.

ಶ್ರೀ ಜಿ.ವಿ. ಶ್ರೀರಾಮ ರೆಡ್ಡಿ : ಎರಡೂ ಕಡೆಯ ವಾದವನ್ನು ತಾವು ಕೇಳಬೇಕಲ್ಲಾ ಅಧ್ಯಕ್ಷರೆ, ಈಗ ನೀವೂ ಲಾ ಮಿನಿಸ್ಟರ್ ವಾದವನ್ನು ಕೇಳಿದ್ದೀರಿ. ಇವರ ವಾದವನ್ನೂ ಕೇಳಬೇಕಲ್ಲಾ. ಇವರ ವಾದವನ್ನೂ ಕೇಳಿ ಆಮೇಲೆ ಬೇಕಾದರೆ ನೀವು ತೀರ್ಮಾನ ಮಾಡಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ದಯಮಾಡಿ ನನ್ನ ವಾದ ಕೇಳಬೇಕು.

ಶ್ರೀ ಎಂ.ಟಿ. ಕೃಷ್ಣಪ್ಪ : ಮಾನ್ಯ ಹಿರಿಯ ಸದಸ್ಯರು ಹೇಳುತ್ತಿರುವ ವಿಚಾರದ ಬಗ್ಗೆ ಅವಕಾಶ ಕೊಡಬೇಕು.

ಅಧ್ಯಕ್ಷರು : ಮಾನ್ಯ ಕೃಷ್ಣಪ್ಪನವರೇ ತಾವು ಕುಳಿತುಕೊಳ್ಳಿ. ನೀವು ಮೊದಲನೇ ಸಾರಿ ಬಂದಿರುವ ಸದಸ್ಯರು. ದಯಮಾಡಿ ಕುಳಿತುಕೊಳ್ಳಿ. ನನ್ನ ಮಾತು ಕೇಳಿ, ಅನಂತರ ನೀವು ಹೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಮಾಧುಸ್ವಾಮಿ ಅವರು ತಂದಿರುವ ವಿಷಯ ಏನು? ಆ ಮನೆಯ ಒಬ್ಬ ಸದಸ್ಯರು ನನ್ನ ಆಬ್ಸೆನ್ಸ್‌ನಲ್ಲಿ ಸರ್ಕಾರಿ ಅಧಿಕಾರಿಗಳನ್ನೆಲ್ಲಾ ಕರೆದುಕೊಂಡು ನನ್ನನ್ನು ಟೀಕೆ ಮಾಡಿ ಅಪಮಾನ ಆಗುವಂತಹ ಘಟನೆಗಳು ನಡೆಯುತ್ತಿವೆ. ಅನೇಕ ಕಡೆ ಅನುಭವಕ್ಕೆ ಬಂದಿದೆ ಎನ್ನುತ್ತಿದ್ದಾರೆ. ಅವರು ಅಧಿಕಾರಿಗಳನ್ನು ಭೇಟಿ ಮಾಡಬಾರದು. ಅವರ ಜೊತೆ ಓಡಾಡಬಾರದು ಎಂಬ ವಿಚಾರ ಯಾವುದನ್ನೂ ನಾವು ಚರ್ಚೆ ಮಾಡುತ್ತಿಲ್ಲ. ಆದರೆ ಇಲ್ಲಿ ಶಾಸಕರ ಹಕ್ಕುಚ್ಯುತಿ ಆಗಲಿಲ್ಲವೇ? ಅಲ್ಲಿ ಅಧಿಕಾರಿಗಳನ್ನು ಕರೆದು ಶಾಸಕರನ್ನು ಟೀಕೆ ಮಾಡುವಂತಹ ಅಧಿಕಾರವನ್ನು ಆ ಮನೆಯ ಸದಸ್ಯರಿಗೆ ಯಾರು ಕೊಟ್ಟಿದ್ದಾರೆ? ಅವರ ಕೆಲಸ ಅವರು ಮಾಡುವುದಕ್ಕೆ ನಾವ್ಯಾರೂ ಅಡ್ಡಿ ಮಾಡಿಲ್ಲ. ಈ ಬಗ್ಗೆ ನ್ಯಾಯ ನಮಗೆ ಬೇಕು ಎಂದು ನಿಮ್ಮ ಮುಂದೆ ಕೇಳದೇ ಇದ್ದರೆ ಯಾವ ರೂಲ್ ಇದಕ್ಕೆ ಅಡ್ಡಿ ಬರುತ್ತದೆ ಸ್ವಾಮಿ? ನಾವು ಅವರ ವೈಯಕ್ತಿಕ ವಿಚಾರಗಳನ್ನು ಯಾವುದೂ ಪ್ರಸ್ತಾಪ ಮಾಡುತ್ತಿಲ್ಲ. ನನ್ನ ಹಕ್ಕಿಗೆ ಚ್ಯುತಿ ಆಗಿದೆ ಎಂದು ಅವರು ಏನು ಪೂರ್ಣವಾಗಿ ಹೇಳುತ್ತಾರೋ ಅದನ್ನು ಕೇಳೋಣ. ಆಮೇಲೆ ರೂಲಿಂಗ್ ಕೊಡಿ.

184-10 **ಶ್ರೀ ಬಿ. ನಾಗರಾಜ ಶೆಟ್ಟಿ** : ನಮ್ಮ ಕ್ಷೇತ್ರದಲ್ಲಿ ಇದೇ ರೀತಿ ಮಾಜಿ ಶಾಸಕರು ಮಾಡುತ್ತಿದ್ದಾರೆ.

ಅಧ್ಯಕ್ಷರು : ಮಾಧುಸ್ವಾಮಿಯವರೇ ದಯಮಾಡಿ. ನೀವು ಎಲ್ಲಾ ವಿಚಾರದ ಬಗ್ಗೆ ಪೇಪರ್ ಕಟಿಂಗ್ಸ್ ಕೊಟ್ಟಿದ್ದೀರಿ. ನಾನು ಎಲ್ಲವನ್ನೂ ನೋಡಿದ್ದೇನೆ. ಇದು ಬಹಳ ಸೂಕ್ಷ್ಮವಾದ ವಿಚಾರ. ಅವರು ಆ ಮನೆಯ ಸದಸ್ಯರು.

SRI. J.C. MADHUSWAMY : I must be given an opportunity.

ಅಧ್ಯಕ್ಷರು : ದಯಮಾಡಿ ನನ್ನ ಮಾತೂ ಕೇಳಿ. ಇಲ್ಲಿ ಚರ್ಚೆ.....

ಶ್ರೀ ಜೆ.ಸಿ. ಮಾಧುಸ್ವಾಮಿ : ಅವಕಾಶ ಕೊಡಬೇಕು ಸಾರ್.

ಅಧ್ಯಕ್ಷರು : ಇಲ್ಲಿ ಕೇಳಿ. ಚರ್ಚೆ ಸಆದರೆ ಅದು ಯಾವ್ಯಾವ ದಿಕ್ಕಿಗೆ ಹೋಗುತ್ತದೆ? ದಯಮಾಡಿ ಕೇಳಬೇಕು.

ಶ್ರೀ ಜೆ.ಸಿ. ಮಾಧುಸ್ವಾಮಿ : ನನ್ನ ಪ್ರಾಥಮಿಕ ಸಬ್ಮಿಷನ್ ಕೇಳಿ. ಚರ್ಚೆ ಬೇಡ ಎಂದರೆ ತಾವು ರೂಲಿಂಗ್ ಕೊಡಿ. You cannot object me at the initial stage itself. ನೀವು ನಾನು ಏನು ಹೇಳುತ್ತೇನೆ ಎನ್ನುವುದನ್ನು ಕೇಳಬೇಕು.

ಅಧ್ಯಕ್ಷರು : ನೀವು ಕೊಟ್ಟಿರುವುದನ್ನು ನಾನು ನೋಡಿದ್ದೇನೆ. ಈಗ ಮಾನ್ಯ ಕಾನೂನು ಸಚಿವರು ಹೇಳಿದ್ದಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಅವರು ಹೇಳಿದ್ದಾರೆ. ನನ್ನ ವಾದವನ್ನೂ ತಾವು ಕೇಳಬೇಕಲ್ಲಾ ಸಾರ್. ಈಗ ಅವರ ವಾದವನ್ನು ನಾನು ಕುಳಿತುಕೊಂಡು ಕೇಳಿದೆ. ತಾವು ನನ್ನ ವಾದವನ್ನೂ ಕೇಳಿ. ನಿಮಗೆ ಅದು ಚರ್ಚೆ ಆಗಬಾರದು ಎಂದರೆ ಬೇಡ. ನಾನು ಅಡ್ಡಿ ಮಾಡುವುದಿಲ್ಲ. ತಮ್ಮ ಸ್ಥಾನ ದೊಡ್ಡದು. ಅವರು ಹೇಳಿದ ಮೇಲೆ ನಾನು ಮಾತನಾಡಬೇಕಲ್ಲಾ.

ಅಧ್ಯಕ್ಷರು : ಆಯಿತು ಹೇಳಿ. Without referring....

ಶ್ರೀ ಹೆಚ್.ಕೆ. ಪಾಟೀಲ್ : ಸಾರ್, ತಾವು ಅವಕಾಶ ಕೊಟ್ಟರೆ ನಮ್ಮದೇನೂ ತಕರಾರು ಇಲ್ಲ. ಆದರೆ ತಾವೇನು ನೋಟೀಸ್ ಕೊಟ್ಟಿದ್ದೀರಿ. ಅದರಲ್ಲಿ ಸ್ಪಷ್ಟವಾಗಿದೆ.

ಅಧ್ಯಕ್ಷರು : ಮಾನ್ಯ ಸಚಿವರೇ, ಇದು ಬಹಳ ಸೂಕ್ಷ್ಮವಾದ ವಿಚಾರ. ಅದಕ್ಕೇ ನಾನು ಹೇಳಿದೆ. ಸೂಕ್ಷ್ಮವಾದ ಮತ್ತು ಗಂಭೀರವಾದ ವಿಚಾರ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅವರಿಗೆ ಅವಕಾಶ ಕೊಟ್ಟಿದ್ದಾರೆ. ಅವರ ವಾದ ಏನು ಹೇಳುತ್ತಾರೋ ಹೇಳಲಿ, ನೋಡೋಣ.

ಅಧ್ಯಕ್ಷರು : ಕೆಲವು ವಿಚಾರಗಳನ್ನು ಹೇಳುವುದಕ್ಕೆ ಅವಕಾಶ ಕೊಡಿ. ನಂತರ ತೀರ್ಪು ಕೊಡಿ ಎಂದು ಹೇಳಿದ್ದಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಸಾರ್, ಒಂದನೆಯ ಅಂಶ. ಅವರಿಗೆ ಆ ಸಭೆಯನ್ನು ಕರೆಯಲಿಕ್ಕೆ ಸರ್ಕಾರ ಯಾವುದೇ ರೀತಿಯಲ್ಲಿ ಅವಕಾಶವನ್ನು ಕೊಟ್ಟಿಲ್ಲ. ಎರಡನೇ ಅಂಶ. ಅವರು ಮೊದಲನೇ ಕಾರಣಕ್ಕೆ ಜಿಲ್ಲಾ ಪರಿಷತ್‌ಗೆ ಆದೇಶ ಕೊಡುತ್ತಾರೆ. ಇಡೀ ನನಗೆ ಓಟು ಹಾಕಿದವರೆಲ್ಲರನ್ನೂ ಸಭೆ ಸೇರಿಸಿ ಅವರ ಜೊತೆ ಅಧಿಕಾರಿಗಳನ್ನು ಕೂರಿಸಿಕೊಂಡು ಸಭೆ ಮಾಡಿ ಎಂದು ಹೇಳುತ್ತಾರೆ. ಎರಡನೆಯದು ಎಲ್ಲಾ ತಾಲ್ಲೂಕುಗಳಿಗೆ ಅವರು ನೋಟೀಸ್ ಕೊಡುತ್ತಾರೆ. ಆದೇಶ ಕೊಡುತ್ತಾರೆ. ನೋಟೀಸ್ ಅಲ್ಲ, ಅವರು ಆದೇಶ ಕೊಡುತ್ತಾರೆ. ಮೂರನೆಯದು ಏನು ಅಂದರೆ ಎರಡು ಸರ್ಕಾರಿ ಆದೇಶಗಳನ್ನು ಅವರು ಮಿಸ್‌ಕೋಟ್ ಮಾಡುತ್ತಾರೆ. ನಾವು ನಿಮಗೆ ಅಧಿಕಾರ ಇಲ್ಲ ಎಂದು ಅಧಿಕಾರಿಗಳು ಬರೆದರೆ, ಪರ್ಯಾಲೋಚನೆ ಸಭೆ ನಡೆಸಲಿಕ್ಕೆ ಅಧಿಕಾರ ಇದೆ ಎಂದು ಹೇಳಿ

he has misquoted the Government circulars. ಎರಡು ಸರ್ಕುಲರ್‌ಗಳನ್ನು ಮಿಸ್ ಕೋಟ್ ಮಾಡಿ ಸಭೆ ಕರೆಸುತ್ತಾರೆ. ಸಭೆಗೆ ಯಾರನ್ನು ಕರೆಸುತ್ತಾರೆ ಎಂದರೆ ಇಡೀ ಅವರ ಮತದಾರ ತಾಲ್ಲೂಕಿನವರು. ಗ್ರಾಮ ಪಂಚಾಯತಿಯ ಸದಸ್ಯರು, ಜಿಲ್ಲಾ ಪಂಚಾಯತಿಯ ಸದಸ್ಯರು, ತಾಲ್ಲೂಕು ಪಂಚಾಯತಿಯ ಸದಸ್ಯರು, ಪುರಸಭೆ ಕಾರ್ಪೋರೇಷನ್, ಇವರನ್ನೆಲ್ಲಾ ಕರೆದು ಸಭೆ ಸೇರಿಸಿ ಎಂದು ಆದೇಶ ಕೊಡುತ್ತಾರೆ. ನಾವು ಅವರಿಗೆ ಪರ್ಯಾಲೋಚನಾ ಸಭೆ ಮಾಡಬಾರದು. ಅವರು ಯಾರನ್ನೂ ಕೇಳಬಾರದು. ಅಧಿಕಾರಿಗಳಿಗೆ ಅವರಿಗೆ ಅಕ್ಸೆಸ್ ಇರಬಾರದು ಎಂದು ಮಾತನಾಡುವುದಿಲ್ಲ. ನಾವು ಚಿಕ್ಕನಾಯಕನ ಹಳ್ಳಿಯಲ್ಲಿ ಐ.ಬಿ.ನಲ್ಲಿ ಒಂದು ವ್ಯವಸ್ಥೆ ಮಾಡಿ ಎಲ್ಲಾ ಅಧಿಕಾರಿಗಳೂ ಅಲ್ಲಿ ಸೇರಿದಾಗ ತಾಲ್ಲೂಕು ಪಂಚಾಯತ್ ಸಭಾಂಗಣದ ಬೀಗವನ್ನು ಒಡೆಸಿ ಇಡೀ ಅವರ ಸಮೂಹವನ್ನು ಕರೆದುಕೊಂಡು ಒಳಗೆ ನುಗ್ಗಿ ಸಭೆ ಮಾಡುತ್ತಾರೆ. ಮೂರನೆಯದು ಅಂದರೆ, ಅವರು ಅಷ್ಟಕ್ಕೇ ನಿಲ್ಲಲಿಲ್ಲ. ಅವರು ಪ್ರೆಸ್ ಕಾನ್‌ಫರೆನ್ಸ್ ಮಾಡಿ ನನ್ನನ್ನು ಮತ್ತು ಮಾನ್ಯ ಕಿರಣ್ ಕುಮಾರ್ ಅವರನ್ನು ಇವತ್ತು ಅವಹೇಳನ ಮಾಡಿದ್ದಾರೆ. ಚಿಕ್ಕನಾಯಕನ ಹಳ್ಳಿ ಶಾಸಕರಿಬ್ಬರನ್ನೂ ಅವಹೇಳನ ಮಾಡಿದ್ದಾರೆ. ಇವರು ಇಂಥಿಂಥ ಕೆಲಸವನ್ನು ಹೀಗೆ ಮಾಡಿದ್ದಾರೆ ಇದು ಕಾನೂನಿಗೆ ವಿರುದ್ಧ. ನಾನು ಹೋಗಿ ವಿಧಾನ ಪರಿಷತ್ತಿನಲ್ಲಿ ರೈಸ್ ಮಾಡುತ್ತೇನೆ ಎಂದು ಹೇಳಿದ್ದಾರೆ. ನಾನು ನಿಮಗೆ ಪೇಪರ್ ತೋರಿಸಿದ್ದೇನೆ. ವೈಯಕ್ತಿಕವಾಗಿ ಆರೋಪ ಮಾಡುತ್ತಾರೆ. ಅದರಲ್ಲಿ ನನ್ನ ಗ್ರಾಮಕ್ಕೆ 138 ಇಂಗು ಬಾವಿಗಳನ್ನು ಶಾಸಕರು ಮಾಡಿಸಿದ್ದಾರೆ. ಶಾಸಕರಿಗೆ ಅಧಿಕಾರ ಇಲ್ಲ ಎನ್ನುತ್ತಾರೆ. ನಾನು ಹೇಳುತ್ತಿದ್ದೇನೆ. ಪ್ರತಿ ಹಳ್ಳಿಗಳಿಗೆ 100-100 ಇಂಗು ಬಾವಿಗಳನ್ನು ಮಾಡಿಸಿರುವುದು. ಎರಡನೆಯದಾಗಿ, ನಾನು ಇವೊತ್ತಿನವರೆಗೂ ಸಹಿ ಹಾಕಿಲ್ಲ" ಚಿಕ್ಕನಾಯಕನಹಳ್ಳಿಯಲ್ಲಿರುವ ಯಾವುದೇ ಎಸ್‌ಡಿಎಂಸಿ ಅಪ್ರೂವ್ ಆಗಿಲ್ಲ. ಎಲ್ಲಾ ಶಾಲೆಗಳಲ್ಲಿನ ಎಸ್‌ಡಿಎಂಸಿಗಳನ್ನು ವಿನಾಕಾರಣ ಕಾನೂನಿಗೆ ವಿರುದ್ಧವಾಗಿ, ಪೋಷಕರು ಇಲ್ಲದಿರುವಂತಹ ಸಮಿತಿಗಳನ್ನು ರಚಿಸಿಕೊಳ್ಳುವ ಮೂಲಕ ಇವರು ಅಪ್ರೂವ್ ಮಾಡಿದ್ದಾರೆ. I throw a challenge. ಚಿಕ್ಕನಾಯಕನಹಳ್ಳಿಯಲ್ಲಿ ಒಂದೇ ಒಂದು ಸಮಿತಿ ಅಪ್ರೂವ್ ಆಗಿದ್ದರೆ, ನಾನು ಈ ಸದನದ ಸದಸ್ಯತ್ವಕ್ಕೆ ರಾಜೀನಾಮೆ ಕೊಟ್ಟು ಹೋಗುತ್ತೇನೆ. ಮೂರನೆಯದಾಗಿ, ಆ ಸಭೆಗೆ ಯಾರ್‍ಯಾರು ಹೋಗಿದ್ದರು ಎಂಬ ಬಗ್ಗೆ ಒಂದು ತನಿಖೆಯಾಗಬೇಕು. ಎಂತಹ filthy language ಅನ್ನು ಅವರು ಅಧಿಕಾರಿಗಳನ್ನುದ್ದೇಶಿಸಿ ಬಳಸುತ್ತಾರೆಂದರೆ, ಇದರ ಬಗ್ಗೆಯೂ ತನಿಖೆಯಾಗಬೇಕು. ಅಧಿಕಾರಿಗಳೆಂದರೆ, ಕಾಲು ಕಸವೆಂದು ತಿಳಿದುಕೊಂಡು, ಸಭೆಯಲ್ಲಿ ಕುಳಿತುಕೊಂಡು 'ಎಂಎಲ್‌ಎ ಮನೆಯ ಚೇಲಾಗಳೇ?' ಎಂದು ಇವರು ಕೇಳುವುದೇ? You exercise your power. How dare he is to question us? ನಾಲ್ಕನೆಯದಾಗಿ, ಇವೊತ್ತು ಈ ಧಾಟಿಯಲ್ಲಿ ಏನು ವರ್ತಿಸಿದ್ದಾರೆ, ಬರೀ ಚಿಕ್ಕನಾಯಕನಹಳ್ಳಿಯಲ್ಲಿ ಮಾತ್ರವಲ್ಲ. ಎಲ್ಲಾ ಕಡೆಗಳಲ್ಲೂ ಅವರಿಗೆ ಬೇಕಾದ ಪುಂಡರನ್ನು, ಗೂಂಡಾಗಳನ್ನು ಪಕ್ಕದಲ್ಲಿ ಕೂರಿಸಿಕೊಂಡು ತಾಲ್ಲೂಕು ಪಂಚಾಯಿತಿಗಳಲ್ಲಿ ರಿವ್ಯೂ ಮಾಡುತ್ತಿದ್ದಾರೆ. ಈ ರೀತಿ ಮಾಡುವುದಕ್ಕೆ ಅವರಿಗೆ ಅಧಿಕಾರ ಕೊಟ್ಟವರ್‍ಯಾರು? ಇದರಿಂದ ನನಗೆ ಅವಮಾನವಾಗಿದೆ ಸನ್ಮಾನ್ಯ ಸರ್ಕಾರಕ್ಕೆ ಅವಮಾನವಾಗಿದೆ. ಸನ್ಮಾನ್ಯ ಮುಖ್ಯಮಂತ್ರಿಗಳಾದ ಧರ್ಮಸಿಂಗ್ ಅವರಿಗೆ ಅವಮಾನವಾಗಿದೆ. 'ಒಂದೇ ಒಂದು ಕೆಲಸ ಈ ರಾಜ್ಯದಲ್ಲಿ ಆಗಿಲ್ಲ'ವೆಂದು ನಿಮ್ಮ ಶಾಸಕರು ಅಲ್ಲಿ ಪ್ರೆಸ್ ಮೀಟ್ ಮಾಡುತ್ತಾರೆ. 'ಸರ್ಕಾರ 4 ಚಿಲ್ಲರೆ ಕೋಟಿ ರೂಪಾಯಿಗಳಷ್ಟು ಹಣ ಕೊಡಬೇಕಾಯಿತು. ಒಂದು ನಯಾ ಪೈಸೆಯನ್ನೂ ಕೊಟ್ಟಿಲ್ಲ. ನನ್ನ ಕೆಪಾಸಿಟಿ ಮೇಲೆ ಇಷ್ಟು ತಂದೆ. ಎಂಎಲ್‌ಎಗಳು ಖರ್ಚು ಮಾಡುತ್ತಾರೆ' ಎಂದು ಹೇಳಿಕೆ ಕೊಡುತ್ತಾರೆ. ಇದು ನನ್ನ ಹಕ್ಕಿಗೆ ಚ್ಯುತಿಯಾದಂತಲ್ಲವೇ? Am I not curtailed in my right

ಶ್ರೀ ಹೆಚ್.ಕೆ. ಪಾಟೀಲ್ : ಸನ್ಮಾನ್ಯ ಅಧ್ಯಕ್ಷರೆ. ಇದು ಹಕ್ಕುಚ್ಯುತಿಯಾಗುವುದಿಲ್ಲವೆಂದು ನಾವು ಈಗಾಗಲೇ ಒಂದು ಅಭಿಪ್ರಾಯ ವ್ಯಕ್ತಪಡಿಸಿದ ನಂತರ ಮತ್ತೆ ಈ ಕುರಿತು ಚರ್ಚೆ ಮಾಡುವುದು ಸೂಕ್ತವೆನಿಸುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ತಾವು ಈ ಬಗ್ಗೆ ರೂಲಿಂಗ್ ನೀಡುವ ಮುನ್ನ ನಿಮಗೆ ಅನುಕೂಲವಾಗಲೆಂದು ಪ್ರಸ್ತಾಪಿಸುತ್ತಿದ್ದೇನೆ. ನಿಮಗೆ ಒಂದು ದಾಖಲೆ ಕೊಡುತ್ತೇವೆ. ಅದನ್ನು ತಾವು ಗಮನಿಸಿ. ಆ ಮನೆ(ವಿಧಾನ ಪರಿಷತ್ತು)ಯಲ್ಲಿ ಅಲ್ಲಿನ ಮಾನ್ಯ ಸದಸ್ಯರಾದ ವಿ.ಎಸ್. ಉಗ್ರಪ್ಪನವರು ಈ ಮನೆಯ ಸದಸ್ಯರಾದ ಕ್ಯಾತ್ಸಂದ್ರ ಎನ್. ರಾಜಣ್ಣನವರ ಬಗ್ಗೆ ಪ್ರಸ್ತಾಪಿಸಿದಾಗ, ಪ್ರಸ್ತಾವವನ್ನು ಹಕ್ಕುಚ್ಯುತಿ ಸಮಿತಿಗೆ ಅಲ್ಲಿ ರೆಫರ್ ಮಾಡಿದ್ದಾರೆ. ಅಲ್ಲಿ ಹೇಗೆ ಅವಕಾಶವಾಯಿತು? ಆದರೆ, ಇಲ್ಲಿ ಏಕೆ ಬೇಡವೆಂದು ಹೇಳುತ್ತಿದ್ದೀರಿ? ಇದರ ಬಗ್ಗೆ ದಾಖಲೆ ಇದೆ. ಆ ಮನೆಯಲ್ಲಿ ಕ್ಯಾತ್ಸಂದ್ರ ಎನ್. ರಾಜಣ್ಣನವರ ಬಗ್ಗೆ ಚರ್ಚೆ ಮಾಡಿ ಪ್ರಕರಣವನ್ನು ಹಕ್ಕುಚ್ಯುತಿ ಸಮಿತಿಗೆ ರೆಫರ್ ಮಾಡಿದ ಬಳಿಕ. ಇಲ್ಲಿ ಈ ಪ್ರಕರಣದಲ್ಲಿ ವಿಧಾನ ಪರಿಷತ್ತಿನ ಒಬ್ಬ ಸದಸ್ಯರು ನಮ್ಮ ಕಾರ್ಯಕ್ಕೆ ಅಡ್ಡಿಪಡಿಸುತ್ತಿದ್ದಾರೆಂದು ಹೇಳುವುದನ್ನು ತಾವು ಕೇಳಿ, ತಮಗೆ ಕನ್‌ವಿನ್ಸ್ ಆದಾಗ ಪ್ರಸ್ತಾವವನ್ನು ಹಕ್ಕುಚ್ಯುತಿ ಸಮಿತಿಗೆ ರೆಫರ್ ಮಾಡಬೇಕೆಂದು ಕೇಳುತ್ತಿದ್ದೇವೆ. ಅಲ್ಲಿ ಏಕೆ ಕಾನೂನು ಅಡ್ಡಿಬರಲಿಲ್ಲ? ಆದುದರಿಂದ, ಇದುವರೆವಿಗೂ ಏನು ಸಂಪ್ರದಾಯ ನಡೆದುಕೊಂಡು ಬಂದಿದೆ. ಸದಸ್ಯರಾದ ಮಾನ್ಯ ಮಾಧುಸ್ವಾಮಿಯವರು ಹೇಳಿರುವಂತೆ, ಈ ಕುರಿತಾದ ಎಲ್ಲಾ ವಿವರಗಳನ್ನೂ ನಿಮ್ಮ ಮುಂದಿಟ್ಟಿದ್ದೇವೆ. ಅವರ ಕೆಲಸಕ್ಕೆ ನಾವ್ಯಾರೂ ಕೂಡ ಅಡ್ಡಿಪಡಿಸುತ್ತಿಲ್ಲ. ಆದರೆ, ಇದರ ಜೊತೆಗೆ ಶಾಸಕರ ಹಕ್ಕನ್ನು ಪ್ರಶ್ನಿಸುವ ಮೂಲಕ ಅವರಿಗೆ ಅಪಮಾನವೆಸಗುವ ಕೆಲಸವನ್ನು ಚುನಾಯಿತ ಪ್ರತಿನಿಧಿಯಾಗಿ ನಾವೂ ಮಾಡಬಾರದು, ಅವರೂ ಮಾಡಬಾರದು. ಆ ಘಟನೆ ನಡೆದಿದೆಯೆಂದ ಮೇಲೆ ಅದರ ಬಗ್ಗೆ ಮಾನ್ಯ ಅಧ್ಯಕ್ಷರು ಗಮನಿಸಬೇಕಾಗುತ್ತದೆ.

ಶ್ರೀ ಕ್ಯಾತ್ಸಂದ್ರ ಎನ್.ರಾಜಣ್ಣ(ಬೆಳ್ಳಾವಿ) : ಮಾನ್ಯ ಅಧ್ಯಕ್ಷರೆ, ಇದು ಚಿಕ್ಕನಾಯಕನಹಳ್ಳಿಗೆ ಮಾತ್ರ ಸಂಬಂಧಿಸಿದಂತೆ ನಡೆದಿರುವುದಲ್ಲ. ತುಮಕೂರು ಜಿಲ್ಲೆ ವ್ಯಾಪ್ತಿಗೊಳಪಡುವ ಎಲ್ಲಾ 13 ಕ್ಷೇತ್ರಗಳ ತಾಲ್ಲೂಕುಗಳ ವ್ಯಾಪ್ತಿಯಲ್ಲಿ ಕೂಡ ಕೆಡಿಪಿ ಸಭೆ ಜರುಗಿಸಲು ಆಯಾ ತಾಲ್ಲೂಕಿನ, ಕ್ಷೇತ್ರದ ಶಾಸಕರುಗಳು ಅಧ್ಯಕ್ಷರಾಗಿರುತ್ತಾರೆ. ಇವರು ಕೆಡಿಪಿ ಸಭೆ ಜರುಗಿಸಲು ಅಧಿಕಾರಿಗಳ ಮುಖಾಂತರ ನೋಟೀಸ್ ಕೊಡಿಸುತ್ತಿದ್ದಾರೆ. ಕೆಡಿಪಿ ಸಭೆಯ ಅಧ್ಯಕ್ಷರಾಗಿರುವ ಶಾಸಕರುಗಳೇನಿದ್ದಾರೆ. ಅವರೆಲ್ಲರಿಗೂ ಇದರಿಂದ ಅಪಮಾನವಾಗಿದೆ, ಅವರ ಹಕ್ಕುಗಳಿಗೆ ಚ್ಯುತಿಯುಂಟಾಗಿದೆ. ಇದು ಕೇವಲ ಮಾನ್ಯ ಮಾಧುಸ್ವಾಮಿಯವರ ಪ್ರಶ್ನೆಯಲ್ಲ. ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿರುವಂತೆ, ಈಗಾಗಲೇ ಮೇಲ್ಮನೆಯಲ್ಲಿ ಹಕ್ಕುಚ್ಯುತಿ ಸಮಿತಿಗೆ ರೆಫರ್ ಮಾಡಿದ್ದಾರೆ. ಅದೇ ರೀತಿ ಇಲ್ಲಿಯೂ ಕೂಡ ಈ ವಿಷಯವನ್ನು ಹಕ್ಕುಚ್ಯುತಿ ಸಮಿತಿಗೆ ರೆಫರ್ ಮಾಡುವುದು ಸೂಕ್ತವೆಂದು ಹೇಳಿ, ಅವರ ಮಾತನ್ನು ನಾನೂ ಕೂಡ ಅನುಮೋದಿಸುತ್ತೇನೆ.

(ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು ಮಾತನಾಡಲು ಎದ್ದು ನಿಂತರು)

ಅಧ್ಯಕ್ಷರು : ಮಾನ್ಯ ವಾಟಾಳ್ ನಾಗರಾಜ್‌ರವರೆ, ತಾವು ದಯಮಾಡಿ ಕುಳಿತುಕೊಳ್ಳಬೇಕು. ಇದು ಬಹಳ ಸೂಕ್ಷ್ಮ ಪ್ರಶ್ನೆಯಾಗಿದೆ.

ಶ್ರೀ ಎಂ.ಟಿ. ಕೃಷ್ಣಪ್ಪ : ಈ ಪ್ರಕರಣದಿಂದ ನಮಗೆಲ್ಲರಿಗೂ ಅವಮಾನವಾಗಿದೆ. ದಯಮಾಡಿ ಈ ಬಗ್ಗೆ ಚರ್ಚಿಸಲು ಅವಕಾಶ ಕಲ್ಪಿಸಿಕೊಡಬೇಕು.

ಶ್ರೀ ಹೆಚ್. ನಿಂಗಪ್ಪ(ಕುಣಿಗಲ್) : ಮಾನ್ಯ ಅಧ್ಯಕ್ಷರೆ, ಪ್ರಾರಂಭದಲ್ಲಿ ಅವರು ತುಮಕೂರು ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯ ನಿರ್ವಹಣಾ ಅಧಿಕಾರಿಗಳಿಗೆ 'ನಾನು ಪ್ರತಿ ಕ್ಷೇತ್ರದಲ್ಲೂ ಕೂಡ ಪ್ರಗತಿ ಪರಿಶೀಲನೆ ಕಾರ್ಯ ನಡೆಸಬೇಕಾಗಿದೆ. ಅದಕ್ಕೋಸ್ಕರ, ನಿಮ್ಮ ಎಲ್ಲಾ ದಾಖಲಾತಿಗಳೊಂದಿಗೆ ಸಿದ್ಧರಾಗಿರಬೇಕು' ಎಂದು ಆದೇಶಿಸುವ ರೀತಿಯಲ್ಲಿ ಪತ್ರ ಬರೆಯುತ್ತಾರೆ. ಆ ಪತ್ರದನ್ವಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯವರು ತಾಲ್ಲೂಕು ಪಂಚಾಯಿತಿಯ ಎಲ್ಲಾ ಎಕ್ಸಿಕ್ಯೂಟಿವ್ ಆಫೀಸರ್‌ಗಳಿಗೆ ಪತ್ರ ಬರೆದು, ಪ್ರತಿ ಕ್ಷೇತ್ರದ ಅಧಿಕಾರಿಗಳನ್ನು ಸನ್ನದ್ಧಗೊಳಿಸಿ, ಈ ಸಭೆ ಏರ್ಪಡಿಸಬೇಕು' ಎಂದು ಹೇಳಿದ್ದಾರೆ. ಈ ಸಭೆ ಏರ್ಪಡಿಸುವುದಕ್ಕೆ ವಿಧಾನ ಪರಿಷತ್ತಿನ ಸದಸ್ಯರಿಗೆ ಯಾವುದೇ ರೀತಿಯ ಅಧಿಕಾರ ಇಲ್ಲವೆಂದು ಗಮನಕ್ಕೆ ತಂದಾಗ, ಮತ್ತೊಂದು ಪತ್ರ ಬರೆಯುತ್ತಾರೆ ಅಂದರೆ, 'ಪರ್ಯಾಲೋಚನಾ ಸಭೆ' ಎಂದು ಪದವನ್ನು ಬದಲಾವಣೆ ಮಾಡಿಕೊಂಡು ಮತ್ತೆ ಅದೇ ತರಹದ ಒಂದು ಸಭೆ ಕರೆಯುತ್ತಾರೆ. ಆ ರೀತಿ ಕರೆದಂತಹ ಸಭೆಯಲ್ಲಿ ಅಧಿಕಾರಿಗಳೊಂದಿಗೆ ಮಾತನಾಡಲಿ ಆದರೆ, ಶಾಸಕರುಗಳ ಕಾರ್ಯ ವೈಖರಿ ಬಗ್ಗೆ ಅವರು ಟೀಕೆ ಮಾಡುತ್ತಾರೆ. ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ 100 ಇಂಗು ಗುಂಡಿಗಳನ್ನು ಒಂದೇ ಊರಿಗೆ ಮಂಜೂರು ಮಾಡಿದ್ದಾರೆ. ಆದರೆ ಶಾಸಕರು ಇಲ್ಲಿ ಏನೋ ಮಾಡಿದ್ದಾರೆಂದು ಪತ್ರಿಕೆಗಳಲ್ಲಿ ಬರುವ ರೀತಿಯಲ್ಲಿ ಅವರು ಹೇಳಿಕೆ ನೀಡುತ್ತಾರೆ. ತುಮಕೂರು ಜಿಲ್ಲೆಯಲ್ಲಿ ಯಾವುದೇ ಒಂದು ಅಭಿವೃದ್ಧಿ ಕೆಲಸ-ಕಾರ್ಯಗಳು....

ಅಧ್ಯಕ್ಷರು : ಆಯಿತು. ನನಗೆ ಅರ್ಥವಾಗಿದೆ. ಗೊತ್ತಾಗಿದೆ. ದಯಮಾಡಿ ಕುಳಿತುಕೊಳ್ಳಿ.

ಶ್ರೀ ಹೆಚ್. ನಿಂಗಪ್ಪ : ಜಿಲ್ಲೆಯಲ್ಲಿ ಯಾವುದೇ ಒಂದು ಅಭಿವೃದ್ಧಿ ಕೆಲಸಗಳು ಈ ತನಕ ಆಗಿಲ್ಲ. ಯಾವುದೇ ಹಣ ಬಿಡುಗಡೆ ಮಾಡಿಲ್ಲ ಅನ್ನತಕ್ಕ ಮಾತನ್ನು ಹೇಳಿದ್ದಾರೆ. ತುಮಕೂರು ಜಿಲ್ಲೆಯಲ್ಲಿ ಇದೊಂದು ದೊಡ್ಡ ಪ್ರಕರಣ ದಯಮಾಡಿ ಇದರ ಬಗ್ಗೆ ತನಿಖೆಯಾಗಬೇಕು.

ಶ್ರೀ ಎಂ.ಟಿ. ಕೃಷ್ಣಪ್ಪ : ನೂರಾರು ಜನರನ್ನು ಕರೆದುಕೊಂಡು ಬಂದು ನಮಗೆ ಅವಮಾನ ಮಾಡುವಂತಾದ್ದು ಸರಿಯಲ್ಲ. ಇದರಿಂದ ನಮಗೆ ನೋವಾಗಿದೆ.

ಅಧ್ಯಕ್ಷರು : ಇದು ಬಹಳ ಗಂಭೀರವಾದ ವಿಚಾರ. ವಿಧಾನಸಭಾ ಸದಸ್ಯರು ತಮ್ಮ ಕ್ಷೇತ್ರದ ವ್ಯಾಪ್ತಿಗೊಳಪಡುವ ಪಂಚಾಯಿತಿ ಸದಸ್ಯರುಗಳನ್ನು ಹಾಗೂ ಮತದಾರರನ್ನು ಕರೆದು ಕೆಡಿಪಿ ಸಭೆಯ ಅಧ್ಯಕ್ಷತೆ ವಹಿಸುವ ಮೂಲಕ ಏನು ಕೆಲವು ತೀರ್ಮಾನಗಳನ್ನು ಕೈಗೊಂಡಿದ್ದರು, ಅದರ ಬಗ್ಗೆ ವಿಧಾನ ಪರಿಷತ್ತಿನ ಸದಸ್ಯರೊಬ್ಬರು ಮತ್ತೊಂದು 'ಪರ್ಯಾಯ ಸಭೆ' ಕರೆದ ಬಳಿಕ ಹೊರಗಡೆ ಪ್ರೆಸ್ ಕಾನ್‌ಫರೆನ್ಸ್ ಕರೆದು ಕೆಡಿಪಿ ಸಭೆಯಲ್ಲಿ ಕೈಗೊಂಡಿರುವ ತೀರ್ಮಾನಗಳನ್ನು ಪ್ರಶ್ನಿಸುವಂತಹ ಕೆಲಸ ಮಾಡಿದ್ದಾರೆನ್ನುವ ವಿಚಾರವನ್ನು ಪ್ರಸ್ತಾಪಿಸಿದ್ದಾರೆ. ಆದುದರಿಂದ, ಈ ವಿಚಾರದಲ್ಲಿ ಕೆಲವು ನಿಯಮಾವಳಿ ಸರಿಯಿಲ್ಲದಿದ್ದರೆ, ಬದಲಾವಣೆಯಾಗಬೇಕಾಗಿದೆ ಅಥವಾ ನಿಯಮಾವಳಿಯನ್ನು ಹೊಸದಾಗಿ ರಚಿಸಬೇಕಾದ ಅಗತ್ಯವಿದೆಯೇ ಎಂಬುದರ ಬಗ್ಗೆ ಗಂಭೀರವಾಗಿ ವಿಚಾರ ಮಾಡಬೇಕು.

ಈ ತರಹದ ಪ್ರಕರಣ ನೋಡಿದರೆ.... ಈಗ ಏನಾಗುತ್ತದೆಂದರೆ, ವಿಧಾನ ಪರಿಷತ್ತಿನ ಸದಸ್ಯರಿಗೂ ಈ ಮನೆಯ ಸದಸ್ಯರಿಗೂ ಜಿದ್ದಾಟ ಆರಂಭವಾಗುತ್ತದೆ. ಮತ್ತೆ ಅದು ಎಲ್ಲಿಗೋ ಹೋಗುತ್ತದೆಂಬ ಕಾರಣದಿಂದ ನಾನು ಮಾನ್ಯ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಮತ್ತು ಮಾನ್ಯ ಮುಖ್ಯಮಂತ್ರಿಗಳು ಇದನ್ನು ಗಮನಿಸಬೇಕು. ಮಾನ್ಯ ಮುಖ್ಯಮಂತ್ರಿಗಳೇ, ವಿಧಾನಸಭಾ ಸದಸ್ಯರ ಅಧ್ಯಕ್ಷತೆಯಲ್ಲಿ ಜರುಗಿರುವ ಕೆಡಿಪಿ ಸಭೆಯಲ್ಲಿ ಕೈಗೊಂಡ ತೀರ್ಮಾನಗಳನ್ನು ವಿಧಾನ ಪರಿಷತ್ತಿನ ಸದಸ್ಯರು ಪರ್ಯಾಯ ಸಭೆ ಜರುಗಿಸುವ ಮೂಲಕ ಹೊರಗಡೆ ಪ್ರೆಸ್ ಕಾನ್‌ಫರೆನ್ಸ್ ನಡೆಸಿ ಕೈಗೊಂಡಿರುವ ತೀರ್ಮಾನಗಳನ್ನು, ಅವರಿಗೆ ಅಧಿಕಾರ ಇಲ್ಲದಿದ್ದಾಗ್ಯೂ ಪ್ರಶ್ನಿಸಿರುವ ಬಗ್ಗೆ ಬಹಳ ಗಂಭೀರವಾಗಿ ಚರ್ಚೆಯಾಗುತ್ತಿದೆ. ಆದುದರಿಂದ, ಈ ಸಂಬಂಧವಾದ ನಿಯಮಾವಳಿಗೆ ಕೆಲವು ತಿದ್ದುಪಡಿ ಮಾಡುವ ಮೂಲಕ ಮಾನ್ಯ ಮುಖ್ಯಮಂತ್ರಿಗಳು ಏನಾದರೊಂದು ಕ್ರಮ ಕೈಗೊಳ್ಳಬೇಕು. ಮಾನ್ಯ ಸದಸ್ಯರಾದ ಮಾಧುಸ್ವಾಮಿಯವರು ಪ್ರಸ್ತಾಪಿಸಿರುವ ವಿಷಯ ಬಹಳ ಗಂಭೀರವಾದುದು ಹಾಗೂ ಸೂಕ್ತವಾದುದಾಗಿದೆ. ಆದರೆ, ಇದು ಪ್ರಿವಿಲೇಜ್‌ಗೆ ಅಟ್ರ್ಯಾಕ್ಟ್ ಆಗುವುದಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ : ಇಲ್ಲ, ತಾವು ಕ್ಷಮಿಸಬೇಕು. ಇದು ಪ್ರಿವಿಲೇಜ್ ಸರ್.

ಅಧ್ಯಕ್ಷರು : ದಯಮಾಡಿ ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಇದರ ಬಗ್ಗೆ ಸಂಬಂಧಪಟ್ಟ ಎಲ್ಲರನ್ನೂ ಕರೆದು ಏನು ನಿಯಮಾವಳಿ.....

ಶ್ರೀ ಜೆ.ಸಿ. ಮಾಧುಸ್ವಾಮಿ : ತಾವು ಇಲ್ಲಿ ಒಂದು ಅಪ್ಪಣೆ ಕೊಡಿಸಿದ್ದೀರಿ. ಸದಸ್ಯರಾದ ಕ್ಯಾತಸಂದ್ರ ಎನ್. ರಾಜಣ್ಣನವರ ಪ್ರಕರಣವೊಂದರಲ್ಲಿ "ಆ ಮನೆಯ ಸದಸ್ಯರು ಈ ಮನೆಯ ಸದಸ್ಯರ ಮೇಲೆ ಹಕ್ಕುಚ್ಯುತಿ ಪ್ರಸ್ತಾವ ಮಂಡಿಸಲು ಅವಕಾಶವಿಲ್ಲ'ವೆಂದು ಕಂದಾಯ ಸಚಿವರಾದ ಸನ್ಮಾನ್ಯ ಎಂ.ಪಿ. ಪ್ರಕಾಶ್‌ರವರು ನಮಗೆ ಉತ್ತರ ಕೊಟ್ಟರು. ಈ ವಿಷಯವನ್ನು ತಮ್ಮ ಸಮಕ್ಷಮದಲ್ಲೇ ನಾನು ಪ್ರಸ್ತಾಪಿಸಿದೆ. ಇದೇ ಸನ್ಮಾನ್ಯ ಹೆಚ್.ಕೆ. ಪಾಟೀಲರು ಹೇಳಿದ ಕಾನೂನು ಏನಿದೆ. 'ಇದು ಪ್ರಿವಿಲೇಜ್ ಆಗುವುದಿಲ್ಲ'ವೆಂದು ಅವೊತ್ತು ತಾವು ಇದೇ ಸದನದಲ್ಲಿ ನಿಂತುಕೊಂಡು ಉತ್ತರಿಸಿದಿರಿ. Still it is referred to the Privileges Committee. ಚೇರ್‌ಗೆ ತಾವು ಕಾಗದ ಬರೆದರೂ ಕೂಡ ಆ ಸಮಿತಿಯವರು ನಿಮಗೆ ಶರಣಾಗಿಲ್ಲ. ತಮ್ಮಿಂದ ಕಾಗದ ಹೋದರೂ ಕೂಡ ವಿಧಾನಸಭೆಯ ಹಕ್ಕುಬಾಧ್ಯತಾ ಸಮಿತಿಯೊಂದಿಗೆ ಬಂದು ಕುಳಿತಿಲ್ಲ. ಹಾಗಾದರೆ, ನಮಗೆ We have top most priority for the Council. ಹಿರಿಯರು ಇರಬೇಕಾದ ಸಭೆಯಲ್ಲಿ ಇದೊಂದು ದುರಾದೃಷ್ಟ. ಸಭೆಯನ್ನು ಇಂತಹ ಹುಡುಗಾಟಗಳಿಗೆ, ಚಟಗಳಿಗೆ ಬಳಸಿಕೊಳ್ಳುತ್ತಿರುವುದನ್ನು ನೋಡಿ ಸಹಿಸಿಕೊಂಡು ಕುಳಿತುಕೊಳ್ಳುವುದಕ್ಕಾಗುವುದಿಲ್ಲ. ತಮ್ಮ ಕಾಗದಕ್ಕೆ ಗೌರವ ಬಂದಿಲ್ಲ. ಈ ಮನೆಯ ಸದಸ್ಯರಾದ ಕ್ಯಾತಸಂದ್ರ ಎನ್. ರಾಜಣ್ಣನವರ ಮೇಲೆ ಹಕ್ಕುಚ್ಯುತಿ ಪ್ರಸ್ತಾವ ತಂದಿರುವುದರ ಬಗ್ಗೆ ಹಕ್ಕುಬಾಧ್ಯತಾ ಸಮಿತಿಯೊಂದಿಗೆ ಚರ್ಚಿಸಲು ಬಾರದಿರುವುದು ಮತ್ತು ತಮ್ಮ ಎರಡೂ ಪತ್ರಗಳಿಗೆ ಪ್ರತಿಕ್ರಿಯಿಸದಿರುವವರು ಇನ್ನು ನಮಗೆ ಪ್ರತಿಕ್ರಿಯಿಸುತ್ತಾರೆಯೇ? ನಾನು ಇದರ ಬಗ್ಗೆ ಚಾರ್ಜ್

ಹೋಗುವುದು. ಯಾರು ಹೇಗೆ ಬೇಕೋ ಹಾಗೆ ಮಾಡಿಕೊಂಡು ಹೋಗುವುದಾದರೆ.... ಹಾಗಾದರೆ, ಅವರು ಹೊರಡಿಸಿರುವ ಒಂದು ಸುತ್ತೋಲೆ ಏನಿದೆ, They must adopt a nodal taluka. ಪ್ರತಿ ಎಂಎಲ್‌ಸಿ ಕೂಡ ಒಂದು ನೋಡಲ್ ತಾಲ್ಲೂಕನ್ನು ಅಡಾಫ್ಟ್ ಮಾಡಿಕೊಳ್ಳಬೇಕು. Either he must be voter in that taluk or he must be living in that taluk and he has the permanent postal address. ಎಂಎಲ್‌ಸಿ ವ್ಯಾಪ್ತಿಗೆ ನಲವತ್ತು ವಿಧಾನಸಭಾ ಕ್ಷೇತ್ರಗಳು ಒಳಪಡುತ್ತವೆ. ಅದರಲ್ಲಿ ಶಿಕ್ಷಕರ ಮತ್ತು ಪದವೀಧರರ ಕ್ಷೇತ್ರಗಳೂ ಬರುತ್ತವೆ. ಹೀಗೆ 4–4 ಜಿಲ್ಲೆಗಳಿಗೂ ಅವರು ಅಡ್ಡಾಡಿಕೊಂಡು ಹೋದರೆ ಎಂಎಲ್‌ಎಗಳಾದ ನಾವು ಹೇಗೆ ಕೆಲಸ ಮಾಡುವುದು? ಅವರದೇ ನಿಯಮಗಳಿರುವುದರಿಂದ ಇದರ ಬಗ್ಗೆ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಹೇಳಬೇಕು. 'Nodal Taluk' ಎಂದು ನೀವು ಡಿಕ್ಲೇರ್ ಮಾಡಿಕೊಳ್ಳಬೇಕು. ಅಲ್ಲಿ ಒಂದು ಪೋಸ್ಟಲ್ ಅಡ್ರೆಸ್ ಕೊಡಬೇಕು. ಆ ತಾಲ್ಲೂಕಿನಲ್ಲಿ ಅವರು ವಾಸವಾಗಿರಬೇಕು ಅಥವಾ ಆ ತಾಲ್ಲೂಕಿನಲ್ಲಿ ಅವರು ಮತದಾರರಿದ್ದರೆ ಮಾತ್ರ ಅಲ್ಲಿನ ಸಭೆಗೆ ಹೋಗಲಿಕ್ಕೆ ಅರ್ಹತೆ ಇದೆಯೇ ವಿನಾ ಸಭೆ ಕರೆಯುವುದಕ್ಕಲ್ಲ. ಅದಕ್ಕಾಗಿ ಇವರು ತಿರುಚಿದ್ದಾರೆ. ಅಧಿಕಾರಿಗಳೊಂದಿಗೆ ಪರ್ಯಾಯ ಸಭೆ ಜರುಗಿಸಬಹುದೆಂದು ಇರುವ ಸುತ್ತೋಲೆಯನ್ನು.... ಸರ್ಕಾರ ನಡೆಸುವವರು ಆ ಕಾಗದಗಳನ್ನು ಓದಿದರೆ ತಲೆತಗ್ಗಿಸಬೇಕಾಗುತ್ತದೆ. ಮರ್ಯಾದೆ ನನಗೆ ಹೋಗಿಲ್ಲ. ಇಡೀ ಸರ್ಕಾರದ ಮರ್ಯಾದೆ ಪ್ರೆಸ್ ಮುಂದೆ ಹೋಗಿದೆ! 'ಆಡಳಿತ ಯಂತ್ರ ಸರ್ವನಾಶ... ಕುಸಿತ' ಆಡಳಿತ ನಡೆಸುತ್ತಿರುವವನು ನಾನೇ? You must be ashamed of your Member. You must be ashamed of running this Government. You must take clarification from that Member, not me' ಏನಿದು ಇದಕ್ಕೆ ಏನಾದರೂ ನಾನು ಹೇಳುತ್ತೇನೆ ಸಾರ್ You must abolish this council ಮಾಡಿ ನನ್ನ ಮೇಲೂ ಪ್ರಿವಿಲೇಜ್. What is this going on, Sir? ನಮಗೇನು ಮಾನ ಮರ್ಯಾದೆ ಇಲ್ಲವಾ? ಶಾಸಕರಲ್ಲವೇ ನಾವು?*

ಶ್ರೀ ಹೆಚ್.ಕೆ. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಮೇಲ್ಮನೆ ಶಾಸಕರ ಬಗ್ಗೆ ಲಘುವಾಗಿ ಮಾತನಾಡುವುದು ಸರಿಯಾದುದು ಅಲ್ಲ. ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಏನು ನಮಗೇನು ಗೌರವ ಇಲ್ಲವಾ ಅಲ್ಲಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೇ, ಮೇಲ್ಮನೆ ಸದಸ್ಯರು ನಮ್ಮ ಬಗ್ಗೆ ಲಘುವಾಗಿ ಮಾತನಾಡಬಹುದೇ?

Mr. SPEAKER : Madhuswamy, don't be emotional.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮೇಲ್ಮನೆ ಸದಸ್ಯರು ನಮ್ಮ ಬಗ್ಗೆ ಲಘುವಾಗಿ ಮಾತನಾಡಬಹುದಾದರೆ ನಾವು ಮಾತನಾಡಬಾರದಾ?..... ಅವರ ಬಗ್ಗೆಯೇ ನಾವು ಮಾತನಾಡುತ್ತಿರುವುದು......

ಶ್ರೀ ಜೆ.ಸಿ. ಮಾಧುಸ್ವಾಮಿ : ಅವರು ನನ್ನ ಬಗ್ಗೆ ಮಾತನಾಡಿದ್ದಾರೆ.....

ಅಧ್ಯಕ್ಷರು : ಇದು ಬಹಳ ಗಂಭೀರವಾದುದು. ತಾವು ವಿಷಯದ ಸೂಕ್ಷ್ಮತೆಯನ್ನು ಅರ್ಥ ಮಾಡಿಕೊಳ್ಳಬೇಕು.

SRI H.K. PATIL : That is a creation of this House.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾವು ಮೇಲ್ಮನೆ ಬಗ್ಗೆ ಲಘುವಾಗಿ ಮಾತನಾಡುತ್ತಿಲ್ಲ. ಇಲ್ಲಿನ ಸದಸ್ಯರ ಬಗ್ಗೆ ಲಘುವಾಗಿ ಮಾತನಾಡುತ್ತಿರುವುದರ ಬಗ್ಗೆ ಅಷ್ಟೇ ನಾವು ಮಾತನಾಡುತ್ತಿರುವುದು....... ಮಾನ್ಯ ಅಧ್ಯಕ್ಷರೇ, ತಾವು ಕೌಲ್ ಅಂಡ್ ಶಕ್ದರ್ ಪುಸ್ತಕವನ್ನು ಓದಿ

[** , ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.]

ನೋಡಿ. ಅದರಲ್ಲಿ ಏನಿದೆ? ಆ ಮನೆಯಲ್ಲಿ ನಡೆದ ವಿಚಾರವನ್ನು ಆಗಲಿ ಅಥವಾ ಈ ಮನೆಯಲ್ಲಿ ನಡೆದ ವಿಚಾರವನ್ನಾಗಲಿ ನೀವು ಮಾತನಾಡುವಂತಿಲ್ಲ ಎಂದು ಅದರಲ್ಲಿ ಇರತಕ್ಕಂಥಾದ್ದು. ಯಾವ ಮನೆಯಲ್ಲಿಯೂ ಮಾತನಾಡದೇ ಆಚೆ ಕಡೆ ಮಾತನಾಡತಕ್ಕಂಥಾದ್ದು ಇದು.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಆ ಮನೆಗೆ ಅಪಮಾನ ಮಾಡತಕ್ಕಂಥ ಕೆಲಸ ಇಲ್ಲಿ ಮಾಡಬಾರದು. ಒಬ್ಬ ಸದಸ್ಯ ಸರಿಯಾಗಿ ನಡೆದುಕೊಳ್ಳಲಿಲ್ಲ. ಅದರ ಬಗ್ಗೆ ಪ್ರಿವಿಲೇಜ್ ಆಗಬೇಕು. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಆ ಮನೆಯ ಬಗ್ಗೆ ಹಗುರವಾಗಿ ಮಾತನಾಡತಕ್ಕಂಥಾದ್ದು ಇದು ಯಾರಿಗೂ ಗೌರವ ತರತಕ್ಕಂಥ ಸಂಗತಿ ಅಲ್ಲ. ಅಲ್ಲಿ ಯಾರೋ ಒಬ್ಬರು ಅಧಿಕ ಪ್ರಸಂಗತನದಿಂದ ಇಡೀ ತುಮಕೂರು ಜಿಲ್ಲೆ ಶಾಸಕರಿಗೆ ನೋವಾಗುವಂತೆ ಮನಸ್ಸಿಗೆ ನಡೆದುಕೊಳ್ಳುತ್ತಿದ್ದಾರೆ ಅದನ್ನು ಪ್ರಿವಿಲೇಜ್‌ಗೆ ರೆಫರ್ ಮಾಡಿ. ಅದು ಏನಾಗುತ್ತದೆಯೋ ಅದು ತೀರ್ಮಾನವಾಗಲಿ. ಆದರೆ ಆ ಮನೆಯ ಬಗ್ಗೆ ನಾವು ಹಗುರವಾಗಿ ಮಾತನಾಡುವಂತಾದ್ದಕ್ಕೆ ಕೈ ಹಾಕಬಾರದು.

ಮಾನ್ಯ ಸದಸ್ಯರು : ಹಾಸನ ಜಿಲ್ಲೆಯಲ್ಲಿಯೂ ಕೂಡ ಇದು ನಡೆಯುತ್ತಿದೆ ಸ್ವಾಮಿ, ಇದನ್ನು ಪರಿಶೀಲಿಸಬೇಕು. ಹಾಸನ ಜಿಲ್ಲೆಯಲ್ಲಿಯೂ ಕೂಡ ಇದು ನಡೆಯುತ್ತಿದೆ.

ಅಧ್ಯಕ್ಷರು : ಇದು ಬಹಳ ಸೂಕ್ಷ್ಮವಾಗಿರತಕ್ಕಂತ ವಿಚಾರ, ಆದ್ದರಿಂದ ಮಾತನಾಡುವಾಗ ಇದನ್ನು ಮಾಡಿ ಎಂದು ನಾನು ಹೇಳಿದೆ. ಅದನ್ನು ಕೇಳುವುದಿಲ್ಲ ತಾವು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ನಾನು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ. ಅದೇನೆಂದರೆ ಮೇಲ್ಮನೆಯನ್ನು ಅಬಾಲೀಶ್ ಮಾಡಿ. ಆದರೆ ಅವರು ಬಳಸಿದ ಪದ, ಸರಿ ಇಲ್ಲ. It is not in good taste. It is a creation of this House.

ಅಧ್ಯಕ್ಷರು : ಅನುಚಿತವಾದ ಪದಗಳನ್ನು ತೆಗೆಸಿ ಹಾಕುತ್ತೇನೆ ಬಿಡಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ನಾವೆಲ್ಲರೂ ಸೇರಿ ಆ ಮನೆ ಇರಬೇಕು ಅಂತ ಮಾಡಿದ್ದೇವೆ. ಅಂದಾಗ ನಮ್ಮನ್ನು ನಾವೇ ಅವಹೇಳನ ಮಾಡಿಕೊಂಡಂತೆ ಆಗುತ್ತದೆ. ಯಾವುದಾದರೂ ಒಬ್ಬ ಸದಸ್ಯರ ಮೇಲೆ ನಿಮ್ಮದು ಕೋಪ ತಾಪ ಇದ್ದರೆ ಅದನ್ನು ಈಗಾಗಲೇ ಮಾನ್ಯ ಅಧ್ಯಕ್ಷರ ಗಮನಕ್ಕೆ ತಂದಿದ್ದೀರಿ. ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತಂದಿದ್ದೀರಿ, ಅದು ಕಾನೂನು ಬಾಹಿರವಾಗಿದ್ದರೆ ಸರ್ಕಾರದ ವಿರುದ್ಧವಾಗಿ ಏನಾದರೂ ನಡೆದಿದ್ದರೆ ಅದಕ್ಕೆ ಅವರು ಕ್ರಮವನ್ನು ತೆಗೆದುಕೊಳ್ಳುತ್ತಾರೆ. ಆದರೆ ಸಾರಾಸಗಟಾಗಿ ನಾವು ಹೇಳಿದರೆ, ಕಷ್ಟ...

ಶ್ರೀ ಜೆ.ಸಿ. ಮಾಧುಸ್ವಾಮಿ : ಅವರು ಚಾರಿತ್ರ್ಯ ವಧೆ ಮಾಡಬಹುದೇ? ಅವರು ಅಲ್ಲಿ ಈ ವಿಷಯವನ್ನು ಎತ್ತಿ ಹೇಳಬಹುದೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅವರಿಗೂ ತೇಜೋವಧೆ ಮಾಡತಕ್ಕಂಥ ಹಕ್ಕು ಇಲ್ಲ. ನಿಮಗೂ ಕೂಡ ಇನ್ನೊಬ್ಬರ ತೇಜೋವಧೆ ಮಾಡತಕ್ಕಂಥ ಹಕ್ಕು ಇಲ್ಲ. ನಾವು ಇಲ್ಲಿ ಒಬ್ಬರೊಬ್ಬರ ಬಗ್ಗೆ ಮಾತನಾಡತಕ್ಕಂಥ ಪ್ರಯತ್ನ ಮಾಡುವುದಕ್ಕೆ ಹೋಗಬಾರದು. ಏನೇ ಇದ್ದರೂ ಕೂಡ ಸಮಾಧಾನವಾಗಿ, after all ಎಮೋಶನ್‌ನಲ್ಲಿ ಮಾತನಾಡಿ ಒಂದು ಇನ್‌ಸ್ಟಿಟ್ಯೂಷನ್ ಬಗ್ಗೆ ನಾವು ಅಗೌರವ ತೋರಿಸತಕ್ಕಂಥಾದ್ದು ಆಗಬಾರದು. ಆದ್ದರಿಂದ ಮಾನ್ಯ ಅಧ್ಯಕ್ಷರೇ ಆ ಪದಗಳನ್ನೆಲ್ಲಾ ತೆಗೆದರೆ ಒಳ್ಳೆಯದು.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೇ, ಇದೇ ಸಭೆಯಲ್ಲಿ ಮಾನ್ಯ ದೇವರಾಜ ಅರಸುರವರ ಕಾಲದಲ್ಲಿ......

ಅಧ್ಯಕ್ಷರು : ಮಾಧುಸ್ವಾಮಿಯವರೇ.....

SRI MALLIKARJUNA KARGE : There cannot be a debate......

ಶ್ರೀ ಜೆ.ಸಿ. ಮಾಧುಸ್ವಾಮಿ : ಆ ಮನೆ ಸದಸ್ಯರು ಅಂತ ಹೇಳಿ ಏನು ಬೇಕಾದರೂ ಮಾಡಬಹುದು ಅಂತ ಆದರೆ ಏಕೆ ಬೇಕು ಆ ಮನೆ ಅಂತ ನಾವು ಕೇಳುತ್ತೇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಇಂತಹ ವಿಷಯಗಳ ಬಗ್ಗೆ ತಾವು ಬೇಡಿಕೆಗಳು ಬಂದಾಗ ಅದರ ಮೇಲೆ ತಾವು ಮಾತನಾಡಿ. ಆದರೆ ಈ ಸಂದರ್ಭದಲ್ಲಿ ಇದನ್ನು ಹೇಳತಕ್ಕಂಥಾದ್ದು ಸರಿಯಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೇ, ಆ ಮನೆಯ ಸದಸ್ಯರಿಗೂ ಸಹ ತಾವು ಒಂದು ಪಾಠ ಹೇಳಿ. ನಿಮ್ಮ ಕೆಲಸ ನೀವು ಮಾಡಿ ಈ ಮನೆ ಕೆಲಸ ಅವರು ಮಾಡುತ್ತಾರೆ, ದಯಮಾಡಿ ಕಾನೂನು ಬದ್ಧವಾಗಿ ನೀವು ಏನು ಸಭೆಗಳಿಗೆ ಹೋಗುವುದಕ್ಕೆ ಇದೆ ಅದಕ್ಕೆ ಹೋಗಿ, ಈ ತರಹ ಏಕಾಏಕಿ ನಿಮಗೆ ಬೇಕಾದ ರೀತಿ ಮಾಡಿಕೊಂಡು ತಾಲ್ಲೂಕು ಪಂಚಾಯತಿಗಳ ಬೀಗ ಒಡೆದು ಡೋರ್ ಒಡೆದು ಸಭೆಗಳನ್ನು ಮಾಡಿ ಪ್ರೆಸ್ ಮೀಟ್ ಮಾಡಿ ಇನ್ನೊಬ್ಬ ಶಾಸಕರ ಬಗ್ಗೆ ಮಾತನಾಡಬೇಡಿ ಎಂದು ನೀವು ಹೇಳಿ ಸಾರ್.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಹೇಳುವ ಸಂದರ್ಭದಲ್ಲಿ ಅವರಿಗೂ ಹೇಳುತ್ತೇವೆ ನಿಮಗೂ ಹೇಳುತ್ತೇವೆ. ಆದರೆ ಯಾವ ಪದಗಳನ್ನು ಉಪಯೋಗ ಮಾಡಬಾರದು ಎನ್ನುವುದರ ಬಗ್ಗೆ ನಾನು ರಿಕ್ವೆಸ್ಟ್ ಮಾಡುತ್ತಿದ್ದೇನೆ. ಅದನ್ನು ಕಡತದಿಂದ ತೆಗೆದುಹಾಕಿಸಿ ಅಧ್ಯಕ್ಷರೇ.

ಶ್ರೀ ಜೆ.ಸಿ. ಮಾಧುಸ್ವಾಮಿ : ಅಸ್ತ್ರವನ್ನು ನೀವು ಹೇಗೆ ಹೇಗೆ ಬಳಸಬೇಕೋ ಹಾಗೆ ಬಳಸುವುದಕ್ಕೆ ಅವರಿಗೆ ಬಿಟ್ಟಿದ್ದಕ್ಕೆ ನಾವು ಬಳಸುತ್ತಿದ್ದೇವೆ. ವಿಧಾನ ಪರಿಷತ್ತಿನ ಸದಸ್ಯರು ಏನು ಮಾಡಿದರೂ ಚರ್ಚೆ ಮಾಡುವಂತಿಲ್ಲ ಎನ್ನುವುದು ಅವರ ತಲೆಯಲ್ಲಿ ಇರುವುದಕ್ಕೇ ನಾವು ಈ ಮಾತು ಹೇಳುತ್ತಿದ್ದೇವೆ.

ಅಧ್ಯಕ್ಷರು : ಇದು ಬಹಳ ಸೂಕ್ಷ್ಮವಾದ ವಿಚಾರ. ಇದು ಪುನಃ ಮತ್ತೆ ಮತ್ತೆ ಮರುಕಳಿಸಬಾರದು. ವಿಧಾನ ಪರಿಷತ್ತಿನ ಸದಸ್ಯರಲ್ಲಿ ಅವರದೇ ಆದ ಒಂದು ಕರ್ತವ್ಯಗಳು ಇರುತ್ತವೆ. ಕೆಲವು ಹಕ್ಕುಗಳು ಇರುತ್ತವೆ. ಅದನ್ನು ಇತಿಮಿತಿಯೊಳಗೆ ಅವರೂ ಬಳಸಬೇಕು. ತಾವೂ ಸಹ ಈ ಮನೆಯ ಸದಸ್ಯರುಗಳೂ ಸಹ ತಮ್ಮ ಇತಿಮಿತಿಯೊಳಗೆ ತಮ್ಮ ಹಕ್ಕುಗಳನ್ನು ಬಳಸಬೇಕು. ಆದ್ದರಿಂದ ನಾನು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಮತ್ತು ಕಾನೂನು ಸಚಿವರಲ್ಲಿ ಪ್ರಾರ್ಥನೆ ಮಾಡುವುದೇನೆಂದರೆ, ಈಗ ಅವರು ಹೋಗಿ, ಇವರು ಆ ಕೆ ಡಿ ಪಿ ಸಭೆಯಲ್ಲಿ ಮಾಡಿರತಕ್ಕಂಥ ನಿರ್ಣಯಗಳ ಬಗ್ಗೆ ಟೀಕೆ ಮಾಡತಕ್ಕಂಥಾದ್ದು, ಅವರಿಗೆ ಅಧಿಕಾರ ಇಲ್ಲದಿದ್ದರೂ ಸಹ ಅಧಿಕಾರಿಗಳ ಸಭೆಯನ್ನು ಕರೆಯತಕ್ಕಂಥಾದ್ದು ಇದನ್ನು ತಾವೂ ಸಹ ಗಂಭೀರವಾಗಿ ವಿಚಾರ ಮಾಡಬೇಕಾಗುತ್ತದೆ. ಅದನ್ನು ವಿಚಾರ ಮಾಡಬೇಕೆಂದು ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಮತ್ತು ಕಾನೂನು ಸಚಿವರಲ್ಲಿ ವಿನಂತಿ ಮಾಡಿಕೊಂಡು ಇದು ಹಕ್ಕುಚ್ಯುತಿ ಆಗಿಲ್ಲ. ಆದ್ದರಿಂದ ಇದು ಅದಕ್ಕೆ ಅಟ್ಯಾಕ್ಟ್ ಆಗಿಲ್ಲದೇ ಇರುವುದರಿಂದ ಇದನ್ನು ಹಕ್ಕುಚ್ಯುತಿ ಸಮಿತಿಗೆ ರೆಫರ್ ಮಾಡತಕ್ಕಂಥ ಪ್ರಶ್ನೆ ಉದ್ಭವಿಸುವುದಿಲ್ಲ. ಆದರೆ ಸೂಕ್ಷ್ಮವಾದ ವಿಚಾರಗಳ ಬಗ್ಗೆ ಕೆಲವು ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಮಾನ್ಯ

ಮುಖ್ಯಮಂತ್ರಿಗಳಲ್ಲಿ ಮತ್ತು ಕಾನೂನು ಸಚಿವರಲ್ಲಿ ನಾನು ಪ್ರಾರ್ಥನೆ ಮಾಡಿ ಇದನ್ನು ಇಲ್ಲಿಗೆ ಮುಕ್ತಾಯ ಮಾಡುತ್ತಿದ್ದೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೇ, ನಾನು ಮತ್ತೊಮ್ಮೆ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಪುನರ್‌ಪರಿಶೀಲನೆ ಮಾಡಬೇಕು ಅಧ್ಯಕ್ಷರೇ.

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಎರಡು ಮಾತು ಹೇಳಬೇಕು. ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಮುಂದೆ ಏನು ಎಂದು ನಿರ್ಣಯವಾದರೂ ಆಗಬೇಕಲ್ಲಾ.

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ಈಗಾಗಲೇ ನಮ್ಮ ಕಾನೂನು ಮಂತ್ರಿಗಳು ಮತ್ತು ನಮ್ಮ ಮಲ್ಲಿಕಾರ್ಜುನ ಖರ್ಗೆಯವರು ಸಹ ಇದರ ಬಗ್ಗೆ ಹೇಳಿದ್ದಾರೆ. ಇದು ಏನಾಗಿದೆ ವಿಧಾನ ಸಭಾ ಸದಸ್ಯರಿಗೂ ಮತ್ತು ವಿಧಾನ ಪರಿಷತ್ತಿನ ಸದಸ್ಯರಿಗೂ ಆಯಾಯಾ ಕ್ಷೇತ್ರದಲ್ಲಿ ಈ ತರಹದ ವ್ಯತ್ಯಾಸ ಇದೆ. ಮಾನ್ಯ ಉಗ್ರಪ್ಪನವರ ಬಗ್ಗೆ ಮಾನ್ಯ ಮಾಧುಸ್ವಾಮಿಯವರಿಗೆ ಅಲ್ಲಿ ಏನು ತೊಂದರೆಯಾಗಿದೆ ಎನ್ನುವುದೂ ಸಹ ನಮ್ಮ ಗಮನಕ್ಕೆ ಬಂದಿದೆ. ಮತ್ತೆ ವಿಧಾನ ಪರಿಷತ್ತನ್ನು ನಾವೇ ರಚನೆ ಮಾಡಿರುವುದು; ಅದರ ಬಗ್ಗೆ ಮಾತನಾಡತಕ್ಕಂಥದ್ದು ಸರಿಯಲ್ಲ. ಅದನ್ನು ಅವರೂ ಕೂಡ ಒಪ್ಪುತ್ತಾರೆ. ಆವೇಶದಿಂದ ಹೇಳಿದ್ದಾರೆ. ಅದಕ್ಕೆ ನಾನು ಉಪ ಮುಖ್ಯಮಂತ್ರಿಗಳು ಎಲ್ಲಾ ಹಿರಿಯ ಸಚಿವರು ಅವರನ್ನೆಲ್ಲಾ ಕರೆಸಿ ಈ ವಿಧಾನ ಸಭಾ ಸದಸ್ಯರ ಒಂದೇ ಕ್ಷೇತ್ರದಲ್ಲಿ ಅಲ್ಲ, ಬೇರೆ ಬೇರೆ ಕ್ಷೇತ್ರದಲ್ಲೂ ಕೂಡ ಇಂತಹ ಒಂದು ಉದಾಹರಣೆಗಳು ನಮ್ಮ ಎದುರುಗಡೆ ಬರುತ್ತಿವೆ. ಆ ಒಂದು ಕ್ಷೇತ್ರಕ್ಕೆ ಸಂಬಂಧಪಟ್ಟಂತಹ ವಿಧಾನ ಸಭಾ ಕ್ಷೇತ್ರದಿಂದ ಬಂದಂತಹ ಶಾಸಕರೇ ಅದನ್ನು ಪ್ರಿಸೈಡ್ ಮಾಡತಕ್ಕಂಥಾದ್ದು ಇದರಲ್ಲಿ ವಿಧಾನ ಪರಿಷತ್ತಿನ ಸದಸ್ಯರೂ ಕೂಡ ಇವತ್ತು ಶಿಕ್ಷಣ ಕ್ಷೇತ್ರದಿಂದ ಬಂದಿದ್ದಾರೆ, ಅವರೂ ಕೂಡ ಇದರಲ್ಲಿ ಶಾಮೀಲಾಗತಕ್ಕಂಥಾದ್ದು, ತಮ್ಮ ಅಭಿಪ್ರಾಯ ಹೇಳತಕ್ಕಂಥಾದ್ದು ಹಕ್ಕು ಇದೆ. ಇದೆಲ್ಲವನ್ನೂ ನಾವು ನೋಡಿಕೊಂಡು ಸರಿಯಾದ ರೀತಿಯಲ್ಲಿ ಮುಂದುವರಿಸಿಕೊಂಡು ಹೋಗುತ್ತೇನೆ. ಹಕ್ಕುಚ್ಯುತಿ ಆಗಿಲ್ಲ. ಇವತ್ತು ಆಡಳಿತದ ದೃಷ್ಟಿಯಿಂದ ಮತ್ತು ಈ ಸಭೆಗೆ ವಿಶೇಷವಾಗಿ ಮಾನ್ಯ ಮಾಧುಸ್ವಾಮಿಯವರಿಗೆ ಇದರ ಬಗ್ಗೆ ಇತ್ಯರ್ಥ ಮಾಡತಕ್ಕಂಥ ಪ್ರಯತ್ನ ಮಾಡುತ್ತೇನೆ.

ಅಧ್ಯಕ್ಷರು : ಈಗ ಶಾಸನ ರಚನೆ.

ಶ್ರೀ ವೈಜನಾಥ ಪಾಟೀಲ್ : ಮಾನ್ಯ ಅಧ್ಯಕ್ಷರೇ, ನಾನು ಒಂದು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇನೆ.

8. ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ,

ವಿಷಯ : ಗುಲ್ಬರ್ಗಾ ರಾಯಚೂರು ಬಳ್ಳಾರಿ ಭಾಗದ ಸ್ಥಳೀಯರು ಸರ್ಕಾರಿ ನೌಕರಿಯಿಂದ ವಂಚಿತರಾಗಿರುವ ಬಗ್ಗೆ.

ಶ್ರೀ ವೈಜನಾಥ ಪಾಟೀಲ್ : ಮಾನ್ಯ ಅಧ್ಯಕ್ಷರೇ......

ಅಧ್ಯಕ್ಷರು : ಅವರು ನಿಲುವಳಿ ಸೂಚನೆ ಏನೋ ಇದೆ ಅಂತ ಹೇಳುತ್ತಾರೆ. ನೋಡೋಣ ತಡೆಯಿರಿ.

ಶ್ರೀ ವೈಜನಾಥ ಪಾಟೀಲ್ (ಚಿಂಚೋಳಿ) : ಮಾನ್ಯ ಅಧ್ಯಕ್ಷರೇ, ಹೋದ 7–8 ವರ್ಷದಲ್ಲಿ ಈ ರಾಜ್ಯದಲ್ಲಿ ಸಾವಿರಾರು ಸರ್ಕಾರಿ ಮತ್ತು ಅರೆ ಸರ್ಕಾರಿ ಸಂಸ್ಥೆಗಳಲ್ಲಿ ಅಪಾಯಿಂಟ್‌ಮೆಂಟ್ಸ್ ನಡೆದಿವೆ. ಹೋದ 1998ರಲ್ಲಿ ಕರ್ನಾಟಕ ಹೈಕೋರ್ಟ್‌ನಿಂದ ಒಂದು ಜಡ್ಜ್‌ಮೆಂಟ್ ಬಂದ ನಂತರ ಮೊದಲು ಡಿಸ್ಟ್ರಿಕ್ಟ್ ಎಂಪ್ಲಾಯ್‌ಮೆಂಟ್ ಆಫೀಸ್ ಇದ್ದವು ಅದರ ಎಲ್ಲಾ ಕೆಲಸ ಸ್ಥಗಿತವಾಗಿದೆ. ಅಂದರೆ ಎಂಪ್ಲಾಯಿಟ್‌ಮೆಂಟ್ ಆಫೀಸ್ ಅಗತ್ಯ ಇಲ್ಲ. ಡೈರೆಕ್ಟ್ ಯಾರು ಎಲ್ಲಿಯಾದರೂ ಹೋಗಿ ಅಪ್ಲಿಕೇಶನ್ ಹಾಕಬಹುದು ಅಂತ ಒಂದು ಜಡ್ಜ್‌ಮೆಂಟ್ ಬಂದ ನಂತರ ಇತ್ತೀಚಿನ ವರ್ಷಗಳಲ್ಲಿ ವಿಶೇಷವಾಗಿ ಬೀದರ್ ಗುಲ್ಬರ್ಗಾ, ರಾಯಚೂರು ಬಳ್ಳಾರಿ ಈ ಭಾಗದಲ್ಲಿ ಮುಂದುವರಿದ ಜಿಲ್ಲೆಗಳವರು ಬಂದು ಹೆಚ್ಚು ಅಪ್ಲಿಕೇಶನ್ ಹಾಕಿದ್ದರಿಂದ ಸ್ಥಳೀಯರಿಗೆ ಏನು ಅವಕಾಶ ಸಿಗಬೇಕು ಅದು ಸಿಗುತ್ತಿಲ್ಲ.

ಅಧ್ಯಕ್ಷರು : ಮಾನ್ಯ ಪಾಟೀಲರೇ, ಇದು ನಿಲುವಳಿ ಸೂಚನೆಗೆ ಬರುವುದಿಲ್ಲ.

ಶ್ರೀ ವೈಜನಾಥ ಪಾಟೀಲ್ : ಮಾನ್ಯ ಅಧ್ಯಕ್ಷರೇ, ಒಂದು ನಿಮಿಷ. ತಾವು ಕೇಳಬೇಕು. ಅದರ ಸಲುವಾಗಿ ಆರ್ಟಿಕಲ್ 371 ಅನ್ನು ತಿದ್ದುಪಡಿ ಮಾಡಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳೂ ಸಹ ಹೈದ್ರಾಬಾದ್ ಕರ್ನಾಟಕಕ್ಕೆ ವಿಶೇಷ ಸ್ಥಾನಮಾನಗಳು ಸಿಗಬೇಕೆಂದು ಅವರು ಕೇಂದ್ರ ಸರ್ಕಾರದ ಜೊತೆ ಮಾತನಾಡಿದ್ದಾರೆ ತಾವು ಬೇರೆ ರೂಪದಲ್ಲಿ ಚರ್ಚೆಗೆ ತನ್ನಿ, ನಾನು ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ. ಇದನ್ನು ನಿಲುವಳಿ ಸೂಚನೆಯಲ್ಲಿ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ತಾವು ಬೇರೆ ನಿಯಮಗಳ ಅಡಿಯಲ್ಲಿ ತಂದರೆ ನಾನು ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ. ತಾವು ಬೇರೆ ಸೂಚನೆ ಕೊಡಿ.

ಶ್ರೀ ವೈಜನಾಥ ಪಾಟೀಲ್ : ತಾವೇ ನಿಯಮ 69ಕ್ಕೆ ಕನ್‌ವರ್ಟ್ ಮಾಡಿ ಅಧ್ಯಕ್ಷರೇ.

ಅಧ್ಯಕ್ಷರು : ತಾವು ಬೇರೆ ನಿಯಮಾವಳಿಗಳ ಅಡಿಯಲ್ಲಿ ಕೊಡಿ ಅವಕಾಶ ಮಾಡಿ ಕೊಡುತ್ತೇನೆ. ನಿಲುವಳಿ ಸೂಚನೆ ಅಡಿಯಲ್ಲಿ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ.

ಶ್ರೀ ವೈಜನಾಥ ಪಾಟೀಲ್ : 371 ಬಗ್ಗೆ ಮೊದಲು ಸ್ಟಾಂಡ್ ಸರ್ಕಾರದ್ದು ಏನಿತ್ತು ಅದು ಬದಲಾವಣೆಯಾಗುತ್ತಿದೆ. ವಿದರ್ಭ ತರಹ, ಮತ್ತೊಂದು ತರಹ ಏಕೋ ಅದರಿಂದ ಡೀವಿಯೇಟ್ ಮಾಡುತ್ತಿದ್ದಾರೆ. ಆ ದೃಷ್ಟಿಯಿಂದ ಅದಕ್ಕೆ clarification ಕೊಡಬೇಕಷ್ಟೇ.

ಅಧ್ಯಕ್ಷರು : ದಯಮಾಡಿ ಬೇರೆ ನಿಯಮಾವಳಿಗಳ ಅಡಿಯಲ್ಲಿ ಕಳುಹಿಸಿಕೊಡಿ. ಇದರ ಬಗ್ಗೆ ಚರ್ಚೆಗೆ ನಾನು ಅವಕಾಶ ಮಾಡಿಕೊಡುತ್ತೇನೆ. ಇದು adjournment motion ಗೆ attract ಆಗುವುದಿಲ್ಲ.

ಶ್ರೀ ವೈಜನಾಥ ಪಾಟೀಲ್ : ಅದನ್ನೇ ಬೇರೆ ನಿಯಮಕ್ಕೆ ಕನ್‌ವರ್ಟ್ ಮಾಡಿ ಚರ್ಚೆಗೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು : ನಾನು ಕನ್‌ವರ್ಟ್ ಮಾಡುವುದಕ್ಕಾಗುವುದಿಲ್ಲ. ಬೇರೆ ನಿಯಮಾವಳಿಗಳ ಅಡಿಯಲ್ಲಿ ತಾವೇ ದಯಮಾಡಿ ಕಳುಹಿಸಿಕೊಡಿ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೇ, ಆಲಮಟ್ಟಿ ವಿಷಯದ ಬಗ್ಗೆ ನಾವು ಪ್ರಸ್ತಾಪಿಸಲು ಅವಕಾಶ ಮಾಡಿಕೊಡಿ. ಇದು ಒಂದೆರಡು ದಿವಸಗಳಿಂದ ಪೆಂಡಿಂಗ್ ಇದೆ.

ಅಧ್ಯಕ್ಷರು : ಅದಕ್ಕೆ ಅರ್ಧ ಗಂಟೆ ಕಾಲ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಹೆಚ್.ಕೆ. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಮಾನ್ಯ ವೈಜನಾಥ ಪಾಟೀಲ್‌ರವರು ತಂದಿರತಕ್ಕಂಥ ವಿಷಯ ಏನಿದೆ, ಆ ವಿಷಯದ ಗಂಭೀರತೆ ಮತ್ತು ಮಹತ್ವದ ಬಗ್ಗೆ ನಾವ್ಯಾರೂ ಅಲ್ಲಗಳೆಯಲಿಕ್ಕೆ ಸಾಧ್ಯವಿಲ್ಲ. ಈಗಾಗಲೇ ರಾಜ್ಯ ಸರ್ಕಾರ ಈ ದಿಸೆಯಲ್ಲಿ ಏನೇನು ಕಾರ್ಯಕ್ರಮ ತೆಗೆದುಕೊಂಡಿದೆ ಎಂಬುದು ಅವರಿಗೂ ಗೊತ್ತಿರುವಂತಾದ್ದೇ ಆಗಿದೆ. ಮಾನ್ಯ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಈ ಬಗ್ಗೆ ದೆಹಲಿಗೆ ನಿಯೋಗವೊಂದನ್ನು ಕರೆದುಕೊಂಡು ಹೋಗಿ, ಆ ಸಂದರ್ಭದಲ್ಲಿ ಸಾಕಷ್ಟು ಒತ್ತಾಯವನ್ನೂ ಸಹ ಮಾಡಿದ್ದೇವೆ. ಆ ನಿಯೋಗದಲ್ಲಿ ಮಾನ್ಯ ಸದಸ್ಯರೂ ಇದ್ದರು. ಆದುದರಿಂದ ಈ ವಿಷಯದ ಬಗ್ಗೆ ನಿಲುವಳಿ ಸೂಚನೆ ರೂಪದಲ್ಲಿ ಚರ್ಚೆ ಮಾಡುವಂತಹ ಅವಶ್ಯಕತೆ ಇಲ್ಲ ಇದನ್ನು ಬೇರೆ ರೂಪದಲ್ಲಿ ತಂದರೆ ಚರ್ಚೆಗೆ ಅವಕಾಶ ಮಾಡಿ ಕೊಡಬಹುದು.

ಅಧ್ಯಕ್ಷರು : ಇದು ನಿಲುವಳಿ ಸೂಚನೆ ಅಡಿಯಲ್ಲಿ ಬರುವುದಿಲ್ಲವೆಂದು ನಾನು ಆಗಲೇ ಅವರಿಗೆ ಹೇಳಿದ್ದೇನೆ. ಈ ವಿಷಯವನ್ನು ನಿಯಮ 69 ಅಥವಾ ಇನ್ನಿತರ ಬೇರೆ ನಿಯಮದ ಅಡಿಯಲ್ಲಿ ತಂದರೆ, ನಾನು ಅದರ ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ.

(ಗೊಂದಲ)

ಶ್ರೀ ವೈಜನಾಥ ಪಾಟೀಲ್ : ರಾಜ್ಯ ಸರ್ಕಾರದ stand ಈಗ ಬದಲಾಗಿದೆ.....

(ಗೊಂದಲ)

9. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ವಿಷಯ : ಆಲಮಟ್ಟಿಯಲ್ಲಿ ಸಂಸದರ ನೇತೃತ್ವದಲ್ಲಿ ಧರಣಿ ನಡೆಯುತ್ತಿರುವ ಬಗ್ಗೆ.

ಅಧ್ಯಕ್ಷರು : ಮಾನ್ಯ ಕಾರಜೋಳರವರೇ, ತಾವು ನೀರಾವರಿ ವಿಷಯದ ಬಗ್ಗೆ ಪ್ರಸ್ತಾಪ ಮಾಡಲು ಅನುಮತಿ ನೀಡಬೇಕೆಂದು ಕೇಳುತ್ತಿದ್ದೀರಿ. ನಾಳೆ ಮಾನ್ಯ ನೀರಾವರಿ ಸಚಿವರು ಇರುತ್ತಾರೆ, ಅದನ್ನು ನಾಳೆ ಅರ್ಧ ಗಂಟೆ ಚರ್ಚಿಸಲು ಅವಕಾಶ ಕೊಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಅದರ ಬಗ್ಗೆ ಇವತ್ತು ಸ್ವಲ್ಪ ಪ್ರಸ್ತಾಪ ಮಾಡಿಬಿಡುತ್ತೇವೆ. 5–10 ನಿಮಿಷಗಳಲ್ಲಿ ಮುಗಿಸುತ್ತೇವೆ.

ಅಧ್ಯಕ್ಷರು : ಇದೊಂದು ವಿಷಯವಲ್ಲ. ಪ್ರಸ್ತಾಪಿಸಬೇಕಾದ ಇನ್ನೂ ಬೇರೆ ಬೇರೆ ಇಶ್ಯೂಗಳಿವೆ. ನಾಳೆ ಮಾನ್ಯ ಸಚಿವರು ಇರುತ್ತಾರೆ. ಆದ್ದರಿಂದ ನಾಳೆ ಪ್ರಸ್ತಾಪ ಮಾಡಿ. ಈಗ ಅವಕಾಶ ಕೊಡಲು ಆಗುವುದಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಸಚಿವರು ಇಲ್ಲೇ ಇದ್ದಾರೆ. ಈಗಲೇ ಪ್ರಸ್ತಾಪ ಮಾಡಿಬಿಡುತ್ತೇವೆ. ಅಲ್ಲಿ ಲಕ್ಷಾಂತರ ಜನರಿಗೆ ತೊಂದರೆಯಾಗುತ್ತಿದೆ.

ಅಧ್ಯಕ್ಷರು : ಮಾನ್ಯ ಜಗದೀಶ್ ಶೆಟ್ಟರ್‌ರವರೇ, ನಾನು ಎಷ್ಟು ಹೇಳಿದರೂ ನೀವು ನನ್ನ ಮಾತುಗಳನ್ನು ಕೇಳದಿದ್ದರೆ ಹೇಗೆ? ನೀವು ಹೇಳಿದ ರೀತಿಯಲ್ಲೇ ಆಗಬೇಕೇನು? ಲಕ್ಷಾಂತರ ಜನರಿಗೆ ತೊಂದರೆಯಾಗತಕ್ಕ ಇನ್ನೂ ಪ್ರಸ್ತಾಪಿಸಬೇಕಾದ ಅನೇಕ ಸಮಸ್ಯೆಗಳಿವೆ. ನಾನು ಇದರ ಬಗ್ಗೆ ಚರ್ಚೆಗೆ

ಖಂಡಿತ ಅವಕಾಶ ಮಾಡಿಕೊಡುತ್ತೇನೆ. ನಾಳೆ ನೀರಾವರಿ ಸಚಿವರು ಇರುತ್ತಾರೆ. ಇದನ್ನು ನಾಳೆಗೆ ತೆಗೆದುಕೊಳ್ಳೋಣ.

ಶ್ರೀ ಜಗದೀಶ್ ಶೆಟ್ಟರ್ : ಇವತ್ತು ಪ್ರಸ್ತಾಪಿಸಲು ಅವಕಾಶ ಕೊಡುವುದಾಗಿ ಬೆಳಿಗ್ಗೆ ಹೇಳಿದ್ದಿರಿ. ಕಳೆದ 3–4 ದಿವಸಗಳಿಂದ Everyday ಇದು ಹೀಗೇ ಮುಂದಕ್ಕೆ ಹೋಗುತ್ತಿದೆ. ಅಲ್ಲಿ ಸಂಸತ್ ಸದಸ್ಯರು ಮತ್ತು ಇನ್ನಿತರ ಮುಖಂಡರು ಅಮರಣಾಂತ ಉಪವಾಸ ಕುಳಿತಿದ್ದಾರೆ. ನಾಳೆ ಅವರ ಕಂಡೀಷನ್ ಬಹಳ ಗಂಭೀರವಾಗುತ್ತದೆ.

ಅಧ್ಯಕ್ಷರು : ಆಯಿತು, ಇದರ ಬಗ್ಗೆ ಮಧ್ಯಾಹ್ನ ತೆಗೆದುಕೊಳ್ಳೋಣ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಸನ್ಮಾನ್ಯ ಅಧ್ಯಕ್ಷರೇ 3–4 ದಿವಸಗಳಿಂದ ಇದನ್ನು ಪ್ರಸ್ತಾಪ ಮಾಡಲು ಪ್ರಯತ್ನಿಸುತ್ತಿದ್ದೇವೆ.......

ಅಧ್ಯಕ್ಷರು : ಮಾನ್ಯ ಜಗದೀಶ್ ಶೆಟ್ಟರ್‌ರವರೇ, ನೀವು ಏನು ಬೇಕಾದರೂ ಮಾತನಾಡಿಕೊಳ್ಳಬಹುದು. I have no objection.

ಶ್ರೀ ಜಗದೀಶ್ ಶೆಟ್ಟರ್ : ದಯವಿಟ್ಟು ಮಾನ್ಯ ಅಧ್ಯಕ್ಷರು ಬೇಜಾರು ಮಾಡಿಕೊಳ್ಳಬಾರದು. ಮಾನ್ಯ ಅಧ್ಯಕ್ಷರೇ, ಕಳೆದ ನಾಲ್ಕು ದಿವಸಗಳಿಂದ ಇದನ್ನು ಇಲ್ಲಿ ಪ್ರಸ್ತಾಪ ಮಾಡಲಿಕ್ಕೆ ನಾವು ಪ್ರಯತ್ನ ಮಾಡುತ್ತಿದ್ದೇವೆ. ಇವತ್ತು ಬೆಳಿಗ್ಗೆ ತಾವು ಅನುಮತಿ ಕೊಡುತ್ತೇನೆಂದು ಹೇಳಿದ್ದಿರಿ.

ಶ್ರೀ ಗೋವಿಂದ ಎಂ. ಕಾರಜೋಳ : ಪ್ರಶ್ನೋತ್ತರ ಮುಗಿದ ನಂತರ ನಾನು ಇದನ್ನು ಪ್ರಸ್ತಾಪ ಮಾಡಲು ಅವಕಾಶ ಮಾಡಿಕೊಡುತ್ತೇನೆಂದು ತಾವು ಹೇಳಿದ್ದಕ್ಕಾಗಿ ನಾವು ಇದನ್ನು ಪ್ರಸ್ತಾಪ ಮಾಡುತ್ತಿದ್ದೇವೆ. ದಯವಿಟ್ಟು ಮಾನ್ಯ ಅಧ್ಯಕ್ಷರು ಬೇಜಾರು ಮಾಡಿಕೊಳ್ಳಬಾರದು.

ಅಧ್ಯಕ್ಷರು : ಕಾರಜೋಳರವರೇ, ನಾನು ತಾವು ನನ್ನ ಛೇಂಬರ್ಸ್‌ನಲ್ಲಿ ಬಂದಾಗ ಸಹ ಇದನ್ನು ತೆಗೆದುಕೊಳ್ಳುತ್ತೇನೆಂದು ಹೇಳಿದ್ದೆ. ದಯಮಾಡಿ ಕೇಳಿ. ನಾಳೆ ಮಾನ್ಯ ನೀರಾವರಿ ಸಚಿವರು ಇರುತ್ತಾರೆ. ಆದ್ದರಿಂದ ಇದನ್ನು ನಾಳೆ ತೆಗೆದುಕೊಳ್ಳೋಣ. ನಿಯಮ 69ರ ಕೆಳಗೆ ಒಂದನ್ನು ಕಳುಹಿಸಿದ್ದೀರಿ. ಇವತ್ತು ಕುಡಿಯುವ ನೀರಿನ ವಿಚಾರದ ಬಗ್ಗೆ ಸರ್ಕಾರದಿಂದ ಉತ್ತರ ಕೊಡಬೇಕಾಗಿದೆ.

ಶ್ರೀ ಜಗದೀಶ್ ಶೆಟ್ಟರ್ : 5–10 ನಿಮಿಷಗಳಲ್ಲಿ ಇದು ಮುಗಿಯುತ್ತದೆ. ದಯವಿಟ್ಟು ಅವಕಾಶ ಮಾಡಿಕೊಡಿ.

ಅಧ್ಯಕ್ಷರು : ಮಾನ್ಯ ಜಗದೀಶ್ ಶೆಟ್ಟರ್‌ರವರೇ, ದಯಮಾಡಿ ಕುಳಿತುಕೊಳ್ಳಿ. 5 ನಿಮಿಷಗಳಲ್ಲಿ ಯಾವುದು ಮುಗಿಯುತ್ತದೆ ಎಂಬುದು ನನಗೆ ಗೊತ್ತಿದೆ. ಆದ್ದರಿಂದ ನಾಳೆ ನಾನು ಇದರ ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಅಲ್ಲಿ ಬಹಳ ಗಂಭೀರವಾದ ಪರಿಸ್ಥಿತಿ ಇದೆ. ಅಲ್ಲಿ ಅಮರಣಾಂತ ಉಪವಾಸ ಕುಳಿತಿದ್ದಾರೆ. ಧರಣಿ ಸತ್ಯಾಗ್ರಹ ಮತ್ತು ಹೋರಾಟ ನಡೆಯುತ್ತಿದೆ.

ಅಧ್ಯಕ್ಷರು : ಆಯಿತು ನೋಡೋಣ. ಅದರ ಬಗ್ಗೆ ಇವತ್ತು ಮಧ್ಯಾಹ್ನ ತೆಗೆದುಕೊಳ್ಳೋಣ ಬಿಡಿ. ಈಗ ಶಾಸನ ರಚನೆ.

(ಗೊಂದಲ)

ಅಧ್ಯಕ್ಷರು : ಇವತ್ತು ಶೂನ್ಯ ವೇಳೆ ಇಲ್ಲ. ನಾಳೆ ಏನು ಬೇಕಾದರೂ ಪ್ರಸ್ತಾಪ ಮಾಡಲು ಅವಕಾಶ ಮಾಡಿಕೊಡುತ್ತೇನೆ.

(ಗೊಂದಲ)

ಆ) ವಿಷಯ : ಟೈಲರ್ಸ್‌ಗಳ ಬೇಡಿಕೆ ಬಗ್ಗೆ

ಶ್ರೀ ಅರಗ ಜ್ಞಾನೇಂದ್ರ : ..... ಹೊಲಿಗೆ ಹಾಕುವ ಟೈಲರ್ಸ್ ......

ಅಧ್ಯಕ್ಷರು : ಇದೇ ವಿಚಾರವನ್ನು ಆಗಲೇ ನಿಮ್ಮ ನಾಯಕರು ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳೂ ಸಹ ಆ ಬಗ್ಗೆ ಆಗಲೇ ಉತ್ತರವನ್ನೂ ಸಹ ಕೊಟ್ಟಿದ್ದಾರೆ. ಹೀಗಿರುವಾಗ ನೀವು ಮತ್ತೊಮ್ಮೆ ಅದೇ ವಿಚಾರವನ್ನು ಪ್ರಸ್ತಾಪ ಮಾಡಲು ಹೊರಟರೆ ಹೇಗೆ? ಅನವಶ್ಯಕವಾಗಿ ಚರ್ಚೆ ಮಾಡಿ ಸಭೆಯ ಸಮಯವನ್ನು ಹಾಳು ಮಾಡಬೇಡಿ.

ಶ್ರೀ ಅರಗ ಜ್ಞಾನೇಂದ್ರ : ಟೈಲರ್‌ಗಳು ಒಂದು ಲಕ್ಷ ಜನ ಇವತ್ತು ಬಂದಿದ್ದಾರೆ. ಅವರು ಕೆಲವೊಂದು ಬೇಡಿಕೆಗಳನ್ನು ಇಟ್ಟಿದ್ದಾರೆ. ಅವುಗಳ ಬಗ್ಗೆ ಸರ್ಕಾರ ಪರಿಶೀಲನೆ ಮಾಡಬೇಕು. ಅವುಗಳನ್ನು ಈಡೇರಿಸುವುದಾಗಿ ಸರ್ಕಾರ ಘೋಷಣೆ ಮಾಡಬೇಕು. ಇಡೀ ರಾಜ್ಯದ ಮೂಲೆ ಮೂಲೆಗಳಿಂದ ಇವತ್ತು ಟೈಲರ್ಸ್ ಬೆಂಗಳೂರಿಗೆ ಬಂದಿದ್ದಾರೆ.

ಅಧ್ಯಕ್ಷರು : ಆಯಿತು, ನಿಮ್ಮ ನಾಯಕರು ಈ ವಿಚಾರವನ್ನು ಈಗಾಗಲೇ ಪ್ರಸ್ತಾಪ ಮಾಡಿದ್ದಾರೆ. ಅದಕ್ಕೆ ಉತ್ತರವನ್ನು ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಿದ್ದಾರೆ.

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) : ಮಾನ್ಯ ಶ್ರೀರಾಮರೆಡ್ಡಿಯವರೂ ಸಹ ಈಗ ನನ್ನ ಜೊತೆಗೆ ಅದೇ ವಿಷಯದ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದರು. ಮಾನ್ಯ ಸದಸ್ಯರಾದ ಸೀತಾರಾಮ್‌ರವರೂ ಕೂಡ ಅದರ ಬಗ್ಗೆ ನನಗೆ ಹೇಳಿದ್ದಾರೆ. ಕಾರ್ಮಿಕ ಸಚಿವರಾದ ತನ್ವೀರ್ ಸೇಠ್‌ರನ್ನೂ ಸಹ ಈಗ ಅಲ್ಲಿಗೆ ನಾನು ಕಳುಹಿಸುತ್ತಿದ್ದೇನೆ. 4-5 ಜನ ಭೇಟಿಯಾಗಬೇಕೆಂದಿದ್ದರೆ, ಸಂಜೆ 5 ಗಂಟೆಯ ನಂತರ ನನ್ನ ಛೇಂಬರಿಗೆ ಬರಬಹುದು. ಆಗ ನಾನು ಅವರನ್ನು ಭೇಟಿ ಮಾಡುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಹೊಲಿಗೆದಾರರ ಮೇಲೆ ಸಿಟ್ಟು ಮಾಡಿಕೊಳ್ಳಬಾರದು. ಅವರು ನಮ್ಮ ಬಟ್ಟೆನೆಲ್ಲಾ ಹೇಗೇಗೋ ಹೊಲೆಯಬಹುದು. ಹಾಗಾಗಿ ಅವರ ಬೇಡಿಕೆಗಳ ಬಗ್ಗೆ ಸರ್ಕಾರ ಸೌಜನ್ಯ ಪೂರ್ಣವಾಗಿ ಅವರನ್ನು ಕರೆಸಿ ಮಾತನಾಡಬೇಕು. ನಮ್ಮ ಬಟ್ಟೆಗಳನ್ನು ಹೊಲಿಯುವವರು ಅವರೇ. ಅವರ ಬೇಡಿಕೆಗಳಿಗೆ ಸ್ಪಂದಿಸದಿದ್ದರೆ ಅವರು ನಮ್ಮ ಬಟ್ಟೆಗಳನ್ನು ಹೇಗೇಗೋ ಹೊಲಿದರೆ ನಮ್ಮ ಕಥೆ ಏನಾಗಬಹುದು?

ಅಧ್ಯಕ್ಷರು : ಈಗಾಗಲೇ ಅದರ ಬಗ್ಗೆ ಹೇಳಿಯಾಗಿದೆ. ಮತ್ತೆ ಅದರ ಬಗ್ಗೆ ಏಕೆ ಪ್ರಸ್ತಾಪ ಮಾಡುತ್ತೀರಿ?

ಶ್ರೀ ಧರ್ಮಸಿಂಗ್ : ಅವರ ಬೇಡಿಕೆಗಳ ಪತ್ರವನ್ನು ತೆಗೆದುಕೊಂಡು, ಇದರ ಬಗ್ಗೆ ಸಂಬಂಧಪಟ್ಟಂತಹ ಅಧಿಕಾರಿಗಳನ್ನು ಕರೆಸುತ್ತೇನೆ. ಅದರ ಬಗ್ಗೆ ಸಮಂಜಸವಾಗಿ ಚರ್ಚೆಯಾಗುತ್ತದೆ. ಈ ಬಗ್ಗೆ ಮತ್ತೊಂದು ದಿನಾಂಕವೊಂದನ್ನು ನಿಗದಿಪಡಿಸಿ, ಅವರ ಕೆಲವು ಪ್ರತಿನಿಧಿಗಳೊಂದಿಗೆ ತಮ್ಮ ಜೊತೆಗೆ ಕೂಡ ಮಾತನಾಡುತ್ತೇನೆ.

ಅಧ್ಯಕ್ಷರು : ಕಾರಜೋಳರವರೇ, ತಮ್ಮ ವಿಷಯವನ್ನು ಇವತ್ತು ಮಧ್ಯಾಹ್ನ ತೆಗೆದುಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ.......

ಅಧ್ಯಕ್ಷರು : ಮಾನ್ಯ ವಾಟಾಳ್ ನಾಗರಾಜ್‌ರವರೇ, ತಾವೇಕೆ ನಿಂತಿದ್ದೀರಿ?

ಶ್ರೀ ವಾಟಾಳ್ ನಾಗರಾಜ್ : ಅಂಡಮಾನ್ ದ್ವೀಪದಲ್ಲಿ ಚಾಮರಾಜನಗರದವರು ಸಿಕ್ಕಿ ಹಾಕಿಕೊಂಡಿದ್ದಾರೆ. ಅವರನ್ನು ಇಲ್ಲಿಗೆ ಕರೆಸಬೇಕಾಗಿದೆ. ಆ ಬಗ್ಗೆ ಪ್ರಸ್ತಾಪಿಸುವುದಿದೆ. ದಯವಿಟ್ಟು ತಾವು ಅವಕಾಶ ನೀಡಿದರೆ, ಒಂದೇ ಒಂದು ನಿಮಿಷದಲ್ಲಿ ಅದನ್ನು ಪ್ರಸ್ತಾಪ ಮಾಡಿಬಿಡುತ್ತೇನೆ.

ಅಧ್ಯಕ್ಷರು : ತಾವು ನನ್ನ ಗಮನಕ್ಕೆ ತರದೇ, ತಮ್ಮಿಷ್ಟಕ್ಕೆ ತಾವೇ ವಿಷಯ ಪ್ರಸ್ತಾಪಿಸಲು ನಿಂತುಕೊಂಡರೆ ಹೇಗೆ?

ಶ್ರೀ ವಾಟಾಳ್ ನಾಗರಾಜ್ : ಈಗಾಗಲೇ ತಮಗೆ ಈ ಬಗ್ಗೆ ತಿಳಿಸಿದ್ದೇನೆ.

ಅಧ್ಯಕ್ಷರು : ಆಯಿತು. ಒಂದೇ ಒಂದು ನಿಮಿಷದಲ್ಲಿ ವಿಷಯವನ್ನು ಪ್ರಸ್ತಾಪಿಸಿ.

(ಇ) ವಿಷಯ : ಅಂಡಮಾನ್ ಮತ್ತು ನಿಕೋಬಾರ್ ದ್ವೀಪದಲ್ಲಿ ಸಿಕ್ಕಿ ಹಾಕಿಕೊಂಡಿರುವ ಚಾಮರಾಜನಗರದ ಕಾರ್ಮಿಕರನ್ನು ವಾಪಸ್ ಕರೆಸಿಕೊಳ್ಳುವ ಬಗ್ಗೆ. ಹಾಗೂ ಕನ್ನಡ ಭಾಷೆಗೆ ಶಾಸ್ತ್ರಿಯ ಭಾಷಾ ಸ್ಥಾನ ಮಾನ ನೀಡುವ ಬಗ್ಗೆ. ಹಾಗೂ ಕಾಸರಗೋಡಿನ ವಿಚಾರದಲ್ಲಿ ನಿಯೋಗ ಕರೆದೊಯ್ಯುವ ಬಗ್ಗೆ.

ಶ್ರೀ ವಾಟಾಳ್ ನಾಗರಾಜ್(ಚಾಮರಾಜನಗರ) : ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಇದನ್ನು ತರುತ್ತಿದ್ದೇನೆ. ಚಾಮರಾಜನಗರದ 15 ಜನ ಕಾರ್ಮಿಕರು ಸುನಾಮಿ ದುರಂತ ನಡೆದ ಅಂಡಮಾನ್ ದ್ವೀಪದಲ್ಲಿ ಸಿಕ್ಕಿ ಹಾಕಿಕೊಂಡಿದ್ದಾರೆ. ಅಲ್ಲಿಂದ ಅವರು ಬರಲಿಕ್ಕಾಗುತ್ತಿಲ್ಲ. ಅವರನ್ನು ಕರೆಸುವ ಬಗ್ಗೆ ಸರ್ಕಾರ ತೀವ್ರವಾದ ಪ್ರಯತ್ನ ಮಾಡಬೇಕು. ಇವತ್ತು ಅದರ ಬಗ್ಗೆ 'ಕನ್ನಡ ಪ್ರಭ' ಪತ್ರಿಕೆಯಲ್ಲಿ ವರದಿಯಾಗಿದೆ. ಚಾಮರಾಜನಗರದ 15 ಜನ ಕಾರ್ಮಿಕರು ಅಲ್ಲಿ ಸಿಕ್ಕಿ ಹಾಕಿಕೊಂಡಿದ್ದಾರೆ. ಅವರ ಬಗ್ಗೆ ಸರ್ಕಾರ ತೀವ್ರವಾಗಿ ಗಮನಹರಿಸಿ, ಅವರನ್ನು ಇಲ್ಲಿಗೆ ಕರೆಸಿಕೊಳ್ಳಬೇಕು. ಈ ಬಗ್ಗೆ ಸರ್ಕಾರ ತನ್ನ ನಿಲುವನ್ನು ತಿಳಿಸಬೇಕು. ಎರಡನೆಯದಾಗಿ, ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಸ್ಥಾನಮಾನ ನೀಡುವಂತೆ ಒತ್ತಾಯಿಸಲು ದೆಹಲಿಗೆ ನಿಯೋಗವೊಂದನ್ನು ಕರೆದುಕೊಂಡು ಹೋಗುವುದಾಗಿ ಮಾನ್ಯ ಮುಖ್ಯಮಂತ್ರಿಗಳು ಭರವಸೆ ನೀಡಿದ್ದರು. ಅದರ ಬಗ್ಗೆ ಅವರು ಅನೇಕ ಕಡೆ ಹೇಳಿದ್ದಾರೆ. ಕಾಸರಗೋಡು....

ಅಧ್ಯಕ್ಷರು : ಶೂನ್ಯ ವೇಳೆಯಲ್ಲಿ ಯಾವುದೋ ವಿಷಯ ಪ್ರಸ್ತಾಪ ಮಾಡಿ, ಅಲ್ಲಿಂದ ಎಲ್ಲೆಲ್ಲಿಗೋ ಹೋಗುತ್ತಿದ್ದೀರಲ್ಲಾ? ಹೀಗಾದರೆ ಹೇಗೆ?

ಶ್ರೀ ವಾಟಾಳ್ ನಾಗರಾಜ್ : ಒಂದೇ ನಿಮಿಷ ಸಾರ್, ನಾನು ಇದನ್ನು ಮುಗಿಸಿಬಿಡುತ್ತೇನೆ. ಕನ್ನಡ ಭಾಷೆಗೆ ಶಾಸ್ತ್ರೀಯ ಭಾಷೆಯ ಸ್ಥಾನಮಾನ ಕೊಡುವಂತೆ ದೆಹಲಿಗೆ ನಿಯೋಗವೊಂದನ್ನು ಕರೆದುಕೊಂಡು ಹೋಗುವುದಾಗಿ ಮಾನ್ಯ ಮುಖ್ಯಮಂತ್ರಿಗಳು ಅನೇಕ ಬಾರಿ ಹೇಳಿದ್ದಾರೆ. ಯಾವಾಗ ನಿಯೋಗವನ್ನು ಕರೆದುಕೊಂಡು ಹೋಗಲಾಗುವುದು ಎಂಬ ಬಗ್ಗೆ ಅವರು ತಿಳಿಸಬೇಕು. ಕಾಸರಗೋಡಿನ ವಿಚಾರದಲ್ಲಿ ಸಹ ನಿಯೋಗವೊಂದನ್ನು ಕರೆದೊಯ್ಯುವುದಾಗಿ ಮಾನ್ಯ ಮುಖ್ಯಮಂತ್ರಿಗಳು ಅನೇಕ ಸಭೆಗಳಲ್ಲಿ ಹೇಳಿದ್ದಾರೆ. ಈ ಎರಡು ಭರವಸೆಗಳನ್ನು ಯಾವಾಗ

ಈಡೇರಿಸಲಾಗುತ್ತದೆ ಎಂಬ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ಸರ್ಕಾರದ ನಿಲುವನ್ನು ತಿಳಿಸಬೇಕೆಂದು ಕೋರುತ್ತೇನೆ.

ಶ್ರೀ ಧರ್ಮಸಿಂಗ್(ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ಚಾಮರಾಜನಗರದಿಂದ ಹೋಗಿರುವ 15 ಜನ ಕಾರ್ಮಿಕರು ಅಂಡಮಾನ್ ಮತ್ತು ನಿಕೋಬಾರ್‌ನಲ್ಲಿ ಸಿಕ್ಕಿಹಾಕಿಕೊಂಡಿರುವುದಾಗಿ ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ದಯವಿಟ್ಟು ಅವರ ವಿಳಾಸ ಮತ್ತು ಅವರು ಯಾರ್‍ಯಾರು ಎಂಬ ಬಗ್ಗೆ ಮಾಹಿತಿ ಕೊಡಿ. ನಾನು ಅಲ್ಲಿಯ ಲೆಫ್ಟಿನೆಂಟ್ ಗೌರ್‍ನರ್ ಜೊತೆಗೆ ಈ ಬಗ್ಗೆ ಮಾತನಾಡುತ್ತೇನೆ. ಅಲ್ಲಿಯ ಮುಖ್ಯ ಕಾರ್ಯದರ್ಶಿಯವರಾದ ಭಟ್‌ರವರ ಜೊತೆಗೂ ಸಹ ನಾನು ಮಾತನಾಡುತ್ತೇನೆ. ಅವರನ್ನು ಅಲ್ಲಿಂದ ಸುರಕ್ಷಿತವಾಗಿ ಕರೆಸಿ ತಮ್ಮಲ್ಲಿಗೆ ತಂದು ಬಿಡುತ್ತೇನೆ. ಎರಡನೆಯದಾಗಿ, ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಸ್ಥಾನಮಾನ ನೀಡುವ ಬಗ್ಗೆ ಪ್ರಸ್ತಾಪಿಸಿದ್ದಾರೆ. ಅದರ ಬಗ್ಗೆ ಇನ್ನು 2–3 ದಿವಸಗಳಲ್ಲಿ ಸಭೆಯೊಂದನ್ನು ಕರೆಯುತ್ತಿದ್ದೇನೆ. ಆ ಸಭೆ ಮುಗಿದ ಮೇಲೆ ಅಲ್ಲಿಗೆ ನಿಯೋಗ ಹೋಗುವ ದಿನಾಂಕವನ್ನು appointment ತೆಗೆದುಕೊಂಡು ತೀರ್ಮಾನ ಮಾಡೋಣ. ಇನ್ನು ಕಾಸರಗೋಡಿನ ಬಗ್ಗೆ ಹೇಳುವುದಾದರೆ, ನಾವು ಮತ್ತು ನೀವು ಇಲ್ಲೇ ಕುಳಿತು ಆ ವಿಚಾರವನ್ನು ಬಗೆಹರಿಸೋಣ.

ಶ್ರೀ ವಾಟಾಳ್ ನಾಗರಾಜ್ : ಕಾಸರಗೋಡಿಗೆ ನಿಯೋಗ ಕರೆದುಕೊಂಡು ಹೋಗುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಭರವಸೆ ನೀಡಿದ್ದರು.

ಶ್ರೀ ಧರ್ಮಸಿಂಗ್ : ಮಾನ್ಯ ವಾಟಾಳ್ ನಾಗರಾಜ್‌ರವರು ಅವತ್ತು ಚೌಡಯ್ಯ ಹಾಲ್‌ನಲ್ಲಿ ನನ್ನನ್ನು ಕರೆಸಿ ದೊಡ್ಡ ದೊಡ್ಡ ಹಾರಗಳನ್ನು ಹಾಕಿಸಿದ್ದರು. ಆಗ ನಿಯೋಗವೊಂದನ್ನು ಕರೆದೊಯ್ಯುವಂತೆ ಒತ್ತಾಯ ಮಾಡಿದ್ದರು. ನಾನು ಆಗ ಕಾಸರಗೋಡಿಗೆ ನಿಯೋಗ ಕರೆದೊಯ್ಯುವುದಾಗಿ ಹೇಳಿದ್ದೆ. ಅದರ ಬಗ್ಗೆ ವಿಚಾರ ಮಾಡೋಣ. ಆದರೆ ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನ ನೀಡುವ ವಿಚಾರ ಬಹಳ ದೊಡ್ಡದು. ಅದರ ಬಗ್ಗೆ ಮಾನ್ಯ ಜಿ. ನಾರಾಯಣ, ಮಾನ್ಯ ಕೃಷ್ಣೇಗೌಡರು ಮತ್ತು ತಾವು ಹಾಗೂ ಇತರರೂ ಸಹ ಹೇಳಿದ್ದೀರಿ. ಅದೊಂದು ದೊಡ್ಡ ಸಮಸ್ಯೆ ಇದೆ. ಮಾನ್ಯ ಪ್ರಧಾನ ಮಂತ್ರಿಗಳ ಬಳಿಗೆ ಎಲ್ಲಾ ಪಕ್ಷದ ನಾಯಕರುಗಳನ್ನು ಒಳಗೊಂಡ ಸರ್ವ ಪಕ್ಷಗಳ ನಿಯೋಗವೊಂದನ್ನು ದಿನಾಂಕ ನಿಗದಿಪಡಿಸಿ, ಪಾರ್ಲಿಮೆಂಟ್ ನಡೆಯುವ ಸಮಯದಲ್ಲಿ ಕರೆದುಕೊಂಡು ಹೋಗುತ್ತೇನೆ. ಅದಕ್ಕಿಂತ ಮುಂಚೆ ಅದರ ಬಗ್ಗೆ ಸಭೆಯೊಂದನ್ನು ಕೂಡ ಮಾಡುತ್ತಿದ್ದೇನೆ.

ಅಧ್ಯಕ್ಷರು : ಮಾನ್ಯ ಮಹದೇವಪ್ಪ ಯಾದವಾಡ. ಅವರು ಸದನದಲ್ಲಿ ಇಲ್ಲವೆನಿಸುತ್ತದೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೇ ಶೂನ್ಯ ವೇಳೆ....

(ಗೊಂದಲ)

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಬೇಕು. ಈ ತರಹ ಆದರೆ ಆಗುವುದಿಲ್ಲ.

(ಗೊಂದಲ)

ಅಧ್ಯಕ್ಷರು : ಮಾನ್ಯ ಸದಸ್ಯರಲ್ಲಿ ನನ್ನದೊಂದು ವಿನಂತಿ. ನಾನು ಪ್ರತಿದಿನ ಎರಡೆರಡು ವಿಷಯಗಳನ್ನು ಮಾತ್ರ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲು ಅವಕಾಶ ಮಾಡಿಕೊಡುತ್ತೇನೆ ಎಂದು ಹೇಳಿದ್ದೇನೆ. ಹೀಗೆ ಎಲ್ಲರೂ ನನ್ನ ಅನುಮತಿ ಪಡೆಯದೇ ಮಾತನಾಡಲು ಎದ್ದು ನಿಂತು,

ನಮ್ಮದೊಂದು ವಿಷಯ ಪ್ರಸ್ತಾಪಿಸಲಿಕ್ಕಿದೆ ಎಂದರೆ ಸದನ ನಡೆಸಲಿಕ್ಕೆ ಕಷ್ಟವಾಗುತ್ತದೆ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಯಾರ ಹೆಸರನ್ನು ನಾನು ಮಾತನಾಡಲು ಕರೆದಿದ್ದೇನೋ ಅವರು ಮಾತ್ರ ಮಾತನಾಡಿ, ಉಳಿದವರು ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಹಂಪನಗೌಡ ಬಾದರ್ಲಿ : ಮಾನ್ಯ ಅಧ್ಯಕ್ಷರೇ, ನಮ್ಮ ಹೈದರಾಬಾದ್-ಕರ್ನಾಟಕ ಬಹಳ ಹಿಂದುಳಿದಿರತಕ್ಕಂಥ ಪ್ರದೇಶವಾಗಿದೆ. ನಿಲುವಳಿ ಸೂಚನೆ ಅಡಿ ಪ್ರಸ್ತಾಪಿಸಬೇಕೆಂದಿದ್ದ ವಿಚಾರವನ್ನು ತಾವು ಕನ್‌ವರ್ಟ್ ಮಾಡಿ ನಿಯಮ 69ರ ಅಡಿಯಲ್ಲಿ ಪ್ರಸ್ತಾಪಿಸಲು ಅವಕಾಶ ಮಾಡಿಕೊಡಿ. ಆ ರೀತಿ ಮಾಡಲು ತಮಗೆ ಅಧಿಕಾರ ಇದೆ.

(ಗೊಂದಲ)

ಅಧ್ಯಕ್ಷರು : ದಯಮಾಡಿ ಸಭೆಯನ್ನು ನಡೆಸಲು ಅವಕಾಶ ಮಾಡಿಕೊಡಿ ಎಂದು ನಾನು ಮಾನ್ಯ ಸದಸ್ಯರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇದಕ್ಕಿಂತ ಹೆಚ್ಚು ನಾನೇನೂ ಹೇಳಲಿಕ್ಕೆ ಸಾಧ್ಯವಾಗುವುದಿಲ್ಲ.

(ಗೊಂದಲ)

ಅಧ್ಯಕ್ಷರು : ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಯಾರೂ ಸಹ ನಿಂತುಕೊಳ್ಳಬಾರದು. ಯಾರಿಗೆ ಅವಕಾಶ ಮಾಡಿಕೊಡುತ್ತೇನೋ ಅವರು ಮಾತ್ರ ಮಾತನಾಡಬೇಕು.

ಅಧ್ಯಕ್ಷರು : ದಯಮಾಡಿ ಎಲ್ಲರೂ ಕುಳಿತುಕೊಳ್ಳಬೇಕು. ಯಾರಿಗೆ ಅವಕಾಶ ಮಾಡಿಕೊಡುತ್ತೇನೆ ಅವರು ಮಾತ್ರ ಮಾತನಾಡಬೇಕು.

(ಈ) ವಿಷಯ : ಸರ್ಕಾರಿ ಕಾರ್ಯಕ್ರಮಗಳಿಗೆ ಶಾಸಕರ ಅಧ್ಯಕ್ಷತೆ ವಹಿಸುವ ಬಗ್ಗೆ.

ಶ್ರೀ ಯಾದವಾಡ ಮಹಾದೇವಪ್ಪ ಶಿವಲಿಂಗಪ್ಪ (ರಾಮದುರ್ಗ) : ಮಾನ್ಯ ಅಧ್ಯಕ್ಷರೆ, ರಾಮದುರ್ಗ ಚುನಾವಣಾ ಮತ ಕ್ಷೇತ್ರದಲ್ಲಿ ನಡೆಯತಕ್ಕಂತಹ ಸರ್ಕಾರಿ ಕಾರ್ಯಕ್ರಮಗಳಲ್ಲಿ ಸರ್ಕಾರಿ ನಿಯಮಗಳನುಸಾರ ಶಾಸಕರಿಗೆ ನೀಡಿರುವ ಸ್ಥಾನ ಮಾನಗಳನ್ನು ನಿರಾಕರಿಸಿ ತಾಲ್ಲೂಕಿನ ಅಧಿಕಾರಿಗಳು ನಿಯಮಗಳನ್ನು ಉಲ್ಲಂಘಿಸಿ ಸೋತ ಅಭ್ಯರ್ಥಿಗಳು ಹಾಗೂ ರಾಷ್ಟ್ರೀಯ ಪಕ್ಷದ ಪ್ರಮುಖರಿಗೆ ಸರ್ಕಾರಿ ಕಾರ್ಯಕ್ರಮಗಳಲ್ಲಿ ಪ್ರಮುಖ ಸ್ಥಾನಮಾನ ಕೊಟ್ಟು ಸರ್ಕಾರಿ ಕಾರ್ಯಕ್ರಮಗಳಲ್ಲಿ ರಾಜಕೀಯ ಮಾಡುತ್ತಿದ್ದಾರೆ. ಶಾಸಕರ ಸ್ಥಾನಮಾನಕ್ಕೆ ಹಾಗೂ ಗೌರವಕ್ಕೆ ಧಕ್ಕೆ ಉಂಟು ಮಾಡಿದ್ದಾರೆ. ಹಾಗಾಗಿ ರಾಮದುರ್ಗ ತಾಲ್ಲೂಕಿನಲ್ಲಿ ಈ ರೀತಿ ನಡೆದುಕೊಂಡ ಅಧಿಕಾರಿಗಳ ಬಗ್ಗೆ ಹಾಗೂ ಸೋತ ಅಭ್ಯರ್ಥಿಗಳು ಇವರು ಯಾರು ಎಂದು ತಾವು ಉತ್ತರ ಕೊಡಬೇಕೆಂದು ಸನ್ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಕೇಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಇದು ಬಹಳ ಗಂಭೀರವಾದುದು. ಇವತ್ತು ಅಲ್ಲಿ ಯಾರು ಸೋತ ಅಭ್ಯರ್ಥಿಗಳಿದ್ದಾರೆ ಅವರನ್ನು ಕರೆದುಕೊಂಡು ಸರ್ಕಾರಿ ಕಾರ್ಯಕ್ರಮ ಮಾಡುತ್ತಾರೆ. ರಾಮದುರ್ಗದಲ್ಲಿ ಅವರದೇ ಆದ ಅಧಿಕಾರ ನಡೆಸುತ್ತಾರೆ ಎಂದು ಹೇಳಿದರು. ರಾಮ ದುರ್ಗದಲ್ಲಿ ಏನಾಗಿದೆ ಎಂದರೆ ಅವರ ಕಡೆಯಿಂದ ಸರ್ಕಾರಿ ಕಾರ್ಯಕ್ರಮದ ಉದ್ಘಾಟನೆ ಮಾಡಿಸುತ್ತಾರೆ. ಅವರಿಗೆ ಏನೂ ಸಂಬಂಧ ಇಲ್ಲ. ಜನ ಪ್ರತಿನಿಧಿಗಳೂ ಇಲ್ಲ. ಆಮಂತ್ರಣ ಪತ್ರಿಕೆಯಲ್ಲಿ ಅವರ ಹೆಸರೂ ಹಾಕಿಸಿರುತ್ತಾರೆ.

ಅಧ್ಯಕ್ಷರು : ಜಗದೀಶ್ ಶೆಟ್ಟರ್‌ರವರೇ, ದಯಮಾಡಿ ತಾವು ಕುಳಿತುಕೊಳ್ಳಬೇಕು. ನಾಯಕರು ಹಾಗೂ ಉಪ ನಾಯಕರು ಇಬ್ಬರೂ ಇಲ್ಲ. ಬಿಜೆಪಿಯ ಸಚೇತಕರು ಯಾರು: ದಯಮಾಡಿ ನೀವು ನಿಮ್ಮ ಸದಸ್ಯರಿಗೆ ನಿಯಂತ್ರಣ ಮಾಡದೇ ಇದ್ದರೆ ನಾವು ಸಭೆ ನಡೆಸುವುದು ಕಷ್ಟವಾಗುತ್ತದೆ. ಸಮಸ್ಯೆ ಪ್ರಶ್ನೆ ಇಲ್ಲ. ಸಮಸ್ಯೆ ನೀವೇ ಸೃಷ್ಟಿ ಮಾಡುತ್ತಿದ್ದೀರಿ. 15–20 ಜನ ನಿಂತುಕೊಂಡು ಯಾವ ರೀತಿ ನಡೆದುಕೊಳ್ಳುತ್ತಿದ್ದೀರಿ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಅಧ್ಯಕ್ಷರೆ ನಮ್ಮ ಕ್ಷೇತ್ರಗಳಲ್ಲಿ ನಮಗೆ ಓಡಾಡುವುದಕ್ಕಾಗುತ್ತಿಲ್ಲ. ಬಹಳ ಸಮಸ್ಯೆಗಳು ಉಲ್ಬಣ ಆಗುತ್ತಿವೆ.

ಅಧ್ಯಕ್ಷರು : ಓಡಾಡುವುದಕ್ಕಾಗುವುದಿಲ್ಲ. ಇನ್ನೊಂದು ಆಗುವುದಿಲ್ಲ ಎಂದರೆ ಸಭೆಗೂ ತಮ್ಮದೇ ಆದ ನಿಯಮಗಳು ಇವೆ. ಆ ನಿಯಮಾವಳಿಗಳ ಅಡಿಯಲ್ಲಿ ಸಭೆ ನಡೆಯಬೇಕಾಗುತ್ತದೆ. 15–20 ಜನ ಸದಸ್ಯರು ಎಲ್ಲರೂ ಒಟ್ಟಿಗೆ ಎದ್ದು ನಿಂತರೆ ಸಭೆ ನಡೆಸುವುದು ಹೇಗೆ? No. This is not the way.

ಶ್ರೀ ಧರ್ಮಸಿಂಗ್ (ಮುಖ್ಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಜಗದೀಶ್ ಶೆಟ್ಟರ್‌ರವರು ರಾಮದುರ್ಗ ಕ್ಷೇತ್ರದಲ್ಲಿ ಆಗತಕ್ಕಂತಹ ಘಟನೆ ಬಗ್ಗೆ ಯಾವುದು ಪ್ರಸ್ತಾಪ ಮಾಡಿದ್ದಾರೆ, ಆಮಂತ್ರಣ ಪತ್ರಿಕೆಯಲ್ಲಿ ಸ್ವಲ್ಪ ವ್ಯತ್ಯಾಸವಾಗುತ್ತದೆ. ಅದನ್ನು ನೋಡಿ ಸರಿಪಡಿಸುತ್ತೇವೆ. ನಾವು ಆದೇಶ ಕೊಟ್ಟಿದ್ದೇವೆ. ಯಾರು ಕ್ಷೇತ್ರದ ಶಾಸಕರು ಇದ್ದಾರೆ ಅವರ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮ ನಡೆಯಬೇಕು. ಮತ್ತು ಅಲ್ಲಿ ಮಾಜಿ ಶಾಸಕರು ಹೋದರೆ ತಪ್ಪೇನೂ ಇಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಮಾಜಿ ಶಾಸಕರು ಅಲ್ಲ, ಒಂದು ರಾಜಕೀಯ ಪಕ್ಷದ ನಾಯಕರು ಅವರು ಯಾವ ಜನ ಪ್ರತಿನಿಧಿಗಳು ಅಲ್ಲ.

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ. ಈ ರೀತಿ ನಿಂತುಕೊಳ್ಳಬಾರದು. ಅವರು ಉತ್ತರ ಹೇಳುತ್ತಾರೆ.

ಶ್ರೀ ಧರ್ಮಸಿಂಗ್ : ಆ ನಾಯಕರದ್ದು ಅಲ್ಲಿ ಸೇವೆ ಇರಬಹುದು. ಇಲ್ಲವೆಂದರೆ, ಮತ್ತೆ ಯಾರು ಕರೆಸಿದರು ಅವರಿಗೆ?

ಶ್ರೀ ಜಗದೀಶ್ ಶೆಟ್ಟರ್ : ರಾಮದುರ್ಗ ಪುರಸಭೆಯವರು ಕರೆಸಿದ್ದಾರೆ. ಸರ್ಕಾರಿ ಕಾರ್ಯಕ್ರಮಗಳಲ್ಲಿ ರಾಜಕೀಯ ನಾಯಕರಿಂದ ಉದ್ಘಾಟನೆ ಮಾಡಿಸುತ್ತಾರೆ. ಅದು ಇಲ್ಲಿ ಇದೆ ನೋಡಿ. ಆ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಂಡರೆ ಅವರಿಗೆ ಒಂದು ಸಾರಿ ಎಚ್ಚರಿಕೆ ಆಗುತ್ತದೆ.

ಶ್ರೀ ಧರ್ಮಸಿಂಗ್ : ನೀವು ಇಲ್ಲಿ ಕೇಳುತ್ತೀರಿ ನಾನು ಹೆಸರು ಹೇಗೆ ಹೇಳಲಿ? ಅವರ ತಂದೆ ತಾಯಿ ಪುರಸಭೆಯಲ್ಲಿ ಶಾಸಕರಾಗಿ ಕೆಲಸ ಮಾಡಿದ್ದಾರೆ. ಆ ಕಾರಣದಿಂದ ಅವರಿಗೆ ಕರೆಸಿರಬಹುದು. ಪಿ.ಎಮ್. ಅಶೋಕ್‌ರವರು ಹೋದ ಸಾರಿ ಕಂಟೆಸ್ಟ್ ಮಾಡಿದ್ದರು. ಅದಕ್ಕೆ ಅವರಿಗೆ ಕರೆಸಿದ್ದಾರೆ. ಶ್ರೀಮತಿ ಎನ್‌ಎಸ್ ಮುಂಡರಗಿ ಅವರು ಅಧ್ಯಕ್ಷರು. ಅವರದು ಅಧ್ಯಕ್ಷ ಸ್ಥಾನದಲ್ಲಿ ನಡೆದಿದೆ. ಮಹಾದೇವ ಯಾದವಾಡ ರವರು ರಾಮದುರ್ಗದ ಶಾಸಕರು ಅವರೂ ಕೂಡ ಪಾರ್ಟಿಸಿಪೇಟ್ ಮಾಡಿದ್ದಾರೆ. ಒಂದು ತಾವು ಏನು ಹೇಳುತ್ತಿದ್ದೀರಿ ಎಂದರೆ, ಅವರ ಕಡೆಯಿಂದ ವಿತರಣೆ ಮಾಡಿದ್ದೀರಿ ಎಂದು. ಇದು ಶಾಸಕರಿಗೆ ಮನಸ್ಸಿಗೆ ಸ್ವಲ್ಪ ನೋವಾಗಿದೆ. ಇದನ್ನು ನಾವು ನೋಡಿ ಪುರಸಭೆಯಿಂದ ವರದಿ ತರಿಸಿ ನೋಡುತ್ತೇನೆ. ನೋಡುವುದು ಬಿಡುವುದು ಇಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಧರ್ಮಸಿಂಗ್ : ಅಧಿಕಾರಿಗಳಿಗೆ ನಾವು ನಿರ್ದಿಷ್ಟವಾಗಿ ಆದೇಶ ಕೊಡುತ್ತೇವೆ. ಅಲ್ಲಿರತಕ್ಕಂತಹ ಮತ ಕ್ಷೇತ್ರದ ಶಾಸಕರನ್ನು ಅಲ್ಲಗಳೆದು ಕಾರ್ಯಕ್ರಮ ಮಾಡಬಾರದು. ಯಾರು ಈ ತರಹ ಮಾಡಿದ್ದಾರೆ ಆ ವಿವರಣೆ ತರಿಸಿ ಕ್ರಮ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು : ಪದೇ ಪದೇ ಇಂತಹ ಪ್ರಶ್ನೆಗಳು ಈ ಸದನದಲ್ಲಿ ಬರುತ್ತಿವೆ. ಆದ್ದರಿಂದ ಒಂದು ಸ್ಪಷ್ಟವಾಗಿ ನಿಯಮಗಳನ್ನು ರೂಪಿಸಿ ಅದನ್ನು ಉಲ್ಲಂಘನೆ ಮಾಡತಕ್ಕಂತಹ ಅಧಿಕಾರಿಗಳ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳತಕ್ಕಂಥದ್ದು ಅಗತ್ಯ ಇದೆ ಎಂದು ನನಗನ್ನಿಸುತ್ತದೆ. ದಯಮಾಡಿ ಕೂತುಕೊಳ್ಳಿ ಅವರು ಉತ್ತರ ಕೊಟ್ಟಿದ್ದಾರೆ. ನಿಮ್ಮ ಸದಸ್ಯರಿಗೇ ನೀವು ಅವಕಾಶ ಕೊಡುತ್ತಿಲ್ಲ. ಈಗ ಶ್ರೀಮತಿ ಶಕುಂತಲ ಶೆಟ್ಟಿಯವರಿಗೆ ಕರೆದಿದ್ದೇನೆ. ನಮಗೆ ಅಭಿನಂದನೆ ಬೇಡ ಏನೂ ಬೇಡ. ನೀವು ಗೌರವವಾಗಿ ಸಹಕರಿಸಿದರೆ ಅದೇ ಸಾಕು.

ಶ್ರೀ ವಾಟಾಳ್ ನಾಗರಾಜ್ : ಯಾರಿಗೂ ಗೊತ್ತಾಗುತ್ತಿಲ್ಲ. ಹೊಸ ಆದೇಶದಲ್ಲಿ ಶಾಸಕರು ಅಧ್ಯಕ್ಷರಾಗಿರಬೇಕು. ಮುಖ್ಯ ಮಂತ್ರಿಗಳು ಬಂದರೆ ಮಾತ್ರ ಮೊದಲ ಸ್ಥಾನ ಅವರಿಂದ ಉದ್ಘಾಟನೆ. ಮುಖ್ಯ ಮಂತ್ರಿಗಳು ಇಲ್ಲವೆಂದರೆ ಶಾಸಕರು ಆ ಕ್ಷೇತ್ರದಲ್ಲಿ ಅಧ್ಯಕ್ಷತೆ ವಹಿಸಬೇಕೆಂದು ತಾವು ತಕ್ಷಣದಿಂದ ಆದೇಶ ಹೊರಡಿಸಬೇಕು.

ಅಧ್ಯಕ್ಷರು : ತಾವು ಹೇಳಿದ ಮೇಲೆ ಆದೇಶ ಹೊರಡದೆ ಇರುತ್ತದೆಯೇ?

ಶ್ರೀ ಧರ್ಮಸಿಂಗ್ : ಶಾಸಕರು ಜನರಿಂದ ಆರಿಸಿ ಬಂದಂತಹ ಪ್ರತಿನಿಧಿಗಳಿದ್ದಾರೆ. ಪ್ರತಿಯೊಂದು ಕ್ಷೇತ್ರದಲ್ಲಿ ಆಗತಕ್ಕಂತಹ ಕಾರ್ಯಕ್ರಮಗಳಿಗೆ ಅವರೇ ಅಧ್ಯಕ್ಷತೆ ವಹಿಸಬೇಕು. ಹೊಸ ಆದೇಶ ಬೇಕೆಂದರೆ ಮತ್ತೊಮ್ಮೆ ಆದೇಶ ಹೊರಡಿಸುತ್ತೇನೆ. ಅದರಲ್ಲಿ ಬೇರೆ ಏನೂ ಇಲ್ಲ.

ಶ್ರೀಮತಿ ಟಿ. ಶಕುಂತಲ ಶೆಟ್ಟಿ (ಪುತ್ತೂರು) : ಸನ್ಮಾನ್ಯ ಅಧ್ಯಕ್ಷರೆ, ಇವತ್ತು ರಾಜ್ಯದಲ್ಲಿ ಹಾಗೂ ರಾಷ್ಟ್ರದಲ್ಲಿ ಹೆಣ್ಣುಮಕ್ಕಳ ಜನನ ಪ್ರಮಾಣ ಅಂಕಿ ಸಂಖ್ಯೆಗಳ ಪ್ರಕಾರ ಬಹಳ ಕಡಿಮೆ ಇದೆ.

ಶ್ರೀ ಡಿ.ಕೆ. ಶಿವಕುಮಾರ್(ಸಾತನೂರು) : ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಟ್ಟರು, ಆ ಪಾಯಿಂಟ್‌ಗೆ ಬರುತ್ತಿದ್ದೇನೆ. ಈಗ ವಾಟಾಳ್ ನಾಗರಾಜ್‌ರವರು ಮತ್ತು ಎಲ್ಲಾ ಸದಸ್ಯರು ಪ್ರತಿಯೊಬ್ಬರೂ ಶಾಸಕರ ಅಧ್ಯಕ್ಷತೆ ವಹಿಸುವ ಬಗ್ಗೆ ಹೇಳಿದರು. ಪ್ರತಿ ಶಾಸನಸಭೆಯಲ್ಲಿ ಈ ವಿಚಾರ ಚರ್ಚೆಯಾಗಿದೆ. ಎಲ್ಲಾ ಮುಖ್ಯ ಮಂತ್ರಿಗಳೂ ಕೂಡ ಆಶ್ವಾಸನೆಗಳನ್ನು ನೀಡುತ್ತಿರುವುದನ್ನು ನಾನು ಹದಿನಾರು ವರ್ಷಗಳಿಂದ ನೋಡುತ್ತಿದ್ದೇನೆ. ಎಲ್ಲಾ ಬರೀ ಅಶ್ವಾಸನೆ ಮಾಡಿದ್ದೇ. ಎಲ್ಲಿ ಆ ಶಿಷ್ಟಾಚಾರ ಸರಿಯಾಗಿ ಪಾಲನೆ ಮಾಡಿಲ್ಲ ಅಂತಹ ಒಬ್ಬರ ಬಗ್ಗೆಯಾದರೂ ಕ್ರಮ ಕೈಗೊಂಡಿದ್ದು ಇದೆಯಾ? ಮೊನ್ನೆ ಹಾಸನದಲ್ಲಿ ನಡೆದಿದ್ದನ್ನು ನಾನು ಮಾಧ್ಯಮದಲ್ಲಿ ನೋಡುತ್ತಿದ್ದೆ. I am sorry to say, my own minister his fate was just like....ಹೇಳಲಿಕ್ಕೆ ಸಾಧ್ಯವಿಲ್ಲ. I have seen with my own eyes, ಅಧ್ಯಕ್ಷತೆ ವಹಿಸುವ ಅವಕಾಶ ಅವರ ಕ್ಷೇತ್ರದಲ್ಲಿ ಒಬ್ಬ ಮಂತ್ರಿಗಳಿಗೆ ಇಲ್ಲವೆಂದರೆ, ಇನ್ನು ಬೇರೆ ಶಾಸಕರಿಗೆ ಎಲ್ಲಿಂದ ಅವಕಾಶ ಇದೆ? So that should be set right first.

(Interrputions)

ಶ್ರೀ **ಧರ್ಮಸಿಂಗ್** : ಮಾನ್ಯ ಶಿವಕುಮಾರ್‌ರವರು ಬಹಳ ಆವೇಶಭರಿತವಾಗಿ ಮಾತನಾಡುತ್ತಿದ್ದಾರೆ. ಯಾವಾಗಲೂ ಕೂಡ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮ ನಡೆಯಬೇಕೆಂದು ಸರ್ಕಾರದ ಸುತ್ತೋಲೆ ಇದೆ. ಎಲ್ಲೋ ಒಂದೆರಡು ಕಡೆ ನಡೆಯದೆ ಇರಬಹುದು.

(ಗೊಂದಲ)

ಶ್ರೀ **ಧರ್ಮಸಿಂಗ್** : ಎಲ್ಲಿ ಆಗುತ್ತಿದೆ ಎಂದು ಹೇಳಿ. ನನಗೆ ಅರ್ಥವಾಗುತ್ತಿಲ್ಲ. ಅಶೋಕ್‌ರವರೇ, ಎಷ್ಟೋ ಸಲ ನಾನು ಹೋದ ಕಡೆ ನೀವೇ ಬಂದಿಲ್ಲ. ನಿಮ್ಮ ಅಧ್ಯಕ್ಷತೆ ಇತ್ತು ಏಕೆ ಬಂದಿಲ್ಲವೆಂದು ನಾನು ಕೇಳಿದ್ದೇನೆ. ನಿಮ್ಮದೇ ಅಧ್ಯಕ್ಷತೆ ಇತ್ತು. ಮಾನ್ಯ ಶಿವಕುಮಾರ್‌ರವರೂ ಕೂಡ ಮಾಜಿ ಮಂತ್ರಿಗಳಾಗಿದ್ದಾರೆ, ಹಿರಿಯ ಸದಸ್ಯರಾಗಿದ್ದಾರೆ, ಎಲ್ಲಿಯಾದರೂ ಅಧಿಕಾರಿಗಳು ಈ ತರಹ ಮಾಡಿದರೆ ನಾನು ಇವತ್ತು ಆಶ್ವಾಸನೆ ಕೊಡುತ್ತಿದ್ದೇನೆ. ಅಧಿಕಾರಿಗಳು ಗೊತ್ತಿದ್ದೂ ಆದೇಶ ಮಾಡಿದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ ಮತ್ತೊಂದು ಏನು ಮಾಡಿದ್ದಾರೆ. Mr. Shivaram is my cabinet colleague. I was there on that day. ಸುಮ್ಮನೆ hear-say ಮಾತನಾಡಬೇಡಿ. ನಾವು ದ್ಯಾಪಲಾಪುರದಲ್ಲಿ ಕಾರ್ಯಕ್ರಮ ಮಾಡತಕ್ಕಂತಹ ಕಾಲದಲ್ಲಿ ರೇವಣ್ಣನವರೂ ಕೂಡ ಇದ್ದರು. ಇವರೂ ಇದ್ದರು. ಸ್ವಾಗತ ಭಾಷಣ ಇವರೇ ಮಾಡಿದ್ದರು. ಅಲ್ಲಿ ಉಸ್ತುವಾರಿ.

ಶ್ರೀ **ಡಿ.ಕೆ. ಶಿವಕುಮಾರ್** : ಅಧ್ಯಕ್ಷತೆ ವಹಿಸಿದ್ದಾರೆ. ನಾನು ಗೌರವದ ಬಗ್ಗೆ ಮತ್ತೊಂದರ ಬಗ್ಗೆ ಮಾತನಾಡುತ್ತಿಲ್ಲ. ತಾವು ಶಿಷ್ಟಾಚಾರದ ಬಗ್ಗೆ ಹೇಳುತ್ತಿದ್ದೀರಿ. ಶಿಷ್ಟಾಚಾರದ ಪ್ರಕಾರ ಒಬ್ಬ ಎಮ್‌ಎಲ್‌ಎ ಅಧ್ಯಕ್ಷತೆ ವಹಿಸಿದ್ದಾರೆ ಇಲ್ಲ. That is the point ಎಮ್‌ಎಲ್‌ಎಗಳಿಗೆ ಗೌರವ ಕೊಡುವುದಿಲ್ಲ ಎಂದು ಅಲ್ಲ.

ಶ್ರೀ **ಧರ್ಮಸಿಂಗ್** : ಅದು ನೋಡೋಣ ಕ್ರಮ ತೆಗೆದುಕೊಳ್ಳುತ್ತೇನೆ. ಒಂದೊಂದು ಕಡೆ ಅಲ್ಲಿ ಉಸ್ತುವಾರಿ ಸಚಿವರು ಇರುತ್ತಾರೆ.

Sri D.K. SHIVAKUMAR : lot of politics ಇರುತ್ತದೆ. ಅಧ್ಯಕ್ಷತೆ ವಹಿಸಿದ್ದಾರೆಯೇ, ಇಲ್ಲವೇ ಅದು ಹೇಳಿ.

ಶ್ರೀ **ಧರ್ಮಸಿಂಗ್** : ಏನೂ ಪೊಲಿಟಿಕಲ್ ಇಲ್ಲ. ಪೊಲಿಟಿಕಲ್‌ಗೆ ನಾವು ಈಲ್ಡ್ ಆಗುವುದಿಲ್ಲ. ಅಧಿಕಾರಿಗಳು ಎಲ್ಲೆಲ್ಲಿ ಶಿಷ್ಟಾಚಾರವನ್ನು ಪಾಲನೆ ಮಾಡುವುದಿಲ್ಲ ನಾನು ಸ್ಪಷ್ಟವಾಗಿ ಸದನದಲ್ಲಿ ಹೇಳುತ್ತೇನೆ. ಅಲ್ಲಿ ಕ್ರಮ ತೆಗೆದುಕೊಳ್ಳುತ್ತೇನೆ. ಏನು ಕ್ರಮ ನನ್ನ ಮುಂದೆ ಇಲ್ಲಿಲ್ಲಾ ಹುಲಿಯಾಗಿ ಮಾತನಾಡಿದರೆ ನಾವ್ಯಾರೂ ಕೇಳೋಲ್ಲ.

ಶ್ರೀ **ಜಗದೀಶ್ ಶೆಟ್ಟರ್** : ಕೆಲವು ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಿ.

ಶ್ರೀ **ಧರ್ಮಸಿಂಗ್** : ಆಯಿತು. ತೆಗೆದುಕೊಳ್ಳುತ್ತೇವೆ.

ಶ್ರೀ **ಜಗದೀಶ್ ಶೆಟ್ಟರ್** : ಈ ರೀತಿ ಮಾಡಿರುವ ಅಧಿಕಾರಿಗಳ ಮೇಲೆ ಕ್ರಮವನ್ನು ನೀವು ತೆಗೆದುಕೊಳ್ಳಿ. ಆಗ ಅಧಿಕಾರಿಗಳಿಗೆ ಸ್ವಲ್ಪ ಹೆದರಿಕೆ ಬರುತ್ತದೆ.

ಶ್ರೀ **ಬಿ.ಎಸ್. ಯಡಿಯೂರಪ್ಪ** : ಮುಖ್ಯಮಂತ್ರಿಗಳು ಇದುವರೆಗೂ ಬಹಳ ಶಾಂತ ರೀತಿಯಲ್ಲಿಯೇ ಇದ್ದರು.

ಅಧ್ಯಕ್ಷರು : ಯಡಿಯೂರಪ್ಪನವರೇ,

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಸ್ವಲ್ಪ ಅವಕಾಶ ಕೊಡಿ ಸಾರ್.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಮುಖ್ಯಮಂತ್ರಿಗಳೇ, ತಾವು ಯಾವಾಗಲೂ ಶಾಂತವಾಗಿಯೇ ಇದ್ದೀರಿ. ಇವೊತ್ತು ಏಕೆ ಆವೇಶ ಮಾಡಿಕೊಂಡರೋ ಗೊತ್ತಿಲ್ಲ.

ಶ್ರೀ ಧರ್ಮಸಿಂಗ್ : ಆವೇಶ ಮಾಡಿಕೊಳ್ಳುವ ಹಾಗೆ ಮಾಡಿದರಲ್ಲಾ.

ಶ್ರೀ ಬಿ.ಎಸ್. ಯಡಿಯೂರಪ್ಪ : ಒಂದ್ನಿಮಿಷ. ಈ ಕಡೆ ನಮ್ಮ ಶಾಸಕರುಗಳ ಅಭಿಪ್ರಾಯವೇನೆಂದರೆ, ಅನೇಕ ಬಾರಿ ಮಾನ್ಯ ಮಾಧುಸ್ವಾಮಿಯವರು, ಮಾನ್ಯ ವಾಟಾಳ್ ನಾಗರಾಜ್‌ರವರು ಮತ್ತು ನಾನು ಮತ್ತು ಅನೇಕ ಸದಸ್ಯರು ಈ ಬಗ್ಗೆ ಸದನದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಶಾಸಕರ ಅಧ್ಯಕ್ಷತೆಯಲ್ಲಿ ಸಭೆ ಸಮಾರಂಭಗಳು ನಡೆಯಬೇಕು ಎಂಬುದು ಸತ್ಸಂಪ್ರದಾಯ. ಆದರೆ ಅಧಿಕಾರಿಗಳು ಈ ರೀತಿ ಇರುವ ನೀತಿ ನಿಯಮಗಳನ್ನು ಮೀರಿ ಯಾವುದೋ ಪ್ರಭಾವಕ್ಕೆ ಒಳಗಾಗಿ ಅವರದೇ ಆದ ರೀತಿಯಲ್ಲಿ ಕೆಲಸವನ್ನು ಮಾಡುತ್ತಿದ್ದಾರೆ. ಇನ್ನು ಮುಂದೆ ಒಂದು ಸುತ್ತೋಲೆ ಅಗತ್ಯವಿಲ್ಲ ಸಾರ್. ಈ ಬಗ್ಗೆ ಈಗಾಗಲೇ ಬೇಕಾದಷ್ಟು ಸುತ್ತೋಲೆಗಳು ಹೋಗಿವೆ. ಎರಡ್ಮೂರು ಇಂಥ ಘಟನೆಗಳು ನಡೆದಿರುವ ಕಡೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಂಡರೆ, ಸರ್ಕಾರಿ ಕಾರ್ಯಕ್ರಮಗಳು ಶಾಸಕರ ಅಧ್ಯಕ್ಷತೆ ಇಲ್ಲದೇ ನಡೆಯುವುದಕ್ಕೆ ಬಿಡುವುದಿಲ್ಲವೆಂದು ನೀವು ಹೇಳಿದರೆ ಅದೊಂದು ಸೂಚನೆ ಎಂದು ತಿಳಿದುಕೊಂಡು ಅದನ್ನು ಅಧಿಕಾರಿಗಳು ಪರಿಪಾಲನೆ ಮಾಡುತ್ತಾರೆ. ಆದುದರಿಂದ ಈ ಬಗ್ಗೆ ತಾವು ವಿಶೇಷವಾದ ಗಮನವನ್ನು ಕೊಡಿ ಎಂದು ನಾನು ಕೇಳಿಕೊಳ್ಳುತ್ತಿರುವುದು. ಇನ್ನೊಮ್ಮೆ ಈ ವಿಷಯ ಪ್ರಸ್ತಾಪ ಮಾಡಲು ತಾವು ಅವಕಾಶ ಮಾಡಿಕೊಳ್ಳದ ಹಾಗೆ ಕ್ರಮ ತೆಗೆದುಕೊಳ್ಳಬೇಕು ಎಂಬುದು ನನ್ನ ಮನವಿ. ಈ ವಿಷಯದ ಚರ್ಚೆ ಇಂದೇ ಕೊನೆಯಾಗಲಿ.

ಶ್ರೀ ಧರ್ಮಸಿಂಗ್ : ವಿರೋಧ ಪಕ್ಷದ ನಾಯಕರು ಪ್ರಸ್ತಾಪ ಮಾಡುತ್ತಿದ್ದಾರೆ. ಏನೋ ಅಲ್ಲಿ, ಇಲ್ಲಿ ರೇರ್ ಆಗಿ ಆಗಿರಬಹುದು.

ಶ್ರೀ ಜಗದೀಶ್ ಶೆಟ್ಟರ್ : ಇಲ್ಲಾ ಸಾರ್, ಎಲ್ಲಾ ಕಡೆ ಆಗುತ್ತಿದೆ.

ಶ್ರೀ ಧರ್ಮಸಿಂಗ್ : ಎಲ್ಲಾ ಕಡೆ ಆಗುತ್ತಿದೆ ಎನ್ನುವುದನ್ನು ನಾನು ಒಪ್ಪುವುದಿಲ್ಲ. ಅದು ಹೇಗೆ ಎಲ್ಲಾ ಕಡೆ ಈ ರೀತಿ ಆಗುತ್ತದೆ? ನಾನು ಎಲ್ಲಾ ಜಿಲ್ಲಾಧಿಕಾರಿಗಳಿಗೆ ಮತ್ತೊಮ್ಮೆ ಆದೇಶ ಕೊಡುತ್ತೇನೆ. ಎಲ್ಲಾದರೂ ಕೂಡ ಈ ರೀತಿಯ ಉಲ್ಲಂಘನೆ ಆದರೆ ಅದರ ಬಗ್ಗೆ ನೋಡುತ್ತೇನೆ. ಅದು ಎಲ್ಲೇ ಆಗಿರಲಿ ಉಲ್ಲಂಘನೆ ಆಗಿದ್ದರೆ ನೋಡುತ್ತೇನೆ. ಎಲ್ಲಾ ಕ್ಷೇತ್ರಗಳಲ್ಲೂ ಸರ್ಕಾರಿ ಕಾರ್ಯಕ್ರಮಗಳು ಶಾಸಕರ ಅಧ್ಯಕ್ಷತೆಯಲ್ಲಿಯೇ ಆಗಬೇಕು ಎಂದು ಮತ್ತೊಮ್ಮೆ ಸುತ್ತೋಲೆಯನ್ನು ಹೊರಡಿಸಿ ಇದು ಆಗಲಾರದಂತೆ ನೋಡಿಕೊಳ್ಳುವ ಭರವಸೆಯನ್ನು ನಾನು ಕೊಡುತ್ತೇನೆ.

ಉ) ವಿಷಯ: ರಾಜ್ಯದಲ್ಲಿ ಹೆಣ್ಣು ಮಕ್ಕಳ ಜನನದ ಅನುಪಾತ ಇಳಿಮುಖವಾಗುತ್ತಿರುವ ಬಗ್ಗೆ.

ಶ್ರೀಮತಿ ಶಕುಂತಲಾ ಟಿ. ಶೆಟ್ಟಿ (ಪುತ್ತೂರು) : ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ ಆರು ವರ್ಷದೊಳಗಿನ ಹೆಣ್ಣು ಮಕ್ಕಳ ಜನನದ ಅನುಪಾತ 1000ಕ್ಕೆ 949 ಕ್ಕೆ ಇಳಿದಂಥ ಈ ಸಂದರ್ಭದಲ್ಲಿ ಈ ಬಗ್ಗೆ ನಾವು ಗಂಭೀರವಾಗಿ ಆಲೋಚನೆಯನ್ನು ಮಾಡಬೇಕಾಗಿದೆ. ಈಗ

ಸ್ಕ್ಯಾನಿಂಗ್ ಮಾಡುವ ಈ ಪರಿಸ್ಥಿತಿಯಲ್ಲಿ ಎಲ್ಲಾ ಕಡೆ ಹೆಣ್ಣು ಮಗು ಹುಟ್ಟುವುದು ಎಂದು ಗೊತ್ತಾದಾಗ ಅದನ್ನು ಭ್ರೂಣಾವಸ್ಥೆಯಲ್ಲಿಯೇ ಹತ್ಯೆ ಮಾಡುವಂಥ ಘಟನೆಗಳು ಎಲ್ಲಾ ಕಡೆ ನಡೆಯುತ್ತಿರುವ ವಿಚಾರಗಳು ನಮಗೆ ತಿಳಿಯುತ್ತಿದೆ. ಎರಡು ಕಾರಣಗಳಿಂದ ಆಗುತ್ತಿದೆ. ಇಂದು ವೈಜ್ಞಾನಿಕ ತಂತ್ರಜ್ಞಾನದ ಉಪಯೋಗ ಕೂಡ ಈ ರೀತಿ ಆಗಲು ಕಾರಣವಾಗಿದೆ. ಇನ್ನು ನನಗೆ ಲಿಖಿತ ಉತ್ತರದಲ್ಲಿ, 2002 ರಿಂದ 2004 ರವರೆಗೆ 1659 ಮಹಿಳೆಯರ ಹತ್ಯೆ ನಡೆದಿದೆ. ಅದೇ ರೀತಿ 2004 ರಲ್ಲಿ 919 ಅತ್ಯಾಚಾರಗಳು ನಡೆದಿವೆ. ಇದು ಅತ್ಯಾಚಾರ ದಾಖಲಾದಂಥ ವಿಚಾರಗಳು. ಅತ್ಯಾಚಾರ ಸಾಮಾನ್ಯವಾಗಿ ದಾಖಲು ಆಗುವುದು ಎಲ್ಲಾ ಕಡೆ ಕಡಿಮೆ. ಈ ವಿಚಾರವನ್ನು ನೋಡಿದಾಗ ತಂದೆ ತಾಯಿ ಹೆಣ್ಣು ಮಕ್ಕಳನ್ನು ಭ್ರೂಣಾವಸ್ಥೆಯಲ್ಲಿಯೇ ಹತ್ಯೆ ಮಾಡುವಂಥ ಕೆಲಸವನ್ನು ಮಾಡುತ್ತಿದ್ದಾರೆ. ಸರ್ಕಾರದ ಗಮನಕ್ಕೆ 2001ರ ಜನಗಣತಿಯ ಅನುಪಾತ ಸಿಕ್ಕಿದರೂ ಕೂಡ 8 ತಿಂಗಳುಗಳಿಂದ ಆ ಬಗ್ಗೆ ಯಾವುದೇ ಅಡ್‌ವೈಸರಿ ಕಮಿಟಿ ಮೀಟಿಂಗ್‌ನ್ನು ಕರೆದು ಆ ಬಗ್ಗೆ ಯಾವುದೇ ತೀರ್ಮಾನವನ್ನು ತೆಗೆದುಕೊಂಡಿಲ್ಲ. ಅಥವಾ ಅದನ್ನು ನಿಲ್ಲಿಸುವ ಬಗ್ಗೆ ಚರ್ಚೆ ನಡೆಯಲಿಲ್ಲ. ಇದನ್ನು ನಾವು ಗಂಭೀರವಾಗಿ ಆಲೋಚನೆಯನ್ನು ಮಾಡಬೇಕಾಗಿದೆ. ಮೊನ್ನೆ ಎರಡ್ಮೂರು ದಿನಗಳ ಹಿಂದೆ ನಮ್ಮ ಬೆಂಗಳೂರು ಕಂಟೋನ್‌ಮೆಂಟ್ ರೈಲ್ವೆ ಸ್ಟೇಶನ್‌ನಲ್ಲಿ ಹೆಣ್ಣುಮಕ್ಕಳ ಮಾರಾಟಕ್ಕೆ ಪ್ರಯತ್ನ ಪಡುತ್ತಿದ್ದವರನ್ನು ರೈಲ್ವೆ ಪೋಲಿಸರು ಹಿಡಿದು ಬಂಧಿಸಿದರು. ಇಂಥ ಪ್ರಕರಣಗಳು ನಮ್ಮ ಕರ್ನಾಟಕ ರಾಜ್ಯದಲ್ಲಿ ಬಹಳಷ್ಟು ನಡೆಯುತ್ತಿದೆ. ಸಣ್ಣ ಹೆಣ್ಣುಮಕ್ಕಳನ್ನು ವಿದೇಶಕ್ಕೆ ಮಾರಾಟ ಮಾಡುತ್ತಿದ್ದಾರೆ. ಅದೇ ರೀತಿ ಯುವತಿಯರನ್ನೂ ಮಾರಾಟ ಮಾಡುತ್ತಿದ್ದಾರೆ. ಆದರೆ ಸರ್ಕಾರ ತನ್ನ ಗಮನಕ್ಕೆ ಬಂದಿದೆ ಎಂದು ಮಾತ್ರ ಹೇಳುತ್ತಿದೆ. ಆದರೆ ಬಹಳಷ್ಟು ನೋವಾಗುವ ವಿಚಾರವೆಂದರೆ ಇದನ್ನು ತಡೆಗಟ್ಟುವುದಕ್ಕೆ ಯಾವ ವ್ಯವಸ್ಥೆಯನ್ನು ಕೈಗೊಂಡಿದೆ? ನಾನು ಇಂದು ಕಳಕಳಿಯಿಂದ ಅಧ್ಯಕ್ಷರ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡುವುದೇನೆಂದರೆ ಯಾವುದೇ ಹೆಣ್ಣು ಮಕ್ಕಳ ಮೇಲೆ ದೌರ್ಜನ್ಯ ನಡೆದಾಗ, ಶೋಷಣೆ ನಡೆದಾಗ, ಮಾರಾಟ ನಡೆದಾಗ, ಅದರ ಬಗ್ಗೆ ಸರ್ಕಾರ ಹೆಚ್ಚಿನ ಕಾಳಜಿ ವಹಿಸಿ ಇಂಥ ಕೃತ್ಯ ಮಾಡಿದವರನ್ನು ಕಂಡುಹಿಡಿದು ಅವರನ್ನು ಶಿಕ್ಷೆಗೆ ಒಳಪಡಿಸಬೇಕು. ಹೀಗೆ ಮಾಡಿದರೆ ಮಾತ್ರ ಹೆಣ್ಣು ಮಕ್ಕಳು ಉಳಿಯುವುದಕ್ಕೆ ಸಾಧ್ಯ. ಇಂದು ಗಂಡಸರಿಂದ ಹೆಂಗಸರ ಪ್ರಮಾಣ ಜಾಸ್ತಿಯಾಗಿದ್ದಾಗ ಇಂಥ ದೌರ್ಜನ್ಯಗಳು ಹೆಚ್ಚು ನಡೆಯುತ್ತಿರುವಾಗ ಮುಂದೆ ಗಂಡಸರ ಸಂಖ್ಯೆಗಿಂತ ಹೆಂಗಸರ ಸಂಖ್ಯೆ ಇನ್ನೂ ಕಡಿಮೆಯಾದಾಗ ಎಲ್ಲಾ ರೀತಿಯ ಪೈಶಾಚಿಕ ಕೃತ್ಯಗಳು ಬಹಳಷ್ಟು ನಡೆಯುವ ಸಾಧ್ಯತೆ ಇರುವುದರಿಂದ ಈಗಲೇ ಹೆಣ್ಣು ಮಕ್ಕಳ ಜನನ ಪ್ರಮಾಣ ಹೆಚ್ಚುವ ಹಾಗೆ ಮಾಡಲು ಯಾವುದೇ ಆಸ್ಪತ್ರೆಗಳಲ್ಲಿ ಭ್ರೂಣ ಹತ್ಯೆಯನ್ನು ಸಂಪೂರ್ಣ ನಿಷೇಧಿಸುವಂಥ ಕಾನೂನನ್ನು ಜಾರಿಗೆ ತರಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಹೆಚ್.ಕೆ. ಪಾಟೀಲ್(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ಇದಕ್ಕೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಚಿವರು ಉತ್ತರ ಕೊಡಬೇಕಾಗಿತ್ತು. ಅವರು ತಮ್ಮ ಪರವಾನಗಿಯನ್ನು ಪಡೆದುಕೊಂಡು ಹೋಗಿದ್ದಾರೆ.

ಕರ್ನಾಟಕ ರಾಜ್ಯಕ್ಕೆ ಬೇರೆ ಬೇರೆ ರಾಜ್ಯಗಳಿಂದ ಮಕ್ಕಳು ಮತ್ತು ಮಹಿಳೆಯರನ್ನು ವಿವಿಧ ಉದ್ದೇಶಗಳಿಗಾಗಿ ಸಾಗಣೆಗೊಳಗಾಗಿ ಬರುತ್ತಿದ್ದಾರೆ. ಕರ್ನಾಟಕದಿಂದ ಮುಂಬಯಿ, ದೆಹಲಿ ಮತ್ತು ವಿದೇಶಗಳಿಗೂ ಮಕ್ಕಳು ಮತ್ತು ಮಹಿಳೆಯರನ್ನು ಸಾಗಿಸುವ ಪ್ರಕರಣಗಳು ತಿಳಿದುಬಂದಿವೆ. ಆದರೆ ಈ ಬಗ್ಗೆ ಯಾವುದೇ ಅಂಕಿ ಅಂಶಗಳು ಅಥವಾ ದಾಖಲೆಗಳು ಲಭ್ಯವಿಲ್ಲ.

ಮಕ್ಕಳ ಸಾಗಣೆಯ ವ್ಯಾಪ್ತಿ ಮತ್ತು ಅದರ ವಿವಿಧ ರೂಪಗಳ ಗಂಭೀರತೆಯು ಸರ್ಕಾರಕ್ಕೆ ಅರಿವಾಗಿ ಈ ಪಿಡುಗನ್ನು ತಡೆಗಟ್ಟಲು ಸರ್ಕಾರವು ಯೂನಿಸೆಫ್‌ನ ನೆರವಿನೊಂದಿಗೆ ಕ್ರಿಯಾ ಯೋಜನೆಯನ್ನು ತಯಾರಿಸಿದೆ.

ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಯುನಿಸೆಫ್ ನ ಸಹಯೋಗದೊಂದಿಗೆ ಮಕ್ಕಳ ಸಾಗಣೆ ವಿರುದ್ಧ ಸಮಾಜದಲ್ಲಿ ಅರಿವು ಮೂಡಿಸಲು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಡಿಸೆಂಬರ್ 2004 ಮತ್ತು ಜನವರಿ 2005ರಲ್ಲಿ ವ್ಯಾಪಕ ಪ್ರಚಾರಾಂದೋಲನ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಈ ಕಾರ್ಯಕ್ರಮದಲ್ಲಿ ಜಿಲ್ಲೆಯ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಜಿಲ್ಲೆಯ ಎಲ್ಲಾ ಪ್ರಮುಖ ಇಲಾಖೆಗಳು ಹಾಗೂ ಸ್ವಯಂ ಸೇವಾ ಸಂಸ್ಥೆಗಳು ಪಾಲ್ಗೊಂಡಿರುತ್ತವೆ.

ಕರ್ನಾಟಕ ರಾಜ್ಯದಲ್ಲಿ ಆರು ವರ್ಷದೊಳಗಿನ ಹೆಣ್ಣು ಮಕ್ಕಳು ಜನನದ ಅನುಪಾತ 1991ರಲ್ಲಿ 960 ಇದ್ದು, 2001ರ ಜನಗಣತಿಯಂತೆ ಜನನದ ಅನುಪಾತ 949 ಇರುತ್ತದೆ.

ಗಂಡು ಮಕ್ಕಳ ಜನನಕ್ಕೆ ನೀಡುತ್ತಿರುವ ಹೆಚ್ಚಿನ ಆದ್ಯತೆ ಹೆಣ್ಣುಮಕ್ಕಳ ಜನನದ ಕ್ಷೀಣತೆಗೆ ಕಾರಣವಾಗಿದೆಯೆಂದು ಊಹಿಸಲಾಗಿದೆ. ಆದರೆ ಈ ಬಗ್ಗೆ ಯಾವುದೇ ಸಮೀಕ್ಷೆ ಕೈಗೊಂಡಿರುವುದಿಲ್ಲ. ಆದಾಗ್ಯೂ ಇದನ್ನು ತಡೆಗಟ್ಟಲು PNDT (Prenatal Diagnostie Technique) ಕಾಯ್ದೆಯನ್ನು ಜಿಲ್ಲಾ ಮಟ್ಟಗಳಲ್ಲಿ ಸಮಿತಿ ರಚಿಸಿ ಕಾಯ್ದೆಯನ್ನು ಜಾರಿಗೊಳಿಸಲಾಗಿದೆ. ಹೆಣ್ಣು ಭ್ರೂಣ ಹತ್ಯೆಯ ಪಿಡುಗನ್ನು ತಡೆಗಟ್ಟಲು ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಅರಿವು ಮೂಡಿಸಲಾಗುತ್ತಿದೆ. ವಿಮೋಚನಾ, ಬೆಂಗಳೂರು ಸಂಸ್ಥೆಯು ಯೂನಿಸೆಫ್‌ನ ಆರ್ಥಿಕ ನೆರವಿನೊಡನೆ ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಇದಲ್ಲದೇ ಈ ಒಂದು ದೊಡ್ಡ ಪಿಡುಗಿನ ಸಮಸ್ಯೆ ಬಗೆಹರಿಯಬೇಕಾದರೆ ಸಮಾಜದಲ್ಲಿ ಜಾಗೃತಿ ಆಗಬೇಕು. ಸಮಾಜದಲ್ಲಿ ವಿಶೇಷವಾಗಿ ಹೆಣ್ಣು ಮಕ್ಕಳಿಗೆ ಗೌರವ ಸಿಗುವಂತೆ ವರ್ತನೆ ಮಾಡತಕ್ಕಂಥ ಮನೋಭಾವ ಮೂಡಿಸುವಲ್ಲಿ ಈ ಸದನ ಹಾಗೂ ಸಮಾಜದ ಎಲ್ಲಾ ಗಣ್ಯರೂ ಕೂಡ ಪ್ರಯತ್ನಿಸಬೇಕಾಗಿದೆ.

10. ಪ್ರಕಟಣೆ

ಅಧ್ಯಕ್ಷರು : ಘನತೆವೆತ್ತ ರಾಜ್ಯಪಾಲರು ನಿನ್ನೆಯ ದಿನ ಏರ್ಪಡಿಸಿದ್ದ ಚಹಾ ಕೂಟವನ್ನು ಈ ದಿನ ಸಂಜೆ ಆರು ಗಂಟೆಗೆ ಏರ್ಪಡಿಸಿರುತ್ತಾರೆಂದು ತಿಳಿಸಿರುತ್ತಾರೆ. ಆದುದರಿಂದ ಮಾನ್ಯ ಸದಸ್ಯರು ಸದರಿ ಸಮಾರಂಭದಲ್ಲಿ ಪಾಲ್ಗೊಳ್ಳಬೇಕೆಂದು ಈ ಮೂಲಕ ತಮ್ಮನ್ನು ಕೋರುತ್ತೇನೆ. ಈಗ ಸದನವನ್ನು 2.30ರವರೆಗೆ ಮುಂದೂಡುತ್ತಿದ್ದೇನೆ.

(ಸದನವು ಮಧ್ಯಾಹ್ನ 1 ಗಂಟೆ 37 ನಿಮಿಷಕ್ಕೆ ಮುಂದೂಡಲ್ಪಟ್ಟು ಮತ್ತೆ ಮಧ್ಯಾಹ್ನ ಭೋಜನಾ ವಿರಾಮದ ನಂತರ 2 ಗಂಟೆ 30 ನಿಮಿಷಕ್ಕೆ ಪುನರ್‌ಸಮಾವೇಶಗೊಳ್ಳಲು ನಿಶ್ಚಯಿಸಿತು)

(ಸದನವು ಪುನಃ ಮಧ್ಯಾಹ್ನ 2.53ಕ್ಕೆ ಸಮಾವೇಶಗೊಂಡಿತು)

(ಅಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನಲಂಕರಿಸಿದ್ದರು)

11. ಶಾಸನ ರಚನೆ

ಅಧ್ಯಕ್ಷರು : ಈಗ ಶಾಸನ ರಚನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಈಗ ಗಮನ ಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳಿ. ಆಮೇಲೆ ಅದನ್ನು ತೆಗೆದುಕೊಳ್ಳಬಹುದು. ಎರಡು ಗಮನ ಸೆಳೆಯುವ ಸೂಚನೆಗಳಿವೆ. ಅವೆರಡನ್ನು ಮುಗಿಸೋಣ.

ಅಧ್ಯಕ್ಷರು : ಯಡಿಯೂರಪ್ಪನವರೇ, ಇವತ್ತಿನ ಅಜೆಂಡಾದಲ್ಲಿ ಏನು ಮಾಡಿದ್ದಾರೆಂದರೆ, ಶಾಸನ ರಚನೆಯನ್ನು ಕ್ರಮಸಂಖ್ಯೆ 4ರಲ್ಲಿ ಹಾಕಿ, ಗಮನ ಸೆಳೆಯುವ ಸೂಚನೆಯನ್ನು ಕ್ರಮಸಂಖ್ಯೆ 5ರಲ್ಲಿ ಹಾಕಿದ್ದಾರೆ. ಅದರಂತೆ ಮಾಡೋಣ. ನಂತರ ಗಮನ ಸೆಳೆಯುವ ಸೂಚನೆಗಳನ್ನು ತೆಗೆದುಕೊಳ್ಳೋಣ.

ಶ್ರೀ ಬಿ.ಎಸ್. ಯಡಿಯೂರಪ್ಪ : ಆಗಬಹುದು.

ಅಧ್ಯಕ್ಷರು : ಈಗ ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು.

ಅ) ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣಾ (ತಿದ್ದುಪಡಿ) ವಿಧೇಯಕ, 2005

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಹೆಚ್.ಡಿ. ರೇವಣ್ಣ(ಲೋಕೋಪಯೋಗಿ ಮತ್ತು ಇಂಧನ ಸಚಿವರು) : ಮಾನ್ಯ ಅಧ್ಯಕ್ಷರೆ, 2005ರ ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣಾ(ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."

ಪ್ರಸ್ತಾವವನ್ನು ಮಂಡಿಸಲಾಯಿತು

ಅಧ್ಯಕ್ಷರು : ಮಂತ್ರಿಗಳು ವಿಧೇಯಕದ ಬಗ್ಗೆ ಎರಡು ಮಾತುಗಳನ್ನು ಹೇಳಿಬಿಡಿ.

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) : ಮಾನ್ಯ ಸಭಾಧ್ಯಕ್ಷರೇ, 1999ರಲ್ಲಿ ಕೆ.ಪಿ.ಟಿ.ಸಿ.ಎಲ್. ವಿಭಜನೆಯಾಗಿ ನಾಲ್ಕು ವಿದ್ಯುಚ್ಛಕ್ತಿ ಸರಬರಾಜು ಕಂಪನಿಗಳಾದವು. ಇದುವರೆಗೆ ನಾಲ್ಕು ಕಂಪನಿಗಳಿದ್ದು, ಈಗ ಐದನೆಯ ಕಂಪನಿಯಾಗಿ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ಕಂಪನಿ ಯನ್ನು ಸಾರ್ವಜನಿಕರ ಹಿತದೃಷ್ಟಿಯಿಂದ, ಚಾಮರಾಜನಗರ, ಮಂಡ್ಯ, ಮೈಸೂರು ಮತ್ತು ಹಾಸನ ಜಿಲ್ಲೆಗಳಿಗೆ ಅನುಕೂಲವಾಗಲಿ ಎನ್ನುವ ದೃಷ್ಟಿಯಿಂದ ಮಾಡುತ್ತಿದ್ದೇವೆ. ಇದರಲ್ಲಿ ಯಾವುದೇ ಫೈನ್ಯಾನ್ಷಿಯಲ್ ಬರ್ಡನ್ ಬರುವುದಿಲ್ಲ. ಸಾರ್ವಜನಿಕರಿಗೆ ಅನುಕೂಲವಾಗಲಿ ಎನ್ನುವ ಉದ್ದೇಶದಿಂದ ಈ ವಿಧೇಯಕವನ್ನು ತಂದಿದ್ದೇವೆ. ಇದರಲ್ಲಿ ಈಗ ಒಂದು ಸ್ಮಾಲ್ ಕರೆಕ್ಷನ್ ಅಷ್ಟೇ ಇದೆ. ಉಳಿದಂತೆ ಎಲ್ಲಾ ಆಗಿದೆ. ಅದಕ್ಕಾಗಿ ನಮ್ಮ ವಿರೋಧ ಪಕ್ಷದ ನಾಯಕರು, ವಿರೋಧ ಪಕ್ಷದ ಎಲ್ಲಾ ಸದಸ್ಯರು ಮತ್ತು ಎಲ್ಲಾ ಮುಖಂಡರುಗಳು ಈ ವಿಧೇಯಕವನ್ನು ಅಂಗೀಕಾರ ಮಾಡಿಕೊಡಬೇಕೆಂದು ಮನವಿ ಮಾಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ(ವಿರೋಧ ಪಕ್ಷದ ನಾಯಕರು) : ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೇ ಮೇಲ್ಮನೆಯಲ್ಲಿ ಈ ವಿಧೇಯಕ ಅಂಗೀಕಾರ ಪಡೆದಿದ್ದು, ಅದನ್ನು ಸಚಿವರು ಇಲ್ಲಿ ಪರ್ಯಾಲೋಚನೆಗಾಗಿ ಇಟ್ಟಿದ್ದಾರೆ. ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ಕಂಪನಿ ಎನ್ನುವ ಐದನೆಯ ವಿದ್ಯುತ್ ಸರಬರಾಜು ಕಂಪನಿಯನ್ನು ತಾವು ಪ್ರಾರಂಭ ಮಾಡುತ್ತಿದ್ದೀರಿ. ಈ ಸಂದರ್ಭದಲ್ಲಿ ನಾನು ಒಂದು ಮಾತನ್ನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಹೇಳಲು ಇಚ್ಛೆಪಡುತ್ತೇನೆ. ಹಿಂದೆ,

ಕೆ.ಇ.ಬಿ. ಇದ್ದಾಗ ನಮಗೆ ಏನು ತೊಂದರೆಯಾಗಿತ್ತು, ಸ್ವಾಮಿ? ಆಗ, ಬಹಳ ವ್ಯವಸ್ಥಿತವಾಗಿ ಎಲ್ಲವೂ ನಡೆದುಕೊಂಡು ಹೋಗುತ್ತಿತ್ತು. ನಮ್ಮ ಅಧಿಕಾರಿಗಳೂ ಒಳ್ಳೆಯ ರೀತಿಯಲ್ಲಿ ಕೆಲಸ ಮಾಡುತ್ತಿದ್ದರು. ತಾಲ್ಲೂಕಿನ ಸಮಸ್ಯೆಗಳಿಗೆ ತಕ್ಷಣ ಸ್ಪಂದಿಸುತ್ತಿದ್ದರು. ಆಯಾಯ ಸಬ್-ಡಿವಿಷನ್‌ಗಳಲ್ಲಿ ಒಂದು ಸ್ಟೋರ್ ಇರುತ್ತಿತ್ತು. ತಾಲ್ಲೂಕಿಗೆ ಬೇಕು ಎಂದರೆ 24 ಗಂಟೆಗಳಲ್ಲಿ ವಿದ್ಯುತ್ ಕಂಬ, ಟ್ರಾನ್ಸ್‌ಫಾರ್ಮರ್‌ಗಳು, ವೈರ್ ಮತ್ತಿತರ ಏನೇನು ಸಾಮಗ್ರಿಗಳು ಬೇಕು ಎಂದರೂ ತಕ್ಷಣ ಸಿಗುತ್ತಿತ್ತು. ಈಗ ಏನಾಗಿದೆ ಎಂದರೆ, ಪ್ರತಿಯೊಂದು ಸಾಮಗ್ರಿಗೂ ಸಹ ಸಂಬಂಧಪಟ್ಟವರು ಮೂರು ತಿಂಗಳು ಅಡ್ವಾನ್ಸಾಗಿ ಇಂಡೆಂಟ್ ಹಾಕಬೇಕು. ಸಂಬಂಧಪಟ್ಟ ಎಸ್ಟಾಂನವರು ಹೇಳಿದ ಮೇಲೆ ರಿಪೇರಿ, ಮತ್ತೊಂದು ಕೆಲಸ ಪ್ರಾರಂಭವಾಗುತ್ತದೆ. ಇವತ್ತು ಯಾವುದೇ ಒಂದು ಸ್ಟೋರ್‌ನಲ್ಲಿ ಒಂದು ಸಾಮಗ್ರಿಯೂ ನಮಗೆ ಸಿಗುವುದಿಲ್ಲ. ಈ ರೀತಿಯಾದ ಒಂದು ವಿಚಿತ್ರ ಪರಿಸ್ಥಿತಿ ಇರುವ ಈ ಸಂದರ್ಭದಲ್ಲಿ ಇದನ್ನು ಪ್ರಾರಂಭ ಮಾಡುತ್ತಿದ್ದೀರಿ. ಎಸ್ಕಾಂಗಳನ್ನು ಮಾಡಿದ್ದರಿಂದ ಅಧಿಕಾರಿಗಳ ಸಂಖ್ಯೆ ಜಾಸ್ತಿ ಆಯಿತು. ಐದು ಕಂಪನಿಗಳಿಗೆ ಐ.ಎ.ಎಸ್. ಅಧಿಕಾರಿಗಳು ಜಾಸ್ತಿಯಾದರು. ಮತ್ತು ಬೇರೆಬೇರೆ ವ್ಯವಸ್ಥೆಗಳು ಜಾಸ್ತಿಯಾದವು. ಹಿಂದಿನ ನಾಲ್ಕು ಕಂಪನಿಗಳು ಮತ್ತು ಈಗ ಪ್ರಾರಂಭಿಸಲಿರುವ ಒಂದು ಕಂಪನಿ ಸೇರಿ ಐದು ಕಂಪನಿಗಳಾಗುತ್ತವೆ. ಕೆ.ಪಿ.ಟಿ.ಸಿ.ಎಲ್ ಆದಮೇಲೆ ವ್ಯಾವಹಾರಿಕವಾಗಿ ನಮ್ಮ ಗ್ರಾಹಕರಿಗೆ ಅದರಿಂದ ಅನುಕೂಲವಾಗುವ ಬದಲು, ಅದೊಂದು ಶಾಪವಾಗಿ ಪರಿಣಮಿಸಿದೆ ಎಂದು ಹೇಳಲು ನಾನು ಇಚ್ಛೆಪಡುತ್ತೇನೆ. ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ಕಂಪನಿಯನ್ನು ಪ್ರಾರಂಭ ಮಾಡುವುದರಿಂದ ಆ ಭಾಗದ ಕೆಲವು ಜಿಲ್ಲೆಗಳಿಗೆ ಅನುಕೂಲವಾಗುತ್ತದೆ ಎಂದು ನೀವು ಏನು ಹೇಳುತ್ತಿದ್ದೀರಿ. ಅದರಿಂದ ಈ ಜ್ವಲಂತ ಸಮಸ್ಯೆಗಳಿಗೆ ಪರಿಹಾರ ಸಿಗಬಹುದೆಂದು ನನಗೇನೂ ಅನ್ನಿಸುವುದಿಲ್ಲ. ಈಗಾಗಲೇ ರಾಜ್ಯದಲ್ಲಿರುವ ವಿದ್ಯುತ್ ಕ್ಷಾಮದ ಬಗ್ಗೆ ತಾವು ಗಮನಿಸಬೇಕು. ನಮ್ಮ ಮುಖ್ಯಮಂತ್ರಿಗಳು ಹೇಳುತ್ತಿದ್ದರು, ಅಭಿವೃದ್ಧಿ ಕಾರ್ಯಗಳ ಬಗ್ಗೆ ವಿರೋಧ ಪಕ್ಷಗಳವರಿಗೆ ಯಾವುದೇ ಕಳಕಳಿ ಇಲ್ಲ, ಬೇಡದ ವಿಷಯಗಳನ್ನು ಚರ್ಚಿಸಿ ತರುತ್ತಾರೆ ಎಂದು ಹೇಳುತ್ತಿದ್ದರು. ಇಲ್ಲಿ ನಮ್ಮ ಮಾಧ್ಯಮದ ಸ್ನೇಹಿತರೂ ಇದ್ದಾರೆ. ಮೊದಲ ಬಾರಿಗೆ, ಕರ್ನಾಟಕ ರಾಜ್ಯದ ಇತಿಹಾಸದಲ್ಲಿ, ರಾಜ್ಯದ ಜನರಿಗೆ ಸಂಬಂಧಪಟ್ಟಂತೆ ಕುಡಿಯುವ ನೀರು, ವಿದ್ಯುತ್ ಸಮಸ್ಯೆಗಳ ಬಗ್ಗೆ ನಿಲುವಳಿ ಸೂಚನೆ ಮೂಲಕ ಪ್ರಸ್ತಾಪ ಮಾಡಿ, ಬೇರೆ ಕಾರ್ಯಕಲಾಪಗಳಲ್ಲಿ ಒಂದು ನಿಮಿಷವೂ ವ್ಯರ್ಥವಾಗದ ರೀತಿಯಲ್ಲಿ, ಧರಣಿ, ಸತ್ಯಾಗ್ರಹ, ಸಭಾತ್ಯಾಗ ಇವುಗಳ್ಯಾವುದಕ್ಕೂ ಅವಕಾಶ ಮಾಡಿಕೊಡದೆ, ಅಭಿವೃದ್ಧಿ ವಿಷಯಗಳಿಗೆ ಆದ್ಯತೆ ಕೊಟ್ಟು ಬಹಳ ಜವಾಬ್ದಾರಿಯುತವಾಗಿ ಈ ಭಾಗದಲ್ಲಿರುವಂಥ ವಿರೋಧ ಪಕ್ಷದ ಸದಸ್ಯರು ಕೆಲಸ ಮಾಡುತ್ತಿದ್ದಾರೆ ಎನ್ನುವುದನ್ನು ಈ ಸಮಯದಲ್ಲಿ ಹೇಳಲು ಇಚ್ಛೆಪಡುತ್ತೇನೆ. ಕುಡಿಯುವ ನೀರಿನ ಬಗ್ಗೆ, ವಿದ್ಯುತ್ ಕ್ಷಾಮದ ಬಗ್ಗೆ, ರೈತನ ಪಂಪುಸೆಟ್ಟುಗಳ ಪರಿಸ್ಥಿತಿಯ ಬಗ್ಗೆ ನಾವೇನು ಚರ್ಚೆ ಮಾಡುತ್ತಿದ್ದೇವೆ, ಅದಕ್ಕೆ ನಂತರ ನೀವು ಉತ್ತರ ಕೊಡುವವರಿದ್ದೀರಿ. ಅದಕ್ಕೆ ಪರಿಹಾರ ಸಿಗದಿದ್ದರೆ, ಅದಕ್ಕೆ ಯಾವ ರೀತಿಯ ಹೋರಾಟಕ್ಕೆ ಧುಮುಕಬೇಕೋ ಅದನ್ನು ಮಾಡುತ್ತೇವೆ, ಅದು ಅನಿವಾರ್ಯವಾಗಬಹುದು. ಅದು ಬೇರೆ ವಿಷಯ. ನಾನು ನಿಮಗೆ ಹೇಳುವಂಥಾದ್ದು ಇಷ್ಟೇ. ನೀವು ಇನ್ನೊಂದು ಕಂಪನಿಯನ್ನು ತೆರೆಯುವಂಥ ಈ ಸಂದರ್ಭದಲ್ಲಿ ಅದಕ್ಕಿಂತ ಬಹಳ ಮುಖ್ಯವಾಗಿ ಈಗಿರುವಂಥ ಕಂಪನಿಗಳಿಗೆ ಕಿವಿ ಹಿಂಡಿ, ತಕ್ಷಣ ವಿದ್ಯುತ ಸರಬರಾಜು ಸರಿಯಾಗಿ ಮಾಡುವಂತೆ, ಗ್ರಾಹಕರಿಗೆ ಅನುಕೂಲವಾಗುವ ರೀತಿಯಲ್ಲಿ ಏನಾದರೂ ಒಂದು ಯೋಚನೆಯನ್ನು

ಮಾಡುವಿರಾ? ಅದಕ್ಕೆ ಬೇಕಾದಂಥ ಹಣಕಾಸಿನ ನೆರವನ್ನು ತೆಗೆದುಕೊಳ್ಳಲು ಪ್ರಯತ್ನ ಮಾಡುವಿರಾ? ಅದರ ಇಂಪ್ರೂವ್‌ಮೆಂಟ್ಸ್ ಬಗ್ಗೆ ಏನಾದರೂ ಗಮನವನ್ನು ಕೊಡುವಿರಾ? ಇವತ್ತು ಕೆ ಪಿಟಿಸಿಎಲ್ ಅಧಿಕಾರಿಗಳಿಗೆ ರೈತ, ಪಂಪುಸೆಟ್ಟು ಎಂದರೆ ಅವರ ಮನಸ್ಸಿನಲ್ಲಿ ಒಂದು ಸೇಡಿನ ಭಾವನೆ ಇದೆ. ಅವರು ರೈತರ ಸಮಸ್ಯೆಗಳಿಗೆ ಯಾವುದೇ ರೀತಿ ಸ್ಪಂದಿಸದೇ ಇರುವಂಥಾದ್ದು, ಕಿರುಕುಳ ಕೊಡುವಂಥಾದ್ದು ನಡೆದಿದೆ. ಆದ್ದರಿಂದ, ನಿಮ್ಮ ಸರ್ಕಾರಕ್ಕೆ ವಿದ್ಯುತ್ ಕ್ಷಾಮವೇ ಶಾಪವಾಗಬಹುದು. ಬಹುಶಃ ನಿಮ್ಮ ಸರ್ಕಾರ ಕುಸಿದು ಹೋದರೆ, ನೀವು ನಿಂತ ನೆಲವೇ ಕುಸಿದರೆ, ಜೆ.ಡಿ.(ಎಸ್) ಮತ್ತು ಕಾಂಗ್ರೆಸ್ಸಿನಲ್ಲಿ ಭಿನ್ನಾಭಿಪ್ರಾಯವೇನಾದರೂ ಬಂದರೆ, ಅದಕ್ಕೆ ಈ ವಿದ್ಯುತ್ ಇಲಾಖೆಯೇ ಪ್ರಮುಖ ಕಾರಣವಾದರೆ ಆಶ್ಚರ್ಯ ಪಡಬೇಕಾಗಿಲ್ಲ. ಆ ರೀತಿಯ ಗೊಂದಲ ಇದೆ. ನಾನು ಇದನ್ನು ರಾಜಕೀಯವಾಗಿ ಬಳಸಿಕೊಳ್ಳುತ್ತಿಲ್ಲ. ಆದರೆ ಇವತ್ತು ನಾವು ಎಲ್ಲಿಗೆ ಹೋದರೂ ಸಹ, ಈ ಇಲಾಖೆಯ ವಿಫಲತೆಯಿಂದ, ನಿಮ್ಮ ನಿರ್ಲಕ್ಷ್ಯದಿಂದ ಯಾವುದೇ ಚುನಾಯಿತ ಶಾಸಕ ತನ್ನ ಕ್ಷೇತ್ರದಲ್ಲಿ ಓಡಾಡಲು ಆಗದಿರುವಂಥ, ಉಸಿರು ಕಟ್ಟುವಂಥ ಪರಿಸ್ಥಿತಿ ಇರಬೇಕಾದರೆ, ಅದನ್ನು ಸುಧಾರಿಸುವ ಬಗ್ಗೆ ನೀವೇನಾದರೂ ಯೋಚನೆ ಮಾಡಬೇಕಾಗಿತ್ತು. ಆದರೆ ಎಲ್ಲಿ ಹೋದರೂ ಸಹ ಈ ಇಲಾಖೆಯ ಫೈಲ್ಯೂರ್ ನಿಂದ ಅಧಿಕಾರಿಗಳ ನಿರ್ಲಕ್ಷ್ಯದಿಂದ ಯಾವುದೇ ಚುನಾಯಿತ ಶಾಸಕ ತನ್ನ ಕ್ಷೇತ್ರದಲ್ಲಿ ಓಡಾಡುವುದಕ್ಕೆ ಆಗದಿರುವ ಉಸಿರು ಕಟ್ಟುವಂಥ ಪರಿಸ್ಥಿತಿ ಇರಬೇಕಾದರೆ, ಅದನ್ನು ಸುಧಾರಿಸುವ ಬಗ್ಗೆ ನೀವು ಯೋಚನೆ ಮಾಡಬೇಕಾಗಿತ್ತೇ ಹೊರತು ಇವತ್ತು ಈ ಒಂದು 'ಚಾಮುಂಡೇಶ್ವರಿ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಮಗೆ ಬೇಕಾಗಿದೆ. ಇದು ಆ ಮನೆಯಲ್ಲಿ ಈಗಾಗಲೇ ಪಾಸಾಗಿದೆ' ಎಂದು ಹೇಳಿ ತಾವು ಇಲ್ಲಿ ಮಂಡಿಸಿದ್ದೀರಿ. ಈ ವಿಧೇಯಕವನ್ನು ನಾವು ಇಲ್ಲಿ ವಿರೋಧ ಮಾಡುವ ಪ್ರಶ್ನೆ ಇಲ್ಲ. ಆದರೆ ಇದರಿಂದ ನಿಮ್ಮ ಪರ್ಪಸ್ ಏನೂ ಸರ್ವೆ ಆಗುವುದಿಲ್ಲ. ಇದು ನಿಮಗೆ ಇನ್ನೊಂದು ಆನೆ ಭಾರ ಆಗುತ್ತದೆ. 'ಮೂಗಿಗಿಂತ ಮೂಗುತಿ ಭಾರ' ಎಂಬಂತೆ ನೀವು ನಿಮ್ಮ ಇಲಾಖೆಯಲ್ಲಿ, ಈ ಮಂಡಳಿಯಲ್ಲಿ ಇನ್ನೊಂದು ವಿದ್ಯುಚ್ಛಕ್ತಿ ಸರಬರಾಜು ಕಂಪನಿ ತೆಗೆದು ಏನು ಪುರುಷಾರ್ಥ ಸಾಧಿಸುವುದಕ್ಕೆ ಹೊರಟಿದ್ದೀರೋ ಗೊತ್ತಿಲ್ಲ. ಆದರೆ ಇವತ್ತು ಸುಧಾರಣೆ ಮಾಡುವ ಕಡೆಗೆ ವಿಶೇಷವಾದ ಗಮನವನ್ನು ಕೊಡಬೇಕೆಂದು ಹೇಳುತ್ತಾ ಸದರಿ ವಿಧೇಯಕ ಈಗಾಗಲೇ ಆ ಮನೆಯಲ್ಲಿ ಪಾಸ್ ಆಗಿರುವುದರಿಂದ ಇದಕ್ಕೆ ನಮ್ಮದೇನೂ ತಕರಾರು. ವಿರೋಧ ಇಲ್ಲ. ಸುಧಾರಣೆ ಕಡೆಗೆ ಗಮನ ಕೊಡಿ ಎನ್ನುವಂಥ ಮಾತನ್ನು ಹೇಳಬಯಸುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ(ಅಂಕೋಲ) : ಮಾನ್ಯ ಅಧ್ಯಕ್ಷರೆ, ಈ ವಿಧೇಯಕ ಮೇಲ್ಮನೆಯಲ್ಲಿ ಪಾಸಾಗಿ ಈಗ ಈ ಸದನದಲ್ಲಿ ಪಾಸ್ ಆಗಲಿಕ್ಕೆ ಮಾನ್ಯಮಂತ್ರಿಗಳು ಮಂಡಿಸಿದ್ದಾರೆ. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದಂಥ ಎಲ್ಲಾ ಸಂಗತಿಗಳನ್ನು ನಾನು ಅನುಮೋದಿಸುತ್ತಾ ನಮ್ಮ ರಾಜ್ಯದಲ್ಲಿ ಮೊದಲು ಕೆ.ಇ.ಬಿ ಎಂದು ಇತ್ತು. ನಂತರ ಅದಕ್ಕೆ Karnataka Electricity Regulatory Authority ಇತ್ಯಾದಿಗಳು ಬಂದು ಕೆಪಿಟಿಸಿಎಲ್ ಎಂದು ಆಯಿತು. KPTCL ಎಂದಾದಮೇಲೆ HESCOM, BESCOM, MESCOM ಎಂದೆಲ್ಲ ಮಾಡಿ ಎಲ್ಲವನ್ನೂ ಸೇರಿಸಿ mess ತರಹ ಮಾಡಿಟ್ಟಿದ್ದಾರೆ. ಇವತ್ತು ಕೆಪಿಟಿಸಿಎಲ್ ಎಂದರೆ ಈ HESCOM, BESCOM, MESCOM ಗಳ ಜೊತೆ ಈ ಒಂದು 'ಚಾಮುಂಡೇಶ್ವರಿ ಕಾಂ' ಸೇರಿಕೊಂಡುಬಿಡುತ್ತದೆ. ಈಗ ಅವುಗಳ ಅವ್ಯವಸ್ಥೆಯನ್ನು ನೋಡಿದರೆ ನಮಗೆ ಮೊದಲಿನ ಕೆಇಬಿ

ಆದರೂ ಬೇಕು, ಈಗ Regulatory Authority ಬಂದ ನಂತರದಲ್ಲಿ ಈ ನಾಲ್ಕು ಕಂಪನಿಗಳು ಬಂದು ಕೆಪಿಟಿಸಿಎಲ್ ಆದ ನಂತರದಲ್ಲಿ ಅಧ್ವಾನ ಎದ್ದಿರುವುದನ್ನು ನೋಡಿದರೆ ಮುಂದೆ ಯಾವ ರೀತಿ ಈ ಇಲಾಖೆ ತನ್ನ ಕೆಲಸ ಕಾರ್ಯಗಳನ್ನು ಮಾಡಬಹುದೆನ್ನುವುದರ ಬಗ್ಗೆ ಭಯವಾಗುತ್ತದೆ. ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರಾದ ಶ್ರೀ ರೇವಣ್ಣನವರಲ್ಲಿ ನನ್ನ ವಿನಂತಿ ಏನೆಂದರೆ, ಇದುವರೆವಿಗೆ ನಮ್ಮ ರಾಜ್ಯಕ್ಕೆ ಬಹಳ ದೊಡ್ಡ ತೊಂದರೆಯಾಗಿರುವುದೆಂದರೆ, ಮುಖ್ಯಮಂತ್ರಿಗಳ ಕೈಯಲ್ಲಿಯೇ ಈ ಇಲಾಖೆ ಇರುತ್ತಿದ್ದದ್ದು. ನಮ್ಮ ದಿವಂಗತ ಜೆ.ಹೆಚ್. ಪಟೇಲರಿಂದ ಹಿಡಿದು, ಶ್ರೀ ಎಸ್.ಎಂ. ಕೃಷ್ಣರವರಿಂದ ಹಿಡಿದು ಎಲ್ಲಾ ಯೋಚನೆ ಮಾಡಿದರೆ ಮುಖ್ಯಮಂತ್ರಿಗಳು ತಾವೇ ಕೆಇಬಿ ಇಲಾಖೆಯನ್ನು ಯಾವಾಗಲೂ ಇಟ್ಟುಕೊಳ್ಳುತ್ತಿದ್ದರು. ಅವರಿಗೆ political power ನೋಡಿಕೊಳ್ಳುವುದೇ ಕಷ್ಟವಾಗಿ ಈ electrical power ನೋಡಿಕೊಳ್ಳುವುದಕ್ಕೆ ಸಮಯವೇ ಆಗುತ್ತಿರಲಿಲ್ಲ. ಈ ಬಾರಿ ಒಬ್ಬ ಕ್ಯಾಬಿನೆಟ್ ಸಚಿವರಿಗೆ ಪ್ರತ್ಯೇಕವಾಗಿ ಈ ಸ್ಥಾನ ಸಿಕ್ಕಿದೆಯಾದರೂ ಜೊತೆಗೆ ಲೋಕೋಪಯೋಗಿ ಇಲಾಖೆಯಂಥ ಭಾರದ ಇಲಾಖೆ ಜೊತೆಗೆ ಇದು ಸಹ ಇದೆ. ಈ ಇಲಾಖೆಗೆ ಏನಾದರೂ ನ್ಯಾಯ ಸಿಕ್ಕಿದರೆ ಈ ಸಂದರ್ಭದಲ್ಲಿ ಸಿಗಬೇಕು. ಮತ್ತೆ ಇನ್ಯಾವ ಮುಖ್ಯಮಂತ್ರಿಗಳು ಬಂದು ಅವರು ತಾವೇ ಇದನ್ನು ತೆಗೆದುಕೊಳ್ಳುವವರು ಇದ್ದಾರೋ ಮುಂದೆ ಏನೇನು ಆಗುವುದಿದೆಯೋ ಅದು ಬೇರೆ ವಿಚಾರ. ಏಕೆಂದರೆ ಈ ಇಲಾಖೆಗಳೇ ಹಾಗಿವೆ. ಹಾಗಾಗಿ ಈಗ ಈ ಇಲಾಖೆಯನ್ನು ಸರಿಯಾಗಿ streamline ಮಾಡುವುದಕ್ಕೆ ಒಂದು ಅವಕಾಶವಿದೆ. ನಾಲ್ಕು ಕಂಪನಿಗಳು ಸೇರಿ ಈ ಮಂಡಳಿಯಲ್ಲಿ ಸುಮಾರು 80 ರಿಂದ 90 ಸಾವಿರ ಜನ ನೌಕರರು ಇದ್ದಾರೆ. ಅವರನ್ನು ನಿಯಂತ್ರಣ ಮಾಡಿ ಅವರಿಂದ ಕೆಲಸ ತೆಗೆದುಕೊಳ್ಳುವುದಕ್ಕೆ ಕಠಿಣವಾದ ಪರಿಶ್ರಮವನ್ನು ಮಾನ್ಯ ಮಂತ್ರಿಗಳು ಮಾಡಿದರೆ ಈ ಇಲಾಖೆ ನಮ್ಮ ರೈತರಿಗಾಗಲೀ ಸಾಮಾನ್ಯ ಗ್ರಾಹಕರಿಗಾಗಲೀ ಗೃಹ ಬಳಕೆಯವರಿಗಾಗಲೀ ಹೀಗೆ ಎಲ್ಲರಿಗೂ ಅನುಕೂಲವಾಗುತ್ತದೆ. ಹಾಗಾಗಿ Streamline ಮಾಡಬೇಕಾದಂಥ ಅವಶ್ಯಕತೆಯಿದೆ. ಮಾನ್ಯ ಮಂತ್ರಿಗಳು ಈ ಇಲಾಖೆಯನ್ನು Streamline ಮಾಡುವುದಕ್ಕೆ ಬೇಕಾಗಿರುವ ವಿಶೇಷ ಪ್ರಯತ್ನವನ್ನು ಮಾಡಬೇಕಾಗಿದೆ. ಏಕೆಂದರೆ electricity loss ಇವತ್ತು 38 ಪರ್ಸೆಂಟ್ ಇದೆ. ಅದೇನೋ ಆಗಾಗ ಸೆಂಟ್ರಲ್ ಗವರ್ನ್‌ಮೆಂಟ್‌ಗೆ ವರದಿ ಕೊಡುವಾಗ ಅಲ್ಲಿಂದ ಯೋಜನೆಯ ಲಾಭ ತೆಗೆದುಕೊಳ್ಳುವಾಗ ನಷ್ಟ 4 ಪರ್ಸೆಂಟ್ ಕಡಿಮೆಯಾಗಿದೆ 3 ಪರ್ಸೆಂಟ್ ಕಡಿಮೆಯಾಗಿದೆ ಎಂದು ಹೇಳುತ್ತಿರುತ್ತಾರೆ. Electricity theft ಆಗುತ್ತಿರುವುದೂ ಸಹ ಕಡಿಮೆಯಾಗಿಲ್ಲ. Electricity transmission loss ಸಹ ಕಡಿಮೆಯಾಗಿಲ್ಲ. ನನಗೆ ಬಹಳ ನೋವು ಆಗುವುದೇನೆಂದರೆ, ವಿದ್ಯುತ್ ವ್ಯವಸ್ಥೆಯ ಸುಧಾರಣೆಗೋಸ್ಕರ ಕೇಂದ್ರ ಸರ್ಕಾರ ಸಾವಿರಾರು ಕೋಟಿ ರೂಪಾಯಿಗಳನ್ನು ನಮ್ಮ ರಾಜ್ಯಕ್ಕೆ ಕೊಟ್ಟಿದೆ. ಹಿಂದಿನ ಎನ್‌ಡಿಎ ಕೇಂದ್ರ ಸರ್ಕಾರ ನಮ್ಮ ರಾಜ್ಯಕ್ಕೆ ಸಾವಿರಾರು ಕೋಟಿ ರೂಪಾಯಿಗಳನ್ನು ವಿದ್ಯುತ್ ಸುಧಾರಣೆಗೋಸ್ಕರವಾಗಿ ಹೊಸ ಲೈನ್, transformer ಕಂಬ ಇತ್ಯಾದಿಗಳನ್ನೆಲ್ಲಾ ಹಾಕುವುದಕ್ಕೆ ಕೊಟ್ಟಿದೆ. ಆ ರೀತಿ ಸ್ಕೀಂ ಇತ್ಯಾದಿಗಳಿಂದ ಅದರ ಬಳಕೆಗಳು ಹೇಗೇಗೆ ಆಗುತ್ತಿದೆ ಎನ್ನುವುದು ಗೊತ್ತಿದೆ. ಹಾಗಾಗಿ ಈ ಒಂದು ಕಂಪನಿ ಹೆಚ್ಚಾಗುವುದರಿಂದ ಈ ವ್ಯವಸ್ಥೆಗಳು ಸುಧಾರಣೆಯಾಗುತ್ತದೆಯೇ ಎನ್ನುವುದನ್ನು ನಾವು ಮೂಲಭೂತವಾಗಿ ಯೋಚನೆ ಮಾಡಬೇಕಾಗಿದೆ. ಇದೊಂದು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ಕಂಪನಿ ಎಂದು ಹೊಸದು ಪ್ರಾರಂಭವಾಗುತ್ತದೆ. ಆದರೆ ವ್ಯವಸ್ಥೆಯಲ್ಲಿ ಏನು

ಬದಲಾವಣೆಯಾಗುತ್ತದೆ? ಐದರ ಬದಲು ಹತ್ತು ಕಂಪನಿಯಾಗಬಹುದು. ಅಧಿಕಾರಿಗಳು ಈ ರೀತಿಯ ಕಂಪನಿ ಮಾಡುವುದಕ್ಕೆ experts ಇದ್ದಾರೆ. ಏಕೆಂದರೆ ಅವರಿಗೆ ಬೇಕಾದಂಥ ಉನ್ನತ ಸ್ಥಾನಗಳು ಭದ್ರವಾಗಿ ಇರಬೇಕಲ್ಲವೇ! ಹಾಗಾದರೆ, 'ಆಡಳಿತದಲ್ಲಿ ಸುಧಾರಣೆ ತರಬೇಕೆಂದು' ಮಾನ್ಯ ಹಾರ್ನಳ್ಳಿ ರಾಮಸ್ವಾಮಿಯವರು ವರದಿ ಕೊಟ್ಟಿದ್ದಾರೆ ಈ ಆಡಳಿತ ಸುಧಾರಣೆಯಲ್ಲಿ ಈ ಕಮಿಟಿ ಇನ್ನೊಂದು ಕಂಪನಿ ಬೇಕೆಂದು ಕೇಳಿದೆಯೇ ಎನ್ನುವ ಪ್ರಶ್ನೆಯನ್ನು ಕೇಳಬಯಸುತ್ತೇನೆ. ಹಾಗಾಗಿ ಈ ರೀತಿ ಕಂಪನಿಗಳನ್ನು ಹೆಚ್ಚೆಚ್ಚು ಮಾಡುತ್ತಾ ಹೋಗುವುದರಿಂದ ವಿದ್ಯುತ್ ಸುಧಾರಣೆ ಆಗುತ್ತದೆ ಎನ್ನುವ ಭ್ರಮೆಯಲ್ಲಿ ನಾವ್ಯಾರೂ ಇರಬೇಕಾದ ಅಗತ್ಯತೆ ಇಲ್ಲ. ಆದ್ದರಿಂದ ಮಾನ್ಯ ಮಂತ್ರಿಗಳು ಈ ಸಂದರ್ಭದಲ್ಲಿ ಒಂದು ಕಂಪನಿಯನ್ನು ಹೆಚ್ಚು ಮಾಡಿಕೊಳ್ಳುತ್ತಿದ್ದಾರೆ. ಆ ಕಂಪನಿ ಆಗುತ್ತದೆ. ಆದರೆ ವ್ಯವಸ್ಥೆಯ ಸುಧಾರಣೆ ದೃಷ್ಟಿಯಿಂದ ವಿಶೇಷವಾಗಿ ಆ ಇಲಾಖೆಯನ್ನು ಗಮನಿಸಬೇಕಾದಂಥ ಅಗತ್ಯತೆ ಇದೆ. ಅದನ್ನು Stream line ಮಾಡಬೇಕಾದಂಥ ಅಗತ್ಯತೆ ಇದೆ. ಅದು ಇಲ್ಲವೆಂದರೆ ಒಂದು ದೊಡ್ಡ ಬಿಳಿಯಾನೆಯಾಗಿ ಬೆಳೆಯುತ್ತದೆ. ಈಗಾಗಲೇ ಈ KPTCL ಎನ್ನುವುದು HESCOM, BESCOM ಇತ್ಯಾದಿಗಳು ದೊಡ್ಡ ಬಿಳಿಯಾನೆಯಂತೆ ಬೆಳೆದಿವೆ. ನಿಯಂತ್ರಣವೇ ಇಲ್ಲದಿರುವಂಥ ಸ್ಥಿತಿಯಲ್ಲಿ ಅವು ಬೆಳೆದಿವೆ. ಇನ್ನು ಖಾಸಗಿಯವರು ಈ ಬಿಲ್ ಕೊಡುವ ವ್ಯವಸ್ಥೆಯನ್ನು ಪ್ರಾರಂಭ ಮಾಡಿದ್ದಾರೆ. ಈ ಕಂಪನಿಗಳಾದ ಮೇಲೆ ಖಾಸಗಿಯವರು ಬಿಲ್ ಕೊಡಲಿಕ್ಕೆ ಪ್ರಾರಂಭ ಮಾಡಿ, ಮೀಟರ್ ನೋಡಿ ಎಷ್ಟು ಕರೆಂಟ್ ಖರ್ಚಾಗಿದೆ ಎನ್ನುವುದನ್ನು ಮೊದಲಿನ ಹಾಗೆ ಈಗ ಕೈಯಲ್ಲಿ ಬರೆಯುವುದಿಲ್ಲ ಅದಕ್ಕೆ ಸಣ್ಣ ಒಂದು ಸಿಂಪ್ಯುಟರ್ ಟೈಪ್ ಮೆಶಿನ್ ಕೊಟ್ಟಿದ್ದಾರೆ . ಅದು not an exactly simputer ಅದೇನೋ ಒಂದು ಮೆಶಿನ್ ಕೊಟ್ಟಿದ್ದಾರೆ. ಅದನ್ನು ಆಪರೇಟ್ ಮಾಡುವುದಕ್ಕೆ ಅವರಿಗೆ ಬರುವುದಿಲ್ಲ. ನಮ್ಮೂರಿನಲ್ಲಿ ಒಬ್ಬನಿಗೆ Actually 770 ರೂಪಾಯಿ ಬಿಲ್ ಬರುವ ಕಡೆಗೆ 16 ಸಾವಿರ ರೂಪಾಯಿಗಳ ಬಿಲ್ ಬಂದಿತ್ತು ಈ ರೀತಿಯ ಒಂದೊಂದು ಕಥೆ ಹೇಳುವುದಕ್ಕೆ ಪ್ರಾರಂಭಿಸಿದರೆ ಅದಕ್ಕಾಗಿಯೇ ಒಂದು ಗಂಟೆ ಸಮಯ ಕಳೆದುಹೋಗುತ್ತದೆ. ಆ ಮೇಲೆ ಅಲ್ಲಿಯ ಆಫೀಸ್‌ಗೆ ಹೋಗಿ ಚೆಕ್ ಮಾಡಿದರೆ ಆ ಮೆಶಿನ್ ಅನ್ನು ಆಪರೇಟ್ ಮಾಡುವಂಥ ಆ ಆಪರೇಟರ್‌ಗೆ ಆಪರೇಟ್ ಮಾಡುವುದಕ್ಕೆ ಬರುವುದಿಲ್ಲ. ಈಗ ಎಲ್ಲಾ computerization ಮಾಡುತ್ತಿದ್ದಾರೆ. ಯಾರದೋ ಹೆಸರಿನ ಲೆಡ್ಜರ್ ಇನ್ನಾರದೋ ಹೆಸರಿಗೆ ಆಗಿ, ಏಕೆಂದರೆ ಆ computer operate ಮಾಡುವವರಿಗೂ training. ಇಲ್ಲ. ಈ ಕಂಪನಿಗಳನ್ನು ಮಾಡುತ್ತಾ ಹೋಗುವುದರಿಂದ ಆಡಳಿತದಲ್ಲಿ ಸುಧಾರಣೆಗಳು ಕಾಣುತ್ತಿಲ್ಲ. ಇದು ಈ ವಿಷಯದಲ್ಲಿ ನಮಗೆ ನೋವು ಆಗಿರುವಂಥದ್ದಾಗಿದೆ. ಹಾಗಾಗಿ ಈಗ ಆಡಳಿತದಲ್ಲಿ ಸುಧಾರಣೆ ಆಗುವಂಥದ್ದಾಗಬೇಕು. ಈ ಲೋಪದೋಷಗಳು ಸರಿಯಾಗುವಂತಾಗಬೇಕು. ಹಾಗಾದರೆ ಮಾತ್ರ ಈ ರೀತಿ ಹೆಚ್ಚು ಹೆಚ್ಚು ಕಂಪನಿಗಳನ್ನು ಮಾಡಿಕೊಂಡಿರುವುದಕ್ಕೆ ಒಂದು ಅರ್ಥ ಬರುತ್ತದೆ. ಇಲ್ಲವೆಂದರೆ ಅರ್ಥಹೀನವಾಗಿ ಈ ಸದನದಲ್ಲಿ ನಾವು ಕಂಪನಿಗಳನ್ನು ಮಾಡುವುದಕ್ಕೆ ಅನುಮೋದಿಸುತ್ತಾ ಇರುತ್ತೇವೆ. ಅಧಿಕಾರಿಗಳು ತಮಗೆ ಬೇಕಾದಂಥ ಕುರ್ಚಿಗಳನ್ನು ಭದ್ರಪಡಿಸಿಕೊಳ್ಳುವುದಕ್ಕೆ ಈ ರೀತಿ ನಮಗೆ ಸಲಹೆಸೂಚನೆಗಳನ್ನು ಕೊಡುತ್ತಿರುತ್ತಾರೆ. ಅದು ಆಗುತ್ತಿರುತ್ತದೆ. ಹಾಗಾಗಿ ಈ ಕಂಪನಿಗಳನ್ನು ಮಾಡಿಕೊಳ್ಳುವುದು ತಾಂತ್ರಿಕವಾಗಿ ಎಷ್ಟು ಮುಖ್ಯ ಅನ್ನುವುದನ್ನು ಸರ್ಕಾರ ಯೋಚನೆ ಮಾಡಿದೆ ಎಂದು ಅಂದುಕೊಂಡಿದ್ದೇನೆ. ಅದನ್ನು ಯೋಚನೆ ಮಾಡಬೇಕು. ಅದರ ಜೊತೆಯಲ್ಲಿ ಒಟ್ಟಾರೆ ಈ ಇಲಾಖೆಯನ್ನು ಗಂಭೀರವಾಗಿ

ಪುನರ್‌ಸಂಘಟಿಸಿ ಜನಪರವಾದಂಥ ರೀತಿಯಲ್ಲಿ ರೂಪಿಸಬೇಕಾದಂಥ ಅಗತ್ಯತೆ ಇದೆ. ಈ ಒಂದು ಸುಧಾರಣಾ ವಿಧೇಯಕವನ್ನು ಮಂಡಿಸಿರುವಂಥ ಸಂದರ್ಭದಲ್ಲಿ ಆ ನಿಟ್ಟಿನಲ್ಲಿ ಮಾನ್ಯ ಮಂತ್ರಿಗಳು ವಿಶೇಷವಾದ ಗಮನವನ್ನು ಕೊಡಬೇಕೆಂದು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರುವುದಕ್ಕೆ ಬಯಸುತ್ತಿದ್ದೇನೆ.

ಶ್ರೀ ಸಿ.ಎಸ್. ಪುಟ್ಟೇಗೌಡ (ಶ್ರವಣಬೆಳಗೊಳ) : ಮಾನ್ಯ ಅಧ್ಯಕ್ಷರೆ, ಇವತ್ತು ಈ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ಕಂಪನಿಯನ್ನು ತರಬೇಕೆಂದು ಒಂದು ಹೊಸ ವಿಧೇಯಕವನ್ನು ಮಾಡಿದ್ದಾರೆ. ನಮ್ಮ ಭಾಗದ ಜನರಿಗೆ ಮಂಗಳೂರು MESCOM ಗೆ ಹೋಗಲಿಕ್ಕೆ ಎಲ್ಲಾ ತರಹದ ತೊಂದರೆಯಾಗಿತ್ತು. ಅದೊಂದು ಸಣ್ಣ ಸುಧಾರಣೆಯಾಗಿದೆಯೆಂದು ಮಾತ್ರ ನಾನು ಇಲ್ಲಿ ಹೇಳಿದರೂ ಕೂಡ, ವಿದ್ಯುತ್ ಬಗ್ಗೆ ಇನ್ನೂ ಬಹಳಷ್ಟು ಚರ್ಚೆಯಾಗಬೇಕು. ಈ ಕೆ.ಪಿ.ಟಿ.ಸಿ.ಎಲ್. ಸಂಸ್ಥೆ ಸರ್ಕಾರದ ಕೈಯಲ್ಲಿಯಿದೆಯೇ ಅಥವಾ ಇನ್ನು ಯಾರ ಕೈಯಲ್ಲಿದೆ ಎನ್ನುವುದು ನನಗಿನ್ನೂ ಸ್ಪಷ್ಟವಾಗಿಲ್ಲ. ಇದಕ್ಕೆ ನಮ್ಮ ಮಾನ್ಯ ರೇವಣ್ಣನವರನ್ನು fix ಮಾಡುವುದಕ್ಕೆ ಸಾಧ್ಯವಿಲ್ಲ, ಪಾಪ, ಹತ್ತಾರು ವರ್ಷಗಳಿಂದ ರಾಜ್ಯದ ರೈತರುಗಳಿಗೆಲ್ಲಾ ನಿಮಗೆ ಹೇಗೆ ಬೇಕೋ ಹಾಗೆ free ಕರೆಂಟನ್ನು ಕೊಡುತ್ತೇವೆಂದು' ಏನು ಹೇಳಿಕೊಂಡು ಬಂದರೋ ಅದಕ್ಕೆ ಸುಧಾರಣೆಯನ್ನು ಮಾಡದೇನೇ ಹೊಸದಾಗಿ ಕರೆಂಟ್ ಉತ್ಪಾದನೆ ಮಾಡುವಂಥ ತಯಾರಿ ನಡೆಸಲಿಲ್ಲ. ನಮ್ಮ ಕಡೆಯೆಲ್ಲಾ ಜನರನ್ನು ನೋಡಿದರೆ ಹೆದರಿಕೆಯಾಗುತ್ತದೆ. ನಮ್ಮ ಕಡೆ ಸಾಕಷ್ಟು ಬಾವಿಗಳಿದ್ದು ಅವರವರೇ ಕಂಬ ಹತ್ತಿ ಅನಧಿಕೃತವಾಗಿ ವಿದ್ಯುತ್‌ನ ಕನೆಕ್ಷನ್ ಕೊಟ್ಟುಕೊಂಡಿದ್ದಾರೆ. ಅವುಗಳನ್ನು regularize ಮಾಡಿಲ್ಲ, ಒಂದು ರೀತಿ ಹೇಗೋ ಹಾಗೆ ತಳ್ಳಿಕೊಂಡು ಹೋಗುವಂಥ ಕಾರ್ಯಕ್ರಮ ಸರ್ಕಾರದಿಂದ ಆಗುತ್ತಿದೆ. ದಯಮಾಡಿ ಈ ರಾಜ್ಯದ ಮುಖ್ಯಮಂತ್ರಿಗಳು ಮತ್ತು ಕೆಇಬಿ ಮಂತ್ರಿಗಳು ಮತ್ತು ಪಕ್ಷಬೇಧ ಮರೆತು ಇದನ್ನೆಲ್ಲಾ regularize ಮಾಡಬೇಕು. ಏಕೆಂದರೆ, ಈ ಕೆಪಿಟಿಸಿಎಲ್ ಏನಿದೆ, ಇದರ ಮೂಲಕ ರಾಜ್ಯದ ರೈತರಿಗೆ ಜನಪ್ರತಿನಿಧಿಗಳಾಗಿರುವ ನಾವುಗಳು ಏನಾದರೂ ಒಳ್ಳೆಯ ಕಾರ್ಯಕ್ರಮ ಹಾಕಿಕೊಟ್ಟರೆ ಅವರ ಋಣ ತೀರಿಸಿದಂತಾಗುತ್ತದೆ. ವಿದ್ಯುಚ್ಛಕ್ತಿ ಇಲಾಖೆ ಮುಖಾಂತರ ಉತ್ತಮ ಗುಣಮಟ್ಟದ ವಿದ್ಯುತ್ ಅನ್ನು ಈ ರಾಜ್ಯದ ರೈತರಿಗೆ ಸಮರ್ಪಕವಾಗಿ ಹೇಳಿದ ರೀತಿಯಲ್ಲಿ ಒದಗಿಸಿಕೊಟ್ಟರೆ ಮಾತ್ರ ಜನಪ್ರತಿನಿಧಿಗಳಿಗೆ ಮಾನ ಮರ್ಯಾದೆ ಬರುತ್ತದೆ. ಇಲ್ಲದಿದ್ದರೆ, ಚುನಾವಣಾ ಸಂದರ್ಭ ಬಂದಾಗ ವಿದ್ಯುತ್ ಸೌಕರ್ಯ ಕಲ್ಪಿಸಿಕೊಡುವ ಬಗ್ಗೆ ಯಾರ್ಯಾರೋ, ಹೇಗೇಗೋ ಸುಮ್ಮನೆ ಘೋಷಣೆ ಮಾಡುವಂತಾಗುತ್ತದೆ. ಆದುದರಿಂದ, ದಯಮಾಡಿ ರಾಜ್ಯದ ಮುಖ್ಯಮಂತ್ರಿಗಳು ಮತ್ತು ಇಂಧನ ಮಂತ್ರಿಗಳು ಪಕ್ಷಭೇಧ ಮರೆತು, ಎಲ್ಲಾ ಸರ್ಕಾರಗಳೂ ಕೂಡ, ಅವರು ಇವರು ಅಂತಲ್ಲ, ವೋಟಿನ ದೃಷ್ಟಿಯಿಂದ ಇವತ್ತು ನಾವು ಬಲಿಷ್ಠರಾಗಿದ್ದೇವೆಂದು ಜನರು ತಿಳಿದುಕೊಂಡು, ವಿದ್ಯುಚ್ಛಕ್ತಿಯನ್ನು ಯಾರಿಗೆ ಬೇಕೋ, ಎಲ್ಲೆಲ್ಲಿ ಬೇಕೋ ಅಲ್ಲಿಗೆ ವಿದ್ಯುತ್ ಲೈನ್ ಎಳೆದುಕೊಳ್ಳಬಹುದೆನ್ನುವ ಮಟ್ಟಕ್ಕೆ ಇವತ್ತು ಪರಿಸ್ಥಿತಿ ತಲುಪಿದೆ. ಇದು ಇವತ್ತು ನಿನ್ನೆಯದು ಅಲ್ಲ. ಹತ್ತಾರು ವರ್ಷಗಳಿಂದ ಈ ಕಾರ್ಯಕ್ರಮವಾಗಿದೆ. ಇದನ್ನು ಸುಧಾರಣೆ ಮಾಡಬೇಕಾದರೂ ಕೂಡ ಒಬ್ಬ ಮಾನ್ಯ ರೇವಣ್ಣನವರ ಕೈಯಲಿ ಆಗಲೀ ಅಥವಾ ಒಬ್ಬ ಮಾನ್ಯ ಧರ್ಮಸಿಂಗ್ ಸಾಹೇಬರ ಕೈಯಲ್ಲಾಗಲೀ ಅಥವಾ ಮಾನ್ಯ ಸಿದ್ಧರಾಮಯ್ಯನವರ ಕೈಯಲ್ಲಾಗಲೀ ಸಾಧ್ಯವಿಲ್ಲ. ಪಕ್ಷಬೇಧವನ್ನು ಮರೆತು ನಾವು ರೈತರಿಗೆ ಕರೆಂಟ್‌ನ್ನು ಕೊಡುವಾಗ ಇಷ್ಟು ಗಂಟೆ ಕೊಡುತ್ತೇವೆಂದು ಏನು ಹೇಳಿದ್ದೆವೋ ಅಷ್ಟು ಗಂಟೆ industry ಯವರದ್ದು ಎಲ್ಲರದ್ದೂ

ಮುಚ್ಚಿ ಆದರೂ ಕಟಿಬದ್ಧವಾಗಿ ಕೊಡಬೇಕು, ಮತ್ತೆ ಅವರಿಗೆ ಏನು ಕೊಡುತ್ತೇವೋ ಅದಕ್ಕೆ ಕರೆಕ್ಟಾಗಿ ನಾವು ಅವರಿಂದ revenue ಅನ್ನು ಸಹ ಪಡೆಯಬೇಕು. ಇಲ್ಲದಿದ್ದರೆ ಒಬ್ಬರು ಕೊಡಿ ಎನ್ನುವುದು ಇನ್ನೊಬ್ಬರು–ಲೇ, ನೀವು ಈ ಕಡೆ ಸ್ಟ್ರೈಕ್ ಮಾಡ್ರಲಾ' ಎಂದರೆ ಇದರಿಂದ ಈ ರಾಜ್ಯದ ವಿದ್ಯುಚ್ಛಕ್ತಿ ಇಲಾಖೆ ಸಮರ್ಪಕವಾಗಿ ವಿದ್ಯುಚ್ಛಕ್ತಿ ಸರಬರಾಜು ಮಾಡಲಿಕ್ಕೆ ಆಗದೆ ಈ ರಾಜ್ಯದ ರೈತರಿಗೆ ನಾವು ಎಲ್ಲಾ ಪಕ್ಷದವರು ಸೇರಿ ಮೋಸ ಮಾಡಿದ ಹಾಗೆ ಆಗುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಿ ಇದಕ್ಕೆ ಒಂದು shock treatment ಆಗಿರಬಹುದು. ನಮ್ಮ ಹಾಸನದಲ್ಲಿ ಒಂದು review ಮೀಟಿಂಗ್‌ನಲ್ಲಿ 'ನಮ್ಮ ಕಡೆ ಎಲ್ಲಾ ತಂತಿ ಬೇಲಿ ಹಾಕುತ್ತೇವೆಂದು ಎಲ್ಲಾ ಕೋಟ್ಯಾಂತರ ರೂಪಾಯಿ ದುಡ್ಡು ತಿನ್ನುತ್ತಾರೆಂದು' ಹೇಳುತ್ತಿದ್ದರು. ನಿಜ. ನೀವು ಸರಿಪಡಿಸುವಂಥ ಆ ದಿಕ್ಕಿನಲ್ಲಿ ಹೊರಟಿದ್ದರೂ ಕೂಡ ಇದಕ್ಕೆ ಸಮರ್ಪಕವಾದ ಕಾಯಕಲ್ಪವಾಗಬೇಕು. ಈ ರಾಜ್ಯದ ಕೆಲವು Cheap popularity ಯೋಜನೆಗಳನ್ನು ಬೇಕಾದರೆ ನಿಲ್ಲಿಸಿಬಿಡಿ. ನಾವು ಅದು ಕೊಡುತ್ತೇವೆ, ಚಡ್ಡಿ ಕೊಡುತ್ತೇವೆ, ತಾಳಿ ಕೊಡುತ್ತೇವೆ election time ಬಂದಾಗ ಎಲ್ಲಿ ಏನೇನು ಬೇಕಾದರೂ ಕೊಡುತ್ತೇವೆ ಕಂಡ್ರಲಾ. ಇದು ಒಂದು ಸಲ ಓಟು. ಹಾಕಿ ಎಂದು ಹೇಳುವಂಥ ಕಾರ್ಯಕ್ರಮವನ್ನು ಎಲ್ಲಾ ಪಕ್ಷದವರು ಮರೆತು, ನಿಜವಾಗಿ ಅನ್ನದಾತನಾದ ರೈತನಿಗೆ ಈ ರಾಜ್ಯದ ಬಡವನಿಗೆ ನಾವು ಸಹಾಯ ಮಾಡುತ್ತೇವೆ, ಮಾಡಬೇಕೆನ್ನುವ ಮನಸ್ಸಿದ್ದರೆ 24 ಗಂಟೆ ಬೇಡ ಈ ದೇಶದಲ್ಲಿ ನೀವು ಕನಿಷ್ಠ 10 ಗಂಟೆಯಾದರೂ ಕರೆಂಟ್ ಕೊಡುತ್ತೇವೆಂದು ಎದೆ ತಟ್ಟಿ ಎಲ್ಲರೂ ಹೇಳಿ, 10 ಗಂಟೆಯಷ್ಟಾದರೂ ವಿದ್ಯುತ್ ಅನ್ನು ಕೊಡಬೇಕು. ನೀವು 12 ಗಂಟೆ ಕೊಡುತ್ತೇವೆಂದರೆ, 10–12 ಗಂಟೆ ಕೊಡುವುದಕ್ಕೆ ನೀವು ತಯಾರಿ ನಡೆಸಿದರೆ ಎಲ್ಲರೂ ಪಕ್ಷಬೇಧ ಮರೆತು ಇದೊಂದು ಅತ್ಯಂತ ಒಳ್ಳೆಯ ಕಾರ್ಯಕ್ರಮವಾಗುತ್ತದೆ ಏಕೆಂದರೆ, ಮೊನ್ನೆ ನಮ್ಮ ಸ್ಪೀಕರ್ ಸಾಹೇಬರು ಅಕಸ್ಮಾತ್ ಆಗಿ ನನ್ನನ್ನು ಚೈನಾ ದೇಶಕ್ಕೆ ಕರೆದುಕೊಂಡು ಹೋಗಿದ್ದರು. ನಾವು ಅಲ್ಲಿ ನೋಡಿದಾಗ, ನನ್ನ ಮನಸ್ಸಿನಲ್ಲಿ, ತಲೆಯಲ್ಲಿ ಭ್ರಮೆ ಇತ್ತು, ಈ ದೇಶವನ್ನು ಸರಿಪಡಿಸುವುದಕ್ಕಾಗುವುದಿಲ್ಲವೆಂದು ಇತ್ತು. ಏಕೆಂದರೆ, ಈ ದೇಶದಲ್ಲಿರುವ ಜನಸಂಖ್ಯೆಯ ಹೆಚ್ಚಳದಿಂದ ಯಾವುದನ್ನೂ ಫುಲ್‌ಫಿಲ್ ಮಾಡಲಿಕ್ಕೆ ಆಗುವುದಿಲ್ಲ. ಯಾರೋ ಲಂಡನ್, ಜರ್ಮನ್ ಅಂದರೆ ಅವರು ಕಡಿಮೆ ಜನರಿದ್ದಾರೆ ಹೇಗೋ ಮಾಡಿಕೊಳ್ಳುತ್ತಾರೆಂದು ಭಾವಿಸಿದ್ದೆ. ಅವರಿಗೆ ಅಲ್ಲಿ ನಮಗಿಂತ 2 ವರ್ಷ ಲೇಟ್ ಆಗಿ ಸ್ವಾತಂತ್ರ್ಯ ಬಂದಿದೆ. ಅಲ್ಲಿ ನಮಗಿಂತ 20 ಕೋಟಿ ಜನಸಂಖ್ಯೆ ಜಾಸ್ತಿ ಇದೆ. ಬಹುಶ ಇನ್ನು 500 ವರ್ಷಗಳಾದರೂ ಕೂಡ ನಾವು ಆ ಮಟ್ಟಕ್ಕೆ ಅಲ್ಲಿಗೆ ಹೋಗಲಿಕ್ಕೆ ಸಾಧ್ಯವಿಲ್ಲವೆನ್ನುವ ಭಾವನೆ ನನಗೆ ಬಂತು. ಅವರೇಕೆ ಹಾಗಾಗಿದ್ದಾರೆಂದರೆ, ಅವರಿಗೆ ಹೇಳುವುದಕ್ಕೆ, ಮಾಡುವುದಕ್ಕೆ ಅಂತರ ಕಡಿಮೆಯಿದೆ. ಅವರು ಅಲ್ಲಿ ಒಂದು ದಿವಸ ರಾಜಕೀಯ ಮಾಡುತ್ತಾರೆ. ನಮ್ಮಲ್ಲಿ 365 ದಿವಸದಲ್ಲಿ ಎಲ್ಲಾ ಸಣ್ಣ ಹಳ್ಳಿಗಳಲ್ಲಿ ಕಟಕಟೆ ಮೇಲೆ ಕೂಡಿ ದಿನವೂ ರಾಜಕೀಯ ಮಾಡುತ್ತಾರೆ. ಭಾಷಣ ಮಾಡುತ್ತಾರೆ. ಅವನನ್ನು ತೆಗೆಯಬೇಕು. ಈ ಸಲ ಮಾಧುಸ್ವಾಮಿ, ತಿಪ್ಪಾರೆಡ್ಡಿ, ಪುಟ್ಟೇಗೌಡರನ್ನು ತೆಗೆಯಬೇಕು. ಇನ್ಯಾರನ್ನೋ ತರಬೇಕೆನ್ನುವ ಕಾರ್ಯಕ್ರಮವೇ ಇಲ್ಲ. ಅಂದರೆ, ನಾವು ಮಾತನಾಡುವುದಕ್ಕೂ, ಮಾಡುವುದಕ್ಕೂ ವ್ಯತ್ಯಾಸವಿದೆ. ದಯವಿಟ್ಟು, ಇದೊಂದು ಅತ್ಯಂತ ಸಮಗ್ರವಾಗಿ ಈ ರಾಜ್ಯದ ರೈತರಿಗೆ ಅಥವಾ ಎಲ್ಲಾ ಸಮಸ್ತ ನಾಗರಿಕರಿಗೆ ಇವತ್ತು ವಿದ್ಯುಚ್ಛಕ್ತಿ ಇಲ್ಲದೆ ಯಾರೂ ಬದುಕಲಿಕ್ಕೆ ಸಾಧ್ಯವಿಲ್ಲ. ಈಗ ಒಂದು 25 ವರ್ಷಗಳಲ್ಲಿ ಯಾರೂ ನಮ್ಮ ಊರಿನಲ್ಲಿ ಗ್ರೈಂಡರ್ ನೋಡಿರಲಿಲ್ಲ. ನಾವೆಲ್ಲಾ ಸೀಮೆ ಎಣ್ಣೆ ದೀಪದ ಬೆಳಕಿನಲ್ಲಿ ಓದುತ್ತಿದ್ದವರು. ಇವತ್ತು ನಮ್ಮ ಮಕ್ಕಳಿಗೆ

ಗ್ರೈಂಡರ್ ಇಲ್ಲದಿದ್ದರೆ ಊಟವಿಲ್ಲ. ದೋಸೆಗೆ ಚಟ್ನಿ ಇಲ್ಲ. ಪ್ರತಿಯೊಂದಕ್ಕೂ ಕೂಡ ಇವತ್ತು ವಿದ್ಯುಚ್ಛಕ್ತಿಯನ್ನು ಬಳಕೆ ಮಾಡುವುದರಿಂದ, ಈ ಇಲಾಖೆಗೆ ದೊಡ್ಡ ಕಾಯಕಲ್ಪವಾಗಬೇಕು. ಮಾನ್ಯ ಸಿದ್ಧರಾಮಯ್ಯ ಸಾಹೇಬರು ಮಾನ್ಯ ಧರಂ ಸಿಂಗ್ ಸಾಹೇಬರೂ ಕೂಡ ಮುಂದಿನ ದೃಷ್ಟಿ ಕೋನವಿಟ್ಟುಕೊಂಡು ಇದಕ್ಕೊಂದು ದೊಡ್ಡ ಬಂಡವಾಳವನ್ನು ಸರ್ಕಾರದ ಕೆಲವೊಂದು ಕಾರ್ಯಕ್ರಮವನ್ನು ನಿಲ್ಲಿಸಿಯಾದರೂ ಈ ವಿದ್ಯುಚ್ಛಕ್ತಿ ಇಲಾಖೆಗೆ ಹೂಡಿ, ರೈತರಿಗೆ ಅತ್ಯಂತ ನಿಗದಿತವಾದ ಸಮಯಕ್ಕೆ ವಿದ್ಯುಚ್ಛಕ್ತಿಯನ್ನು ಕೊಡಿ ಮತ್ತು ಕೆಲವರು ಮೀಟರ್ ಹಾಕಿ ಎನ್ನುವುದು, ಕೆಲವರು ಹಾಕಬೇಡಿ ಎನ್ನುವುದು ಬೇಡ. ಇದೆಲ್ಲಾ ಗೋಸುಂಬೆ ರಾಜಕೀಯ ಎಂದು ಹೇಳುತ್ತಾರೆ. ಒಂದು ಸಲ ನಾವು ಆ ಕಡೆ ಕುಳಿತಿರುತ್ತೇವೆ, ಒಂದು ಸಲ ನೀವು ಆ ಕಡೆ ಕುಳಿತಿರುತ್ತೀರಿ. ಪಾಪ, ಅವರು ನಮ್ಮನ್ನು ನೋಡಿ ನೋಡಿ ಈ ಸಲ ಮಾಳಗದ ಹಬ್ಬದಲ್ಲಿ ಇವರನ್ನು ನೋಡೋಣ. ಮುಂದಿನ ಮಾಳಗದ ಹಬ್ಬದಲ್ಲಿ ಅವರು ಆಗಲಿ ಎಂದು ಬರೀ ಇದೇ ಆಗಿ ಹೋಗಿದೆ. ಆದುದರಿಂದ, ದಯವಿಟ್ಟು ಯಾವುದೇ ಕಾರ್ಯಕ್ರಮ ನಿಲ್ಲಿಸಿ ದೊಡ್ಡ ಬಂಡವಾಳವನ್ನು ವಿದ್ಯುಚ್ಛಕ್ತಿ ಇಲಾಖೆಗೆ ಕೊಡಬೇಕು. ಹೊಸದಾಗಿ ವಿದ್ಯುತ್ತನ್ನು ತಯಾರಿಸುವುದಕ್ಕೆ ಕೂಡ ಈ ರಾಜ್ಯ ಸರ್ಕಾರ ಕಟಿಬದ್ಧವಾಗಿ, ಆ ದಿಕ್ಕಿನಲ್ಲಿ ಪಕ್ಷಬೇಧ ಮರೆತು, ಎಲ್ಲೆಲ್ಲಿ ವಿದ್ಯುಚ್ಛಕ್ತಿ ತಯಾರು ಮಾಡಲು ಸಾಧ್ಯ. ಅಲ್ಲಿ ಆ ಕಾರ್ಯಕ್ರಮವನ್ನು ಇಟ್ಟುಕೊಳ್ಳಬೇಕೆನ್ನುವ ಮಾತನ್ನು ಹೇಳಿ ಕೊಡುವಂಥ ಕರೆಂಟ್ ಅನ್ನು ಕೊಂಡುಕೊಂಡಾದರೂ ಕೊಡುವ ವ್ಯವಸ್ಥೆ ಮಾಡಬೇಕು. ಏನೋ ಸ್ವಲ್ಪ ಆಲಿಕಲ್ಲು ಮಳೆ ಬೀಳುತ್ತಿದೆ, ಜನರು ಸುಮ್ಮನಿದ್ದಾರೆ. ಈ ಸಲ ನಮ್ಮನ್ನು ತಿರುಗಾಡಲು ಬಿಡುವುದಿಲ್ಲ. ನಮ್ಮ ಸುಳ್ಳನ್ನು ಕೇಳಿ, ಕೇಳಿ, ಇನ್ನು ಈ ರಾಜ್ಯದಲ್ಲಿ ರಾಜಕಾರಣಿಗಳಿಗೆ, ಸುಳ್ಳು ಹೇಳಲು ಸುಳ್ಳೇ ಇಲ್ಲ. ಯಾವ ಪಕ್ಷ ಏನೂ ಬೇಡವೆಂದು ಹೇಳಿ, ಅಡ್ಡ ಹಾಕಿ ಎಲೆ ಅಡಿಕೆ ತಾಂಬೂಲ ಹಾಕಿ ಕೊಂಡರೆ ಹೆಂಗಸರು ನಮ್ಮನ್ನು ತಿರುಗಾಡುವುದಕ್ಕೆ ಬಿಡುವುದಿಲ್ಲ. ನೀವು ಹಳ್ಳಿಗೆ ಹೋದರೆ, ನಿಮ್ಮ ಮುಖಕ್ಕೆ ಉಗಿದು ಕಳುಹಿಸುತ್ತಾರೆ. ನೀವು ಎಷ್ಟು ಗಂಟೆ ಕರೆಂಟ್ ಕೊಡುತ್ತೇವೆಂದು ಹೇಳುತ್ತೀರಿ. ಅಷ್ಟು ಘಂಟೆ ಕೊಡಲು, ಬೇರೆ ರಾಜ್ಯದಿಂದ ತಂದು ಈ ಸಮಯದಲ್ಲಿ ಕೊಟ್ಟು, ಬೇಸಿಗೆಯನ್ನು ನಿಭಾಯಿಸಬೇಕು. ನನ್ನ ಒಂದೇ ತಾಲ್ಲೂಕಿನಲ್ಲಿ 12–15 ಸಾವಿರ ಪಂಪ್‌ಸೆಟ್ಟು ಅನಧಿಕೃತವಾಗಿ ಬೋರ್‌ವೆಲ್‌ಗಳನ್ನು ರೈತರು ಅವರವರೇ ಎಳೆದುಕೊಂಡಿದ್ದಾರೆ. ಅವರು, ಪೋಲ್ಸ್ ತಂದು, ಎಲ್ಲಾ ಮೆಟೀರಿಯಲ್ಸ್ ತಂದು ಎಳೆದುಕೊಂಡಿದ್ದಾರೆ. ಅಲ್ಲಿ ಕಟ್ಟಿದವನು, ಕಟ್ಟದಿದ್ದವನು ಒಂದೇ ಆಗಿದ್ದಾರೆ. ಯಾರಿಗಾದರೂ ಸಮರ್ಪಕವಾಗಿ ಕರೆಂಟ್ ಬರುತ್ತಿಲ್ಲ. ಸಮರ್ಪಕವಾಗಿ ವಿದ್ಯುಚ್ಛಕ್ತಿ ಕೊಡಲು ರೈತರಿಗೆ ಕೂಡ ನಿಯಮಾವಳಿ ಒಂದು ಫಿಕ್ಸ್ ಮಾಡಿ, ಅವರಿಂದ ಬೇಕಾದರೆ ಇಷ್ಟು ರೇಟ್ ಎಂದು ಫಿಕ್ಸ್ ಮಾಡಿ, ಕಟಿಬದ್ಧರಾಗಿ ವಸೂಲು ಮಾಡಿ. ಆದರೆ, ಗುಣಮಟ್ಟದ ಕರೆಂಟ್ ಅನ್ನು ರೈತರಿಗೆ ಹೇಳಿದ ಸಮಯಕ್ಕೆ ಕೊಡಬೇಕೆಂದು ಹೇಳಿ, ಈ ಕಾರ್ಯಕ್ರಮವನ್ನು ಸಮರ್ಪಕವಾಗಿ ಮಾಡುವುದರಲ್ಲಿ ಮಾನ್ಯ ರೇವಣ್ಣನವರು ಮತ್ತು ರಾಜ್ಯದ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು ಮುಂದಾಗುತ್ತಾರೆಂದು ಹೇಳಿ, ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ(ಚಿಕ್ಕನಾಯಕನಹಳ್ಳಿ) : ಇದು ರ್ಯಾಟಿಫಿಕೇಷನ್ ಬಿಲ್ ನಮ್ಮ ಮುಂದೆ ಇಂಟ್ರಡ್ಯೂಸ್ ಆಗಿದೆ ಎಂದು ಹೇಳಿ ನಾನು ಭಾವಿಸುತ್ತೇನೆ. ದಿ:24.12.04ರ ಅಧ್ಯಾದೇಶವನ್ನು ನಾವಿಲ್ಲಿ ಚರ್ಚೆ ಮಾಡುತ್ತಿದ್ದೇವೆ. ನೀವು ಕೊಟ್ಟಿರುವ ಅಬ್ಜೆಕ್ಟೀವ್ಸ್‌ಗೂ, ಮುಂದೆ ಮಾಡಿರುವ

ಪ್ರಸ್ತಾವನೆಗಳಿಗೂ ಅಷ್ಟೊಂದು ಸಮಂಜಸವಾಗಿ ಕಾಣುತ್ತಿಲ್ಲ. ನೀವು ಸ್ಪಷ್ಟವಾಗಿ ಹೇಳಬಹುದಾಗಿತ್ತು. 5ನೇ ಕಾರ್ಪೋರೇಷನ್ ಅನ್ನು ನಾವು ಮಾಡುತ್ತಿದ್ದೇವೆ, ಅದಕ್ಕೆ ನಾವು ಇವತ್ತು ಲೈಸೆನ್ಸ್‌ದಾರರಿಗೆ, ಲಿಟಿಗೇಷನ್ಸ್‌ಗೆ ಇಂಪವರ್ ಮಾಡಲು ನಾವು ಈ ಬಿಲ್ ಅನ್ನು ಇಂಟ್ರಡ್ಯೂಸ್ ಮಾಡಿದ್ದೇವೆ. "ಕೆಪಿಟಿಸಿಯಲ್ಲಿ" ಎಂಬ ಪದಗಳ ತರುವಾಯ "ಅಥವಾ ಸಂದರ್ಭಾನುಸಾರ ಲೈಸನ್ಸುದಾರನೊಡನೆ" ಎಂದು ಹೇಳಿ ನಮಗೆ ಅಮೆಂಡ್‌ಮೆಂಟ್ ಎಂದು ಹೇಳುತ್ತಾರೆ. ಇಲ್ಲಿ ಬಂದಾಗ, ನಾವೀಗ ಕಂಪನಿಗಳನ್ನು ಬೈಫರ್‌ಕೇಟ್ ಮಾಡುತ್ತಿದ್ದೇವೆ, ಎಂದು ಹೇಳುತ್ತಾರೆ. ನೀವು ಕೊಟ್ಟಿರುವ ಉದ್ದೇಶ ಮತ್ತು ಕಾರಣಗಳ ಹೇಳಿಕೆಯಲ್ಲಿ, ಚಾಮುಂಡೇಶ್ವರಿ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ಎಂಬ ಹೆಸರಿನ ಹೊಸದಾದ ವಿದ್ಯುಚ್ಛಕ್ತಿ ಸರಬರಾಜು ಕಂಪನಿಯನ್ನು ಸ್ಥಾಪಿಸಲು ನಿರ್ಧರಿಸಿ, ಅವರಿಗೆ ಎಂಪವರ್ ಮಾಡಲು, ಆ ಕಂಪನಿಯವರು ಏನಾದರೂ ಕಾನೂನುಬದ್ಧವಾಗಿ ಕೆಲಸಕಾರ್ಯ ಮಾಡಲು, ಬಿಲ್ ಅನ್ನು ಕೇಳಿದ್ದಾರೆ. ನಾನು ಇದನ್ನು ವಿರೋಧ ಮಾಡುವುದಿಲ್ಲ. ಕಂಪನಿಯಾಗಬೇಕು. ಡಿ-ಸೆಂಟ್ರಲೈಜ್ ಆಗಬೇಕು, ಎಲ್ಲಾ ಕಡೆ ಸೇವೆ ಬರಬೇಕು. ಆದರೆ, ಒಂದು ಮಾತನ್ನು ನಾನು ಹೇಳಬೇಕಾಗುತ್ತದೆ. ಬರೀ ಶಾಸನಗಳನ್ನು ಮಾಡಿಕೊಂಡು ಹೋದರೆ, ಏನೂ ಪ್ರಯೋಜನವಾಗುವುದಿಲ್ಲ. ಈಗಾಗಲೇ ಅವರಿಗೆ ಅನುಭವವಾಗಿದೆ. ಬೆಸ್ಕಾಂ ಆಯಿತು, ಮೆಸ್ಕಾಂ ಆಯಿತು, ಬೆಳಗಾಂ ಆಯಿತು. ಸುಧಾರಣೆ ಏನೂ ಹೆಚ್ಚಾಗಲಿಲ್ಲ. ಎಸ್ಟಾಬ್ಲಿಶ್‌ಮೆಂಟ್ ಜಾಸ್ತಿಯಾಗಿ ಹೋಗುತ್ತದೆ. ಖರ್ಚನ್ನು ಜಾಸ್ತಿ ಮಾಡಿಕೊಂಡು ಹೋಗುವುದು. ಇನ್ನೊಂದು ಕಡೆ ಸೇವೆಯನ್ನು ಅಷ್ಟೇ ಕೊಡದಿರುವುದು ರಾಜ್ಯದ ಹಿತದೃಷ್ಟಿಯಿಂದ ಅಷ್ಟೊಂದು ಒಳ್ಳೆಯದಲ್ಲ. ಈಗ ಒಬ್ಬ ಐಎಎಸ್ ಅಧಿಕಾರಿ ಇದ್ದ ಕಡೆ 5 ಜನ ಐಎಎಸ್ ಅಧಿಕಾರಿಗಳಾದರು. ಒಂದೊಂದು ಕಂಪನಿಗೂ ಒಬ್ಬೊಬ್ಬರು ಐಎಎಸ್ ಅಧಿಕಾರಿ. ಅವರ ಮೇಲೊಬ್ಬ ಐಎಎಸ್ ಅಧಿಕಾರಿ. ಇವರಿಗೇ ನೀವು ಕರ್ನಾಟಕವನ್ನು ಒತ್ತೆ ಇಡುವುದಕ್ಕೆ ಆಗುತ್ತಿದ್ದರೆ, ಮಾನ್ಯ ಸಚಿವರು ಈ ಕಡೆ ಸ್ವಲ್ಪ ನೋಡಿಕೊಳ್ಳಬೇಕು. ಕನಿಷ್ಟ ಆ ಹುದ್ದೆಯನ್ನಾದರೂ ಇಲ್ಲಿರುವ ಚೀಫ್ ಇಂಜನಿಯರ್‌ರವರಿಗೆ, ಅಲ್ಲಿ ಪ್ರಮೋಷನ್ ಆದವರಿಗೆ ಕೊಡುವುದಕ್ಕೆ ತೀರ್ಮಾನ ಮಾಡಬೇಕು. ಮೇಜರ್ ವರ್ಕ್ಸ್ ಮತ್ತೆ ನಿಮ್ಮ ಡಿಸ್ಟ್ರಿಬ್ಯೂಷನ್, ಎಲ್ಲಿಯಾದರೂ ಒಂದು ಕಡೆ ಈಗಲಾದರೂ ನಾವು ಸಂಘಟನೆ ಮಾಡಿ ಸೆಂಟ್ರಲೈಜ್ ಮಾಡಲಿಕ್ಕೆ ಮಾಡಬೇಕು. ಒಂದು ತಾಲ್ಲೂಕಿನಲ್ಲಿ ಒಂದು ಸಬ್-ಡಿವಿಜನ್ ಇರುತ್ತಿತ್ತು. ಕೆಇಬಿ ಸಮಸ್ಯೆ ಬಂದರೆ, ನಿಮ್ಮ ಡಿಸ್ಟ್ರಿಬ್ಯೂಷನ್ ಸಬ್-ಡಿವಿಜನ್ ಎಲ್ಲೋ, ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರ್‌ನಲ್ಲೋ, ರೆವಿನ್ಯೂ ಸಬ್-ಡಿವಿಜನ್‌ನಲ್ಲಿ ಹೆಡ್ ಕ್ವಾರ್ಟರ್‌ನಲ್ಲೋ ಇರುತ್ತದೆ. ಮೇಜರ್ ವರ್ಕ್ಸ್‌ನವರು ಬಂದು, ಜಿಲ್ಲಾ ಮಟ್ಟದೊಳಗೆ ಅಥವಾ ರಾಜ್ಯ ಮಟ್ಟದೊಳಗೆ ಅಧಿಕಾರಿ ಕುಳಿತಿರುತ್ತಾರೆ, ಏನಾದರೂ ಹೆಚ್ಚು ಕಡಿಮೆಯಾದರೆ ಯಾರನ್ನು ಹುಡುಕಬೇಕೆಂದು ಅರ್ಥವಾಗುವುದಿಲ್ಲ. ಲೈನ್ ಹೋಯಿತು ಎಂದರೆ ನಮಗೆ ಬರುವುದಿಲ್ಲವೆಂದು ಅಲ್ಲಿರುವ ಅಧಿಕಾರಿ ಹೇಳುತ್ತಾರೆ. ಇನ್ಯಾರೋ ವರ್ಕ್ ಹೀಗಾಗಿದೆ ಎಂದು ಹೇಳಿದರೆ ನನಗೆ ಬರುವುದಿಲ್ಲ ಎಂದು ಹೇಳುತ್ತಾರೆ. ಡಿಸ್ಟ್ರಿಬ್ಯೂಷನ್.... ಅರ್ಧ ಗಂಟೆ ಸಿಂಗಲ್ ಫೇಸ್‌ನಲ್ಲಿ ಪವರ್ ಕೊಡಿ ಜಾತ್ರೆ ನಡೆಯುತ್ತಿದೆ ಎಂದರೆ, ಅಲ್ಲಿರುವ ಸಬ್-ಡಿವಿಜನಲ್ ಅಧಿಕಾರಿಗೆ ಅಧಿಕಾರವಿಲ್ಲ. ಅದನ್ನೂ ಕೂಡ ತಾವು ಶಾಸನದಲ್ಲಿ ತರಬೇಕಾಗುತ್ತದೆ. ಅಟ್‌ಲೀಸ್ಟ್, ಒಂದೊಂದು ಸಬ್-ಡಿವಿಜನ್. ಇನ್ನೊಂದು ಶಾಸನವನ್ನು ಕಡ್ಡಾಯವಾಗಿ ಈ ಸಭೆಯಲ್ಲಿ ತರಬೇಕು. ಸ್ಟೋರ್‌ಗಳನ್ನು ವಾಪಸ್ಸು ಸಬ್-ಡಿವಿಜನ್‌ಗೆ ತರುವ ವ್ಯವಸ್ಥೆಯನ್ನು ಮಾಡಿ. ಡಿವಿಜನ್‌ಗಳ ಸ್ಟೋರ್‌ಗಳೇನಿವೆ, ಸಚಿವರೇ, ಬಹಳ ದುರಂತಕ್ಕೆ

ಸಿಕ್ಕಿಕೊಂಡಿದ್ದೇವೆ. ಅಲ್ಲಿಯ ಹೆಡ್‌ಕ್ವಾರ್ಟರ್‌ನಲ್ಲಿರುವವರಿಗೆ ತಕ್ಷಣ ಟ್ರಾನ್ಸ್‌ಫಾರ್ಮರ್ಸ್, ಕಂಬವಾಗಲಿ, ಮೆಟೀರಿಯಲ್ ಆಗಲಿ ಸಿಕ್ಕಿ, ಉಳಿದಿದ್ದನ್ನು ಬೇರೆ ತಾಲ್ಲೂಕಿನವರು ತೆಗೆದುಕೊಂಡು ಹೋಗುವ ಹಾಗಾಗಿದೆ. ಏನೂ ತಪ್ಪಾಗುವುದಿಲ್ಲ. ಇಬ್ಬರು, ಮೂವರು ಜನ ಎಇಇ ಕೊಡಿ. ಭಾರಿ ಹಣ ಉಳಿಸುತ್ತೇವೆಂದು ಏನು ಡಿವಿಜನ್‌ಗೆ ಸ್ಟೋರ್‌ಗಳನ್ನು ತೆಗೆದುಕೊಂಡು ಹೋದಿರಿ, ಮತ್ತೆ ರೀಥಿಂಕ್ ಮಾಡಬೇಕು. ಈ ಶಾಸನ ಆಡಳಿತಾತ್ಮಕವಾಗಿ ಆಗಬೇಕಾಗಿರುವ ಶಾಸನವೆಂದು ಹೇಳಿ, ಇದನ್ನು ಒಪ್ಪಿ, ಮಾತನಾಡಲು ಅನುಮತಿ ಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್(ಚಾಮರಾಜನಗರ) : ಮಾನ್ಯ ಅಧ್ಯಕ್ಷರೆ....

ಅಧ್ಯಕ್ಷರು : ವಾಟಾಳ್ ನಾಗರಾಜ್‌ರವರೆ, ಬಿಸಿನೆಸ್ ಬಹಳಷ್ಟು ಪೆಂಡಿಂಗ್ ಇವೆ. ಸ್ವಲ್ಪ ಬಹಳ ಬೇಗ ಎಲ್ಲಾ ಮುಗಿಸಿ.

ಶ್ರೀ ವಾಟಾಳ್ ನಾಗರಾಜ್(ಚಾಮರಾಜನಗರ) : ಈ ಸದನ ಇರುವುದೇ ಮಸೂದೆ ಬಗ್ಗೆ ಚರ್ಚೆ ಮಾಡುವುದಕ್ಕೆ. ನಮಗೆ ಅದೊಂದೇ ಉಳಿದಿರುವುದು. ಇನ್ನ್ಯಾವುದೂ ಇಲ್ಲಿಲ್ಲ.

ಅಧ್ಯಕ್ಷರು : ಬೇಗ ಮುಗಿಸಿ.

ಶ್ರೀ ವಾಟಾಳ್ ನಾಗರಾಜ್ : ಇವತ್ತು ಇದಕ್ಕೆ ಭಂಗ ಬಂದರೆ ಅಪಾಯಕ್ಕೆ ಸಿಕ್ಕಿ ಹಾಕಿಕೊಳ್ಳುತ್ತೇವೆ. ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣಾ(ತಿದ್ದುಪಡಿ) ವಿಧೇಯಕ ಇದರಲ್ಲಿ ತಾವು...

ಶ್ರೀ ಮಲ್ಲಿಕಾರ್ಜುನ ಖರ್ಗೆ(ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು) : ಮಾನ್ಯ ರೇವಣ್ಣನವರು ಇದನ್ನು ತಂದಂಥ ಉದ್ದೇಶವೇನೆಂದರೆ, ಚಾಮರಾಜನಗರಕ್ಕೆ ಅನುಕೂಲವಾಗಲಿ ಚಾಮುಂಡೇಶ್ವರಿ ಹೆಸರಿನಲ್ಲಿ ಚಾಮರಾಜನಗರಕ್ಕೆ ವಿದ್ಯುಚ್ಛಕ್ತಿ ಪೂರೈಕೆ ಸತತವಾಗಿ ನಡೆಯಬೇಕೆನ್ನುವ ದೃಷ್ಟಿಯಿಂದ ಈ 5 ಜಿಲ್ಲೆಗಳು ಸೇರಿ, ನಿಮಗೆ, ಯಡಿಯೂರಪ್ಪನವರಿಗೆ, ರೇವಣ್ಣನವರಿಗೆ ಅನುಕೂಲವಾಗಬೇಕೆಂದು ಇದನ್ನು ತಂದಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಚಾಮರಾಜನಗರದ ಬಗ್ಗೆ ಎಷ್ಟು ಅಭಿಮಾನ, ಪ್ರೀತಿ ಇದೆ. ನಿಮಗೆ ಎಷ್ಟು ಇದೆ, ಅಷ್ಟೇ ಪ್ರೀತಿ ಅವರಿಗೂ ಇದೆ. ನನಗೆ ನಿಜಕ್ಕೂ ಸಂತೋಷವಾಗಿದೆ. ನಾವು ಬೆಂಬಲ ಕೊಡುತ್ತಿರಲಿಲ್ಲ. ಬೆಂಬಲ ಕೊಡುವುದಕ್ಕೇ ನಾನು ನಿಂತಿರುವುದು. ನಾನು ಖಂಡಿತ ಇದನ್ನು ವಿರೋಧ ಮಾಡುವುದಿಲ್ಲ. ಈಗ ತಾವು ಚಾಮುಂಡೇಶ್ವರಿ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ಎಂದು ಇಟ್ಟಿದ್ದೀರಿ. ಏನು ಚಾಮುಂಡೇಶ್ವರಿ ಹೆಸರು ಎಂದು ತಮಗೆ ಹೇಗೆ ಆಯಿತೋ ಗೊತ್ತಿಲ್ಲ. ಬೇರೆ ದೇವರು ಸಿಗಲಿಲ್ಲವೇ ಹೇಗೆ? ನನಗೆ ಅರ್ಥವಾಗಲಿಲ್ಲ. ನನಗೆ ವಿರೋಧವಿಲ್ಲ. ಪಾಪ, ನೀವು ಯಾರ ಶಾಸ್ತ್ರ ಕೇಳುತ್ತೀರೋ ಏನೋ... ಏಕೆಂದರೆ, ನೀವು ಶಾಸ್ತ್ರ ಕೇಳುತ್ತಿರುತ್ತೀರಿ. ನಿಮ್ಮ ಅನುಭವದ ಮೇಲೆ ಹೇಳುವುದು. ಚಾಮುಂಡೇಶ್ವರಿ ಹೆಸರು ಇಡಬೇಕಾದರೆ ಯಾರೋ ಹೇಳಿರಬಹುದು. ಸಿದ್ಧರಾಮಯ್ಯನವರು ಹೇಳಿದರೇ? ಅವರು ಹೇಳುವುದಿಲ್ಲ. ಯಾವತ್ತೂ ನಮ್ಮ ಅಧ್ಯಕ್ಷರೂ ಹೇಳುವುದಿಲ್ಲ. ಸಿದ್ಧರಾಮಯ್ಯನವರೂ ಹೇಳುವುದಿಲ್ಲ. ನನಗೆ ಗೊತ್ತಿರುವ ಹಾಗೆ. ಸಿದ್ಧರಾಮಯ್ಯನವರು ದೇವರ ಹೆಸರು ಹೇಳುವುದಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಚಾಮುಂಡೇಶ್ವರಿ ಮತಕ್ಷೇತ್ರ ಹೌದೋ, ಅಲ್ಲವೋ ಚಾಮುಂಡೇಶ್ವರಿ ಅವರ ಮತ ಕ್ಷೇತ್ರ. ಚಾಮುಂಡೇಶ್ವರಿ ಅದು ದೇವರು. ಚಾಮರಾಜನಗರ ನಿಮ್ಮದು. ಸೋ, ಇವೆಲ್ಲಾ ಸೇರಿಕೊಂಡು ಇಲ್ಲಿ ಬಂದಿದೆ.

ಶ್ರೀ ವಾಟಾಳ್ ನಾಗರಾಜ್ : ಚಾಮುಂಡೇಶ್ವರಿ ಮೈಸೂರು, ನಮ್ಮದು ಚಾಮರಾಜೇಶ್ವರ ದೇವಸ್ಥಾನ ಇದು ನಗರದಲ್ಲಿರತಕ್ಕಂಥದ್ದು, ಸ್ವಲ್ಪ ಹೆಚ್ಚು ಕಡಿಮೆ ಕರೆಯುವಾಗ ಇದು ನಮ್ಮದೇ ಎಂದು ಅಂದುಕೊಳ್ಳಬಹುದು, ಸ್ವಲ್ಪ ಅವರದ್ದು ಎಂದು ಹೇಳಬಹುದು. ಅದರಲ್ಲಿ ಏನು ತಲೆಕೆಡಿಸಿಕೊಳ್ಳಬೇಕಾಗಿಲ್ಲ. ಆದರೆ ನೀವು ಮೆಸ್ಕಾಂ ನಿಂದ ಚಾಮುಂಡೇಶ್ವರಿ ಕಂಪನಿ ಎಂದು ಹೆಸರು ಇಡುತ್ತೇವೆಂದು ತಾವು ಹೇಳಿದಿರಿ, ಇದಕ್ಕೆ ನನಗೇನೂ ವಿರೋಧವಿಲ್ಲ, ನಾನು ವಿರೋಧ ಮಾಡಲಿಲ್ಲ. ನೀವು ಯಾವ ದೇವರ ಹೆಸರನ್ನಾದರೂ ಇಟ್ಟುಕೊಳ್ಳಬಹುದು, ನಮ್ಮದೇನೂ ಒಂದು ಮೂವತ್ತೆಂಟೂವರೆ ಸಾವಿರ ದೇವರುಗಳು ಇವೆ, ಯಾವ ದೇವರ ಹೆಸರನ್ನಾದರೂ ಇಟ್ಟುಕೊಳ್ಳಬಹುದು. ನಮಗೆ ಅದರ ಬಗ್ಗೆ ತಕರಾರು ಇಲ್ಲ. ಆದರೆ ನಾನು ಹೇಳುವುದು ಏನೆಂದರೆ, ಇದೇ ನಿಮ್ಮ ತಲೆಯಲ್ಲಿ ಹೇಗೆ ಬಂತು, ಬೇರೆ ದೇವತೆಗಳ ಹೆಸರು ಬರಲಿಲ್ಲವಲ್ಲಾ ಎಂದು ನಾನು ಸುಮ್ಮನೆ ಹೇಳಿದೆ ಅಷ್ಟೆ. ಸಂತೋಷ. ಬೇರೆ ಏನೂ ಇಲ್ಲ, ಇದು ಬಹಳ ಸಣ್ಣ ಸುಧಾರಣೆ, ಇದು ಬಹುಶಃ ಮಂಗಳೂರಿನಿಂದ ಬಿಡಿಸಿ ನಮ್ಮನ್ನೆಲ್ಲಾ ಸೇರಿಸಿ ಒಂದು ಕಡೆ ಬಹಳ ಕಷ್ಟವಾಗುತ್ತಿತ್ತು ಮಂಗಳೂರಿಗೆ ಹೋಗಿ ಬರುವುದು, ಏನೋ ಸುಧಾರಣೆ ಮಾಡಿದ್ದೀರಿ, ಈ ಸುಧಾರಣೆ ಅಂದರೆ ಏನು? ಬಹುಶಃ ಈ ವಿಧೇಯಕವನ್ನು ಬಿಟ್ಟು ಸ್ವಲ್ಪ ಹೊರಗೆ ಹೋಗುತ್ತೇನೆ, ಈ ವಿಧೇಯಕ ಇಷ್ಟೇ. ಸುಧಾರಣೆ ಮಾಡಿದ್ದೀರಿ ಸಂತೋಷ. ಇದಕ್ಕೆ ನಿಮಗೆ ಅಭಿನಂದನೆ ಅಲ್ಲಿ ಮಾಡಿದ್ದರಿಂದ ಬಹಳ ಹತ್ತಿರವಾಯಿತು. ರೈತರಿಗೆ ಜನ ಸಾಮಾನ್ಯರಿಗೆ ಗ್ರಾಹಕರಿಗೆ ಇದು ನಿಜಕ್ಕೂ ಬಹಳ ಹತ್ತಿರವಾಯಿತು. ಈ ಒಳ್ಳೆಯ ಮಸೂದೆಯನ್ನು ನಾನು ಸ್ವಾಗತಿಸುತ್ತೇನೆ. ಒಂದು ಸುಧಾರಣೆ ಎಂದರೆ, ಕೇವಲ ಈ ರೀತಿ ನೀವು ಉಪ ಪ್ರಕರಣದೊಡನೆ ಕೆಪಿಟಿಸಿ ಯೊಡನೆ ಮತ್ತು ಕೆಪಿಟಿಸಿ ಯಲ್ಲಿ ಎಂಬ ಪದಗಳ ತರುವಾಯ ಅನುಕ್ರಮವಾಗಿ ಅಥವಾ ಸಂದರ್ಭಾನುಸಾರವಾಗಿ, ಈ ರೀತಿ ಇದು ಸುಧಾರಣೆಯಲ್ಲ, ಇದು ಪದಗಳ ಸುಧಾರಣೆಯಾಗುತ್ತದೆ. ನಿಜಕ್ಕೂ ನೀವು ಸುಧಾರಣೆ ಮಾಡಬೇಕು ಎಂದಿದ್ದರೆ, ರೈತರಿಗೆ ಉಚಿತವಾಗಿ ವಿದ್ಯುತ್ ಕೊಡುತ್ತೇವೆಂದು ಹೇಳಿದ್ದರೆ, ಎಲ್ಲಾ ವರ್ಗದ ಜನಕ್ಕೆ ಅನುಕೂಲವಾಗುತ್ತಿತ್ತು. ಇವತ್ತು ನಾನು ಹೇಳುತ್ತೇನೆ, ಸಮ್ಮಿಶ್ರ ಸರಕಾರ ಬಂದ ತಕ್ಷಣ ಒಂದು ಹೊಸ ಈ ರಾಜ್ಯಕ್ಕೆ ಚೈತನ್ಯ ಪೂರ್ಣವಾದಂಥ ಒಂದು ಹೊಸ ವಿಚಾರವನ್ನು ಒಂದು ಆದರ್ಶವನ್ನು ಒಂದು ತತ್ವವನ್ನು, ನಮ್ಮ ಸರಕಾರ ಬಂದಿದೆ, ನಾವು ಎಲ್ಲರೂ ಸೇರಿದ್ದೇವೆ, ನಾವು ಆದರ್ಶ, ಒಂದು ಕಡೆ ಕಾಂಗ್ರೆಸ್ ಇನ್ನೊಂದು ಕಡೆ ಜಾತ್ಯಾತೀತ ಜನತಾದಳ ಇಬ್ಬರೂ ಸೇರಿದ್ದೇವೆ, ಇಬ್ಬರೂ ಸೇರಿ ನಾವು ರೈತರಿಗೆ ಉಚಿತವಾದ ವಿದ್ಯುತ್ ಕೊಡುತ್ತೇವೆಂದು ನೀವು ಹೇಳಿದ್ದರೆ, ಎಷ್ಟು ಜನ ಸಂತೋಷಪಡುತ್ತಿದ್ದರು. ನೀವು ಏನೂ ಹೇಳಲಿಲ್ಲ. ಅದೇ ರಾಗ, ಅದೇ ಬಾಟಲು, ಹಳೆಯ ಮದ್ಯ ಹೊಸ ಬಾಟಲು ಇನ್ನೇನೂ ಬೇರೆ ಬದಲಾವಣೆಯನ್ನು ನಾವು ಕಾಣಲಿಲ್ಲ. ನಿಮ್ಮ ಒಂದು ಹೊಸ ಬದಲಾವಣೆಯನ್ನು ತೋರಿಸಬೇಕಾಗಿತ್ತು. ನಿಜಕ್ಕೂ ನಾವು ಬಂದಿದ್ದೇವೆ, ಬೇರೆ ರೂಪದಲ್ಲಿ ನಾವು ಈ ಹಣವನ್ನು ಭರಿಸಬೇಕು, ರೈತರಿಗೆ ನಾವು, ಬೇರೆ ರಾಜ್ಯದಲ್ಲಿ ಎರಡು–ಮೂರು ರಾಜ್ಯದಲ್ಲಿ......

ಶ್ರೀ ಬಿ.ಎಸ್. ಯಡಿಯೂರಪ್ಪ(ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಮಾನ್ಯ ರೇವಣ್ಣನವರು ಬಹಳ ಬುದ್ಧಿವಂತರು ನೀವು ಅವರನ್ನು ಹಗುರವಾಗಿ ತೆಗೆದುಕೊಳ್ಳಬೇಡಿ.

ಶ್ರೀ ವಾಟಾಳ್ ನಾಗರಾಜ್ : ನಾನು ದಡ್ಡ ಎಂದು ಹೇಳಿಲ್ಲವಲ್ಲಾ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅದಕ್ಕೇ ನಾನು ಹೇಳಿದ್ದು, ಅವರು ಬಹಳ ಸ್ಪಷ್ಟವಾಗಿರುವಂಥದ್ದು ಏನೆಂದರೆ, ಈ ಬಜೆಟ್ ಇದೆಯಲ್ಲಾ, ಮಾನ್ಯ ಸಿದ್ಧರಾಮಯ್ಯನವರು, ಮಾನ್ಯ ರೇವಣ್ಣನವರು ಉಳಿದವರೆಲ್ಲರೂ ಮಾತನಾಡಿಕೊಂಡಿದ್ದಾರೆ. ಇವರು ರೈತರ ಸಾಲ ಮನ್ನಾ ಮಾಡುತ್ತೇವೆಂದು ಹೇಳುವುದು, ರೈತರ ಪಂಪ್‌ಸೆಟ್ಟುಗಳಿಗೆ ಉಚಿತ ವಿದ್ಯುತ್ ಕೊಡುತ್ತೇವೆಂದು ಹೇಳಿ ಚುನಾವಣೆಗೆ ಹೋಗುವವರು ಇದ್ದಾರೆ. ಇಷ್ಟು ಬೇಗ ಹೇಳಿದರೆ, ಬಜೆಟ್ ಸಮಯದಲ್ಲಿ ಬಜೆಟ್ ಭಾಷಣದಲ್ಲಿ ರೈತರ ಪಂಪ್ ಸೆಟ್ಟಿನ ಮೇಲಿನ ಸಂಪೂರ್ಣ ಮನ್ನಾನೂ ಆಗುತ್ತದೆ, ರೈತರ ಸಾಲನೂ ಮನ್ನಾ ಆಗುತ್ತದೆ, ಏಕೆಂದರೆ, 11ನೇ ಫೈನಾನ್ಸ್ ಕಮೀಷನ್ ಬಂದಾಗ ಮಾನ್ಯ ಸಿದ್ಧರಾಮಯ್ಯನವರೇ ಈ ರಾಜ್ಯದ ರೈತರ ಸಾಲ ಮನ್ನಾ ಆಗಬೇಕೆಂದು ಮುಂದಿಟ್ಟಿದ್ದರು, ಅದಕ್ಕೆ ಬದ್ಧರಾಗಿದ್ದಾರೆ, ಬಜೆಟ್‌ನಲ್ಲಿ ಅದನ್ನೆಲ್ಲಾ ಹೇಳುತ್ತಾರೆ. ಅದಕ್ಕೆ ಅವಸರ ಮಾಡಬೇಡಿ ಎಂದು ಹೇಳಿದೆ.

ಶ್ರೀ ವಾಟಾಳ್ ನಾಗರಾಜ್ : ನನಗೇನೂ ಇವರು ಭಾಷಣ ಮಾಡುವುದಕ್ಕೆ, ಘೋಷಣೆ ಮಾಡುವುದಕ್ಕೆ ಚೆನ್ನಾಗಿರುತ್ತದೆ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಅಲ್ಲಿ ಕುಳಿತಿದ್ದಾರೆ ಅವರು ಕಾಂಗ್ರೆಸ್ಸಿನ ಪರವಾದಂಥ ಮುಖಂಡರು ಅಲ್ಲಿ ಇದ್ದಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು, 100 ಪರ್ಸೆಂಟ್ ನಿಮ್ಮ ಮಾತು ಕೇಳಿಕೊಂಡು ಇಲ್ಲಿ ಬೆಳಿಗ್ಗೆಯಿಂದ ಇಲ್ಲಿ ಕುಳಿತರಲ್ಲಾ ಎಂಬುದು ನಮಗೆ ಅರ್ಥವಾಗುತ್ತಿಲ್ಲ.

ಶ್ರೀ ವಾಟಾಳ್ ನಾಗರಾಜು : ಅವರು ಇಲ್ಲಿ ಕುಳಿತಿದ್ದಕ್ಕೆ ನಾನು ಸಂತೋಷ ಪಡುತ್ತೇನೆ, ಈ ಸದನಕ್ಕೆ ಗೌರವ, ನಾನು ಅವರಿಗೆ ಹೇಳಿದೆ, ಅಲ್ಲಿ ಹೋಗಿ ಕುಳಿತು ಕೊಳ್ಳುತ್ತೀರಿ ಇದು ಏನು ಇದು; ಇಲ್ಲಿ ಕುಳಿತುಬಿಡಿ, ಹೋಗಬೇಡಿ. ಇನ್ನು ನೀವು ಅಲ್ಲಿ ಹೋದರೆ ನಾವು ಧರಣಿ ಮಾಡಬೇಕಾಗುತ್ತದೆ. ಇದು ಸರಿಯಿಲ್ಲ. ನೀವು ಹೋಗಬೇಡಿ. ನೀವು ಇಲ್ಲಿ ಇದ್ದರೆ ಚೆನ್ನಾಗಿರುತ್ತದೆ. ನೀವು ಗಂಭೀರವಾಗಿ ಕುಳಿತುಕೊಳ್ಳಿ. ನಾನು ತಮಗೆ ಏನು ಹೇಳುತ್ತೇನೆಂದರೆ, ತಾವು ಮಾನ್ಯ ಕಾಂಗ್ರೆಸ್ಸಿನ ಮುಖಂಡರು, ಜಾತ್ಯಾತೀತ ಜನತಾದಳದ ಮುಖಂಡರು ಮಾನ್ಯ ಪ್ರಕಾಶ್‌ರವರು, ನೀವು ಎಲ್ಲಾ ಸಮಾಜವಾದ ಸಿದ್ಧಾಂತಕ್ಕೆ ಸೇರಿದವರು, ಮಾನ್ಯ ಪಟೇಲ್‌ರವರ ಜೊತೆಯಲ್ಲಿ ಬಂದವರು, ಓಂದೆ ಅನೇಕ ಭಾಷಣಗಳನ್ನು ಮಾಡಿರತಕ್ಕಂಥವರು. ಪುಸ್ತಕ ಬರೆದಿರತಕ್ಕಂಥವರು, ಪುಸ್ತಕ ಓದಿರತಕ್ಕಂಥವರು, ವಿಚಾರ ತಿಳಿದಿರತಕ್ಕಂಥವರು ನೀವು, ಈ ಸಂದರ್ಭದಲ್ಲಿ ನೀವು ಒಂದು ತೀರ್ಮಾನಕ್ಕೆ ಬರಬೇಕಾಗಿತ್ತು. ಬರೀ ಮಾತಲ್ಲ ಮಾನ್ಯ ಮುಖ್ಯಮಂತ್ರಿಗಳು, ಮೊನ್ನೆ ಸಿಟ್ಟಾಗಿದ್ದನ್ನು ನೋಡಿದೆವು. ಯಡಿಯೂರಪ್ಪನವರಿಗೆ, ನೀವು ಇಲ್ಲಿ ಕುಳಿತುಕೊಳ್ಳಬಾರದು ಎಂದು ನಾವು ಅಲ್ಲಿ ಸೇರಿಕೊಂಡೆವು ಎಂದು ಹೇಳಿದರು. ಅದು ಒಂದೇ ತೀರ್ಮಾನವೇ ನಿಮ್ಮದು? ಬೇರೆ ಇನ್ನೇನೂ ಇಲ್ಲವೆ? ಅವರು ಕುಳಿತುಕೊಳ್ಳದೇ ಇರುವುದು ಈ ದೇಶಕ್ಕೆ ಉಪಕಾರವೆಂತಲ್ಲ. ನೀವು ಇಬ್ಬರೂ ಕರ್ನಾಟಕ ರಾಜ್ಯದಲ್ಲಿ ಇದೊಂದು ಹೊಸ ಪ್ರಯೋಗ, ಸಮ್ಮಿಶ್ರ ಸರಕಾರ ಇದೊಂದು ಹೊಸ ಪ್ರಯೋಗ. ಈ ಹೊಸ ಪ್ರಯೋಗದಲ್ಲಿ ನೀವು ನಾಡಿನ ಜನತೆಗೆ ಅದೇ ವಿದ್ಯುಚ್ಛಕ್ತಿ, ಅದೇ ಆರು ಗಂಟೆ, ಎಂದು ಹೇಳುವುದು ಮೂರು ಗಂಟೆ ಕೊಡುವುದು, ಅದೇ ರೈತರಿಗೆ ತೊಂದರೆ. ಇದು ಅಲ್ಲ. ಹೊಸದಾಗಿ ನಮ್ಮ ಸರ್ಕಾರ ಬಂದಿದೆ, ನಾವು ಇವತ್ತು ರೈತರಿಗೆ ಸಂಪೂರ್ಣವಾಗಿ ಉಚಿತವಾಗಿ ವಿದ್ಯುತ್‌ನ್ನು ಕೊಡುತ್ತಾ ಇದ್ದೇವೆ. ಹಿಂದೆ ತಮಗೆ ಗೊತ್ತಿರುವಂತೆ. ಗುಂಡುರಾಯರು ಮುಖ್ಯಮಂತ್ರಿಯಾಗಿದ್ದಾಗ ಆ ಕಾಲದಲ್ಲಿ

ಇದೇ ರಾಜ್ಯದಲ್ಲಿ ಉಚಿತವಾದಂಥ ವಿದ್ಯುಚ್ಛಕ್ತಿಯನ್ನು ಕೊಟ್ಟರು. ಇವತ್ತು ಏನಾಗಿದೆ? ನನಗೆ ಅರ್ಥವಾಗಲಿಲ್ಲ. ನೀವು ರೈತರ ಬಗ್ಗೆ ನಿಮಗೆ ಕಾಳಜಿ ಇದ್ದರೆ, ರೈತರ ಬಗ್ಗೆ ಪ್ರಾಮಾಣಿಕತೆ ಇದ್ದರೆ, ಬರಿ ಮಾತನಾಡತಕ್ಕಂಥದ್ದಲ್ಲ. ಪ್ರಾಮಾಣಿಕತೆ ಇದ್ದರೆ ನಾವು ಎಷ್ಟೇ ಹೊರೆ ಯಾವ ಮೂಲಕವಾದರೂ ಹೊರುತ್ತೇವೆ. ಅದನ್ನು ನೀವು ತೀರ್ಮಾನ ಮಾಡಿದ್ದರೆ, ನಾನು ನಿಜಕ್ಕೂ ನಿಮ್ಮನ್ನು, ನಿಮ್ಮ ಸರ್ಕಾರ ಬಂದ ತಕ್ಷಣ ಈ ಸದನದಲ್ಲಿ ಮೊದಲಿನ ಘೋಷಣೆ ಆ ಘೋಷಣೆ ನೀವು ಮಾಡಿದ್ದರೆ ಇಡೀ ರೈತರು ನಿಮ್ಮ ಬಗ್ಗೆ ನಿಜವಾಗಲೂ ಕೂಡ, ಕಾಳಜಿ ಪ್ರೀತಿ, ವಿಶ್ವಾಸ ಎಲ್ಲಾ ಇಟ್ಟುಕೊಳ್ಳುತ್ತಿದ್ದರು. ಹಿಂದೆ ಇದ್ದ ಎಲ್ಲಾ ಸರ್ಕಾರಗಳು ಏನು ಮಾಡಿದವು ಅದನ್ನು ಮಾಡುವುದು ಬಿಟ್ಟರೆ, ನಿಮ್ಮ ಮೈತ್ರಿ ಸರ್ಕಾರ, ಸಮ್ಮಿಶ್ರ ಸರಕಾರ, ಏನಾದರೂ ಹೊಸ ಚಿಂತನೆ ತಾವು ಕೊಟ್ಟಿದ್ದರೆ ಇಡೀ ದೇಶದ ಜನ, ನೋಡ್ರಿ ಕರ್ನಾಟಕ ಸರ್ಕಾರ ಅದೆಷ್ಟೇ ತೊಂದರೆಯಾದರೂ ಚಿಂತೆಯಿಲ್ಲ ರೈತರಿಗೆ ಅನುಕೂಲ ಮಾಡಿದೆ ಎಂದು ಹೇಳುತ್ತಿದ್ದರು.

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು) : ಮಾನ್ಯ ಅಧ್ಯಕ್ಷರೆ, ನಮ್ಮ ಸಮ್ಮಿಶ್ರ ಸರಕಾರ ಬರುತ್ತಲೇ ಮೊದಲನೇ ಸಾರಿ 6 ಪರ್ಸೆಂಟ್ ಬಡ್ಡಿಗೆ ನಾವು ರೈತರಿಗೆಲ್ಲಾ ಸಾಲ ಕೊಡುವುದಕ್ಕೆ ತೀರ್ಮಾನ ಮಾಡಿದ್ದೇವೆ. ಸಮ್ಮಿಶ್ರ ಸರಕಾರ ರೈತರ ಪರ ಎನ್ನುವುದನ್ನು ಮೊದಲನೆಯ ದಿನ, ಹೋದ ಬಜೆಟ್‌ನಲ್ಲಿಯೇ ಮಂಡಿಸಿದ್ದೇವೆ. ಅದನ್ನು ನೀವು ಜ್ಞಾಪಿಸಿಕೊಳ್ಳದೇ ರೈತರಿಗೆ ನೀವು ಏನೂ ಮಾಡಿಲ್ಲ. ರೈತರಿಗೆ ಏನೂ ಆಗಿಲ್ಲ ಎನ್ನುವ ಮಾತನ್ನು ಹೇಳಿದರೆ ಹೇಗೆ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಯಾರಿಗೆ ಕೊಟ್ಟಿದ್ದೀರಿ? ಎಷ್ಟು ಜನ ರೈತರಿಗೆ ಕೊಟ್ಟಿದ್ದೀರಿ? ಯಾರಿಗೆ ಕೊಟ್ಟಿದ್ದೀರಿ?

ಶ್ರೀ ಕೆ. ಶ್ರೀನಿವಾಸಗೌಡ : ನೋಡ್ರೀ ಯಾರು ಸರಿಯಾಗಿ ಹಳ್ಳಿಗಳಲ್ಲಿ ಹೋಗಿ ಪಿಎಲ್‌ಡಿ ಬ್ಯಾಂಕ್‌ನಲ್ಲೋ ಡಿಸಿಸಿ ಬ್ಯಾಂಕ್‌ನಲ್ಲೋ ಕೆಲಸ ಮಾಡಿರುವವರಿಗೆ ಹೇಳಿ, ನಮಗೆ ಹೇಳಿದರೆ ಹೇಗೆ? ಇವತ್ತು 6 ಪರ್ಸೆಂಟ್ ಬಡ್ಡಿಯ ದರದಲ್ಲಿ ರೈತರಿಗೆ ಸಾಲವನ್ನು ಕೊಡುತ್ತಿದ್ದೇವೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಯಾರಿಗೆ ಕೊಟ್ಟಿದ್ದಾರೆನ್ನುವುದು ಹೇಳಿಬಿಟ್ಟರೆ, ಎಷ್ಟು ಜನಕ್ಕೆ ಕೊಟ್ಟಿದ್ದಾರೆನ್ನುವುದು ಹೇಳಲಿ.

(ಗೊಂದಲ)

ಶ್ರೀ ಕೆ. ಶ್ರೀನಿವಾಸಗೌಡ : ಇಡೀ ದೇಶದಲ್ಲಿ ಒಂದು ಹೊಸ ಪ್ರಯೋಗವನ್ನು ನಮ್ಮ ರಾಜ್ಯದಿಂದಲೇ ಪ್ರಾರಂಭ ಮಾಡಿದ್ದೇವೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಯಾರಿಗೂ ಒಂದು ರೂಪಾಯಿ ಕೊಟ್ಟಿಲ್ಲ ಸುಳ್ಳು ಹೇಳುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು : ಈಗ ಇದು ಅಡ್ಡದಾರಿಗೆ ಹೋಗುತ್ತಿದೆ, ದಯಮಾಡಿ ಮಾನ್ಯ ವಾಟಾಳ್‌ರವರೇ ಮಾತನಾಡಿ. ದಯಮಾಡಿ ಸಹಕರಿಸಬೇಕು. ಬೇರೆ ಬೇರೆ ಸದಸ್ಯರು ಇನ್ನು ಮಾತನಾಡುವವರು ಇದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಮಾಜಿ ಸಂಯುಕ್ತ ಜನತಾದಳದ ಮುಖಂಡರಾದ ಮಾನ್ಯ ಶ್ರೀನಿವಾಸಗೌಡರವರೇ, ತಾವು ಕಾಂಗ್ರೆಸ್‌ಗೆ ಹೋದ ಮೇಲೆ ತಮ್ಮ ಧ್ವನಿ, ತಮ್ಮ ಏರು ಧ್ವನಿ, ನಿಮ್ಮ ವಿಚಾರಧಾರೆಗಳು ಹಳೆಯದೆಲ್ಲಾ ಎಲ್ಲಿ ಹೋಯಿತು? ಇವೆಲ್ಲವನ್ನೂ ಎಲ್ಲಿ ಇಟ್ಟಿರಿ? ಈ ಕಡೆ ಕುಳಿತಿದ್ದಾಗ ನೀವು ಮಾತನಾಡುತ್ತಿದ್ದರಲ್ಲಾ. ನಿಮಗೆ ಸ್ವಲ್ಪವಾದರೂ ಮಾನ್ಯ ಬೈರೇಗೌಡರವರ ಬಗ್ಗೆ

ಚಿಂತನೆ ಇದೆಯೇ? ಅವರು ಇದೇ ಸ್ಥಳದಲ್ಲಿ ಕುಳಿತುಕೊಂಡು, ರೈತರ ಬಗ್ಗೆ ಏನೇನು ಮಾತನಾಡಿದ್ದಾರೆ, ಅವರಿಗೆ ಎಷ್ಟು ಕಾಳಜಿ ಇತ್ತು. ಅವರ ಜೊತೆಯಲ್ಲಿದ್ದಂಥ ನೀವು ಎಲ್ಲಾ ಸ್ನೇಹಿತರು, ಇಷ್ಟು ಬೇಗ ಬದಲಾವಣೆ ಆಗಿಬಿಟ್ಟಿರಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು) : ನಮ್ಮ ಸಮ್ಮಿಶ್ರ ಸರಕಾರ ಬಂದ ಮೇಲೆ ಏನೂ ಬದಲಾವಣೆ ಆಗಿಲ್ಲ ಬದಲಾವಣೆ ಏನೂ ಮಾಡಿಲ್ಲವೆಂದು ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದರು. ಮುಂಜಾನೆ ಮಾನ್ಯ ಮುಖ್ಯಮಂತ್ರಿಗಳು ಮಾತನಾಡುವಾಗ ಮಾನ್ಯ ವಾಟಾಳ್ ನಾಗರಾಜ್ ರವರು ಒಂದು ಪ್ರಶ್ನೆ ಕೇಳಿದರು. ಕಾಸರಗೋಡು ಬಗ್ಗೆ ಏನು ಮಾಡಿದಿರಿ ಎಂದು ಕೇಳಿದಾಗ ನಿಮ್ಮನ್ನೇ ಕೇಳಿ ಮಾಡುತ್ತೇನೆಂದು ಅವರು ಹೇಳಿದರು. ಹಾಗೆ, ಈಗ ಸಮ್ಮಿಶ್ರ ಸರಕಾರ ಬಂದ ಮೇಲೆ ನೀವು ಏನು ಹೇಳುತ್ತಾ ಇದ್ರಿ ಅದನ್ನೇ ಮಾಡುತ್ತಿದ್ದೇವೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾವು ಹೇಳುತ್ತಿರುವುದು ನೀವು ಕೇಳುತಿದೀರಿ ಅಷ್ಟೇ. ಏನೂ ಮಾಡಲಿಲ್ಲ.

ಶ್ರೀ ವಾಟಾಳ್ ನಾಗರಾಜ್ : ನನಗೆ ಅನ್ನಿಸುತ್ತದೆ ಇವೆಲ್ಲಾ ನೀವು ಮಾಡೇ ಮಾಡುತ್ತೀರಿ. ಗಡಿನಾಡು ಇವೆಲ್ಲಾ ಮಾಡುತ್ತೀರಿ. ನಿಜಕ್ಕೂ ಬೇಕಾಗಿರುವಂಥದ್ದು. ಯಾವ ಸಮಸ್ಯೆ ಇದೆ. ನಿಜಕ್ಕೂ ರೈತರಿಗೆ ಒಂದು ಹೊಸ ಚಿಂತನೆ ಮಾಡಿ ಕೊಡಬೇಕಾಗಿತ್ತು. ಶೇಕಡ 6 ಪರ್ಸೆಂಟ್ ಬಡ್ಡಿ ಕೊಟ್ಟು ಇಡೀ ರಾಜ್ಯದ ಮಕ್ಕಳನ್ನು ಬಡ್ಡಿಮಕ್ಕಳನ್ನಾಗಿಸಬೇಕೆ? ಅವರ ತಲೆಯ ಮೇಲೆ ಬಡ್ಡಿ ಹೊರಸಿ. ಅವರು ಯಾವಾಗಲೂ ಹೊರಲಾರದೇ. ಬಡ್ಡಿ ಕಟ್ಟಲಾರದೆ, ಆ ಪರಿಸ್ಥಿತಿ ಮಾಡಬೇಕೆಂದು ಮಾಡಿದ್ದೀರಿ. ಅದು ಅಲ್ಲ. ನೀವು ಈಗ ಹೇಳಿ, ರೈತರ ಬಗ್ಗೆ ತಾವು ಈಗ ಕೃಷಿ ಸಚಿವರು ಆಗಿದ್ದೀರಿ. ಇವತ್ತು ಇಡೀ ರಾಜ್ಯದಲ್ಲಿ ಏನಾಗಿದೆ ಎಷ್ಟರಮಟ್ಟಿಗೆ ಕೃಷಿ ಬೆಳವಣಿಗೆ ಆಗಿದೆ, ಎಷ್ಟು ರೋಗ ಬರುತ್ತದೆ. ಎಲ್ಲಾ ಬೆಳೆಯಲ್ಲಿ ಯಾವುದಾದರೂ ರೋಗ ಬಾರದೇ ಇರತಕ್ಕಂಥ ಬೆಳೆ ಯಾವುದು ಇದೆ? ರೈತ ಬೆಳೆದ ತಂದಿರತಕ್ಕಂಥ ಯಾವುದು ಮಾಡುವುದಕ್ಕೆ ಸಾಧ್ಯ. ಯಾವುದೂ ಮಾಡುವುದಕ್ಕೆ ಸಾಧ್ಯವಿಲ್ಲ. ಆದುದರಿಂದ, ರೈತನ ಬಗ್ಗೆ ನಿಮಗೆ ಕಾಳಜಿ ಇದ್ದರೆ ಪ್ರಾಮಾಣಿಕತೆ ಇದ್ದರೆ ನೀವು ಉಚಿತವಾಗಿ ವಿದ್ಯುತ್‌ನ್ನು ಕೊಡಬೇಕಾಗಿತ್ತು. ಎಷ್ಟು ಕೋಟಿ ರೂ ಖರ್ಚಾದರೂ ಚಿಂತೆಯಿಲ್ಲ. ಕೊಟ್ಟಿದ್ದೇವೆಂದು ಹೇಳಿದ್ದರೆ ಅದು ನಿಜಕ್ಕೂ ನಿಮಗೆ ರೈತರ ವರವಾಗುತ್ತಿದ್ದೀರಿ. ಈಗ ರೈತರ ಪಾಲಿಗೆ ಶಾಪವಾಗಿದ್ದೀರಿ. ನಾನು ರೇವಣ್ಣನವರಿಗೆ ಹೇಳುತ್ತೇನೆ. ತಾವು ಒಂದು ಶಕ್ತಿಯುತವಾಗಿ ಯೋಚನೆ ಮಾಡಿ. ಒಂದು ತೀರ್ಮಾನಕ್ಕೆ ಬನ್ನಿ. ನೀವು ಇತಿಹಾಸದಲ್ಲಿ ಉಳಿಯುತ್ತೀರಿ. ನಾನು ಹೇಳುತ್ತೇನೆ. ನೀವು ಸ್ವಲ್ಪ ಬಹಳ ಧೈರ್ಯ ಮಾಡಿ, ನನಗೆ ನಿಮ್ಮ ಬಗ್ಗೆ ಗೌರವ ಇದೆ. ನೀವು ಧೈರ್ಯ ಮಾಡಿ ಒಂದು ತೀರ್ಮಾನಕ್ಕೆ ಬಂದು, ನಾವು ಉಚಿತವಾಗಿ ಕೊಡುತ್ತೇವೆ. ಎನ್ನುವ ತೀರ್ಮಾನಕ್ಕೆ ಬರುವುದಾದರೆ, ಆ ಧೈರ್ಯ ಇದ್ದರೆ ಹೇಳಿ. ಇಲ್ಲದಿದ್ದರೆ ನೀವು ಶಾಪಕ್ಕೆ ಗುರಿಯಾಗುತ್ತೀರಿ ಎಂಬ ನೋವು ನನಗೆ ಆಗುತ್ತದೆ. ಆದುದರಿಂದ ರೈತರ ಪರವಾಗಿ ಈ ಸುಧಾರಣೆ ಎಂದರೆ ಬರೀ ಪದಗಳ ಸುಧಾರಣೆಯಾಗುವುದು ಬೇಡ. ಕಂಪನಿಗಳನ್ನು ಒಡೆದು ಬೇರೆ ಬೇರೆ ತರುವುದು ಬೇಡ, ಸಮಗ್ರ ಸುಧಾರಣೆ ಮಾಡಬೇಕಾದೆ ಗ್ರಾಹಕರಿಗೆ, ರೈತರಿಗೆ, ಕಾರ್ಖಾನೆಯವರಿಗೆ, ಜನ ಸಾಮಾನ್ಯರಿಗೆ, ನೀವು ಭಾಗ್ಯ ಜ್ಯೋತಿಗೂ ಹಣ ವಸೂಲಿ ಮಾಡುತ್ತೀರಿ. ಅದನ್ನು ತೆಗಿಯಿರಿ. ಮಾನ್ಯ ದೇವರಾಜ್ ಅರಸುರವರ ಕಾಲದಲ್ಲಿ ಅದಕ್ಕೊಂದು

ಹೆಸರು ಮತ್ತು ಒಂದು ರೂಪವನ್ನು ಕೊಟ್ಟರು. ಮತ್ತೆ ಮನೆಗೊಂದು ಭಾಗ್ಯಜ್ಯೋತಿ ಇರಬೇಕೆಂದು ಹೇಳಿದ್ದರು. ಆದರೆ, ಇವತ್ತಿನದಿವಸ ಇಡೀ ರಾಜ್ಯಾದ್ಯಂತ ಪ್ರತಿಯೊಂದಕ್ಕೂ ಕೂಡ ಬಿಲ್ ಮಾಡಿದ್ದೀರಿ. ಇವತ್ತಿನ ದಿವಸ ಜನರಿಗೆ ಬಿಲ್ ಕಟ್ಟುವುದಕ್ಕೆ ಆಗುತ್ತಿಲ್ಲ. ಮತ್ತೆ ಇವರು ಸರಿಯಾಗಿ ವಿದ್ಯುತ್ ಸರಬರಾಜು ಮಾಡುವುದಕ್ಕೂ ಕೂಡ ಆಗುತ್ತಿಲ್ಲ. ಇವತ್ತಿನ ದಿವಸ ಬಡವರಿಗೆ ಇದು ಕಣ್ಣೀರಿನ ಕತೆಯಾಗಿದೆ. ಇವತ್ತಿನ ದಿವಸ ಭಾಗ್ಯಜ್ಯೋತಿ ನಿಜವಾಗಿಯೂ ಕೂಡ ನರಕಯಾತನೆಯಾಗಿದೆ. ಇದನ್ನು ಪೂರ್ಣವಾಗಿ ತೆಗೆಯಿರಿ. ಇಲ್ಲದಿದ್ದರೆ. ಒಂದು ಮನೆಗೆ ಕನಿಷ್ಠ ಎರಡು ಭಾಗ್ಯಜ್ಯೋತಿಯನ್ನು ಉಚಿತವಾಗಿ ಕೊಡುವಂಥಾದರೂ ತಾವು ಮಾಡಿ. ಒಂದು ಉದ್ದೇಶವನ್ನು ಇಟ್ಟುಕೊಂಡು ತಾವು ತಂದಿರತಕ್ಕಂಥ ಬಿಲ್‌ನ್ನು ಬಿಟ್ಟು ಅದರ ಸುತ್ತಮುತ್ತಲಿನ ಬಗ್ಗೆ ನಾವು ಹೆಚ್ಚು ಮಾತನಾಡಿದ್ದೇವೆ. ಈ ಬಿಲ್‌ನ ಬಗ್ಗೆ ನಾನು ಸ್ವಾಗತ ಮಾಡುತ್ತೇನೆ. ಮತ್ತೆ ಇದರಲ್ಲಿ ಚಾಮರಾಜನಗರ, ಮೈಸೂರು, ಮಂಡ್ಯ ಜಿಲ್ಲೆಗಳು ಸೇರಿಕೊಂಡಿದ್ದರಿಂದ ಇದನ್ನು ನಾನು ಸ್ವಾಗತ ಮಾಡದಿದ್ದರೆ ಅಷ್ಟೊಂದು ಉಚಿತವೆನ್ನಿಸುವುದಿಲ್ಲ. ಇದನ್ನು ಸ್ವಾಗತ ಮಾಡುತ್ತೇನೆ ಮತ್ತೆ ಅಭಿನಂದಿಸುತ್ತೇನೆ.

ಶ್ರೀ ಕೆ. ಶ್ರೀನಿವಾಸಗೌಡ : ಮಾನ್ಯ ಅಧ್ಯಕ್ಷರೆ, ಮಾನ್ಯ ವಾಟಾಳ್‌ನಾಗರಾಜ್‌ರವರು ಕೇವಲ ನಾಲ್ಕೈದು ಜಿಲ್ಲೆಗಳ ಪರವಾಗಿ ಇದ್ದೀರಿ. ಇಡೀ ರಾಜ್ಯದ ಪರವಾಗಿ ಅಲ್ಲ.

ಶ್ರೀ ವಾಟಾಳ್ ನಾಗರಾಜ್ : ಕುಡಿಯುವ ನೀರಿನ ಬಗ್ಗೆ ಕೋಲಾರ ಜಿಲ್ಲೆಯ ಪರವಾಗಿ ನಾನು ಮಾತನಾಡಿರತಕ್ಕಂಥದ್ದು ತಮಗೆ ಗೊತ್ತಿರಬೇಕು. ಇದು ಸಣ್ಣ ಸಣ್ಣ ವ್ಯವಸ್ಥೆಯಾಗಿರುವುದರಿಂದ ಮತ್ತು ಎಲ್ಲರಿಗೂ ಅನುಕೂಲವಾಗುತ್ತದೆಂದು ಈಗ ಹೇಳಿದ್ದೇನೆ. ಕೇವಲ ನಾಲ್ಕು ಜಿಲ್ಲೆಯ ಪರ ಎಂದು ನಾನು ಹೇಳುತ್ತಿಲ್ಲ. ಇದರಿಂದ ಅನುಕೂಲವಾಗುತ್ತದೆ ಎನ್ನತಕ್ಕಂಥ ಮಾತನ್ನು ತಮಗೆ ತಿಳಿಸುತ್ತಿದ್ದೇನೆ. ಹಾಗೆಯೇ, ಇದರ ಜೊತೆಗೆ ನಮ್ಮ ಜಿಲ್ಲೆಯಲ್ಲಿ ಬಹಳ ಜನ ರೈತರಿಗೆ ಕರೆಂಟ್‌ನ ತೊಂದರೆ ಬಹಳಷ್ಟು ಆಗಿದೆ. ಇದನ್ನು ಆದರ್ಶವಾಗಿಟ್ಟುಕೊಂಡು ಚಾಮರಾಜನಗರ ಜಿಲ್ಲೆ ಮತ್ತು ಚಾಮರಾಜನಗರಕ್ಕೆ ಒಂದು ಪ್ಯಾಕೇಜ್ ಮಾಡುತ್ತೇವೆಂದು ತಾವು ಹೇಳಿದ್ದೀರಿ. ಆದರೆ ಅದೂ ಆಗಲಿಲ್ಲ. ಆದ್ದರಿಂದ ವಿದ್ಯುತ್ ಬಗ್ಗೆ ಒಂದು ವಿಶೇಷ ಸಭೆಯನ್ನು ಕರೆಸಿ ಏನೇನು ಅನುಕೂಲಗಳು ಬೇಕಾಗಿವೆಯೋ ಅವುಗಳನ್ನು ಮಾಡಬೇಕೆಂದು ನಾನು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು : ಮಾನ್ಯ ಶ್ರೀರಾಮರೆಡ್ಡಿಯವರೆ, ದಯಮಾಡಿ ತಮ್ಮ ಮಾತನ್ನು ಸ್ವಲ್ಪ ಬೇಗ ಮುಗಿಸಬೇಕು. ಏಕೆಂದರೆ, ಇನ್ನು ಬಹಳಷ್ಟು ವಿಷಯಗಳಿವೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ(ಬಾಗೇಪಲ್ಲಿ) : ಮಾನ್ಯ ಅಧ್ಯಕ್ಷರೆ, ಈ ಬಿಲ್‌ನ್ನು ಮಾಡತಕ್ಕಂಥ ಅವಶ್ಯಕತೆ ಇದೆ. ಆದರೆ, ಇದನ್ನು ಡ್ರಾಫ್ಟ್ ಮಾಡಿರತಕ್ಕಂಥ ವಿಧಾನ ಮತ್ತು ಇದರ ಧ್ಯೇಯೋದ್ದೇಶಗಳು ಏನಿವೆ ಅದಕ್ಕೂ ಈ ಬಿಲ್‌ನಲ್ಲಿ ಉಪಯೋಗಿಸಿರತಕ್ಕಂಥ ಪದಗಳಿಗೆ ಹೊಂದಾಣಿಕೆ ಇಲ್ಲ. ಯಾರೊಬ್ಬ ಅಧಿಕಾರಿ ಇದನ್ನು ಡ್ರಾಫ್ಟ್ ಮಾಡಿ ಇದನ್ನು ಸರಿಯಾಗಿ ನೋಡಿಲ್ಲ. ಈ ಬಿಲ್‌ನ್ನು ನಾವು ಅಂಗೀಕಾರ ಮಾಡಿದರೆ ಇದರ ಉದ್ದೇಶವೇ ಬೇರೆಯಾಗಿರುತ್ತದೆ ಮತ್ತು ಇದರಲ್ಲಿರತಕ್ಕಂಥ ಪದಗಳೇ ಬೇರೆಯಾಗುವುದರಿಂದ ಇದು ತದ್ವಿರುದ್ಧ ಆಗುತ್ತದೆ. ಆದ್ದರಿಂದ ಇದನ್ನು ಬದಲಾವಣೆ ಮಾಡಬೇಕು. ಈಗ ಇನ್ನೊಂದು ಹೊಸ ಕಂಪನಿ ಮಾಡುತ್ತಿರುವ ನಿಮ್ಮ ಉದ್ದೇಶ ಬಹಳ ಚೆನ್ನಾಗಿದೆ. ಇದನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ, ಈ ಸಂದರ್ಭದಲ್ಲಿ ನಾನು ಮಾನ್ಯ ಮಂತ್ರಿಯವರಲ್ಲಿ ಕಳಕಳಿಯಿಂದ ಕೇಳಿಕೊಳ್ಳುವುದೇನೆಂದರೆ, ಅವರಿಗೆ ಕಳಕಳಿ ಮತ್ತು ಆಸಕ್ತಿ ಇದೆ. ಅದೇ ರೀತಿಯಾಗಿ

ಅವರು ಕೆಲಸ ಕೂಡ ಮಾಡುತ್ತಿದ್ದಾರೆ. ಆದರೆ, ಈಗಾಗಲೇ ನಾಲ್ಕು ಕಂಪನಿಗಳನ್ನು ಮಾಡಿ ಈಗ 5ನೇ ಕಂಪನಿ ಮಾಡುವುದಕ್ಕೆ ಹೋಗುತ್ತಿದ್ದಾರೆ. ಈ ಸಂದರ್ಭದಲ್ಲಿ ನಾನು ಕೇಳುವುದೇನೆಂದರೆ, ಈಗಾಗಲೇ ನಾಲ್ಕು ಕಂಪನಿಗಳನ್ನು ಮಾಡಿರುವುದರಿಂದ ನಿಜವಾಗಿ ಕೂಡ ಏನಾದರೂ ಪರಿಣಾಮಕಾರಿಯಾಗಿ ಜನರಿಗೆ ಪ್ರಯೋಜನವಾಗುತ್ತಿದೆ ಎಂದು ನಿಮ್ಮ ಅನುಭವಕ್ಕೆ ಬಂದಿದೆಯೇ? ಹಿಂದೆ ಕೆ.ಇ.ಬಿ. ಮಾತ್ರ ಇತ್ತು. ಆದರೆ ಹೊಣೆಗಾರಿಕೆ ಜಾಸ್ತಿಯಾಗುತ್ತದೆ ಎಂದು ಡಿ-ಸೆಂಟ್ರಲೈಜ್ ಮಾಡಿ ಬೇರೆ ಬೇರೆ ವಿಭಾಗಗಳನ್ನಾಗಿ ಹಂಚಿಕೆ ಮಾಡಿದ್ದರಿಂದ ರೈತರಿಗೆ ಮತ್ತು ಜನರಿಗೆ ಅನುಕೂಲವಾಗುತ್ತದೆಂದು ತಾವು ಹೇಳಿದ್ದೀರಿ. ಆದರೆ, ಈ ಕಂಪನಿಗಳ ಮಾಡಿರತಕ್ಕಂಥ ಉದ್ದೇಶ ಇದಲ್ಲವೆಂದು ನಾವು ಈಗಾಗಲೇ ಹೇಳಿದ್ದೇವೆ. ಈ ಕಂಪನಿಗಳನ್ನು ಮಾಡಿರತಕ್ಕಂಥ ಹಿಂದಿನ ಉದ್ದೇಶ ಏನೆಂದರೆ, ಅಧಿಕಾರ ವಿಕೇಂದ್ರೀಕರಣ ಮಾಡಿ ಪರಿಣಾಮಕಾರಿಯಾಗಿ ವಿದ್ಯುಚ್ಛಕ್ತಿಯನ್ನು ಹಂಚಿಕೆ ಅಥವಾ ವಿತರಣೆ ಮಾಡತಕ್ಕಂಥ ಉದ್ದೇಶಕ್ಕೋಸ್ಕರವಲ್ಲ. ಕಂಪನಿಗಳನ್ನು ಮಾಡಬೇಕೆಂದು ವಿಶ್ವಬ್ಯಾಂಕ್‌ನ ನಿರ್ದೇಶನವಾಗಿತ್ತು. ಇಲ್ಲದಿದ್ದರೆ ಕಂಪನಿಗಳನ್ನು ಮಾಡತಕ್ಕಂಥ ಅವಶ್ಯಕತೆ ಇರಲಿಲ್ಲ. ಹಿಂದೆ ಕೆ.ಇ.ಬಿ. ಇದ್ದಾಗ ದೊಡ್ಡ ಅನಾಹುತ ಏನೂ ಆಗಿರಲಿಲ್ಲ. ಆದರೆ, ವಾಸ್ತವಿಕವಾಗಿ, ವಿಶ್ವಬ್ಯಾಂಕ್‌ನ ಷರತ್ತಿಗೆ ಒಳಪಟ್ಟು ಈ ಕಂಪನಿಗಳನ್ನು ಮಾಡಲಾಯಿತು. ಆದರೆ, ನಿಜವಾಗಿ ಕೂಡ ವಿಕೇಂದ್ರೀಕರಣ ಮಾಡಿ ಪರಿಣಾಮಕಾರಿಯಾದಂಥ ವಿತರಣೆ ವ್ಯವಸ್ಥೆಯಾಗಲಿ ಅಥವಾ ವಿದ್ಯುತ್ ಉತ್ಪಾದನೆ ಮಾಡಬೇಕೆಂಬ ಉದ್ದೇಶ ಇದರ ಹಿಂದೆ ಇರಲಿಲ್ಲ. ಆದರೆ, ಈಗ ಇನ್ನೊಂದು ಕಂಪನಿ ಮಾಡುವುದಕ್ಕೆ ತಾವು ಹೊರಟಿದ್ದೀರಿ. ತಾವು ಇದನ್ನು ಮಾಡಿ. ಆದರೆ ಈ ಕಂಪನಿಗಳನ್ನು ಮಾಡಿದ ಮೇಲೆ ರೈತರಿಗೆ ಮತ್ತು ಸಾಮಾನ್ಯ ಜನರಿಗೆ ಕಷ್ಟ ಜಾಸ್ತಿಯಾಗಿದೆಯೇ ವಿನಃ ಇದರಿಂದ ಪ್ರಯೋಜನ ಏನೂ ಆಗುವುದಿಲ್ಲ. ಹಿಂದೆ ಕೆ.ಇ.ಬಿ. ಇದ್ದಾಗ ಟ್ರಾನ್ಸ್‌ಫಾರ್ಮ್ ವಿದ್ಯುತ್ ಲೈನ್ ಮತ್ತು ವಿದ್ಯುತ್ ಕಂಬ ಹೋದರೆ ತಕ್ಷಣವೇ ಬಂದು ರಿಪೇರಿ ಮಾಡಿ ಕೊಡುತ್ತಿದ್ದರು ಮತ್ತೆ ಅವರಿಗೆ ಹೆದರಿಕೆ ಕೂಡ ಇರುತ್ತಿತ್ತು. ಆದರೆ, ಈ ಕಂಪನಿಗಳು ಆದಮೇಲೆ ಯಾವ ಅಧಿಕಾರಿಗಳೂ ಇವತ್ತಿನ ದಿವಸ ಹೆದರುತ್ತಿಲ್ಲ ಮೇಲ್ಮಟ್ಟದಲ್ಲಿರತಕ್ಕಂಥ ಸ್ವಲ್ಪ ಜನ ಅಧಿಕಾರಿಗಳು ಕೆಲಸ ಮಾಡುತ್ತಾರೆ. ಆದರೆ, ಕೆಳಮಟ್ಟದಲ್ಲಿರತಕ್ಕಂಥ ಅಧಿಕಾರಿಗಳು, ಮತ್ತು ಸಬ್ ಡಿವಿಜನ್, ಡಿವಿಜನ್ ಲೆವಲ್‌ನಲ್ಲಿ ಇರತಕ್ಕಂಥ ಬಹಳ ಜನ ಅಧಿಕಾರಿಗಳು ರೈತರ ವಿರೋಧಿಗಳಾಗಿ ಕೆಲಸ ಮಾಡುತ್ತಿದ್ದಾರೆ. ಒಂದು ಟ್ರಾನ್ಸ್‌ಫಾರ್ಮರ್ ಸುಟ್ಟು ಹೋದರೆ ಸುಮಾರು 15 ರಿಂದ 20 ದಿವಸ ಅಥವಾ ಒಂದು ತಿಂಗಳಿಂದ ಎರಡು ತಿಂಗಳಾದರೂ ಕೂಡ ಆ ಕಡೆ ನೋಡುವುದಿಲ್ಲ. ಟ್ರಾನ್ಸ್‌ಫಾರ್ಮರ್ ಸುಟ್ಟು ಹೋಗಿದೆ ಎಂದು ರೈತರು ಹೇಳಿದರೂ ಕೂಡ ಇದರ ಬಗ್ಗ ಲಕ್ಷ್ಯ ಕೊಡತಕ್ಕಂತ ಸ್ಥಿತಿಯಲ್ಲಿ ಅವರಿರುವುದಿಲ್ಲ. ಇವತ್ತಿನ ದಿವಸ ರೈತರಿಗೆ ಅಲ್ಲದೆ, ಕುಡಿಯುವ ನೀರಿಗೂ ಕೂಡ ಇದೇ ರೀತಿ ಮಾಡುತ್ತಾರೆ. ಕುಡಿಯುವ ನೀರಿಗೆ ಬೇಕಾಗಿರತಕ್ಕಂಥ ವಿದ್ಯುಚ್ಛಕ್ತಿಯನ್ನು ಯಾವುದೇ ಕಾರಣಕ್ಕೂ ತಡೆಯ ಬಾರದೆಂದು ಕೆ.ಡಿ.ಪಿ. ಸಭೆಯಲ್ಲಿ ತೀರ್ಮಾನ ಮಾಡಿ ಇದು ಆಗಬೇಕೆಂದು ನಮ್ಮ ಅಧಿಕಾರಿಗಳಿಗೆ ನಾವು ಹೇಳಿದರೂ ಕೂಡ ಇದು ಅವರ ಗಮನಕ್ಕೆ ತಂದುಕೊಳ್ಳುವುದೇ ಇಲ್ಲ. ಅಂದರೆ, ಈ ಕಂಪನಿಗಳನ್ನು ಮಾಡಿರುವುದರಿಂದ ಅಧಿಕಾರಿಗಳ ಮೇಲೆ ಸರ್ಕಾರದ ಹಿಡಿತ ಹೊರಟು ಹೋಗಿದೆ. ಕಂಪನಿ ಹೆಸರಿನಲ್ಲಿ ಸ್ವೇಚ್ಛಾಚಾರವಾಗಿ ಕೆಲವರು ಕೆಲಸ ಮಾಡುತ್ತಿದ್ದಾರೆ. ಅವರ ಮೇಲೆ ಯಾವುದೇ ನಿಬಂಧನೆ ಕೂಡ ಇಲ್ಲ. ಆದ್ದರಿಂದ, ಇದನ್ನು ಸುಧಾರಣೆ ಮಾಡದೇ, ಸುಧಾರಣೆ ಮಾಡುವುದಕ್ಕೋಸ್ಕರ ನಾವು ಕಂಪನಿಗಳನ್ನು ಮಾಡಿದ್ದೇವೆಂದು ಹೇಳತಕ್ಕಂಥದರಲ್ಲಿ ನಿಜವಾಗಿಯೂ ಕೂಡ ಇದಕ್ಕೆ ಅರ್ಥ ಬರುವುದಿಲ್ಲ. ಬದಲಿಗೆ ಇದು ವಿಶ್ವಬ್ಯಾಂಕ್

ನಿರ್ದೇಶನದ ಮೇರೆಗೆ ಆಗಿದೆ ಎನ್ನತಕ್ಕಂಥದ್ದು ಎಲ್ಲರಿಗೂ ಗೊತ್ತಿರತಕ್ಕಂಥ ವಿಷಯವಾಗಿದೆ. ತಾವು ಸುಧಾರಣೆ ಮಾಡುವುದಕ್ಕೆ ಪ್ರಯತ್ನ ಮಾಡುವುದಾದರೆ, ಕೆಳಮಟ್ಟದ ಅಧಿಕಾರಿಗಳಲ್ಲಿ ಶಿಸ್ತನ್ನು ಮತ್ತು ಜವಾಬ್ದಾರಿಯನ್ನು ತರಬೇಕಾಗುತ್ತದೆ. ಆದರೆ, ಇವತ್ತಿನದಿವಸ ಅವರ್ಯಾರಿಗೂ ಜವಾಬ್ದಾರಿ ಇಲ್ಲದಂತಾಗಿದೆ. ಇವತ್ತಿನದಿವಸ ಅವರಿಗೆ ಜವಾಬ್ದಾರಿ ಇಲ್ಲದೇ ಇರುವ ಕಾರಣಕ್ಕೋಸ್ಕರ ರೈತರಿಗೆ ಭಾರಿ ಕಷ್ಟವಾಗಿದೆ. ನಾನು ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರುವುದೇನೆಂದರೆ, ಇದನ್ನು ಮೊದಲು ಸುಧಾರಣೆ ಮಾಡಬೇಕು. ಇದನ್ನು ಸುಧಾರಣೆ ಮಾಡದಿದ್ದರೆ ಯಾವುದೇ ರೀತಿಯ ಪ್ರಯೋಜನವಾಗುವುದಿಲ್ಲ. ಈಗ ನೀವು ಅಧ್ಯಾದೇಶ ಕಾಯಿದೆ ಮಾಡುವುದಕ್ಕೆ ಇದನ್ನು ತಂದಿದ್ದೀರಿ. ಇದನ್ನು ನಾನು ಸ್ವಾಗತ ಮಾಡಿ ಒಪ್ಪಿಕೊಳ್ಳುತ್ತೇನೆ. ಆದರೆ, ಸುಧಾರಣೆ ನಿಜವಾಗಿಯೂ ಕೂಡ ತಕ್ಷಣ ಆಗಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಶಶಿಕಾಂತ್ ಅಕ್ಕಪ್ಪ ನಾಯಕ್ (ಹುಕ್ಕೇರಿ) : ಮಾನ್ಯ ಅಧ್ಯಕ್ಷರೆ, ಹುಕ್ಕೇರಿಯಲ್ಲಿರುವ ಗ್ರಾಮೀಣ ವಿದ್ಯುತ್ ಸಹಕಾರ ಸಂಘವನ್ನೂ ಸಹ ತಾವು ಕಂಪನಿಯೆಂದು ಪರಿಗಣಿಸಬೇಕೆಂದು ಮಾನ್ಯ ಅಧ್ಯಕ್ಷರ ಮೂಲಕ ತಮ್ಮಲ್ಲಿ ಕೋರಿಕೊಳ್ಳುತ್ತೇನೆ.

ಶ್ರೀ ಎಸ್. ರಾಜೇಂದ್ರನ್ (ಕೆ.ಜಿ.ಎಫ್) : ಮಾನ್ಯ ಅಧ್ಯಕ್ಷರೆ, ಈ ಬಿಲ್‌ಗೆ ನನ್ನ ವಿರೋಧ ಇಲ್ಲ. We are co-operating with you. ಆದರೆ ಇದಕ್ಕೆ ಸಂಬಂಧಪಟ್ಟಂತೆ ಸಣ್ಣ ಸಲಹೆ ಏನೆಂದರೆ, ಇವತ್ತಿನದಿವಸ ಬೆಂಗಳೂರು ವಿಭಾಗಕ್ಕೆ ಬೆಸ್ಕಾಂ ಎಂದು ಮತ್ತು ಮಂಗಳೂರು ವಿಭಾಗಕ್ಕೆ ಮೆಸ್ಕಾಂ ಮತ್ತು ಗುಲ್ಬರ್ಗ ವಿಭಾಗಕ್ಕೆ ಗಿಸ್ಕಾಂ ಹಾಗೂ ಹುಬ್ಬಳ್ಳಿ-ಧಾರವಾಡ್ ವಿಭಾಗಕ್ಕೆ ಹೆಸ್ಕಾಂ ಎಂದು ಹೆಸರು ಇಟ್ಟಿದ್ದೀರಿ. ಆದರೆ, ಕರೆಂಟ್‌ಗೆ ಯಾವಾಗಲೂ ಕಾಮ್ ಇರುವುದಿಲ್ಲ. ನೀರು ಇರುವುದರಿಂದ ಕರೆಂಟ್ ಉತ್ಪಾದನೆ ಮಾಡಲಾಗುತ್ತಿದೆ. ನೀರು ಬರತಕ್ಕಂಥ ಜಾಗಕ್ಕೆ ಇವತ್ತಿನ ದಿವಸ ಹೆಣ್ಣು ಮಕ್ಕಳ ಹೆಸರನ್ನು ಇಡಲಾಗಿದೆ. ಉದಾಹರಣೆಗೆ ಹೇಳುವುದಾದರೆ, ಗಂಗಾ, ಕಾವೇರಿ, ಗೋದಾವರಿ ಮತ್ತು ಹೇಮಾವತಿ ಎಂದು ಹೆಣ್ಣು ಮಕ್ಕಳ ಹೆಸರನ್ನು ನದಿಗೆ ಇಡಲಾಗಿದೆ. ಆದ್ದರಿಂದ, ಇದನ್ನು ಕನ್‌ವರ್ಟ್ ಮಾಡಿ ಜೆಂಟ್ಸ್ ಹೆಸರನ್ನು ಇದಕ್ಕೆ ಇಟ್ಟಿದ್ದರೆ ಚೆನ್ನಾಗಿರುತ್ತಿತ್ತು.

ಶ್ರೀ ಕೆ. ಶ್ರೀನಿವಾಸಗೌಡ : ಮಾನ್ಯ ರಾಜೇಂದ್ರನ್‌ರವರು ಮದುವೆ ಆಗಿಲ್ಲ ಎಂದು ಹೇಳಿ ಹೆಣ್ಣುಮಕ್ಕಳ ಹೆಸರೇ ಇಡಬಾರದೆಂದು ಹೇಳುವುದು ಯಾವ ನ್ಯಾಯ?

ಶ್ರೀ ಎಸ್. ರಾಜೇಂದ್ರನ್ : ಮಾನ್ಯ ಅಧ್ಯಕ್ಷರೆ, ಹೆಸರು ಬೇಡವೆಂದು ನಾನು ಹೇಳಲಿಲ್ಲ. ಆದರೆ ಅಪೋಜಿಟ್ ಹೆಸರು ಇದ್ದರೆ ಒಳ್ಳೆಯದು ಇರುತ್ತಿತ್ತೆಂದು ನಾನು ಹೇಳುತ್ತಿದ್ದೇನೆ. ಈಗ ತಂದಿರತಕ್ಕಂಥ ಬಿಲ್‌ನಲ್ಲಿ ಹೆಣ್ಣುಮಕ್ಕಳ ಹೆಸರನ್ನೇ ಕರೆಂಟ್‌ಗೆ ಇಡಲಾಗಿದೆ.

ಶ್ರೀ ಎಂ.ಪಿ. ಪ್ರಕಾಶ್ : ನಮ್ಮ ದೇಶದಲ್ಲಿ ಮಾಮೂಲಿಯಾಗಿ ಹರಿಯತಕ್ಕಂಥ ನೀರಿಗೆ ಸ್ತ್ರೀಲಿಂಗ ಇಡುತ್ತೇವೆ. ಒಂದು ವೇಳೆ ಅದು ಪ್ರವಾಹದಲ್ಲಿದ್ದಾಗ ಮಾತ್ರ ಅದು ಪುರುಷಲಿಂಗವಾಗುತ್ತದೆ. Automatically, it becomes 'he'. ಮೊದಲು She ಇರುತ್ತದೆ. ಆದರೆ, ಈಗ ಹೆಚ್ಚು ರಭಸವಾಗಿ ನೀರು ಹರಿಸಿ ವಿದ್ಯುತ್ ಉತ್ಪಾದನೆ ಮಾಡತಕ್ಕಂಥ ಕಾರಣದಿಂದ ಸ್ತ್ರೀ ಹೆಸರು ಇಡಬೇಕಾದ್ದಿಲ್ಲ ಅಂತ.........

ಶ್ರೀ ಎಸ್. ರಾಜೇಂದ್ರನ್ : ಮಾನ್ಯ ಅಧ್ಯಕ್ಷರೆ, ಮುಂದಿನ ದಿನಗಳಲ್ಲಿ ಬೇಸಿಗೆ ದಿನಗಳು ಬರುತ್ತವೆ. The power cut is very important. That should be curbed. ಈ ದಿವಸಗಳಲ್ಲಿ ವಿದ್ಯಾರ್ಥಿಗಳು ಓದಲೇ ಬೇಕಾಗಿರತಕ್ಕಂಥ ಪರಿಸ್ಥಿತಿ ಇರುತ್ತದೆ. ಇವತ್ತಿನದಿವಸ ನಮ್ಮ ಕ್ಷೇತ್ರದಲ್ಲಿರತಕ್ಕಂಥ ಮಕ್ಕಳು ಏನು ತಿಳಿದುಕೊಂಡಿದ್ದಾರೆಂದರೆ, ಶಾಸಕರೇ ಇಲ್ಲಿ ಕರೆಂಟ್ ಕಟ್

ಮಾಡುತ್ತಿದ್ದಾರೆಂದು ತಿಳಿದುಕೊಂಡು. ನಾವೇನಾದರೂ ಅಲ್ಲಿಗೆ ಹೋದರೆ ನಮ್ಮನ್ನು ಬಯ್ಯುತ್ತಾರೆ. You should take care. ಕುಡಿಯುವ ನೀರಿಗೆ ಬೇಕಾಗಿರತಕ್ಕಂಥ ವಿದ್ಯುಚ್ಛಕ್ತಿಯನ್ನು ಕೊಡುವುದಕ್ಕೆ ನಿಮ್ಮಿಂದ ಸಾಧ್ಯವಿಲ್ಲ. ಫ್ರೀ ಕರೆಂಟ್ ಕೊಡಲಾಗುತ್ತದೆಂದು ಈಗಾಗಲೇ ಆಂಧ್ರಪ್ರದೇಶದಲ್ಲಿ ಪ್ರಕಟ ಮಾಡಿದ್ದಾರೆ. ಆದರೆ, ನೀವು ಕೊಡುವುದಕ್ಕೆ ಸಾಧ್ಯವಿಲ್ಲ. ಕೊನೇ ಪಕ್ಷ 25 ಪರ್ಸೆಂಟ್ ಕೊಡುವುದಕ್ಕೂ ಕೂಡ ನಿಮ್ಮಿಂದ ಸಾಧ್ಯವಿಲ್ಲ. ಕೊನೇ ಪಕ್ಷ ಓದತಕ್ಕಂಥ ಮಕ್ಕಳಿಗೆ ಸಮ್ಮರ್ ಸೀಜನ್‌ನಲ್ಲಿಯಾದರೂ ಕರೆಂಟ್ ಕೊಡಬೇಕು. ಕರೆಂಟ್ ಕೊಡದಿದ್ದರೆ ಖಂಡಿತ ಸರ್ಕಾರಕ್ಕೆ ಕೆಟ್ಟ ಹೆಸರು ಬರುತ್ತದೆ. Most of the students are depending on the education. We must think, not only for that. ಗುಡಿಸಲಿನಲ್ಲಿರತಕ್ಕಂಥ ಮಕ್ಕಳು ಕೆರೋಸಿನ್ ಲ್ಯಾಂಪ್ ಇಟ್ಟುಕೊಂಡಿರಬಹುದು. ಆದರೆ, the students will know the importance. ಇವತ್ತಿನದಿವಸ ವಿದ್ಯಾರ್ಥಿಗಳಲ್ಲಿ ಏನಾಗಿದೆ ಎಂದರೆ, ನಾವು 80 ಅಥವಾ 90 ಪರ್ಸೆಂಟ್ ಮಾರ್ಕ್ಸ್ ತೆಗೆದುಕೊಂಡರೆ ನಮಗೆ ಸೀಟ್ ಸಿಗುವುದಿಲ್ಲ. ಆದ್ದರಿಂದ, ನಾವು ಓದುವುದಕ್ಕೆ ಪವರ್ ಇರಲೇ ಬೇಕೆಂದು ತಿಳಿದುಕೊಂಡಿರುವುದರ ಜೊತೆಗೆ ಮಕ್ಕಳ ತಂದೆಯರೂ ಕೂಡ ನಮ್ಮ ಮೇಲೆ ಗಲಾಟೆ ಮಾಡುವುದಕ್ಕೆ ಪ್ರಾರಂಭ ಮಾಡುತ್ತಿದ್ದಾರೆ. ಆದರೆ, ನಮಗೆಲ್ಲಾ ಕರೆಂಟ್ ಕೊಡುವವರು ಮಾನ್ಯ ರೇವಣ್ಣನವರು. Most important we must think and provide electricity before summer and that should be useful to the people. For having given me this opportunity, I should be thankful to the Speaker, Sir. Thank you.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ(ಬ್ರಹ್ಮಾವರ) : ಮಾನ್ಯ ಅಧ್ಯಕ್ಷರೆ, ಇದರ ಧ್ಯೇಯೋದ್ದೇಶಗಳ ಬಗ್ಗೆ ಈಗಾಗಲೇ ಮಾನ್ಯ ಜೆ.ಸಿ. ಮಾಧುಸ್ವಾಮಿಯವರು ಮತ್ತು ಮಾನ್ಯ ಜಿ.ವಿ. ಶ್ರೀರಾಮರೆಡ್ಡಿಯವರು ಸಾಕಷ್ಟು ಮಾತನಾಡಿದ್ದಾರೆ. ಹೊಸ ಕಂಪನಿಯನ್ನು ಮಾಡುವುದಕ್ಕೆ ಯಾರದೂ ವಿರೋಧವಿಲ್ಲ. ಆದರೆ, ಲೈಸೆನ್ಸ್‌ದಾರರಿಗೆ ಎಂದು ತಿದ್ದುಪಡಿಯನ್ನು ತಂದಿದ್ದಾರೆ. ಈಗಾಗಲೇ ಸದರಿ ನಾಲ್ಕು ಜಿಲ್ಲೆಗಳು ಮೆಸ್ಕಾಂ ವ್ಯಾಪ್ತಿಯಲ್ಲಿದ್ದು, ಇದನ್ನು ಅಲ್ಲಿಂದ ಡಿಲೀಟ್ ಮಾಡಿರತಕ್ಕಂಥದ್ದು ಇದರಲ್ಲಿ ಎಲ್ಲಿಯೂ ಕೂಡ ಬಂದಿಲ್ಲ. ಅಂದರೆ, ಮೆಸ್ಕಾಂನಲ್ಲಿ ಇದ್ದಂಥದ್ದನ್ನು ಹೊರಕ್ಕೆ ತಂದಿರತಕ್ಕಂಥದರ ಬಗ್ಗೆ ಇದರಲ್ಲಿ ಎಲ್ಲಿಯೂ ಕೂಡ ತಿಳಿಸಿಲ್ಲ. ಈ ಬಿಲ್‌ನಲ್ಲಿ ಅದನ್ನು ತೋರಿಸದಿದ್ದರೆ ಈ ನಾಲ್ಕು ಜಿಲ್ಲೆಗಳು ಅಲ್ಲಿಯೂ ಉಳಿದುಕೊಳ್ಳುವುದಲ್ಲದೆ, ಇಲ್ಲಿಯೂ ಹೊಸ ಕಂಪನಿಗಳಾಗುತ್ತವೆ. ಇದರಲ್ಲಿ ಎಲ್ಲಿಯೂ ತೋರಿಸಿಲ್ಲ. ಆದ್ದರಿಂದ, ಇದರಲ್ಲಿ ತೋರಿಸಲೇ ಬೇಕಾಗುತ್ತದೆ. ಜ್ಯೂರಿಸ್‌ಡಿಕ್ಷನ್ ಲಿಮಿಟ್ ಮಾಡಿದ್ದನ್ನು ನೀವು ಇಲ್ಲಿ ತೋರಿಸಬೇಕಾಗುತ್ತದೆ. ತೋರಿಸದಿದ್ದರೆ ಆ ಕಂಪನಿಯಲ್ಲಿಯೇ ಈ ಜಿಲ್ಲೆಗಳು ಉಳಿದುಕೊಂಡಂತಾಗುತ್ತದೆ. ಹೊಸ ಕಂಪನಿಗಳನ್ನು ಮಾಡುವುದಕ್ಕೆ ನಮ್ಮ ವಿರೋಧವಿಲ್ಲ. ಉತ್ಪಾದನೆಯನ್ನು ಜಾಸ್ತಿ ಮಾಡದೆ, ಕಂಪನಿಗಳನ್ನು ನೀವು ಏಕೆ ಜಾಸ್ತಿ ಮಾಡಿಕೊಂಡು ಹೋಗುತ್ತಿದ್ದೀರಿ ಎನ್ನುವುದೊಂದೇ ಇಲ್ಲಿರುವ ಪ್ರಶ್ನೆ. ಒಂದು ಹೊಸ ಕಂಪನಿಯನ್ನು ಮಾಡಿ ಉತ್ಪಾದನಾ ಕೇಂದ್ರವನ್ನು ಮಾಡುವುದಕ್ಕೆ ಸರ್ಕಾರದಿಂದ ಅನುಮೋದನೆ ಕೊಡುವುದಕ್ಕೆ 10 ವರ್ಷ ಅದನ್ನು ಜಾರಿಗೆ ತರುವುದಕ್ಕೆ ಒಂದು ವರ್ಷ ಸಾಕಾಗುತ್ತದೆ. ಕಂಪನಿಗಳನ್ನು ಜಾಸ್ತಿ ಮಾಡುವುದಕ್ಕಿಂದ ಈ ಯೋಜನೆಗಳನ್ನು ಜಾಸ್ತಿ ಮಾಡಿ, ಉತ್ಪಾದನೆ ಜಾಸ್ತಿ ಮಾಡಿ. ಇದ್ದದ್ದನ್ನು ಹಂಚಿಕೊಳ್ಳುವುದಕ್ಕಿಂತ ಉತ್ಪಾದನೆಗಳನ್ನು ಜಾಸ್ತಿ ಮಾಡಿ ಕಂಪನಿಗಳನ್ನು ಜಾಸ್ತಿ ಮಾಡಿ ಮತ್ತೆ ಮಾನ್ಯ ಮಾಧುಸ್ವಾಮಿಯವರು ಹೇಳಿದ ಹಾಗೆ

ಇವತ್ತು ಮೆಟೀರಿಯಲ್ಸ್ ಇಲ್ಲದೆ ಸಮಸ್ಯೆ ಉದ್ಭವವಾಗಿದೆ. ಇದ್ದದ್ದನ್ನು ಹಂಚಿಕೊಳ್ಳುವುದಕ್ಕೂ ಮೆಟೀರಿಯಲ್ಸ್ ಇಲ್ಲ, ಇದು ಸುಸೂತ್ರವಾಗಿ ಸಿಗುವಂಥ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ಹೇಳುತ್ತೇನೆ. ದಯವಿಟ್ಟು ಡಿಲೀಟ್ ಆದ ಬಗ್ಗೆ ಒಂದು ಉತ್ತರವನ್ನು ಮಾನ್ಯ ಮಂತ್ರಿಗಳು ಕೊಡಬೇಕು.

ಶ್ರೀ ಬಿ. ನಾಗರಾಜಶೆಟ್ಟಿ (ಬಂಟ್ವಾಳ) : ಮಾನ್ಯ ಅಧ್ಯಕ್ಷರೆ, ಈ ವಿಧೇಯಕದ ಬಗ್ಗೆ ಬಹಳಷ್ಟು ಜನ ಶಾಸಕರು ಮಾತನಾಡಿದ್ದಾರೆ. ನಮ್ಮ ಮೆಸ್ಕಾಂ ಅನ್ನು ಎರಡು ವಿಭಾಗ ಮಾಡಿದ್ದಾರೆ. ಮಂಗಳೂರು ಕಡೆ ಒಂದು, ಶಿವಮೊಗ್ಗಾ ಕಡೆ ಇನ್ನೊಂದು ಮಾಡಿದ್ದಾರೆ ಬಹಳ ಸಂತೋಷ. ಆದರೆ ಈಗಾಗಲೇ ಅನೇಕ ಹಿರಿಯ ಸದಸ್ಯರು ಮಾತನಾಡಿದ ಹಾಗೆ ಬಹಳಷ್ಟು ಭ್ರಷ್ಟಾಚಾರಗಳು ಈ ಮೆಸ್ಕಾಂ ನಲ್ಲಿ ಆಗಿರುವಂಥದ್ದು ಮಾನ್ಯ ಸಚಿವರ ಗಮನಕ್ಕೆ ಬಂದಿದೆ. ಟ್ರಾನ್ಸ್‌ಫಾರ್ಮರ್‌ಗಳಿಗೆ ಬೇಲಿಯನ್ನು ಹಾಕುವಂಥದ್ದರಲ್ಲಿ ಸುಮಾರು 5–6 ಕೋಟಿ ರೂ.ಗಳ ಅವ್ಯವಹಾರವಾಗಿದೆ. ಒಂದು ಚ.ಮೀ. ಗೆ 570 ರೂ.ಗಳಂತೆ ಪೇಮೆಂಟ್ ಆಗಿದೆ. ಸೂಪರಿಂಟೆಂಡೆಂಟ್ ಇಂಜಿನಿಯರ್‌ರವರು ತಮ್ಮ ಸ್ವಂತ ಅಧಿಕಾರದ ಮೇಲೆ ಆದೇಶವನ್ನು ಮಾಡಿದ್ದಾರೆ. ಇನ್ನು ಎರಡನೆಯದಾಗಿ ಹೇಳಬೇಕೆಂದರೆ, ಸುಮಾರು 5–6 ಕೋಟಿ ರತ. ಗಳ ಏನು ಮೋಸ, ವಂಚನೆಯಾಗಿದೆ ಅದರ ಬಗ್ಗೆ ನಾನು ತಮ್ಮ ಮೂಲಕ ಮಾನ್ಯ ಸಚಿವರ ಗಮನಕ್ಕೆ ತರಲಿಕ್ಕೆ ಇಚ್ಛೆಪಡುತ್ತಿದ್ದೇನೆ. ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಅಷ್ಟೇ ಅಲ್ಲದೆ, ಮೀಟರ್ ರೀಡಿಂಗ್ ಬಗ್ಗೆ ನಮ್ಮ ಬಂಟ್ವಾಳ ಒಂದು ಉಪ ವಿಭಾಗದಲ್ಲಿ ನಾವು ಹಿಂದೆ ರೂ 1.95 ಕೊಡುತ್ತಿದ್ದೆವು. ಈ ಹೊಸ ಸರ್ಕಾರ ಬರುವ ಒಂದು ತಿಂಗಳ ಹಿಂದೆ ಅದನ್ನು 3.65 ರೂ.ಗಳನ್ನು ಮಾಡಿರುವುದರಿಂದ ಒಂದು ವರ್ಷಕ್ಕೆ 6 ಲಕ್ಷ ರೂ.ಗಳವರೆಗೆ ನಷ್ಟವಾಗುತ್ತಿದೆ. ಸರಿಯಾದ ಟೆಂಡರ್ ಇಲ್ಲ, ಸರಿಯಾದ ಪ್ರೊಸೀಜರ್ ಇಲ್ಲ. ಯಾರೋ ಒಬ್ಬ ಕಾಂಟ್ರಾಕ್ಟರ್ ಇಡೀ ಮೆಸ್ಕಾಂಅನ್ನು ಕಂಟ್ರೋಲ್ ಮಾಡುತ್ತಿದ್ದಾರೆ. ಈ ದಿಸೆಯಲ್ಲಿ ನಿಮ್ಮ ಮುಂದಿನ ಹೊಸ ಕಂಪನಿಗಳು ಆಗಬಾರದು. ಸನ್ಮಾನ್ಯ ಹಿರಿಯ ಮಂತ್ರಿಗಳು ಇದರ ಮಂತ್ರಿಗಳಾಗಿದ್ದಾರೆ. ಆ ದೃಷ್ಟಿಯಿಂದ ಇದರ ಬಗ್ಗೆ ಹೆಚ್ಚಿನ ಒಂದು ಮುತುವರ್ಜಿಯನ್ನು ವಹಿಸಿಕೊಂಡು ಈ ಭ್ರಷ್ಟಾಚಾರಿಗಳ ಬಗ್ಗೆ ಜಾಗ್ರತೆಯಿಂದ ಇರುವುದು ಸೂಕ್ತವೆಂಬುದು ನನ್ನ ಅನಿಸಿಕೆಯಾಗಿದೆ.

ಶ್ರೀ ಗೋವಿಂದ ಎಂ. ಕಾರಜೋಳ(ಮುಧೋಳ) : ಮಾನ್ಯ ಅಧ್ಯಕ್ಷರೆ, ನಾನು ಒಂದು ನಿಮಿಷದಲ್ಲಿ ಮಾತನಾಡಿ ಮುಗಿಸುತ್ತೇನೆ.

ಅಧ್ಯಕ್ಷರು : ಈ ರೀತಿಯಾದರೆ ಆಮೇಲೆ ಯಾವ ಚರ್ಚೆಯನ್ನೂ ತೆಗೆದುಕೊಳ್ಳುವುದಕ್ಕಾಗುವುದಿಲ್ಲ.

ಶ್ರೀ ಗೋವಿಂದ ಎಂ. ಕಾರಜೋಳ : ಮಾನ್ಯ ಅಧ್ಯಕ್ಷರೆ, ದಯಮಾಡಿ, ನಾನು ಇಲ್ಲಿ ಭಾಷಣವನ್ನು ಮಾಡುತ್ತಿಲ್ಲ. ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣಾ(ತಿದ್ದುಪಡಿ) ವಿಧೇಯಕ, 2005 ನ್ನು ಮಾನ್ಯ ಸಚಿವರು ಇರುವ 4 ಕಂಪನಿಗಳನ್ನು 5 ಕಂಪನಿಗಳನ್ನಾಗಿ ಮಾಡುವುದಕ್ಕೆ ಹೊರಟಿದ್ದಾರೆ. ಕಂಪನಿಗಳನ್ನು ಹೆಚ್ಚು ಮಾಡುವುದರಿಂದ ಏನಾದರೂ ಎಫಿಷಿಯೆನ್ಸಿ ಆಯಿತಾ? ಕರ್ನಾಟಕದಲ್ಲಿ ಒಂದೇ ಒಂದು ಕಂಪನಿ ಇತ್ತು, ಕರ್ನಾಟಕ ವಿದ್ಯುಚ್ಛಕ್ತಿ ನಿಗಮ ಎಂದು ಮೊದಲು ರಾಜ್ಯಕ್ಕೆ ಒಂದೇ ಇತ್ತು. ಎಫಿಷಿಯೆನ್ಸಿ ಹೆಚ್ಚಾಗಬೇಕು, ಆಡಳಿತದಲ್ಲಿ ಸುಧಾರಣೆಯಾಗಬೇಕು, ಭ್ರಷ್ಟಾಚಾರ ಕಡಿಮೆಯಾಗಬೇಕು. ಸೋರಿಕೆಯಲ್ಲಿ ಕಡಿಮೆಯಾಗಬೇಕು ಎಂದು 4 ಕಂಪನಿಗಳನ್ನಾಗಿ ವಿಂಗಡಣೆ ಮಾಡಿದರು. ಕೆ.ಎಸ್.ಆರ್.ಟಿ.ಸಿ.ಯನ್ನು ಕೂಡ ಅದೇ ರೀತಿ ವಿಂಗಡಣೆ ಮಾಡಿದರು. ನಾನುಮಾನ್ಯ ಸಚಿವರನ್ನು ಕೇಳುತ್ತಿದ್ದೇನೆ, 30–40 ವರ್ಷಗಳಿಂದ ಏನು ಹಳೆ ಲೈನ್‌ಗಳು ಇದ್ದವು 11 ಕೆವಿ 440

ಎಲ್.ಟಿ. ಲೈನ್‌ಗಳನ್ನು ಆ ಹಳೆಯ ಲೈನ್‌ಗಳನ್ನು ತೆಗೆದು ಹೊಸ ಲೈನ್‌ಗಳನ್ನು ಹಾಕಿದ್ದರೆ ಅದು ಸುಧಾರಣೆಯಾಗುತ್ತಿತ್ತು. ಸೋರಿಕೆ ಕೂಡ ಕಡಿಮೆಯಾಗುತ್ತಿತ್ತು. ಇವತ್ತು ನಷ್ಟ 30 ರಿಂದ 32 ಪರ್ಸೆಂಟ್ ಇದೆ. ನಾವು ರಾಜ್ಯದಲ್ಲಿ ಪ್ರತಿದಿನ ಎಷ್ಟು ವಿದ್ಯುತ್‌ನ್ನು ಬಳಕೆ ಮಾಡುತಿದ್ದೇವೆಂದರೆ, 105 ಮಿಲಿಯನ್ ವಿದ್ಯುತ್ ಅನ್ನು ಬಳಕೆ ಮಾಡುತ್ತಿದ್ದೇವೆ. ಒಂದು ಮಿಲಿಯನ್ ಅಂದರೆ ಸುಮಾರು 10 ಲಕ್ಷ ಯೂನಿಟ್‌ಗಳು, 30 ಪರ್ಸೆಂಟ್ ನಮ್ಮದು ಲಾಸ್ ಎಂದರೆ, ಸುಮಾರು 7–8 ಕೋಟಿ ರೂ.ಗಳು ಪ್ರತಿನಿತ್ಯ ಲಾಸ್ ಆಗುತ್ತಿದೆ. ನಾವು ಒಂದು ವರ್ಷಕ್ಕೆ ಲೆಕ್ಕವನ್ನು ಹಾಕಿದಾಗ ಈ ರಾಜ್ಯದಲ್ಲಿ ಸುಮಾರು 2400 ಕೋಟಿ ರೂ.ಗಳ ವಿದ್ಯುತ್ ಸೋರಿ ಹೋಗುತ್ತಿದೆ. ಅದಕ್ಕೇನಾದರೂ ಸುಧಾರಣೆ ತಂದಿದ್ದರೆ ಇದು ಒಳ್ಳೆಯದಾಗುತ್ತಿತ್ತು. ಇವತ್ತು ನೀವು ಕಂಪನಿಗಳನ್ನು ಹೆಚ್ಚು ಮಾಡಿ ಸುಧಾರಣೆ ತರುತ್ತೇನೆಂದರೆ ಅದು ಸಾಧ್ಯವಿಲ್ಲ. 200 ಕೆವಿ ಹಳೆ ಟ್ರಾನ್ಸ್‌ಫಾರ್ಮರ್ ಇವೆ. 63 ಕದ, 100 ಕೆವಿ ಟ್ರಾನ್ಸ್‌ಫಾರ್ಮರ್‌ಗಳನ್ನು ತೆಗೆದು ಹೊಸ 25 ಕೆವಿ ಟ್ರಾನ್ಸ್‌ಫಾರ್ಮರ್ ಹಾಕಿದ್ದರೆ ಅದು ಸುಧಾರಣೆಯಾಗುತ್ತಿತ್ತು. ನಾವು ಅಧಿಕಾರಿಗಳಿಗೆ ಹೆಚ್ಚು ಅನುಕೂಲ ಮಾಡಿಕೊಡುವ ಸಲುವಾಗಿ, ಐಎಎಸ್ ಆಫೀಸರ್‌ಗಳು ಎ.ಸಿ. ರೂಂನಲ್ಲಿ ಕೊಡುತ್ತಾರೆ ಅವರಿಗೆ ಹೆಚ್ಚು ಗೌರವ ಮತ್ತು ಅಕಾಮಡೇಶನ್ ಮಾಡಿಕೊಡುವುದಕ್ಕಾಗಿ ಈ ಸುಧಾರಣೆ ಅಲ್ಲ. ನಾನು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ, ಅದರ ಬದಲಾಗಿ ಎಪಿಡಿಆರ್‌ಪಿ ಸ್ಕೀಂ ಏನಿದೆ ಕೇಂದ್ರ ಸರ್ಕಾರದ್ದು ಮತ್ತು ರಾಜ್ಯ ಸರ್ಕಾರದ ಸಹಭಾಗಿತ್ವದಲ್ಲಿ ಶೇಕಡಾ 50ರಂತೆ ಅನುದಾನವನ್ನು ಕೊಡಬೇಕಾಗುತ್ತದೆ. ಗ್ರಾಮೀಣ ಪ್ರದೇಶಗಳಲ್ಲಿ 30–40 ವರ್ಷಗಳಿಂದ ಏನು ಹಳೆ ಲೈನ್‌ಗಳನ್ನು ಹಾಕಿದ್ದೀರಿ, ಕಂಬಗಳನ್ನು ಹಾಕಿರುತ್ತೀರಿ, ಟ್ರಾನ್ಸ್‌ಫಾರ್ಮರ್‌ಗಳನ್ನು ಅಳವಡಿಸಿದ್ದೀರಿ, ಅವುಗಳನ್ನೆಲ್ಲಾ ತೆಗೆದು ಹಾಕಿದರೆ ಅದು ಸುಧಾರಣೆಯಾಗುತ್ತದೆ. ಇಲ್ಲದಿದ್ದರೆ ಸುಧಾರಣೆಯಾಗುವುದಕ್ಕೆ ಸಾಧ್ಯವಿಲ್ಲ. ಇನ್ನಷ್ಟು ಭ್ರಷ್ಟಾಚಾರ ಹೆಚ್ಚಾಗುತ್ತದೆ. ಏಕೆಂದರ ಒಬ್ಬರೇ ಅಧ್ಯಕ್ಷರು ಹಾಗೂ ಎಂ.ಡಿ. ಯವರು ಇದ್ದರೆ ಈ ರಾಜ್ಯದ 175 ತಾಲ್ಲೂಕುಗಳನ್ನು ಸುತ್ತುವುದು ಕಷ್ಟವಾಗುತ್ತದೆ. ನನ್ನ ಅನುಭವದ ಪ್ರಕಾರ ದೊಡ್ಡ ದೊಡ್ಡ ಜಿಲ್ಲೆಗಳನ್ನು ಒಡೆದು ಸಣ್ಣ ಸಣ್ಣ ಜಿಲ್ಲೆಗಳನ್ನು ಮಾಡಿದರು, ಆಡಳಿತಾತ್ಮಕಕ್ಕೆ ಅನುಕೂಲವಾಗುತ್ತದೆಂದು ಆದರೆ ಅದು ಆಗಲಿಲ್ಲ. ಅಲ್ಲಿರತಕ್ಕಂಥ ಎಲ್ಲಾ ಡಿಪಾರ್ಟ್‌ಮೆಂಟ್ ಜಿಲ್ಲಾ ಅಧಿಕಾರಿಗಳು ಪ್ರತಿನಿತ್ಯ ಪ್ರತಿಯೊಂದು ತಾಲ್ಲೂಕಿಗೆ ಹೋಗಿ ಮಾಮೂಲಿ ವಸೂಲು ಮಾಡುವುದರಲ್ಲಿ ಸುಧಾರಣೆಯಾಗಿದೆಯೇ ಹೊರತು ಆಡಳಿತದಲ್ಲಿ ಸುಧಾರಣೆಯಾಗಲಿಲ್ಲ. ಕಾಂಟಿಂಜೆನ್ಸಿ ಮತ್ತು ಎಸ್ಟಾಬ್ಲಿಷ್‌ಮೆಂಟ್ ಚಾರ್ಜಿನಲ್ಲಿ ಹೆಚ್ಚಾಗಿದೆ. ಅದರ ಹೊರತು ಬೇರೆ ಏನೂ ಆಗಲಿಲ್ಲ. ಅದಕ್ಕಾಗಿ ನಾನು ಮಾನ್ಯ ಸಚಿವರಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ತಾವು ರೈತನ ಮಗನಾಗಿದ್ದೀರಿ, ರೈತರಿಗೆ ಅನುಕೂಲವಾಗತಕ್ಕಂಥ ಸುಧಾರಣೆಗಳನ್ನು ತೆಗೆದುಕೊಂಡು ಬನ್ನಿ, ಇವತ್ತು ಒಂದು ಟ್ರಾನ್ಸ್‌ಫಾರ್ಮರ್ ಸುಟ್ಟಿದೆ ಎಂದರೆ 7–8 ಸಾವಿರ ರೂ.ಗಳನ್ನು ಕೊಡದಿದ್ದರೆ ಕೆಇಬಿ ಸೆಕ್ಷನ್ ಆಫೀಸರ್ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜನಿಯರ್, ಎಕ್ಸಿಕ್ಯೂಟಿವ್ ಇಂಜಿನಿಯರ್ ಸತ್ತರೂ ಮೆಟೀರಿಯಲ್ಸ್ ಕೊಡುವುದಿಲ್ಲ. ಟ್ರಾನ್ಸ್‌ಫಾರ್ಮರ್ ಕೊಡುವುದಿಲ್ಲ. ಅದನ್ನು ಸುಧಾರಣೆ ಮಾಡಿದರೆ ಏನಾದರೂ ಸುಧಾರಣೆಯಾಗುತ್ತದೆ. ಅದಕ್ಕಾಗಿ ನಾನು ಕಳಕಳಿಯಿಂದ ವಿನಂತಿಯನ್ನು ಮಾಡುತ್ತೇನೆ. ಇದರ ಬಗ್ಗೆ ನನ್ನದೇನೂ ವಿರೋಧವಿಲ್ಲ. 5 ಕಂಪನಿ ಅಲ್ಲ 10 ಕಂಪನಿಗಳನ್ನಾಗಿ ನೀವು ವಿಂಗಡಣೆ ಮಾಡಿ, ನಾನು ಈ ವಿಧೇಯಕದ ಬಗ್ಗೆ ಏನು ತಿಳಿದುಕೊಂಡಿದ್ದೇನೆಂದರೆ, ಸರ್ಕಾರ ಆರ್ಥಿಕವಾಗಿ ದಿವಾಳಿಯಾಗಿದೆ, ದುಡ್ಡಿಲ್ಲ, ಅದಕ್ಕಾಗಿ ಇನ್ನೊಂದು ಹೊಸ ಕಂಪನಿಯನ್ನು ಮಾಡಿ ಅದರ ಮೂಲಕವಾಗಿ ಸಾಲವನ್ನು ಪಡೆಯುವುದಕ್ಕಾಗಿ ಮಾಡಿದ್ದಾರೆ ಎಂದು ಇದಕ್ಕೆ ಸರ್ಕಾರದ ಗ್ಯಾರಂಟಿ

ಕೊಡುತ್ತಾರೆ, ಇದರ ಬಗ್ಗೆ ನಾನು ಇಷ್ಟೇ ಅರ್ಥಮಾಡಿಕೊಂಡಿದ್ದೇನೆಂದು ಹೇಳಿ, ಇದಕ್ಕೆ ನನ್ನ ವಿರೋಧವಿಲ್ಲ ಆಗಬಹುದೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್(ಶ್ರೀನಿವಾಸಪುರ) : ಮಾನ್ಯ ಅಧ್ಯಕ್ಷರೆ, ಮಾನ್ಯ ವಾಟಾಳ್ ನಾಗರಾಜ್‌ರವರು ಮತ್ತು ಮಾನ್ಯ ಮಾಧುಸ್ವಾಮಿಯವರು ಈ ವಿಧೇಯಕವನ್ನು ಸ್ವಾಗತ ಮಾಡಿದ ಮೇಲೆ ನಮಗೇನೂ ಗತ್ಯಂತರವಿಲ್ಲ. ನಾನು ಸ್ವಾಗತವನ್ನು ಮಾಡುತ್ತೇನೆ. ನಾವು ಆಡಳಿತ ಪಕ್ಷದವರು. ಮಾನ್ಯ ಮಂತ್ರಿಗಳು ಪ್ರಮಾಣವಚನವನ್ನು ಸ್ವೀಕಾರ ಮಾಡುವ ವೇಳೆಗೆ ಸಂವಿಧಾನಕ್ಕೆ ತಮ್ಮ ನಿಷ್ಠೆಯನ್ನು ವ್ಯಕ್ತಪಡಿಸಿ, ಯಾವ ವಿಧವಾದಂಥ ರಾಗ, ದ್ವೇಷ ಮತ್ತು ಮತ್ಸರ ಇಲ್ಲದೆ ನಾವು ಕೆಲಸವನ್ನು ಮಾಡುತ್ತೇವೆ, ಎಲ್ಲರ ಹಿತಕ್ಕಾಗಿ ಕೆಲಸವನ್ನು ಮಾಡುತ್ತೇವೆ. ಅಂತ ಹೇಳುತ್ತಾರೆ ಜಡ್ಜಸ್ ತರಹ ಮತ್ತು ಟ್ರಸ್ಟಿ ತರಹ ಇರುತ್ತೇವೆಂದು ಅರ್ಥ ಬರುವ ಹಾಗೆ ಹೇಳುತ್ತೇವೆ. ನಾನು ಈ ವಿಧೇಯಕವನ್ನು ಸ್ವಾಗತ ಮಾಡುತ್ತೇನೆ. ಮಾನ್ಯ ರೇವಣ್ಣನವರು ಹಾಸನ ಜಿಲ್ಲೆಯವರು, ಈ ಇಲಾಖೆ ಅವರ ಕೈಯಲ್ಲಿದೆ. ಆ ಭಾಗದಲ್ಲಿ ವಿದ್ಯುತ್ ತೊಂದರೆಯಾಗಿದೆ ಅದಕ್ಕಾಗಿ ಅವರು ಈ ವಿಧೇಯಕವನ್ನು ಮಂಡನೆ ಮಾಡುತ್ತಾರೆ. ಕೋಲಾರ ಜಿಲ್ಲೆಯಲ್ಲಿ ಯಾವ ನದಿಯೂ ಇಲ್ಲ, ಜಲಾಶಯ ಮತ್ತು ಅಣೆಕಟ್ಟು ಇಲ್ಲ, ಕೆರೆಗಳು ಸಿಲ್ಟ್‌ಆಫ್ ಆಗಿಬಿಟ್ಟಿವೆ, ಬೋರ್‌ವೆಲ್‌ಗಳು ಡ್ರೈ ಆಫ್ ಆಗಿವೆ, ಆದ್ದರಿಂದ ಆ ಬರುವ ಕರೆಂಟೂ ಕೂಡ ಬರುವುದಿಲ್ಲ. ಲೈನ್ ಮೆನ್‌ಗಳನ್ನು ಕೂಡ ನಾವು ಕೇಳುವ ಹಾಗೆ ಇಲ್ಲ, ಅದಕ್ಕಾಗಿ ನಮಗೆ ಯಾವುದೇ ವಿಧೇಯಕವೂ ಬೇಡ. ಮೈಸೂರು ಅರಮನೆ ಲಾಯದಲ್ಲಿರುವ ಕುದುರೆಯ ಬಾಲವಿದ್ದಂತೆ ಅಂದರೆ ಕುದುರೆಯ ಬಾಲ ಎಷ್ಟು ಉದ್ದ ಇದ್ದರೇನಂತೆ ಅದರ ಸುತ್ತ ಸುತ್ತಿಕೊಳ್ಳುತ್ತದೆ. ಇಡೀ ಲಾಯಕ್ಕೆಲ್ಲಾ ಬೀಸುತ್ತದಾ? I am hurt ನಮ್ಮ ಹಳ್ಳಿಯಲ್ಲಿ ಪ್ರತಿದಿವಸ ಕರೆಂಟು ಇರುವುದಿಲ್ಲ. ನನ್ನ ಸ್ವಂತ ಊರು ಪಂಚಾಯತಿ ಹೆಡ್‌ಕ್ವಾರ್ಟರ್ಸ್, ಲೈನ್‌ಮೆನ್ ನಮ್ಮ ಊರಿನಲ್ಲಿ ಇರುವುದಿಲ್ಲ. ಲೈನ್‌ಮೆನ್ ಎಲ್ಲಿ ಎಂದು ನಾವು ಕೇಳಿದರೆ, ಅವನು ಪಕ್ಕದಲ್ಲಿರುವ ಊರಿನಲ್ಲಿರುತ್ತಾನೆ, ಅವನನ್ನು ನಾವು ಗಾಡಿಕೊಟ್ಟು ಕರೆಯಿಸಬೇಕು. Let me not go out of the purview of the Bill. ಪವರ್ ಏನಾದರೂ ಅಡಿಷನಲ್ಲಾಗಿ ಜನರೇಟ್ ಮಾಡಿದ್ದೀರಾ? ಟ್ರಾನ್ಸ್‌ಮಿಷನ್ ಲಾಸಸ್‌ನ್ನು ಪ್ರಿವೆಂಟ್ ಮಾಡುವುದಕ್ಕೆ ಹೊಸ ಮಾರ್ಗ ಏನಾದರೂ ಕಂಡು ಹಿಡಿದಿದ್ದೀರಾ? ಮಾನ್ಯ ಕಾರಜೋಳರವರು ಹೇಳಿದಂತೆ, ಗುಮಾಸ್ತರು ಅಲ್ಲಿ ಇರುವ ಬದಲು ಇಲ್ಲಿ ಇರುವ ಸಲುವಾಗಿ ಅವರಿಗೆ ಒಂದು ಹೊಸ ಆಫೀಸ್‌ನ್ನು ಮಾಡುವುದು. ಆಫೀಸರ್ಸ್‌ಗೆ ಅನುಕೂಲವಾಗುವುದನ್ನು ಬಿಟ್ಟರೆ ಇದರಿಂದ ರೈತರಿಗೆ ಅನುಕೂಲವಾಗುವುದಿಲ್ಲ. ಏಕೆ ಈ ತರಹ ಆಲೋಚನೆ ಮಾಡುತ್ತಾರೊ ಗೊತ್ತಾಗುವುದಿಲ್ಲ. ಜನರಿಗೆ ಸಹಾಯಕವಾಗುವಂಥ ಒಂದು ವಿಧೇಯುಕವೆಂದು ಅನಿಸುವುದಿಲ್ಲ. ನಮಗೊಂದು ಡಿಸೇಲ್ ಪ್ಲಾಂಟ್‌ನ್ನು ಕೊಡತಕ್ಕಂಥ ಆಲೋಚನೆಯನ್ನು ಮಾಡಿದ್ದೀರಾ? ನೀವು ಹೇಮಾವತಿ ಮತ್ತು ಹಾರಂಗಿಯನ್ನು ಇಟ್ಟುಕೊಂಡಿದ್ದೀರಿ, ಕೆ.ಆರ್.ಎಸ್. ಮಂಡ್ಯದವರಿಗೆ ಅನುಕೂಲವಾಗುತ್ತದೆ. ಮಂಗಳೂರು ಮಲೆನಾಡಿನವರು, ಶಿವಮೊಗ್ಗದವರಿಗೆ ತುಂಗಾನದಿ ಇದೆ. ನಮಗೆ ಏನು ಇದೆ ಹಣೆಗೆ ಚಚ್ಚಿಕೊಳ್ಳುವುದಕ್ಕೆ. ನಮ್ಮಂಥವರ ಬಗ್ಗೆ ನೀವು ಯೋಚನೆ ಮಾಡಿ. ನೀವು ಮಂತ್ರಿಗಳಾಗಿ ನೀವು ಅಧಿಕಾರವನ್ನು ಚಲಾಯಿಸುವಾಗ ನಮ್ಮ ಹಿತವನ್ನೂ ಮನಸ್ಸಿನಲ್ಲಿಟ್ಟುಕೊಂಡು ನಮಗೂ ಕೂಡ ಸಮಾಧಾನವಾಗುವಂತಹದ್ದನ್ನು ಮಾಡಿದ್ದರೆ ಶಹಭಾಷ್ ಇವರು ಇಡೀ ರಾಜ್ಯದ ಬಗ್ಗೆ ಯೋಚನೆಯನ್ನು ಮಾಡುತ್ತಿದ್ದಾರೆ ಎಂದು ಹೇಳಬಹುದಾಗಿತ್ತು. ಸಚಿವಸಂಪುಟದಲ್ಲಿರುವವರು ಒಬ್ಬೊಬ್ಬರೂ ಅವರವರ ಸೌಕರ್ಯಕ್ಕೆ ತಕ್ಕಂತೆ

ಈ ರೀತಿಯ ವಿಧೇಯಕಗಳನ್ನು ತಂದಾಗ ನಾವು ಇವತ್ತು ಬಂಧಿಗಳು. ಆಡಳಿತಪಕ್ಷದಲ್ಲಿದ್ದೇವೆ, I am left with no option, but to support this Bill. me. acting as a member of the ruling party is different. My, representing here in this House in the interest of my people is totally different. If it is the dictate of my conscience, it tells me something else.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ಈ ಜಿಲ್ಲೆಗಳನ್ನು ಇಲ್ಲಿ ಇಂಟ್ರಡ್ಯೂಸ್ ಮಾಡಬೇಕಾದರೆ ಲೆಜಿಸ್ಲೇಚರ್ ಪಾರ್ಟಿ ಮುಂದೆ ಚರ್ಚೆ ಮಾಡಿ ತಮ್ಮ ಅಭಿಪ್ರಾಯಗಳನ್ನು ಸೇರಿಸಿ ಆಮೇಲೆ ಕ್ಯಾಬಿನೆಟ್ ಮುಂದೆ ಚರ್ಚೆ ಮಾಡಬೇಕು ಎನ್ನುವುದು ಸಂವಿಧಾನಾತ್ಮಕ ಪ್ರಾವಿಷನ್. I am shocked. ಈಗ ರೂಲಿಂಗ್ ಪಾರ್ಟಿಯವರಿಗೆ ಈ ಬಿಲ್ಲಿನ ಬಗ್ಗೆ ಗಮನವೇ ಇರಲಿಲ್ಲ ಎಂದರೆ Where will this House go?

SRI K.R. RAMESH KUMAR : Anyway, I don't want to comment about it. I don't want to get into controversy.
ನನಗೆ ಏನು ದುಃಖವಾಗುತ್ತೆ ಅಂದರೆ ನಮ್ಮ ಗೋಳನ್ನು ವಿಚಾರಿಸುವವರೇ ಇಲ್ಲ. ಕುಡಿಯುವ ನೀರಿಗೆ ಹಳ್ಳಿಗಳಿಗೆ ಹೋದರೆ ಅಷ್ಟೋ ಇಷ್ಟೋ ಬೋರ್‌ವೆಲ್‌ಗಳಲ್ಲಿ ನೀರು ಇದೆ. ಅದನ್ನು ಪಂಪ್ ಮಾಡಿಕೊಳ್ಳೋಣವೆಂದರೆ ಕರೆಂಟ್ ಇಲ್ಲವಲ್ಲಾ ಸ್ವಾಮಿ ಎಂದು ಹೇಳುತ್ತಾರೆ. ಹ್ಯಾಂಡ್‌ಪಂಪ್ ರಿಪೇರಿ ಇಲ್ಲ. ಕರೆಂಟ್ ಇಲ್ಲ. ಅದರ ಕಡೆಗೆ ಗಮನವನ್ನು ಕೊಡದೆ ಟ್ರಾನ್ಸ್‌ಮಿಷನ್ ಲಾಸ್ ಫರ್ವರ್ ಲಾಸ್ ಪ್ರೀವೆಂಟ್ ಮಾಡುವುದು ಹೇಗೆ ಎಂದು ಯೋಚನೆಯನ್ನು ಮಾಡದೆ.......

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ನಿಮಗೆ ಕೊಡುವುದಿಲ್ಲವೆಂದು ಹೇಳಿದವರು ಯಾರು? ನಿಮ್ಮ ಜಿಲ್ಲೆಯಲ್ಲಿ ಮಂತ್ರಿಗಳು ಇರಲಿಲ್ಲವೇ? ಶಾಸಕರು ಇಲ್ಲವೇ? ಸರ್ಕಾರದ ಒಡೆತನ ಇದ್ದವರು ಇಲ್ಲವೇ? ನಿಮಗೆ ಕೊಡುವುದಿಲ್ಲವೆಂದು ಹೇಳಿದವರು ಯಾರು? ನಿಮಗೆ ಯಾವ ವಿಚಾರದಲ್ಲಿ ನೀರು ಕೊಡುವುದಿಲ್ಲವೆಂದು ಹೇಳಿದವರು ಯಾರು?, ರಸ್ತೆ ಕೊಡುವುದಿಲ್ಲವೆಂದು ಹೇಳಿದವರು ಯಾರು? ನಿಮಗೆ ಯಾವುದು ಇಲ್ಲವೆಂದು ಹೇಳಿದ್ದರೆ ಅದರ ಬಗ್ಗೆ ತಾವು ಹೇಳಬೇಕು. ಸುಮ್ಮನೆ ನೀವು ಎಲ್ಲಾ ಜಿಲ್ಲೆಯವರನ್ನೂ ಸೇರಿಸಿ ನಮ್ಮ ಜಿಲ್ಲೆಯನ್ನು ಬಿಟ್ಟರು ಎಂದು ಹೇಳಿದರೆ ಹೇಗೆ? ನಾವು ಕೋಲಾರ ಜಿಲ್ಲೆಯವರ ಜೊತೆಯಲ್ಲಿದ್ದೇವೆ. ಕೋಲಾರ ಜಿಲ್ಲೆಯನ್ನು ಇದರ ಬಗ್ಗೆ ತಮಗೆ ಗೊತ್ತಿರಬಹುದು. ಕೋಲಾರ ಜಿಲ್ಲೆಯ ರೈಲು ಹೋದಾಗ ನಾನು ನಿರಂತರವಾಗಿ ಹೋರಾಟವನ್ನು ಮಾಡಿ ರೈಲನ್ನು ಕೊಡಿಸಿದ್ದೇನೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಆ ರೈಲನ್ನು ತೆಗೆದುಕೊಂಡು ಹೋಗಿ ನಿಮ್ಮ ಊರಿಗೆ ಬಿಟ್ಟುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್ : ಹೇಳಿ ಸಾರ್ ಇರಲಿ, ದಯವಿಟ್ಟು.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಆ ಚಿಕ್ಕರೈಲನ್ನು ನಿಮಗೆ ತಂದು ಕೊಟ್ಟುಬಿಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಆದರೆ ತಾವೇ ಇಲ್ಲಿ ಅಧ್ಯಕ್ಷರಾಗಿದ್ದೀರಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ಕೆಇಬಿ ಬಗ್ಗೆ ನಮ್ಮ ಗ್ರೌಸ್ ಕೂಡ ಇದೆ. ನಿಮಗೆ 400 ಕೆವಿ ಎಳೆದಿದ್ದಾರೆ. ನಿಮಗೆ ನಾನ್ ಕನ್‌ವೆನ್‌ಷಲ್ ಪವರ್ ಕೊಟ್ಟಿದ್ದಾರೆ. ಪಕ್ಕದ ಊರು ತುಮಕೂರು ಜಿಲ್ಲೆಗೆ ಬಿಟ್ಟಿಲ್ಲ. ಬರೀ 100 ಪರ್ಸೆಂಟ್ ಕೋಲಾರ ಜಿಲ್ಲೆಗೆ ಕೇಂದ್ರೀಕೃತವಾಗಿದೆ ಎಂಬುದು ನಮ್ಮ

ವಾದವಾಗಿದೆ. ನಿಮಗೆ ನ್ಯಾಷನಲ್ ಗ್ರಿಡ್‌ನಲ್ಲಿ ಬರುವ ಲೈನ್ ನಿಮಗೆ ಇದೆ. ಇವತ್ತು ಅದು ನಮಗೆ ಇಲ್ಲವಲ್ಲಾ.

ಶ್ರೀ ಎಂ.ಪಿ. ಪ್ರಕಾಶ್(ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಬೈರೇಗೌಡರು ಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ಒಂದು ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಸಿಸ್ಟಮ್ ಇಂಪ್ರೂವ್‌ಮೆಂಟ್ ಪ್ರತ್ಯೇಕವಾಗಿ ಕೋಲಾರ ಜಿಲ್ಲೆಗೆ ಆಗಿರುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಮೊದಲನೆ ವಿದ್ಯುಚ್ಛಕ್ತಿ ಮಂತ್ರಿ ಬಿ. ಚೆನ್ನಯ್ಯನವರು ಕೋಲಾರ ಜಿಲ್ಲೆಯವರು. ಕೆ.ಸಿ. ರೆಡ್ಡಿ ಹಾಗೂ ಕೆಂಗಲ್ ಹನುಮಂತಯ್ಯನವರ ಕಾಲದಲ್ಲಿ ಟಿ. ಚೆನ್ನಯ್ಯನವರು ಆಗ ಕೆ.ಸಿ. ರೆಡ್ಡಿಯವರು ಮೊದಲನೆಯ ಮುಖ್ಯಮಂತ್ರಿಗಳು ಕ್ಯಾಸಂಬಳ್ಳಿ ಚೆಂಗಲಲಾಯರೆಡ್ಡಿಯವರು ಹಯ ಹಳೆಯ ಮೈಸೂರಿನ ಮೊದಲನೆಯ ಮುಖ್ಯಮಂತ್ರಿಗಳು, ಅವರು ನಮ್ಮ ಊರಿನವರು ಅಲ್ಲ. ಬೆಳಗಾಂ ಹಾಗೂ ಧಾರವಾಡದವರಲ್ಲ, ಅವರು ಕೋಲಾರದವರೇ ಆಗಿದ್ದರು. ಆಗ ಮಾನ್ಯ ರಮೇಶ್‌ಕುಮಾರ್‌ರವರು ಸಣ್ಣ ಮಗುವೆಂದು ಕಾಣುತ್ತದೆ, ಆದರೆ ಇವತ್ತು ನಾನು ಅವರಿಗೆ ಕೈಮುಗಿದು ಕೇಳುತ್ತೇನೆ, ನೀವು ಏತಕ್ಕಾಗಿ ಎಲ್ಲರ ಮೇಲೂ ಧಾಳಿ ಮಾಡುತ್ತಿದ್ದೀರಿ? ನಿಮ್ಮ ಜೊತೆಯಲ್ಲಿ ನಾವು ಇದ್ದೇವೆ. ನಿಮ್ಮನ್ನು ನಾವೆಂದೂ ತಳ್ಳಿಹಾಕಿ ಹೋಗಿಲ್ಲ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ನೀವು ಹೀಗೆಯೇ ಮುಂದೆ ಕುಳಿತು ಕೊಂಡು ಎಲ್ಲರನ್ನೂ ಹೆದರಿಸಿ, ಎಲ್ಲವನ್ನೂ ಹೊಡೆದುಕೊಂಡು ಹೋಗಿ.

ಶ್ರೀ ವಾಟಾಳ್ ನಾಗರಾಜ್ : ಹೆದರಿಸಿ ಏನೂ ಹೊಡೆದುಕೊಂಡು ಹೋಗಿಲ್ಲ. ಇವರು ನಿಮಗೆ ಪೂರಾ ಕೊಟ್ಟುಬಿಟ್ಟಿದ್ದಾರೆ? ನಮಗೆ ಕುಡಿಯುವುದಕ್ಕೆ ನೀರಿಲ್ಲ ಸ್ವಾಮಿ ವಿದ್ಯುಚ್ಛಕ್ತಿ ತೊಂದರೆ, ಗಡಿನಾಡು ಪ್ರದೇಶವನ್ನು ಕೇಳುವವರು ಗತಿ ಇಲ್ಲ. ನಮ್ಮನ್ನು ಕೊನೆಯಲ್ಲಿ ಹಾಕಿಬಿಟ್ಟಿದ್ದಾರೆ. ಇವರ ಕಾಲದಲ್ಲಿಯೇ ಅವರು ಅಧ್ಯಕ್ಷರಾಗಿದ್ದಾಗ ಸಾವಿರ ಸಾರಿ ನಾನು ಧರಣಿ ಮಾಡಿದ್ದೇವೆ. ಸಭಾತ್ಯಾಗವನ್ನೂ ಕೂಡ ಮಾಡಿದ್ದೇನೆ. ಅವೆಲ್ಲವೂ ಅವರಿಗೆ ಗೊತ್ತಿದೆ. ಅದನ್ನು ಬಿಟ್ಟು ಈಗ ನಾವೆಲ್ಲರನ್ನೂ ಹೆದರಿಸಿ ತೆಗೆದುಕೊಂಡು ಹೋಗಿದ್ದೇವೆಂದು ಹೇಳುತ್ತಾರೆ, ಏನು ತೆಗೆದುಕೊಂಡು ಹೋಗಿದ್ದೇವೆ? ಪಟ್ಟಿಯನ್ನು ಮಾಡಿ ಹೇಳಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ(ಜಲಸಂಪನ್ಮೂಲ ಸಚಿವರು) : ಮಾನ್ಯ ಅಧ್ಯಕ್ಷರೆ, ಹೋಗಲಿ ಬಿಡಿ, ನೀವು ಮೂವರು ಸೇರಿ ಶ್ರೀರಾಮರೆಡ್ಡಿಯವರಿಗೆ ಏನು ಮಾಡಿದಿರಿ?

ಶ್ರೀ ವಾಟಾಳ್ ನಾಗರಾಜ್ : ಶ್ರೀರಾಮರೆಡ್ಡಿಯವರಿಗೆ, ಮಾನ್ಯ ಸಚಿವರಾದ ಶ್ರೀ ಖರ್ಗೆಯವರು ಒಳ್ಳೆಯ ಪ್ರಶ್ನೆಯನ್ನೇ ಕೇಳಿದ್ದಾರೆ. ಶ್ರೀರಾಮರೆಡ್ಡಿಯವರ ಬಗ್ಗೆ ಒಂದು ಪದವನ್ನು ಹೇಳುತ್ತೇನೆ. ಇದು ಹೇಳುವುದಿಲ್ಲ. ನಿಮಗೆ ಹೇಳಿದ್ದನ್ನು ಹೇಳುವುದಿಲ್ಲ ಬಿಡಿ. ಶ್ರೀರಾಮರೆಡ್ಡಿಯವರಿಗೆ ಮದುವೆ ಮಾಡಬೇಕೆಂದು ನಾವೆಲ್ಲರೂ ತೀರ್ಮಾನವನ್ನು ಮಾಡಿದ್ದೇವೆ, ಅದು ಸ್ಪಷ್ಟ. ಮಾನ್ಯ ಸಚಿವರಾದ ಶ್ರೀ ಖರ್ಗೆಯವರು ಇದನ್ನು ಸದನದ ಗಮನಕ್ಕೆ ತಂದಾಗ ನಾವು ಮತ್ತು ನಮ್ಮ ಸ್ನೇಹಿತರು ಅವರ ಬಗ್ಗೆ ನಮಗೆ ಬಹಳ ಗೌರವವಿದೆ. ಅವರ ಬಗ್ಗೆ ಪ್ರೀತಿ ಮತ್ತು ವಿಶ್ವಾಸವಿದೆ. ಅವರು ಬಹಳ ದೊಡ್ಡ ಹೋರಾಟಗಾರರಾಗಿದ್ದಾರೆ. ಇದರ ಜೊತೆಗೆ ಅವರು ಬ್ರಹ್ಮಚಾರಿ ಎಂಬುದು ಎಲ್ಲರಿಗೂ ಗೊತ್ತು. ಆದ್ದರಿಂದ ಅವರಿಗೆ ಮದುವೆ ಮಾಡತಕ್ಕಂತಹ ಹೊಣೆಯನ್ನು ನಾವು ಹೊತ್ತುಕೊಂಡಿದ್ದೇವೆ. ನಮ್ಮ ಜಯಪ್ರಕಾಶ್‌ಹೆಗ್ಡೆಯವರು ಅವರಿಗೆ ವಧುವನ್ನು ನೋಡತಕ್ಕಂತಹ ವಿಚಾರದ ಬಗ್ಗೆ ಅವರಿಗೆ ವಹಿಸಿದ್ದೇನೆ. ಈಗಾಗಲೇ ಅವರು ನೋಡಿದ್ದಾರೆ. ನಾನು ಮದುವೆಯನ್ನು

ವಹಿಸಿಕೊಂಡಿದ್ದೇವೆ, ಇವರು ಹೊರಗಡೆ ಸ್ವಾಗತ ಮಾಡತಕ್ಕಂತಹ ಸ್ನೇಹಿತರೆಲ್ಲರೂ, ಮೊನ್ನೇ ದಿನ ಜಯಪ್ರಕಾಶ್ ಹೆಗ್ಡೆಯವರು ಏನು ಹೇಳಿದ್ದಾರೆಂದರೆ ವಧುವನ್ನು ನೋಡಿದ್ದೇನೆ, ಅವರು ಇನ್ನೂ ಮದುವೆಯಾಗಿಲ್ಲ, ನನ್ನ ಗತಿ ಏನಾಗಬೇಕು, ನಮ್ಮ ಮನೆಯವರು ಇದ್ಯಾಕೆ ವಧುವನ್ನು ನೋಡುತ್ತಿದ್ದೀರಿ ಎಂದು ಅವರನ್ನು ಕೇಳಿಬಿಟ್ಟರಂತೆ, ಅವರು ವಧು ನನಗಲ್ಲ, ಶ್ರೀರಾಮರೆಡ್ಡಿಯವರಿಗೆ ನೋಡುತ್ತಿದ್ದೇವೆ ಎಂದು ಹೇಳಿದರಂತೆ, ಇಷ್ಟು ಸತ್ಯ ಇದರಲ್ಲಿ ಏನು ಅನುಮಾನವಿಲ್ಲ. ಅವರಿಗೆ ಮದುವೆ ಮಾಡಿಸುವ ಬಗ್ಗೆ ನಾವು ಸ್ಪಷ್ಟವಾಗಿದ್ದೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಅಧ್ಯಕ್ಷತೆ ಖರ್ಗೆಯವರದ್ದು?

ಶ್ರೀ ವಾಟಾಳ್ ನಾಗರಾಜ್ : ಅವರೇ, ಅದರಲ್ಲಿ ನಿಮ್ಮ ಅಧ್ಯಕ್ಷತೆಯಲ್ಲಿಯೇ ನಿಮ್ಮ ನೇತೃತ್ವದಲ್ಲಿಯೇ ನಾವು ಮದುವೆಯನ್ನು ಮಾಡಿಸುತ್ತೇವೆ. ಆದ್ದರಿಂದ ರಮೇಶ್‌ಕುಮಾರ್‌ರವರು, ತಾವು ಬಂದು ಆರ್ಶೀವಾದವನ್ನು ಮಾಡಬೇಕು, ಈ ವಿಚಾರದಲ್ಲಿ ತಾವು ಕೋಪಿಸಿಕೊಳ್ಳಬೇಡಿ. ನಿಮಗೆ ಕೋಲಾರಕ್ಕೆ ಏನೋ ಅನ್ಯಾಯವಾಯಿತು. ಎಂದು ಎಲ್ಲರ ಮೇಲೂ ಧಾಳಿ ಮಾಡುತ್ತಿದ್ದೀರಿ. ನಿಮ್ಮ ಜೊತೆಯಲ್ಲಿ ನಾವು ಸ್ನೇಹಿತರಾಗಿದ್ದೇವೆ, ಏಕೋ ತಾವು ಎಲ್ಲವನ್ನೂ ಕಳೆದುಕೊಳ್ಳುತ್ತಿದ್ದೀರಿ. ನಿಮ್ಮನ್ನು ಬಿಡಬೇಕಾಗುತ್ತೆ ಈ ತರಹ ಶುರುಮಾಡಿಕೊಂಡು ಬಿಟ್ಟರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಿಮ್ಮಿಬ್ಬರ ಫ್ರೆಂಡ್‌ಶಿಪ್ ಯೂರೋಪ್ ಟೂರಿನಿಂದ ಹಿಡಿದುಕೊಂಡು ಇಲ್ಲಿಯವರೆಗೆ ಇದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಖರ್ಗೆಯವರು ಕೆಣಕುತ್ತಿದ್ದಾರೆ. ಆ ಯೂರೋಪ್ ಟೂರಿನ ಅವರ ಕಥೆಯನ್ನು ಈ ಸದನದಲ್ಲಿ ಹೇಳಿದರೆ ಸಭೆಯಲ್ಲಿ ಹೇಳಬಾರದು. ಖಂಡಿತವಾಗಿಯೂ ಹೇಳಬಾರದು. ಹೇಳಿದರೆ ಪಾಪ ನೋವಾಗುತ್ತದೆ. ಅವರದ್ದು ಹಾಗೂ ಯಡಿಯೂರಪ್ಪನವರದ್ದು ಹೇಳಬಾರದು. ಇವರಿಬ್ಬರದ್ದು ಇಲ್ಲಿ ಹೇಳಲೇಬಾರದು. ಇದರ ಬಗ್ಗೆ ನನಗೆ ಹಾಗೂ ರಮೇಶ್‌ಕುಮಾರ್‌ಗೆ ಮಾತ್ರ ಗೊತ್ತು. ನಾವು ಹೇಳುವುದಕ್ಕೆ ಹೋಗುವುದಿಲ್ಲ. ನಾನು ಅದನ್ನು ಹೇಳಿದರೆ ಅವರಿಬ್ಬರೂ ಈ ಸದನದಲ್ಲಿ ಇರುವುದಕ್ಕಾಗುವುದಿಲ್ಲ, ಬೇಡ ಬಿಡಿ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಯಾವ ವಿಚಾರವಿದ್ದರೂ ಕೂಡ ನಾನು ಸತ್ಯವಾಗಿಸ ಹೇಳುತ್ತೇನೆ. ಯೂರೋಪ್ ಟೂರಿನಲ್ಲಿ ಅವರಿಗೆ ಏನು ಗತಿ ಬಂದಿತ್ತು ಎಂಬುದನ್ನು ಮಾತ್ರ ನಾನು ಹೇಳುವುದಿಲ್ಲ. ಮಾನ್ಯ ವಾಟಾಳ್‌ರವರಿಗೆ ಏನು ಗತಿ ಬಂದಿತ್ತು ಎಂಬುದನ್ನು ಹೇಳುವುದೇ ಬೇಕಾಗಿಲ್ಲ. ನಾನು ಹೇಳುವುದು ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ಈಗ ಸದನದಲ್ಲಿ ವರನ ಆಗಮನವಾಯಿತು.

(ಸದನದಲ್ಲಿ ನಗು)

ಶ್ರೀ ಹಂಪನ ಗೌಡ ಬಾದರ್ಲಿ : ಹಾಗೆಂದ ಮೇಲೆ ವಧು ಪರಾರಿ.

ಮಾನ್ಯ ಸದಸ್ಯರು : ಮಾನ್ಯ ಅಧ್ಯಕ್ಷರೆ, ವಧು ಬೇಕಾಗಿದೆ.

ಶ್ರೀ ಹಂಪನ ಗೌಡ ಬಾದರ್ಲಿ : ವಾಟಾಳ್ ನಾಗರಾಜ್‌ರವರೆ, ವರನ ಆಗಮನ ವಧುವಿನ ಪರಾರಿ.

(ಸದನದಲ್ಲಿ ನಗು)

ಶ್ರೀ ಕೆ.ಆರ್. ರಮೇಶ್‌ಕುಮಾರ್ : ನಾನು ಟ್ರಾನ್ಸ್‌ಮಿಷನ್ ಲಾಸಸ್ ವೋಲ್ಟೇಜ್ ಡ್ರಾಪ್ ಬಗ್ಗೆ ಮಾತನಾಡುವಾಗ ಇವರು ಮದುವೆಯ ಬಗ್ಗೆ ಪ್ರಸ್ತಾಪ ಮಾಡಿದರು. ನಾನು ವೋಲ್ಟೇಜ್

ಡ್ರಾಪ್ ಆಗುತ್ತಿದೆ, ಟ್ರಾನ್ಸ್‌ಮಿಷನ್ ಲಾಸಸ್ ಎಂದರೆ ನೀವು ಮದುವೆ ವಿಚಾರವನ್ನು ತೆಗೆದುಕೊಂಡು ಬಂದಿದ್ದೀರಿ.

ಶ್ರೀ ವಾಟಾಳ್ ನಾಗರಾಜ್ : ಅದಕ್ಕೆ ತಕ್ಕಂತೆ ಬೇಕಾದ ವಧುವನ್ನು ಹುಡುಕಿದ್ದೇವೆ. ಅದು ಅವರ ನಾಯಕತ್ವದಲ್ಲಿ ನಡೆಯಬೇಕು, ಮಾನ್ಯ ಖರ್ಗೆಯವರು ಅದಕ್ಕೆ ಒಪ್ಪಿಕೊಳ್ಳಬೇಕು.

ಶ್ರೀ ಅರಗ ಜ್ಞಾನೇಂದ್ರ : ಹೊಸ ಟ್ರಾನ್ಸ್‌ಫಾರ್ಮರ್ ಹಾಕಿದರೆ ವೋಲ್ಟೇಜ್ ಸರಿಹೋಗಬಹುದು.

ಅಧ್ಯಕ್ಷರು : ಮಾನ್ಯ ರಮೇಶ್‌ಕುಮಾರ್‌ರವರೇ, ತಾವು ಮಾತನಾಡಿ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಮಾನ್ಯ ಸದಸ್ಯರಾದ ಅರಗ ಜ್ಞಾನೇಂದ್ರರವರಲ್ಲಿ ನಿಜವಾಗಲೂ ಕೂಡ ಜ್ಞಾನಭಂಡಾರವಿದೆ ಎಂದು ಈಗ ಮನವರಿಕೆಯಾಯಿತು. ಟ್ರಾನ್ಸ್‌ಫಾರ್ಮರ್ ವಿಚಾರ ನಮಗೆ ತೋಚೇ ಇರಲಿಲ್ಲ. ಆದರೆ ಇದು ಸ್ವಾನುಭವ.

ಶ್ರೀ ಎಂ.ಪಿ. ಪ್ರಕಾಶ್ : ನಮ್ಮ ರಮೇಶ್‌ಕುಮಾರ್‌ರವರು ಹೇಗೆ ಇದ್ದಾರೆಂದರೆ ಸತ್ಯಭಾಮೆಗೆ ಒಪ್ಪಿಸಬೇಕೆಂದು ನಾರದರು ರುಕ್ಮಿಣಿಗೆ ನಾನು ಆ ಪುಷ್ಪವನ್ನು ಎಲ್ಲಿಗೆ ಕೊಟ್ಟೆ ಕೃಷ್ಣ ಎಂದು ಹೇಳಿದರಂತೆ. ಅಂದರೆ ಇವರು ಕೊಟ್ಟರು ಎಂದು ಅಲ್ಲಿ ಸತ್ಯಭಾಮೆಗೆ ತಿಳಿಸಬೇಕಾಗಿತ್ತು. ಅವರು ವೋಲ್ಟೇಜ್ ಡ್ರಾಪ್ ಬಗ್ಗೆ ಮಾತನಾಡುತ್ತಲೇ ಇರಲಿಲ್ಲ, ಟ್ರಾನ್ಸ್‌ಫಾರ್ಮರ್‌ನಲ್ಲಿ ಕರೆಂಟ್ ಇಲ್ಲ ನಾನು ಎಲ್ಲಿ ಹೇಳಿದೆ ಎಂದು ಅದನ್ನು ಪ್ರಸ್ತಾಪ ಮಾಡಿ ಮತ್ತೆ ಅವರ ಕಿಡಿ ಎಬ್ಬಿಸಿ ಬಿಟ್ಟರಿ ಈಗ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ನಾನು ಮಂತ್ರಿಗಳಲ್ಲಿ ರಿಕ್ವೆಸ್ಟ್ ಮಾಡಿಕೊಳ್ಳುತ್ತೇನೆ. ಇದರ ಬಗ್ಗೆ ನಮಗೆ ಸಂಪೂರ್ಣ ಸ್ವಾಗತವಿದೆ. ಅವರಿಗೆ ಚಿಕ್ಕ ವಯಸ್ಸು, ಅವರು ಹಿಂದೆ ಮಂತ್ರಿಗಳಾಗಿದ್ದಾಗಲೂ ಕೂಡ ನಾನು ಅಧ್ಯಕ್ಷ ಪೀಠದಲ್ಲಿ ಕುಳಿತು ಅವರಿಗೆ ಸಹಕಾರವನ್ನು ನೀಡಿದ್ದೇನೆ. ಅವರ ಬಗ್ಗೆ ನನಗೆ ಸದ್ಭಾವನೆ ಇದೆ. ನಾನು ಅವರಿಗೆ ಒಬ್ಬ ಹಿರಿಯಣ್ಣನಂತೆ. ಅವರಿಗೆ ಅಡ್ವೈಸ್ ಮಾಡುವುದಕ್ಕೆ ಇಷ್ಟಪಡುತ್ತೇನೆ. ಯಾವುದೇ ಒಂದು ಕೆಲಸವನ್ನು ಮಾಡಬೇಕಾದರೆ larger perspective ಇಟ್ಟುಕೊಳ್ಳಬೇಕು ಈಗ ಅವರ ಜಿಲ್ಲೆಗೆ ಸಹಾಯವಾಗುತ್ತದೆ ಆಗಲಿ ಅದರ ಬಗ್ಗೆ ನನಗೆ ದುಃಖವಿಲ್ಲ. ಆದರೆ ಇಷ್ಟಕ್ಕೆ ಸೀಮಿತವಾಗಬಾರದು. ಎಲ್ಲಾ ಮಂತ್ರಿಗಳೂ ಕೂಡ ಅವರ ತಮ್ಮ ಅಧಿಕಾರವನ್ನು ವಿನಿಯೋಗಿಸುವಾಗ ಚಲಾಯಿಸುವಾಗ ಇಡೀ ರಾಜ್ಯವನ್ನು ಸಮಗ್ರವಾದಂತಹ ದೃಷ್ಟಿಯಲ್ಲಿಟ್ಟುಕೊಂಡು ಸಾರ್ವಜನಿಕ ಹಿತವನ್ನು ನೆನಪಿನಲ್ಲಿಟ್ಟುಕೊಂಡು ಮುಂದಕ್ಕೆ ಶಾಶ್ವತವಾಗಿ ಇತಿಹಾಸದಲ್ಲಿ ಅವರು ಒಂದು ಭಾಗವಾಗಿ ಉಳಿಯಬೇಕು. ಹಾಗೆ ಮಾಡಿದರೆ ಈ ಶಾಸನಸಭೆಗೆ ಇಲ್ಲಿಯ ಕಲಾಪಗಳಿಗೆ ಹೆಚ್ಚು ಗೌರವ ಬರುತ್ತದೆ ಎನ್ನುವಂತಹ ಮಾತನ್ನು ಹೇಳಿ ಪುನಃ ಈ ವಿಧೇಯಕಕ್ಕೆ ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) : ಸನ್ಮಾನ್ಯ ಅಧ್ಯಕ್ಷರೇ, ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿಯನ್ನು ವಿಭಜನೆ ಮಾಡಿಕೊಂಡು ಎರಡು ಕಂಪನಿಗಳಾಗಿ ನಿರ್ಮಾಣ ಮಾಡಿ, ಚಾಮುಂಡೇಶ್ವರಿ ವಿದ್ಯುಚ್ಛಕ್ತಿ ಸರಬರಾಜು ಕಂಪನಿಯನ್ನು ಮಾಡುವ ಮೂಲಕ ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣಾ (ತಿದ್ದುಪಡಿ) ವಿಧೇಯಕವನ್ನು ತಂದಿರುವಂಥಾದ್ದು ಆಡಳಿತಾತ್ಮಕವಾಗಿ ಸುಧಾರಣೆಯನ್ನು ತರುವಂತಹ ಒಂದು ಪ್ರಯತ್ನವಾಗಿದ್ದರೂ ಕೂಡ ನಾವು ಅನೇಕ ನಿರೀಕ್ಷೆಗಳನ್ನು ಇಟ್ಟುಕೊಂಡಿದ್ದೆವು. ಈ ಮೆಸ್ಕಾಮ್ ಆದನಂತರ ಸಾಕಷ್ಟು ಬದಲಾವಣೆಗಳು ಆಗುತ್ತವೆ ಎಂದು ಸಹಜವಾಗಿ ಸಾಕಷ್ಟು ನಿರೀಕ್ಷೆಗಳನ್ನು ಇಟ್ಟುಕೊಂಡಿದ್ದೆವು. ಆದರೆ ಇವತ್ತು ಕೂಡ ನಗರದ ಫೀಡರ್‌ಗಳು

ಓವರ್‌ಲೋಡ್ ಆಗಿ ಆ ಪಂಪಿಂಗ್ ಸ್ಟೇಷನ್‌ಗಳಲ್ಲಿರುವಂತಹ ಸಮಸ್ಯೆಗಳು, ಅಂಡರ್‌ಗ್ರೌಂಡ್ ಡ್ರೈನೇಜ್‌ಗ ಸಂಬಂಧ ಪಟ್ಟಂತೆ ಅಲ್ಲಿರುವಂತಹ ಪಂಪಿಂಗ್ ಸ್ಟೇಷನ್‌ಗಳಲ್ಲಿ ಇರುವಂತಹ ಇತ್ಯಾದಿ ಅನೇಕ ಸಮಸ್ಯೆಗಳು ಉದ್ಭವವಾಗಿವೆ. ಇದಕ್ಕೆ ಪರಿಹಾರವಾಗಿ ಹೊಸ ಟ್ರಾನ್ಸ್‌ಫಾರ್ಮರ್‌ಗಳನ್ನು ಹಾಕಬೇಕು. ಅದರ ಜತೆಯಲ್ಲಿ ಹೊಸ ಸಬ್‌ಸ್ಟೇಷನ್‌ಗಳನ್ನು ನಿರ್ಮಾಣ ಮಾಡಬೇಕು ಎಂದು ಹೇಳುವಂತಹ ಒಂದು ಆಶಯ ಕೂಡ ನಮ್ಮದಿತ್ತು. ಆ ಬಗ್ಗೆ ಚರ್ಚೆ ಮಾಡಿ ರಿವ್ಯೂ ಮೀಟಿಂಗ್‌ನಲ್ಲಿ ಅದರ ಬಗ್ಗೆ ನಿರ್ಧಾರ ಕೂಡ ಆಗಿತ್ತು. ಆದರೆ ನಮ್ಮ ದುರಾದೃಷ್ಟ ಅಂತ ಹೇಳಿದರೆ ಈ ಸಬ್ ಸ್ಟೇಷನ್‌ಗಳನ್ನು ಮಾಡಲಿಕ್ಕೆ ಕಂಟ್ರಾಕ್ಟರ್ಸ್ ಏಕೆ ಮುಂದೆ ಬರುತ್ತಿಲ್ಲ? ಈಗ ಇರುವಂತಹ ಎಸ್.ಆರ್. ರೇಟ್‌ಗಳನ್ನು ನವೀಕರಿಸುವಂತಹ ಅವಶ್ಯಕತೆ ಇದೆಯಾ? ಏಕೆಂದರೆ ಇಲ್ಲಿ ಕೆಲಸ ಇದೆ, ಆದರೆ ಕಂಟ್ರಾಕ್ಟರ್ಸ್ ಬರುತ್ತಿಲ್ಲ. ಇಂತಹ ಒಂದು ಸನ್ನಿವೇಶದಲ್ಲಿ ಈ ಒಂದು ಸಬ್‌ಸ್ಟೇಷನ್‌ಗಳು ಆಗದಂಥ ಒಂದು ದುಸ್ಥಿತಿ ಕೂಡ ನಮ್ಮಲ್ಲಿದೆ. ಇನ್ನೊಂದು ಏನೆಂದರೆ ಈ ಸಬ್‌ಸ್ಟೇಷನ್ ಮಾಡಬೇಕೆಂದು ಹೇಳಿದರೆ ಜಾಗಬೇಕು, ಸ್ಥಳಗಳನ್ನು ಖರೀದಿ ಮಾಡಬೇಕು. ಇಲ್ಲವೇ ಸರ್ಕಾರದ ಜಾಗ ಇರಲಿ, ಕಾರ್ಪೋರೇಷನ್ ಜಾಗ ಇರಲಿ ಯಾವುದೇ ಜಾಗವನ್ನು ಕೊಡುವಂತಹ ವ್ಯವಸ್ಥೆ ಬೇಕು. ಆದರೆ ಇಲ್ಲಿ ಏನಾಗಿದೆ ಎಂದು ಹೇಳಿದರೆ ಅರ್ಜಿಗಳನ್ನು ಹಾಕುತ್ತಾರೆ. ಆದರೆ ಕೋಆರ್ಡಿನೇಶನ್ ಇಲ್ಲ. ಕನಿಷ್ಠ ಜಿಲ್ಲಾಧಿಕಾರಿಗಳ ಮಟ್ಟದಲ್ಲಿ ಒಂದು ಕೋಆರ್ಡಿನೇಶನ್ ಕಮಿಟಿಯನ್ನು ಮಾಡಿ ತಕ್ಷಣ ಇದಕ್ಕೆ ಸಂಬಂಧಪಟ್ಟಿರತಕ್ಕಂತ ಜಾಗಕ್ಕೆ ಬಂದಿರತಕ್ಕಂಥ ಸಮಸ್ಯೆಯನ್ನು ಇತ್ಯರ್ಥಮಾಡುವ ನಿಟ್ಟಿನಲ್ಲಿ ಕೂಡ ಒಂದು ಸಮಿತಿ ಮಾಡಿದರೆ ಮತ್ತು ಆಗ್ಗಾಗ್ಗೆ ಅದಕ್ಕೆ ರಿವ್ಯೂ ಮೀಟಿಂಗ್ ಮಾಡಿದಲ್ಲಿ ಏನಾದರೂ ಒಂದು ರೀತಿಯಲ್ಲಿ ಸಮಸ್ಯೆಯನ್ನು ಪರಿಹಾರ ಮಾಡಲಿಕ್ಕೆ ಸಾಧ್ಯವಿದೆ. ಇನ್ನೊಂದು ಪ್ರಮುಖವಾಗಿ ಇರತಕ್ಕಂತ ಸಮಸ್ಯೆ ಎಂದರೆ ಇಷ್ಟು ಕಟ್ಟಡಗಳ ಸಮುಚ್ಚಯಗಳು ಏನು ಬರುತ್ತಿವೆ, ಅದಕ್ಕೆ ಅನುಗುಣವಾಗಿ ಮೀಟರ್‌ಗಳು ಸಿಗುತ್ತಿಲ್ಲ. ಈ ಮೀಟರ್‌ಗಳು ಸಿಗದೇ ಇರುವಂತಹ ಒಂದು ಸಮಸ್ಯೆ ಇದೆ. ಇದಕ್ಕೆ ಬೇಕಾದಂಥ ಪರಿಹಾರವನ್ನು ಮಾಡುವುದು ಅದೇನೂ ದೊಡ್ಡದಾದ ಅಥವಾ ಕಠಿಣವಾದಂಥ ಸಮಸ್ಯೆ ಏನೂ ಇಲ್ಲ. ಆದರೆ ಇದನ್ನು ಏಕೆ ಮಾಡಲಿಕ್ಕೆ ಆಗುತ್ತಿಲ್ಲ? ಇಂತಹ ಒಂದು ಸಮಸ್ಯೆಯನ್ನೂ ಕೂಡ ನಾವು ಎದುರಿಸುತ್ತಿದ್ದೇವೆ. ಇದೇ ರೀತಿಯಲ್ಲಿ ಇನ್‌ಸ್ಪೆಕ್ಟೊರೇಟ್ ಎಂದು ಹೇಳುವಂತಹ ಯಾವ ಒಂದು ವಿಭಾಗ ಇದೆ. ಇದರ ಬಗ್ಗೆ ತಾವು ಕಡಿವಾಣ ತರುವಂತಹ ಅವಶ್ಯಕತೆ ಇದೆ. ಇದರ ಬಗ್ಗೆ ಕಡಿವಾಣವನ್ನು ತರದೇ ಇದ್ದರೆ ಇಡೀ ನಿಮ್ಮ ಇಲಾಖೆಗೆ ಕೆಟ್ಟ ಹೆಸರು ಬರುವ ಸಾಧ್ಯತೆ ಇದೆ. ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ನಾನು ವಿನಂತಿ ಮಾಡುತ್ತೇನೆ. ಮತ್ತೆ ಎ.ಪಿ.ಡಿ.ಪಿ. ಇದಕ್ಕೆ ಸಂಬಂಧ ಪಟ್ಟಿರತಕ್ಕಂತ ಕೇಂದ್ರಕ್ಕೆ ಹಿಂದಿನ ಕೇಂದ್ರ ಸರ್ಕಾರದ ಇರುವಾಗಲೇ 23 ಕೋಟಿ ರೂಪಾಯಿ ಬಿಡುಗಡೆ ಆಗಿತ್ತು. ಮೆಸ್ಕಾಂ ವ್ಯಾಪ್ತಿಗೆ 23 ಕೋಟಿ ರೂಪಾಯಿಗಳು ಬಿಡುಗಡೆ ಆಗಿದ್ದರೂ ಕೂಡ ನಾವು ರಿವ್ಯೂ ಮಾಡಿದಾಗ 20–25 ಪರ್ಸೆಂಟ್ ಕೆಲಸ ಕೂಡ ಆಗಿರಲಿಲ್ಲ. ಕಳೆದ ಒಂದೂವರೆ ವರ್ಷದಲ್ಲಿ ಇವರು ಏನು ಸಾಧನೆ ಮಾಡಿದ್ದರು? ಏಕೆಂದರೆ ಒಂದು ಹೊಸ ಸಂಸ್ಥೆ ಬಂದನಂತರ ನಾವು ಅನೇಕ ನಿರೀಕ್ಷೆಗಳನ್ನು ಇಟ್ಟುಕೊಂಡಿದ್ದೆವು. ಆದರೆ ಅದಕ್ಕೆ ಅನುಗುಣವಾಗಿ ಕೆಲಸ ಆಗುತ್ತಿಲ್ಲ ಎನ್ನುವಂತಹ ನೋವನ್ನು ಕೂಡ ಈ ಸಂದರ್ಭದಲ್ಲಿ ನಾನು ವ್ಯಕ್ತಪಡಿಸಿ ಬಹುಶಃ ಅನೇಕ ಸುಧಾರಣೆಗಳನ್ನು ತಂದು, ಟ್ರಾನ್ಸ್‌ಮಿಶನ್ ಲಾಸ್ ಹಾಗೂ ಇನ್ನಿತರ ಲಾಸ್‌ಗಳನ್ನು ಕಡಿಮೆ ಮಾಡಿ ಮುಂದೆ ಒಳ್ಳೆಯ ರೀತಿಯಲ್ಲಿ ಗ್ರಾಹಕರಿಗೆ ಸೇವೆಯನ್ನು ಕೊಡುವಂತಹ ಸುಧಾರಣೆಯನ್ನು ಇದರಲ್ಲಿ ತರುವಂತಹ ಅವಶ್ಯಕತೆ ಇದೆ. ಆಡಳಿತಾತ್ಮಕವಾಗಿ ವಿಂಗಡಣೆ ಮಾಡುವುದು ಮಾತ್ರವಲ್ಲ,

ಈ ಒಂದು ಕ್ವಾಲಿಟೇಟಿವ್ ವರ್ಕ್‌ನಲ್ಲಿ ಸುಧಾರಣೆ ಮಾಡುವುದು ಅವಶ್ಯಕತೆ ಇದೆ ಎನ್ನತಕ್ಕಂಥ ಮಾತನ್ನು ಹೇಳಿ ತಂದಿರುವಂತಹ ಈ ಬಿಲ್ ಒಂದು ಅರ್ಥದಲ್ಲಿ ಆಡಳಿತಾತ್ಮಕವಾಗಿ ಒಂದು ರೀತಿಯಲ್ಲಿ ಅಲ್ಲಿಯ ಜನರಿಗೆ ಅನುಕೂಲ ಆಗಲಿ, ಮೆಸ್ಕಾಮ್‌ಗೆ ಸಂಬಂಧಪಟ್ಟಂತೆ ನಾಲ್ಕೈದು ಜಿಲ್ಲೆಗಳು ಮಾತ್ರ ಇರುವುದರಿಂದ ಇನ್ನೂ ಹೆಚ್ಚಿನ ರೀತಿಯಲ್ಲಿ ಅವರಿಗೆ ಸೇವೆಯನ್ನು ಕೊಡುವುದಕ್ಕೆ, ಅವರಿಗೆ ಅನುಕೂಲವಾಗುವಂತಹ ನಿಟ್ಟಿನಲ್ಲಿ ಅದನ್ನು ಸ್ವಾಗತ ಮಾಡುತ್ತಾ, ಈ ಸುಧಾರಣೆಗಳನ್ನು ತರುವ ನಿಟ್ಟಿನಲ್ಲಿ ತಾವು ಶೀಘ್ರ ಕ್ರಮ ತೆಗೆದುಕೊಳ್ಳಬೇಕೆಂದು ನಾನು ವಿನಂತಿಯನ್ನು ಮಾಡುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಮಂತ್ರಿ) : ಮಾನ್ಯ ಸಭಾಧ್ಯಕ್ಷರೇ, ಈಗಾಗಲೇ ರಾಜ್ಯದಲ್ಲಿ ಸುಮಾರು ಕೆ.ಪಿ.ಟಿ.ಸಿ.ಎಲ್.ನ ನಾಲ್ಕು ಕಂಪನಿಗಳು ಇದ್ದು ಈಗ ಏನು ಚಾಮುಂಡೇಶ್ವರಿ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ಐದನೇ ಕಂಪನಿಯಾಗಿ ಹೊರಹೊಮ್ಮುತ್ತಿರುವುದರ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರಾದಂಥ ಶ್ರೀ ಯಡಿಯೂರಪ್ಪನವರು, ಮಾನ್ಯ ಕಾರಜೋಳ ಅವರು, ಮಾನ್ಯ ಮಾಧುಸ್ವಾಮಿಯವರು ಮಾನ್ಯ ವಾಟಾಳ್ ನಾಗರಾಜ್ ಅವರು, ಮಾನ್ಯ ವಿಶ್ವೇಶ್ವರ ಹೆಗಡೆಯವರು, ಹಿರಿಯ ಸದಸ್ಯರಾದ ಮಾನ್ಯ ರಮೇಶ್ ಕುಮಾರ್‌ರವರು. ಮಾನ್ಯ ಶ್ರೀರಾಮರೆಡ್ಡಿಯವರು. ಮಾನ್ಯ ರಾಜೇಂದ್ರನ್ ಅವರು ಮತ್ತು ಮಾನ್ಯ ಜಯಪ್ರಕಾಶ್ ಹೆಗಡೆಯವರು ಇವರೆಲ್ಲರೂ ತಮ್ಮ ಅಮೂಲ್ಯವಾದ ಸಲಹೆಗಳನ್ನು ಕೊಟ್ಟು ಈ ಇಲಾಖೆಯ ಬಗ್ಗೆ ಬೆಳಕನ್ನು ಚೆಲ್ಲಿದ್ದಾರೆ ಎಂದು ನಾನು ಭಾವಿಸುತ್ತೇನೆ. ಇವತ್ತು ನಾನು ಮೊದಲನೆಯದಾಗಿ ಹೇಳಬೇಕಾದರೆ, ಕೆ.ಪಿ.ಟಿ.ಸಿಎಲ್. ಬರುವುದಕ್ಕೆ ಮುಂಚೆ ಕೆ.ಇ.ಬಿ. ಉತ್ತಮವಾಗಿ ಆಗಿತ್ತು ಎಂದು ಮಾನ್ಯ ಸದಸ್ಯರು ಏನು ಹೇಳಿದ್ದರು. ಅದು ನಿಜಕ್ಕೂ ಬಹಳ ಸಂತೋಷ. ಆದರೆ 1999ರಲ್ಲಿ ಕೆ.ಇ.ಬಿ.ಯಿಂದ ಕೆ.ಪಿ.ಟಿ.ಸಿ.ಎಲ್. ಆಗಿ ಬದಲಾವಣೆಯಾಗಿ ರಾಜ್ಯದಲ್ಲಿ ನಾಲ್ಕು ಕಂಪನಿಗಳಾಗಿ ಹೊರಹೊಮ್ಮಿದವು. ಅದಾದಮೇಲೆ ನಾಲ್ಕು ಕಂಪನಿಗಳಲ್ಲಿ ಅವರದೆ ಆದ ಪೂರ್ತಿ ಅಧಿಕಾರ ಇದೆ. ಏಕೆಂದರೆ ಈಗ ಯಾವುದೇ ಒಂದು ದರ ನಿಗದಿಪಡಿಸುವುದು ಇರಬಹುದು ಅಥವಾ ದರ ಕಡಿಮೆ ಮಾಡುವುದು ಇರಬಹುದು ಇದೆಲ್ಲಾ ಕೆ.ಪಿ.ಟಿ.ಸಿ.ಎಲ್. ಮತ್ತು ಕೆ.ಇ.ಆರ್.ಸಿ. ಎರಡೂ ಇದರಲ್ಲಿ ಇವೆ. ಏನಾದರೂ ಅಬ್ಜೆಕ್ಷನ್ ಇದ್ದರೆ ಹಾಕಬೇಕಾಗುತ್ತದೆ. ಏಕೆಂದರೆ ಹಿಂದೆ ಇದ್ದಂತ ಕಾಲದಲ್ಲಿ ಎಷ್ಟು ಕನೆಕ್ಷನ್‌ಗಳು ಇದ್ದವು. ಈಗ ಎಷ್ಟು ಐ.ಪಿ. ಸೆಟ್ಟುಗಳು ಇರಬಹುದು. ಅಥವಾ ಹೊಸ ಕನೆಕ್ಷನ್‌ಗಳು ಇರಬಹುದು ಅವುಗಳು ಎಷ್ಟು ಆಗಿದೆ ಎಂಬುದು ತಮಗೆಲ್ಲರಿಗೂ ಗೊತ್ತಿರುವ ವಿಷಯ. ಏಕೆಂದರೆ ಉತ್ಪಾದನೆಯೂ ಅಷ್ಟೆ. ಇವತ್ತು ಮುಂದಿನ ದಿನಗಳಲ್ಲಿ ಏನು ಮಾಡಬೇಕೆಂದು ನಾವು ಮನಗಾಣಬೇಕಾಗುತ್ತದೆ. ಏಕೆಂದರೆ ಇವತ್ತು ಈ ಕಂಪನಿ ಬಗ್ಗೆ ಮಾನ್ಯ ಸದಸ್ಯರಾದ ಶ್ರೀ ರಮೇಶ್‌ಕುಮಾರ್ ಅವರು ಹೇಳುತ್ತಿದ್ದರು ಹಾಸನಕ್ಕೆ ಏನಾದರೂ ಹೆಚ್ಚು ಅನುಕೂಲ ಉಂಟೇ ಅಂತ. ನನಗೇನು ಹಾಗೆ ಇಲ್ಲ. ಹಾಸನದಿಂದ ಮೈಸೂರಿಗೆ ಎಷ್ಟು ದೂರ ಆಗುತ್ತದೆ. ಮಂಗಳೂರಿಗೂ ಅಷ್ಟೇ ಆಗುತ್ತದೆ. ಏಕೆಂದರೆ ಚಾಮರಾಜನಗರದಿಂದ ಹೋಗುವುದಾದರೆ, ಮಂಗಳೂರಿಗೆ ಹೋಗುವುದಾದರೆ ಸುಮಾರು ಮುನ್ನೂರು-ನಾಲ್ಕುನೂರು ಕಿ.ಮೀವರೆಗೂ ಹೋಗಬೇಕಾಗುತ್ತದೆ. ಮಂಡ್ಯ ಇರಬಹುದು. ಮೈಸೂರು ಇರಬಹುದು. ಹಾಸನ ಎರಡರ ಮಧ್ಯೆ ಇರುತ್ತದೆ. ನನಗೇನು ಆ ಉದ್ದೇಶ ಇಲ್ಲ. ಬೇಡ ಎಂದರೆ ಬೇಕಾದರೆ ಇವತ್ತೇ ಅದನ್ನು ತೆಗೆಯೋಣ. ನಮ್ಮದೇನೂ ಅಭ್ಯಂತರ ಇಲ್ಲ. ನನಗೆ ವೈಯಕ್ತಿಕವಾಗಿ ಏನೂ ಇಲ್ಲ. ಅದು ಕ್ಯಾಬಿನೆಟ್ ಮುಂದೆಯೂ ಚರ್ಚೆಯಾಗಿ ಅಲ್ಲಿ ಇದಕ್ಕೆ ಅನುಮೋದನೆ ಮಾಡಿದ್ದಾರೆ. ಆದರೆ ಒಂದೇ ಒಂದು, ಈ ಬಿಲ್‌ನಲ್ಲಿ ಏನು ಎಂದರೆ

ಕೆ.ಪಿ.ಟಿ.ಸಿ.ಎಲ್.ನ್ನು ಪರಿಣಾಮಕಾರಿಯಾಗಿ ಕೆಲಸ ಮಾಡುವ ಸಲುವಾಗಿ ಈ ತಿದ್ದುಪಡಿಯನ್ನು ತರುತ್ತಿದ್ದೇವೆ. ಅದಾದಮೇಲೆ ಇದರಲ್ಲಿ ಫೈನಾನ್ಸಿಯಲ್ ಲಾಸಸ್ ಏನೂ ಬರುವುದಿಲ್ಲ. ಏಕೆಂದರೆ ಅಲ್ಲಿರುವ ಸಿ.ಇ.ಯೇ ಇರುತ್ತಾರೆ. ಅಲ್ಲಿರುವ ಚೀಫ್ ಇಂಜಿನಿಯರ್ ಇರುತ್ತಾರೆ. ಮೈಸೂರಿನಲ್ಲಿ ಈಗಾಗಲೇ ಚೀಫ್ ಇಂಜಿನಿಯರ್ ಹುದ್ದೆ ಇದೆ. ಎಸ್.ಇ. ಹುದ್ದೆ ಇದೆ. ಎಕ್ಸಿಕ್ಯೂಟಿವ್ ಇಂಜಿನಿಯರ್ ಹುದ್ದೆ ಇದೆ. ಎಂ.ಡಿ. ಪೋಸ್ಟ್ ಮಾತ್ರ ಬರುತ್ತದೆ. ಆದರೆ ಇದಕ್ಕೆ ಫೈನಾನ್ಸಿಯಲ್ ಬರ್ಡನ್ ಏನೂ ಬರುವುದಿಲ್ಲ. ಆಡಳಿತಾತ್ಮಕವಾಗಿ ಸಾರ್ವಜನಿಕರಿಗೆ ಅನುಕೂಲ ಆಗಲಿ ಎನ್ನುವ ದೃಷ್ಟಿಯಲ್ಲಿ ಈ ಐದನೇ ಕಂಪನಿಯನ್ನು ಮಾಡುತ್ತಿದ್ದೇವೆ. ಅದೂ ಅಲ್ಲದೆ ಸಮ್ಮಿಶ್ರ ಸರ್ಕಾರ ಬಂದು ಹತ್ತು ತಿಂಗಳು ಆಯಿತು. ಹತ್ತು ತಿಂಗಳಲ್ಲಿ ನಾನು ಎಲ್ಲವನ್ನೂ ಮಾಡುತ್ತೇನೆ ಎಂದು ಹೇಳುವುದಕ್ಕೆ ಆಗುವುದಿಲ್ಲ. ನಾನೇನೂ ದೇವರಲ್ಲ ಏಕೆಂದರೆ ಮಾನ್ಯ ಮಾಧುಸ್ವಾಮಿಯವರಿಗೆ ನಾನು ಏನು ಅಂತ ಗೊತ್ತು. ಅವರ ಜಿಲ್ಲೆಯಲ್ಲಿ ನಾನು ಎರಡು ಸಾರ್ತಿ ಮೀಟಿಂಗ್ ಮಾಡಿಸಿದ್ದೆ. ನಾನು ಬಂದು ಮೀಟಿಂಗ್ ಮಾಡಿದಮೇಲೆ ಎಷ್ಟು ಇಂಪ್ರೂವ್ ಆಗಿದೆ ಎಂದು ಅವರೇ ಹೇಳಲಿ. ನಾಲ್ಕು ಕಂಪನಿಗಳಲ್ಲಿ 25–30 ಸ್ಟೇಷನ್‌ಗಳನ್ನು ಅಷ್ಟೇ ಮಾಡುತ್ತಿದ್ದರು. ಇವತ್ತು ನೂರು ಹೊಸ ಸ್ಟೇಷನ್‌ಗಳನ್ನು ಮಾಡಲಿಕ್ಕೆ ನಾವು ಒಂದು ಕಡೆ ಹಣಕಾಸು ಇಟ್ಟುಕೊಳ್ಳಬೇಕು. ಮತ್ತೊಂದು ಕಡೆ ಕಂಪನಿಯವರು... ಏಕೆಂದರೆ ಅವರು ಯಾರ ಹಿಡಿತದಲ್ಲೂ ಇಲ್ಲ. ಹಿಂದೆ ಏನೆಲ್ಲಾ ನಡೆದಿದೆ ಎಂಬುದನ್ನು ಟೈಮ್ ಬಂದಾಗ ನಾನು ಹೇಳುತ್ತೇನೆ. ಕಂಪನಿಯವರು ನನ್ನ ಹಿಡಿತದಲ್ಲಿ ಅಥವಾ ಯಾರ ಹಿಡಿತದಲ್ಲೂ ಇಲ್ಲ. ಅವರನ್ನು ನಾವು ಇಂಡಿಪೆಂಡೆಂಟ್ ಬಾಡೀಸ್ ಎನ್ನುತ್ತೇವೆ. ಆದರೂ ಅವರನ್ನು ಹೆದರಿಸಿ ಏನೋ ಒಂದು ಮಾಡಿ ಇದರಲ್ಲಿ ನೂರು ಹೊಸ ಸ್ಟೇಷನ್‌ಗಳನ್ನು ತೆಗೆದುಕೊಳ್ಳುವುದಕ್ಕೆ ಈ ವರ್ಷದಲ್ಲಿ ಪ್ರಯತ್ನ ಮಾಡುತ್ತಿದ್ದೇವೆ. ನೂರು ಹೊಸ ಸ್ಟೇಷನ್‌ಗಳನ್ನು ಆಗ್ಮಂಟೇಶನ್ ಮಾಡುವುದು, ಹಳೇ ಸ್ಟೇಷನ್‌ಗಳು ಏನಿದ್ದವು ಅವನ್ನು ಅಪ್‌ಗ್ರೇಡೆಶನ್ ಮಾಡುವಂಥ ಸನ್ನಿವೇಶಕ್ಕೆ ತೆಗೆದುಕೊಂಡು ಹೋಗುತ್ತಿದ್ದೇವೆ. ಇದೊಂದಕ್ಕೆ ಸುಮಾರು ಐದುನೂರು ಕೋಟಿ ರೂಪಾಯಿ ಖರ್ಚಾಗುತ್ತದೆ. ನೂರು ಹೊಸ ಸ್ಟೇಷನ್‌ಗಳನ್ನು ಆಗ್ಮೆಂಟೇಶನ್ ಮಾಡಬೇಕಾದರೆ ಐದುನೂರು ಕೋಟಿ ರೂಪಾಯಿ ಬೇಕಾಗುತ್ತದೆ. ಒಂದು ಕಡೆ ನಾವು ಹಣವನ್ನು ರೂಪಿಸಬೇಕು. ನಿನ್ನೆ ನಾನು ಮಾನ್ಯ ಉಪಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಒಂದು ಲಕ್ಷ, ನಲ್ವತ್ತು ಸಾವಿರ ಐ.ಪಿ. ಸೆಟ್‌ಗಳ ಬಗ್ಗೆ ಒಂದು ಮೀಟಿಂಗ್ ಮಾಡಿದೆ. ರೈತರ ದೃಷ್ಟಿಯಿಟ್ಟುಕೊಂಡೇ ನಾವು ಮೀಟಿಂಗ್ ಮಾಡಿದ್ದು. ಏಕೆಂದರೆ ಹಿಂದೆ ಸರ್ಕಾರದವರು ಮೂರು–ನಾಲ್ಕು ಆದೇಶಗಳನ್ನು ಮಾಡಿದರು. 2002ರಿಂದ 2004ರವರೆಗೆ ನಾಲ್ಕು ಆದೇಶಗಳು ಆಗಿವೆ. ಒ.ವೈ.ಟಿ. ಸಿಸ್ಟಮ್‌ನಲ್ಲಿ 25 ಸಾವಿರ ರೂಪಾಯಿ ಕಟ್ಟಿಸಿಕೊಂಡು ಒಂದೇ ಸಾರಿ ಸ್ವತಃ ಟ್ರಾನ್ಸಫರ್ಮರ್ ಮಾಲೀಕರಾಗಿ ಅಂತ ಮಾಡಿ ಒಂದು ಲಕ್ಷ ನಲ್ವತ್ತು ಸಾವಿರಕ್ಕೆ ಅರ್ಜಿ ಬಂದಿರುವುದು ಎಷ್ಟು ಎಂದರೆ ಕೇವಲ ಒಂಭತ್ತು ಸಾವಿರ ಮಾತ್ರ. ಏಕೆ ಒಂಬತ್ತು ಸಾವಿರ ಅರ್ಜಿಗಳು ಬಂದವು? ರೈತರಿಗೆ ನಾಲ್ಕು ವರ್ಷಗಳ ಕಾಲ ಮಳೆಯಿಲ್ಲದೆ ಅವನ ಹಣಕಾಸು ಪರಿಸ್ಥಿತಿ ಸರಿಯಿರಲಿಲ್ಲ. ಆದ್ದರಿಂದ ಅವತ್ತು ಯಾರೂ ರೈತರೂ ಮುಂದೆ ಬರಲಿಲ್ಲ. ಆ ದೃಷ್ಟಿಯನ್ನು ಇಟ್ಟುಕೊಂಡು ನಾವು ರೈತರ ಪರವಾಗಿ ಹೋಗಬೇಕು ಎನ್ನತಕ್ಕಂತ ದೃಷ್ಟಿಯಲ್ಲಿ ನಿನ್ನೆ ಸನ್ಮಾನ್ಯ ಉಪಮುಖ್ಯಮಂತ್ರಿಗಳ ಜತೆಯಲ್ಲಿ ಒಂದು ಗಂಟೆ ಕಾಲ ಮೀಟಿಂಗ್ ಆಯಿತು. ಅದಕ್ಕಾಗಿ ಅವರು ಅಂತಹ ಒಂದು ರೈತರ ಪರವಾದ ನಿಲುವನ್ನು ನಿನ್ನೆ ತೆಗೆದುಕೊಂಡಿದ್ದಾರೆ. ಅದೇ ರೀತಿ ಮೊನ್ನೆ ಮಾನ್ಯ ಸದಸ್ಯರಾದ ಕಾರಜೋಳ್ ಅವರು ಪ್ರಶ್ನೆ ಕೇಳಿದಂಥ ಸಂದರ್ಭದಲ್ಲಿ ನಾನು ಹೇಳಿದ್ದೆ

ಇದರ ಬಗ್ಗೆ ಸಮಗ್ರವಾದ ಚರ್ಚೆಯನ್ನು ಮಾಡಬೇಕಾಗುತ್ತದೆ ಎಂದು. ಸನ್ಮಾನ್ಯ ವಿರೋಧ ಪಕ್ಷದ ನಾಯಕರು, ಸನ್ಮಾನ್ಯ ಮುಖ್ಯಮಂತ್ರಿಗಳನ್ನು ಉಪಮುಖ್ಯಮಂತ್ರಿಗಳನ್ನು ಮತ್ತು ಎಲ್ಲಾ ಫ್ಲೋರ್ ಲೀಡರ್ ಗಳ ಸಭೆ ಕರೆದು ಈ ರಾಜ್ಯದ ರೈತರ ಹಿತದೃಷ್ಟಿಯಿಂದ ಪಕ್ಷಾತೀತವಾಗಿ ಒಂದು ಸಭೆಮಾಡಿ ಯಾವ ರೀತಿಯಲ್ಲಿ ಯಾವ ದಿಕ್ಕಿನಲ್ಲಿ ಇದನ್ನು ತೆಗೆದುಕೊಂಡು ಹೋಗೋಣ ಎಂದು ಯೋಚನೆ ಮಾಡೋಣ. ಇದನ್ನು ವೈಯಕ್ತಿಕವಾಗಿ ತೆಗೆದುಕೊಳ್ಳಬೇಕೆಂಬ ಉದ್ದೇಶ ನಮಗೇನೂ ಇಲ್ಲ. ಏಕೆಂದರೆ, ಇವತ್ತು ಯಾವ ಯಾವ ಜಿಲ್ಲೆಯಲ್ಲಿ ಏನೇನು ಪರಿಸ್ಥಿತಿ ಇದೆ ಎನ್ನುವುದನ್ನು ತಿಳಿದುಕೊಳ್ಳಬೇಕೆಂದು ಮಾನ್ಯ ಹಿರಿಯ ಸದಸ್ಯರಾದಂಥ ರಮೇಶ್ ಕುಮಾರ್‌ರವರು ಹೇಳಿದ್ದಾರೆ. ಬೇರೆ ಜಿಲ್ಲೆಯಲ್ಲಿ ನೀರಾವರಿ ಇದೆ. ಕೋಲಾರ ಜಿಲ್ಲೆಯಲ್ಲಿ ನೀರಾವರಿ ಇಲ್ಲ. ನಿಜ ಇದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಆ ಭಾಗದ ರೈತರಿಗೆ ನಾವು ಕೈ ಹಿಡಿಯಬೇಕಾಗುತ್ತದೆ. ಅದರ ಬಗ್ಗೆ ನಮ್ಮದು ಎರಡು ಮಾತಿಲ್ಲ. ಏಕೆಂದರೆ, ಹಿಂದೆ ಕೋಲಾರ ಜಿಲ್ಲೆಯಲ್ಲಿ ನಾನು ಕೇಳಿದ್ದೇನೆ. ಈ ಜಿಲ್ಲೆಯ ವಿಚಾರದಲ್ಲಿ ನಾನು ಈಗಾಗಲೇ ಸಂಬಂಧಪಟ್ಟ ಅಧಿಕಾರಿಗಳ ಜೊತೆಯಲ್ಲಿ ಚರ್ಚೆ ಮಾಡಿದ್ದೇನೆ. ಆ ಸಂದರ್ಭದಲ್ಲಿ ನಮ್ಮ ಅಧಿಕಾರಿಗಳಿಗೆ ಹೇಳಿದ್ದೇನೆ. ಕೋಲಾರ ಜಿಲ್ಲೆಯಲ್ಲಿ, ಕೆ.ಇ.ಬಿ ಚೇರ್ಮನ್ ಅವರೇ ಇದ್ದರು: ಮಂತ್ರಿಗಳೂ ಇದ್ದರು. ಸಾಕಷ್ಟು ಸ್ಟೇಷನ್‌ಗಳಾಗಿದೆ, ಕೆಲವು ಅಂದರೆ ಎರಡು ಮೂರು ಲೈನ್ ಹೊಸದಾಗಿ ಬದಲಾವಣೆಯಾಗಬೇಕೆಂದು ಹೇಳಿದರು, ಅದಕ್ಕೂ ಈಗಾಗಲೇ ಕಾರ್ಯಕ್ರಮ ರೂಪಿಸಿದ್ದೇವೆ. ಕೋಲಾರ ಜಿಲ್ಲೆಯನ್ನು ಸಮಗ್ರವಾಗಿ ಕೆ.ಇ.ಬಿ.ಯಿಂದ ಏನು ಆಗಬೇಕು, ಕೆ.ಪಿ.ಟಿ.ಸಿ.ಎಲ್. ನಿಂದ ಆಗಬೇಕು. ಅದನ್ನು ಮಾಡಿಸುವುದಕ್ಕೆ ಈಗಾಗಲೇ ಮೀಟಿಂಗ್ ಕೂಡ ಮಾಡಿದ್ದೇನೆ. ಕೋಲಾರದಿಂದ ಮುಳಬಾಗಿಲುವರೆಗೆ ಹೊಸ ಲೈನ್ ಎಳೆಯುತ್ತಾ ಇದ್ದೇವೆ. ಇದಕ್ಕಾಗಿ ಸುಮಾರು ಮೂರು ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ಅದೇ ರೀತಿ ಅಲ್ಲಿ ಸ್ಟೇಷನ್‌ಗಳ ಬಗ್ಗೆ ಮತ್ತು ಮುಂದಿನ ದಿನಗಳಲ್ಲಿ ಅಂದರೆ ಇನ್ನೂ ಹತ್ತಾರು ವರ್ಷಗಳಿಗೆ ಏನೇನು ಬೇಕು ಎನ್ನುವ ದೃಷ್ಟಿಯಲ್ಲಿ ನಾನು ಈಗಾಗಲೇ ಸಂಬಂಧಪಟ್ಟ ಅಧಿಕಾರಿಗಳ ಜೊತೆಯಲ್ಲಿ ಚರ್ಚೆ ಮಾಡಿದ್ದೇನೆ. ಏಕೆಂದರೆ, ಇದು ಕೋಲಾರ ಜಿಲ್ಲೆಯ ಪ್ರಶ್ನೆ ಒಂದೇ ಅಲ್ಲ. ಈಗ ಉದಾಹರಣೆ ಹೇಳುವುದಾದರೆ ಮೊನ್ನೆ ತುಮಕೂರು ಜಿಲ್ಲೆಯಲ್ಲಿ ಸ್ಟೇಷನ್ ಮಾಡಿದ್ದಾರೆ ಅದರ ಕಂಟ್ರಾಕ್ಟರ್, ಅವರು ಯಾರೋ ಗೊತ್ತಿಲ್ಲ. ಮೊನ್ನೆ ಉದ್ಘಾಟನೆಗೆ ಮಾನ್ಯ ರಾಜಣ್ಣನವರು ನನ್ನನ್ನು ಕರೆದುಕೊಂಡು ಹೋಗಿದ್ದರು. ಆ ಸ್ಟೇಷನ್ ಮಾಡುವುದಕ್ಕೆ 9 ತಿಂಗಳು ಅವಕಾಶ ಇದ್ದರೂ ಕೂಡ ಕೇವಲ ನಾಲ್ಕೇ ತಿಂಗಳಲ್ಲಿ ಸ್ಟೇಷನ್ ಮಾಡಿದ್ದಾರೆ. ನಾವು ಬಂದಮೇಲೆ ಅಂದರೆ ಜೂನ್ ತಿಂಗಳಲ್ಲಿ ಶುರು ಮಾಡಿದರು. ಈಗ ಓಪನ್ ಮಾಡಿದ್ದಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಅಂತಹ ಕಂಟ್ರಾಕ್ಟರುಗಳಿಗೆ ಏನಾದರೂ ಪ್ರೀಮಿಯಂ ಕೊಡುವ ಹಾಗೆ ಮಾಡಬೇಕು. ಏಕೆಂದರೆ. ಅವರು 12 ತಿಂಗಳುಗಳಿಗೆ ಮಾಡುವುದನ್ನು 4 ತಿಂಗಳಲ್ಲಿ ಮಾಡಿದ್ದಾರೆ. ಅವರು ಹೆಚ್.ಕೆ. ಜೈನ್ ಎಂಬ ಒಳ್ಳೆಯ ಕಂಟ್ರಾಕ್ಟರ್

ಶ್ರೀ ಹೆಚ್.ಡಿ. ರೇವಣ್ಣ : ಪ್ರೀಮಿಯಂ ಕೊಡುವ ತಮ್ಮ ಸಲಹೆ ಏನಿದೆ, ಅದು ಸೂಕ್ತ. ಅಂತಹವರಿಗೆ ರಾಜ್ಯೋತ್ಸವ ಪ್ರಶಸ್ತಿ ಕೊಡಬೇಕಾಗುತ್ತೆ ಎನ್ನುವುದನ್ನು ಈ ಸಭೆ ಮುಖೇನ ಹೇಳುತ್ತೇನೆ. ಏಕೆಂದರೆ, ಯಾರು ನಿಜವಾಗಿ ಫಾಸ್ಟ್‌ಆಗಿ ಕೆಲಸ ಮಾಡುತ್ತಾರೆ ಅಂತಹವರನ್ನು ಗುರುತಿಸುವುದು ಸರ್ಕಾರದ ಜವಾಬ್ದಾರಿ. ತಾವೇನು ಹೇಳಿದ್ದೀರಿ ಅದನ್ನು ನಾನು ಪರಿಶೀಲನೆ ಮಾಡುತ್ತೇನೆ. ಇದರ ಬಗ್ಗೆ ಕೆ.ಪಿ.ಟಿ.ಸಿ.ಎಲ್. ಅಧಿಕಾರಿಗಳಿಗೆ ನಾನು ಈಗಾಗಲೇ ಹೇಳಿದ್ದೇನೆ. ಉದಾಹರಣೆಗೆ ಹೇಳುವುದಾದರೆ

ಈ ವರ್ಷ ತುಮಕೂರು ಜಿಲ್ಲೆ ಒಂದರಲ್ಲೇ 20 ಸ್ಟೇಷನ್ ತೆಗೆದುಕೊಳ್ಳುತ್ತಿದ್ದೇವೆ. ಈ 20 ಸ್ಟೇಷನ್‌ಗಳು 9–10 ತಿಂಗಳಲ್ಲಿ ಆಗುತ್ತವೆ. ಆಡಳಿತಾತ್ಮಕವಾಗಿ ಈ ಹಿಂದೆ ನಾಲ್ಕು ಕಂಪನಿಗಳು ಆಗಿವೆ. ಆಡಳಿತ ನಡೆಸುವಾಗ ಕಂಪನಿಗಳಲ್ಲಿ ಏನೇನು ನಡೆಯುತ್ತದೆ ಎನ್ನುವುದನ್ನು ನಾನು ಬಹಿರಂಗವಾಗಿ ಸಭೆಯಲ್ಲಿ ಹೇಳುವುದಕ್ಕಾಗುವುದಿಲ್ಲ. ಆ ಕಂಪನಿಗಳಲ್ಲಿ ಏನೇನು ನಡೆದಿದೆ ಎನ್ನುವುದನ್ನು ಸಮಯ ಬಂದಾಗ ಚರ್ಚೆ ಮಾಡುವುದಕ್ಕೂ ನಾನು ಸಿದ್ದನಿದ್ದೇನೆ. ಯಾವುದಕ್ಕೂ ಹೆದರಬೇಕಾದ್ದೇನೂ ಇಲ್ಲ. ಏಕೆಂದರೆ, ಇವತ್ತು ಉದ್ದೇಶ ಇಷ್ಟೆ. ವಿರೋಧ ಪಕ್ಷದ ನಾಯಕರು. ಮಾನ್ಯ ಮಾಧುಸ್ವಾಮಿಯವರು. ಮಾನ್ಯ ವಾಟಾಳ್ ನಾಗರಾಜ್‌ರವರು, ಮಾನ್ಯ ಕಾರಜೋಳ್‌ರವರು. ಮಾನ್ಯ ವಿಶ್ವೇಶ್ವರ ಹೆಗಡೆಯವರು, ಮಾನ್ಯ ರಮೇಶ್‌ಕುಮಾರ್‌ರವರು ಮತ್ತು ಮಾನ್ಯ ಜಯಪ್ರಕಾಶ್ ಹೆಗಡೆಯವರು–ಇವರೆಲ್ಲರೂ ಏನು ಸಲಹೆಗಳನ್ನು ಕೊಟ್ಟಿದ್ದಾರೆ. ಆ ಸಲಹೆಗಳ ಬಗ್ಗೆ ನಾನು ಪ್ರಾಮಾಣಿಕವಾಗಿ ಪ್ರಯತ್ನ ಪಡುತ್ತೇನೆ. ಅದರ ಜೊತೆಗೆ, ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಈಗಾಗಲೇ ವಿನಂತಿಸಿದ್ದೇನೆ. ಒಂದು ದಿವಸ ವಿರೋಧ ಪಕ್ಷದ ನಾಯಕರು ಮತ್ತು ನಾವೆಲ್ಲಾ ಸೇರಿ ಕೆ.ಇ.ಬಿ.ನಲ್ಲಿ ಕೆ.ಪಿ.ಟಿ.ಸಿ.ಎಲ್.ನಲ್ಲಿ ಮುಂದಿನ ಹತ್ತಾರು ವರ್ಷಗಳಿಗೆ ಏನು ಮಾಡಬೇಕು. ಯಾವ ಯಾವ ಯೋಜನೆಗಳ ಬಗ್ಗೆ ಏನೇನು ಮಾಡಬೇಕು ಮತ್ತು ಈಗಿನ ಸಿಸ್ಟಂ ಇಂಪ್ರೂವ್‌ಮೆಂಟ್. ಉದಾಹರಣೆಗೆ ಹೇಳುವುದಾದರೆ ಬೆಂಗಳೂರಿನಲ್ಲಿ, ಇವತ್ತು ಭಾರತ ದೇಶದಲ್ಲೇ ಬೆಂಗಳೂರು ಕಂಪನಿ ನಂಬರ್ ಒನ್ ಇದೆ. ಡಿಸ್ಟ್ರಿಬ್ಯೂಷನ್ ಲಾಸ್ 9.5. ಅದೇ ರೀತಿ ಇವತ್ತು ಡೆಲ್ಲಿಯಲ್ಲಿ ಇಲ್ಲ. ಮಹಾರಾಷ್ಟ್ರದಲ್ಲಿ ಇಲ್ಲ, ತಮಿಳುನಾಡಿನಲ್ಲಿ ಇಲ್ಲ. ಆಮೇಲೆ ರೆವಿನ್ಯೂ ಕಲೆಕ್ಷನ್ ಕೂಡ ಅಷ್ಟೆ. ಇವತ್ತು ಬೆಂಗಳೂರಿನಲ್ಲೇ ನೂರಕ್ಕೆ 45–50 ಪರ್ಸೆಂಟ್ ಕಲೆಕ್ಷನ್ ಬರುತ್ತಾ ಇದೆ. 27 ಜಿಲ್ಲೆಗಳಲ್ಲಿ 50 ಪರ್ಸೆಂಟ್ ಕಲೆಕ್ಷನ್ ಬರುತ್ತೆ. ಇವೆಲ್ಲಾ ಪರಿಸ್ಥಿತಿ ಇಟ್ಟುಕೊಂಡು ಒಂದು ದಿವಸ ಚರ್ಚೆ ಮಾಡುವುದಕ್ಕೆ ನಾನು ಸನ್ಮಾನ್ಯ ಮುಖ್ಯಮಂತ್ರಿಗಳಿಗೆ, ಉಪ ಮುಖ್ಯಮಂತ್ರಿಗಳಿಗೆ ವಿರೋಧ ಪಕ್ಷದ ನಾಯಕರು, ಎರಡು ಮನೆಯ ಲೀಡರುಗಳಲ್ಲಿ ಮನವಿ ಮಾಡಿದ್ದೇನೆ. ಅದಕ್ಕೆ ಒಂದು ಅವಕಾಶ ಮಾಡುತ್ತೇನೆಂದು ಅವರು ಹೇಳಿದ್ದಾರೆ. ಆ ಸಭೆ ಮಾಡಿದ ಮೇಲೆ ತಾವೆಲ್ಲಾ ಯಾವರೀತಿಯ ಮಾರ್ಗದರ್ಶನ ಕೊಡುತ್ತೀರಿ, ಆ ರೀತಿ ಮಾಡುವುದಕ್ಕೆ ನಾವು ಪ್ರಾಮಾಣಿಕವಾದ ಪ್ರಯತ್ನ ಮಾಡುತ್ತೇವೆ. ಏಕೆಂದರೆ, ನಾವು ಸುಳ್ಳು ಹೇಳಿ ಎಷ್ಟು ದಿವಸ ಇರುವುದಕ್ಕಾಗುತ್ತದೆ? ಈಗೇನು ಈ ಮೈಸೂರು ಚಾಮುಂಡೇಶ್ವರಿ ಬಿಲ್ ತಂದಿದ್ದೇವೆ, ಇದಕ್ಕೆ ತಾವು ಅನುಮತಿ ಕೊಟ್ಟರೆ ನಾವು ಮಾಡುತ್ತೇವೆ. ಏಕೆಂದರೆ, ಕಾನೂನು ರೀತಿ ತಿಳಿದುಕೊಂಡೇ, ಇವತ್ತು ಕ್ಯಾಬಿನೆಟ್‌ನಲ್ಲಿ ಆಗಿದೆ. ಆದರೆ, ಲಾ ಡಿಪಾರ್ಟ್‌ಮೆಂಟ್‌ನಲ್ಲಿ ಒಂದು ಸಣ್ಣ ಕಲೆಕ್ಷನ್ ಆಗಬೇಕೆನ್ನುವ ಹಿನ್ನೆಲೆಯಲ್ಲಿ ಈ ಅಮೆಂಡ್‌ಮೆಂಟ್ ತಂದಿದ್ದೇವೆ. ಇದಕ್ಕೆ ತಾವೆಲ್ಲರೂ ಅನುಮತಿ ಕೊಟ್ಟರೆ ಮಾಡುತ್ತೇವೆ, ಬೇಡ ಎಂದರ ಮಾಡುವುದಿಲ್ಲ. ನೀವು ಏನು ಹೇಳಿದರೂ ಅದರಂತೆ ನಡೆದುಕೊಳ್ಳುತ್ತೇವೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಮೆಸ್ಕಾಂನಿಂದ ಈ ನಾಲ್ಕು ಜಿಲ್ಲೆಗಳನ್ನು ಡಿಲೀಟ್ ಮಾಡಿದ ಬಗ್ಗೆ ತಾವು ಹೇಳಲಿಲ್ಲ. ಆಮೇಲೆ, ರಾಜ್ಯೋತ್ಸವ ಪ್ರಶಸ್ತಿ ಬಗ್ಗೆ ಹೇಳಿದರು. ಅದು ಯಾವ ಕೆಟಗರಿಯಲ್ಲಿ ಬರುತ್ತೆ ಎಂಬುದು ಗೊತ್ತಾಗಲಿಲ್ಲ. ಅದು ಮೆರಿಟ್ ಲಿಸ್ಟೇ, ಮುರಗೋಡ್ ಕಮಿಟಿ ಲಿಸ್ಟೇ ಅಥವ ಕಾಮೆಡ್ (k) ಲಿಸ್ಟೇ ಎಂಬುದು ಬೇಕು.

ಶ್ರೀ ಕುಮಾರ್ ಎಸ್. ಬಂಗಾರಪ್ಪ(ಸೊರಬ) : ಮಾನ್ಯ ಅಧ್ಯಕ್ಷರೇ, ಇದರಲ್ಲಿ ಮೈಸೂರು. ಮಂಡ್ಯ. ಚಾಮರಾಜನಗರ ಮತ್ತು ಹಾಸನ ಜಿಲ್ಲೆಗಳನ್ನು ಮಾತ್ರ ಹೇಳಿದ್ದೀರಿ. ಕೊಡಗು ಜಿಲ್ಲೆಯೂ ಕೂಡ ಮೈಸೂರಿಗೆ ಬಹಳ ಹತ್ತಿರವೇ ಆಗುತ್ತೆ. ಕೊಡಗಿನವರು ಅಲ್ಲಿಗೆ ಹೋಗಬೇಕೆಂದರೆ ಪೂರ್ತಿ

ಮಂಗಳೂರುವರೆಗೂ ಕೆಳಗಡೆ ಇಳಿದೇ ಹೋಗಬೇಕು. ಅದಕ್ಕಾಗಿ, ಆ ಮೂರು ತಾಲ್ಲೂಕುಗಳನ್ನು ಇದರಲ್ಲಿ ಸೇರಿಸಿಕೊಂಡರೆ ಒಳ್ಳೆಯದು ಎಂದು ಹೇಳುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ : ಅದನ್ನು ಸೇರಿಸುವುದಕ್ಕೆ ಅವರೆಲ್ಲರೂ ಒಪ್ಪಿಗೆ ಕೊಟ್ಟರೆ ನನ್ನದೇನೂ ಅಭ್ಯಂತರವಿಲ್ಲ. ಅವರಿಗೂ ಅನುಕೂಲವಾಗುತ್ತೆ ಎಂದರೆ, ಅದನ್ನೂ ಸೇರಿಸೋಣ.

ಮಾನ್ಯ ಸದಸ್ಯರು : ನಾವು ಮೂರು ಜನ ಶಾಸಕರೂ ಪತ್ರ ಮುಖಾಂತರ ಮನವಿ ಮಾಡಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಕೊಡಗಿನ ಎಲ್ಲಾ ಶಾಸಕರಿಗೂ ಅದೇ ಅಭಿಪ್ರಾಯ ಇದೆ. ಕೊಡಗು ಜಿಲ್ಲೆಯನ್ನು ಇದರಲ್ಲಿ ಸೇರಿಸಿಕೊಂಡೇ ತಿದ್ದುಪಡಿ ಮಾಡಿ.

ಶ್ರೀ ಹೆಚ್.ಡಿ. ರೇವಣ್ಣ : ಅದಕ್ಕೆ ನನ್ನದೇನೂ ಅಭ್ಯಂತರ ಇಲ್ಲ. ಅದನ್ನೂ ಸೇರಿಸುವುದಕ್ಕೆ ಸಪರೇಟಾಗಿ ಇನ್ನೊಂದು ತರಬೇಕು. ಅದನ್ನು ತಂದರೆ, ನಾನು ಮಾಡಿಸಿಕೊಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : "ಕೊಡಗು" ಎಂಬುದನ್ನೂ ಸೇರಿಸಿ, ನೀವು ಪಾಸ್ ಮಾಡಿಸಿ.

ಶ್ರೀ ವಾಟಾಳ್ ನಾಗರಾಜ್ : ಕೊಡಗು ಅಂತ ತಾವು ಸೇರಿಸಿಬಿಡಿ.

ಅಧ್ಯಕ್ಷರು : ಇದರಲ್ಲಿ ಇಲ್ಲ.

ಶ್ರೀ ಹೆಚ್.ಡಿ. ರೇವಣ್ಣ(ಲೋಕೋಪಯೋಗಿ ಹಾಗೂ ಇಂಧನ ಖಾತೆ ಸಚಿವರು)

ಇದರಲ್ಲೇ ಸೇರಿಸಬಹುದು. ನನ್ನದೇನು ಅಭ್ಯಂತರವಿಲ್ಲ.

ನಾನು ಈ ಕೆಳಕಂಡ ತಿದ್ದುಪಡಿ ಪ್ರಸ್ತಾವನೆಯನ್ನು ಸದನದ ಮುಂದೆ ಮಂಡಿಸುತ್ತೇನೆ.

"ಕರ್ನಾಟಕ ವಿಧಾನ ಪರಿಷತ್ತಿನಿಂದ ಅಂಗೀಕೃವಾದ ರೂಪದಲ್ಲಿರುವ 2005ನೇ ಸಾಲಿನ ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣಾ(ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"ಕರ್ನಾಟಕ ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2005ನೇ ಸಾಲಿನ ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣಾ(ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 3 ರವರೆಗೆ: ಎರಡೂ ಸೇರಿದಂತೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "ಖಂಡ 2 ರಿಂದ 3 ರವರೆಗೆ, ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ 2 ರಿಂದ 3 ರವರೆಗಿನ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಹೆಚ್.ಡಿ. ರೇವಣ್ಣ(ಇಂಧನ ಸಚಿವರು) : ಮಾನ್ಯ ಅಧ್ಯಕ್ಷರೇ. "ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2005ನೇ ಸಾಲಿನ ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣಾ(ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ "ಕರ್ನಾಟಕ ವಿಧಾನ ಪರಿಷತ್ತಿನಿಂದ ಅಂಗೀಕೃತ ರೂಪದಲ್ಲಿರುವ 2005ನೇ ಸಾಲಿನ ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣಾ(ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು.

ಪ್ರಸ್ತಾವ, ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕಕ್ಕೆ ಅನುಮೋದನೆ ನೀಡಲಾಯಿತು.

ಆ. ವಿಧೇಯಕವನ್ನು ಮಂಡಿಸುವುದು.

ಆ. ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ವಿಧೇಯಕ, 2005

ಮಂಡನೆಗೆ ಅನುಮತಿ ಕೋರಿಕೆ.

ಶ್ರೀ ಎಂ.ಪಿ. ಪ್ರಕಾಶ್(ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೇ, "2005 ರ ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ."

ಶ್ರೀ ಜೆ.ಸಿ. ಮಾಧುಸ್ವಾಮಿ(ಚಿಕ್ಕನಾಯಕನಹಳ್ಳಿ) : ನಾನು ಅವರನ್ನು ರಿಕ್ವೆಸ್ಟ್ ಮಾಡಿಕೊಳ್ಳುತ್ತೇನೆ. ದಯಮಾಡಿ. ಇದನ್ನು ವಿತ್‌ಡ್ರಾ ಮಾಡಬೇಕು. ರೈತರ ಹಿತಾಸಕ್ತಿಗೆ ಇರುವುದನ್ನು ಬಿಟ್ಟು ತಾವು ಇದನ್ನು ಮಂಡಿಸುತ್ತಾ ಇದ್ದೀರಿ. 9 ಪರ್ಸೆಂಟ್ ಬಡ್ಡಿ ಕೊಡುವುದು. 15 ಪರ್ಸೆಂಟ್ ಬಡ್ಡಿ ಕೊಡುವುದು(ಡಿಲೇಡ್ ಪೇಮೆಂಟಿಗೆ) ತಪ್ಪಾ......

ಶ್ರೀ ಎಂ.ಪಿ. ಪ್ರಕಾಶ್ : ಇದು ಅರ್ಧ ಹೆಕ್ಟೇರ್ ಭೂಮಿಯನ್ನು ಜಿಲ್ಲಾಧಿಕಾರಿಗಳು ಬೆಂಗಳೂರು ನಗರ ಜಿಲ್ಲೆಯನ್ನು ಹೊರತುಪಡಿಸಿ. ಉಳಿದವರು ಅಲ್ಲಿಯೇ ಮಂಜೂರಾತಿ ಮಾಡುವುದಕ್ಕೆ ಅಧಿಕಾರ ಕೊಡತಕ್ಕಂಥಾದ್ದು.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "2005ರ ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಎಂ.ಪಿ. ಪ್ರಕಾಶ್(ಕಂದಾಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, "2005ರ ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಯಿತು.

12. ಗಮನ ಸೆಳೆಯುವ ಸೂಚನೆಗಳು

ಅ) ವಿಷಯ : ಸ್ವಯಂ ಘೋಷಿತ ಆಸ್ತಿ ತೆರಿಗೆ ಬಗ್ಗೆ.

ಶ್ರೀ ಬಿ.ಎಸ್. ಯಡಿಯೂರಪ್ಪ(ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ನಾನು ಸ್ವಯಂ ಘೋಷಿತ ಆಸ್ತಿ ತೆರಿಗೆ ಬಗ್ಗೆ ಮಾನ್ಯ ಪೌರಾಡಳಿತ ಹಾಗೂ ಕೆ.ಯು. ಐ.ಡಿ.ಎಫ್.ಸಿ. ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಎಸ್.ಆರ್. ಮೋರೆ(ಪೌರಾಡಳಿತ ಹಾಗೂ ಕೆ ಯು ಐ ಡಿ ಎಫ್ ಸಿ ಸಚಿವರು) : ಸ್ವಯಂ ಘೋಷಿತ ಆಸ್ತಿ ತೆರಿಗೆ ಪದ್ಧತಿಯು ವೈಜ್ಞಾನಿಕ ಹಾಗೂ ಪಾರದರ್ಶಕತೆಯಿಂದ ಕೂಡಿದ ವ್ಯವಸ್ಥೆಯಾಗಿರುತ್ತದೆ. ಈ ಹಿಂದೆ ಎ.ಆರ್.ವಿ ಆಧಾರಿತ (Annual Ratable value) ತೆರಿಗೆ ಪದ್ಧತಿಯಿಂದ ತೆರಿಗೆದಾರರಿಗೆ ಉಂಟಾಗುತ್ತಿದ್ದ ಕಿರುಕುಳ ಹಾಗು ಇಚ್ಛಾನುಸಾರ ತೆರಿಗೆಯನ್ನು ವಿಧಿಸುವುದನ್ನು ತಪ್ಪಿಸಲು ಪಾರದರ್ಶಕತೆಯಿಂದ ಕೂಡಿದ ಸ್ವಯಂ ಘೋಷಿತ ಆಸ್ತಿ ತೆರಿಗೆ ಪದ್ಧತಿಯನ್ನು 2002–2003ರ ಸಾಲಿನಿಂದ ಜಾರಿಗೊಳಿಸಲಾಗಿದೆ. ರಾಜ್ಯದ ಬಹುತೇಕ ನಗರಸಭೆ/ಪುರಸಭೆಗಳಲ್ಲಿ ಸಾರ್ವಜನಿಕರ ಈ ಪದ್ಧತಿಯ ಅನುಸಾರ ತೆರಿಗೆಯನ್ನು ಪಾವತಿ ಮಾಡಿಕೊಂಡು ಬರುತ್ತಿದ್ದಾರೆ ಮತ್ತು ಇದರಿಂದ ತೆರಿಗೆಯನ್ನು ಪಾವತಿಸುವಲ್ಲಿ ಯಾವುದೇ ಗೊಂದಲ ಉಂಟಾಗಿರುವುದಿಲ್ಲ. ಇದರಿಂದ ನಗರ ಸ್ಥಳೀಯ ಸಂಸ್ಥೆಗಳ ಆದಾಯವು ಗಣನೀಯವಾಗಿ ಹೆಚ್ಚಾಗಿರುತ್ತದೆ. ಸ್ವಯಂ ಘೋಷಿತ ಆಸ್ತಿ ತೆರಿಗೆ ಪದ್ಧತಿಯನ್ನು ವಿರೋಧಿಸಿ ಸುಮಾರು 400 ಅರ್ಜಿಗಳನ್ನು ಉಚ್ಚ ನ್ಯಾಯಾಲಯದಲ್ಲಿ ಸಾರ್ವಜನಿಕರು ಮತ್ತು ಸಂಘ ಸಂಸ್ಥೆಗಳು ದಾಖಲಿಸಿದ್ದು ಈ ಎಲ್ಲಾ ಅರ್ಜಿಗಳು ವಜಾ ಆಗಿರುತ್ತದೆ. ಕೆಲವು ಜಿಲ್ಲೆಯ (ಶಿವಮೊಗ್ಗ, ದಕ್ಷಿಣ ಕನ್ನಡ, ಮಂಡ್ಯ) ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕೆಲವೊಂದು ತೆರಿಗೆದಾರರ ವೇದಿಕೆಗಳ ವಿರೋಧದಿಂದಾಗಿ ಸ್ವಯಂ ಘೋಷಿತ ಆಸ್ತಿ ತೆರಿಗೆ ಪದ್ಧತಿಯನ್ನು ಜಾರಿಗೆ ತರುವಲ್ಲಿ ಅಡಚಣೆಯುಂಟಾಗಿರುತ್ತದೆ.

2003 ರಲ್ಲಿ ಕರ್ನಾಟಕ ಮುನಿಸಿಪಾಲ್ ಕಾಯ್ದೆ ಹಾಗೂ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆಯನ್ನು ತಿದ್ದುಪಡಿ ಮಾಡಿ ತೆರಿಗೆದಾರರಿಗೆ ಇನ್ನಷ್ಟು ರಿಯಾಯಿತಿಗಳನ್ನು ನೀಡಲಾಗಿದೆ. ಖಾಲಿ ನಿವೇಶನದ ಮೇಲಿನ ತೆರಿಗೆಯನ್ನು ತೀವ್ರ ಪ್ರಮಾಣದಲ್ಲಿ ಕಡಿಮೆಗೊಳಿಸಿ ಸ್ವತಃ ವಾಸವಿರುವ ಕಟ್ಟಡಗಳ ಮಾಲೀಕರಿಗೆ ಶೇಕಡಾ 50ರಷ್ಟು ತೆರಿಗೆಯನ್ನು ವಿನಾಯಿತಿ ನೀಡಲಾಗಿದೆ. ವಸತಿಗಾಗಿ ಮಾತ್ರ ಉಪಯೋಗಿಸಲ್ಪಡುವ ಕಟ್ಟಡಗಳ ಸುತ್ತಲೂ ಇರುವ ಖಾಲಿ ಪ್ರದೇಶಗಳ ಗರಿಷ್ಠ 50 ಚ.ಮೀ. ರವರೆಗೆ ಆಸ್ತಿ ತೆರಿಗೆಯಿಂದ ವಿನಾಯಿತಿ ನೀಡಲಾಗಿದೆ.

ವಿಧಾನ ಮಂಡಲದ ಕೆಲವು ಹಿರಿಯ ಸದಸ್ಯರುಗಳು ಹಾಗೂ ಸಂಘ ಸಂಸ್ಥೆಗಳ ಕಾರ್ಯಕರ್ತರುಗಳ ಜೊತೆಯಲ್ಲಿ ಚರ್ಚೆ ನಡೆಸಿ 2002–03 ಮತ್ತು 2003–04 ರ ಸಾಲಿನ ಆಸ್ತಿ ತೆರಿಗೆಯನ್ನು 2001–02 ರಲ್ಲಿ ಇದ್ದ ಆಸ್ತಿ ತೆರಿಗೆಯ $2^1/_2$ ಪಟ್ಟು ಮೀರದಂತೆ ಪಾವತಿಸಲು ಹಾಗೂ ಸದರಿ ಬಾಕಿಯನ್ನು ಬಡ್ಡಿ ರಹಿತವಾಗಿ ದಿನಾಂಕ 31–12–2004 ರ ಒಳಗೆ ಪಾವತಿಸಲು ಕಳೆದ ನವೆಂಬರ್ ತಿಂಗಳಿನಲ್ಲಿ ಸುಗ್ರೀವಾಜ್ಞೆಯ ಮೂಲಕ ಅವಕಾಶ ಕಲ್ಪಿಸಲಾಗಿದೆ.

ಸರ್ಕಾರವು ಇನ್ನಷ್ಟು ರಿಯಾಯಿತಿಗಳನ್ನು ನೀಡುವ ಸಲುವಾಗಿ ಎಲ್ಲಾ ಕಟ್ಟಡವು ಸುತ್ತಲೂ ಇರುವ ಇಡೀ ಖಾಲಿ ಜಾಗವನ್ನು ಆಸ್ತಿ ತೆರಿಗೆಯನ್ನು ವಿಮುಕ್ತಿಗೊಳಿಸಿ ಹಾಗೂ ನಿಗದಿಪಡಿಸಿದ ಆಸ್ತಿ ತೆರಿಗೆಯನ್ನು 3 ವರ್ಷಗಳವರೆಗೂ ಪರಿಷ್ಕರಿಸದೇ ಇರಲು ಈಗಾಗಲೇ ಚಿಂತನೆ ನಡೆಸಿದ್ದು ಕಾನೂನಿಗೆ ಸೂಕ್ತ ತಿದ್ದುಪಡಿ ಮಾಡಲು ಪರಿಶೀಲಿಸಲಾಗುತ್ತಿದೆ. ಇದಲ್ಲದೇ ಬಡ್ಡಿ ರಹಿತವಾಗಿ ಆಸ್ತಿ

ತೆರಿಗೆಯನ್ನು ಪಾವತಿ ಮಾಡುವ ಕಾಲಾವಕಾಶವನ್ನು ದಿನಾಂಕ 28–02–2005 ರವರೆಗೆ ವಿಸ್ತರಿಸಲಾಗಿದೆ. ಇದರ ಜೊತೆಗೆ ನಾನು ಈಗಾಗಲೇ ಎರಡೂ ಸದನಗಳ ಮಾನ್ಯ ಸದಸ್ಯರ ಜೊತೆ ಮಾತನಾಡಿದ್ದೇನೆ. ಈ ವಿಷಯದ ಬಗ್ಗೆ ಒಂದು ತಿದ್ದುಪಡಿಯನ್ನು ತರುತ್ತಿದ್ದೇನೆ. ಡ್ರಾಫ್ಟ್ ಬಿಲ್ ರೆಡಿಯಾಗಿದೆ. ಇನ್ನು 3–4 ದಿನಗಳಲ್ಲಿ ಎರಡೂ ಸದನಗಳಲ್ಲಿ ಮಂಡಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ(ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ಇವತ್ತು ರಾಜ್ಯ ಸರ್ಕಾರ ಈ ಸ್ವಯಂ ಘೋಷಿತ ಆಸ್ತಿ ತೆರಿಗೆಯನ್ನು 2001–02ನೇ ಸಾಲಿನಲ್ಲಿ ಜಾರಿಯಲ್ಲಿರುವಂತಹ ತೆರಿಗೆ ಆಧಾರದ ಮೇಲೆ ಎರಡೂವರೆ ಪಟ್ಟಿಗೂ ಹೆಚ್ಚಾಗದಂತ 31–3–2005ರೊಳಗಾಗಿ ಪಾವತಿ ಮಾಡುವುದಕೋಸ್ಕರ 9–11–2004ರಲ್ಲಿ ಒಂದು ಸುಗ್ರೀವಾಜ್ಞೆಯನ್ನು ತಾವು ಹೊರಡಿಸಿದ್ದೀರಿ. ಈಗಾಗಲೇ ನಗರದ ಪ್ರದೇಶದಲ್ಲಿ ವಾಸ ಮಾಡುವ ಜನ ಅನೇಕ ಸಂಕಷ್ಟದಲ್ಲಿ ಸಿಕ್ಕಿ ನರಳುತ್ತಿದ್ದಾರೆ. ಪರಿಸ್ಥಿತಿಗಳು ಕೈ ಮೀರಿ ಹೋಗುತ್ತಿದೆ. ಈಗಿರುವಂತಹ ದುಬಾರಿ ವಿದ್ಯುತ್ ದರ ಕುಡಿಯುವ ನೀರಿಗಾಗಿ ಮನೆ ಬಳಕೆಗಾಗಿ ಉಪಯೋಗಿಸುವಂತಹ ನೀರಿಗೆ ಕೊಡುತ್ತಿರುವಂತಹ ತೆರಿಗೆ, ಒಬ್ಬ ಸಾಮಾನ್ಯ ಜನರ ಆದಾಯ 4–5 ಸಾವಿರ ಇಲ್ಲದೇ ಇರುವಂತಹ ಈ ಸಂದರ್ಭದಲ್ಲಿ ಬದುಕುವುದೇ ಕಷ್ಟ ಎನ್ನುವಂತಹ ಪರಿಸ್ಥಿತಿಗೆ ಬಂದಿದೆ. ಮೊನ್ನೆ ಶಿವಮೊಗ್ಗದಲ್ಲಿ ಒಂದು ಲೇಖನ ಬಂದಿತ್ತು. ಅಲ್ಲಿ ಸುಮಾರು 50 ಕೈಗಾರಿಕೆಗಳನ್ನು ಹೊಂದಿದ್ದರಿಂದ ಅವರನ್ನು ತಾವು ಶ್ರೀಮಂತರು ಎಂದು ಕರೆಯುತ್ತೀರೋ, ಕೈಗಾರಿಕೋದ್ಯಮಿಗಳು ಅಂತ ಕರೆಯುತ್ತೀರೋ ಅವರ ಆಸ್ತಿಪಾಸ್ತಿ ಹರಾಜು ಆಗುವುದಕ್ಕೆ ಬಂದಿದೆ. ಸಂಪೂರ್ಣ ಸರ್ವ ನಾಶ ಆಗಿದೆ ಅಂತ ಹೇಳಿ. ಅಡಿಕೆ ಬೆಳೆಗಾರರ ಸ್ಥಿತಿ ಏನಿದೆ ಅಂತ ತಮಗೆ ಗೊತ್ತಿದೆ. ಇಡೀ ರಾಜ್ಯದಲ್ಲಿ ನಗರ ಪ್ರದೇಶಗಳಲ್ಲಿ ವಾಸ ಮಾಡುವಂತಹ ಜನ ಒಂದಲ್ಲ ಒಂದು ಸಂಕಷ್ಟಕ್ಕೆ ಸಿಕ್ಕಿ ನರಳುತ್ತಿರುವ ಸಂದರ್ಭದಲ್ಲಿ ನಾನು ಸರ್ಕಾರಕ್ಕೆ ಒತ್ತಾಯ ಮಾಡುವಂತಾದ್ದು ಯಾವುದೇ ಕಾರಣಕ್ಕೆ ಮತ್ತೆ ನೀವು ದರವನ್ನು ಏರಿಕೆ ಮಾಡುವ ಪ್ರಯತ್ನವನ್ನು ಮಾಡಬೇಡಿ. ಈ ಅವಧಿಯನ್ನು ನೀವು ಏನು 31–3–2005ಕ್ಕೆ ಕೊಟ್ಟಿದ್ದೀರಲ್ಲಾ ಅದನ್ನು ಇನ್ನು 2–3 ತಿಂಗಳ ಅವಧಿಯನ್ನು ಕೊಟ್ಟು ಒಂದು ಪೈಸೆ ಹೆಚ್ಚು ತೆರಿಗೆಯನ್ನು, ಬಡ್ಡಿಯನ್ನು ಹಾಕದೇ ಹಳೇ ದರ ಏನಿತ್ತು 2001–02ರಲ್ಲಿ ಅದರಂತೆ ವಸೂಲಿ ಮಾಡುವುದಕ್ಕೆ ಅವಕಾಶ ಮಾಡಿ ಕೊಡಿ. ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಇರುವುದರಿಂದ ನಾವು ಒತ್ತಾಯ ಮಾಡುವಂತಾದ್ದು ನಿಮ್ಮ ಗುಲ್ಬರ್ಗ ಸೇರಿ ಎಲ್ಲಾ ನಗರ ಸಭೆ ಪುರಸಭೆ. ಮಹಾನಗರಸಭೆ ಇದಕ್ಕೆ ವಿರೋಧ ಇದೆ. ಸ್ವತಃ ಮಂಗಳೂರು ನಗರಸಭೆ ಕಾಂಗ್ರೆಸ್ಸು ಆಡಳಿತ ಕೈಯಲ್ಲಿದ್ದರೂ ಸಹ ಇವತ್ತು ಅವರು ಒಂದು ನಿರ್ಣಯ ಪಾಸ್ ಮಾಡಿದ್ದಾರೆ ಬೇಕಾದರೆ ನಮ್ಮ ಮಹಾನಗರಸಭೆಯನ್ನು ಸೂಪರ್‌ಸೀಡ್ ಮಾಡಿ ನಾವು ಯಾವುದೇ ಕಾರಣಕ್ಕೂ ಹೊಸ ತೆರಿಗೆಯನ್ನು ನಾವು ವಸೂಲಿ ಮಾಡುವುದಕ್ಕೆ ಸಿದ್ಧರಿಲ್ಲ" ಹಳೇ ಒಂದು ದರದಲ್ಲಿಯೇ ಅಂದರೆ 2001–02 ನೇ ಸಾಲಿನ ದರವನ್ನೇ ವಸೂಲಿ ಮಾಡುತ್ತಿದ್ದಾರೆ. ಈ ರಾಜ್ಯದ ಯಾವುದೇ ಪುರಸಭೆ, ನಗರಸಭೆ ಮಹಾನಗರಸಭೆ ಆಡಳಿತ ನಡೆಸುತ್ತಾ ಇರುವಂತಹವರು ಅವರಿಗೆ ಆದಾಯ ಹೆಚ್ಚು ಬೇಕು ಅಂತಹ ಗೊತ್ತಿದ್ದರೂ ಸಹ ಅಲ್ಲಿರುವಂತಹ ನಗರವಾಸಿಗಳ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು ಇದು ಅಸಾಧ್ಯ ಎನ್ನುವಂತಹ ಒಂದು ತೀರ್ಮಾನಕ್ಕೆ ಬಂದಿದ್ದಾರೆ. ನೀವು ಹೇಳುವಂತೆ ಕೇವಲ ಶಿವಮೊಗ್ಗ, ದಕ್ಷಿಣ ಕನ್ನಡ ಮತ್ತು ಮಂಡ್ಯ ಅಂತ ಅಂದುಕೊಳ್ಳುವುದು ಬೇಡ. ನಾನು ನಿಮಗೆ ಹೇಳುತ್ತೇನೆ. ಉದಾಹರಣೆಗೆ ನೋಡಿ 2002–03ರಲ್ಲಿ ಚಿತ್ರದುರ್ಗದಲ್ಲಿ 224 ಲಕ್ಷ 83 ಸಾವಿರ ರೂ ವಸೂಲಿಯಾಗಬೇಕಾಗಿತ್ತು. ವಸೂಲಿಯಾಗಿರುವುದು 64 ಲಕ್ಷ 93 ಸಾವಿರ ರೂ

ಮಾತ್ರ. ದಾವಣಗೆರೆಯಲ್ಲಿ 584 ಲಕ್ಷ 81 ಲಕ್ಷ ರೂ ವಸೂಲಿಯಾಗಬೇಕಾಗಿತ್ತು. ವಸೂಲಿಯಾಗಿರುವುದು 77 ಲಕ್ಷ 39 ಸಾವಿರ. ರೂ.ಗಳು ಶಿವಮೊಗ್ಗದಲ್ಲಿ 434 ಲಕ್ಷ 77 ಸಾವಿರ, ರೂ ವಸೂಲಿಯಾಗಬೇಕಾಗಿತ್ತು. ವಸೂಲಿಯಾಗಿರುವುದು 162 ಲಕ್ಷ 40 ಸಾವಿರ ರೂ ಬಾಗಲಕೋಟೆಯಲ್ಲಿ 141 ಲಕ್ಷ 21 ಸಾವಿರ ರೂ ವಸೂಲಿಯಾಗಬೇಕಾಗಿತ್ತು. ವಸೂಲಿಯಾಗಿರುವುದು 50 ಲಕ್ಷದ 36 ಸಾವಿರ ರೂ. ಅದೇ ರೀತಿ ಬೀದರ್‌ನಲ್ಲಿ 57 ಲಕ್ಷದ 80 ಸಾವಿರ ರೂ ವಸೂಲಿಯಾಗಬೇಕಾಗಿತ್ತು. ವಸೂಲಿಯಾಗಿರುವುದು 23 ಲಕ್ಷದ 83 ಸಾವಿರ ರೂ.ಗಳಂತೆ ಮತ್ತೆ ಈ ಸಾರಿ 2003–04ನೇ ಸಾಲಿನಲ್ಲಿ ಚಿತ್ರದುರ್ಗದಲ್ಲಿ ವಸೂಲಿಯಾಗಬೇಕಾಗಿರುವುದು 159 ಲಕ್ಷ ರೂ ವಸೂಲಿಯಾಗಿರುವುದು 32 ಲಕ್ಷ ರೂ. ದಾವಣಗೆರೆಯಲ್ಲಿ 390 ಲಕ್ಷ ರೂ. ವಸೂಲಿಯಾಗಿರುವುದು 36 ಲಕ್ಷ ರೂ ಶಿವಮೊಗ್ಗದಲ್ಲಿ 282 ಲಕ್ಷ ರೂಗಳಿಗೆ ವಸೂಲಿಯಾಗಿರುವುದು 70 ಲಕ್ಷ ರೂ. ಮಾತ್ರ. ಅದೇ ರೀತಿ 2004–05ರಲ್ಲಿ ಅಂತೂ ಸಂಪೂರ್ಣ ವಸೂಲಾತಿ ನಿಂತಿದೆ. ಅಂದರೆ ಇದರ ಅರ್ಥ ಏನು ಅಂದರೆ ಈಗ 10–20 ಲಕ್ಷ ರೂ. ಕಟ್ಟಿರುವಂತಹವರೂ ಸಹ ತುರ್ತು ಆಗಿ ಯಾವುದೋ ಒಂದು ಪುರಸಭೆ, ನಗರಸಭೆ ಮಹಾನಗರಸಭೆಯಿಂದ ಬೇರೆ ಕಾರಣಕೋಸ್ಕರವಾಗಿ ಅವರಿಗೆ ಸರ್ಟಿಫಿಕೇಟ್ ಬೇಕಾಗಿತ್ತು. ಪೂರ್ಣ ಹಣ ಕಟ್ಟಿದ್ದೇವೆ, ಚುಕ್ತಿ ಮಾಡಿದ್ದೇವೆ ಎನ್ನುವಂತಹ ಮಾಹಿತಿ ಬೇಕಾಗಿತ್ತು. ಅದಕ್ಕಾಗಿ ಕಟ್ಟಿರುವುದೇ ಹೊರತು ಒಂದು ರೀತಿ ಇದು ಬಲಾತ್ಕಾರದ ವಸೂಲಿಯಾಗಿದೆ. ಅದಕ್ಕೋಸ್ಕರ ನಾನು ತಮ್ಮಲ್ಲಿ ಒತ್ತಾಯ ಮಾಡುವಂತದ್ದು ಇವತ್ತು ನಾನು ತಮಗೆ ಒಂದು ಉದಾಹರಣೆಯನ್ನು ಕೊಡಬೇಕು ಅಂದರೆ ಬೆಂಗಳೂರು ನಗರಸಭೆ ವ್ಯಾಪ್ತಿಯಲ್ಲಿರುವಂತಹ ಯಲಹಂಕ ವ್ಯಾಪ್ತಿಯಲ್ಲಿ ಬರುವ ಕಟ್ಟಡಗಳಿಗೆ ನಿಗಧಿ ಮಾಡಿರುವಂತಹ ಮೌಲ್ಯ ರಾಜ್ಯದ ಇತರೇ ಪ್ರದೇಶಗಳಾದಂತಹ ಶಿವಮೊಗ್ಗ ತುಮಕೂರು, ಗಂಗಾವತಿ, ಹಾಸನ ನಗರಗಳಿಗೆ ನಿಗಧಿಪಡಿಸಿರುವಂತಹ ಕಟ್ಟಡಗಳಿಗಿಂತ ಕಡಿಮೆ ಇದೆ. ನೀವು ಕಂಪೇರ್ ಮಾಡಿದರೆ ನಿಮಗೆ ಗೊತ್ತಾಗುತ್ತದೆ. ಮತ್ತೆ ಯಲಹಂಕದ ಇತರೇ ಪ್ರದೇಶಗಳಿಗೆ ಕಟ್ಟಡಗಳಿಗೆ ನಿಗಧಿಪಡಿಸಿರುವಂತಹ ಮೌಲ್ಯ ಹೆಚ್ಚಾಗಿದೆ. ನೀವು ಯಲಹಂಕ ನಗರಸಭೆ ವ್ಯಾಪ್ತಿಯಲ್ಲಿರುವ ಒಂದು ಊರನ್ನು ಕಂಪೇರ್ ಮಾಡಿದರೆ ಅಲ್ಲಿ ಫಿಕ್ಸ್ ಆಗಿರುವುದು ಏನಿದೆ ಹೊರಗಡೆ ಏನಿದೆ ಎನ್ನುವ ಕಂಪೇರಿಟೀವ್ ಫಿಗರ್ಸ್ ಬೇಕಾದರೆ ನಾನು ನಿಮಗೆ ಇಲ್ಲಿದೆ, ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಈ ನ್ಯೂನತೆಯನ್ನು ಸರಿಪಡಿಸುವುದಕ್ಕೋಸ್ಕರ ನವೆಂಬರ್ 2004ರಲ್ಲಿ ಈ ಸರ್ಕಾರ ಜಾರಿಗೆ ತಂದಿರುವಂತಹ ಸುಗ್ರೀವಾಜ್ಞೆಯನ್ನು ನಾನು ಮುಖ್ಯಮಂತ್ರಿಗಳನ್ನು ವಿನಂತಿ ಮಾಡುತ್ತೇನೆ. ಉಭಯ ಸದನಗಳ ಒಂದು ಜಂಟಿ ಸಲಹಾ ಸಮಿತಿಗೆ ತಾವು ಒಪ್ಪಿಸಿ ವರದಿಯನ್ನು ತರಿಸಿಕೊಳ್ಳಿ. ಈಗ ಇನ್ನೊಂದು ಎರಡು ತಿಂಗಳ ಅವಧಿಯನ್ನು ಕೊಟ್ಟು ಆ ಹಿಂದಿನ ದರ ಏನಿತ್ತು 2001–02 ಅದರಂತೆ ವಸೂಲಿ ಮಾಡಿ, ಇದರಿಂದ ಅನಗತ್ಯವಾದಂಥ ಕಿರುಕುಳ ತಪ್ಪುತ್ತದೆ. ನಗರಸಭೆ ಸಹ ಪುರಸಭೆ ಮಹಾನಗರಸಭೆ ಒಳ್ಳೆಯ ರೀತಿಯಲ್ಲಿ ಕಾರ್ಯ ನಡೆಸುವುದಕ್ಕೆ ಆಗುತ್ತದೆ. ನಾನು ಮುಖ್ಯಮಂತ್ರಿಗಳನ್ನು ಭೇಟಿ ಮಾಡಿದ್ದೇನೆ. ಇದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಕಳುಹಿಸಿ ರಾಜ್ಯ ಸರ್ಕಾರಕ್ಕೆ ಪುರಸಭೆ ನಗರಸಭೆಗೆ ಆದಾಯ ಬರಬೇಕು ಎನ್ನುವುದರಲ್ಲಿ ಎರಡು ಮಾತಿಲ್ಲ. ಆದರೆ ನಾನು ನಿಮಗೆ ಹೇಳುತ್ತೇನೆ. ರಾಜ್ಯದ ಜನರ ಪರಿಸ್ಥಿತಿ ಗ್ರಾಮೀಣ ಪ್ರದೇಶದ ರೈತ ಕೃಷಿಕಾರ್ಮಿಕನ ಪರಿಸ್ಥಿತಿ ಏನಿದೆ ಬಹುತೇಕ ನಗರಪ್ರದೇಶಗಳಲ್ಲೂ ಸಹ ಇತ್ತೀಚಿನ ಜೀವನ ಮಾಡುವುದಕ್ಕೆ ಆಗದೇ ಇರುವಂತಹ ಉಸಿರು ಕಟ್ಟುವಂತಹ ಪರಿಸ್ಥಿತಿ ಇರಬೇಕಾದರೆ ಈಗ ಮತ್ತೊಮ್ಮೆ ಈ ಒಂದು ತೆರಿಗೆಯನ್ನು ಏರಿಕೆ ಮಾಡುವುದು

ಇದೊಂದು ತರಹ ಅವೈಜ್ಞಾನಿಕವಾಗಿದೆ. ಮತ್ತೊಮ್ಮೆ ಈಗ ತೆರಿಗೆಯನ್ನು ಏರಿಕೆ ಮಾಡುವುದು ಅವೈಜ್ಞಾನಿಕವಾಗಿದೆ, ಗೊಂದಲವಿದೆ, ಇಡೀ ರಾಜ್ಯದಲ್ಲಿ ವಿರೋಧವಿದೆ, ಅದಕ್ಕಾಗಿ ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ, ದಯಮಾಡಿ ಇದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಒಪ್ಪಿಸಿ, ಹಳೆ ದರದಂತೆ ಬಡ್ಡಿ ಹಾಕದಂತೆ ಇನ್ನೊಂದು ಎರಡು ತಿಂಗಳು ಸಮಯಕೊಟ್ಟು ಬಾಕಿಯನ್ನು ಕಟ್ಟಬೇಕೆಂದು ಹೇಳಬೇಕೆಂದು ನಾನು ಸರ್ಕಾರಕ್ಕೆ ಒತ್ತಾಯಮಾಡುತ್ತೇನೆ, ಬಹುಶಃ ಮುಖ್ಯಮಂತ್ರಿಗಳು ಇರುವುದರಿಂದ, ಈ ಭಾಗದ ಎಲ್ಲರೂ ಆ ಕಡೆ ಈ ಕಡೆ ಎನ್ನುವ ಪ್ರಶ್ನೆ ಇಲ್ಲ ಒಕ್ಕೊರಲಿನಿಂದ ಒಟ್ಟಾಗಿ ಕುಳಿತು ಜಾಯಿಂಟ್ ಸೆಲೆಕ್ಟ್ ಕಮಿಟಿಯಲ್ಲಿ ಕುಳಿತುಕೊಂಡು ಇದಕ್ಕೊಂದು ಏನು ಪರಿಹಾರ ಹುಡುಕಬೇಕು ಎನ್ನುವುದನ್ನು ಮಾಡೋಣ. ಈಗಂತೂ ಹಳೆಯ ದರದಲ್ಲಿ 2001–02 ಸಾಲಿನಲ್ಲಿರುವಂತೆ ಒಂದು ಪೈಸೆ ಬಡ್ಡಿಯನ್ನು ಹಾಕದಂತೆ ವಸೂಲ್ಮಾಡಲು ಒಂದೆರಡು ತಿಂಗಳು ಅವಧಿಯನ್ನು ಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಅಧ್ಯಕ್ಷರೆ, ಕಳೆದ ಮೂರು ವರ್ಷಗಳಿಂದ ಈ ಬಗ್ಗೆ ಗೊಂದಲವಿದೆ. ಈ ಗೊಂದಲವಿರುವುದರಿಂದ, ಅನೇಕ ಪುರಸಭೆಗಳಲ್ಲಿ ತೆರಿಗೆಯನ್ನು ತುಂಬುವುದಕ್ಕೆ ಜನರು ತಯಾರಿದ್ದರೂ ಕೂಡ ತುಂಬುವುದಕ್ಕಾಗುತ್ತಿಲ್ಲ. ಈ ಮೂರು ವರ್ಷದ ಗೊಂದಲವನ್ನು ಯಾವರೀತಿಯಾಗಿ ಪರಿಹಾರ ಮಾಡಬೇಕೆನ್ನುವುದರ ಬಗ್ಗೆ ಈಗಿನ ಮಂತ್ರಿಗಳು ಗಮನಹರಿಸುತ್ತಿದ್ದಾರೆ. ಈ ಗೊಂದಲದಿಂದ ಅನೇಕ ಪುರಸಭೆಗಳಲ್ಲಿ ತೆರಿಗೆಯನ್ನು ಕಟ್ಟುವ ಜನಗಳಿಗೂ ತೊಂದರೆ ಒಟ್ಟಿಗೆ ಮೂರು ವರ್ಷದ್ದು ಒಟ್ಟಿಗೆ ಕಟ್ಟಬೇಕೆಂದು ಜನರಿಗೂ ತೊಂದರೆ, ಎರಡನೆಯದಾಗಿ, ತೆರಿಗೆ ಸಂದಾಯವಾಗದೆ ಎಲ್ಲಾ ಪುರಸಭೆಗಳಲ್ಲಿ ಯಾವುದೇ ಅಭಿವೃದ್ಧಿ ಕೆಲಸ ಕಾರ್ಯಗಳಾಗುತ್ತಿಲ್ಲ. ರಸ್ತೆ ಇಲ್ಲ, ದೀಪ ಇಲ್ಲ. ಚರಂಡಿ ಇಲ್ಲ ಒದ್ದಾಡುತ್ತಾ ಕುಳಿತಿದ್ದಾರೆ. ಈ ಮಧ್ಯೆ ಒಂದೊಂದು ಪುರಸಭೆ, ಕಾರ್ಪೋರೇಷನ್‌ಗಳಲ್ಲಿ ಒಂದೊಂದು ತೀರ್ಮಾನಗಳಾಗಿ ಹೋಗಿದೆ. ನಮ್ಮ ವಿರೋಧಪಕ್ಷದ ನಾಯಕರಾದ ಮಾನ್ಯ ಯಡಿಯೂರಪ್ಪನವರು ಹೇಳಿದಂತೆ, ಮಂಗಳೂರು ಕಾರ್ಪೋರೇಷನ್‌ನವರು ನೀವು ಹೇಳುವುದಕ್ಕೆ ಕೇಳುವುದಕ್ಕೆ ಅವಕಾಶವನ್ನೇ ಕೊಡುತ್ತಿಲ್ಲ, ನೀವು ಏನಾದರೂ ಮಾಡಿಕೊಳ್ಳಿ ಎಂದು ಅವರೊಂದು ಕಾನೂನು ಮಾಡಿಕೊಂಡು ಹಣಸಂಗ್ರಹ ಮಾಡಿ ಅಭಿವೃದ್ಧಿ ಕೆಲಸ ಮಾಡಿಕೊಳ್ಳುತ್ತಿದ್ದಾರೆ. ಏಕೆ ಈ ಸಮಸ್ಯೆ ಬಂದಿದೆ ಎಂಬುದು ಗೊತ್ತಿದೆ, ಹಿಂದಿನ ಮಾನ್ಯ ಮುಖ್ಯ ಮಂತ್ರಿಗಳಾದ ಮಾನ್ಯ ಕೃಷ್ಣರವರು ಮಂಡ್ಯಕ್ಕೆ ಹೋದರು, ಇದನ್ನು ನೀವು ಜಾರಿಗೆ ತರುವ ಅವಶ್ಯಕತೆಇಲ್ಲವೆಂದರು. ಮಂಗಳೂರಿಗೆ, ಕೆಪಿಸಿಸಿ ಅಧ್ಯಕ್ಷರಾದ ಮಾನ್ಯ ಜನಾರ್ಧನಪೂಜಾರಿಯವರು, ಇದನ್ನು ನಾವು ಮಂಗಳೂರಿನಲ್ಲಿ ಜಾರಿಗೆ ತರುವುದಿಲ್ಲವೆಂದರು. ಈ ರೀತಿಯ ಮುಖ್ಯಮಂತ್ರಿಗಳು ಮತ್ತು ಕೆಪಿಸಿಸಿ ಅಧ್ಯಕ್ಷರು ಎಲ್ಲಾ ಪುರಸಭೆಗಳಿಗೂ ಸಿಗುವುದಕ್ಕೆ ಸಾಧ್ಯನಾ ಸ್ವಾಮಿ? ನಮ್ಮ ಶಿವಮೊಗ್ಗ ಸೇರಿದಂತೆ ಬೇರೆ ಬೇರೆ ನಗರಸಭೆಗಳ ಗತಿ ಏನು? ಇವತ್ತು ಶಿವಮೊಗ್ಗದಲ್ಲಿ 12 ಕೋಟಿ ರೂಪಾಯಿಗಳ ಬಾಕಿ ತೆರಿಗೆ ಬಾಕಿ ಇದೆ. ನೀವು ಇವತ್ತು ಹಿಂದೆ ಇದ್ದಂತೆ ತೆರಿಗೆ ವಸೂಲ್ಮಾಡಿ ಎಂದು ಆದೇಶವನ್ನು ಕೊಟ್ಟರೆ ಜನರು ತೆರಿಗೆ ಕಟ್ಟಲು ತಯಾರಿದ್ದಾರೆ. ನಗರಸಭೆಯವರು ಕಟ್ಟಿಸಿಕೊಳ್ಳುತ್ತಾರೆ, ಅಭಿವೃದ್ಧಿಕಾರ್ಯಗಳಾಗುತ್ತವೆ. ತಾವೇನೋ ಸುಗ್ರೀವಾಜ್ಞೆಯನ್ನು ಮಾಡಿದ್ದೀರಿ, ಹಿಂದೆ ಒಂದು ಸಭೆ ಆಯಿತು ಅದರಲ್ಲಿ ನಾವೆಲ್ಲರೂ ಭಾಗವಹಿಸಿದ್ದೆವು ನಾನು ಇಲ್ಲವೆಂದು ಹೇಳುವುದಿಲ್ಲ. ಎರಡೂವರೆ ಪಟ್ಟಿನಷ್ಟು ಮಾಡಬೇಕೆಂದು ಸುಗ್ರೀವಾಜ್ಞೆಯನ್ನು ಮಾಡಿದ್ದೀರಿ. ನಮಗ್ಯಾರಿಗೂ ಒಂದೊಂದು ನಗರಸಭೆಯಲ್ಲಿ ಒಂದೊಂದು ರೀತಿಯಾಗಿದೆ ಎಂಬುದು ಗೊತ್ತಿಲ್ಲ. ಅದಕ್ಕೋಸ್ಕರ ಹಿಂದೆ

ಮಂಗಳೂರಿನಲ್ಲಿ ಹೇಗೆ ಸಂಗ್ರಹ ಮಾಡಿದ್ದಾರೆ ಆ ರೀತಿ ಎಲ್ಲಾ ಎಲ್ಲಾ ನಗರಸಭೆಗಳಲ್ಲೂ ಒಂದೇ ಸಾರಿ ಕಟ್ಟುವುದಕ್ಕೆ ಅವಕಾಶ ಮಾಡಿಕೊಟ್ಟು ಬಿಡಿ. ಇಲ್ಲದಿದ್ದರೆ ಏನಾಗುತ್ತದೆ ಎಂದರೆ ಹಿಂದೆ ಇದ್ದ ವ್ಯವಸ್ಥೆ ತಮಗೆ ಗೊತ್ತಿದೆ. ಇಲ್ಲಿಂದ ಒಂದಿಷ್ಟು ಹಣ ಖರ್ಚು ಮಾಡಿಕೊಂಡು ಆಫೀಸರ್‌ಗಳು ಒಂದೊಂದು ನಗರಸಭೆಗಳಿಗೆ ಹೋಗುತ್ತಿದ್ದರು, ಅಲ್ಲಿ ಹೋಗಿ ಒಂದೇ ತರಹದ ಎರಡು ಮನೆಗಳಿಗೆ. ಒಂದು ಮನೆಗೆ ನಾನೂರು ರೂಪಾಯಿ ಟ್ಯಾಕ್ಸ್, ಇನ್ನೊಂದು ಮನೆಗೆ ನಾಲ್ಕುಸಾವಿರ ರೂಪಾಯಿ ಟ್ಯಾಕ್ಸ್, ಅವರು ಇಲ್ಲಿ ವ್ಯವಸ್ಥೆ ಮಾಡಿಕೊಂಡು ಹೋಗಿದ್ದರು. ಈಗ ತಾವೂ ಎರಡೂವರೆಪಟ್ಟು ಎಂದು ಹೇಳಿದರೆ, ನಾನೂರು ರೂಪಾಯಿಗಳಿರುವವರಿಗೆ ಒಂದು ಸಾವಿರ ರೂಪಾಯಿಯಾಗುತ್ತದೆ, ನಾಲ್ಕು ಸಾವಿರ ರೂಪಾಯಿ ಕಟ್ಟಿರುವವನಿಗೆ ಹತ್ತು ಸಾವಿರ ರೂಪಾಯಿಯಾಗುತ್ತದೆ. ಈ ಅವ್ಯವಹಾರಕ್ಕೆ ತಾವೇಕೆ ತಲೆಕೊಡುತ್ತೀರಿ? ದಯವಿಟ್ಟು ತಕ್ಷಣ ಹಿಂದೆ 2001 ರಲ್ಲಿ ಹೇಗಿತ್ತೋ ಆ ರೀತಿ ಮಾಡಿ, ಎರಡೂವರೆಪಟ್ಟು ತೆರಿಗೆ ವಸೂಲ್ಮಾಡುವುದಕ್ಕೆ ಅವಕಾಶ ಕೊಡಬೇಡಿ, ದಯವಿಟ್ಟು ಈ ಬಗ್ಗೆ ಉತ್ತರ ಕೊಡಬೇಕು, ಇಲ್ಲವೆಂದರೆ ಮುಂದೆ ಏನಾಗುತ್ತದೋ ನೋಡಿಕೊಂಡು ಇದು ಹೀಗೆ ಎಳೆದುಕೊಳ್ಳುತ್ತಾ ಹೋಗುತ್ತದೆ, ಎಲ್ಲಾ ನಗರಸಭೆ ಪುರಸಭೆಗಳು ಹಾಳಾಗಿ ಹೋಗುತ್ತಿವೆ. ಇವತ್ತು ಇದರ ಅಭಿವೃದ್ಧಿಯು ನಿಮ್ಮ ಕೈಯಲ್ಲಿದೆ ಇದನ್ನು ಹಾಳು ಮಾಡುವುದೂ ನಿಮ್ಮ ಕೈಯಲ್ಲಿದೆ. ಇವತ್ತು, ನೀವು, ಹಿಂದೆ 2001ರಲ್ಲಿ ಯಾವ ರೀತಿಯಲ್ಲಿತ್ತೋ ಹಾಗೆ ವಸೂಲ್ಮಾಡಲು ಸರ್ಕಾರ ಒಪ್ಪಿಗೆ ಕೊಟ್ಟಿದೆ ಎಂದು ಸರ್ಕಾರ ಒಂದು ಹೇಳಿಕೆ ಕೊಟ್ಟರೆ ಇಡೀ ರಾಜ್ಯದಲ್ಲಿ ಎಲ್ಲಾ ಪುರಸಭೆ ನಗರಸಭೆಗಳು ಬದುಕಿಹೋಗುತ್ತವೆ. ಬದುಕುವುದಕ್ಕೆ ನೀವು ಕಾರಣರಾಗುತ್ತೀರಿ. ಇಲ್ಲವೆಂದು ಎರಡೂವರೆಪಟ್ಟು ಆಗಲೇಬೇಕೆಂದು ತಾವು ಹಟ ಹಿಡಿದುಕೊಂಡು ಕುಳಿತುಕೊಂಡರೆ ಖಂಡಿತಾ ಒಂದು ರೂಪಾಯಿ ಹಣವನ್ನೂ ಕಟ್ಟುವುದಿಲ್ಲ. ಕಟ್ಟದಿರುವುದರಿಂದ ಎಲ್ಲಾ ನಗರಸಭೆ ಪುರಸಭೆಗಳು ಹಾಳಾಗಿಹೋಗುತ್ತವೆ. ಇವತ್ತು ತುರ್ತಾಗಿ ತಮ್ಮ ಉತ್ತರದಲ್ಲಿ ಹಿಂದಿನ ರೀತಿಯಲ್ಲಿ ವಸೂಲ್ಮಾಡಲು ಮಾನ್ಯ ಮುಖ್ಯಮಂತ್ರಿಗಳು ಈ ಕಡೆ ಗಮನಕೊಡಬೇಕು. ಇಲ್ಲವೆಂದರೆ ಅನೇಕ ಪುರಸಭೆಗಳು ನಗರಸಭೆಗಳು ಹಾಳಾಗಿ ಹೋಗುತ್ತವೆ. ಇದರ ಬಗ್ಗೆ ತಾವು ದಯವಿಟ್ಟು ಇವತ್ತು ತೀರ್ಮಾನವನ್ನು ತೆಗೆದುಕೊಳ್ಳಬೇಕು. ತಾವು ಇವತ್ತು ತೀರ್ಮಾನವನ್ನು ತೆಗೆದುಕೊಳ್ಳಲಿಲ್ಲವೆಂದರೆ ನಮಗೆಲ್ಲರಿಗೂ ಬಹಳ ಕಷ್ಟವಾಗುತ್ತದೆ, ಇದರಲ್ಲಿ ಆ ಪಕ್ಷ ಈ ಪಕ್ಷವೆನ್ನುವುದಿಲ್ಲ ಎಲ್ಲಾ ನಗರಸಭೆ ಪುರಸಭೆಗಳು ಸೇರಿವೆ. ಕಳೆದ ಮೂರು ವರ್ಷದ ತೆರಿಗೆಯನ್ನು ನಾವು ನಿಂತು ಜನರಿಂದ ಕಟ್ಟಿಸಿಕೊಡುತ್ತೇವೆ. ಆ ಪುರಸಭೆ ನಗರಸಭೆಗಳು ಉದ್ಧಾರವಾಗಲು ಅವಕಾಶವಾಗುತ್ತದೆ. ಇಲ್ಲವೆಂದರೆ ಈಗಾಗಲೇ ಸರ್ಕಾರದ ವಿರುದ್ಧ ರಾಜ್ಯಾದ್ಯಂತ ಸಮಾವೇಶಗಳಾಗಿವೆ ಹೋರಾಟಗಳಾಗುತ್ತಿವೆ. ಆ ಹೋರಾಟಕ್ಕೆ ಧುಮುಕುವುದಕ್ಕೆ ಈ ಒಂದು ವೇದಿಕೆನೇ ಹೋರಾಟದ ಕಣವಾಗುತ್ತದೆ ಇವತ್ತು ನಾನು ತುಂಬಾ ಸ್ಪಷ್ಟವಾಗಿ ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳುವುದಕ್ಕೆ ಇಚ್ಛೆಪಡುವುದೇನೆಂದರೆ, ಹೋರಾಟದ ಕಣವಾಗಿ ದಯವಿಟ್ಟು ಈ ವಿಧಾನಸಭೆಯನ್ನು ಮಾಡಬೇಡಿ. ನಾವು ಮೂರು ವರ್ಷದಿಂದ ಅನುಭವಿಸುತ್ತಿದ್ದೇವೆ. ಯಾವುದೇ ಒಂದು ಸ್ಲಂಗೆ ಹೋದರೆ ಕುಡಿಯುವ ನೀರು ಕೊಡಲಾಗುತ್ತಿಲ್ಲ, ಹಿಂದುಳಿದ ವರ್ಗದವರಿರುವ ಜಾಗದಲ್ಲಿ ಒಂದು ರಸ್ತೆ ಕೊಡುವುದಕ್ಕಾಗುವುದಿಲ್ಲ. ನಗರಸಭೆ ಪುರಸಭೆಗಳಲ್ಲಿ ಹಣವಿಲ್ಲ. ಇಂತಹ ಸಮಯದಲ್ಲಿ ಯಾವುದೋ ಒಂದು ಸುಗ್ರೀವಾಜ್ಞೆ ಇದೆಂದು ಸುಮ್ಮನೆ ಕುಳಿತುಕೊಂಡರೆ ಖಂಡಿತ ಆಗುವುದಿಲ್ಲ. ದಯವಿಟ್ಟು ತಾವು ತೀರ್ಮಾನ ಮಾಡಿ ಮುಖ್ಯಮಂತ್ರಿಗಳು ಇಡೀ ರಾಜ್ಯಕ್ಕೆ ಅನುಕೂಲವಾಗುವಂತೆ 2001ರಲ್ಲಿ ಯಾವರೀತಿ ತೆರಿಗೆ ವಸೂಲ್ಮಾಡಲಾಗುತ್ತಿತ್ತೋ ಆ ರೀತಿ ತೆರಿಗೆ ಕಟ್ಟಲು ಅವಕಾಶ

ಮಾಡಿಕೊಡಲಾಗಿದೆ ಎಂದು ಸರ್ಕಾರ ಹೇಳಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಎರಡನೆಯದು. ಮುಂದೇನಾಗಬೇಕೆಂಬುದರ ಬಗ್ಗೆ, ಈ ಮೂರು ವರ್ಷದ್ದನ್ನು ತಾವು ಈಗ ಪರಿಹಾರ ಮಾಡಿಕೊಡಿ, ನಾವೆಲ್ಲರೂ ಒಟ್ಟಿಗೆ ಕುಳಿತುಕೊಳ್ಳೋಣ. ಎಲ್ಲಾ ಪಕ್ಷದವರು ಅದರಲ್ಲಿ ಸೇರೋಣ. ಇದಕ್ಕೆ ಯಾವ್ಯಾವ ಹೋರಾಟ ಮಾಡಿದ್ದಾರೆ. ಆ ಎಲ್ಲಾ ವೇದಿಕೆಯನ್ನು ಅದಕ್ಕೆ ಕರೆಯಿರಿ, ಒಟ್ಟಿಗೆ ಕುಳಿತು ಚರ್ಚೆ ಮಾಡಿ ಜಾಯಿಂಟ್ ಸೆಲೆಕ್ಟ್ ಕಮಿಟಿಯ ಮುಖಾಂತರ, ಇಡೀ ರಾಜ್ಯಕ್ಕೆ ಒಂದು ಮಾದರಿ ಶಾಸನವನ್ನು ತರೋಣ, ಇಡೀ ರಾಜ್ಯಕ್ಕೆ ಅನುಕೂಲವಾಗುವ ದಿಕ್ಕಿನಲ್ಲಿ ಮಾಡೋಣ ಇಲ್ಲವೆಂದರೆ ಏನಾಗುತ್ತದೆಂದರೆ, ನಾವೇನೋ ಕಂಠಶೋಷಣೆ ಮಾಡಿಕೊಂಡಿವಿ. ಅದರ ಮೂಲಕ ನಾವೇನೂ ಮಾಡಲಾಗುವುದಿಲ್ಲ ಸುಗ್ರೀವಾಜ್ಞೆ ಇದೆ. ಅದರ ಪ್ರಕಾರ ಮೀರಕ್ಕೆ ಆಗುವುದಿಲ್ಲವೆಂದರೆ, ಸುಗ್ರೀವಾಜ್ಞೆ ಏನೂ ಆಕಾಶದಿಂದ ಉದುರಿ ಬಂದಿಲ್ಲ ಇವತ್ತು ಅದಕ್ಕೆ ತಾವೇನು ಪರಿಹಾರವನ್ನು ಕಂಡುಹಿಡಿಯುತ್ತೀರಿ ಅದರಿಂದ ಇಡೀ ರಾಜ್ಯಕ್ಕೆ ಅನುಕೂಲವಾಗುತ್ತದೆ. ದಯವಿಟ್ಟು 2001ರ ಪ್ರಕಾರ ತಾವು ಅದನ್ನು ಜಾರಿತರುವುದಕ್ಕೆ ಪ್ರಯತ್ನ ಮಾಡಬೇಕು. ಇಡೀ ರಾಜ್ಯದ ಎಲ್ಲಾ ನಗರಸಭೆ ಪುರಸಭೆಗಳು ಚೆನ್ನಾಗಿ ಕೆಲಸ ಮಾಡಲು ಅವಕಾಶ ಮಾಡಿಕೊಡಬೇಕು. 2001ರ ಪ್ರಕಾರ ತೆರಿಗೆ ವಸೂಲ್ಮಾಡುವುದನ್ನು ಇವತ್ತು ಘೋಷಣೆ ಮಾಡಬೇಕೆಂದು ನಾನು ಸರ್ಕಾರದ ಮೇಲೆ ಒತ್ತಾಯ ತರುತ್ತಿದ್ದೇನೆ.

ಶ್ರೀ ಜಗದೀಶ್ ಶೆಟ್ಟರ್(ಹುಬ್ಬಳ್ಳಿ ಗ್ರಾಂ) : ಸನ್ಮಾನ್ಯ ಅಧ್ಯಕ್ಷರೆ, ಈ ಸ್ವಯಂ ಘೋಷಿತ ಆಸ್ತಿ ತೆರಿಗೆ ವ್ಯವಸ್ಥೆ. ಇದರ ಮೂಲ ಉದ್ದೇಶದ ಬಗ್ಗೆ ನಮ್ಮದೇನೂ ತಕರಾರು ಇಲ್ಲ, ಆದರೆ ಈ ಕಾನೂನಿನಲ್ಲಿರುವ ಲೋಪದೋಷಗಳನ್ನು ಸರಿಮಾಡಬೇಕಾಗಿದೆ. ಮತ್ತೆ ಒಂದು ವೈಜ್ಞಾನಿಕವಾದ ಚಿಂತನೆಯನ್ನು ನಾವು ಮಾಡಬೇಕಾಗಿದೆ. ಇಲ್ಲವಾದರೆ ಇದೇ ಮುಂದುವರೆಯುತ್ತದೆ. ಮಾನ್ಯ ಯಡಿಯೂರಪ್ಪನವರು ಹಾಗೂ ಮಾನ್ಯ ಈಶ್ವರಪ್ಪನವರು ಹೇಳಿದರು. ಆ ಪ್ರಕಾರ ಇದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ರೆಫರ್ ಮಾಡುವುದು ಅವಶ್ಯಕವಿದೆ. ಇವತ್ತು ಬೆಂಗಳೂರು ಮಹಾನಗರಕ್ಕೆ ಒಂದು ಕಾನೂನು ಇಡೀ ರಾಜ್ಯದ ಮಹಾನಗರ ಮತ್ತು ನಗರಪ್ರದೇಶಕ್ಕೆ ಮತ್ತೊಂದು ಕಾನೂನು differentiate ಇದ್ಯಾಕೆ ಮಾಡಿದಿರಿ ಎನ್ನುವ ಒಂದು ಪ್ರಶ್ನೆ ಇದೆ. ಇವತ್ತೇನು ಬೆಂಗಳೂರು ಮಹಾನಗರಕ್ಕೆ ಸ್ವಯಂ ಘೋಷಿತ ಆಸ್ತಿ ತೆರಿಗೆ ಅನ್ವಯಿಸಿದ್ದೀರಿ, ಇಲ್ಲಿರುವ ವ್ಯವಸ್ಥೆ ಏನಿದೆ, ಅದನ್ನು ಏಕೆ ಇಡೀ ರಾಜ್ಯಕ್ಕೆ ಅನ್ವಯ ಮಾಡುತ್ತಿಲ್ಲ? ಬೆಂಗಳೂರು ಮಹಾನಗರದಲ್ಲಿ ಈ ಬಾಡಿಗೆ ಲೆಕ್ಕಾಚಾರದ ಮೇಲೆ ಒಂದು ಆಸ್ತಿಗೆ ಒಂದು ವರ್ಷಕ್ಕೆ ಎಷ್ಟು ಬಾಡಿಗೆ ಬರುತ್ತದೆ ಆ ಆದಾಯದ ಮೇಲೆ ತೆರಿಗೆ ಲೆಕ್ಕಾಚಾರವಿದೆ. ಇವತ್ತು ಸರ್ಕಾರ ತಂದ ಕಾನೂನಿನ ಪ್ರಕಾರ ಸಬ್‌ರಿಜಿಸ್ಟ್ರಾರ್ ಆಫೀಸ್‌ನಲ್ಲೇನು ರಿಜಿಸ್ಟ್ರೇಷನ್ ಕಾನೂನು ಏನು ಇದೆ. 45(ಬಿ) ಸೆಕ್ಷನ್ ಪ್ರಕಾರ ಪ್ರಾಪರ್ಟಿ ಮೇಲೆ ಏನೊಂದು ಮಾರ್ಕೆಟ್ ವ್ಯಾಲ್ಯುವನ್ನು ಫಿಕ್ಸ್ ಮಾಡಿರುತ್ತಾರೆ. ಅದರ ಮೇಲೆ ಇವತ್ತು ಸ್ವಯಂ ಘೋಷಿತ ಆಸ್ತಿ ತೆರಿಗೆಯನ್ನು ಲೆಕ್ಕಾಚಾರ ಮಾಡುವ ವ್ಯವಸ್ಥೆ ಕಾನೂನಿನಲ್ಲಿದೆ. ಇವತ್ತು ಪ್ರತಿ ಆರು ತಿಂಗಳಿಗೊಮ್ಮೆ ಸಬ್‌ರಿಜಿಸ್ಟ್ರಾರ್ ಆಫೀಸ್‌ನಲ್ಲಿರುವ ಈ ಪ್ರಾಪರ್ಟಿ ವ್ಯಾಲ್ಯುವೇಶನ್ ಹೆಚ್ಚಾಗುತ್ತಿದೆ. ಹಾಗಾದರೆ ಈ ಸ್ವಯಂ ಘೋಷಿತ ಆಸ್ತಿ ತೆರಿಗೆ ಕಾನೂನಿನ ಪ್ರಕಾರ ನೀವು ಪ್ರತಿ ವರ್ಷ ಅಸೆಸ್‌ಮೆಂಟ್ ಮಾಡಬೇಕು. ಸ್ಟೇಟ್‌ಮೆಂಟ್ ಕೊಡಬೇಕು. ಆಗ ಪ್ರತಿ ಆರು ತಿಂಗಳಿಗೊಮ್ಮೆ ಪ್ರಾಪರ್ಟಿ ವ್ಯಾಲ್ಯುವೇಶನ್ ಜಾಸ್ತಿಯಾಗಿರುತ್ತದೆ. ಇವತ್ತು ಹೆಚ್ಚು ತೆರಿಗೆ ಆಸ್ತಿ ತೆರಿಗೆಯ ಭಾರ ನಾಗರಿಕರ ಮೇಲೆ ಬೀಳುವುದಕ್ಕೆ ಸಾಧ್ಯತೆ ಇದೆ. ಎಲ್ಲಾ ಕಡೆ ಈ ಕಾನೂನಿನ ಬಗ್ಗೆ ಇವತ್ತು ಪ್ರತಿರೋಧ ಬರುತ್ತಿರುವುದನ್ನು ನೋಡುತ್ತಿದ್ದೇವೆ.

ಬೆಂಗಳೂರು ಮಹಾನಗರಕ್ಕೆ ಮೂರು ವರ್ಷಕ್ಕೊಮ್ಮೆ ಸ್ಟೇಟ್‌ಮೆಂಟ್ ಸಬ್‌ಮಿಟ್ ಮಾಡುವುದಿದೆ. ಆದರೆ ಇತರೆ ನಗರ ಪ್ರದೇಶಗಳಿಗೆ ಪ್ರತಿ ವರ್ಷ ಸ್ಟೇಟ್‌ಮೆಂಟ್ ಕೊಡಬೇಕು. ಈ ರೀತಿಯ ಕಾನೂನಿಂದ ನಾಗರಿಕರಿಗೆ ಹೆಚ್ಚಿನ ತೊಂದರೆ, ಇವತ್ತು ಸ್ಟೇಟ್‌ಮೆಂಟ್ ಕೊಟ್ಟು ಮತ್ತೆ ಮೂರುನಾಲ್ಕು ತಿಂಗಳಲ್ಲಿ ಅದರ ಬಗ್ಗೆ ಮತ್ತೆ ಚಿಂತೆ ಮಾಡಬೇಕಾಗುತ್ತದೆ. ಹೀಗಾಗಿ ಈ ಕಾನೂನಿನ ತೊಡಕುಗಳನ್ನು ನಿವಾರಣೆ ಮಾಡುವುದು ಮೊಟ್ಟಮೊದಲನೆಯ ಕೆಲಸ ಸರ್ಕಾರದ್ದೆಂದು ನಾನು ಹೇಳುತ್ತೇನೆ. ಬೆಂಗಳೂರು ಮಹಾನಗರದಲ್ಲಿ ಆಫ್ಷನಲ್ ಇದೆ. ಈ ಸ್ವಯಂ ಘೋಷಿತ ಆಸ್ತಿ ತೆರಿಗೆಯನ್ನು ಅವರು ಅನ್ವಯಿಸಿಕೊಳ್ಳಬಹುದು ಇಲ್ಲದಿದ್ದರೆ ಹಳೆಯ ತೆರಿಗೆ ಪದ್ಧತಿಯನ್ನು ಮುಂದುವರೆಸಿಕೊಂಡು ಹೋಗಬಹುದು. ಆದರೆ ರಾಜ್ಯದ ಬೇರೆ ನಗರ ಪ್ರದೇಶಗಳಲ್ಲಿ ಕಡ್ಡಾಯವಾಗಿ ಸ್ವಯಂ ಘೋಷಿತ ಆಸ್ತಿ ತೆರಿಗೆ ಪದ್ಧತಿಯನ್ನು ಜಾರಿಗೊಳಿಸಿದ್ದೀರಿ. ಸರ್ಕಾರ ಇವತ್ತು ಏಕೆ ಈ ತಾರತಮ್ಯವನ್ನು ಮಾಡುತ್ತಿದೆ ಎನ್ನುವುದನ್ನು ಹೇಳಬೇಕಾಗಿದೆ. ಇವತ್ತು ಇಂತಹ ಹಲವಾರು ಲೋಪದೋಷಗಳನ್ನು ಅವೈಜ್ಞಾನಿಕವಾದ ನಿಯಮಗಳನ್ನು ತೆಗೆದು ತಿದ್ದುಪಡಿ ಮಾಡುವುದು ಅವಶ್ಯಕ ಇದೆ. ಮಾನ್ಯ ನಾಯಕರು ಹೇಳಿದ ಪ್ರಕಾರ ಈಗ ಎರಡೂವರೆ ಪಟ್ಟು ತೆರಿಗೆಯನ್ನು ಮೊದಲು ಇದ್ದ ವ್ಯವಸ್ಥೆಗೆ ಹೆಚ್ಚಿನ ತೆರಿಗೆಯನ್ನು ತುಂಬಬೇಕೆನ್ನುವ ಒಂದು ಆರ್ಡಿನೆನ್ಸ್‌ನ್ನು ಏನು ಹೊರಡಿಸಿದ್ದಾರೆ. ಇದು ಸಂಪೂರ್ಣ ತಪ್ಪು. ಮತ್ತು ಇಲ್ಲಿ ಮಾನ್ಯ ಮೋರೆಯವರು, ಸಚಿವರು. ತಮ್ಮ ಒಂದು ಉತ್ತರದಲ್ಲಿ ಏನು ಹೇಳಿದ್ದಾರೆ. ಸಾರ್ವಜನಿಕರು ಈ ಪದ್ಧತಿಯ ಅನುಸಾರ ತೆರಿಗೆಯನ್ನು ಪಾವತಿ ಮಾಡಿಕೊಂಡು ಬರುತ್ತಿದ್ದಾರೆ. ಮತ್ತು ಇದರಿಂದ ತೆರಿಗೆಯನ್ನು ಪಾವತಿಸುವಲ್ಲಿ ಯಾವುದೇ ಗೊಂದಲ ಉಂಟಾಗುವುದಿಲ್ಲವೆನ್ನುವ ಮಾತನ್ನು ಹೇಳಿದ್ದಾರೆ. ಇದು ಸದನಕ್ಕೆ ತಪ್ಪು ಮಾಹಿತಿ ಕೊಟ್ಟಂಥದ್ದು. ಈಗಾಗಲೇ ಮಾನ್ಯ ಪ್ರತಿಪಕ್ಷದ ನಾಯಕರಾದ ಮಾನ್ಯ ಯಡಿಯೂರಪ್ಪನವರು ಹೇಳಿದರು. ಯಾವ ಯಾವ ನಗರದಲ್ಲಿ ಇವತ್ತು ಟ್ಯಾಕ್ಸ್ ಎಷ್ಟು ಕಲೆಕ್ಷನ್ ಆಗಿದೆ ಎನ್ನುವಂಥದ್ದು. ಶೇಕಡ ಮೂವತ್ತರಷ್ಟು ತೆರಿಗೆ ಕಲೆಕ್ಟ್ ಆಗಿಲ್ಲ. ಹಾಗಾದರೆ ನೀವು ಇಲ್ಲಿ ಮಾಹಿತಿಯನ್ನು ಕೊಡುತ್ತಿದ್ದೀರಿ. ಬಹುತೇಕ ಹೆಚ್ಚು ಕಡಿಮೆ ಎಲ್ಲರೂ ತೆರಿಗೆಯನ್ನು ತುಂಬಿದ್ದಾರೆನ್ನುವಂಥ ತಪ್ಪು ಮಾಹಿತಿಯನ್ನು ತಾವು ಇವತ್ತು ಸದನಕ್ಕೆ ಕೊಡುತ್ತಿದ್ದೀರಿ. ಎಲ್ಲ ಕಡೆಯಲ್ಲೂ ತುಂಬಿಲ್ಲ. ಶೇಕಡ 30ರಷ್ಟು ಮಾತ್ರ ತುಂಬಿದ್ದಾರೆ. ಹೀಗಾಗಿ ಇವತ್ತು ಇದರ ಬಗ್ಗೆಯೂ ಚಿಂತನೆಯನ್ನು ಮಾಡಬೇಕು. ಎರಡೂವರೆ ಪಟ್ಟು ತುಂಬಬೇಕೆನ್ನುವ ಆರ್ಡಿನೆನ್ಸ್‌ನ್ನು ಏನು ಹೊರಡಿಸಿದ್ದೀರಿ. ತಕ್ಷಣವೇ ಅದನ್ನು ವಿತ್‌ಡ್ರಾ ಮಾಡಿ. ಮತ್ತು 2001 ರಿಂದ ಇಲ್ಲಿಯವರೆಗೆ ಏನು ಹಳೆಯ ಪದ್ಧತಿ ಪ್ರಕಾರ ತೆರಿಗೆ ರೇಟ್ ಇತ್ತು, ಅದರ ಪ್ರಕಾರ ತುಂಬಲಿಕ್ಕೆ ಅವಕಾಶವನ್ನು ಮಾಡಿಕೊಡಿ. ಇಲ್ಲದಿದ್ದರೆ ಏನಾಗುತ್ತೆ. ಇವತ್ತು ಹಳೆಯ ಪದ್ಧತಿ ಪ್ರಕಾರವೂ ತೆರಿಗೆಯನ್ನು ತುಂಬುತ್ತಿಲ್ಲ. ಇವತ್ತು ಎರಡೂವರೆ ಪಟ್ಟು ರೀತಿಯಲ್ಲೂ ತೆರಿಗೆಯನ್ನು ತುಂಬುತ್ತಿಲ್ಲ. ಇವತ್ತು ಇದರಿಂದಾಗಿ ಸ್ಥಳೀಯ ಸಂಸ್ಥೆಗಳಿಗೆ ಆರ್ಥಿಕವಾದ ಭಾರ ಬಿದ್ದಿದೆ. ಹೀಗಾಗಿ 31ನೇ ಮಾರ್ಚ್‌ವರೆಗೆ ಈಗ ನಿಮ್ಮ ಅವಧಿ ಮುಗಿದುಹೋಗಿದೆ. ಇಲ್ಲಿಯವರೆಗೆ ಏನು ಸ್ವಯಂ ಘೋಷಿತ ತೆರಿಗೆ ಪ್ರಕಾರ ಆ ತೆರಿಗೆಯನ್ನು ತುಂಬುವಂಥ, ಸ್ಟೇಟ್‌ಮೆಂಟನ್ನು ಕೊಡುವಂಥ ಅವಧಿ ಈಗಲೇ ಮುಗಿದುಹೋಗಿದೆ. ಅದಕ್ಕಾಗಿ ಈಗ ಎಲ್ಲರೂ ದಂಡ ತುಂಬಬೇಕು. ದಂಡ, ಇಂಟರೆಸ್ಟ್ ಎಲ್ಲಾ ತುಂಬಬೇಕು. ಅದಕ್ಕಾಗಿ ಈ ಒಂದು ಅವಧಿಯನ್ನು ವಿಸ್ತರಣೆ ಮಾಡಿ 31ನೇ ಮಾರ್ಚ್‌ವರೆಗೆ ತುಂಬುವುದಕ್ಕೆ ಇದನ್ನು ವಿಸ್ತರಣೆ ಮಾಡಿ. ಆದರೆ ಹಳೆಯ ಪದ್ಧತಿ ಪ್ರಕಾರ ತುಂಬುವುದಕ್ಕೆ ನೀವು ಅವಕಾಶವನ್ನು ಕೊಡಬೇಕೆನ್ನುವ ಒತ್ತಾಯವನ್ನು ಇವತ್ತು ನಾನು ಮಾಡುತ್ತಿದ್ದೇನೆ. ಏಕೆಂದರೆ ಅಕ್ಟ್ರಾಯ್ ಪದ್ಧತಿ ಹೋಯಿತು. ಅಕ್ಟ್ರಾಯ್

ಇದ್ದಿದ್ದರೆ ಇಷ್ಟೆಲ್ಲಾ ಸಮಸ್ಯೆಯೇ ಬರುತ್ತಿರಲಿಲ್ಲ. ಇವತ್ತು ನೀವು ಅಕ್ಟ್ರಾಯ್ ಪದ್ಧತಿಯನ್ನು ತೆಗೆದಿರುವುದರಿಂದ ಇವತ್ತು ಎಲ್ಲಾ ಮಹಾನಗರಸಭೆಗಳು ಎಲ್ಲಾ ನಗರಸಭೆಗಳು ಸ್ಥಳೀಯ ಸಂಸ್ಥೆಗಳು ಇವತ್ತು ಆರ್ಥಿಕ ದುಸ್ಥಿತಿಯಲ್ಲಿವೆ. ಆ ಅಕ್ಟ್ರಾಯ್ ಪದ್ಧತಿ ಜಾರಿಯಲ್ಲಿದ್ದರೆ ಈ ಸಮಸ್ಯೆಯೇ ಬರುತ್ತಿರಲಿಲ್ಲ. ಅದನ್ನು ತೆಗೆದುಬಿಟ್ಟಿದ್ದೀರಿ. ಹೀಗಾಗಿ ಈ ಒಂದು ಸ್ವಯಂ ಘೋಷಿತ ತೆರಿಗೆ ವ್ಯವಸ್ಥೆಯನ್ನು ತಂದಿದ್ದೀರಲ್ಲಾ ಅದಕ್ಕಾಗಿ ಹೊಸದಾಗಿ ಅಮೆಂಡ್‌ಮೆಂಟನ್ನು ತೆಗೆದ್ದುಕೊಂಡು ಬನ್ನಿ. ಇವನ್ನೆಲ್ಲಾ ನಾವು ಸೂಚನೆ ಕೊಟ್ಟಿದ್ದೇವೆ. ಖುಲ್ಲಾ ಜಾಗದಮೇಲೂ ಸಹಿತ ನೀವು ತೆರಿಗೆಯನ್ನು ಹಾಕುತ್ತೀರಿ ಎಂದರೆ ಹೇಗೆ? ಇವತ್ತು ನನ್ನ ಮನೆ ಇದೆ. ನನ್ನ ಮನೆಯ ಪಕ್ಕದಲ್ಲಿ ಖುಲ್ಲಾ ಜಾಗ ಇದೆ. ಗಾರ್ಡನ್‌ಗೋ ಮತ್ತೊಂದಕ್ಕೋ ಅದನ್ನು ಉಪಯೋಗ ಮಾಡುತ್ತೇನೆ. ಅದರಿಂದ ನನಗೇನೂ ಉತ್ಪನ್ನವೂ ಇಲ್ಲ. ಆದರೆ ಆ ಖುಲ್ಲಾ ಜಾಗದಮೇಲೂ ನೀವು ತೆರಿಗೆಯ ನ್ನು ಹಾಕುತ್ತೇವೆ ಎಂದರೆ ಇವತ್ತು ನಾವೆಲ್ಲಿಗೆ ಹೋಗಬೇಕೆಂದು ವಿಚಾರ ಮಾಡಬೇಕಾಗುತ್ತದೆ. ಆ ಖುಲ್ಲಾ ಜಾಗದ ಮೇಲೆ ತೆರಿಗೆ ಹಾಕುವ ಪದ್ಧತಿ ಏನು ಇದೆ. ಅದನ್ನು ಸಂಪೂರ್ಣವಾಗಿ ತೆಗೆದುಹಾಕಿ. ಅದಕ್ಕೆ ಸಂಪೂರ್ಣವಾದ ವಿನಾಯಿತಿಯನ್ನು ಕೊಡಬೇಕೆನ್ನುವ ಒತ್ತಾಯವನ್ನು ಮಾಡುತ್ತಿದ್ದೇನೆ. ಹೀಗಾಗಿ ಇವತ್ತೇನು ಸಲಹೆ ಸೂಚನೆಗಳನ್ನು ಕೊಟ್ಟಿದ್ದೇವೆ. ಇದನ್ನೆಲ್ಲಾ ತೆಗೆದುಕೊಂಡು ಬಂದು ಒಂದು ಅಮೆಂಡ್‌ಮೆಂಟ್ ಬಿಲ್‌ನ್ನಾದರೂ ಇಟ್ಟು ಅದನ್ನು ಜಂಟಿ ಸಲಹಾ ಸಮಿತಿಗೆ ತಾವು ರೆಫರ್ ಮಾಡಿದರೆ ಒಂದು ಅಮೂಲಾಗ್ರವಾದ ಸುಧಾರಣೆಯನ್ನು ತರುವುದಕ್ಕೆ ಸಾಧ್ಯ ಇದೆ. ಈ ಒಂದು ಸ್ವಯಂ ಘೋಷಿತ ತೆರಿಗೆ ವ್ಯವಸ್ಥೆಯ ಬಗ್ಗೆ ಯಾರದ್ದೂ ವಿರೋಧ ಇಲ್ಲ. ಆದರೆ ಈ ಲೋಪದೋಷಗಳನ್ನು ಸರಿಪಡಿಸುವುದು ಆದಾಗ ಮಾತ್ರ ಇವತ್ತು ಎಲ್ಲಾ ಕರ್ನಾಟಕ ಜನತೆಯೂ ಇದನ್ನು ಒಪ್ಪುವುದಕ್ಕೆ ಸಾಧ್ಯ ಇದೆ. ಮತ್ತು ಸ್ಥಳೀಯ ಸಂಸ್ಥೆಗಳ ಆರ್ಥಿಕ ಸುಧಾರಣೆಯಾಗುವುದಕ್ಕೆ ಸಾಧ್ಯತೆ ಇದೆ. ಅದಕ್ಕಾಗಿ ದಯವಿಟ್ಟು ಈ ಎಲ್ಲಾ ವಿಷಯಗಳನ್ನು ಸರ್ಕಾರ ಮಾನ್ಯ ಮುಖ್ಯ ಮಂತ್ರಿಗಳು ಮತ್ತು ಸಚಿವರು ಬಹಳ ಗಂಭೀರವಾಗಿ ತೆಗೆದುಕೊಳ್ಳಬೇಕಾಗುತ್ತದೆ. ಇಲ್ಲದಿದ್ದರೆ ಇದರ ಬಗ್ಗೆ ಮೂರು ವರ್ಷದಿಂದ ಹೋರಾಟವೇನು ನಡೆಯುತ್ತಿದೆ..........

ಅಧ್ಯಕ್ಷರು : ಮಾನ್ಯ ಜಗದೀಶ್ ಶೆಟ್ಟರ್‌ರವರೇ, ಕ್ಲಾರಿಫಿಕೇಷನನ್ನು ಕೇಳುವುದಕ್ಕೆ ಅರ್ಧ ಗಂಟೆ ತೆಗೆದುಕೊಂಡರೆ ಹೇಗೆ? ಇದು ನನಗೆ ಅರ್ಥವಾಗುವುದಿಲ್ಲ. ಆಯಿತು. ನಿಮ್ಮ ನಾಯಕರುಗಳೆಲ್ಲಾ ಸ್ಪಷ್ಟವಾಗಿ ಕ್ಲಾರಿಫಿಕೇಷನ್‌ಗಳನ್ನು ಕೇಳಿದ್ದಾರೆ. ದಯುಮಾಡಿ ಮಾನ್ಯ ಕಾಗೇರಿಯವರೇ, ಇನ್ನು ಬಹಳ ಬೇರೆ ಬೇರೆ ವಿಚಾರಗಳೆಲ್ಲಾ ಇವೆ. ಮೂರು ಜನ ನಿಮ್ಮ ನಾಯಕರುಗಳು ಕ್ಲಾರಿಫಿಕೇಷನನ್ನು ತೆಗೆದುಕೊಂಡಿದ್ದಾರೆ. ಆದ್ದರಿಂದ ದಯಮಾಡಿ ಸಹಕರಿಸಿ. ಈ ರೀತಿಯಾದರೆ ಸಭೆ ನಡೆಸುವುದು ಕಷ್ಟವಾಗುತ್ತದೆ. ಮಾನ್ಯ ಸಚಿವರು ಉತ್ತರವನ್ನು ಹೇಳಿ.

ಶ್ರೀ ಎಸ್.ಆರ್. ಮೋರೆ(ಪೌರಾಡಳಿತ ಮತ್ತು ಕೆಯುಐಡಿಎಫ್‌ಸಿ ಸಚಿವರು) : ಮಾನ್ಯ ಅಧ್ಯಕ್ಷರೇ, ಸ್ವಯಂ ಘೋಷಿತ ಆಸ್ತಿ ತೆರಿಗೆಯ ಪದ್ಧತಿ ವೈಜ್ಞಾನಿಕ ಇಲ್ಲವೆಂದು ಹೇಳಿ ತಾವು ಅನೇಕ ಸಾರಿ ನನ್ನ ಜೊತೆಗೆ ಚರ್ಚೆ ಮಾಡಿದ್ದೀರಿ. ಅದಾದಮೇಲೆ ನಾನು ಎರಡೂ ಸದನದ ಸದಸ್ಯರ ಜೊತೆ ಮೂರು ಸಭೆಗಳನ್ನು ಮಾಡಿದೆ. ಆಗ 5–8–04 ಕ್ಕೆ ಕೊನೆಯ ಸಭೆಯನ್ನು ಮಾಡಿ ಆ ಸಭೆಯನ್ನು ಮಾನ್ಯ ಡಾ॥ ತಂಗಾ ರವರು ಡಾ॥ ಆಚಾರ್ ಶ್ರೀಯುತರುಗಳಾದ ಈಶ್ವರಪ್ಪ ಶಂಕರಮೂರ್ತಿಯವರು ಭಟ್‌ರು ಇದ್ದು ರಾಮಚಂದ್ರಗೌಡರು, ಎಂ.ಪಿ. ನಾಡಗೌಡ ಬಸವರಾಜ್ ಬೊಮ್ಮಾಯಿ, ಅರುಣ್ ಮಾಚಯ್ಯ ಬಾಲಕೃಷ್ಣಭಟ್ ಮತ್ತು ಕೃಷ್ಣಪಾಲೇಮಾರ್ ಇದ್ದರು. ಕಾಕಾ

ಸಾಹೇಬ್ ಪಾಟೀಲ್, ಅಭಯ್ ಪಾಟೀಲ್ ಇದ್ದರು ಮತ್ತು ಸರ್ಕಾರದ ಕಾರ್ಯದರ್ಶಿ ಕೂಡ ಇದ್ದರು. ಆಗ ನಾನು ಅರ್ಬಿಟ್ರರಿಯಾಗಿ ಎರಡೂವರೆ ಪಟ್ಟನ್ನು ಮಾಡಲಿಲ್ಲ. ಅದನ್ನು ನೀವೆಲ್ಲಾ ಸಭೆಯಲ್ಲಿ ಚರ್ಚೆ ಮಾಡಿ ಎರಡೂವರೆ ಪರ್‌ಸೆಂಟ್‌ಗೆ ಗ್ಯಾಪ್ ಮಾಡಬೇಕೆಂದು ಹೇಳಿ ನೀವು ಅದನ್ನು ಗ್ಯಾಪ್ ಮಾಡಿದಿರಿ. ಅಲ್ಲಿಗೆ ನಾವು ಆಪಷನ್‌ನ್ನು ಕೊಟ್ಟೆವು. ಸ್ವಯಂ ಘೋಷಿತ ಪದ್ಧತಿ ಯಾರಿಗೆ ಅನುಕೂಲವಾಗುತ್ತದೋ ಅದನ್ನಾದರೂ ಮಾಡಬಹುದು. ಇಲ್ಲದಿದ್ದರೆ ಎ.ಆರ್.ವಿ ಪದ್ಧತಿ ಪ್ರಕಾರ 2001 ರಲ್ಲಿ ಏನು ಆ ಪದ್ಧತಿ ಇತ್ತೋ, ಅದರ ಎರಡೂವರೆ ಪಟ್ಟನ್ನು ತುಂಬಬೇಕೆಂದು ಹೇಳಿ ಎಲ್ಲರೂ ಸರ್ವಾನುಮತದಿಂದ ಇದು ಒಪ್ಪಿಗೆಯಾದಮೇಲೆ ಅದಕ್ಕೆ ನಾನು ಆರ್ಡಿನೆನ್ಸ್‌ನ್ನು ಹೊರಡಿಸಿದ್ದೇನೆ. ಅದಾದಮೇಲೆ ಆರ್ಡಿನೆನ್ಸ್‌ನ್ನು ಹೊರಡಿಸಿದಮೇಲೆ ನನಗೆ ಅಂಕಿಸಂಖ್ಯೆ ಸರ್ಕಾರದಿಂದ ಬಂದ ಪ್ರಕಾರ ಮಂಗಳೂರು, ಆಮೇಲೆ ಶಿವಮೊಗ್ಗ ಮತ್ತು ಇನ್ನೆರಡು ಮೂರು ಜಿಲ್ಲೆಯದ್ದು ಇತ್ತು. ಬಾಕಿಯವರು ಎಲ್ಲರೂ 70–80 ಪರ್‌ಸೆಂಟನ್ನು ತುಂಬಿದ್ದಾರೆ. ಮತ್ತು ತಮಗೆ ಇನ್ನೊಂದು ಮಾಹಿತಿಯನ್ನು ಹೇಳಬೇಕೆಂದರೆ ಸಾಮಾನ್ಯವಾಗಿ ಸ್ವಯಂ ಘೋಷಿತ ತೆರಿಗೆ ಪದ್ಧತಿಯಲ್ಲಿ ಎಲ್ಲಾ ಬಡವರೂ ಕೂಡ ತುಂಬಿದ್ದಾರೆ. ಕೆಲವರು 10–15 ಪರ್‌ಸೆಂಟ್ ಸ್ವಲ್ಪ ಶ್ರೀಮಂತರೇ ಈ ತಕರಾರನ್ನು ಮಾಡಿ ಕೋರ್ಟಿಗೆ ಹೋಗಿದ್ದರು. ಆದರೂ ಕೋರ್ಟಿನಲ್ಲಿ ಜಯ ಸಿಗಲಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ : ಇದರಲ್ಲಿ ಬಡವರು ಶ್ರೀಮಂತರು ಎಂದು ಹೇಳುವ ಪ್ರಯತ್ನವನ್ನು ಮಾಡಬೇಡಿತೆರಿಗೆ ತೆರಿಗೆಯೇ.

ಶ್ರೀ ಎಸ್.ಆರ್. ಮೋರೆ : ಆದರೂ ಕೂಡ ನಮ್ಮ ಮಾನ್ಯ ಜಗದೀಶ್ ಶೆಟ್ಟರ್‌ರವರು ಆ ಸಲಹೆ ಕೊಟ್ಟರು. ನಾವು ಆ ಬಿಲ್ಲಿಗೆ ಅಮೆಂಡ್‌ಮೆಂಟನ್ನು ತಂದಿದ್ದೇವೆ. ಆ ಬಿಲ್‌ನಲ್ಲಿ ನಾವು ನೀವು ಚರ್ಚೆ ಮಾಡೋಣ. ಆ ಬಿಲ್‌ನಲ್ಲಿ ನಾವು ವೇಕೆಂಟ್ ಲ್ಯಾಂಡ್‌ಗೆ ಟ್ಯಾಕ್ಸ್‌ನ್ನು ತೆಗೆದಿದ್ದೇವೆ. ವಿಚಾರ ಮಾಡುತ್ತಿದ್ದೇವೆ. ಮತ್ತೆ ಸೆಕ್ಷನ್ 45 (ಬಿ) ಬಗ್ಗೆ ಹೇಳಿದರಲ್ಲಾ. ಆ 45(ಬಿ) ನಲ್ಲಿ ಇಟ್ಟು ನಾಲ್ಕು ಜೋನ್‌ಗಳನ್ನು ಮಾಡಿ ಆ ಕಾರ್ಪೋರೇಷನ್‌ಗಳಿಗೆ ನಾವು ಅಥಾರಿಟಿಯನ್ನು ಕೊಟ್ಟಿದ್ದೇವೆ. ಆ ಜೋನ್‌ನ ಯಾವ ರೀತಿ ತಾವು ಸೆಕ್ಷನ್ 45(ಬಿ) ಯಲ್ಲಿ ಸರ್ಕಾರ ಇಲ್ಲಿ ಮಾಡುತ್ತಿತ್ತೋ ಅದನ್ನು ಮಾಡುವ ಅಧಿಕಾರವನ್ನು ನಾವು ಅಲ್ಲಿಗೇ ಕೊಟ್ಟಿದ್ದೇವೆ. ಇದನ್ನೆಲ್ಲಾ ಮಾಡಿ ನಾವು ಬಿಲ್‌ನ್ನು ಚರ್ಚೆ ಮಾಡುತ್ತಿದ್ದೇವೆ. ಆದ್ದರಿಂದ ಈಗ ನಾನು ಎರಡೂವರೆ ಪರ್‌ಸೆಂಟ್ ಬಗ್ಗೆ ಆರ್ಡಿನೆನ್ಸ್ ತಂದಿದ್ದೇನೆ. ಅದರ ಬಗ್ಗೆ ನಾನೇನೂ ನಿಮಗೆ ಆಶ್ವಾಸನೆಯನ್ನು ಕೊಡುವುದಕ್ಕೆ ಹೋಗುವುದಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೇ, ಅದೇ ಇಂಪಾರ್‌ಟೆಂಟ್.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ನೋಡಿ ದಯಮಾಡಿ ಇದನ್ನು ಪ್ರಿಸ್ಟೀಜ್ ಎಂದು ತೆಗೆದುಕೊಳ್ಳಬೇಡಿ. ನಾನು ನಿಮಗೊಂದು ಹೇಳುತ್ತಿದ್ದೇನೆ. ಮಾನ್ಯ ಈಶ್ವರಪ್ಪನವರು ಒಂದು ಉದಾಹರಣೆಯನ್ನು ಕೊಟ್ಟರು. ನಾನು ವಿವರಕ್ಕೆ ಏಕೆ ಹೋಗುತ್ತಿಲ್ಲವೆಂದರೆ ಬಹಳಷ್ಟು ಪ್ರಮುಖವಾದ ವಿಷಯಗಳ ಚರ್ಚೆಗೆ ಬರಬೇಕಾಗಿದೆ. ಇದನ್ನು ಎಳೆಯಬಾರದು ಎಂದು ಸಂಕ್ಷಿಪ್ತವಾಗಿ ಮಾತನಾಡುವ ಪ್ರಯತ್ನವನ್ನು ನಾವು ಮಾಡಿದ್ದೇವೆ. ಬೇಕಾದರೆ ಇದನ್ನೇ ಒಂದು ದಿವಸ ಪೂರ್ತಿಯಾಗಿ ಚರ್ಚೆ ಮಾಡಬಹುದಾಗಿತ್ತು. ಉದಾ:ಗೆ ಶಿವಮೊಗ್ಗದಲ್ಲೋ ನಿಮ್ಮ ಊರಿನಲ್ಲೋ ಅಥವಾ ಬಾಗಲಕೋಟೆಯಲ್ಲೋ ಒಂದು ಸಾವಿರ ರೂಪಾಯಿ ತೆರಿಗೆ ಕೊಡುತ್ತಿದ್ದರೆ ಎರಡೂವರೆ ಪಟ್ಟು ಎಂದರೆ ಅದು ಎರಡೂವರೆ ಸಾವಿರ ರೂ. ಆಯಿತು. ನಾನು ಹೇಳುತ್ತೇನೆ, ಈ ಎರಡೂವರೆ ಸಾವಿರ ರೂ ಕಳೆದ ಮೂರು ವರ್ಷದಿಂದ ಕೊಡಬೇಕು. ಅಂದರೆ ಏಳೂವರೆ ಸಾವಿರ

ರೂಪಾಯಿಗಳನ್ನು ಕೊಡಬೇಕೆಂದರೆ ಅವನು ಇನ್ನೆಲ್ಲಿಯಾದರೂ ಬ್ಯಾಂಕ್‌ನಲ್ಲಿ ಸಾಲ ಸೋಲ ಮಾಡಿ ಅಡವು ಇಟ್ಟು ತಂದು ಕಟ್ಟುವಂಥ ಸ್ಥಿತಿ ಬರುತ್ತದೆ. ಅವನು ಸರ್ವನಾಶವಾಗುತ್ತಾನೆ. ದಯಮಾಡಿ ನೋಡಿ. ಈ ಆದಾಯದ ಅಂಕಿಅಂಶವನ್ನು ಲೆಕ್ಕ ಹಾಕಿದಾಗ ನಗರಸಭೆಗಳಿಗೆ ನಾವು ಬೇಕಾದ ರೀತಿಯಲ್ಲಿ ಸಹಕಾರವನ್ನು ಕೊಡುವುದಕ್ಕೆ ಬರುತ್ತದೆ. ದಯಮಾಡಿ ಇವೆಲ್ಲಾ ಬಾಕಿ ವಸೂಲು ಮಾಡಿ ಅವರು ಕೆಲಸ ಮಾಡುವುದಕ್ಕೆ ಅನುಕೂಲವಾಗುತ್ತದೆ. ಇದನ್ನು ಪ್ರಿಸ್ಟೀಜ್ ಆಗಿ ತೆಗೆದುಕೊಳ್ಳಬೇಡಿ. ನಾವು ಸರ್ಕಾರಕ್ಕೆ ಎಲ್ಲಾ ರೀತಿಯ ಸಹಕಾರವನ್ನು ಕೊಡುತ್ತಿದ್ದೇವಲ್ಲಾ. ಇದರಲ್ಲೇನಿದೆ? ನಾವೆಲ್ಲಾ ನಗರಸಭೆ, ಪುರಸಭೆಗಳನ್ನು ನಡೆಸುತ್ತಿರಲಿಲ್ಲವೇ? ನಾನು ಪುರಸಭೆಯ ಅಧ್ಯಕ್ಷನಾಗಿ ನಾನು ಜೀವನವನ್ನು ಪ್ರಾರಂಭ ಮಾಡಿದವನು. ಇವತ್ತು ಆಸ್ತಿಪಾಸ್ತಿಗಳನ್ನು ವೃದ್ಧಿ ಮಾಡಿಕೊಳ್ಳುವುದು ಹೇಗೆ? ಅಲ್ಲಿ ಪರಭಾರೆ ಮಾಡದೆ ಅಲ್ಲಿರುವಂಥವುಗಳಲ್ಲಿ ಷಾಪಿಂಗ್ ಕಾಂಪ್ಲೆಕ್ಸ್ ಮಾಡಿ ಮತ್ತೊಂದು ಮಾಡಿ ಅಲ್ಲಿ ಆದಾಯವನ್ನು ತರುವುದು ಹೇಗೆ, ಈ ಬಗ್ಗೆ ಯೋಚನೆ ಮಾಡಬೇಕೇ ಹೊರತು ಈ ಒಂದು ಹೊರೆಯನ್ನು ಶ್ರೀಸಾಮಾನ್ಯನ ಮೇಲೆ ಹಾಕುವಂಥದ್ದು ಸರಿಯಲ್ಲ. ಇವತ್ತು ನಾವೆಲ್ಲಿಗೂ ಬರುವುದಿಲ್ಲ. ನಾವು ಹೇಳಿದ್ದೇವೆ. ನಾವು ಧರಣಿ ಕುಳಿತುಕೊಳ್ಳುವುದಿಲ್ಲ. ನಮ್ಮ ಸಹಕಾರ ಬೇಡವೆಂದರೆ ನಾವೆಲ್ಲಾ ಹೊರಗಡೆ ಹೋಗಬೇಕಾಗುತ್ತದೆ. ನೀವು ಏನು ಬೇಕಾದರೂ ಮಾಡಿಕೊಳ್ಳಿ. ಆದರೆ ಮುಖ್ಯಮಂತ್ರಿಗಳೇ ಇಲ್ಲಿ ಇರುವುದರಿಂದ ಇದನ್ನು ದಯಮಾಡಿ ಜಂಟಿ ಸಲಹಾ ಸಮಿತಿಗೆ ಕಳುಹಿಸಿ. ಯಾರೋ ಅವತ್ತೊಂದು ಸಭೆಯನ್ನು ಕರೆದಿದ್ದೀರಿ. ಯಾರೋ ಅಭಿಪ್ರಾಯವನ್ನು ಕೊಟ್ಟು ಅದಕ್ಕೆ ಎರಡೂವರೆ ಪಟ್ಟು ನೀವೇ ಒಪ್ಪಿಕೊಂಡಿದ್ದೀರಿ. ಎಂದು ಹೇಳಿ ನಮಗೆ ಅದನ್ನು ತೋರಿಸಬೇಡಿ. ಜಂಟಿ ಸಲಹಾ ಸಮಿತಿಯಲ್ಲಿ ನಾವು ಕುಳಿತು ಚರ್ಚೆ ಮಾಡೋಣ. ನೀವು ಹೇಳಿದಂತೆ ಮಾಡೋಣ. ಆ ಕಮಿಟಿಯಲ್ಲಿ ಕುಳಿತು ಚರ್ಚೆ ಮಾಡೋಣ. ಎಲ್ಲಾ ಆಡಳಿತ ಪಕ್ಷದವರೇ ನೀವುಗಳು ಇರುತ್ತೀರಿ. ಆದ್ದರಿಂದ ದಯಮಾಡಿ ಈ ಎರಡೂವರೆ ಪಟ್ಟು ಹಾಕಿರುವುದನ್ನು ವಾಪಸ್ ತೆಗೆದುಕೊಂಡು ಆ 2001 ರಲ್ಲಿ ಏನಿತ್ತು. ಅದರಂತೆ ನೀವು ಎಲ್ಲಾ ಬಾಕಿಯನ್ನು ಇನ್ನು ಎರಡು ತಿಂಗಳು ಟೈಮ್ ಕೊಟ್ಟು ವಸೂಲು ಮಾಡುವುದು ಒಳ್ಳೆಯದು.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೇ, ನಾನು ಒಂದೇ ಒಂದು ಉದಾ: ಯನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ಕೊಡುತ್ತೇನೆ. ಏನಾಯಿತು ಎಂದರೆ ಶಿವಮೊಗ್ಗ ನಗರದಲ್ಲಿ ಅಣ್ಣ, ತಮ್ಮ ಒಂದೇ ತರಹದ ಎರಡು ಮನೆಗಳನ್ನು ಕಟ್ಟಿದರು. ಮೂರು ವರ್ಷದ ಕೆಳಗೆ ತಮಗೆ ಗೊತ್ತಿದೆ. ಇಲ್ಲಿ ಯಾರೋ ಇನ್‌ಫ್ಲೂಯೆನ್ಸ್ ಮಾಡಿಕೊಂಡು ಬಂದು ಅಲ್ಲಿ ಅಧಿಕಾರಿಗಳು ಅಸೆಸ್ ಮಾಡುವುದು. ಆ ಅಧಿಕಾರಿ ಒಂದು ಹೋಟೆಲ್‌ನಲ್ಲಿ ರೂಮನ್ನು ಮಾಡಿದ. ತಮ್ಮ ಏನು ಮಾಡಿದ ಎಂದರೆ ಅಧಿಕಾರಿಯನ್ನು ಒಂದು ಸಾರಿ ಹೋಗಿ ನೋಡಿಕೊಂಡು ಬಂದ. 400 ರೂಪಾಯಿ ಒಂದು ವರ್ಷಕ್ಕೆ ಫಿಕ್ಸ್ ಆಯಿತು. ಅಣ್ಣ ಹೋಗಲಿಲ್ಲ. ಅವರಿಗೆ ನಾಲ್ಕು ಸಾವಿರ ರೂ. ಫಿಕ್ಸ್ ಆಯಿತು. ಒಂದೇ ತರಹ ಎರಡು ಮನೆ. ಇವತ್ತು ತಮ್ಮ ಒಂದು ಸಾವಿರ ರೂ. ಕಟ್ಟುತ್ತಾನೆ. ಅಣ್ಣ ಹತ್ತು ಸಾವಿರ ರೂ. ಕಟ್ಟಬೇಕಾಗುತ್ತದೆ. ದಯವಿಟ್ಟು ಇದನ್ನು ನೀವು ಪ್ರಾಕ್ಟಿಕಲ್ ಆಗಿ ಯೋಚನೆ ಮಾಡಲಿಲ್ಲವೆಂದರೆ ಹೇಗೆ? ನಾವು ಇಲ್ಲಿ ಬಂದು ನಿಮ್ಮ ಹತ್ತಿರ ಚರ್ಚೆ ಮಾಡುತ್ತಿರುವ ಸಂದರ್ಭದಲ್ಲಿ ಮಂಗಳೂರಿನಲ್ಲಿ ಈ ಸ್ಥಿತಿ ನಿಮಗೆ ಗೊತ್ತಿತ್ತಾ? ಅವರು 2001 ರಲ್ಲಿ ಹೇಗಿತ್ತೋ ಹಾಗೆ ಕಟ್ಟಿದರು. ನೀವು ಅದನ್ನು ಸೂಪರ್‌ಸೀಡ್ ಮಾಡುವುದಕ್ಕೆ ತಯಾರಿದ್ದೀರಾ? ದಯವಿಟ್ಟು ಆ ಸಭೆಯನ್ನು ಉದಾಹರಣೆಯಾಗಿ ಇಟ್ಟುಕೊಳ್ಳಬೇಡಿ. ನಿಮ್ಮ ಪ್ರಾಮಾಣಿಕ ಪ್ರಯತ್ನ ಏನು ಇದೆ. ಅದಕ್ಕೆ ಇವತ್ತಿಗೂ ನಾವು ಸಹಕಾರವನ್ನು

ಕೊಡುವುದಕ್ಕೆ ತಯಾರಾಗಿದ್ದೇವೆ. ಆದರೆ ಅವತ್ತಿನ ಸಭೆಯನ್ನು ಮಾತ್ರ ಇವತ್ತಿಗೆ ಹೋಲಿಸಿಕೊಂಡು ಹಾಗೆ ಒಪ್ಪಿಕೊಂಡಿದ್ದರು. ಹೀಗೆ ಒಪ್ಪಿಕೊಂಡಿದ್ದರು ಎಂದರೆ ನಾವು ಚರ್ಚೆ ಮಾಡುವುದಕ್ಕೋಸ್ಕರ ನಿಮ್ಮ ಜೊತೆಗೆ ಕುಳಿತಿದ್ದು. ಇವತ್ತು ಏನಾದರೂ ಕೂಡ ಅವತ್ತಿನ ರೀತಿಯಲ್ಲೇ ಮುಂದುವರೆಸುತ್ತೇವೆ, ಎರಡೂವರೆ ಪಟ್ಟನ್ನು ನಾವು ಕಟ್ಟಲೇ ಬೇಕಾಗುತ್ತದೆಂದರೆ ಯಾವ ಕಾರಣಕ್ಕೂ ನಾವು ಎರಡೂವರೆ ಪಟ್ಟು ಕಟ್ಟುವುದಕ್ಕೆ ಇವತ್ತಂತೂ ನಿಮ್ಮನ್ನು ಬಿಡುವುದಕ್ಕೆ ನಾವು ತಯಾರಿಲ್ಲಾ. ತುಂಬಾ ಸ್ಪಷ್ಟವಾಗಿ ನಿಮಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ದಯವಿಟ್ಟು ಅದನ್ನು 2001ರಲ್ಲಿ ಹೇಗಿತ್ತೋ ಅದೇ ಪ್ರಕಾರದಲ್ಲಿ ಕಟ್ಟುವ ವ್ಯವಸ್ಥೆಯನ್ನು ಮಾಡಲೇಬೇಕು. ಇಲ್ಲದಿದ್ದರೆ ಆಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ನಗರ) : ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಜಂಟಿ ಸಲಹಾ ಸಮಿತಿಯಲ್ಲಿ ತೀರ್ಮಾನವನ್ನು ತೆಗೆದುಕೊಳ್ಳಿ. ಏಕೆಂದರೆ ಇದನ್ನು ತರಾತುರಿಯಲ್ಲಿ ಮಾಡುವುದಕ್ಕೆ ಹೋಗಬೇಡಿ. ಇದು ನಿಜವಾಗಲೂ ಬಹಳ ಹೊರೆ ಬೀಳುತ್ತದೆ. ಪಟ್ಟಣ ಪ್ರದೇಶಗಳವರಿಗೆ ತೊಂದರೆಯಾಗುತ್ತದೆ. ಇದರ ಬಗ್ಗೆ ಹಠ ಮಾಡುವುದಕ್ಕೆ ಹೋಗಬೇಡಿ. ನಿಮ್ಮನ್ನು ನಿಮ್ಮ ಅಧಿಕಾರಿಗಳು ದಾರಿ ತಪ್ಪಿಸುತ್ತಿದ್ದಾರೆ. ಖಂಡಿತವಾಗಿಯೂ ಅದು ಆಗಬಾರದು.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು) : ಸನ್ಮಾನ್ಯ ಅಧ್ಯಕ್ಷರೆ, ಆರ್ಡಿನೆನ್ಸ್ ಅನ್ನು ರೀಪ್ಲೇಸ್ ಮಾಡುವ ಬಿಲ್ಲನ್ನು ಮಾನ್ಯ ಸಚಿವರು ತರುತ್ತಿದ್ದಾರೆ ಮತ್ತು ಈ ಪ್ರಸ್ತಾವ ತರುವ ಮೂಲಕ ಎಲ್ಲಾ ಮಾನ್ಯ ಸದಸ್ಯರು ಸರ್ಕಾರದ ಗಮನ ಸೆಳೆದಿದ್ದಾರೆ. ಇದೇ ಅಧಿವೇಶನದಲ್ಲಿ ಆರ್ಡಿನೆನ್ಸ್ ಅನ್ನು ರೀಪ್ಲೇಸ್ ಮಾಡುವುದಕ್ಕೆ ಬಿಲ್ ಬರುತ್ತದೆ. ಆ ಸನ್ನಿವೇಶದಲ್ಲಿ ತಾವು ಏನು ಅಭಿಪ್ರಾಯ ನೀಡಿದ್ದೀರಿ, ಅದನ್ನು ಗಮನಿಸಿ ಸೂಕ್ತ ಉತ್ತರ ನೀಡುತ್ತೇವೆ.

ಶ್ರೀ ಕೆ.ಎಸ್. ಈಶ್ವರಪ್ಪ : ಈ ಬಿಲ್ ತಾವು ಹೇಳುತ್ತಿರುವುದು ಸರಿ ಇದೆ. ಆದರೆ, ಇವೊತ್ತಿನಿಂದ ಹಿಂದಿನ ಮೂರು ವರ್ಷಗಳಿಗೆ ಬಾಕಿ ಇರುವುದನ್ನು ಕಟ್ಟುವುದಕ್ಕೆ ಹೀಗೆಯೇ ಪೋಸ್ಟ್ ಫೋನ್ ಆದರೆ ನಗರಸಭೆ, ಪುರಸಭೆಗಳೆಲ್ಲವೂ ಹಾಳಾಗಿ ಹೋಗುತ್ತಿದೆ. ಎಲ್ಲಾ ರಸ್ತೆಗಳು ಗುಂಡಿ ಬಿದ್ದಿವೆ.

ಶ್ರೀ ಎಂ.ಪಿ. ಪ್ರಕಾಶ್ : ವಿರೋಧ ಪಕ್ಷದ ನಾಯಕರಾದಿಯಾಗಿ ತಾವೆಲ್ಲರೂ ನೀಡಿರುವ ಸಲಹೆ ಸೂಚನೆಗಳ ಹಿನ್ನೆಲೆಯಲ್ಲಿ ಆರ್ಡಿನೆನ್ಸ್ ಅನ್ನು ರೀಪ್ಲೇಸ್ ಮಾಡುವ ಸನ್ನಿವೇಶದಲ್ಲಿ....

ಶ್ರೀ ಕೆ.ಎಸ್. ಈಶ್ವರಪ್ಪ : ಹಳೆಯ ಬಾಕಿ ಬಗ್ಗೆ ತಾವು ದಯವಿಟ್ಟು ಯೋಚನೆ ಮಾಡಬೇಕು.

ಶ್ರೀ ಎಂ.ಪಿ. ಪ್ರಕಾಶ್ : ಈಗ ತಾವು ಸರ್ಕಾರದ ಗಮನ ಸೆಳೆದಿದ್ದೀರಿ. ಈ ಎಲ್ಲಾ ಅಭಿಪ್ರಾಯಗಳನ್ನೂ ನಾವು ಕ್ರೋಢೀಕರಿಸಿಕೊಂಡಿರುತ್ತೇವೆ. ಆ ಸಂದರ್ಭದಲ್ಲಿ ಸರ್ಕಾರದ ಉದ್ದೇಶ ಏನಿದೆ ಎಂಬುದನ್ನು ತಮ್ಮ ಮುಂದೆ ಪ್ರಕಟಿಸುತ್ತೇವೆ. ಇದನ್ನು ಕ್ಯಾಬಿನೆಟ್ ಮುಂದೆ ತರಬೇಕಾಗುತ್ತದೆ.

ಶ್ರೀ ಕೆ.ಎಸ್. ಈಶ್ವರಪ್ಪ : ಕ್ಯಾಬಿನೆಟ್ ಮುಂದೆ ತನ್ನಿ, ಆದರೆ, ಕಳೆದ ಮೂರು ವರ್ಷಗಳ ಬಾಕಿಯ ಬಗ್ಗೆ ತಾವು ಯೋಚನೆ ಮಾಡಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಮುಖ್ಯಮಂತ್ರಿಗಳಿಗೆ ಸಲಹೆ ಕೊಡುವಂತಾದ್ದು ಏನೆಂದರೆ, ಇವೊತ್ತು ತಾವು ರಿಪ್ಲೆ ಕೊಡಬೇಡಿ. ಇದನ್ನು ವಾಪಸ್ಸು ತೆಗೆದುಕೊಳ್ಳಿ. ಇದನ್ನು ತಾವು ಕ್ಯಾಬಿನೆಟ್ ಮುಂದೆ ತಂದು ಚರ್ಚೆ ಮಾಡಿ, ನಂತರ ತೀರ್ಮಾನ ಕೈಗೊಳ್ಳಿ. ಈಗಲೇ ಆಗಬೇಕೆಂದು ನಾವೇಕೆ ಸರ್ಕಾರಕ್ಕೆ ಹೇಳೋಣ? ಕ್ಯಾಬಿನೆಟ್ ಮುಂದೆ ತಂದು ತೀರ್ಮಾನ ಕೈಗೊಳ್ಳಿ.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಗಮನಹರಿಸಲಿಲ್ಲವೆಂದರೆ ಬಹಳ ಕಷ್ಟವಾಗುತ್ತದೆ. ದಯವಿಟ್ಟು ತಾವು ಉತ್ತರ ಕೊಡಬೇಕು.

ಶ್ರೀ ಧರ್ಮಸಿಂಗ್(ಮುಖ್ಯಮಂತ್ರಿಗಳು) : ಇದಕ್ಕೆ ಸಂಬಂಧಿಸಿದಂತೆ ಪೌರಾಡಳಿತ ಸಚಿವರು ಸ್ವಲ್ಪ ಹೋಂವರ್ಕ್ ಮಾಡಿದ್ದಾರೆ. ಇದಕ್ಕೆ ಸಂಬಂಧಿಸಿದ ಎಲ್ಲರನ್ನೂ ಕನ್‌ಸಲ್ಟ್ ಮಾಡುವ ಮೂಲಕ ಈಗಿನ ಪರಿಸ್ಥಿತಿಯಲ್ಲಿ ನಗರಸಭೆ, ಪುರಸಭೆ ಮತ್ತು ಕಾರ್ಪೋರೇಷನ್‌ಗಳ ಪರಿಸ್ಥಿತಿ ಸರಿಯಿಲ್ಲವೆಂದು ಇವುಗಳ ಆದಾಯ ಹೆಚ್ಚಿಸುವ ಕುರಿತು ಸಾಕಷ್ಟು ಆಸಕ್ತಿ ಹೊಂದಿ ನನ್ನೊಂದಿಗೆ ಚರ್ಚಿಸಿದ್ದಾರೆ. ಇವೊತ್ತು ಸಂಜೆ 5.30 ಗಂಟೆಗೆ ತಮ್ಮನ್ನೂ ಕರೆಸಿ ಚರ್ಚಿಸುವ ಕಾರ್ಯಕ್ರಮವಿತ್ತು ಆದರೆ, ಸಂಜೆ ಮಾನ್ಯ ರಾಜ್ಯಪಾಲರು ಚಹಾ ಕೂಟ ಏರ್ಪಡಿಸಿರುವ ನಿಮಿತ್ತ ಕಾರ್ಯಕ್ರಮವನ್ನು ಮುಂದಕ್ಕೆ ಹಾಕಿದ್ದೇವೆ. ಮಾನ್ಯ ಸಚಿವರು ಈ ಕುರಿತು ಎಲ್ಲಾ ತರಹ ವಿಚಾರ ಮಾಡಿ ಸಿದ್ಧತೆ ಮಾಡಿಕೊಂಡಿದ್ದಾರೆ. ನಾನು ಏನು ಹೇಳುತ್ತಿದ್ದೇನೆಂದರೆ, ಇದನ್ನು ವಿತ್‌ಡ್ರಾ ಮಾಡಬೇಕೆಂದು ವಿರೋಧ ಪಕ್ಷದ ನಾಯಕರು ಏನು ಪ್ರಸ್ತಾಪ ಮಾಡಿದ್ದಾರೆ. ಈ ಬಿಲ್ ತರುವುದಕ್ಕಿಂತ ಮುಂಚೆ ವಿರೋಧ ಪಕ್ಷದ ನಾಯಕರಾದಿಯಾಗಿ ತಮ್ಮೆಲ್ಲರನ್ನೂ ಒಳಗೊಂಡಂತೆ ಒಂದು ಸಭೆ ಕರೆದು, ತಾವು ಈ ವಿಷಯ ಪ್ರಸ್ತಾಪಿಸುವ ಮೂಲಕ ಏನೆಲ್ಲಾ ಸಲಹೆ-ಸೂಚನೆಗಳನ್ನು ನೀಡಿದ್ದೀರಿ, ಅದನ್ನು ಸಮರ್ಪಕವಾಗಿ ಅಳವಡಿಸಲಾಗುವುದು. ಬಿಲ್ ಮಂಡಿಸುವ ಪೂರ್ವದಲ್ಲಿ ತಮ್ಮೆಲ್ಲರ ಸಭೆ ಕರೆದು ಇದರ ಬಗ್ಗೆ ನಿರ್ಣಯ ಕೈಗೊಳ್ಳಲಾಗುವುದು.

ಶ್ರೀ ಬಿ.ಎಸ್. ಯಡಿಯೂರಪ್ಪ : ಎರಡೂವರೆ ಪರ್ಸೆಂಟ್ ಆಗಿದೆಯಲ್ಲಾ? ಅದರ ಬಗ್ಗೆ........

ಶ್ರೀ ಧರ್ಮಸಿಂಗ್ : ಅದರ ಬಗ್ಗೆಯೂ ಚರ್ಚ ಮಾಡೋಣ.

ಶ್ರೀ ಕೆ.ಎಸ್. ಈಶ್ವರಪ್ಪ : ಇವೊತ್ತು ಏನು ಉತ್ತರಿಸುತ್ತಿದ್ದೀರಿ. ದಯವಿಟ್ಟು ಅದನ್ನು ಪೆಂಡಿಂಗ್ ಇರಿಸಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ಅದನ್ನು ವಾಪಸ್ಸು ತೆಗೆದುಕೊಳ್ಳಿ. ಸಮಗ್ರವಾಗಿ ನಾಳೆ, ನಾಡಿದ್ದು ಉತ್ತರ ಕೊಡಿ. ನಮ್ಮದೇನೂ ಅಭ್ಯಂತರವಿಲ್ಲ. ಇಲ್ಲದಿದ್ದರೆ, ನಾಳೆ ಅದೇ ಕಮಿಟೆಡ್ ಆಗುತ್ತದೆ. ಎರಡೂವರೆ ಪಟ್ಟು ಎನ್ನುವಂತಾದ್ದನ್ನು ತಾವು ವಿತ್‌ಡ್ರಾ ಮಾಡಿಕೊಳ್ಳಿರಿ. ಅನಂತರ, ಅದರ ಬಗ್ಗೆ ಏನಾದರೂ ನಿರ್ಧರಿಸೋಣ. ಈಗ ಸಧ್ಯಕ್ಕೆ ತಡೆ ಮಾಡಿ.

ಶ್ರೀ ಎಂ.ಪಿ. ಪ್ರಕಾಶ್ : ಈಗ ಅರಿಯರ್ಸ್‌ಗೆ ಸಂಬಂಧಿಸಿದಂತೆ ಇರುವುದನ್ನು ಬೇಕಾದರೆ ಮಾತನಾಡಿಕೊಂಡು ತೀರ್ಮಾನಿಸಬಹುದು.

ಶ್ರೀ ಕೆ.ಎಸ್. ಈಶ್ವರಪ್ಪ : ದಯವಿಟ್ಟು ನಾಳೆ ಉತ್ತರ ಕೊಡಿಸಬೇಕು.

ಶ್ರೀ ಎಸ್.ಆರ್. ಮೋರೆ : ಅದನ್ನು ನಾನು ಮಾಡಿಲ್ಲ, ಸರ್ಕಾರವೂ ಮಾಡಿಲ್ಲ. ನಿಮ್ಮ ಸಲಹೆ ಮೇರೆಗೆ ಅದನ್ನು ಮಾಡಿದ್ದು. ನಾಳೆ ಅದನ್ನು ಚರ್ಚೆ ಮಾಡಬೇಕು. ಇದರಲ್ಲಿ Financial implications ಇರುವುದರಿಂದ ಈಗ ನಮಗೇನೂ ಹೇಳಲು ಬರುವುದಿಲ್ಲ. ನಾಳೆ ವಿರೋಧ ಪಕ್ಷದ ನಾಯಕರಾದ ಮಾನ್ಯ ಯಡಿಯೂರಪ್ಪನವರೂ ಸೇರಿದಂತೆ ಎಲ್ಲಾ ಪಕ್ಷಗಳವರೂ ಕುಳಿತುಕೊಂಡು ಚರ್ಚಿಸೋಣ.

ಶ್ರೀ ಬಿ.ಎಸ್. ಯಡಿಯೂರಪ್ಪ : ಈಗ ಉತ್ತರವನ್ನು ವಾಪಸ್ಸು ತೆಗೆದುಕೊಳ್ಳಿರೆಂದು ಹೇಳುತ್ತಿದ್ದೇವೆ. ವಾಪಸ್ಸು ತೆಗೆದುಕೊಳ್ಳಲು ಏನಾಗಿದೆ? ಮುಖ್ಯಮಂತ್ರಿಗಳು ಇದರ ಬಗ್ಗೆ ಗಮನಹರಿಸಬೇಕು.

ಶ್ರೀ ವಾಟಾಳ್ ನಾಗರಾಜ್ : ಇದು ಖಂಡಿತಾ ಸರಿಯಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಮುಖ್ಯಮಂತ್ರಿಗಳು ಈ ಕಡೆ ಗಮನಕೊಡದಿದ್ದರೆ ಖಂಡಿತವಾಗಿ ಇಡೀ ರಾಜ್ಯಕ್ಕೆ ತೊಂದರೆಯಾಗುತ್ತದೆ. ದಯವಿಟ್ಟು ಅದರ ಬಗ್ಗೆ ನಾಳೆ ಉತ್ತರ ಕೊಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : 2001ರಲ್ಲಿದ್ದಂತೆ ತೆರಿಗೆ ವಸೂಲಿ ಮಾಡುತ್ತೇವೆಂದು ಹೇಳಲಿ. ಎಲ್ಲರೂ ಕಟ್ಟಲು ತಯಾರಿದ್ದಾರೆ. ಇಡೀ ರಾಜ್ಯದಲ್ಲಿ ಇದರ ಬಗ್ಗೆ ದೊಡ್ಡ ಹೋರಾಟ ನಡೆದಿದೆ.

ಶ್ರೀ ಅರಗ ಜ್ಞಾನೇಂದ್ರ : ಇದರ ಬಗ್ಗೆ ಹೊರಗಡೆ ಇಷ್ಟು ಹೋರಾಟ ನಡೆಯುತ್ತಿದೆ. ಆದ್ದರಿಂದ ಒಂದು ನಿರ್ಧಾರಕ್ಕೆ ಬರಬೇಕಾಗುತ್ತದೆ.

ಶ್ರೀ ಕೆ.ಎಸ್. ಈಶ್ವರಪ್ಪ : ಇವೊತ್ತು ಉತ್ತರ ಕೊಡುವುದನ್ನು ನಾಳೆ ಕೊಡಿ. ದಯವಿಟ್ಟು 2001ರಲ್ಲಿ ಏನಿತ್ತು. ಅದರ ಪ್ರಕಾರ ತೆರಿಗೆ ತೆಗೆದುಕೊಳ್ಳಿ. ಇಲ್ಲದಿದ್ದರೆ......

ಅಧ್ಯಕ್ಷರು : ಈಗ ಸರ್ಕಾರ ಏನು ಹೇಳುತ್ತದೆಂದು ಕೇಳೋಣ.

ಶ್ರೀ ಧರ್ಮಸಿಂಗ್(ಮುಖ್ಯಮಂತ್ರಿಗಳು) : ಇದರ ಬಗ್ಗೆ ಈಗಾಗಲೇ ನಾವು ಆರ್ಡಿನೆನ್ಸ್ ಹೊರಡಿಸಿರುವುದರಿಂದ ಸಾಕಷ್ಟು ಕಲೆಕ್ಷನ್ ಕೂಡ ಆಗಿದೆ. ಕಲೆಕ್ಷನ್ ಆಗುವಾಗ ಈ ಮಧ್ಯೆ ತೀರ್ಮಾನ ಕೈಗೊಂಡರೆ ವ್ಯಾವಹಾರಿಕವಾಗಿ ಸಾಕಷ್ಟು ತೊಂದರೆಯಾಗುತ್ತದಲ್ಲದೆ, ಸರ್ಕಾರ ನಡೆಸತಕ್ಕ ಕಾಲದಲ್ಲಿ ತಾಂತ್ರಿಕ ತೊಂದರೆ ಎದುರಾಗುತ್ತದೆ. ಅದಕ್ಕೋಸ್ಕರ, ಬಿಲ್ ಮಂಡಿಸುವ ಪೂರ್ವದಲ್ಲಿ ತಮ್ಮೆಲ್ಲರ ಸಭೆ ಕರೆದು ತಾವು ನೀಡುವ ಸಲಹೆ–ಸೂಚನೆಗಳನ್ನು ಪಡೆದು ತಮ್ಮೆಲ್ಲರ ಮನಸ್ಸಿಗೊಪ್ಪುವ ರೀತಿಯಲ್ಲಿ ಬಿಲ್ಲನ್ನು ಸಮಗ್ರವಾಗಿ ಮಂಡಿಸೋಣ. ಎರಡೂವರೆ ಪಟ್ಟು ವಿಧಿಸಿರುವ ತೆರಿಗೆ ಕುರಿತಂತೆ ಎಲ್ಲರೂ ಚರ್ಚಿಸೋಣ.

ಶ್ರೀ ಕೆ.ಎಸ್. ಈಶ್ವರಪ್ಪ : ಈಗ ಏನು ಬಿಲ್ ಪಾಸ್ ಮಾಡಲಾಗುತ್ತದೆ. ಅದರಂತೆ ಇಲ್ಲಿಂದ ಮುಂದಕ್ಕೆ ಅನ್ವಯವಾಗುತ್ತದೆ. ಆದರೆ, ಹಿಂದಿನ ಮೂರು ವರ್ಷಗಳಿಗೆ ಸಂಬಂಧಿಸಿದಂತೆ ಮಂಗಳೂರಿನಲ್ಲಿ ಈಗಾಗಲೇ ಕಲೆಕ್ಷನ್ ಮಾಡಲಾಗಿದೆ ಅದರಂತೆ....

ಶ್ರೀ ಧರ್ಮಸಿಂಗ್ : ಈಗಾಗಲೇ ಆರ್ಡಿನೆನ್ಸ್ ಇಶ್ಯೂ ಆಗಿದ್ದು, ಅಸ್ತಿತ್ವದಲ್ಲಿದೆ. ಅದರ ಪ್ರಕಾರ ತೆರಿಗೆಯನ್ನು ಕಲೆಕ್ಟ್ ಮಾಡಲಾಗುತ್ತಿದೆ. ಇದರಲ್ಲಿ ವ್ಯತ್ಯಾಸವಾಗುವ ತೆರಿಗೆ ಬಗ್ಗೆ ತಮ್ಮೊಂದಿಗೆ ಸಮಗ್ರವಾಗಿ ಮಾತನಾಡಿ ಕ್ರಮ ಕೈಗೊಳ್ಳೋಣ.

ಶ್ರೀ ಕೆ.ಎಸ್.ಈಶ್ವರಪ್ಪ : ಹಳೆಯ ಬಾಕಿಯನ್ನು ಇದರೊಂದಿಗೆ ಜೋಡಿಸಿದರೆ ಹೇಗೆ?

ಶ್ರೀ ಧರ್ಮಸಿಂಗ್ : ನೋಡೋಣ. ಇದರ ಬಗ್ಗೆ ಸಮಗ್ರವಾಗಿ ವಿಚಾರ ಮಾಡಿ ಅದೇ ತರಹ ಬಿಲ್ಲನ್ನು ಇಂಟ್ರಡ್ಯೂಸ್ ಮಾಡೋಣ.

ಶ್ರೀ ಕೆ.ಎಸ್.ಈಶ್ವರಪ್ಪ : ಈ ಉತ್ತರವನ್ನು ದಯವಿಟ್ಟು ವಾಪಸ್ಸು ತೆಗೆದುಕೊಳ್ಳಲೇಬೇಕು. ಇಲ್ಲದಿದ್ದರೆ, ಖಂಡಿತಾ ಸಾಧ್ಯವಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇವೊತ್ತೇ ನಾವು ಉತ್ತರವನ್ನು ಪ್ರೆಸ್ ಮಾಡುತ್ತಿಲ್ಲ. ವಾಪಸ್ಸು ತೆಗೆದುಕೊಂಡು ನಾಳೆ, ನಾಡಿದ್ದು ಸಮಗ್ರವಾಗಿ ಉತ್ತರ ಕೊಡಿ. ಅದಕ್ಕೇನು ತೊಂದರೆಯಿದೆ?

ಶ್ರೀ ವಾಟಾಳ್ ನಾಗರಾಜ್ : ಇದನ್ನು ಪ್ರತಿಷ್ಠೆಯ ಪ್ರಶ್ನೆಯನ್ನಾಗಿ ಮಾಡಿಕೊಳ್ಳುವುದು ಬೇಡ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಇದರ ಬಗ್ಗೆ ಇಡೀ ರಾಜ್ಯದಲ್ಲಿ ಬಹಳ ದೊಡ್ಡ ಹೋರಾಟವಾಗಿದೆ. ಎರಡೂವರೆ ಪಟ್ಟು ತೆರಿಗೆಯನ್ನು ಹಿಂದಕ್ಕೆ ಪಡೆದುಕೊಳ್ಳಬೇಕು.

ಶ್ರೀ ಅರಗ ಜ್ಞಾನೇಂದ್ರ : ಪಟ್ಟಣ ಪ್ರದೇಶಗಳಲ್ಲಿ ಅಭಿವೃದ್ಧಿ ಕೆಲಸ-ಕಾರ್ಯಗಳು ನಿಂತುಹೋಗಿದೆ. ಈ ಕುರಿತಂತೆ ಸುಮಾರು ಎರಡು ವರ್ಷಗಳಿಂದಲೂ ನಡೆಯುತ್ತಿರುವ ಹೋರಾಟದ ಬಗ್ಗೆ ಸರ್ಕಾರ ಸರಿಯಾದ ನಿಲುವು ತೆಗೆದುಕೊಳ್ಳದಿದ್ದರೆ ಬಹಳ ಕಷ್ಟವಾಗುತ್ತದೆ.

ಶ್ರೀ ಸಿದ್ದು ಸಾವದಿ(ಜಮಖಂಡಿ) : ಮಾನ್ಯ ಅಧ್ಯಕ್ಷರೆ, ನನ್ನ ಮತಕ್ಷೇತ್ರದಲ್ಲಿ ಮೂರು ಪಟ್ಟಣಗಳಿದ್ದು, ಒಂದು ಪುರಸಭೆ, ಪಟ್ಟಣ ಪಂಚಾಯಿತಿ ಮತ್ತು ನಗರಸಭೆಗಳಿವೆ. ಆದರೆ, ಏನಾಗಿದೆಯೆಂದರೆ, 2001ರಲ್ಲಿ ಪುರಸಭೆ ಟ್ಯಾಕ್ಸ್ ಅನ್ನು ರಿವೈಸ್ ಮಾಡಿದ ನಂತರ ಒಂದು ನೂರು ರೂಪಾಯಿಗಳಿದ್ದುದ್ದು ಎಂಟು ನೂರು ರೂಪಾಯಿಗಳಾಗಿದೆ. ಅನಂತರ, ರಾಜ್ಯದ ಕೆಲವು ಪಟ್ಟಣಗಳಲ್ಲಿ 2001ರಿಂದ ರಿವೈಸ್ ಮಾಡದಿರತಕ್ಕಂಥ ಪಟ್ಟಣಗಳೂ ಇವೆ. ಅವೆಲ್ಲವನ್ನೂ ಕ್ರೋಢೀಕರಿಸಿ ಎರಡೂವರೆ ಪಟ್ಟು ಹೆಚ್ಚು ಮಾಡಿದಾಗ ನಗರ ವಿಭಾಗಕ್ಕೆ ದೊಡ್ಡ ಅನ್ಯಾಯವಾಗಿದೆ. ಅದನ್ನು ತಡೆಹಿಡಿಯಬೇಕು. ಯಾವ ಗೈಡ್ ಲೈನ್ಸ್ ಪ್ರಕಾರ ನೀವು ಹೆಚ್ಚು ಮಾಡಿದ್ದೀರಿ ಎಂಬುದನ್ನು ಸದನಕ್ಕೆ ತಿಳಿಸಬೇಕು. 2001ಕ್ಕೂ ಮೊದಲೇ ಯಾವುದೇ ರೀತಿ ರಿವೈಸ್ ಆಗಲಾರದಂಥ ಪಟ್ಟಣಗಳಿಗೂ ಒಂದೇ ರೀತಿಯ ತೆರಿಗೆ ವಿಧಿಸಿದ್ದೀರಿ ಅಥವಾ ಎಂಟು ಪಟ್ಟು ತೆರಿಗೆಯನ್ನು ಹೆಚ್ಚು ಮಾಡಿರುವಂಥ ಪಟ್ಟಣಗಳನ್ನೂ ಅದರಲ್ಲಿ ಸೇರಿಸಿರುವುದರಿಂದ ನಗರ ಪ್ರದೇಶಗಳಲ್ಲಿರುವವರು ಐವತ್ತು ಸಾವಿರ ರೂಪಾಯಿಗಳ ತೆರಿಗೆಯನ್ನು ಕೊಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಆದರೆ, ಮೂರು ಪಟ್ಟಣಗಳಲ್ಲಿ ಯಾವುದೇ ರೀತಿ ಸುಧಾರಣೆಯಾಗಿಲ್ಲ.

ಶ್ರೀ ಎಸ್.ಆರ್. ಮೋರೆ(ಪೌರಾಡಳಿತ ಹಾಗೂ ಕೆಯುಡಿ. ಎಫ್.ಸಿ. ಸಚಿವರು) : ಈಗಾಗಲೇ ಗಮನ ಸೆಳೆಯುವ ಸೂಚನೆ ಮೂಲಕ ಸಾಕಷ್ಟು ಚರ್ಚೆ ಮಾಡಿದ್ದೀರಿ. ಇದರ ಬಗ್ಗೆ ಈಗಾಗಲೇ ಆರ್ಡಿನೆನ್ಸ್ ಇದೆ. ಆದುದರಿಂದ, ಈಗ ನಾನು ಉತ್ತರ ಕೊಡುವುದಕ್ಕಿಂತ ಮುಂಚೆ ಎರಡು ದಿವಸ ಸಮಯ ಕೊಡಿ. ಏಕೆಂದರೆ, ಸನ್ಮಾನ್ಯ ಮುಖ್ಯಮಂತ್ರಿಗಳು ಮತ್ತು ಉಪ ಮುಖ್ಯಮಂತ್ರಿಗಳೊಂದಿಗೆ ಕುಳಿತು ಚರ್ಚಿಸಬೇಕಾಗಿದೆ. ಇದರಲ್ಲಿ Financial Implications ಇದೆ. ಈಗಾಗಲೇ ಸುಮಾರು 1800 ಕೋಟಿ ರೂಪಾಯಿಗಳ ಏಷಿಯನ್ ಡೆವಲಪ್‌ಮೆಂಟ್ ಪ್ರಾಜೆಕ್ಟ್‌ಗಳೆಲ್ಲವೂ ರಾಜ್ಯದಲ್ಲಿ ಬರುತ್ತಿವೆ. ಈ ಸಂಬಂಧ ಸಾಲ ಮರುಪಾವತಿ ಮಾಡಬೇಕಾಗಿದೆ. ಸಾಲ ಮರುಪಾವತಿಯಾಗದಿದ್ದರೆ ನಾಳೆ ಪ್ರಾಜೆಕ್ಟ್‌ಗಳೆಲ್ಲವೂ ನಿಂತುಹೋಗುತ್ತದೆ. ಆದುದರಿಂದ ಇದರ ಬಗ್ಗೆ ಕೂಲಂಕಷವಾಗಿ ವಿಚಾರ ಮಾಡಬೇಕು. ಮಾನ್ಯ ಹಿರಿಯ ಸದಸ್ಯರಾದ ಈಶ್ವರಪ್ಪನವರು ಮಾತನಾಡುತ್ತಾ, ಒಬ್ಬರಿಗೆ ನಾಲ್ಕು ಸಾವಿರ, ಮತ್ತೊಬ್ಬರಿಗೆ ಹತ್ತು ಸಾವಿರ ತೆರಿಗೆ ವಿಧಿಸಿದ್ದಾರೆಂದು ಉದಾಹರಣೆ ಕೊಟ್ಟರಲ್ಲಾ. ಅಲ್ಲಿ ಎಆರ್‌ಇ ಪದ್ಧತಿ ಇತ್ತು. ಎಸ್‌ಎಎಸ್ ಇದ್ದಿದ್ದರೆ ಈ ರೀತಿ ಆಗುವುದಿಲ್ಲ, ಅಲ್ಲಿದ್ದ ಅಧಿಕಾರಿಗೆ ಪವರ್ ಇತ್ತು, ಅಲ್ಲಿ ಶೋಷಣೆ ನಡೆಯುತ್ತಿತ್ತು.

ಶ್ರೀ ಬಿ.ಎಸ್. ಯಡಿಯೂರಪ್ಪ : ನೀವು ಏಷಿಯನ್ ಡೆವಲಪ್‌ಮೆಂಟ್ ಬ್ಯಾಂಕ್‌ನಿಂದ ಸಾಲ ತರುವುದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ. ನಾವು ಹಳೆಯ ಮೂರು ವರ್ಷಗಳಿಗೆ ಸಂಬಂಧಿಸಿದಂತೆ ಮಾತನಾಡುತ್ತಿದ್ದೇವೆ. ಈಗ ಈ ಮಸೂದೆಯನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ನಾವು ವಿನಂತಿಸಿಕೊಳ್ಳುತ್ತಿದ್ದೇವೆ.

ಶ್ರೀ ಎಸ್.ಆರ್. ಮೋರೆ : ಹಾಗಾದರೆ, ನೀವೂ ಗಮನ ಸೆಳೆಯುವ ಸೂಚನೆಯನ್ನು ವಾಪಸ್ಸು ತೆಗೆದುಕೊಳ್ಳಿ. ನಾನೂ ವಾಪಸ್ಸು ತೆಗೆದುಕೊಳ್ಳುತ್ತೇನೆ. ನಾಳೆ ಕುಳಿತುಕೊಂಡು ಚರ್ಚೆ ಮಾಡೋಣ.

(ವಿರೋಧ ಪಕ್ಷದ ಮಾನ್ಯ ಸದಸ್ಯರಾದ ಶ್ರೀ ಜಗದೀಶ್ ಶೆಟ್ಟರ್‌ರವರು ಮಾತನಾಡಲು ಎದ್ದು ನಿಂತರು)

ಶ್ರೀ ಧರ್ಮಸಿಂಗ್ : ಶೆಟ್ಟರ್‌ರವರೆ, ಹುಬ್ಬಳಿ-ಧಾರವಾಡದಲ್ಲಿ ಕಳೆದ ವರ್ಷ 16 ಕೋಟಿ ರೂಪಾಯಿಗಳು ಸಂಗ್ರಹವಾಗಿದ್ದರೆ, ಈ ವರ್ಷ 20 ಕೋಟಿ ರೂಪಾಯಿಗಳನ್ನು ಸಂಗ್ರಹಿಸಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್ : ಮೊನ್ನೆ ಅಲ್ಲಿನ ಕಮೀಷನರ್ ಅವರೊಂದಿಗೆ ಮಾತನಾಡಿದ್ದೇನೆ.

ಶ್ರೀ ಧರ್ಮಸಿಂಗ್ : ಇತ್ತೀಚಿನ ಮಾಹಿತಿ ಏನೆಂದರೆ, 20 ಕೋಟಿ ರೂಪಾಯಿಗಳು ಸಂಗ್ರಹವಾಗಿದೆ. ತಾವು ಗಮನ ಸೆಳೆಯುವ ಸೂಚನೆ ಮೂಲಕ ಕೇಳಿದ್ದೀರಿ. ಅದಕ್ಕೆ ಮಾನ್ಯ ಸಚಿವರು ಉತ್ತರ ಕೊಡುತ್ತಿದ್ದರು. ಅವರು ಉತ್ತರ ಕೊಡಬಾರದೆಂದರೆ, ತಾವು ನೀಡಿರುವ ಗಮನ ಸೆಳೆಯುವ ಸೂಚನೆಯನ್ನು ವಾಪಸ್ಸು ತೆಗೆದುಕೊಂಡರೆ ಅವರು ಉತ್ತರ ಕೊಡುವುದಿಲ್ಲ. ನಿಮ್ಮೊಂದಿಗೆ ಮಾತನಾಡುತ್ತೇವೆ. ಬಿಲ್ ಇಂಟ್ರಡ್ಯೂಸ್ ಮಾಡುವ ಮುನ್ನ ಮತ್ತೊಮ್ಮೆ ಇದರ ಬಗ್ಗೆ ಸಂಪುಟದಲ್ಲಿ ಕೂಡ 6 ಸಮಗ್ರವಾಗಿ ಚರ್ಚೆ ಮಾಡುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಹಿಂದಿನ ಮೂರು ವರ್ಷಗಳಿಗೆ ಸಂಬಂಧಿಸಿದಂತೆ ಸೇರಿಸಿಕೊಂಡು ಮಾಡುತ್ತೀರಾ?

ಶ್ರೀ ಧರ್ಮಸಿಂಗ್ : ಅದನ್ನು ಮಾಡೋಣ. ಚರ್ಚೆಯಲ್ಲಿ ಏನು ಬರುತ್ತದೋ ನೋಡಿ ನಿಮ್ಮ ಜೊತೆಯಲ್ಲಿ ಸಹಮತ ಆಗುತ್ತೇವೆ. ನಾವೇನು ಬಿಟ್ಟು ಹಾಕುತ್ತೇವೆಯೇ?

ಶ್ರೀ ಬಿ.ಎಸ್. ಯಡಿಯೂರಪ್ಪ : ಹಾಗಾದರೆ ಸರಿ.

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಲಾ ಮಿನಿಸ್ಟರ್ ಒಂದು ವಿಚಾರ ಹೇಳುತ್ತಿದ್ದಾರೆ. ಒಂದು ಮಾತು ಹೇಳಿ ಬಿಡಿ ಸಾರ್. ಏಕೆಂದರೆ ಕೊಡಗಿನವರು ಸಪರೇಟ್ ಮಾಡಬೇಕಾಗುತ್ತದೆ. ಅದಕ್ಕೋಸ್ಕರ ಹೇಳುತ್ತಿದ್ದೇನೆ.

ಶ್ರೀ ಹೆಚ್.ಕೆ. ಪಾಟೀಲ್(ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರುನ: ನಾವು ಆಗಲೇ ಬಿಲ್ ಬಗ್ಗೆ ಚರ್ಚೆ ಮಾಡುವಾಗ ಹೇಳಿದ್ದೇವೆ.

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) : ನಾಳೆ ಬೆಳಿಗ್ಗೆ 10.30ಕ್ಕೆ ಬಿಸಿನೆಸ್ ಅಡ್ವೈಸರಿ ಕಮಿಟಿ ಇದೆ. ಚರ್ಚೆ ಮಾಡೋಣ. ಅದರೆ ಇನ್ನೂ ಡ್ರಿಂಕಿಂಗ್ ವಾಟರ್ ಸಪ್ಲೈ ಬಗ್ಗೆ ರಿಪ್ಲೈ ಆಗಬೇಕು. ರಾಜ್ಯಪಾಲರ ಭಾಷಣ ಮೇಲೆ ಇನ್ನೂ ನಮ್ಮ ವಿರೋಧ ಪಕ್ಷದ ನಾಯಕರು ಬೇರೆ ಇತರೆ ನಾಯಕರು ಪ್ರಸ್ತಾಪವನ್ನು ಮಾಡಿಲ್ಲ. ಇದು ಹೀಗಾದ್ರೆ ಹೇಗೆ? ಬಿಸಿನೆಸ್ ಇದೆ ತರಹ ನಡೆದರೆ ಯಾವಾಗ ಹೋಗಬೇಕು? ಯಾವಾಗ ಮುಗಿಯಬೇಕು? ನಾಳೆ ನೀವು ಪ್ರಶ್ನೋತ್ತರ ವೇಳೆ ಇಟ್ಟರೆ ಎರಡು ಎರಡೂವರೆ ತಾಸು ಆಗುತ್ತದೆ. ಬಿಸಿನೆಸ್ ಅಡ್ವಯಸರಿ ಕಮಿಟಿಯಲ್ಲಿ ಡಿಸ್ಕಸ್ ಮಾಡೋಣ. ಆದರೆ ಸದನದಲ್ಲಿ ಈ ತರಹ ವಿಚಾರವನ್ನು ನಾವು ನೋಡಿ ಬಿಟ್ಟ ಮೇಲೆ ನಮಗೆ ಸ್ವಲ್ಪ ಹೆದರಿಕೆ ಆಗುತ್ತದೆ. ಏಕೆಂದರೆ ಬೇರೆ ವಿಷಯಗಳ ಬಗ್ಗೆ ಕೂಡ ಚರ್ಚೆ ಆಗಬೇಕಾಗಿತ್ತು. ಅದರ ಬಗ್ಗೆ ಅಧ್ಯಕ್ಷರಿಗೇ ಬಿಟ್ಟಿದ್ದು.

ಅಧ್ಯಕ್ಷರು : ನಾಳೆ ಬೆಳಿಗ್ಗೆ 10.30ಕ್ಕೆ ಬಿಸಿನೆಸ್ ಅಡ್ವೈಸರಿ ಕಮಿಟಿ ಮೀಟಿಂಗ್ ಕರೆದಿದ್ದೇವೆ. ಅದರಲ್ಲಿ ಇವೆಲ್ಲಾ ವಿಚಾರವನ್ನೂ ಪ್ರಸ್ತಾಪ ಮಾಡೋಣ. ಮಾನ್ಯ ರೋಷನ್ ಬೇಗ್ ಅವರು ಒಂದು ಗಮನ ಸೆಳೆಯುವ ಸೂಚನೆ ಕೊಟ್ಟಿದ್ದಾರೆ.

ಶ್ರೀ ಎಂ.ಪಿ. ಪ್ರಕಾಶ್(ಕಂದಾಯ ಸಚಿವರು) : ಮೇಲ್ಮನೆಯಲ್ಲಿ ಈಗಾಗಲೇ ರಾಜ್ಯಪಾಲರ ಭಾಷಣದ ಬಗ್ಗೆ ಚರ್ಚೆ ನಡೆಯುತ್ತಿದೆ. ನಮ್ಮಲ್ಲಿ ಅದು ಆಗಬೇಕಾಗುತ್ತದೆ. ಅದರ ಕಳಕಳಿಯನ್ನೇ ಮಾನ್ಯ ಮುಖ್ಯಮಂತ್ರಿಗಳು ತೋರಿಸಿರುವುದು.

ಅಧ್ಯಕ್ಷರು : ನಾಳೆಯಿಂದ ಶೂನ್ಯ ವೇಳೆ, ಗಮನ ಸೆಳೆಯುವ ಸೂಚನೆ ಅವೆಲ್ಲಾ ಮನ್ನಾ ಮಾಡಿ ನೇರವಾಗಿ ಬಿಸಿನೆಸ್ ಏನು ಇದೆ, ಈ ರಾಜ್ಯಪಾಲರ ವಂದನಾ ನಿರ್ಣಯ ಮತ್ತು ಬಿಲ್‌ಗಳು ಏನು ಇದ್ದಾವೆ, ಅದರ ಬಗ್ಗೆ ಚರ್ಚೆ ಮಾಡೋಣ.

ಶ್ರೀ ಬಿ.ಎಸ್. ಯಡಿಯೂರಪ್ಪ(ವಿರೋಧ ಪಕ್ಷದ ನಾಯಕರು) : ಸಾರ್ ನಾವು ಒಂದು ಗಂಟೆ ಹೆಚ್ಚು ಹೊತ್ತು ಕುಳಿತುಕೊಳ್ಳಲು ಸಿದ್ಧ ಇದ್ದೇವೆ. ನಿಲುವಳಿ ಸೂಚನೆ ಚರ್ಚೆಯಾದ ಮೇಲೆ ಕುಡಿಯುವ ನೀರು ಮತ್ತು ವಿದ್ಯುತ್‌ಗೆ ಉತ್ತರ ಕೊಡಿ. ನಾವು ಕೋ ಅಪರೇಷನ್ ಮಾಡುತ್ತೇವೆ. ನಾವು ಏಳು ಗಂಟೆಯವರೆಗೆ ಬೇಕಾದರೂ ಕುಳಿತುಕೊಳ್ಳುತ್ತೇವೆ. ಏಕೆಂದರೆ ಇವತ್ತು ಬಹಳ ಪ್ರಮುಖವಾದಂತಹ ವಿಷಯಗಳು ಇವೆ. ಗ್ರಾಮ ಪಂಚಾಯತಿಯ ಚುನಾವಣೆಗಳಿಗೂ ಹೋಗಬೇಕು. ಈ ಒಂದು ಪರಿಸ್ಥಿತಿಯ ಮಧ್ಯೆ ನಾವಿದ್ದೇವೆ. ಆದ್ದರಿಂದ ರಾಜ್ಯಪಾಲರ ಭಾಷಣದ ಬಗ್ಗೆ ಮಾನ್ಯ ಎಂ.ಪಿ. ಪ್ರಕಾಶ್, ಹಿರಿಯ ಸಚಿವರು ಹೇಳಿದಂತೆ ವಿಧಾನ ಪರಿಷತ್ತಿನಲ್ಲಿ ಚರ್ಚೆ ಮುಗಿಯುವ ಹಂತಕ್ಕೆ ಬರುತ್ತಿದೆ. ನಮ್ಮ ಕಡೆಯಿಂದ ಆಗಿಲ್ಲ. ಆ ದೃಷ್ಟಿಯಿಂದ ಕುಡಿಯುವ ನೀರು ಮತ್ತು ವಿದ್ಯುತ್ ವಿಚಾರದಲ್ಲಿ ಗಂಭೀರವಾದ ಚರ್ಚೆ ಆಗಿದೆ. ಇಲ್ಲ ಎಂದು ನಾನು ಹೇಳುವುದಿಲ್ಲ. ಇದೂ ಅಷ್ಟೇ ಪ್ರಮುಖವಾದಂತಹದು. ಇವತ್ತು ರಿಪ್ಲೈ ಮಾಡಿಸಿ ಸಾರ್.

ಅಧ್ಯಕ್ಷರು : ಇವತ್ತು 6.00 ಗಂಟೆಗೆ ಮಾನ್ಯ ರಾಜ್ಯಪಾಲರು ಟೀ ಪಾರ್ಟಿಗೆ ಕರೆದಿದ್ದಾರೆ. ಇವತ್ತು ಆಗುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಒಂದು ಕೆಲಸ ಮಾಡೋಣ. ನಾಳೆ ಬೆಳಿಗ್ಗೆ ರಿಪ್ಲೈ ಮಾಡಿದ ನಂತರ ಉಳಿದ ವಿಚಾರಕ್ಕೆ ಹೋಗೋಣ. ಹಾಗೆ ಮಾಡಿ. ಬೆಳಿಗ್ಗೆ ಕರೆಯಿರಿ. ರಿಪ್ಲೈ ಮಾಡಲಿ. ರಿಪ್ಲೈ ನಂತರ ಕೊಶ್ಚನ್ ಅವರ್ ಮತ್ತು ಇತರ ವಿಷಯಗಳನ್ನು ತೆಗೆದುಕೊಂಡು ಹೋಗೋಣ ಎಂದು ಹೇಳಿದೆ.

ಶ್ರೀ ಜಿ.ವಿ. ಶ್ರೀರಾಮ ರೆಡ್ಡಿ : ನನ್ನದೊಂದು ಗಮನ ಸೆಳೆಯುವ ಸೂಚನೆ ಇದೆ. ಅದಕ್ಕೆ ಉತ್ತರ ಕೊಟ್ಟರೆ ಒಳ್ಳೆಯದು.

ಶ್ರೀ ಬಿ.ಎಸ್. ಯಡಿಯೂರಪ್ಪ : ಇವತ್ತಲ್ಲ ನಾನು ಹೇಳಿದ್ದು ನಾಳೆಗೆ ಈ ಒಂದು ನಿಲವಳಿ ಸೂಚನೆಗೆ ಉತ್ತರ ಕೊಟ್ಟು ಬಿಡಿ. ನಂತರ ಕೊಶ್ಚನ್ ಅವರ್‌ನಿಂದ ಪ್ರಾರಂಭ ಮಾಡೋಣ ಎಂದು ಹೇಳಿದೆ. ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಮಾಡಲು ಅನುಕೂಲ ಆಗುತ್ತದೆ. ನಾನು ತಮಗೆ ಸಲಹೆ ಕೊಡುತ್ತೇನೆ. ಅದು ತಮಗೆ ಬಿಟ್ಟ ವಿಚಾರ. ಹಿಂದೆಲ್ಲಾ ಅದೇ ರೀತಿ ಮಾಡಿದ್ದೇವೆ. ಹಿಂದೆಲ್ಲಾ ಇದೇ ಪದ್ಧತಿ ಮಾಡಿದ್ದೇವೆ.

ಅಧ್ಯಕ್ಷರು : ಒಂದು ವಿಚಾರದಲ್ಲಿ ಸಹಕಾರ ಮಾಡಬೇಕು. ಶೂನ್ಯ ವೇಳೆ, ಗಮನ ಸೆಳೆಯುವ ಸೂಚನೆ ಮನ್ನಾ ಮಾಡುವುದು.

ಅಡ್ವೈಸರಿ ಕಮಿಟಿಯಲ್ಲಿ ಬೆಳಿಗ್ಗೆ ಸೇರುತ್ತೇವೆ. ಅಲ್ಲಿ ಚರ್ಚೆ ಮಾಡಬಹುದು.

ಅಧ್ಯಕ್ಷರು : ನಾಳೆಯಿಂದ ವಿಷಯ ಏನು ಅಂದರೆ ವಂದನಾ ನಿರ್ಣಯ ಮತ್ತು ಸರ್ಕಾರದವರು ಏನು ಬಿಲ್ ಮಂಡಿಸಿದ್ದಾರೆ, ಅದನ್ನು ಪ್ರಧಾನವಾಗಿ ತೆಗೆದುಕೊಳ್ಳಬೇಕು ಎಂದು ನಾನು ಹೇಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಈಗ ಬಹಳ ಪ್ರಮುಖವಾಗಿ ಕೃಷ್ಣಾ ಬೇಸಿನ್ ಪ್ರಿಲಿಮಿನರಿ ಸಬ್ಮಿಷನ್‌ಗೆ ಅವಕಾಶ ಕೊಡಬೇಕು.

ಅಧ್ಯಕ್ಷರು : ಈಗ ಏನಾಗಿದೆ ಅಂದರೆ.....

ಶ್ರೀ ಬಿ.ಎಸ್. ಯಡಿಯೂರಪ್ಪ : ಸಾರ್ 4.30ಗೆ ಎಂದು ಅವರಿಗೆ ಸಮಯ ಹೇಳಿದ್ದೀರಿ. ಅವರಿಗೆ ಅವಕಾಶ ಕೊಟ್ಟು ಉಳಿದ ವಿಚಾರ ಮಾತನಾಡೋಣ.

ಅಧ್ಯಕ್ಷರು : ನಾನು ತೆಗೆದುಕೊಳ್ಳುತ್ತೇನೆ. 5.30ಕ್ಕೆ ಅಡ್ಜರ್ನ್ ಮಾಡಬೇಕಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : 5–45ಕ್ಕೆ ಮಾಡಿ. ರಾಜಭವನ ಇಲ್ಲೇ ಇರುವುದು ಓಡಿ ಹೋಗುತ್ತೇವೆ ಏನೂ ತೊಂದರೆ ಇಲ್ಲ. ತಾವು ದಯಮಾಡಿ ಚರ್ಚೆಗೆ ಅವಕಾಶಮಾಡಿಕೊಡಿ. ನೀವು 4.30ಕ್ಕೆ ಸಮಯ ನಿಗದಿ ಮಾಡಿದ್ದೀರಿ. ಇದು ಧರ್ಮನಾ ಸಾರ್. ಅಲ್ಲಿ ಅಮರಣಾಂತ ಉಪವಾಸ ಕುಳಿತಾಗ, 60–70 ಸಾವಿರ ಜನ ಸೇರಿದ್ದಾರೆ.

ಅಧ್ಯಕ್ಷರು : ಮಾನ್ಯ ರೋಷನ್ ಬೇಗ್ ಅವರ ಗಮನ ಸೆಳೆಯುವ ಸೂಚನೆ ಪ್ರಿಂಟ್ ಆಗಿದೆ: ಅದು ಐದು–ಹತ್ತು ನಿಮಿಷ ಸಮಯ ಕೊಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಆಯಿತು, ಅದಾದ ಮೇಲೆ ತೆಗೆದುಕೊಳ್ಳಿ.

ಶ್ರೀ ಹೆಚ್.ಕೆ. ಪಾಟೀಲ್ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ನಾಳೆ ಮುಂಜಾನೆ ನೀವು 10.30ಕ್ಕೆ ಸದನ ಸೇರುತ್ತಲೇ ರಾಜ್ಯಪಾಲರ ವಂದನಾ ನಿರ್ಣಯದ ಮೇಲೆ ಚರ್ಚೆ ಪ್ರಾರಂಭ ಮಾಡಿ ಮಧ್ಯಾಹ್ನ ಪ್ರಶ್ನೋತ್ತರ ತೆಗೆದುಕೊಳ್ಳಬಹುದು.

ಅಧ್ಯಕ್ಷರು : ಸಭೆಯನ್ನು 9.00 ಗಂಟೆಗೆ ಕರೆಯೋಣವೇ?

ಶ್ರೀ ಹೆಚ್.ಕೆ. ಪಾಟೀಲ್ : 9.30ಕ್ಕೆ ಆಗಬಹುದು. ಆದರೆ ರಾಜ್ಯಪಾಲರ ವಂದನಾ ನಿರ್ಣಯದ ಮೇಲೆಯೇ ಚರ್ಚೆ ಪ್ರಾರಂಭ ಮಾಡಬೇಕು.

ಅಧ್ಯಕ್ಷರು : ನಾಳೆ 9.30ಕ್ಕೆ ಪ್ರಾರಂಭ ಮಾಡೋಣ. ಮಾನ್ಯ ಯಡಿಯೂರಪ್ಪನವರೇ,

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಪ್ರಶ್ನೋತ್ತರ ಮೊದಲು ತೆಗೆದುಕೊಳ್ಳುವುದು ಒಳ್ಳೆಯದು. ಇದು ಸಂಪ್ರದಾಯ.

ಅಧ್ಯಕ್ಷರು : ಕೆಲವು ವಿಶೇಷ ಸಂದರ್ಭಗಳಲ್ಲಿ ಕೇಳಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಎಲ್ಲಾ ಸದಸ್ಯರಿಗಳಿಗೂ ಅವಕಾಶ ಆಗುತ್ತದೆ. ಪ್ರಶ್ನೋತ್ತರ ಮೊದಲು ತೆಗೆದುಕೊಳ್ಳಬೇಕು.

ಅಧ್ಯಕ್ಷರು : ಒಪ್ಪಿಕೊಳ್ಳೋಣ. ನಾಳೆ 9.30ಕ್ಕೆ ಸಭೆ ಇಡೋಣ. ರಾಜ್ಯಪಾಲರ ವಂದನಾ ನಿರ್ಣಯ 11.00 ಗಂಟೆಯವರೆಗೆ ಆಗಲಿ. 11.00ರ ನಂತರ ಪ್ರಶ್ನೋತ್ತರ ತೆಗೆದುಕೊಳ್ಳೋಣ. ಒಂದೂವರೆ ಗಂಟೆ ನಡೆಯಲಿ. ಅದು ಆಗಬಹುದಲ್ಲಾ.

ಶ್ರೀ ಬಿ.ಎಸ್. ಯಡಿಯೂರಪ್ಪ : ಆಗಬಹುದು ಸಾರ್.

ಆ) ವಿಷಯ : ಕಂದಾಯ ಇಲಾಖೆಗೆ ಸೇರಿದ ಬೆಂಗಳೂರಿನ ಸುತ್ತಮುತ್ತಲಿರುವ ಕೋಟ್ಯಾಂತರ ರೂಪಾಯಿ ಬೆಲೆ ಬಾಳುವ ಸಾವಿರಾರು ಎಕರೆ ಜಮೀನನ್ನು ಅನಧಿಕೃತವಾಗಿ ಭೂ ಕಬಳಿಕೆದಾರರು ಕಬಳಿಸಿರುವ ಕುರಿತು.

ಶ್ರೀ ಆರ್. ರೋಷನ್ ಬೇಗ್(ಜಯಮಹಲ್) : ಮಾನ್ಯ ಅಧ್ಯಕ್ಷರೆ, ಕಂದಾಯ ಇಲಾಖೆಗೆ ಸೇರಿದ ಬೆಂಗಳೂರಿನ ಸುತ್ತಮುತ್ತಲಿರುವ ಕೋಟ್ಯಾಂತರ ರೂಪಾಯಿ ಬೆಲೆ ಬಾಳುವ ಸಾವಿರಾರು ಎಕರೆ ಜಮೀನನ್ನು ಅನಧಿಕೃತವಾಗಿ ಭೂ ಕಬಳಿಕೆದಾರರು ಕಬಳಿಸಿರುವ ಬಗ್ಗೆ ಮಾನ್ಯ ಕಂದಾಯ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್(ಕಂದಾಯ ಸಚಿವರು) :

ಬೆಂಗಳೂರು ಸುತ್ತಮುತ್ತಲು ಬೆಲೆ ಬಾಳುವ ಸರ್ಕಾರಿ ಜಮೀನುಗಳ ಬಗ್ಗೆ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಒತ್ತುವರಿ ಮಾಡಿಕೊಳ್ಳುತ್ತಿರುವ ಅನೇಕ ರೀತಿಯ ಭೂ ಕಂದಾಯ ಕಾಯ್ದೆ ಉಲ್ಲಂಘನೆ ಮತ್ತು ಕೃಷಿ ಜಮೀನನ್ನು ಭೂ ಪರಿವರ್ತನೆಗೆ ಅನುಮತಿ ಪಡೆಯದೇ ಅನಧಿಕೃತವಾಗಿ ಕೃಷಿಯೇತರ ಉದ್ದೇಶಕ್ಕಾಗಿ ಬಳಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಈ ವಿಷಯವು ವಿಧಾನ ಮಂಡಲದ ಉಭಯ ಸದನಗಳಲ್ಲಿ ಅನೇಕ ಬಾರಿ ಪ್ರಸ್ತಾಪವಾಗಿದೆ. ದಿನಾಂಕ 15-01-2001ರಂದು ಮಾನ್ಯ ಹಿಂದಿನ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ ಉನ್ನತಾಧಿಕಾರಿಗಳ ಸಮಿತಿಯ ಸಭೆಯಲ್ಲಿ ನಡೆದ ಚರ್ಚೆಯ ಹಿನ್ನೆಲೆಯಲ್ಲಿ ಕಂದಾಯ ಇಲಾಖೆಯಲ್ಲಿ **"ವಿಶೇಷ ಟಾಸ್ಕ್ ಫೋರ್ಸ್ ಪಡೆ"** ರಚಿಸಬೇಕು ಎಂಬುದನ್ನು ನಿರ್ಣಯಿಸಲಾಯಿತು.

ಹಿಂದಿನ ವಿಭಾಗಾಧಿಕಾರಿಗಳು ಬೆಂಗಳೂರು ಇವರು ಬೆಂಗಳೂರು ನಗರ ಮತ್ತು ಸುತ್ತಮುತ್ತಲಿನ ಸರ್ಕಾರಿ ಜಮೀನಿನಲ್ಲಿ ಅನಧಿಕೃತ ಒತ್ತುವರಿ. ಕೃಷಿ ಜಮೀನನ್ನು ಕೃಷಿಯೇತರ ಉದ್ದೇಶಕ್ಕಾಗಿ ಪರಿವರ್ತಿಸಿಕೊಳ್ಳದೇ ಅನಧಿಕೃತ ಕಟ್ಟಡ ಕಟ್ಟಿರುವ ಮತ್ತು ಬೋಗಸ್ ದಾಖಲೆ ಸೃಷ್ಟಿಸಿರುವ ಪ್ರಕರಣಗಳಿಗೆ ಈ ಕೆಳಕಂಡಂತೆ ವಿವರ ನೀಡುತ್ತಾ ವಿಶೇಷ ಟಾಸ್ಕ್ ಪೋರ್ಸ್ ಕಾರ್ಯಪಡೆ ರಚಿಸಲು ಪ್ರಸ್ತಾವೆಯನ್ನು ಸಲ್ಲಿಸಿರುವರು.

ಕ್ರಮ ಸಂಖ್ಯೆ	ಪ್ರಕರಣಗಳ ವಿವರ	ಒಟ್ಟು ಪ್ರಕರಣಗಳು	ಜಮೀನಿನ ವಿಸ್ತೀರ್ಣ (ಎಕರೆಗಳಲ್ಲಿ)	ಅಂದಾಜು ಮೌಲ್ಯ (ಲಕ್ಷ ರೂಗಳಲ್ಲಿ)
1.	ಸರ್ಕಾರದ ಜಮೀನಿನಲ್ಲಿ ಅನಧಿಕೃತವಾಗಿ ಕಟ್ಟಡ ಗಳನ್ನು ಕಟ್ಟಿರುವುದು	24,042	1,774,35	2,784
2.	ಬೇನಾಮಿ: ಖೋಟಾ ದಾಖಲೆಯಿಂದ ಭೂ ಕಬಳಿಕೆ	208	1,273	4,921
3.	ಭೂ ಪರಿವರ್ತನೆ ಇಲ್ಲದೆ ಸಾಗುವಳಿ ಜಮೀನನ್ನು ಇತರೆ ಉದ್ದೇಶಗಳಿಗಾಗಿ ಬಳಸಿಕೊಂಡಿರುವುದು			

ಆದರೆ ಈಗಾಗಲೇ ನಗರಾಭಿವೃದ್ಧಿ ಇಲಾಖೆಯ ಆಡಳಿತ ವ್ಯಾಪ್ತಿಯಲ್ಲಿ ಡೆಪ್ಯೂಟಿ ಇನ್ಸ್‌ಪೆಕ್ಟರ್ ಆಫ್ ಪೋಲೀಸ್ ನೇತೃತ್ವದಲ್ಲಿ ಆದೇಶ ಸಂಖ್ಯೆ: ಯುಡಿಡಿ 110 ಎಮ್ ಎನ್ ಯು 97 ದಿನಾಂಕ 28–8–97ರ ಆದೇಶದ ಅನ್ವಯ ಬೆಂಗಳೂರು ಮೆಟ್ರೋಪಾಲಿಟನ್ ಟಾಸ್ಕ್ ಫೋರ್ಸ್ ಎಂಬ ನಾಮಕರಣದಲ್ಲಿನ ವಿಶೇಷ ದಳ ಅಸ್ತಿತ್ವದಲ್ಲಿದೆ. ಈ ವಿಶೇಷ ದಳಕ್ಕೆ ಅಗತ್ಯ ಸಿಬ್ಬಂದಿಯನ್ನು ನೀಡಲಾಗಿದೆ. ಈ ವಿಶೇಷ ದಳಕ್ಕೆ 1) ಭೂ ಕಂದಾಯ ಕಾಯ್ದೆ. 2) ಕರ್ನಾಟಕ ಭೂ ಸುಧಾರಣೆ ಕಾಯ್ದೆ. 3) ಇನಾಂ ಅಬಾಲಿಷನ್ ಕಾಯಿದೆ 4) ಕರ್ನಾಟಕ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ (ಕೆಲವು ಜಮೀನುಗಳ ಪರಭಾರೆ ನಿಷೇಧ ಕಾಯ್ದೆ 1978 ರ ಉಲ್ಲಂಘನೆ, ಬೋಗಸ್ ದಾಖಲೆ ಸೃಷ್ಟಿಸಿದ ಪ್ರಕರಣಗಳನ್ನು ಪತ್ತೆ ಹಚ್ಚಿ ಸರ್ಕಾರಿ ಜಮೀನುಗಳ ಮೇಲಿನ ಅನಧಿಕೃತ ಒತ್ತುವರಿಯನ್ನು ಖುಲ್ಲಾಪಡಿಸಲು ನಗರಾಭಿವೃದ್ಧಿ ಕಾಯಿದೆಯಲ್ಲಿನ ಅಧಿಕಾರವನ್ನು ಸಹ ಒಳಗೊಂಡಂತೆ ಕ್ರಮ ಕೈಗೊಳ್ಳಲು ಅಧಿಕಾರ ನೀಡಲಾಗಿದೆ. ಈ ದಳಕ್ಕೆ ಕಂದಾಯ ಇಲಾಖೆಯ ಸಿಬ್ಬಂದಿ ಬೆಂಬಲ ಒದಗಿಸದೇ ಕಂದಾಯ ಇಲಾಖೆಯೊಡನೆ ಸಮನ್ವಯ ಇಲ್ಲದೇ ಇರುವುದರಿಂದ ಗಣನೀಯವಾಗಿ ಮತ್ತು ಪರಿಣಾಮಕಾರಿಯಾಗಿ ಈ ವಿಶೇಷ ಪಡೆಯು ಕಾರ್ಯಾಚರಣೆ ಮಾಡಲು ಸಾಧ್ಯವಾಗಿಲ್ಲ. ದಿನಾಂಕ 25–11–2004ರಂದು ಕಾರ್ಯದರ್ಶಿ ಕಂದಾಯ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಕಂದಾಯ ಇಲಾಖೆಗೆ ಪ್ರತ್ಯೇಕವಾಗಿ ವಿಶೇಷ ಕಾರ್ಯಪಡೆ ಹೊಂದುವ ಬದಲಿಗೆ ಹಾಲಿ ನಗರಾಭಿವೃದ್ಧಿ ಇಲಾಖೆಯ ಆಡಳಿತ ವ್ಯಾಪ್ತಿಯಲ್ಲಿನ ಬೆಂಗಳೂರು ಮೆಟ್ರೋಪಾಲಿಟನ್ ಟಾಸ್ಕ್ ಫೋರ್ಸ್‌ಗೆ ಕಂದಾಯ ಇಲಾಖೆಯಲ್ಲಿನ 4 ಸರ್ವೇಯರ್ ಮತ್ತು 4 ನಿರೀಕ್ಷಕರ ಹುದ್ದೆಗಳ ಸಿಬ್ಬಂದಿಯನ್ನು ವರ್ಗಾಯಿಸಲು ಮತ್ತು ಕಂದಾಯ ಇಲಾಖೆಯಲ್ಲಿನ ಕಾನೂನು ಕೋಶದ ಮುಖ್ಯಸ್ಥರ ನೆರವನ್ನು ಸದರಿ ಟಾಸ್ಕ್ ಫೋರ್ಸ್‌ಗೆ ನೀಡಲು ಮತ್ತು ರಾಜ್ಯ ಮಟ್ಟದಲ್ಲಿ ಕಂದಾಯ ಇಲಾಖೆಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಚಾಲನೆ ಸಮಿತಿ (Steering Committee) ಮತ್ತು ಬೆಂಗಳೂರು ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿ ಬೆಂಗಳೂರು ನಗರ ಜಿಲ್ಲೆ ಇವರ ಅಧ್ಯಕ್ಷತೆಯಲ್ಲಿ ಸಮನ್ವಯ ಸಮಿತಿಯನ್ನು (Coordination Committee)ರಚಿಸಿ ನೆರವು ನೀಡಲು ತೀರ್ಮಾನಿಸಲಾಗಿದೆ. ಹೀಗೆ ಮಾಡುವುದರಿಂದ ಬೆಂಗಳೂರು ಮೆಟ್ರೋಪಾಲಿಟನ್ ಟಾಸ್ಕ್ ಫೋರ್ಸ್‌ಗೆ ಸರ್ಕಾರಿ ಜಮೀನಿನ ಭೂ ಕಬಳಿಕೆ ತಪ್ಪಿಸಿ ಸರ್ಕಾರಿ ಜಮೀನನ್ನು ಹಿಂತೆಗೆದುಕೊಳ್ಳಲು ಪರಿಣಾಮಕಾರಿಯಾಗಿ ಕ್ರಮ ಕೈಗೊಳ್ಳಲು ಅನುಕೂಲವಾಗುತ್ತದೆ. ಹಾಗೂ ಹೆಚ್ಚುವರಿಯಾಗಿ ಯಾವುದೇ ಆರ್ಥಿಕ ಹೊರೆ ಸರ್ಕಾರಕ್ಕೆ ಬೀಳುವುದಿಲ್ಲ. ಸದರಿ ಟಾಸ್ಕ್ ಫೋರ್ಸನ್ನು ಪ್ರಬಲಗೊಳಿಸುವ ಪ್ರಸ್ತಾವನೆ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಜಮೀನಿನ ವಿಸ್ತೀರ್ಣ ಎಕರೆಗಳಲ್ಲಿ ಎಂದು ಹೇಳಿದ್ದೀರಿ. 1774,35 ಎಂದು ಹೇಳಿದ್ದೀರಿ, ಅದನ್ನು ಸ್ವಲ್ಪ ಚೆಕ್ ಮಾಡಿ ಸಾರ್. ಈಗ 1273 ಎಕರೆಗೇನೆ 49 ಕೋಟಿ ರೂಪಾಯಿ ಮೌಲ್ಯ ಆಗುತ್ತದೆ. ಲಕ್ಷದ 77 ಸಾವಿರ ಎಕರೆಗೆ 27 ಕೋಟಿ ರೂಪಾಯಿ ಹೇಗೆ ಆಗುತ್ತದೆ?

ಶ್ರೀ ಎಂ.ಪಿ. ಪ್ರಕಾಶ್ : ಇದು ನೋಶನಲ್ ಆಗಿ ಇರತಕ್ಕಂಥ ಪ್ರೈಸ್. ಯಾರೂ ಇದರ ಬಗ್ಗೆ ನಿಖರವಾಗಿ ಹೇಳಿರತಕ್ಕದ್ದು ಏನಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ : ಭಾರೀ ವ್ಯತ್ಯಾಸ ಇದೆ.

ಶ್ರೀ ಎಂ.ಪಿ. ಪ್ರಕಾಶ್ : ಒಪ್ಪುತ್ತೇನೆ. 2001ನೇ ತಾರೀಖಿನ ದಿವಸ ಟಾಸ್ಕ್ ಫೋರ್ಸ್‌ನವರು ಅಂದಿನ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದಂತಹ ಸಭೆಯಲ್ಲಿ ಒಂದು ನೋಷನಲ್ ಆಗಿ

ಅಂದಾಜಾಗಿ ಕೊಟ್ಟಿರತಕ್ಕಂಥದ್ದು, ಆದರೆ ಅದನ್ನು ತಿದ್ದಬೇಕಾಗಿತ್ತು ಅಷ್ಟು ಇರಲಿಕ್ಕೆ ಇಲ್ಲ ಎಂದು ಅವರು ಹೇಳುತ್ತಿರುವುದು.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಮೊದಲು ಮತ್ತು ಎರಡನೇ ಪ್ಯಾರಾ ನೋಡಿ. 1774,35 ಎಕರೆಗೆ 27 ಕೋಟಿ ರೂ.

ಶ್ರೀ ಎಂ.ಪಿ. ಪ್ರಕಾಶ್ : ನೋಡಿ, 24 ಸಾವಿರ ಪ್ರಕರಣಗಳಲ್ಲಿ 1,774,35 ಎಕರೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಅಂದಾಜು ಮೌಲ್ಯ ನೋಡಿ ಸಾರ್.

ಶ್ರೀ ಎಂ.ಪಿ. ಪ್ರಕಾಶ್ : ಜಮೀನು ವಿಸ್ತೀರ್ಣವಿದೆ ಎಂದು ಹೇಳುತ್ತೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮೌಲ್ಯ ಸಾರ್ ಹೇಳುತ್ತಿರುವುದು.

ಶ್ರೀ ಎಂ.ಪಿ. ಪ್ರಕಾಶ್ : ಮೌಲ್ಯ ಬಂದು 2784 ಲಕ್ಷ ರೂ.

ಶ್ರೀ ಜೆ.ಸಿ. ಮಾಧುಸ್ವಾಮಿ : ಇನ್ನೊಂದು 208 ಪ್ರಕರಣ 1273 ಎಕರೆಗೆ ಮೌಲ್ಯ 49 ಕೋಟಿ ರೂ.. ಹೇಳುತ್ತಿದ್ದೀರಿ.

ಶ್ರೀ ಎಂ.ಪಿ. ಪ್ರಕಾಶ್ : 4921 ಲಕ್ಷ ರೂ.

ಶ್ರೀ ಜೆ.ಸಿ. ಮಾಧುಸ್ವಾಮಿ : ಲ್ಯಾಂಡ್ 10 ಟೈಮ್ಸ್‌ಗಿಂತ ಜಾಸ್ತಿ ಇದೆ ಸಾರ್. ಪ್ರಕರಣಗಳು ಒನ್ ಥೌಸಂಡ್ ಟೈಮ್ಸ್‌ಗಿಂತ ಜಾಸ್ತಿ ಇದ್ದರೂ ಅಮೌಂಟ್ ಕಡಿಮೆ ಆಗಿ ಬಿಡುತ್ತದೆ.

ಶ್ರೀ ಎಂ.ಪಿ. ಪ್ರಕಾಶ್ : ಇದು ನಿಖರವಾಗಿರತಕ್ಕ ಮೊತ್ತ ಅಲ್ಲ. ನೋಷನಲ್ ಆಗಿ ಇರತಕ್ಕದ್ದು. ಈ ಭೂಮಿಯಲ್ಲಿ ಖೋಟಾ ದಾಖಲೆಯಿಂದ ಭೂ ಕಬಳಿಕೆ ಮಾಡಿಕೊಂಡಿದ್ದು ಯಾವುದಾದರೂ ಒಂದು ಮಧ್ಯಂತರ ಪ್ರದೇಶದಲ್ಲಿಯೂ ಇರತಕ್ಕದ್ದು ಇರಬಹುದು.

ಶ್ರೀ ವಾಟಾಳ್ ನಾಗರಾಜ್ : ಅದು ಅಲ್ಲ. ತಮಗೆ ಹೇಳುತ್ತೇನೆ. ಜಮೀನಿನ ವಿಸ್ತೀರ್ಣ 1,774,35 ಅಂದಾಜು ಮೌಲ್ಯ 27 ಕೋಟಿ 84 ಲಕ್ಷ ರೂ. ಎರಡನೆಯದು 1273 ಎಕರೆ ಅದಕ್ಕೆ 49 ಕೋಟಿ ರೂ ಒಂದು ಲಕ್ಷಕ್ಕೆ ಬರೇ 27 ಕೋಟಿ ರೂ ಇದು ಒಂದು ಸಾವಿರಕ್ಕೆ 49 ಕೋಟಿ ರೂ ಅಂದರೆ ಅಜಗಜಾಂತರ ವ್ಯತ್ಯಾಸ ಬರುತ್ತದೆ.

ಶ್ರೀ ಎಂ.ಪಿ. ಪ್ರಕಾಶ್ : ಈಗ ಎಂ.ಜಿ. ರೋಡಿನಲ್ಲಿ ಭೂ ಕಬಳಿಕೆ ಮಾಡಿಕೊಂಡರೆ ಅಜಗಜಾಂತರ ವ್ಯತ್ಯಾಸ ಬರುತ್ತದೆ. ಆಮೇಲೆ ನೀವು ಯಲಹಂಕದ ಆಚೆ ಹೋದಾಗ ಮತ್ತೊಂದು ತರಹ ಬರುತ್ತದೆ. ಅದಕ್ಕೆ ನಾನು ಆಗಲೇ ಹೇಳಿದ್ದು. ಆಕ್ಷನ್ ಮಾಡಿಲ್ಲ. ಇದು ನೋಷನಲ್ ವ್ಯಾಲ್ಯೂ ಎಂದು ಹೇಳಿದೆ. ಇದು ನೋಷನಲ್ ವ್ಯಾಲ್ಯೂ ಅಷ್ಟೇ.

ಶ್ರೀ ಎಂ.ಪಿ. ಪ್ರಕಾಶ್(ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ, ಇಲ್ಲಿ ಭೂಕಬಳಿಕೆ ಇತ್ತೀಚಿನ ದಿನಮಾನಗಳಲ್ಲಿ ವಿಪರೀತವಾಗಿ ನಡೆದಿರತಕ್ಕದನ್ನು ಕಂಡಿದ್ದೇವೆ. ಮಾಫಿಯಾ ಗ್ಯಾಂಗಿನವರು ಬೇರೆ ಬೇರೆ ಕಡೆಗಳಿಂದ ಬಂದಿರತಕ್ಕದ್ದು ಕೂಡ ಆಗಿದೆ. ಇದು 2001 ರಂದು ಟಾಸ್ಕ್ ಫೋರ್ಸ್‌ನ ವರದಿಯಲ್ಲಿ ಬಂದಿರುವಂಥದ್ದು. ಅದಾದನಂತರ 4500 ಎಕರೆಗಳಷ್ಟೂ ಕೂಡ ಕಬಳಿಕೆಯಾಗಿದೆ ಎಂದು ಮತ್ತೊಂದು ವರದಿ ಬಂದಿದೆ. ನಾವು ಇದಕ್ಕೆ ಪ್ರತ್ಯೇಕವಾಗಿ ಒಂದು ಟಾಸ್ಕ್ ಫೋರ್ಸ್‌ಗಳನ್ನು ಕಂದಾಯ ಇಲಾಖೆಯಿಂದ ಮಾಡಬೇಕು ಎಂದಾಗ ಈಗಾಗಲೇ ಮೆಟ್ರೋಪಾಲಿಟನ್ ಟ್ರಾಸ್ಕ್ ಫೋರ್ಸ್ ಇದೆ ಎಂದು ಗೊತ್ತಾಯಿತು. ಇದರಲ್ಲಿ ನಮ್ಮ ನಾಲ್ಕು ಮಂದಿ ಸರ್ವೆಯರ್ಸ್‌ನ್ನು ಸೇರಿಸಬೇಕೆಂದಾಗ, ನಾಲ್ಕು ಮಂದಿ ನಿರೀಕ್ಷಕರನ್ನು ಕೊಡುವುದರ ಮೂಲಕ ಆಗುವುದಿಲ್ಲ. ಇದು

ಬಹಳ ಪರಿಣಾಮಕಾರಿಯಾದ ರೀತಿಯಲ್ಲಿ ಕೆಲಸ ಮಾಡಿದಾಗ ಮಾತ್ರ ಇಲ್ಲಿ ಭೂಕಬಳಿಕೆ ಮಾಡಿರತಕ್ಕ ಮಾಫಿಯಾದವರನ್ನು ಅವರು ಬಹಳ ಪ್ರಬಲರಾಗಿದ್ದಾರೆ, ಅವರು ಎಷ್ಟೇ ಪ್ರಬಲರಾಗಿರಲಿ, ಎಷ್ಟೇ ರಾಜಕೀಯವಾಗಿ ಮತ್ತು ಹಣದಿಂದ ಪ್ರಬಲರಾಗಿರತಕ್ಕವರಾಗಿರಲಿ, ಅವರ ಮೇಲೆ ನಾವು ಕ್ರಮ ಕೈಗೊಳ್ಳಬೇಕು ಎಂಬುದಕ್ಕೆ ಈ ಸಮ್ಮಿಶ್ರ ಸರ್ಕಾರ ಬದ್ಧವಾಗಿರುವ ಕಾರಣದಿಂದ ಖಂಡಿತವಾಗಿ ಅವರ ಮೇಲೆ ಕ್ರಮ ಕೈಗೊಳ್ಳುತ್ತೇವೆ. ಈ ವಿಚಾರದಲ್ಲಿ ಇಷ್ಟರಲ್ಲೇ ಸಚಿವ ಸಂಪುಟದ ಸಭೆಯ ಮುಂದೆ ಒಂದು ಮಂಡನೆಯನ್ನು ಪ್ರಸ್ತಾಪ ಮಾಡಿ ಅವರಿಂದ ಅಧಿಕಾರ ಪಡೆಯತಕ್ಕದ್ದು ಆಗುತ್ತದೆ. ಅದಾದನಂತರ ಪ್ರತಿಯೊಂದು ವಿಚಾರದಲ್ಲೂ ನಾವು ಮಾಹಿತಿಯನ್ನು ಸಂಗ್ರಹ ಮಾಡಿಕೊಂಡಿದ್ದೇವೆ. ಆ ಮಾಹಿತಿಯನ್ನು ಈ ಸಂದರ್ಭದಲ್ಲಿ ಹೇಳಬೇಕಾದ ಅಗತ್ಯವಿಲ್ಲ. ಅದಕ್ಕೆ ಸರಿಯಾದ ಕಾನೂನಿನ ಬಂದೋಬಸ್ತ್‌ನ್ನು ಮಾಡಿಕೊಂಡ ನಂತರ ಆ ವಿಚಾರದಲ್ಲಿ ಹೇಳುತ್ತೇನೆ. ಇಷ್ಟು ಮಾತ್ರ ಸದನದ ಮತ್ತು ಮಾನ್ಯ ಸದಸ್ಯರುಗಳ ಅವಗಾಹನೆಗೆ ಹೇಳುತ್ತೇನೆ. ಈ ಸರ್ಕಾರ ಭೂಕಬಳಿಕೆ ಮಾಡಿಕೊಳ್ಳುವ ಎಲ್ಲರ ಮೇಲೂ ತೀವ್ರವಾಗಿ ಕ್ರಮವನ್ನು ಖಂಡಿತವಾಗಿ ಕೈಗೊಳ್ಳುತ್ತೇವೆ.

(ಗೊಂದಲ)

ಅಧ್ಯಕ್ಷರು : ಎಲ್ಲರೂ ಕ್ಲಾರಿಫಿಕೇಷನ್ ಕೇಳಲು ನಿಂತುಕೊಂಡರೆ ಹೇಗೆ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಇದು ಸೀರಿಯಸ್ ಆದ ವಿಚಾರವಾಗಿದೆ. ಹಲವಾರು ಜನ ಸದಸ್ಯರು ಮಾತನಾಡುವವರಿದ್ದಾರೆ. ಆದ್ದರಿಂದ ಅರ್ಧ ಗಂಟೆ ಚರ್ಚೆಗೆ ಅವಕಾಶ ಮಾಡಿಕೊಡಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ಹೌದು, ಇದರ ಬಗ್ಗೆ ಅರ್ಧ ಗಂಟೆ ಚರ್ಚೆಗೆ ತೆಗೆದುಕೊಳ್ಳಬೇಕು ಮಾನ್ಯ ಅಧ್ಯಕ್ಷರೇ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇಲ್ಲಿ ಪ್ರಾಬ್ಲಮ್ ಏನಿದೆ ಎಂದರೆ, ಭೂಮಾಲೀಕ ಯಾರೋ.

ಅಧ್ಯಕ್ಷರು : ಚರ್ಚೆಗೆ ತೆಗೆದುಕೊಳ್ಳೋಣ ಬಿಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಭೂ ಮಾಲೀಕ ಯಾರೋ, ಯಾರು ದುರುಪಯೋಗ ಮಾಡುತ್ತಿದ್ದಾರೆ. ಅವರ ಬಗ್ಗೆ ನಾವು ಯೋಚನೆ ಮಾಡುತ್ತಿಲ್ಲ. ಅವನ ಮೇಲೆ ಏನು ಬೇಕಾದರೂ ಕ್ರಮ ತೆಗೆದುಕೊಳ್ಳಿ. ಯಾರೋ ಒಬ್ಬ ಸಾಮಾನ್ಯ ಜನ ಸೈಟನ್ನು ಮಾಡಿಕೊಂಡು ಮನೆಕಟ್ಟಿಕೊಂಡು ಹತ್ತಾರು ವರ್ಷಗಳಿಂದ ವಾಸ ಮಾಡುತ್ತಿದ್ದಾರೆ. ಯಾರೋ ತಪ್ಪಿಗೆ ಅವರನ್ನು ಒಕ್ಕಲೆಬ್ಬಿಸುತ್ತೀರಾ? ಆ ಬಡವನ ಗತಿ ಏನು? ಅದು ಆಗುವುದಿಲ್ಲ.

ಅಧ್ಯಕ್ಷರು : ಸಭೆಯು ಒಪ್ಪುವುದಾದರೆ ಇದನ್ನು ಅರ್ಧ ಗಂಟೆ ಚರ್ಚೆಗೆ ತೆಗೆದುಕೊಳ್ಳೋಣ.

ಶ್ರೀ ವಾಟಾಳ್ ನಾಗರಾಜ್ : ನನ್ನದೊಂದು ಮನವಿ ಏನೆಂದರೆ, ಯಾರ್‍ಯಾರು ಇದನ್ನು ಪಡೆದಿದ್ದಾರೆ ಎಂಬ ಪಟ್ಟಿಯನ್ನು ಸದನದಲ್ಲಿ ಇಡಬೇಕು. ಇದು ಎಷ್ಟು ಎಕರೆ, ತಾವು ಹೇಳಿದ ಪ್ರಕಾರ 1,77,435 ಎಕರೆಯನ್ನು ಯಾರ್‍ಯಾರು ಪಡೆದಿದ್ದಾರೆ. 1,273 ಎಕರೆಯನ್ನು ಯಾರ್‍ಯಾರು ಪಡೆದಿದ್ದಾರೆ.

ಅಧ್ಯಕ್ಷರು : ಮಾನ್ಯ ವಾಟಾಳ್ ನಾಗರಾಜ್‌ರವರೆ, ನಾನು ಚರ್ಚೆಗೆ ಅವಕಾಶ ಕೊಟ್ಟಿಲ್ಲ, ಇದರ ಬಗ್ಗೆ ಮಾನ್ಯ ರೋಷನ್ ಬೇಗ್‌ರವರು ಕೇಳಬೇಕಾದವರು. ಇದು ಗಮನಹರಿಸುವ ಸೂಚನೆ,

ಇದರ ಬಗ್ಗೆ ನಾನು ಚರ್ಚೆಗೆ ಅವಕಾಶ ಕೊಡುವುದಿಲ್ಲ. ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ಹೇಳಿದ್ದೀರಿ, ಅದಕ್ಕೆ ಅವಕಾಶ ಮಾಡಿಕೊಡುತ್ತೇನೆ ಹೊರತು ಈಗಲೇ ಚರ್ಚೆಗೆ ಅವಕಾಶ ಮಾಡಿಕೊಡುವುದಿಲ್ಲ. ಮಾನ್ಯ ಮಂತ್ರಿಗಳು ಏನು ಹೇಳುತ್ತಾರೋ ಕೇಳೋಣ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ, ನಾವು ಇದರ ಬಗ್ಗೆ ಕೆಲವು ಕ್ರಮಗಳನ್ನು ಕೈಗೊಳ್ಳುವುದಕ್ಕೆ ಕಳೆದ ಮೂರ್ನಾಕು ತಿಂಗಳಿನಿಂದ ತೀವ್ರವಾದ ಪ್ರಯತ್ನ ನಡೆಸಿದ್ದೇವೆ. ಕಾನೂನುಗಳನ್ನು ತಯಾರು ಮಾಡಬೇಕಾದಂಥ ಅಗತ್ಯವಿದೆ. ತಾವು ಅರ್ಧ ಗಂಟೆ ಚರ್ಚೆ ಮಾಡಿದಂಥ ಸನ್ನಿವೇಶದಲ್ಲಿ ಮಾನ್ಯ ಯಡಿಯೂರಪ್ಪನವರೂ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದರು. ನಾವು ಏನೆಲ್ಲಾ ಮಾಡಬೇಕೆಂದು ಚರ್ಚೆಯಲ್ಲಿ ಉತ್ತರ ಕೊಟ್ಟರೆ ಈ ಭೂಕಬಳಿಕೆಯ ಮಂದಿ ನಮಗಿಂತಲೂ ತೀವ್ರಗತಿಯಲ್ಲಿ ಬಹಳ ಮುಂದೆ ಹೋಗಿಬಿಡುತ್ತಾರೆ. ಮತ್ತೆ ಕಾರ್ಯಾಚರಣೆಗೆ ಇಳಿಯುತ್ತಾರೆ. ಆದ್ದರಿಂದ ಇಲ್ಲಿ ಚರ್ಚೆ ಮಾಡುವುದಕ್ಕಿಂತ ಮೊದಲು, ನಾನು ಮಾತನಾಡಬೇಕೆಂದರೆ ತಯಾರಿದ್ದೇನೆ, ಆದರೆ ಒಳ್ಳೆಯ ಹಿತದೃಷ್ಟಿಯಿಂದ ದಯವಿಟ್ಟು ಮುಂದಿನ ಬಾರಿ ಇದರ ಬಗ್ಗೆ ಚರ್ಚೆ ಮಾಡಿಸಿಕೊಡತಕ್ಕದ್ದು. ಒಳ್ಳೆಯದು ಇಲ್ಲದಿದ್ದರೆ ಅವರಿಗೆ ಸರ್ಕಾರ ಯಾವ ದಿಸೆಯಲ್ಲಿ ಹೋಗುತ್ತದೆ ಎಂಬುದು ಗೊತ್ತಾಗುತ್ತದೆ. ಅದಕ್ಕೆ ಏನೇನು ಮಾಡಬೇಕು ಎಂಬ ಕೆಲಸವನ್ನು ಅವರು ಮಾಡಲು ಪ್ರಾರಂಭ ಮಾಡುತ್ತಾರೆ. ಬೇಕಾದರೆ ಚರ್ಚೆ ಮಾಡಲು ನಮ್ಮ ಆಕ್ಷೇಪ ಏನು ಇಲ್ಲ. ಆದರೆ ಉತ್ತರಕ್ಕೆ ತಾವು ಇನ್‌ಸಿಸ್ಟ್ ಮಾಡಬೇಡಿ. ಇಂಥದನ್ನು ನಾವು ಮಾಡುತ್ತೇವೆಂದು ಉತ್ತರವಾಗಿ ಹೇಳಿದ ತಕ್ಷಣವೇ ಎಲ್ಲಾ ತರಹದ ಪ್ರಿಪರೇಷನ್ಸ್‌ನ್ನೂ ಅವರು ಮಾಡುತ್ತಾರೆ, ಮತ್ತು ಅದಕ್ಕೆ ಎಲ್ಲಾ ದಾಖಲೆಗಳನ್ನು ಸೃಷ್ಟಿ ಮಾಡಿಕೊಳ್ಳುತ್ತಾರೆ. ಆದ್ದರಿಂದ ಚರ್ಚೆಯಾಗಲಿ, ಆದರೆ ಉತ್ತರಕ್ಕೆ ಇನ್‌ಸಿಸ್ಟ್ ಮಾಡಬೇಡಿ.

ಶ್ರೀ ಆರ್. ರೋಷನ್ ಬೇಗ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಕಂದಾಯ ಸಚಿವರಿಗೆ ಒಂದು ವಿಷಯವನ್ನು ಕೇಳಬೇಕೆಂದಿದ್ದೇನೆ, ಈ ದೇಶದ ಮಾಜಿ ಪ್ರಧಾನ ಮಂತ್ರಿಗಳಾದ ಮಾನ್ಯ ಹೆಚ್.ಡಿ. ದೇವೇಗೌಡರು ಬೆಂಗಳೂರು ಸುತ್ತಮುತ್ತ ಕಂದಾಯ ಇಲಾಖೆಯ ಜಮೀನನ್ನು ಮಾಫಿಯಾದವರು ಯಾರ್‍ಯಾರು ಪಡೆದುಕೊಂಡಿದ್ದಾರೆ ಅದರಲ್ಲಿ ಸಾಕಷ್ಟು ಜನ ಐ.ಎ.ಎಸ್. ಮತ್ತು ಐ.ಪಿ.ಎಸ್. ಅಧಿಕಾರಿಗಳಿದ್ದಾರೆ. ರಾಜಕಾರಣಿಗಳು ಇದ್ದಾರೆ, ಬಹಳ influential personalities ಇದ್ದಾರೆ ಎಂದು ಅವರು ಒಂದು special investigation team ನ್ನೆ setup ಮಾಡುತ್ತೇನೆಂದು ಹೇಳಿದ್ದರು. ಅದು ಏನಾದರೂ ಸರ್ಕಾರದ ಗಮನದಲ್ಲಿದೆಯೇ? ಸರ್ಕಾರ ಒಂದು special investigation team ನ್ನು ಒಬ್ಬರು senior ADGP rank. officer ಗೆ ಏನಾದರೂ appoint ಮಾಡಿ ಮಾಡಬೇಕೆಂದು ಸರ್ಕಾರದ ಗಮನದಲ್ಲಿಯೆ?

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ದೇವೇಗೌಡರು ಕೊಟ್ಟಿರುವ ಸಲಹೆ ಮತ್ತು ಬೇರೆ ಬೇರೆ ಸದಸ್ಯರುಗಳು ಕೊಟ್ಟಿರುವ ಸಲಹೆಗೆ ಅನುಗುಣವಾಗಿ ಕಂದಾಯ ಇಲಾಖೆಯಲ್ಲೇ ಪ್ರತ್ಯೇಕವಾದ ಕಾರ್ಯಪಡೆಯನ್ನು ರಚನೆ ಮಾಡಬೇಕೆಂದು ಯೋಚನೆ ಮಾಡಿದ್ದೇವೆ. ನಂತರ ನೋಡಿದಾಗ ಈಗಾಗಲೇ ಮೆಟ್ರೋಪಾಲಿಟನ್ ಟಾಸ್ಕ್ ಫೋರ್ಸ್ ಎಂಬುದು ಇದೆ. ನಮ್ಮ ಪತ್ರಿಕಾಕರ್ತರಿಗೂ ಇದನ್ನು ನಾವು ಹೇಳಿದಾಗ ಈ ವಿಚಾರವನ್ನು ನಮ್ಮ ಗಮನಕ್ಕೆ ತಂದಿದ್ದರು. ಎರಡೆರಡು ಟಾಸ್ಕ್

ಫೋರ್ಸ್‌ಗಳನ್ನು ಮಾಡಿ ಒಬ್ಬರಿಗೊಬ್ಬರಿಗೆ ವ್ಯತ್ಯಾಸ ಮಾಡತಕ್ಕದ್ದು ಮತ್ತು ಅವರ ನಡುವೆ ಮಧ್ಯ ಪ್ರವೇಶ ಮಾಡುವುದು ಅಷ್ಟು ಸೂಕ್ತವಲ್ಲ ಎಂಬ ಕಾರಣದಿಂದ ನಾವು state level ನಲ್ಲಿ ಒಂದು steering committee ಮಾಡತಕ್ಕದ್ದು ಮತ್ತು ಬೆಂಗಳೂರು ಜಿಲ್ಲೆ ಮತ್ತು ನಗರಕ್ಕೆ ಸಂಬಂಧಪಟ್ಟಂತೆ ಸಮನ್ವಯ ಕಮಿಟಿಯನ್ನು ಮಾಡತಕ್ಕದ್ದು, ನಮ್ಮಲ್ಲಿ ಹೆಚ್ಚುವರಿಯಾಗಿರುವ ನಾಲ್ಕು ಮಂದಿ ಸರ್ವೆಯರ್ಸ್ ಮತ್ತು ಸೂಪರಿಂಡೆಂಟೆಂಡ್‌ಗಳನ್ನು ಅವರಿಗೆ ನೇಮಕಮಾಡತಕ್ಕದನ್ನು ಮಾಡಿದ್ದೇವೆ. ತಾವು ಹೇಳಿದ ಹಿನ್ನೆಲೆಯಲ್ಲಿ ಇದಕ್ಕೆ ಇನ್ನೂ ಅಧಿಕಾರವನ್ನು ಪ್ರಾಪ್ತಿ ಮಾಡಬೇಕಾಗುತ್ತದೆ. ಎ.ಡಿ.ಜೆ.ಪಿ. ಮಟ್ಟದ ಅಧಿಕಾರಿ ಬಂದರೆ ಇನ್ನೂ ಶ್ರೇಯಸ್ಕರವಾಗಿರುವುದರಿಂದ ತಾವು ಕೊಟ್ಟ ಸಲಹೆಯನ್ನು ಸಂಪೂರ್ಣವಾಗಿ ಗಮನಿಸಿ ಅದನ್ನು ಕಾರ್ಯರೂಪಕ್ಕೆ ತರಲು ಪ್ರಯತ್ನ ಮಾಡುತ್ತೇನೆ.

13. ಅಧ್ಯಕ್ಷರ ಅಪ್ಪಣೆ ಮೇರೆಗೆ:

ವಿಷಯ : ಬಿ) ಬಿಜಾಪುರ ಬಾಗಲಕೋಟೆ ಜಿಲ್ಲೆಗಳ ಸಮಗ್ರ ನೀರಾವರಿ ಯೋಜನೆಗಳ ಬಗ್ಗೆ.

ಶ್ರೀ ಗೋವಿಂದಪ್ಪ ಎಂ. ಕಾರಜೋಳ (ಮುಧೋಳ) : ಮಾನ್ಯ ಅಧ್ಯಕ್ಷರೆ, ಸಂಸತ್ ಸದಸ್ಯರಾದ ಮಾನ್ಯ ಬಸವನಗೌಡರ ನೇತೃತ್ವದಲ್ಲಿ ಬಿಜಾಪುರ ಮತ್ತು ಬಾಗಲಕೋಟೆ ಸಮಗ್ರ ನೀರಾವರಿಯಾಗಬೇಕು ಮತ್ತು ಬಚಾವತ್ ತೀರ್ಪಿನಲ್ಲೇನು ನಮಗೆ ನೀರು ಹಂಚಿಕೆಯಾಗಿದೆ ಅದು ಸಂಪೂರ್ಣವಾಗಿ ಉಪಯೋಗವಾಗಬೇಕು. ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಯಲ್ಲಿ ಏನು ಏತ ನೀರಾವರಿಯಾಗಬೇಕೆಂದು ಈಗಾಗಲೆ ಧರಣಿ ಸತ್ಯಾಗ್ರಹವನ್ನು ಪ್ರಾರಂಭ ಮಾಡಿದ್ದಾರೆ, ಕಳೆದ ಹತ್ತು ಹದಿನೈದು ದಿವಸಗಳಿಂದ ಪಾದಯಾತ್ರೆ ಮಾಡಿದ್ದಾರೆ. ಅದೇ ರೀತಿ ಮುಧೋಳು ಏತ ನೀರಾವರಿ ಆಗಬೇಕೆಂದು ಹುನಗುಂದದಲ್ಲಿ ಹದಿನೈದು ದಿವಸಗಳಿಂದ ಧರಣಿ ಸತ್ಯಾಗ್ರಹ ನಡೆಯುತ್ತಿದೆ. ಈ ಹಿನ್ನೆಲೆಯಲ್ಲಿ ವಿಷಯವನ್ನು ಇವತ್ತು ಪ್ರಸ್ತಾಪ ಮಾಡುತ್ತೇನೆ. ಬ್ರಿಟಿಷ್ ಸರ್ಕಾರದ ಆಡಳಿತದಲ್ಲಿ ಐದು ಸಲ ಅಖಂಡ ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಯಲ್ಲಿ ಬರ ಬಂದಿತ್ತು. ಬಹಳ ಭೀಕರವಾದಂಥ ಬರ. ಆಗಿನ ಬ್ರಿಟಿಷ್ ಅಧಿಕಾರಿ ಏನು ಕೃಷಿ ಆಯುಕ್ತರಾಗಿದ್ದರು ಅವರು ಬ್ರಿಟಿಷ್ ಆಡಳಿತಕ್ಕೆ ಒಂದು ವರದಿಯನ್ನು ಸಲ್ಲಿಸಿದರು. ಭಾರತ ದೇಶದಲ್ಲಿ ಮೂರು ರಾಜ್ಯಗಳು worst ಬರಗಾಲವನ್ನು ಎದುರಿಸುತ್ತಿವೆ. ಪದೇ ಪದೇ ಬರಗಾಲಕ್ಕೆ ತುತ್ತಾಗುತ್ತಿದೆ. ಅನ್ನ ನೀರು ಇಲ್ಲದೆ ಜನ ಜಾನುವಾರುಗಳು ಸಾಯುತ್ತಿದ್ದಾರೆಂದು ವರದಿಯನ್ನು ಸಲ್ಲಿಸಿದರು. ಯಾವ ಹಿನ್ನೆಲೆಯಲ್ಲಿ ಆ ವರದಿಯನ್ನು ಸಲ್ಲಿಸಿದರು ಎಂದರೆ, ಈ ಅಖಂಡ ಜಿಲ್ಲೆ ನೀರಾವರಿಯಾಗಬೇಕು. ಜನರಿಗೆ ಉದ್ಯೋಗ ಸಿಗಬೇಕು. ಜನರಿಗೆ ಅನ್ನ ನೀರು ಸಿಗಬೇಕು ಎಂಬ ಕಳಕಳಿಯ ಹಿನ್ನೆಲೆಯಲ್ಲಿ ಅವರು ವರದಿಯನ್ನು ಸಲ್ಲಿಸಿದ್ದರು. ಕರ್ನಾಟಕದ ಬಿಜಾಪುರ ಜಿಲ್ಲೆ ಆಂಧ್ರಪ್ರದೇಶದ ಅನಂತಪುರ ಜಿಲ್ಲೆ ಮತ್ತು ರಾಜಾಸ್ಥಾನದ ಸಲಾಮ್‌ಪುರ್ ಜಿಲ್ಲೆ ಇವುಗಳು ಪದೇ ಪದೇ ಅತಿ ಬರಗಾಲಕ್ಕೆ ತುತ್ತಾಗುವ ಜಿಲ್ಲೆಗಳೆಂದು ಒಂದು ವರದಿಯನ್ನು ಸಲ್ಲಿಸಿದ್ದರು. ಆ ಐದು ಸಲ ಬರಗಾಲ ಬಂದಾಗ ಐದೂ ಬರಗಾಲಕ್ಕೆ ಒಂದೊಂದು ಹೆಸರನ್ನು ಇಟ್ಟರು. ಮೊದಲನೆ ಸಲ ಬರ ಬಂದಾಗ ಡೋಗಿ ಬರ ಎಂದು ಹೆಸರನ್ನಿಟ್ಟರು. ಡೋಗಿ ಬರ ಎಂದರೆ ಬಹುಶಃ ಯಾರಿಗೂ ಅರ್ಥವಾಗುವುದಿಲ್ಲ. ರೋಗಗಳು ಬಂದಾಗ ಪ್ರಾಣಿಗಳು ಹೇಗೆ ಅಡವಿಯಲ್ಲಿ ಬಿದ್ದು ಸಾಯುತ್ತವೆಯೋ, ಅವುಗಳು ಸತ್ತು ಬಿದ್ದಾಗ ಮಾಂಸ ಮತ್ತು ರಕ್ತವೆಲ್ಲಾ

ಕೊಳೆತು ಹೋಗಿ ಕೇವಲ ಎಲುಬು ಮಾತ್ರ ಉಳಿಯುತ್ತದೆಯೋ, ಅದೇ ರೀತಿಯಾಗಿ ಮನುಷ್ಯನ ಡೋಗಿಗಳು ಭೂಮಿ ತುಂಬಾ ಕಾಣುತ್ತಿದ್ದುವಂತೆ ಆ ಬರಗಾಲದಲ್ಲಿ ಅನ್ನ ಮತ್ತು ನೀರು ಇಲ್ಲದೆ ಲಕ್ಷೋಪಲಕ್ಷ ಜನ ಸತ್ತು ಹೋದರು. ಎರಡನೆಯ ಸಾರಿ. 'ಸಜ್ಜಿ' ಎಂಬುದು ಬಂದಿತ್ತು. ಯಾವ ಬೆಳೆಯನ್ನು ಬೆಳೆಯಲಾಗದೆ, ಬೇರೆ ರಾಜ್ಯದಲ್ಲಿ ಬೆಳೆದಂತಹ ಸಜ್ಜಿಯನ್ನು ತರಿಸಿ, ಗಂಜಿ ಮಾಡಿ ಹಾಕಿ ಜನರನ್ನು ಬದುಕಿಸಲಾಯಿತು. ಇದೊಂದು ಬರವಾಯಿತು. ರಾಗಿ ಬರ' ಎಂದು ಮೂರನೆಯ ಸಲ ಬರ ಬಂದಿತ್ತು. 'ರಾಗಿ ಬರ' ಎಂದರೆ, ಯಾವ ಧಾನ್ಯವೂ ಕೂಡ ಸಿಗದೆ ಕೇವಲ ರಾಗಿ ತರಿಸಿ, ರಾಗಿ ಹಿಟ್ಟು ಮಾಡಿ, ಗಂಜಿ ಮಾಡಿ......

ಶ್ರೀ ಧರ್ಮ ಸಿಂಗ್ : ಇವೆಲ್ಲಾ ಏಕೆ?

ಶ್ರೀ ಗೋವಿಂದ ಎಂ. ಕಾರಜೋಳ : ಇದೆಲ್ಲಾ ಏಕೆ ಹೇಳುತ್ತೇನೆ ಎಂದರೆ, ನಮ್ಮ ಪರಿಸ್ಥಿತಿ ಸ್ವಲ್ಪ ಗಂಭೀರವಾಗಿದೆ. ಟೈಮ್ ಆಗುತ್ತದೆ ಎನ್ನುವುದಾದರೆ, ಬೇಕಾದರೆ ಇದನ್ನು ನಾಳೆ ಕಂಟಿನ್ಯೂ ಮಾಡೋಣ. ಅಲ್ಲಿ ತುಂಬಾ ಗಂಭೀರ ಪರಿಸ್ಥಿತಿ ಇದೆ. ತಾವು ಮುಖ್ಯಮಂತ್ರಿಗಳಾಗಿರುವಾಗ ಆಗದಿದ್ದರೆ, ಇವುಗಳು ಯಾವಾಗ ಆಗುತ್ತವೆ? ಆಯಿತು, ಬೇಕಾದರೆ ಇದನ್ನೆಲ್ಲಾ ಬಿಡುತ್ತೇನೆ. 'ನೀರಿನ ಬರ' ಕೂಡ ನಮ್ಮಲ್ಲಿ ಬಂದು ಹೋಗಿದೆ.

(ಈ ಹಂತದಲ್ಲಿ ಮಾನ್ಯ ಎ.ಟಿ. ರಾಮಸ್ವಾಮಿಯವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಇವತ್ತು ನಾನು ಸರ್ಕಾರಕ್ಕೆ ಒಂದು ವಿನಂತಿಯನ್ನು ಮಾಡುತ್ತೇನೆ. 'ಎ' ಸ್ಕೀಮ್‌ನಲ್ಲಿ 734 ಟಿ.ಎಂ.ಸಿ.ಯಷ್ಟು ನೀರೇನು ಅಲೋಕೇಷನ್ ಆಗಿತ್ತೋ, ಅದರಲ್ಲಿ 5 ಟಿ.ಎಂ.ಸಿ. ನೀರನ್ನು ಮದ್ರಾಸ್ ನಗರದ ಕುಡಿಯುವ ನೀರಿಗಾಗಿ ಬಿಟ್ಟು ಕೊಟ್ಟಿದ್ದೇವೆ. ಉಳಿದ 729 ಟಿ.ಎಂ.ಸಿ.ಯಲ್ಲಿ ಬಿಜಾಪುರ, ರಾಯಚೂರು, ಗುಲ್ಬರ್ಗಾ ಮತ್ತು ಬಾಗಲಕೋಟೆ, ಈ ನಾಲ್ಕೂ ಜಿಲ್ಲೆಗಳಿಗೆ ಸೇರಿ ಆಲಮಟ್ಟಿ ಜಲಾಶಯ ಮತ್ತು ನಾರಾಯಣ ಪುರ ಜಲಾಶಯಗಳಲ್ಲಿ ನೀರನ್ನೇನು ನಾವು ಹಿಡಿದಿಟ್ಟಿದ್ದೇವೆಯೋ, ಆ ನೀರಿನಲ್ಲಿ ಬಿಜಾಪುರ ಜಿಲ್ಲೆಯ ಏತ ನೀರಾವರಿ ಯೋಜನೆಗಳು ಆಗಬೇಕಾಗಿತ್ತು, ಆಲಮಟ್ಟಿ ಜಲಾಶಯದಲ್ಲಿ ನಾವು 173 ಟಿ.ಎಂ.ಸಿ. ನೀರನ್ನು ಸಂಗ್ರಹ ಮಾಡಿದ್ದೇವೆ. ಅದರ ಬಳಕೆ ಇವತ್ತಿಗೂ ಕೂಡ ಪೂರ್ತಿಯಾಗಿಲ್ಲ. ಹಿಡಿದಿಟ್ಟಿದ್ದೇವೆ ಎಂದಷ್ಟೇ ನಾವು ಸಂತೋಷ ಪಟ್ಟಿದ್ದೇವೆ. 173 ಟಿ.ಎಂ.ಸಿ. ನೀರನ್ನು ಉಪಯೋಗ ಮಾಡಿಕೊಂಡು. 6 ಲಕ್ಷದ 22 ಸಾವಿರ ಹೆಕ್ಟೇರುಗಳಷ್ಟು ಭೂಮಿ ಈಗಾಗಲೇ ನೀರಾವರಿಯಾಗಬೇಕಾಗಿತ್ತು. ಆದರೆ ಕೇವಲ 4 ಲಕ್ಷ 62 ಸಾವಿರ ಹೆಕ್ಟೇರುಗಳು ಮಾತ್ರ ಈಗ ನೀರಾವರಿಯಾಗಿದೆ. ಇನ್ನೂ 1 ಲಕ್ಷ 55 ಸಾವಿರ ಹೆಕ್ಟೇರುಗಳ ಭೂಮಿಗೆ ನೀರಾವರಿಯಾಗಬೇಕಾಗಿದೆ. ಈ ಸಂದರ್ಭದಲ್ಲಿ ನಾನು ಬಿಜಾಪುರ ಮತ್ತು ಬಾಗಲಕೋಟೆ ಒಳಗೊಂಡ ಬಿಜಾಪುರ ಅಖಂಡ ಜಿಲ್ಲೆಯ ಬಗ್ಗೆ ನಾನು ಸರ್ಕಾರದ ಗಮನವನ್ನು ಸೆಳೆಯಲಿಕ್ಕೆ ಪ್ರಯತ್ನ ಮಾಡುತ್ತೇನೆ. 'ಎ' ಸ್ಕೀಮ್‌ನಲ್ಲಿ ಹಂಚಿಕೆಯಾದಂತಹ ನೀರಿನಲ್ಲಿ ಯೋಜನೆಗಳು ಆಗಬೇಕಾಗಿತ್ತು. ನಾರಾಯಣಪುರ ಎನ್.ಎಲ್.ಬಿ.ಸಿ.ಯ 114.450 ಟಿ.ಎಂ.ಸಿ. ನೀರಿನಿಂದ 4 ಲಕ್ಷ ಹೆಕ್ಟೇರುಗಳಷ್ಟು ಭೂಮಿ ನೀರಾವರಿಯಾಗಬೇಕಾಗಿತ್ತು. ಅದು ಪೂರ್ತಿಯಾಗಲಿಲ್ಲ. ಎ.ಎಲ್.ಬಿ.ಸಿ.ಯಿಂದ ಹಂಚಿಕೆಯಾಗಿರುವ 4.5 ಟಿ.ಎಂ.ಸಿ. ನೀರಿನಲ್ಲಿ ಕೇವಲ 1.48 ಟಿ.ಎಂ.ಸಿ. ಮಾತ್ರ ಉಪಯೋಗವಾಗಿದೆ. ಅದರಿಂದ ನೀರಾವರಿ ಏನೂ ಆಗಿಲ್ಲ. ಎನ್.ಆರ್.ಬಿ.ಸಿ.ನಲ್ಲಿ 23 ಟಿ.ಎಂ.ಸಿ. ನೀರು ಅಲೋಕೇಷನ್ ಆಗಿದೆ. ಅದರಿಂದ 84 ಸಾವಿರ ಹೆಕ್ಟೇರುಗಳಷ್ಟು ಭೂಮಿ ನೀರಾವರಿಯಾಗಬೇಕಾಗಿತ್ತು. ಆದರೆ ಕೇವಲ 54 ಸಾವಿರ ಹೆಕ್ಟೇರುಗಳಷ್ಟು ಮಾತ್ರ ನೀರಾವರಿಯಾಗಿದೆ. ಇಂಡಿ ಲಿಫ್ಟ್ ಇರಿಗೇಷನ್‌ನಲ್ಲಿ 11.48 ಟಿ.ಎಂ.ಸಿ.

ನೀರು ಅಲೋಕೇಷನ್ ಆಗಿದೆ. 42 ಸಾವಿರ ಹೆಕ್ಟೇರುಗಳಷ್ಟು ಭೂಮಿ ನೀರಾವರಿಯಾಗಬೇಕಾಗಿತ್ತು. ಆದರೆ ಇಲ್ಲಿ ಸಾಧನೆ ಶೂನ್ಯವಾಗಿದೆ. ರಾಂಪುರ ಲಿಫ್ಟ್ ಇರಿಗೇಷನ್‌ನಲ್ಲಿ 5.55 ಟಿ.ಎಂ.ಸಿ. ನೀರು ಅಲೋಕೇಷನ್ ಆಗಿದೆ. 20 ಸಾವಿರ ಹೆಕ್ಟೇರುಗಳಷ್ಟು ಭೂಮಿ ನೀರಾವರಿಯಾಗಬೇಕಾಗಿತ್ತು. ಕೇವಲ 6 ಸಾವಿರ ಹೆಕ್ಟೇರುಗಳು ಮಾತ್ರ ನೀರಾವರಿಯಾಗಿದೆ. Extension of Almatti left bank canal ಗೆ 1.11 ಟಿ.ಎಂ.ಸಿ. ನೀರು ಅಲೋಕೇಷನ್ ಆಗಿದೆ. 4 ಸಾವಿರ ಹೆಕ್ಟೇರುಗಳಷ್ಟು ಭೂಮಿ ನೀರಾವರಿಯಾಗಬೇಕಾಗಿತ್ತು. ಆದರೆ ಅದು ಇದುವರೆಗೂ ಆಗಿಲ್ಲ. ಎ.ಆರ್.ಬಿ.ಸಿ.ನಲ್ಲಿ 4.41 ಟಿ.ಎಂ.ಸಿ. ನೀರು ಅಲೋಕೇಷನ್ ಆಗಿದೆ. 16 ಸಾವಿರ ಹೆಕ್ಟೇರುಗಳಷ್ಟು ಭೂಮಿ ನೀರಾವರಿಯಾಗಬೇಕಾಗಿತ್ತು. ಆದರೆ ಕೇವಲ 16.00 ಎಕರೆ ಮಾತ್ರ ನೀರಾವರಿಯಾಗಿದೆ. ಮುಳವಾಡ ಲಿಫ್ಟ್ ಇರಿಗೇಷನ್‌ನಲ್ಲಿ 8.45 ಟಿ.ಎಂ.ಸಿ. ನೀರು ಅಲೋಕೇಷನ್ ಆಗಿದೆ. 30,850 ಹೆಕ್ಟೇರುಗಳಷ್ಟು ಭೂಮಿ ನೀರಾವರಿಯಾಗಬೇಕಾಗಿತ್ತು. ಆದರೆ ಅದು ಇದುವರೆಗೂ ಆಗಲಿಲ್ಲ. ರಾಮತಾಳ ಲಿಫ್ಟ್ ಇರಿಗೇಷನ್ ಕೂಡ ಎ ಸ್ಕೀಮ್‌ನಲ್ಲಿ ಸೇರಿದೆ. 5.72 ಟಿ.ಎಂ.ಸಿ. ನೀರು ಅದಕ್ಕಾಗಿ ಅಲೋಕೇಷನ್ ಆಗಿದೆ. 26 ಸಾವಿರ ಹೆಕ್ಟೇರುಗಳನ್ನು ಭೂಮಿ ನೀರಾವರಿಯಾಗಬೇಕಾಗಿತ್ತು. ಆದರೆ ಸಾಧನೆ ಶೂನ್ಯವಾಗಿದೆ. ಮದೋಳ್ ಏತ ನೀರಾವರಿಗೆ 5.84 ಟಿ.ಎಂ.ಸಿ. ನೀರು ಹಂಚಿಕೆಯಾಗಿದೆ. 26 ಸಾವಿರ ಹೆಕ್ಟೇರುಗಳನ್ನು ಭೂಮಿ ನೀರಾವರಿಯಾಗಬೇಕಾಗಿತ್ತು. ಆದರೆ ಇದುವರೆಗೂ ಏನೂ ಆಗಿಲ್ಲ. ಇನ್ನೂ 9 ಟಿ.ಎಂ.ಸಿ. ನೀರನ್ನು ನಾವು ಮುಂದೆ ಎರಡನೇ ಹಂತದ ಮರೋಳ ಏತ ನೀರಾವರಿ ಯೋಜನೆಗೆ ಕಾಯ್ದಿರಿಸಬೇಕಾಗುತ್ತದೆ. ಅಲೋಕೇಷನ್ ಮಾಡಬೇಕಾಗುತ್ತದೆ. ಅದರಿಂದ 38ಸಾವಿರ ಹೆಕ್ಟೇರುಗಳಷ್ಟು ಭೂಮಿ ನೀರಾವರಿಯಾಗಬೇಕು. ಅದೂ ಕೂಡ ಆಗಿಲ್ಲ. ಇವತ್ತು ಏನಾಗಿದೆ ಎಂದರೆ, ಬಿಜಾಪುರ ಜಿಲ್ಲೆಯಲ್ಲಿ ಮತ್ತು ಬಾಗಲಕೋಟೆ ಜಿಲ್ಲೆಯಲ್ಲಿ 173 ಹಳ್ಳಿಗಳನ್ನು ನಾವು ಮುಳುಗಿಸಿದ್ದೇವೆ. ಸುಮಾರು 3 ಲಕ್ಷ 25 ಸಾವಿರ ಹೆಕ್ಟೇರುಗಳಷ್ಟು ಫಲವತ್ತಾದ ಭೂಮಿಯನ್ನು ಕಳೆದುಕೊಂಡು ಜನ ನಿರ್ಗತಿಕರಾಗಿದ್ದಾರೆ. ಅವರು ಇವತ್ತು ರಸ್ತೆ ಮೇಲೆ ನಿಂತಿದ್ದಾರೆ. ಅಂತಹವರಿಗೆ ಈ ಯೋಜನೆಯ ಯಾವುದೇ ಲಾಭ ಆಗಲಿಲ್ಲ. ಅದಕ್ಕಾಗಿ ನಾನು ಸರ್ಕಾರಕ್ಕೆ ಒತ್ತಾಯ ಮಾಡುವುದೇನೆಂದರೆ, ಈ ಯೋಜನೆಯನ್ನು ಪೂರ್ಣಗೊಳಿಸಬೇಕು. ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಬರತಕ್ಕಂಥ ಸುಮಾರು 15 ಏತ ನೀರಾವರಿ ಯೋಜನೆಗಳನ್ನು ಸರ್ಕಾರ ಜಾರಿಗೊಳಿಸಬೇಕು. ಅದಕ್ಕಾಗಿ 4 ಸಾವಿರ ಕೋಟಿ ರೂಪಾಯಿಗಳಷ್ಟು ಹಣ ಬೇಕಾಗುತ್ತದೆ. ಇದಕ್ಕಾಗಿ ಈ ವರ್ಷದ ಅಂದರೆ 2005–06ನೇ ಸಾಲಿನ ಬಜೆಟ್‌ನಲ್ಲಿ ಸುಮಾರು 2,500 ಕೋಟಿ ರೂ.ಗಳಷ್ಟು ಹಣವನ್ನು ನಿಗದಿ ಮಾಡಬೇಕು ಮತ್ತು ಕೆಲಸಗಳನ್ನು ನಿಗದಿತ ಅವಧಿಯೊಳಗಾಗಿ ಪೂರ್ಣಗೊಳಿಸಬೇಕೆಂದು ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇನೆ. ಇನ್ನು ಎರಡನೆಯದಾಗಿ, (ಎ) ಸ್ಕೀಮ್‌ನಲ್ಲಿ ಹಂಚಿಕೆಯಾದಂತಹ ಪೂರ್ಣ ನೀರನ್ನು ಬಳಸಿ ಮುಳವಾಡ ಏತ ನೀರಾವರಿಯಾಗಲಿ, ಮರೋಳ ಏತ ನೀರಾವರಿಯಾಗಲಿ, ಚಿಮ್ಮಲಗಿ ಲಿಫ್ಟ್ ಇರಿಗೇಷನ್ ಆಗಲಿ, ಹೆರಕಲ್, ಇಂಡಿ ಈ ಎಲ್ಲವುಗಳನ್ನೂ ಕೂಡ ಸರ್ಕಾರ ಆದ್ಯತೆ ಮೇಲೆ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ. ನಮ್ಮಲ್ಲಿ ಕಳೆದ 3–4 ವರ್ಷಗಳಿಂದ ಸತತವಾಗಿ ಬರಗಾಲ ಬಿದ್ದಿದ್ದರಿಂದ ಕುಡಿಯುವ ನೀರಿನ transportation ಗಾಗಿ ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಗಳನ್ನೊಳಗೊಂಡ ಅಖಂಡ ಜಿಲ್ಲೆಯಲ್ಲಿ ಸುಮಾರು 40 ಕೋಟಿ ರೂ.ಗಳನ್ನು ಖರ್ಚು ಮಾಡಲಾಗಿದೆ. ಅದರ ಬಲವಾಗಿ ಸರ್ಕಾರ ಕೆರೆಗಳನ್ನು ತುಂಬಿಸುವಂತಹ ಕೆಲಸ ಮಾಡಬೇಕು. ಕೆರೆಗಳನ್ನು ತುಂಬಿಸಲಿಕ್ಕೆ ಹೆಚ್ಚಿನ ನೀರೇನೂ ಬೇಕಾಗಿಲ್ಲ. "ಎ" ಸ್ಕೀಮ್‌ನಲ್ಲಿ

ಅಲೋಕೇಷನ್ ಆದಂತಹ ನೀರಿನಲ್ಲೇ 1.2 ಟಿ.ಎಂ.ಸಿ.ಯಷ್ಟು ನೀರನ್ನು ನಾವು ಅದಕ್ಕಾಗಿ ಉಪಯೋಗ ಮಾಡಬಹುದು. ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಗಳನ್ನೊಳಗೊಂಡ ಅಖಂಡ ಜಿಲ್ಲೆಯಲ್ಲಿ Medium irrigation tanks ಮತ್ತು Minor irrigation tanks ಸೇರಿ 160 ಕೆರೆಗಳಿವೆ. ಅವುಗಳನ್ನು ತುಂಬಿಸಲಿಕ್ಕೆ ಒಂದು ಯೋಜನೆಯನ್ನು ರೂಪಿಸಿದರೆ, ಅದರಿಂದ ಸರ್ಕಾರಕ್ಕೇನೂ ಬಹಳ ಹೊರೆಯಾಗುವುದಿಲ್ಲ. ಅದಕ್ಕಾಗಿ ಕೇವಲ 200 ಕೋಟಿ ರೂ.ಗಳು ಮಾತ್ರ ಖರ್ಚಾಗಬಹುದು. ಅದರಿಂದ ಅಂತರ್ಜಲ ಹೆಚ್ಚಾಗುತ್ತದೆ ಮತ್ತು ಕುಡಿಯುವ ನೀರಿನ ಸಮಸ್ಯೆ ಬಗೆಹರಿಯುತ್ತದೆ. ಸರ್ಕಾರ ಕಳೆದ 3-4 ವರ್ಷಗಳಿಂದ ಸುಮಾರು 40 ಕೋಟಿ ರೂ.ಗಳಷ್ಟು ಹಣವನ್ನು ಕುಡಿಯುವ ನೀರಿನ Transporatation ಗಾಗಿ ವ್ಯರ್ಥವಾಗೇನು ಖರ್ಚು ಮಾಡಿದೆಯೋ, ಆ ಹಣವೂ ಕೂಡ ಉಳಿಯುತ್ತದೆ. ಅದೇ ಖರ್ಚಿನಲ್ಲಿ ನಾವು ಮಾಡಲಿಕ್ಕೆ ಸಾಧ್ಯವಿದೆ. ಬಿಜಾಪುರ ಜಿಲ್ಲೆ ಪದೇ ಪದೇ ಬರಗಾಲಕ್ಕೆ ತುತ್ತಾಗತಕ್ಕಂಥ ಜಿಲ್ಲೆಯಾಗಿದೆ. ಅದಲ್ಲದೆ, ಇನ್ನೊಂದು ಹುನ್ನಾರ ನಡೆದಿದೆ. ದಿವಂಗತ ಎಸ್.ಜಿ. ಬಾಳೇಕುಂದ್ರಿಯವರು ನೀರಾವರಿ ಕಾರ್ಯದರ್ಶಿಯಾಗಿದ್ದಂಥ ಸಂದರ್ಭದಲ್ಲಿ ಎ ಸ್ಕೀಮ್ ಮತ್ತು ಬಿ ಸ್ಕೀಮ್‌ಗೆ ನೀರಿನ ಅಲೋಕೇಷನ್ ಮಾಡಿದ್ದರು. ಬಿ ಸ್ಕೀಮಿನ ನೀರು ಇನ್ನೂ ಹಂಚಿಕೆಯಾಗಿಲ್ಲ. ಆದರೂ ಸಹ ಅವರು ಅದಕ್ಕಾಗಿ ಮಾಸ್ಟರ್ ಪ್ಲಾನ್‌ವೊಂದನ್ನು ರೆಡಿ ಮಾಡಿ ಇಟ್ಟಿದ್ದರು. ಅವರು ಮುಳವಾಡಕ್ಕೆ 56 ಟಿ.ಎಂ.ಸಿ. ಹಂಚಿಕೆ ಮಾಡಿದ್ದರು. ಚಿಮ್ಮಲಗಿ ಏತ ನೀರಾವರಿಗೆ 25.50 ಟಿ.ಎಂ.ಸಿ. ಹಂಚಿಕೆ ಮಾಡಿದ್ದರು. ರಾಂಪುರ ಏತ ನೀರಾವರಿಗೆ 4 ಟಿ.ಎಂ.ಸಿ. ಹಂಚಿಕೆ ಮಾಡಿದ್ದರು. ಮುಳವಾಡ, ಇಂಡಿ ಮತ್ತು ಕೆರಕಲ್ ಲಿಫ್ಟ್ ಇರಿಗೇಷನ್ 10. ಟಿ.ಎಂ.ಸಿ. ನೀರನ್ನು ಕಾಯ್ದಿರಿಸಿದ್ದರು. ಅದನ್ನು ಕಡಿಮೆಗೊಳಿಸಿ ಮತ್ತೊಂದು ರಿವೈಸ್ಡ್ ಮಾಸ್ಟರ್ ಪ್ಲಾನ್‌ವೊಂದನ್ನು ರೆಡಿ ಮಾಡಲಾಗಿದೆ. ಅದರಿಂದ ಬಿಜಾಪುರ ಜಿಲ್ಲೆಯ ಏತ ನೀರಾವರಿ ಯೋಜನೆಗಳಿಗೆ ಹಂಚಿಕೆಯಾಗಿದ್ದ ಸುಮಾರು 32 ಟಿ.ಎಂ.ಸಿ. ಯಷ್ಟು ನೀರು ತಪ್ಪಿ ಹೋಗುತ್ತದೆ. ಅದರಿಂದ ಜಿಲ್ಲೆಗೆ ನಷ್ಟವಾಗುತ್ತದೆ ಹಾಗೂ ಬರಗಾಲ ಪ್ರದೇಶ ಶಾಶ್ವತವಾಗಿ ಬರಗಾಲವಾಗಿಯೇ ಉಳಿಯುತ್ತದೆ. ಅದಕ್ಕಾಗಿ ನಾನು ಸರ್ಕಾರಕ್ಕೆ ಇನ್ನೊಂದು ಮನವಿಯನ್ನು ಮಾಡಲಿಕ್ಕೆ ಪ್ರಯತ್ನ ಮಾಡುತ್ತೇನೆ. ಈಗಾಗಲೇ ಕೃಷ್ಣಾ ನದಿಯಲ್ಲಿ ಹರಿಯತಕ್ಕಂಥ surplus water allocation ಗಾಗಿ ಸರ್ಕಾರ ಒಂದು ಕಮಿಷನ್ ಅನ್ನು ನೇಮಿಸಿದೆ. ಕಮಿಷನ್ ವರದಿ ಬಂದು, ಅಲೋಕೇಷನ್ ಆಗುವುದು ಲೇಟಾಗಬಹುದು. ಆದರೆ ನಮ್ಮ ಪಾಲಿಗೆ recent ಗೇಜಿಂಗ್ ಪ್ರಕಾರ 278 ಟಿ.ಎಂ.ಸಿ. ನೀರು ನಮಗೆ ಬರುತ್ತದೆಂದು ಒಂದು ಅಂದಾಜು ಇದೆ. ಆ ಅಂದಾಜಿನಲ್ಲಿ ಸುಮಾರು ಶೇಕಡ 66ರಷ್ಟು ನೀರು ನಾವು ಏತ ನೀರಾವರಿ ಯೋಜನೆಗಳ ಮೂಲಕವೇ ಉಪಯೋಗ ಮಾಡಿಕೊಳ್ಳಬೇಕಾಗುತ್ತದೆ. ಗ್ರಾವಿಟಿ ಮೇಲೆ ಮಾಡತಕ್ಕಂಥದ್ದು ಎ ಸ್ಕೀಮ್‌ನಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಮುಗಿದು ಹೋಗಿದೆ. ಅದಕ್ಕಾಗಿ ನಾನು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುವುದೇನೆಂದರೆ, ಬಿಜಾಪುರ ಜಿಲ್ಲೆಯಲ್ಲಿ ಬರತಕ್ಕಂಥ ಏತ ನೀರಾವರಿ ಯೋಜನೆಗಳಿಗೆ ಹೆಚ್ಚಿನ ಆದ್ಯತೆಯನ್ನು ಕೊಟ್ಟು, ಹಣ ಕೊಟ್ಟು. ಆ ಕೆಲಸಗಳನ್ನು ಮಾಡಬೇಕು. ನೀರು ಹಂಚಿಕೆಯಾದ ನಂತರವೇ ಮಾಡಬೇಕೆಂದರೆ ಸಾಧ್ಯವಾಗುವುದಿಲ್ಲ. ಅದಕ್ಕೆ ಮಾಡಬೇಕಾದಂತಹ ಮೂಲಭೂತ ವ್ಯವಸ್ಥೆಗಳನ್ನು ಇಂದಿನಿಂದಲೇ ಮಾಡಿಕೊಂಡರೆ, ಅಲೋಕೇಷನ್ ಆದ ನಂತರ ಕೂಡಲೇ ನಾವು ಯೋಜನೆಯನ್ನು ಪ್ರಾರಂಭ ಮಾಡಲಿಕ್ಕೆ ಅನುಕೂಲವಾಗುತ್ತದೆ. ಅದಕ್ಕಾಗಿ ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಮತ್ತು ನೀರಾವರಿ ಸಚಿವರಿಗೆ ವಿನಂತಿ ಮಾಡಿಕೊಳ್ಳುತ್ತೇನೆ. ತಾವಿಬ್ಬರೂ ಕೃಷ್ಣಾ ಕೊಳ್ಳದಿಂದ ಬಂದಂತಹವರಾಗಿದ್ದೀರಿ. ಬರದ ಅರಿವು ತಮಗೆ ಇದೆ ಮತ್ತು ಈ ರಾಜ್ಯದ ಉನ್ನತ ಸ್ಥಾನದಲ್ಲಿ....

184-20

ಛೇರ್ಮನ್ : ಬಲಭಾಗದಲ್ಲಿ ನಡೆಯುತ್ತಿರುವ ಚರ್ಚೆಯಿಂದ ಸದನದ ಕಾರ್ಯಕಲಾಪಕ್ಕೆ ತೊಂದರೆಯಾಗುತ್ತಿದೆ. ದಯಮಾಡಿ ಸಹಕರಿಸಿ.

ಶ್ರೀ ಗೋವಿಂದ ಎಂ. ಕಾರಜೋಳ : ತಾವು ಇವತ್ತು ಈ ರಾಜ್ಯದ ಉನ್ನತ ಸ್ಥಾನದಲ್ಲಿದ್ದೀರಿ. ತಾವು ಮನಸ್ಸು ಮಾಡಿದರೆ ಈ ಯೋಜನೆಗಳಿಗೆ ಅನುಕೂಲವಾಗುತ್ತದೆ. ಇದನ್ನು ಮಾಡುವುದರಿಂದ ತಾವು ಇತಿಹಾಸದ ಪುಟಗಳಲ್ಲಿ ಉಳಿಯುತ್ತೀರಿ, ಇಂತಹವರ ಕಾಲದಲ್ಲಿ ನೀರಾವರಿಯಾಯಿತು ಎಂದು ಜನ ನೆನಸುತ್ತಾರೆ. ಇದರಿಂದ ಬರದ ಶಾಶ್ವತವಾದಂತಹ ಹಣೆಪಟ್ಟೆಯನ್ನು ಕಟ್ಟಿಕೊಂಡಂತಹ ಬಿಜಾಪುರ ಜಿಲ್ಲೆ ಬರಗಾಲದಿಂದ ಮುಕ್ತಿಯಾಗುತ್ತದೆ. ಅದಕ್ಕಾಗಿ ನಾನು ಮಾನ್ಯ ಮುಖ್ಯಮಂತ್ರಿಗಳಿಗೂ ಮತ್ತು ನೀರಾವರಿ ಮಂತ್ರಿಗಳಿಗೂ ವಿನಂತಿ ಮಾಡಿಕೊಳ್ಳುತ್ತೇನೆ. ಇದೇ ವರ್ಷ ಯೋಜನೆಗೆ 4,000 ಕೋಟಿ ರೂಪಾಯಿ ವ್ಯವಸ್ಥೆ ಮಾಡಬೇಕು. ಮತ್ತು ನಾಳೆ ಬರತಕ್ಕಂತಹ ಬಜೆಟ್‌ನಲ್ಲಿ 205–06ನೇ ಸಾಲಿನ ಬಜೆಟ್‌ನಲ್ಲಿ ಎರಡೂವರೆ ಸಾವಿರ ಕೋಟಿ ರೂಪಾಯಿ ಹಣ ಕೊಡಬೇಕು. ಮತ್ತು 32 ಟಿಎಂಸಿ ನೀರನ್ನು ರಿವ್ಯೆಸ್ಡ್ ಪ್ಲ್ಯಾನ್ ಮಾಡಿ ಬೇರೆ ಕಡೆ ಅಲೋಕೇಷನ್ ಮಾಡುವುದಕ್ಕೆ ಏನು ಹೊರಟಿದ್ದಾರೆ. ಅದನ್ನು ಕೈ ಬಿಡಬೇಕು. ಮತ್ತು ಕೆರೆಗಳು ತುಂಬಿಸುವಂತಹ ಯೋಜನೆ ಬಹಳ ದೊಡ್ಡದೇನೂ ಅಲ್ಲ. 160 ಕೆರೆಗಳಿಗೆ 200 ಕೋಟಿ ರೂಪಾಯಿ ಖರ್ಚಾಗುತ್ತದೆ. ಈ ಯೋಜನೆಯಲ್ಲಿಯೇ ಅದನ್ನು ಸೇರಿಸಿ. ಆಲಮಟ್ಟಿ ಪ್ರಾಜೆಕ್ಟ್‌ಗೆ ಕೃಷ್ಣ ಮೇಲ್ದಂಡೆ ಯೋಜನೆಗೆ ಸುಮಾರು 10,000 ಕೋಟಿ ರೂಪಾಯಿಗಳಷ್ಟು ನಾವು ಈಗಾಗಲೇ ಖರ್ಚು ಮಾಡಿದ್ದೇವೆ. ಇನ್ನು 200 ಕೋಟಿ ರೂಪಾಯಿಗಳಿಗೆ ಯೋಜನೆ ಅದರೊಳಗೆ ಅಳವಡಿಸಿಕೊಂಡು ಮಾಡಿದರೆ ಈ ಜನರಿಗೆ ಉಪಕಾರ ಮಾಡಿದ ಹಾಗಾಗುತ್ತದೆ ಎಂದು ಈ ಸಂದರ್ಭದಲ್ಲಿ ಒತ್ತಾಯ ಮಾಡಿ, ಮುಖ್ಯ ಮಂತ್ರಿಗಳು ಮತ್ತು ನೀರಾವರಿ ಸಚಿವರಲ್ಲಿ ನಿರ್ದಿಷ್ಟವಾದ ಉತ್ತರವನ್ನು ಹೇಳಿ, ಅಲ್ಲಿ ಜನ ಏನು ಆಮರಣಾಂತರ ಉಪವಾಸ ಮಾಡುತ್ತಿದ್ದಾರೆ ಅದನ್ನು ಕೈ ಬಿಡಿಸುವ ಕೆಲಸ ಮಾಡಬೇಕು. ಜನರಿಗೆ ಉಪಕಾರ ಮಾಡಬೇಕೆಂದು ವಿನಂತಿ ಮಾಡಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಮತ್ತು ನೀರಾವರಿ ಸಚಿವರಲ್ಲಿ ಒಂದೇ ಒಂದು ಕೇಳುವುದು, ತಮಗೆ ಗೊತ್ತಿದೆ. ಮಾನ್ಯ ಬಸವನಗೌಡ ಪಾಟೀಲ್ ಯತ್ನಾಳ್ ನೇತೃತ್ವದಲ್ಲಿ ಕಳೆದ 15–20 ದಿವಸಗಳಿಂದ ಪಾದಯಾತ್ರೆ ನಡೆಯುತ್ತಿದೆ. ಸತ್ಯಾಗ್ರಹ ನಡೆಯುತ್ತಿದೆ. ನಿನ್ನೆಯಿಂದ ಆಮರಣ ಉಪವಾಸ ನಡೆಯುತ್ತಿದೆ. ನೀವಿಬ್ಬರೂ ಅದೇ ಜಿಲ್ಲೆಯಿಂದ ಬಂದಂತಹವರು. ಬಿಜಾಪುರ ಜನತೆಯ ಯೋಗಕ್ಷೇಮ ವಿಚಾರಿಸಬೇಕಾದುದು ಕೃಷ್ಣ ಬೇಸಿನ್‌ನಿಂದ ಬಂದಿರುವ ನಿಮ್ಮ ಕರ್ತವ್ಯ. ನೀವು ದಿನಾಂಕ 1.2.05 ಅಂದರೆ ಇವತ್ತೇ ಕೊಟ್ಟಿರುವ ಉತ್ತರ ಆಲಮಟ್ಟಿ ಅಣೆಕಟ್ಟಿನಿಂದ ಬಿಜಾಪುರ ಜಿಲ್ಲೆಗೆ ಎಷ್ಟು ಎಕರೆ ಜಮೀನಿಗೆ ನೀರು ಒದಗಿಸಬೇಕಾಗಿದೆ ಎಂದರೆ 4,39,459 ಎಕರೆಗೆ ನೀವು ನೀರು ಕೊಡಬೇಕು. ಅದರಲ್ಲಿ ಎಷ್ಟು ಎಕರೆ ಜಮೀನಿಗೆ ಈಗಾಗಲೇ ನೀರನ್ನು ಒದಗಿಸಲಾಗಿದೆ. ಎಂದರೆ, ಇವತ್ತು ಕೊಟ್ಟ ಉತ್ತರದಲ್ಲಿ 26,245 ಎಕರೆಗೆ ನೀವು ನೀರು ಕೊಟ್ಟಿದ್ದೀರಿ. ಅಂದರೆ 50 ಪರ್ಸೆಂಟ್ ಇದುವರೆಗೆ ನೀವು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಉಳಿದ ಕಾಮಗಾರಿಗಳನ್ನು 2006ರ ಮಾರ್ಚ್ ಒಳಗೆ ಪೂರ್ಣಗೊಳಿಸಲು ಟೆಂಡರ್ ಪ್ರಕ್ರಿಯೆ ಹಾಗೂ ಟೆಂಡರ್ ಕಾಮಗಾರಿಗಳು

ಪ್ರಗತಿಯಲ್ಲಿ ವಿವಿಧ ಹಂತದಲ್ಲಿ ಇವೆ. ಇನ್ನೂ 50 ಪರ್ಸೆಂಟ್ ಮೇಲೆ ನೀರು ಕೊಡಬೇಕು. ಈ

ಆಮೆ ವೇಗದಲ್ಲಿ ನೀವು ಮುಂದುವರಿಸಿದರೆ 2006ಕ್ಕೆ ಎಲ್ಲಿ ಮುಗಿಯುತ್ತದೆ? ಇದು ಮೊದಲನೆಯದು. ಎರಡನೆಯದು ಆಲಮಟ್ಟಿ ಜಲಾಶಯದ ಬಿಜಾಪುರ ಜಿಲ್ಲೆಯ ಕೆರೆಗಳಿಗೆ ನೀರು ತುಂಬುವ ವಿಚಾರ ಸರ್ಕಾರದ ಮುಂದೆ ಇದೆಯೇ ಎಂದು ಕೇಳಿಸುವುದಕ್ಕೆ ಕೆರೆಗಳಿಗೆ ನೀರು ತುಂಬಿಸುವ ಕುರಿತು ಕೃಷ್ಣ ಮೇಲ್ದಂಡೆ ಯೋಜನೆಯಲ್ಲಿ ಯಾವುದೇ ಅವಕಾಶ ಇಲ್ಲವೆಂದು ಹೇಳಿದ್ದೀರಿ. ವ್ಯರ್ಥವಾಗಿ ನೀರು ಹರಿದು ಪಕ್ಕದ ರಾಜ್ಯಗಳಿಗೆ ಹೋಗುವ ಈ ಸಂದರ್ಭದಲ್ಲಿ ಯಥೇಚ್ಛವಾಗಿ ಇರುವ ನೀರನ್ನು ಸುತ್ತಮುತ್ತಲ ಕೆರೆ ಕಟ್ಟಿ ಭರ್ತಿಯಾದರೆ ಅಂತರ್ಜಲ ಕುಸಿಯುವುದು ತಪ್ಪುತ್ತದೆ. ಬೋರ್‌ವೆಲ್‌ಗಳಿಗೆ ನೀರು ಸಿಗುತ್ತದೆ. ಒಳ್ಳೆಯ ಅನುಕೂಲಗಳು ಆಗುತ್ತವೆ. ಬಿಜಾಪುರ ಜಿಲ್ಲೆ ಬಗ್ಗೆ ಈ ನಿಲುವು ಏಕೆ ತೆಗೆದುಕೊಳ್ಳುತ್ತೀರಿ? ಇದೆಲ್ಲಾ ಹೇಳುವುದರಿಂದ ಒಂದು ರೀತಿ ಮಲತಾಯಿ ಧೋರಣೆ ಅನ್ನಿಸುವುದಿಲ್ಲವಾ? ಅದಕ್ಕಾಗಿ ಇವತ್ತು ಏನು ಅಮರಣ ಉಪವಾಸ ಕೈಗೊಂಡಿದ್ದಾರೆ, ಎಲ್ಲಕ್ಕೂ ಸತ್ಯಾಗ್ರಹ ಚಳುವಳಿ ಮಾಡುತ್ತಾರೆ ಎಂದರೆ ಚುನಾಯಿತ ಜನಪ್ರತಿನಿಧಿಗಳು ಆ ಭಾಗದ ಜನರಿಗೆ ಜಾಗ್ರತೆ ಮಾಡುವುದಕ್ಕೋಸ್ಕರ ಅವರ ಡ್ಯೂಟಿ ಅವರು ಮಾಡುತ್ತಿದ್ದಾರೆ. ಸರ್ಕಾರ ಇದಕ್ಕೆ ಸ್ಪಂದಿಸಿ ಸ್ಪಷ್ಟವಾದ ಉತ್ತರ ಕೊಟ್ಟು ಅದಕ್ಕೆ ತ್ವರಿತ ಗತಿಯಲ್ಲಿ ಆ ಕಾಮಗಾರಿ ಆಗುವ ಹಾಗೆ ಮಾಡಿದರೆ ಬಹುಶಃ ತಾವು ಇದಕ್ಕೆ ಒಂದು ಪರಿಹಾರ ಹುಡುಕುವುದಕ್ಕೆ ಸಾಧ್ಯವಾಗುತ್ತದೆ. ನಮ್ಮ ನೀರಾವರಿ ಸಚಿವರು ಮತ್ತು ಮುಖ್ಯ ಮಂತ್ರಿಗಳು ಇದಕ್ಕೆ ಪರಿಹಾರ ಹುಡುಕಬೇಕು. ಆಮರಣ ಸತ್ಯಾಗ್ರಹ ನಿಲ್ಲುವ ಹಾಗೆ ಕ್ಯಾಬಿನೆಟ್ ಮಂತ್ರಿಗಳು ಒಬ್ಬರು ಹೋಗಿ ಅವರಿಗೆ ಮನವರಿಕೆ ಮಾಡಿ ಆ ಹೋರಾಟ ನಿಲ್ಲಿಸುವ ಪ್ರಯತ್ನ ಮಾಡಬೇಕೆಂದು ವಿನಂತಿ ಮಾಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್(ಹುಬ್ಬಳ್ಳಿ-ಗ್ರಾಮಾಂತರ) : ಸನ್ಮಾನ್ಯ ಅಧ್ಯಕ್ಷರೆ, ಇದು ಪಾದ ಯಾತ್ರೆ ಮಾಡುವಾಗ ಮಾನ್ಯ ಬಸವನಗೌಡ ಪಾಟೀಲ್ ಯತ್ನಾಳ್‌ರವರು ಮತ್ತು ಬೇರೆ ಬೇರೆ ಪಕ್ಷದ ಮುಖಂಡರು ಬಂದಿದ್ದರು. 22ನೇ ತಾರೀಖು ಹೋದ ಸಂದರ್ಭದಲ್ಲಿ ದುಳಕೇಡ್ ಎಂಬ ಭಾಗದಲ್ಲಿ ಪಾದಯಾತ್ರೆ ಪ್ರಾರಂಭವಾಯಿತು. ಬೇರೆ ಬೇರೆ ಪಕ್ಷದ ಎಲ್ಲಾ ನಾಯಕರು ಬಂದಿದ್ದರು. ಪಕ್ಷಾತೀತವಾಗಿ ಹೋರಾಟ ನಡೆಯುತ್ತಿದೆ. ಯಾವುದೇ ರಾಜಕೀಯ ಪಕ್ಷದ ಹೋರಾಟ ಅಲ್ಲ. ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆ ಅಲ್ಲಿಯ ಜನತೆ ಇವತ್ತು ತ್ಯಾಗ ಮಾಡಿದ್ದಾರೆ. ಆಲಮಟ್ಟಿ ಕೃಷ್ಣ ಕಣಿವೆ ಯೋಜನೆ ಸಲುವಾಗಿ ತಮ್ಮ ಭೂಮಿಗಳನ್ನು ಕಳೆದುಕೊಂಡಿದ್ದಾರೆ. ಬಿಜಾಪುರ ಜಿಲ್ಲೆಗೆ ಇವತ್ತು ನೀರಾವರಿ ಮಾಡದೇ ಇದ್ದರೆ ಅದರ ಶಾಪ ಈ ಸರ್ಕಾರಕ್ಕೆ ತಟ್ಟುತ್ತದೆ. ಅದಕ್ಕಾಗಿ ನಾನು ಹೇಳುವುದು, ಇವತ್ತು ಮಾನ್ಯ ಬಸವನಗೌಡ ಪಾಟೀಲ್ ಯತ್ನಾಳ್‌ರವರು ಮತ್ತು ಅಲ್ಲಿಯೇ ಇದ್ದಂತಹ ರೈತ ನಾಯಕರು ಏನು ಆಮರಣ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ. ಮೊನ್ನೆ ಆಲಮಟ್ಟಿಯಲ್ಲಿಯೂ ದೊಡ್ಡ ಸಮಾವೇಶ ಆಯಿತು. ಆ ಸಮಾವೇಶಕ್ಕೆ ಮಾನ್ಯ ಚನ್ನಿಗಪ್ಪರವರು ಇನ್‌ವೈಟಿ ಇದ್ದರು. ಮಾನ್ಯ ಚನ್ನಿಗಪ್ಪರವರು ಅವತ್ತು ಹೋಗಬಹುದಾಗಿತ್ತು. ಮಾನ್ಯ ಮಿರಾಜುದ್ದೀನ್ ಪಾಟೀಲ್ ಸಚಿವರೂ ಕೂಡ ಇಲ್ಲಿದ್ದಾರೆ. ಬಿಜಾಪುರ ಜಿಲ್ಲೆಯ ಉಸ್ತುವಾರಿ ಅಲ್ಲಿ ಘೋಷಣೆ ಮಾಡಿ ಬಂದಿದ್ದಾರೆ. ಆ ಹೋರಾಟದಲ್ಲಿ ಭಾಗವಹಿಸಿ ಪಾದಯಾತ್ರೆಯಲ್ಲಿ ಭಾಗವಹಿಸಿ ಈ ಹೋರಾಟ ಬಹಳ ಜೆನ್ಯೆನ್ ಇದೆ, ನಿಮ್ಮ ಬೇಡಿಕೆಗಳು ಸರಿ ಇವೆ, ಈ ನೀರಾವರಿ ಯೋಜನೆಗಳು ಆಗಬೇಕು,

ಮುಳವಾಡು ಏತ ನೀರಾವರಿ ಯೋಜನೆ ಆಗಬೇಕು, ಚಿಮ್ಮಲಗಿ ಏತ ನೀರಾವರಿ ಯೋಜನೆ ಆಗಬೇಕು. ಇವು ಆಗಲೇ ಬೇಕು ಅದಕ್ಕಾಗಿ ಹಣ ಕೊಡಬೇಕು ಎಂದು ಬೆಂಬಲ ವ್ಯಕ್ತ ಮಾಡಿ ಬಂದಿದ್ದಾರೆ. ಈ ಆಲಮಟ್ಟಿ ಸಭೆಗೆ ನಾನು ಹೋಗುತ್ತೇನೆಂದು ಹೇಳಿದ್ದರು. ಆದರೆ ಅವರು ಹೋಗಲಿಲ್ಲ. ಯಾವ ಕಾರಣಕ್ಕಾಗಿ ಹೋಗಲಿಲ್ಲವೆಂಬುದು ಗೊತ್ತಿಲ್ಲ. ಅವರೇ ಹೇಳಬೇಕು. ಆಮರಣ ಉಪವಾಸ ಮಾಡಿದ್ದರ ಬಗ್ಗೆ ಈಗಾಗಲೇ ಪತ್ರಿಕೆಯಲ್ಲಿ ಬಂದಿದೆ. ಆಮರಣ ಉಪವಾಸ ಇದೇ ರೀತಿ ಮುಂದುವರೆದರೆ ನಾಳೆ ಗಂಭೀರವಾದ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಏಕೆಂದರೆ, ಆಲಮಟ್ಟಿ ಸಮಾವೇಶದಲ್ಲಿ ಯಾರಾದರೂ ತಾವು ಹೋಗಿ ಸ್ಪಷ್ಟವಾದ ಭರವಸೆ ಕೊಟ್ಟಿದ್ದರೆ ಆಮರಣ ಉಪವಾಸದ ಪ್ರಶ್ನೆ ಬರುತ್ತಿರಲಿಲ್ಲ. ಆದರೆ ಅವತ್ತು ರಾಜ್ಯ ಸರ್ಕಾರದಿಂದ ಯಾರೂ ಪ್ರತಿನಿಧಿಗಳು ಇರಲಿಲ್ಲ. ಹಾಗಾಗಿ ಆಮರಣ ಉಪವಾಸ ನಡೆಯುತ್ತಿದೆ. ನಾಳೆ ಕಾನೂನು ಸುವ್ಯವಸ್ಥೆಗೆ ಬಹಳಷ್ಟು ತೊಂದರೆ ಉಂಟಾಗುವ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಮಾನ್ಯ ಮುಖ್ಯ ಮಂತ್ರಿಗಳು ದಯವಿಟ್ಟು ಗಮನಿಸಬೇಕು. ತಾವು ಯಾರಾದರೂ ಸಚಿವರಿಗೆ ಅಲ್ಲಿಗೆ ಕಳುಹಿಸಿ. ಜಿಲ್ಲಾ ಉಸ್ತುವಾರಿ ಸಚಿವರಿದ್ದಾರೆ, ನೀರಾವರಿ ಸಚಿವರೂ ಇದ್ದಾರೆ. ದಯವಿಟ್ಟು ಅಲ್ಲಿ ಹೋಗಿ ಸ್ಪಷ್ಟವಾದ ಭರವಸೆಯನ್ನು ಕೊಡಬೇಕು. ಒಂದು ಸಾರಿ ಮುಖ್ಯ ಮಂತ್ರಿಗಳು ಗುಲ್ಬರ್ಗದಲ್ಲಿ ಕೊಟ್ಟ ಸ್ಟೇಟ್‌ಮೆಂಟ್ ನೋಡಿದ್ದೇನೆ. 2005 ರ ಡಿಸೆಂಬರ್ ಒಳಗೆ ಎಲ್ಲಾ ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸುತ್ತೇವೆ ಎಂದು ಒಂದು ಪ್ರೆಸ್ ಸ್ಟೇಟ್‌ಮೆಂಟ್ ನೀಡಿದ್ದೀರಿ. ಹೀಗಾಗಿ ಈ ಬಿಜಾಪುರ ಜಿಲ್ಲೆ ಹಾಗೂ ಬಾಗಲಕೋಟೆ ಜಿಲ್ಲೆಗೆ ನೀರಾವರಿ ಯೋಜನೆ ಬಗ್ಗೆ ಏನು ಹೋರಾಟ ನಡೆಯುತ್ತಿದೆ. ಇದರ ಬಗ್ಗೆ ಸ್ಪಷ್ಟನೆ ಮಾಡಿದರೆ ಬಹುಶಃ ಆ ಹೋರಾಟಕ್ಕೆ ಸ್ಪಂದನೆ ಮಾಡಿದ ಹಾಗಾಗುತ್ತದೆ. ದಯವಿಟ್ಟು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ವಿನಂತಿಸುವುದು ತಮ್ಮ ಜಿಲ್ಲಾ ಉಸ್ತುವಾರಿ ಸಚಿವರು ಮತ್ತು ನೀರಾವರಿ ಸಚಿವರಿಗೆ ಅಲ್ಲಿಗೆ ಕಳುಹಿಸಿ ಆ ಹೋರಾಟಕ್ಕೆ ಸ್ಪಷ್ಟವಾದ ಭರವಸೆ ಕೊಟ್ಟು ಅದರ ಬಗ್ಗೆ ಏನಾದರೂ ಅಂತಿಮ ತೀರ್ಮಾನ ಕೈಗೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಂಡು ಆ ಹೋರಾಟದ ಬಗ್ಗೆ ಇರುವ ಕೆಲವು ಪತ್ರಗಳನ್ನು ತಮಗೆ ಕಳುಹಿಸುತ್ತಿದ್ದೇನೆ.

ಶ್ರೀ ಮಿರಾಜುದ್ದೀನ್ ಎಸ್ ಪಟೇಲ್(ಪಶುಸಂಗೋಪನೆ ಹಾಗೂ ವಕ್ಫ್ ಸಚಿವರು): ಈಗಾಗಲೇ ನಮ್ಮ ಜಗದೀಶ್ ಶೆಟ್ಟರ್‌ರವರು ಹೇಳಿದರು ಬಿಜಾಪುರ ಜಿಲ್ಲಾ ಉಸ್ತುವಾರಿ ಸಚಿವರು ಹೋಗಿ 30ನೇ ತಾರೀಖು ಆ ಸಮಾರಂಭಕ್ಕೆ ಬರುತ್ತೇನೆಂದು ಹೇಳಿದ್ದರು ಎಂದು. ಅಲ್ಲಿ ಹೋಗಿ ಅವರು ಸಲ್ಲಿಸಿದ ಮನವಿ ಪತ್ರ ತೆಗೆದುಕೊಂಡು ಮಾನ್ಯ ಮುಖ್ಯ ಮಂತ್ರಿಗಳಿಗೆ ತಿಳಿಸಿದ್ದೇನೆ. ಚರ್ಚೆ ಮಾಡಿ ಆ ನಂತರ ನಾನೂ ಕೂಡ ಈ ಸಮಾರಂಭಕ್ಕೆ ಬರುತ್ತೇನೆಂದು ಹೇಳಿದ್ದೆ. ಆದರೆ ಅವತ್ತು ಮುಖ್ಯ ಮಂತ್ರಿಗಳ ಜೊತೆ ಬೇರೆ ಸಭೆ ಇದ್ದುದ್ದರಿಂದ ನಾನು ಹೋಗುವುದಕ್ಕೆ ಸಾಧ್ಯವಾಗಲಿಲ್ಲ. ಮುಖ್ಯ ಮಂತ್ರಿಗಳು ನಾಳೆ ಹೋಗಿ ಅಲ್ಲಿ ಏನಿದೆ ಎಂಬ ಬಗ್ಗೆ ನನ್ನ ಕಡೆಯಿಂದ ಮೆಸೇಜ್ ಕೊಡಬೇಕೆಂದು ಹೇಳಿದರು. 16ನೇ ತಾರೀಖು ಮುಖ್ಯ ಮಂತ್ರಿಗಳು ಸಭೆಯ ಒಂದು ದಿನಾಂಕವನ್ನು ನಿಗದಿ ಮಾಡಿದ್ದಾರೆ. ಆ ಜಿಲ್ಲೆಯ ಎಮ್‌ಎಲ್‌ಎಗಳು, ಎಮ್‌ಎಲ್‌ಸಿಗಳು ಮತ್ತು ಎಂಪಿಗಳು ಎಲ್ಲರೂ ಮೀಟಿಂಗ್‌ಗೆ ಬರಬೇಕು, ಮುಖ್ಯ ಮಂತ್ರಿಗಳು ಆ ಮೀಟಿಂಗ್‌ನಲ್ಲಿ ಚರ್ಚೆ ಮಾಡಿ ಏನು ನಿರ್ಣಯ ತೆಗೆದುಕೊಳ್ಳುತ್ತಾರೆ ಅದು ಮುಖ್ಯ ಮಂತ್ರಿಗಳಿಗೆ ಬಿಟ್ಟ ವಿಚಾರ. ನಾನು ನಾಳೆ ಹೋಗುತ್ತಿದ್ದೇನೆ.

ಶ್ರೀ ಶಿವಾನಂದ ಎಸ್. ಪಾಟೀಲ್(ಬಸವನ ಬಾಗೇವಾಡಿ) : ಮಾನ್ಯ ಅಧ್ಯಕ್ಷರೆ, ಈ ವಿಚಾರದಲ್ಲಿ ನಾನು ಖಂಡಿತವಾಗಿ ಸರ್ಕಾರದ ವಿರೋಧ ಅಂತೂ ಅಲ್ಲ, ಬಿಜೆಪಿ ಪರವೂ ಅಲ್ಲ. ಏಕೆಂದರೆ ಈ ವಿಷಯದಲ್ಲಿ ಬಿಜಾಪುರ ಜಿಲ್ಲೆಗೆ ನೀರಾವರಿ ಆಗಬೇಕು ಎನ್ನುವ ವಿಚಾರ ಇವತ್ತಿನದು ಅಲ್ಲ, ಬಹಳ ದಿನಗಳಿಂದ ಅಂದರೆ ಯಾವಾಗ ನಾವು ಬಾಂಬೆ ಕರ್ನಾಟಕದಲ್ಲಿ ಇದ್ದೆವು ಅವತ್ತಿನ ದಿನಮಾನದಿಂದ ಈ ವಿಷಯ ಪ್ರಸ್ತಾಪವಾಗುತ್ತಿದೆ. ಮೊದಲು ಕೊಯ್ನಾ ಡ್ಯಾಂನಿಂದ ಬಿಜಾಪುರ ಜಿಲ್ಲೆಗೆ ನೀರಾವರಿ ಮಾಡಬೇಕೆಂದು ಪ್ರಸ್ತಾವನೆ ಇತ್ತು. ಆದರೆ ದುರ್ದೈವವಶಾತ್ ರಾಜ್ಯ ವಿಂಗಡಣೆ ಆದ ಮೇಲೆ ಆ ವಿಚಾರದಲ್ಲಿ ಹಿಂದಿನ ನಮ್ಮ ಮುಖ್ಯ ಮಂತ್ರಿಗಳು ಸ್ವಲ್ಪ ತಪ್ಪು ನಿರ್ಣಯ ಕೈಗೊಂಡಿದ್ದರಿಂದ ನೀರಾವರಿ ಆಗುವ ಅವಕಾಶ ಸಿಗಲಿಲ್ಲ. ಮುಂದೆ 1961ರಲ್ಲಿ ಕೇಂದ್ರ ಸರ್ಕಾರ ಗುಲ್ಹಾಟಿ ಕಮಿಷನ್ ನೇಮಕಾತಿ ಮಾಡಿ, ಬಿಜಾಪುರ ಜಿಲ್ಲೆಗೆ ಸಮಗ್ರ ನೀರಾವರಿಗೆ ಒಳಪಡಿಸಬೇಕೆಂದು ಪ್ರಸ್ತಾವನೆಯನ್ನು ಕೊಟ್ಟಿತು. ಆ ಹಿನ್ನೆಲೆಯಲ್ಲಿ ಸರ್ಕಾರ ಬಿಜಾಪುರ ಜಿಲ್ಲೆಯಲ್ಲಿ ವಿಶೇಷವಾಗಿ ಬಿಜಾಪುರ ತಾಲ್ಲೂಕು ಬಾಗೇವಾಡಿ ಮತ್ತು ಮುದ್ದೇಬಿಹಾಳ್ ಹಾಗೂ ಬಾಗಲಕೋಟೆ ಜಿಲ್ಲೆಗಳಲ್ಲಿ ಬರತಕ್ಕಂತಹ ಬಾಗಲಕೋಟೆ ತಾಲ್ಲೂಕಿನ ಹಳ್ಳಿಗಳು ಮುಳುಗಡೆ ಆಗತಕ್ಕಂತಹ ಹಿನ್ನೆಲೆಯಲ್ಲಿ ಅವರಿಗೆ ವಿಶೇಷವಾದಂತ ಒಂದು ಲಿಫ್ಟ್ ಇರಿಗೇಷನ್ ಮಾಡಿ ನೀರಾವರಿಗೆ ಅವಕಾಶ ಕಲ್ಪಿಸಿಕೊಡಬೇಕೆಂಬ ಒಂದು ಪ್ರಸ್ತಾವನೆಯನ್ನು ಆಗಿನ ಸರ್ಕಾರದ ಮುಂದೆ ಇತ್ತು. ಆ ನಿರ್ಣಯಕ್ಕೆ ಅವತ್ತಿನಿಂದ ಹಿಡಿದು ಇವತ್ತಿನವರೆಗೆ ಮಾನ್ಯತೆ ಸಿಗುತ್ತಿದೆ ಎನ್ನತಕ್ಕಂತಹ ಭರವಸೆ ನನ್ನ ಮನಸ್ಸಿನಲ್ಲಿ ಇದೆ. ಆ ಹಿನ್ನೆಲೆಯಲ್ಲಿ 1990ರಲ್ಲಿ ಮೊಟ್ಟ ಮೊದಲಬಾರಿಗೆ ಮುಳುವಾಡ ಲಿಫ್ಟ್ ಇರಿಗೇಷನ್‌ಗೆ ಸರ್ಕಾರ ಅನುಮತಿ ಕೊಟ್ಟಿತು. ಆದರೆ ದುರ್ದೈವವಶಾತ್ ಮುಳುವಾಡ್ ಲಿಫ್ಟ್ ಇರಿಗೇಷನ್‌ನಲ್ಲಿ ಬಿಜಾಪುರ ತಾಲ್ಲೂಕು ಮತ್ತು ಬಾಗೇವಾಡಿ ತಾಲ್ಲೂಕಿಗೆ ಲಿಫ್ಟ್ ಇರಿಗೇಷನ್‌ನಲ್ಲಿ ಕೇವಲ ಎಂಟು ಟಿಎಮ್‌ಸಿ ನೀರು ಮಾತ್ರ ಕೊಟ್ಟಿದ್ದಾರೆ. ಆದರೆ 'ಬಿ' ಸ್ಕೀಮ್‌ನಲ್ಲಿ 56 ಟಿಎಮ್‌ಸಿ ನೀರು ಕೊಡುತ್ತೇವೆಂಬ ಭರವಸೆ ಕೊಟ್ಟಿದ್ದರು. ಆ ಭರವಸೆ ಕಳೆದ 2002 ರವರೆಗೆ ಜೀವಂತವಾಗಿತ್ತು. ಆದರೆ ದುರ್ದೈವವಶಾತ್ 2002ರಲ್ಲಿ ಆ ವಿಚಾರ ಬದಲಾವಣೆಯಾಗಿ 56 ಟಿ.ಎಂ.ಸಿ. ಎಂದು ಇದ್ದದ್ದನ್ನು 36 ಟಿ.ಎಂ.ಸಿ.ಗೆ ನೀರು ಕಡಿತ ಮಾಡಿರುವುದಕ್ಕೆ ಸಂಬಂಧಪಟ್ಟಂತೆ ನಮ್ಮ ಹತ್ತಿರ ದಾಖಲೆಗಳು ಕೂಡ ಇದೆ. ಇದೇನಾದರೂ ಆದರೆ ಖಂಡಿತವಾಗಿ ನಮ್ಮ ಬಿಜಾಪುರ ಜಿಲ್ಲೆಗೆ ಅದರಲ್ಲು ವಿಶೇಷವಾಗಿ ನಾನು ನಿಮಗೆ ಹೇಳಬೇಕೆಂದರೆ ಬಸವನಬಾಗೇವಾಡಿ ತಾಲ್ಲೂಕು, ಬಿಜಾಪುರ ತಾಲ್ಲೂಕು ಹಾಗೂ ವಿಶೇಷವಾಗಿ ಮುದ್ದೇಬಿಹಾಳ್ ತಾಲ್ಲೂಕಿಗೆ ಬಹಳ ಅನ್ಯಾಯವಾಗುತ್ತದೆ ಎನ್ನುವ ವಿಚಾರವನ್ನು ನಾನು ಈ ಸಂದರ್ಭದಲ್ಲಿ ಸರ್ಕಾರದ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಏಕೆಂದರೆ ಈಗಾಗಲೇ ತಾವು ನೀರಾವರಿಯನ್ನಾಗಿ ತಾವು ಬಿಜಾಪುರದಲ್ಲಿ ಆಲಮಟ್ಟಿ ಅಣೆಕಟ್ಟನ್ನು ಕಟಟಿ ರಾಯಚೂರು ಮತ್ತು ಗುಲ್ಬರ್ಗಾ ಜಿಲ್ಲೆಯನ್ನು ಸಮಗ್ರ ಮಾಡಿದ್ದೀರಿ. ನಾವು ಅದಕ್ಕೆ ಯಾವ ಅಡ್ಡಿಆತಂಕವನ್ನು ವ್ಯಕ್ತ ಮಾಡುವುದಿಲ್ಲ. ಆದರೆ ಯಾವ ವಿಚಾರ ಕಳೆದ ಬ್ರಿಟಿಷ್ ಸರ್ಕಾರ ಇದ್ದಾಗಿನಿಂದ ಹಿಡಿದು ಮಹಾರಾಷ್ಟ್ರ ಬಾಂಬೆ-ಕರ್ನಾಟಕದಲ್ಲಿ ಇದ್ದಾಗಿನಿಂದ ಹಿಡಿದು ಪ್ರಸ್ತಾಪವಾಗುತ್ತಾ ಬರುತ್ತಿದೆ. ಈ ಬಿಜಾಪುರ ಜಿಲ್ಲೆಗೇನಾದರೂ, ಅದರಲ್ಲೂ ವಿಶೇಷವಾಗಿ ಈ ಮೂರು ತಾಲ್ಲೂಕಿಗೆ ನೀರಾವರಿ ಅವಕಾಶ ಕಲ್ಪಿಸಬೇಕಾದರೆ ಮುಳವಾಡ ಲಿಫ್ಟ್ ಮಾತ್ರ ಏಕೈಕ ಒಂದು ಯೋಜನೆಯಾಗಿದೆ. ಆದುದರಿಂದ ನೀವು ಅದನ್ನು ಮಾಡಿಕೊಡಬೇಕು ಎನ್ನತಕ್ಕಂತ ಪ್ರಸ್ತಾವನೆ ಇದೆ. ಆದರೆ ದುರ್ದೈವವಶಾತ್ 2002ರಲ್ಲಿ

56 ಟಿ.ಎಂ.ಸಿ. ಎಂದು ಇರತಕ್ಕಂಥದ್ದನ್ನು 36 ಟಿ.ಎಂ.ಸಿ.ಗೆ ಇಳಿಸಿರತಕ್ಕಂತ ಆದೇಶ ನನ್ನ ಕೈಯಲ್ಲಿ ಇದೆ. ನಾನು ಅದನ್ನು ಸರ್ಕಾರಕ್ಕೆ ಕೊಡುವುದಕ್ಕೆ ತಯಾರಿದ್ದೇನೆಂದು ತಮ್ಮ ಮೂಲಕ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇನ್ನು ಈ ವಿಚಾರದಲ್ಲಿ ಮಾನ್ಯ ಯಡಿಯೂರಪ್ಪನವರಿಗೆ ಹಾಗೂ ಮಾನ್ಯ ಜಗದೀಶ್‌ಶೆಟ್ಟರ್‌ರವರಲ್ಲಿ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ ಈ ನೀರಾವರಿ ವಿಷಯದಲ್ಲಿ ರಾಜಕೀಯವನ್ನು ಇದ್ದಾಗಲೂ ಹೇಗಿದ್ದೆ ಎಂಬುದು ಗೊತ್ತಿದೆ. ಭೀಮಾ ನೀರಾವರಿ ಸಲುವಾಗಿ ಜಗದೀಶ್‌ಶೆಟ್ಟರ್‌ರವರೇ ನಿಮ್ಮ ಜೊತೆ ಇದ್ದಾಗಲೂ ಕೂಡ ನಾವು ಹೋರಾಟ ಮಾಡಿದ್ದೇವೆ. ಮುಳವಾಡ ವಿಷಯದಲ್ಲಿಯೂ ಕೂಡ ಹೋರಾಟ ಮಾಡಿದ್ದೇವೆ. ಈ ಹೋರಾಟ ಹೇಗೆ ನಡೆಯಿತು ಎಂಬುದು ನಿಮಗೇ ಗೊತ್ತಿದೆ. ಇದಕ್ಕೆ ಸಂಬಂಧಪಟ್ಟಂತೆ ಪತ್ರಿಕೆಯ ಕಟಿಂಗ್ಸ್‌ನ್ನು ನಿಮಗೆ ಕಳುಹಿಸಿಕೊಡುತ್ತೇನೆ. ಮತ್ತು ಫೋಟೋಗಳನ್ನು ಕಳುಹಿಸಿಕೊಡುತ್ತೇನೆ. ಈ ಹೋರಾಟ ಪ್ರಾರಂಭವಾಗಿದ್ದು ಪಕ್ಷದ ಧ್ವಜದ ಹೆಸರಿನಲ್ಲಿ. ಅದರಿಂದ ಸಾರ್ವಜನಿಕರ ಸ್ಪಂದನೆ ಸಿಗಲಿಲ್ಲ ಎಂದ ಬಳಿಕ ಪಕ್ಷದ ಧ್ವಜ ತೆಗೆದು ಆಮೇಲೆ ಸಮಗ್ರ ನೀರಾವರಿ ಹೋರಾಟ ಸಮಿತಿ' ಎನ್ನತಕ್ಕಂತ ಒಂದು ಹೆಸರಿನ್ನಿಟ್ಟಿಕೊಂಡಿರಿ. ಇಟ್ಟುಕೊಳ್ಳಿ ನಾವು ಬೇಡ ಎಂದು ಹೇಳುವುದಿಲ್ಲ. ಅದ್ಕಕೆ ನಾವೂ ಸ್ಪಂದಿಸುತ್ತೇವೆ. ಏಕೆಂದರೆ ಅಲ್ಲಿ ಏನೇ ಮಾಡಿದರೂ ನಮ್ಮ ಜಿಲ್ಲೆಯ ಉದ್ದೇಶಕ್ಕಾಗಿಯೇ ಮಾಡುತ್ತಿರುವುದು ಎನ್ನುವ ವಿಚಾರವಿರುವುದರಿಂದ ನಾವೂ ಕೂಡ ಅದಕ್ಕೆ ಸ್ಪಂದಿಸುತ್ತೇವೆ. ಆದರೆ ನಾನು ಈಗ ಒಂದು ಮಾತನ್ನು ಹೇಳಬೇಕಾಗುತ್ತದೆ. ಬಸವನಗೌಡರೇ ಕೇಂದ್ರದಲ್ಲಿ ಸಚಿವರಾಗಿದ್ದರು ಎಂಬುದು ನಿಮಗೂ ಗೊತ್ತಿದೆ. ಆಗ ಹೋಲ್ 734 ಟಿ.ಎಂ.ಸಿ. ನೀರಿನಲ್ಲಿ ಎಷ್ಟು ಉಪಯೋಗ ಮಾಡಿರುತ್ತೇವೆ ಅದರ ತದನಂತರ ಉಳಿದಿರತಕ್ಕಂತ ನೀರನ್ನು ರಿವ್ಯೆವ್ ಮಾಡಬೇಕು ಎನ್ನತಕ್ಕಂಥದ್ದನ್ನು ಎನ್.ಡಿ.ಎ. ಸರ್ಕಾರ ನಿರ್ಣಯ ತೆಗೆದುಕೊಂಡಾಗ ಆಗ ಅವರು ಅದನ್ನು ಪ್ರತಿಭಟಿಸಿದ್ದಾರೆ. ಅವರು ನಿಜವಾಗಿಯೂ ಶ್ಲಾಘನೀಯ ಕೆಲಸವನ್ನು ಮಾಡಿದ್ದಾರೆ ಎಂದು ನಾನು ಹೇಳುತ್ತಿದ್ದೆ. 2002ರಲ್ಲಿ ಮಾಡಲಿಲ್ಲ, ಆದರೆ 2005 ರಲ್ಲಿ ಪ್ರತಿಭಟನೆ ಮಾಡತಕ್ಕಂಥದ್ದು.....

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಬಸವನಗೌಡರು ಈ ಮನೆಯ ಸದಸ್ಯರು ಅಲ್ಲ ಹೀಗಿರುವಾಗ ಅವರು ಇಲ್ಲಿಗೆ ಬಂದು ಇವರು ಹೇಳಿರುವುದಕ್ಕೆ ಉತ್ತರ ಕೊಡುವುದಕ್ಕೆ ಆಗುತ್ತದೆಯೇ? ಅವರು ಏನು ಪ್ರತಿಭಟನೆ ಮಾಡಿದ್ದರು, ಏನು ಹೇಳಿದ್ದರು.....

ಶ್ರೀ ಅರಗ ಜ್ಞಾನೇಂದ್ರ : ಅವೊತ್ತಿನ ದಿನಗಳಲ್ಲಿ ಅವರು ಸಚಿವರಾಗಿ ಅವರ ಕರ್ತವ್ಯವನ್ನು ಮಾಡಿದ್ದಾರೆ. ಇದು ರಾಜ್ಯಕ್ಕೆ ಸಂಬಂಧಪಟ್ಟಂಥ ವಿಚಾರ. ರಾಜ್ಯ ಹೋರಾಟ ಮಾಡಬೇಕಾಗಿತ್ತು. ಆ ಕ್ರಮ ತೆಗೆದುಕೊಳ್ಳಬೇಕಾಗಿತ್ತು. ಸುಮ್ಮನೆ ಇದನ್ನು ರಾಜಕೀಕರಣಗೊಳಿಸುತ್ತಾರೆ ಎಂದು ಹೇಳಿ ಇವರು ಇಲ್ಲಿ ರಾಜಕೀಯ ಮಾಡಿದರೆ ಸರಿಯಾಗುವುದಿಲ್ಲ. ಆದುದರಿಂದ ಒಳ್ಳೆಯದಾಗುವ ದೃಷ್ಟಿಯಿಂದ ಮತ್ತು ಬಿಜಾಪುರ ಜಿಲ್ಲೆಗೆ ಉಪಕಾರವಾಗುವಂಥ ಸಲಹೆಯನ್ನು ಸರ್ಕಾರಕ್ಕೆ ಕೊಡಲಿ.

ಛೇರ್ಮನ್ : ಶಿವಾನಂದ ಪಾಟೀಲರೆ, ಚರ್ಚೆಯನ್ನು ಬೇಗ ಮುಗಿಸಿ.

ಶ್ರೀ ಶಿವಾನಂದ ಪಾಟೀಲ್ : ಅವರು ಮೂರು, ಮೂರು ಜನ ಒಟ್ಟಿಗೆ ನಿಂತರೆ ನಾನು ಏನು ಮಾಡಲಿ ಹೇಳಿ.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಬಸವನಗೌಡ ಪಾಟೀಲ್ ಯತ್ನಾಳ್‌ರವರು ಮಂತ್ರಿಯಾಗಿದ್ದಾಗ ಮಾನ್ಯ ಶಿವಾನಂದ ಪಾಟೀಲರು ನಮ್ಮ ಜೊತೆಯಲ್ಲಿಯೇ ಇದ್ದರು. ಆಗ

ಮಾನ್ಯ ಬಸವನಗೌಡ ಪಾಟೀಲ್‌ರವರು ಮಾಡಿದ ಕಾರ್ಯಕ್ಕೆ ಮಾನ್ಯ ಶಿವಾನಂದ ಪಾಟೀಲರು ಶ್ಲಾಘನೆಯನ್ನು ಮಾಡಿದ್ದರು. ಈಗ ಇವರು ಕಾಂಗ್ರೆಸ್‌ಗೆ ಹೋದ ತಕ್ಷಣ ಮಾನ್ಯ ಬಸವನಗೌಡಪಾಟೀಲ್‌ರವರನ್ನು ಟೀಕೆ ಮಾಡುವುದು ಸರಿಯೆ?

ಶ್ರೀ ಶಿವಾನಂದ ಪಾಟೀಲ್ : ನಾನು ಟೀಕೆ ಮಾಡಲಿಲ್ಲ.

ಛೇರ್ಮನ್ : ಮಾನ್ಯ ಶಿವಾನಂದರವರೇ, ಈಗ ಸಭಾ ನಾಯಕರು ಮಾತನಾಡುತ್ತಾರೆ. ಕುಳಿತುಕೊಳ್ಳಿ.

ಶ್ರೀ ಧರ್ಮಸಿಂಗ್(ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ನೀರಾವರಿ ಇಲಾಖೆಗೆ ಸಂಬಂಧಪಟ್ಟಂತೆ ನಾಳೆ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ವಿಸ್ತಾರವಾಗಿ ಉತ್ತರವನ್ನು ಕೊಡುತ್ತಾರೆ. ಅಲ್ಲಿ ಎಜಿಟೇಶನ್ ಪ್ರಾರಂಭವಾಯಿತು. ತಾವು ಹೋಗಿದ್ದೀರಿ ಅಲ್ಲಿಗೆ. ಎಜಿಟೇಶನ್ ಪ್ರಾರಂಭವಾದ ಮೇಲೆ 30 ನೇ ತಾರೀಖು ಅವರು ನಮಗೆ ಅಲ್ಲಿಗೆ ಬರಬೇಕು ಎಂದು ಕೇಳಿದರು. ಬಸವನಗೌಡ ಪಾಟೀಲ್ ಯತ್ನಾಳ್ ನಿಮಗಿಂತಲೂ ಮುಂಚೆ ನಮ್ಮ ಪ್ರತಿ ಎಲೆಕ್ಷನ್‌ನಲ್ಲೂ ಕೂಡ ಪೋಲಿಂಗ್ ಏಜೆಂಟ್ ಆಗಿ ಬರುತ್ತಿದ್ದರು. ಬಹಳ ಅಭಿಮಾನ ಇದೆ, ಒಳ್ಳೆಯ ಮನುಷ್ಯ ನಾನು ಕೇಳಿದೆ, ಏನಿದು, ಏನು ಎಜಿಟೇಶನ್ ಪ್ರಾರಂಭ ಮಾಡಿದಿರಿ ನೀವು ಮತ್ತು ಜಿಗಜಿಣಗಿ ಎಂದು ಕೇಳಿದೆ. ಏನ್ ಸಾರ್ ನೀವು ಎಲ್ಲವನ್ನೂ ನಿಮ್ಮ ಕಡೆಗೆ ತೆಗೆದುಕೊಂಡು ಹೋಗುವುದಕ್ಕೆ ಹೊರಟಿದ್ದೀರಿ. ಅಲ್ಲಿ ಏನೆಲ್ಲಾ ಘೋಷಣೆಯನ್ನು ಕೂಗಿದರೋ ಅದನ್ನೂ ಹೇಳುತ್ತೇನೆ. ಅದಕ್ಕೆ ನಾನು ಹೇಳಿದೆ, ನೀವುಗಳೆಲ್ಲಾ ಇಲ್ಲಿಗೆ ಬನ್ನಿ, ಇಲ್ಲಿ ವಿವರವಾದ ಚರ್ಚೆ ಆಗಬೇಕು. ಈಗಾಗಲೇ ನೀವು ಹೇಳಿದ್ದನ್ನು ಪತ್ರಿಕೆಯಲ್ಲೂ ಕೂಡ ನೋಡಿದ್ದೇನೆ. ಕಾಮನ್ ಮಿನಿಮಮ್ ಪ್ರೋಗ್ರಾಂನಲ್ಲಿ 2005ರ ಡಿಸೆಂಬರ್‌ಗೆ ಈಗೇನು ಅಪೂರ್ಣವಾಗಿರುವ ಪ್ರಾಜೆಕ್ಟ್‌ಗಳು ಯು.ಕೆ.ಪಿ.ಯಲ್ಲಿ ಇದೆ ಆ ಎಲ್ಲಾ ಪ್ರಾಜೆಕ್ಟ್‌ಗಳನ್ನು ಮುಗಿಸುತ್ತೇವೆ ಎನ್ನತಕ್ಕಂತ ಆಶ್ವಾಸನೆಯನ್ನು ಕೊಟ್ಟಿದ್ದೇವೆ. ಹೋದ ಬಾರಿ 3024 ಕೋಟಿ ರೂ.ಗಳು ಏನಿತ್ತು ಅದನ್ನು ಈ ಬಾರಿ 3124 ಕೋಟಿ ರೂ.ಗಳನ್ನು ಇಟ್ಟಿದ್ದೇವೆ. ಖರ್ಚು ಮಾಡತಕ್ಕದ್ದು ಇದೆ. 'ಎ' ಸ್ಕೀಂ ಬಗ್ಗೆ ಉಳಿದುದ್ದನ್ನು ಎಲ್ಲವನ್ನೂ ನಾಳೆ ಹೇಳುತ್ತಾರೆ. ಆದರೆ ನಮಗೇನಪ್ಪ ಆಗಿದೆ ತಾಪತ್ರಯ ಎಂದರೆ ಧರ್ಮಸಿಂಗ್‌ರವರು ಮುಖ್ಯಮಂತ್ರಿಯಾದರೂ ಜೇವರ್ಗಿಗೆ ನೀರು ಹೋಗುತ್ತದೆ. ಎನ್ನುತ್ತಾರೆ ಆದರೆ ಜೇವರ್ಗಿಗೆ ಹೋದರೆ ಅವರು ನಮಗೆ ಬೈಯುತ್ತಾರೆ. ಮುಖ್ಯಮಂತ್ರಿಯಾಗಿ ಇಲ್ಲಿ ನೀರು ಬೇಕಾಗಿದೆ ಕೆನಾಲ್ ಚೆನ್ನಾಗಿದೆ ಆದರೆ ನೀರು ಮುಟ್ಟೋಲ್ಲ ಎಂದು ಅವರು ಬೈಯ್ಯುವುದು. ಎಲ್ಲಿ ನಾವು ಮಾಡಿದ್ದೇವೆ. ಯಾವಾಗ ಮಾಡಿದ್ದೇವೆ. ಒಂದೇನು ವಿಚಾರವಿದೆ ಎಂದರೆ ಲಿಫ್ಟ್ ಇರಿಗೇಷನ್ ಆಗಬೇಕು ಎಂಬುದಕ್ಕೆ ಸಂಬಂಧಪಟ್ಟಂತೆ ಇನ್‌ವೆಸ್ಟಿಗೇಶನ್ ಆಗುತ್ತಿದೆ. ನೀರು ಬಿಟ್ಟಿದ್ದಲ್ಲ. ಇದು ಒಂದು ವಿಚಾರ. ಇನ್ನು ಎರಡನೆಯದಾಗಿ ಬೇರೆ ಕಡೆಗೆ ನೀರು ಹೋಗುತ್ತಿದೆ. ಆದರೆ ನಮಗೆಲ್ಲಾ ನಮಗೆ ನೀರು ಸಿಗುತ್ತಿಲ್ಲ ಎಂದು ಹೇಳುವುದು ತಪ್ಪು. ಇವೊತ್ತು ನೀರಾವರಿ ಇಲಾಖೆಗೆ ಎಷ್ಟು ಹಣ ಬೇಕಾಗುತ್ತಿದೆ ಅಷ್ಟು ಹಣವನ್ನು ಕೊಡುತ್ತಿದ್ದೇವೆ. ಈಗಾಗಲೇ ನಮ್ಮ ಮಾನ್ಯ ಶಿವಾನಂದ ಪಾಟೀಲರು ಕೂಡ ಸಮಗ್ರವಾದ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಯಡಿಯೂರಪ್ಪನವರು ಹೇಳಿದ್ದಾರೆ. ಮಾನ್ಯ ಜಗದೀಶ್ ಶೆಟ್ಟರ್. ಮಾನ್ಯ ಕಾರಜೋಳ್‌ರವರೂ ಕೂಡ ಹೇಳಿದ್ದಾರೆ. ಇದರ ಚರ್ಚೆ ಬೀದಿಯಲ್ಲಿ ಕುಳಿತು ಪ್ರತಿಭಟನೆ ಮಾಡಿದರೆ ಆಗುವುದಿಲ್ಲ. ಉತ್ತರ ಕರ್ನಾಟಕದ ಭಾಗದಲ್ಲಿ ವಿಶ್ವ ಬ್ಯಾಂಕಿನ ನೆರವಿನಿಂದ ಆಗಬೇಕಾದ ದೊಡ್ಡ ಕೆಲಸ. ವೀರೇಂದ್ರ ಪಾಟೀಲರು ಮುಖ್ಯಮಂತ್ರಿಯಾಗಿದ್ದಾಗ

ಏನು ಹೇಳಿದ್ದರೆಂದರೆ ನನ್ನ ಜೀವನದ ಎರಡೇ ಕನಸುಗಳು ಒಂದು ಕೃಷ್ಣ ಮೇಲ್ದಂಡೆ ಯೋಜನೆ ಮತ್ತು ಗುಲ್ಬರ್ಗಾದಲ್ಲಿ ವಿಶ್ವವಿದ್ಯಾಲಯ ಆಗಬೇಕು ಎನ್ನುವ ಕನಸುಗಳು ಇವೆಯೆಂದು ಹೇಳುತ್ತಿದ್ದರು. ಅಂಥ ಒಂದು ಪ್ರಾಜೆಕ್ಟ್‌ಗೆ ಕಾರ್ಯಗತವಾಗಬೇಕು ಎನ್ನತಕ್ಕಂತ ರೀತಿಯಲ್ಲಿ ನಾವು ನೀವುಗಳೆಲ್ಲರೂ ಕುಳಿತು ಚರ್ಚೆ ಮಾಡಿದರೆ ಆಗುತ್ತದೆಯೇ ಹೊರತು ರಸ್ತೆ ಮೇಲೆ ಕುಳಿತು ಪ್ರತಿಭಟನೆ ಮಾಡಿದರೆ ಆಗುವುದಿಲ್ಲ. ಮೊನ್ನೆ ಕೂಡ ಡಿ.ಸಿ.ಯವರು ಹೇಳಿದರು, ಅಲ್ಲೆಲ್ಲಾ ರಸ್ತೆರೋಕೋ ಮಾಡಿದ್ದಾರೆ. ಎಲ್ಲಾ ಕಡೆಗೂ ಬಸ್ ಹಾಗೂ ಇತರ ವಾಹನಗಳನ್ನು ಬಿಡುತ್ತಿಲ್ಲವೆಂದು ಹೇಳಿದರು. ಅವಾಗಲೇ ಮಾನ್ಯ ಯತ್ನಾಳ್‌ರವರಿಗೆ ನಾನು ಫೋನ್ ಮಾಡಿದೆ. ನಾನು ಎಸ್.ಪಿ.ಯವರಿಗೂ ಫೋನ್ ಮಾಡಿ. ಡಿ.ಸಿ.ಯವರಿಗೂ ಕೂಡ ಫೋನ್ ಮಾಡಿ ರಾತ್ರಿ 9 ಗಂಟೆಗೆ, ಯತ್ನಾಳ್‌ರವರೂ ಕೂಡ ಫೋನ್ ಮಾಡಿದ್ದಕ್ಕೆ ಅವರು ಕೂಡ ಬಂದರು. ಆಗ ಅವರು ನಾವೇನು ಮಾಡುವುದಿಲ್ಲ, ರಸ್ತೆರೋಖೋ ಮಾಡುವುದಿಲ್ಲ ಎಂದರು. ನಾನೂ ಕೂಡ ಹಾಗೆ ಮಾಡಬೇಡಿ, ನಾನು ಅಲ್ಲಿಗೆ ಬರುತ್ತೇನೆ, ಆದರೆ ಈಗ ಅಧಿವೇಶನದ ಸಭೆ ನಡೆಯುತ್ತಿರುವುದರಿಂದ ಹೇಗೆ ಅಲ್ಲಿಗೆ ಬರುವುದಕ್ಕೆ ಆಗುತ್ತದೆ ಹೇಳಿ ಎಂದಾಗ, ಅದಕ್ಕೆ ಅವರು ನೀವು ಮತ್ತು ಖರ್ಗೆಯವರು ಬರಲೇಬೇಕು. ಬಂದು ನೀವು ಅಲ್ಲಿ ಹೇಳಬೇಕು ಎಂದರು. ಅದಕ್ಕೇ ನಾನು ಬೇರೆ ವಿಷಯಗಳನ್ನು ಪ್ರಸ್ತಾಪ ಮಾಡುವುದಿಲ್ಲ. ಅವರು ನಾಳೆ ಉತ್ತರ ಕೊಡುತ್ತಾರೆ. ಇವೊತ್ತು ಉಸ್ತುವಾರ ಸಚಿವರಿಗೂ ಕೂಡ ನೀವು ಹೋಗಿ ಬನ್ನಿ ಎಂದು ಹೇಳಿದ್ದೇನೆ. ಇನ್ನು 16ನೇ ತಾರೀಖಿನ ಸಭೆಗೆ ತಾವೂ ಕೂಡ ಬನ್ನಿ ಸಮಗ್ರವಾದ ಚರ್ಚೆಯನ್ನು ಮಾಡೋಣ ಎಲ್ಲಿ ನಾವು ಬೇರೆ ಕಡೆಗೆ ನೀರನ್ನು ಹರಿಸುತ್ತಿದ್ದೇವೆ. ಎಲ್ಲಿ ನಿಮ್ಮ ಹಕ್ಕು ಹೋಗುತ್ತಿದೆ ನೋಡೋಣ ಇವೊತ್ತು ಬಿಜಾಪುರವಾಗಲಿ, ಉತ್ತರ ಕರ್ನಾಟಕದ ಭಾಗದಲ್ಲಿ ಎಲ್ಲಾ ನಮ್ಮದು ಮತ್ತು ನಿಮ್ಮದು ಜಿಲ್ಲೆಗಳು ಎಲ್ಲಾ ಒಂದೇ. ನಾವು ಯಾವತ್ತೂ ಇಂಥ ಕೆಲಸವನ್ನು ಹಿಂದೆಯೂ ನಮ್ಮ ಜೀವನದಲ್ಲಿಯೇ ಮಾಡಲಿಲ್ಲ. ನಮಗೆ ಅಧಿಕಾರ ಇದೆ ಎಂದು ಬೇರೆ ಕಡೆಗೆ ಪ್ರಾಜೆಕ್ಟ್‌ಗಳನ್ನು ಡೈವರ್ಟ್ ಮಾಡಿಲ್ಲ. ನಾವೂ ಮಾಡಿಲ್ಲ. ಖರ್ಗೆಯವರೂ ಮಾಡಿಲ್ಲ. ಹೆಚ್.ಕೆ. ಪಾಟೀಲ್‌ರವರೂ ಮಾಡಿಲ್ಲ. ಅದಕ್ಕೇ ನಾನು ಹೇಳುತ್ತಿರುವುದು ಈ ಬಗ್ಗೆ ಸಮಗ್ರವಾದ ಚರ್ಚೆಯಾಗಲಿ ಆದರೆ ಎಲ್ಲಾ ಕಡೆ ಏನು ನಡೆಯುತ್ತಿದೆ ಎಂದರೆ ನಾಳೆಯೇ ಇದರ ಬಗ್ಗೆ ಹೇಳಬೇಕು ಎನ್ನುತ್ತಿದ್ದಾರೆ. ನಾಳೆಯೇ ಈ ಕೆಲಸವನ್ನು ಮಾಡುವುದಕ್ಕಾಗುವುದಿಲ್ಲ. ಆದರೆ ನಾಳೆ ಈ ಬಗ್ಗೆ ಉತ್ತರ ಕೊಡುತ್ತಾರೆ. ಈಗ ನಾನು ಏಕೆ ಎದ್ದು ನಿಂತು ಹೇಳುತ್ತಿದ್ದೇನೆ ಎಂದರೆ ಯತ್ನಾಳ್‌ರವರಿಗೆ ಯಡಿಯೂರಪ್ಪನವರು, ಜಗದೀಶ್ ಶೆಟ್ಟರ್‌ರವರು, ಕಾರ್‌ಜೋಳ್‌ರವರು ಹೇಳಿರಿ. ಈ ಸದನದಲ್ಲಿ ಮುಖ್ಯಮಂತ್ರಿಗಳು ಈ ಬಗ್ಗೆ ಚರ್ಚೆ ಮಾಡಲು ಸಭೆ ಕರೆಯುತ್ತೇವೆಂದು ಹೇಳಿದ್ದಾರೆಯಾದ್ದರಿಂದ ಆಮರಣಾಂತ ಉಪವಾಸ ಸತ್ಯಾಗ್ರಹವನ್ನು ನಿಲ್ಲಿಸಿ ಇಲ್ಲಿಗೆ ಚರ್ಚೆಗೆ ಬಂದರೆ ನಿಜವಾಗಿಯೂ ಕೂಡ ಸಭೆಯಲ್ಲಿ ಅವರೊಂದಿಗೆ ಮಾತನಾಡುತ್ತೇವೆ ಎಂದು ಎಲ್ಲಿ ನಾವು ಎಡವಿದ್ದೇವೆ ಅದನ್ನು ಸರಿಪಡಿಸುತ್ತೇವೆ. ಅದಕ್ಕೆ ಸರಿಯಾದ ಕ್ರಮವನ್ನೂ ಕೂಡ ಮಾಡುತ್ತೇವೆಯಾದ ಕಾರಣ ಅದಕ್ಕೆ ತಾವುಗಳೆಲ್ಲರೂ ಸಹಕಾರ ಕೊಡಿ ಎಂದು ನಾನು ಹೇಳಬಯಸುತ್ತೇನೆ.

ಛೇರ್ಮನ್ : ಈಗ ಇಂದಿನ ಚರ್ಚೆ ಮುಗಿದಿದೆ. ಈಗ ಸದನವನ್ನು ನಾಳೆ ಬೆಳಿಗ್ಗೆ 10.00 ಗಂಟೆವರೆಗೆ ಮುಂದೂಡುತ್ತಿದ್ದೇನೆ.

(ಸದನವು ಸಂಜೆ 5 ಗಂಟೆ 47 ನಿಮಿಷಕ್ಕೆ ಮುಂದೂಡಲ್ಪಟ್ಟು ಮತ್ತೆ ಪುನಃ 02-02-2005ರಂದು ಬೆಳಿಗ್ಗೆ 10.00 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)

ಅನುಬಂಧ-I ಚುಕ್ಕೆ ಗುರುತಿನ ಪ್ರಶ್ನೋತ್ತರಗಳು ದಿನಾಂಕ : 31-1-2005

61 (1462) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು – ಮೈಸೂರು ಕಾರಿಡಾರ್ ಎಕ್ಸ್‌ಪ್ರೆಸ್ ಕಾಮಗಾರಿ ಯೋಜನೆಯನ್ನು ಎಂದು ಪ್ರಾರಂಭಿಸಲಾಯಿತು.

ಆ) ಸದರಿಯೋಜನೆಯ ರೂಪುರೇಷೆಗಳೇನು?

ಇ) ಈ ಯೋಜನೆಯನ್ನು ಜಾರಿಗೊಳಿಸಲು ಮಾಡಿಕೊಂಡಿರುವ ಕರಾರುಗಳೇನು?

ಈ) ಯೋಜನೆಗೆ ರೈತರಿಂದ ಪಡೆಯುವ ಜಮೀನಿನ ನೋಂದಣಿ ಕೆಲಸವನ್ನು ಎಲ್ಲಿ ಮಾಡಬೇಕೆಂದು ತೀರ್ಮಾನವಾಗಿದೆ.

ಉ) ಈ ತೀರ್ಮಾನವನ್ನು ಬದಲಾಯಿಸಲು ಸರ್ಕಾರ ಯೋಚಿಸಿದೆಯೇ?

ಶ್ರೀ ಹೆಚ್. ಡಿ. ರೇವಣ್ಣ (ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಬೆಂಗಳೂರು ಮೈಸೂರು ಕಾರಿಡಾರ್ ಎಕ್ಸ್‌ಪ್ರೆಸ್ ಯೋಜನೆಯ 41 ಕಿ.ಮೀ. ಉದ್ದದ ಹೊರ ವರ್ತುಲ ರಸ್ತೆ ಹಾಗೂ 9.1 ಕಿ.ಮೀ ಲಿಂಕ್ ರಸ್ತೆಯ ಯೋಜನೆಯ ಮೊದಲನೇ ಹಂತದ ಕಾಮಗಾರಿಗಳನ್ನು ದಿನಾಂಕ 05.02.2004 ರಂದು ಪ್ರಾರಂಭಿಸಲಾಯಿತು.

ಆ) ಸದರಿ ಯೋಜನೆಯ ರಸ್ತೆಯು ಒಟ್ಟಾರೆ 111 ಕಿ.ಮೀ ಉದ್ದದ ವೇಗದ ಹೆದ್ದಾರಿ, 41 ಕಿ.ಮೀ ಉದ್ದದ ಹೊರ ವರ್ತುಲ ರಸ್ತೆ 9.1 ಕಿ.ಮೀ ಉದ್ದದ ಲಿಂಕ್ ರಸ್ತೆ, 3.1 ಕಿ.ಮೀ. ಉದ್ದ ಮೇಲು ರಸ್ತೆ ಹಾಗೂ ಅದಕ್ಕೆ ತತ್ಸಂಬಂಧವಾದ ಒಟ್ಟಾರೆ ಯೋಜನೆಯಲ್ಲಿ ಒಟ್ಟಾರೆ 16 ಇಂಟರ್‌ಚೇಂಜ್‌ಗಳನ್ನು ಒಳಗೊಂಡಿರುತ್ತದೆ. ಹಾಗೂ ಯೋಜನೆಯಲ್ಲಿ ಒಟ್ಟಾರೆ 5 ಉಪನಗರಗಳನ್ನು ಒಳಗೊಂಡಂತೆ ಸುಮಾರು 400 ಮೆಗಾ ವ್ಯಾಟ್ ವಿದ್ಯುತ್ ಉತ್ಪಾದಿಸುವ ಘಟಕ, ನೀರು ಸಂಸ್ಕರಣಾ ಘಟಕ, ದೂರವಾಣಿ ಸಂಪರ್ಕ ಹಾಗೂ ಇತರೆ ಮೂಲ ಸೌಲಭ್ಯ ಯೋಜನೆಗಳನ್ನೊಳಗೊಂಡಿವೆ.

ಇ) ದಿನಾಂಕ 20.02.1995ರಂದು ಸರ್ಕಾರವು ಭಾರತೀಯಮೂಲದ ಕಲ್ಯಾಣಿ ಗ್ರೂಪ್ ಸಂಸ್ಥೆ ಹಾಗೂ ಅಮೇರಿಕ ಮೂಲದ SAB ಮತ್ತು VHB ಕಪನಿಗಳೊಂದಿಗೆ ಪರಸ್ಪರ ತಿಳುವಳಿ ಪತ್ರಕ್ಕೆ (MOU) ಪರಸ್ಪರ ಸಹಿ ಮಾಡಿದೆ. ಹಾಗೂ ಮುಂದುವರೆದಂತೆ ದಿನಾಂಕ: 03.04.1997 ರಂದು ನಂದಿ ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಎಂಟರ್‌ಪ್ರೈಸಸ್ ಲಿಮಿಟಡ್ (NICEL) ಕಂಪನಿಯೊಂದಿಗೆ ಸರ್ಕಾರವು ಫ್ರೇಮ್‌ವರ್ಕ್ ಕರಾರು ಒಪ್ಪಂದಕ್ಕೆ ಪರಸ್ಪರ ಒಪ್ಪಿ ಕರಾರಿಗೆ ಸಹಿ ಮಾಡಲಾಗಿದೆ.

ಈ) ಯೋಜನೆಗೆ ಭೂಸ್ವಾಧೀನಪಡಿಸಿಕೊಂಡ ಖಾಸಗಿ ಜಮೀನನ್ನು ರೈತರಿಂದ ಪಡೆಯುವ ಜಮೀನುಗಳಿಗೆ ಸಂಬಂಧಿಸಿದಂತೆ ಆಯಾಯಾ ಉಪ ನೋಂದಣಿ ಅಧಿಕಾರಿಗಳ ಪ್ರದೇಶದ ವ್ಯಾಪ್ತಿಯಲ್ಲಿ ಕಾನೂನು ರೀತಿಯ ನೋಂದಣಿ ಮಾಡಲಾಗುತ್ತದೆ.

ಉ) ಇಲ್ಲ.

63 (1451) ಶ್ರೀ ನೆ.ಲ.ನರೇಂದ್ರ ಬಾಬು (ರಾಜಾಜಿನಗರ) : ಮಾನ್ಯ ಕಾರ್ಮಿಕ ಮತ್ತು ಹಜ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ಉದ್ಯೋಗ ವಿನಿಮಯ ಕೇಂದ್ರಗಳೆಷ್ಟು?: ಈಗಾಗಲೇ ಎಷ್ಟು ಕೇಂದ್ರಗಳನ್ನು ಮುಚ್ಚಲಾಗಿದೆ: ಇದರಲ್ಲಿ ಎಷ್ಟು ಜನರು ನೋಂದಾಯಿಸಿದ್ದಾರೆ (ಅಂಕಿ ಅಂಶಗಳ ವಿವರ ನೀಡುವುದು).

ಆ) 2002ನೇ ಇಸವಿಯಿಂದ ಇಲ್ಲಿಯವರೆಗೆ ನಿರುದ್ಯೋಗಿಗಳಿಗೆ ಈ ಕೇಂದ್ರಗಳಿಂದ ಉದ್ಯೋಗ ನೀಡಲಾದ ಅಂಕಿ ಅಂಶಗಳನ್ನು ನೀಡುವುದು;

ಇ) ಈ ಕೇಂದ್ರಗಳನ್ನು ಸರ್ಕಾರ ಖಾಸಗಿಯವರಿಗೆ ವಹಿಸಿಕೊಡುವ ಆಲೋಚನೆ ಇದೆಯೇ?

ಶ್ರೀ ತನ್ವೀರ ಸೇಠ್ (ಮಾನ್ಯ ಕಾರ್ಮಿಕ ಮತ್ತು ಹಜ್ ರಾಜ್ಯ ಸಚಿವರು):

ಅ) 30

ಮುಚ್ಚಿರುವುದಿಲ್ಲ.

16,13,494 ಅಭ್ಯರ್ಥಿಗಳು ನವೆಂಬರ್ 2004ರವರೆವಿಗೆ ನೊಂದಾಯಿಸಿರುತ್ತಾರೆ. ವಿವರ ಈ ಕೆಳಗಿನಂತಿದೆ.

1	ಕಲೆ, ವಿಜ್ಞಾನ ಮತ್ತು ವಾಣಿಜ್ಯ ಪದವೀಧರರು.	79,522
2	ಇಂಜಿನಿಯರಿಂಗ್ ಪದವೀಧರರು.	18,418
3	ವೈದ್ಯಕೀಯ ಪದವೀಧರರು	1,240
4	ಇತರೆ ಪದವೀಧರರು	41,643
5	ಕಲೆ, ವಿಜ್ಞಾನ ಮತ್ತು ವಾಣಿಜ್ಯ ಸ್ನಾತಕೋತ್ತರ ಪದವೀಧರರು	12,864
6	ಇಂಜಿನಿಯರಿಂಗ್ ಸ್ನಾತಕೋತ್ತರ ಪದವೀಧರರು.	354
7	ಇತರೆ ಸ್ನಾತಕೋತ್ತರ ಪಧವೀಧರ	1,263
8	ಡಿಪ್ಲೋಮಾದಾರರು	36,716
9	ಐ.ಟಿ.ಐ/ಎ.ಟಿ.ಎಸ್/ ಇತರೆ ಪ್ರಮಾಣ ಪತ್ರ ಹೊಂದಿರುವವರು	76,604
10	ಎಸ್.ಎಸ್.ಎಲ್.ಸಿ. ಉತ್ತೀರ್ಣರು	10,55,194
11	ಎಸ್.ಎಸ್.ಎಲ್.ಸಿ. ಅನುತ್ತೀರ್ಣರು	1,37,711
12	ಅಕ್ಷರಸ್ತರು/ಅನಕ್ಷರಸ್ತರು ಮತ್ತಿತರರೂ ಸೇರಿದಂತೆ.	1,51,965
	ಒಟ್ಟು	**16,13,494**

ಆ) 7,671 ವಿವರ ಈ ಕೆಳಕಂಡಂತಿದೆ.

ಕ್ರಮ ಸಂಖ್ಯೆ	ವರ್ಷ	ಉದ್ಯೋಗ ದೊರೆತವರ ಸಂಖ್ಯೆ
1	2002	3,112
2	2003	2,968
3	2004	1,591
	ಒಟ್ಟು	**7,671**

ಇ) ಇಲ್ಲ.

64(197) : ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು (ಶಿವಾಜಿನಗರ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರಿನ ವಿಧಾನ ಸೌಧದ ಪಕ್ಕದಲ್ಲಿ ನಿರ್ಮಿಸುತ್ತಿರುವ ವಿಕಾಸ ಸೌದಕಾಗಿ ಇಲ್ಲಿಯವರೆಗೆ ಖರ್ಚಾದ ಹಣವೆಷ್ಟು;

ಆ) ಈ ವಿಕಾಸ ಸೌಧದ ನಿರ್ಮಾಣ ಕಾಮಗಾರಿಯು ಕರಾರು ಪ್ರಕಾರ ಎಂದು ಪೂರ್ಣಗೊಳ್ಳಬೇಕಾಗಿತ್ತು;

ಇ) ಈ ಕಟ್ಟಡದ ಎಲ್ಲಾ ಕಾಮಗಾರಿ ಪೂರ್ಣಗೊಂಡು ಎಂದಿನಿಂದ ಸರ್ಕಾರಿ ಕಛೇರಿಗಳನ್ನು ಈ ಹೊಸ ಕಟ್ಟಡಕ್ಕೆ ಸ್ಥಳಾಂತರಿಸಲಾಗುವುದು;

ಈ) ಈ ಕಟ್ಟಡಕ್ಕೆ ಬೇಕಾಗುವ ಪೀಠೋಪಕರಣ, ಇತ್ಯಾದಿಗಳನ್ನು ಒದಗಿಸಲು ಬೇಕಾಗುವ ಹಣವೆಷ್ಟು;

ಉ) ಈ ಹೊಸ ಕಟ್ಟಡಕ್ಕೆ ಯಾವ ಯಾವ ಸರ್ಕಾರಿ ಕಛೇರಿಗಳು ಸ್ಥಳಾಂತರವಾಗುತ್ತವೆ; (ವಿವರ ನೀಡುವುದು)?

ಶ್ರೀ ಹೆಚ್.ಡಿ. ರೇವಣ್ಣ (ಮಾನ್ಯ ಲೋಕೋಪಯೋಗಿ ಸಚಿವರು) :

ಅ) ಬೆಂಗಳೂರಿನ ವಿಧಾನ ಸೌಧದ ಪಕ್ಕದಲ್ಲಿ ನಿರ್ಮಿಸುತ್ತಿರುವ ವಿಕಾಸ ಸೌಧಕ್ಕೆ ಡಿಸೆಂಬರ್ 2004ರ ಅಂತ್ಯದವರೆಗೆ ರೂ. 98.00 ಕೋಟಿಗಳನ್ನು ವೆಚ್ಚ ಮಾಡಲಾಗಿದೆ.

ಆ) ಮೂಲ ಗುತ್ತಿಗೆ ಕರಾರಿನಂತೆ ಈ ಕಾಮಗಾರಿಯನ್ನು ದಿನಾಂಕ : 31.8.2004 ರೊಳಗೆ ಪೂರ್ಣಗೊಳಿಸಬೇಕಾಗಿತ್ತು.

ಇ) ಈ ಕಟ್ಟಡದ ಹೆಚ್ಚುವರಿ ಕಾಮಗಾರಿಗಳು ಪರಿಪೂರ್ಣಗೊಂಡ ನಂತರವೇ ಸರ್ಕಾರಿ ಕಛೇರಿಗಳನ್ನು ಈ ಹೊಸ ಕಟ್ಟಡಕ್ಕೆ ಸ್ಥಳಾಂತರಿಸಲಾಗುವುದು.

ಈ) ರೂ. 18.00 ಕೋಟಿಗಳು.

ಉ) ಈ ಕೆಳಕಂಡ ಇಲಾಖೆಗಳ ಸರ್ಕಾರಿ ಕಛೇರಿಗಳು ಸ್ಥಳಾಂತರಗೊಳ್ಳುತ್ತವೆ.

1) ಮುಖ್ಯ ಮಂತ್ರಿಗಳ ಕಛೇರಿಗಳು
2) ಕೃಷಿ ಮತ್ತು ತೋಟಗಾರಿಕೆ ಇಲಾಖೆ
3) ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ
4) ಮೂಲ ಸೌಲಭ್ಯ ಅಭಿವೃದ್ಧಿ ಇಲಾಖೆ
5) ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ
6) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
7) ಸಹಕಾರ ಇಲಾಖೆ
8) ಸಮಾಜ ಕಲ್ಯಾಣ ಇಲಾಖೆ
9) ಇಂಧನ ಇಲಾಖೆ
10) ವಸತಿ ಇಲಾಖೆ
11) ಜಲ ಸಂಪನ್ಮೂಲ ಇಲಾಖೆ
12) ಲೋಕೋಪಯೋಗಿ ಇಲಾಖೆ
13) ನಗರಾಭಿವೃದ್ಧಿ ಇಲಾಖೆ

14) ಕನ್ನಡ ಮತ್ತು ಸಂಸ್ಕೃತಿ ಇಲಾಖೆ

15) ಕಾರ್ಮಿಕ ಇಲಾಖೆ.

65 (104) ಶ್ರೀ ಬಸವರಾಜು ಎ. ಎಸ್ (ಅರಸೀಕೆರೆ) : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರೈತರು ನೀರಾವರಿ ಸೌಲಭ್ಯಕ್ಕಾಗಿ ನಿರಂತರ ಗುಣಮಟ್ಟದ ವಿದ್ಯುತ್ ಪಡೆಯಲು ಸ್ವಂತ ಟ್ರಾನ್ಸ್ ಫಾರ್ಮರ್ ಅಳವಡಿಸುವ ಯೋಜನೆ ಯಾವ ಹಂತದಲ್ಲಿದೆ;

ಆ) ಇದರ ಕಾರ್ಯ ಯೋಜನೆಯ ವಿವರಗಳೇನು;

ಇ) ಈಗಾಗಲೇ ರಾಜ್ಯದಲ್ಲಿ ಎಷ್ಟು ಜನ ರೈತರು ಇದರ ಪ್ರಯೋಜನ ಪಡೆದಿದ್ದಾರೆ.

ಈ) ಇದಕ್ಕಾಗಿ ರೈತರು ನೀಡಬೇಕಾಗಿರುವ ಹಣ ಎಷ್ಟು ಹಾಗೂ ಇದರ ಮಾನದಂಡಗಳೇನು;

ಉ) ಈ ಟ್ರಾನ್ಸ್ ಫಾರ್ಮರ್ ಅಳವಡಿಕೆಗೆ ತಗಲುವ ವೆಚ್ಚವೆಷ್ಟು;

ಊ) ಕೆ.ಪಿ.ಟಿ.ಸಿ.ಎಲ್. ಎಷ್ಟು ಹಣ ನೀಡುತ್ತದೆ (ವಿವರ ನೀಡುವುದು);

ಋ) ಇದು ರೈತರಿಗೆ ಉಪಯೋಗಕ್ಕಿಂತ ತೊಂದರೆಯೇ ಹೆಚ್ಚು ಇದೆ ಎಂಬ ಬಗ್ಗೆ ಸರ್ಕಾರದ ನಿಲುವೇನು (ವಿವರ ನೀಡುವುದು);

ೠ) ಸದರಿ ಯೋಜನೆಯನ್ನು ರದ್ದುಪಡಿಸಲಾಗುವುದೇ ಅಥವಾ ಪನಃ ಮುಂದುವರಿಸಲಾಗುವುದೇ?

ಶ್ರೀ ಹೆಚ್. ಡಿ. ರೇವಣ್ಣ (ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ನೀರಾವರಿ ಪಂಪುಸೆಟ್ಟು ಬಳಕೆದಾರರ ಅನುಕೂಲಕ್ಕಾಗಿ ಮತ್ತು ಗುಣಮಟ್ಟದ ವಿದ್ಯುತ್ ಸರಬರಾಜಿಗಾಗಿ ಸರ್ಕಾರವು "ನಿಮ್ಮದೇ ಆದ ಸ್ವಂತ ಟ್ರಾನ್ಸ್‌ಫಾರ್ಮರ್ ಹೊಂದಿ" (ಓವೈಟಿ) ಯೋಜನೆಯನ್ನು ಈ ಹಿಂದೆ ದಿನಾಂಕ 21-10-2003ರ ಆದೇಶದ ಮೂಲಕ ಜಾರಿಗೆ ತಂದಿರುತ್ತದೆ. ಆದರೆ, ಈ ಯೋಜನೆಯಡಿ ವಿದ್ಯುತ್ ಸಂಪರ್ಕ ಪಡೆಯಲು ರೈತರಿಂದ ಅಂತಹ ಒಳ್ಳೆಯ ಪ್ರತಿಕ್ರಿಯೆ ಬಂದಿರುವುದಿಲ್ಲ.

ಆ) ಇದರ ಕಾರ್ಯ ಯೋಜನೆಯ ವಿವರಗಳು ಈ ಕೆಳಕಂಡಂತಿವೆ.

ಅ) ಹೊಸ 11 ಕೆ.ವಿ. ಹೆಚ್.ಟಿ. ಮಾರ್ಗವನ್ನು ವಿಸ್ತರಿಸಿ, ಹಾಗೂ 10/15 ಕೆ.ವಿ.ಎ ಸಾಮರ್ಥ್ಯದ ಟ್ರಾನ್ಸ್‌ಫಾರ್ಮರ್‌ನ್ನು ಅಳವಡಿಸಿ ಹೊಸ ನೀರಾವರಿ ಪಂಪುಸೆಟ್ಟು ಸ್ಥಾವರಗಳಿಗೆ ವಿದ್ಯುತ್ ಸಂಪರ್ಕವನ್ನು ಕಲ್ಪಿಸುವುದು.

ಆ) ಪ್ರತಿಯೊಂದು ನೀರಾವರಿ ಪಂಪುಸೆಟ್ಟಿಗೆ ಪ್ರತ್ಯೇಕವಾದ 10/15 ಕೆ.ವಿ.ಎ. ಸಾಮರ್ಥ್ಯದ ವಿತರಣಾ ಟ್ರಾನ್ಸ್‌ಫಾರ್ಮರ್‌ನ್ನು ಅಳವಡಿಸುವುದರಿಂದ, ರೈತರು ತಮ್ಮ ಪಂಪ್‌ಸೆಟ್ಟಿಗೆ ತಮ್ಮದೇ ಆದ ವಿತರಣಾ ಟ್ರಾನ್ಸ್‌ಫಾರ್ಮರ್‌ನ್ನು ಹೊಂದುವುದರ ಜೊತೆಗೆ, ಅನಧಿಕೃತ ನೀರಾವರಿ ಪಂಪುಸೆಟ್ಟುಗಳ ಬೆಳವಣಿಗೆಗೆ ಕಡಿವಾಣ ಹಾಕುವುದಕ್ಕೆ ಸಹಕಾರಿಯಾಗುತ್ತದೆ. ಅಲ್ಲದೇ, ವಿದ್ಯುತ್ತಿನ ಗುಣಮಟ್ಟದಲ್ಲಿ ಸುಧಾರಣೆ ಆಗುತ್ತದೆ. ಎಲ್.ಟಿ. ಲೈನ್ ವಿಸ್ತರಣೆ ಇರುವುದಿಲ್ಲ. ಕಡಿಮೆ ಅವಧಿಯಲ್ಲಿ ಪಂಪುಸೆಟ್ಟು ಹೆಚ್ಚಿನ ಪ್ರಮಾಣದಲ್ಲಿ ನೀರನ್ನು ಹಾಯಿಸುತ್ತದೆ.

ಇ) ರಾಜ್ಯದಲ್ಲಿ ಸದರಿ ಯೋಜನೆಯಡಿಯಲ್ಲಿ ತಮ್ಮ ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಸಂಪರ್ಕ ಪಡೆದಿರುವ ರೈತರ ಒಟ್ಟು ಸಂಖ್ಯೆ 3155.

ಈ) ಈ ಯೋಜನೆಯಡಿ ವಿದ್ಯುತ್ ಸಂಪರ್ಕ ಪಡೆಯಲು ವಿದ್ಯುತ್ ಮಾರ್ಗ ನಿರ್ಮಾಣ ಮತ್ತು ಟ್ರಾನ್ಸ್‌ಫಾರ್ಮರ್ ಅಳವಡಿಕೆಗೆ ತಗಲುವ ವೆಚ್ಚದಲ್ಲಿ ವಿದ್ಯುತ್ ಸರಬರಾಜು ಕಂಪನಿಗಳು ಮತ್ತು ನೀರಾವರಿ ಪಂಪುಸೆಟ್ಟು ಅರ್ಜಿದಾರರು 50:50 ಅನುಪಾತದ ಆಧಾರದ ಮೇಲೆ ಭರಿಸಬೇಕಾಗಿರುತ್ತದೆ. ಭಾವಿ ನೀರಾವರಿ ಪಂಪುಸೆಟ್ಟು ಬಳಕೆದಾರರು ಈ ಯೋಜನೆಯಡಿ ವಿದ್ಯುತ್ ಸಂಪರ್ಕ ಪಡೆಯಲು ವಿದ್ಯುತ್ ಮಾರ್ಗ ನಿರ್ಮಾಣ ಮತ್ತು ಟ್ರಾನ್ಸ್ ಫಾರ್ಮರ್ ಅಳವಡಿಕೆಗೆ ತಗಲುವ ವೆಚ್ಚದಲ್ಲಿ ಅವರುಗಳ ಪಾಲನ್ನು ಅಂದರೆ, 25,000/- ರೂ. ಗಳನ್ನು ಪಾವತಿಸಬೇಕಾಗಿರುತ್ತದೆ. ಉಳಿದ ಹಣವನ್ನು ವಿದ್ಯುತ್ ಸರಬರಾಜು ಕಂಪನಿಗಳು ತಾವೇ ಸ್ವಯಂ ಭರಿಸುತ್ತಿವೆ.

ಉ) ಈ ಯೋಜನೆಯಡಿ ಪ್ರತಿ ಹೊಸ ನೀರಾವರಿ ಪಂಪುಸೆಟ್ಟಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ವಿದ್ಯುತ್ ಮಾರ್ಗ ನಿರ್ಮಾಣ ಮತ್ತು ಟ್ರಾನ್ಸ್‌ಫಾರ್ಮರ್ ಅಳವಡಿಕೆಗೆ ತಗಲುವ ವೆಚ್ಚ ಸುಮಾರು 50,000/- ರೂ.ಗಳೆಂದು ಅಂದಾಜು ಮಾಡಲಾಗಿದ್ದು. ಈ ವೆಚ್ಚದಲ್ಲಿ ನೀರಾವರಿ ಪಂಪುಸೆಟ್ಟು ಅರ್ಜಿದಾರರು ರೂ. 25,000/- ಗಳನ್ನು ಪಾವತಿಸಬೇಕಾಗಿರುತ್ತದೆ. ಉಳಿದ ರೂ. 25.000/- ಗಳನ್ನು ವಿದ್ಯುತ್ ಸರಬರಾಜು ಕಂಪನಿಗಳು ಭರಿಸಬೇಕಾಗಿರುತ್ತದೆ. ಈ ಯೋಜನೆಯಡಿ ವಿದ್ಯುತ್ ಸಂಪರ್ಕ ನೀಡಲು ತಗಲುವ ವೆಚ್ಚವು ಒಂದು ವೇಳೆ ಹೆಚ್ಚಾದಲ್ಲಿ ಅದನ್ನೂ ಸಹ ವಿದ್ಯುತ್ ಸರಬರಾಜು ಕಂಪನಿಗಳೇ ಸಂಪೂರ್ಣವಾಗಿ ಭರಿಸಬೇಕಾಗಿರುತ್ತದೆ.

ಋ) ನೀರಾವರಿ ಪಂಪುಸೆಟ್ಟು ಬಳಕೆದಾರರ ಅನುಕೂಲಕ್ಕಾಗಿಯೇ ಸರ್ಕಾರವು ಈ ಯೋಜನೆಯನ್ನು ಜಾರಿಗೆ ತಂದಿರುತ್ತದೆ. ಈ ಯೋಜನೆಯ ಪ್ರಯೋಜನೆಗಳು ಈ ಕೆಳಕಂಡಂತಿವೆ.

1) ಎಲ್.ಟಿ. ಮಾರ್ಗಗಳು ಇಲ್ಲದಿರುವುದರಿಂದ ಎಲ್.ಟಿ. ಮಾರ್ಗದಲ್ಲಿ ವೋಲ್ಟೇಜ್ ಡ್ರಾಪ್ ಆಗುವ ಸಂಭವ ಇರುವುದಿಲ್ಲ.

2) ವೋಲ್ಟೇಜ್‌ನ ಮಟ್ಟದಲ್ಲಿ ಸುಧಾರಣೆಯಾಗುತ್ತದೆ.

3) ಪಂಪುಸೆಟ್ಟುಗಳು ಹೆಚ್ಚು ಸಮರ್ಥವಾಗಿ ಕಾರ್ಯನಿರ್ವಹಿಸುತ್ತವೆ. ಆದ್ದರಿಂದ, ಅದೇ ಅವಧಿಯಲ್ಲಿ ಹೆಚ್ಚು ನೀರು ಎತ್ತಬಹುದು.

4) ರೈತ ಸಮೂಹಕ್ಕೆ ಗುಣಮಟ್ಟದ ವಿದ್ಯುತ್ ಸರಬರಾಜನ್ನು ಖಾತ್ರಿಮಾಡುತ್ತದೆ.

5) ಅನಧಿಕೃತವಾಗಿ ವಿದ್ಯುತ್ ಪಡೆಯುವುದನ್ನು ತಡೆಗಟ್ಟಬಹುದು. ತತ್ಪರಿಣಾಮವಾಗಿ ಅನಧಿಕೃತ ಲೋಡಿನಿಂದ ಆಗುವ ಟ್ರಾನ್ಸ್‌ಫಾರ್ಮರ್‌ನ ವಿಫಲತೆಯು ಕಡಿಮೆಯಾಗುವುದರಿಂದ, ಅಧಿಕೃತ ನೀರಾವರಿ ಪಂಪುಸೆಟ್ಟು ಬಳಕೆದಾರರಿಗೆ ಆಗುವ ವಿದ್ಯುತ್ ಅಡಚಣೆಯನ್ನು ತಡೆಗಟ್ಟಬಹುದಾಗಿದೆ.

ಆದಾಗ್ಯೂ ಈ ಯೋಜನೆಯು ದುಬಾರಿಯದ್ದಾಗಿದ್ದು ಮತ್ತು ರೈತರಿಗೆ ಪ್ರಿಯದಾಯಕವಾಗಿರುವುದಿಲ್ಲ.

ೠ) ರೈತರು ಈ ಯೋಜನೆಯ ಬಗ್ಗೆ ಅಷ್ಟೊಂದು ಉತ್ಸುಕರಾಗಿಲ್ಲದೇ ಇರುವುದರಿಂದ ಹಾಗೂ ಜನಪ್ರತಿನಿಧಿಗಳು ಹಲವಾರು ಸಂದರ್ಭಗಳಲ್ಲಿ 'ಓವೈಟಿ' ಯೋಜನೆಯಡಿ ನಿಗದಿಪಡಿಸಲಾದ ಶುಲ್ಕವು ರೈತರುಗಳಿಗೆ ಹೊರೆಯಾಗುತ್ತಿದೆಯೆಂದು ಸರ್ಕಾರದ ಗಮನಕ್ಕೆ ತಂದಿರುವ ಹಿನ್ನೆಲೆಯಲ್ಲಿ, ಇದಕ್ಕೆ ಪರ್ಯಾಯವಾಗಿ ನೀರಾವರಿ ಪಂಪುಸೆಟ್ಟುಗಳ ವಿದ್ಯುದೀಕರಣದ ಬಗ್ಗೆ ಹೊಸ ಪ್ರಸ್ತಾವನೆಯನ್ನು ಸರ್ಕಾರ ಪರಿಶೀಲಿಸುತ್ತಿದೆ.

66 (1044) Sri. Madhuswamy J. C (Chikkanaykanahalli) Minister for Public Works & Energy will be pleased to state?

a) What is the amount of works executed against the work orders in Public Works Department under 3054 Head of Account during the previous 3 years.

b) What is the amount of works which have been stopped after calling tenders.

c) What is the season for canceling this Head of Account.

d) What is the amount to be paid to contractors under this Head of Account.

e) Pending since how many years (Give year wise details)

Sri H.D. Revanna (Minister for Public Works & Energy) :

a) The amount of works executed against the work orders in Public Works Department under 3054 (Non Plan) Head of Account during the previous 3 years is Rs.38530.22 lakhs.

Year wise details is as below.

Year	Amount (Rs.in laksh)
2001-2002	11433.55
2002-2003	10742.05
2003-2004	16354.62

b) In connection with North Zone and South Zone the amount of works which have been stopped after calling tenders is Rs. 4213.83 lakhs

c) As the Mukhya Mantri Grameena Raste Abhivruddhi Nidhi was created during 2004-05 under Head of Account 3054 (Plan) hence the non-plan head of Account was cancelled.

d) Rs. 15109.88 laksh is pending under this Head of Account as on 31-12-2004 and to be paid to contractors.

e) Amount of Pending Bills are as below:

Year	Pending Bill Amt. (Rs.in laksh)
2000-2001	13.19
2001-2002	321.32

2002-2003	1687.94
2003-2004	8413.65
2004-2005 (upto 31-12-04)	4673.78
	15109.88

67 (701) ಶ್ರೀಮತಿ ಶಕುಂತಲಾ ಟಿ. ಶೆಟ್ಟಿ (ಪುತ್ತೂರು) : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಕ್ಷಿಣಕನ್ನಡ, ಪುತ್ತೂರು ತಾಲ್ಲೂಕು ನೆಲ್ಯಾಡಿ ವಿದ್ಯುತ್ ಸಬ್–ಸ್ಟೇಷನ್ ನಿರ್ಮಾಣ ಮಾಡುವ ಯೋಜನೆ ಸರ್ಕಾರದ ಮುಂದಿದೆಯೇ:

ಆ) ಇದ್ದಲ್ಲಿ ಇದಕ್ಕಾಗಿ ಸರ್ಕಾರ ಬಿಡುಗಡೆಗೊಳಿಸಿದ ಹಣ ಎಷ್ಟು:

ಇ) ಸದರಿ ಕಾಮಗಾರಿಗೆ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆಯೇ:

ಈ) ಇದರ ಟೆಂಡರ್ ಪ್ರಕ್ರಿಯೆಗಳು ಯಾವ ಹಂತದಲ್ಲಿವೆ:

ಉ) ಕಾಮಗಾರಿಗೆ ಶಂಕುಸ್ಥಾಪನೆ ಆಗಿದೆಯೇ:

ಊ) ಯಾವಾಗ ಕಾಮಗಾರಿಗಳನ್ನು ಕೈಗೆತ್ತಿಕೊಂಡು ಮುಗಿಸಲಾಗುವುದು?

ಶ್ರೀ ಹೆಚ್. ಡಿ. ರೇವಣ್ಣ (ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಹೌದು, ದಕ್ಷಿಣಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕು ನೆಲ್ಯಾಡಿಯಲ್ಲಿ ಒಂದು 33/11 ಕೆವಿ ವಿದ್ಯುತ್ ಸಬ್–ಸ್ಟೇಷನ್ (ಎಂ.ಯು.ಎಸ್.ಎಸ್) ನಿರ್ಮಾಣ ಮಾಡುವ ಪ್ರಸ್ತಾವನೆ ಇರುತ್ತದೆ.

ಆ) ಈ ಕಾಮಗಾರಿಯ ಅಂದಾಜು ವೆಚ್ಚ ರೂ. 173.83 ಲಕ್ಷಗಳಾಗಿದ್ದು, ಇದಕ್ಕೆ ಬೇಕಾದ ಹಣವನ್ನು ಸರ್ಕಾರವು ಒದಗಿಸುವುದಿಲ್ಲ. ಈ ಕಾಮಗಾರಿಗೆ ಬೇಕಾಗಿರುವ ಹಣಕಾಸಿನ ಸಾಲ–ಸೌಲಭ್ಯದ ನೆರವಿಗಾಗಿ ಪಿ.ಎಫ್.ಸಿ. ಹಣಕಾಸು ಸಂಸ್ಥೆಯು ತಾತ್ವಿಕವಾಗಿ ಒಪ್ಪಿಗೆಯನ್ನು ಮಂಗಳೂರು ವಿದ್ಯುತ್ ಸರಬರಾಜು ಕಂಪನಿಗೆ ನೀಡಿರುತ್ತದೆ. ಸದರಿ ಹಣಕಾಸು ಸಂಸ್ಥೆಯು ಪ್ರಸ್ತುತ ಶೇಕಡ 8.5 ರಷ್ಟು ಬಡ್ಡಿ ದರದಲ್ಲಿ ಸಾಲ–ಸೌಲಭ್ಯವನ್ನು ನೀಡುತ್ತಿರುತ್ತದೆ.

ಇ) ಹೌದು, ಸದರಿ ಕಾಮಗಾರಿಗೆ ಮಂಗಳೂರು ವಿದ್ಯುತ್ ಸರಬರಾಜು ಕಂಪನಿಯು ಆಡಳಿತಾತ್ಮಕ ಮಂಜೂರಾತಿಯನ್ನು ನೀಡಿರುತ್ತದೆ.

ಈ) ಈ ಕಾಮಗಾರಿಗೆ ಫೆಬ್ರವರಿ 2004 ರಲ್ಲಿ ಟೆಂಡರನ್ನು ಕರೆಯಲಾಗಿತ್ತು. ಸದರಿ ಟೆಂಡರ್ ಪ್ರಕ್ರಿಯೆಗೆ 7 ಮಂದಿ ಗುತ್ತಿಗೆದಾರರು ಟೆಂಡರ್ ಫಾರಂಗಳನ್ನು ಪಡೆದಿದ್ದು ದಿನಾಂಕ 25–03–2004 ರಂದು ಟೆಂಡರ್‌ಗಳನ್ನು ತೆರೆದಾಗ ಯಾವುದೇ ಗುತ್ತಿಗೆದಾರರು ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಿರಲಿಲ್ಲ. ಈ ಪ್ರದೇಶವು ರಕ್ಷಿತ ಅರಣ್ಯದಲ್ಲಿದೆ. ವಿದ್ಯುತ್ ಲೈನ್ ರಕ್ಷಿತ ಅರಣ್ಯ ಪ್ರದೇಶದಲ್ಲಿ ಹಾದು ಹೋಗುವುದರಿಂದ ಅರಣ್ಯ ಇಲಾಖೆಯ ಒಪ್ಪಿಗೆ ಪಡೆಯಬೇಕಾಗಿರುತ್ತದೆ. ಈ ಪ್ರಕ್ರಿಯೆಯನ್ನು ಮಾಡಲು ಕ್ರಮ ತೆಗೆದುಕೊಳ್ಳಲಾಗಿದೆ. ಮತ್ತೊಮ್ಮೆ ಸದರೀ ಕಾಮಗಾರಿಯ ಟೆಂಡರ್ ಪ್ರಕ್ರಿಯೆಯನ್ನು ಮಾಡಲೂ ಸಹ ಕ್ರಮ ತೆಗೆದುಕೊಳ್ಳಲಾಗಿದೆ.

ಉ) ಹೌದು. ಸದರಿ ಕಾಮಗಾರಿಗೆ ದಿನಾಂಕ 13–02–2004 ರಂದು ಶಂಕುಸ್ಥಾಪನೆ ಆಗಿರುತ್ತದೆ.

ಊ) ಈ ಕಾಮಗಾರಿಗೆ ಪುನಃ ಟೆಂಡರನ್ನು ಕರೆಯಬೇಕಾಗಿರುವ ಹಿನ್ನೆಲೆಯಲ್ಲಿ 'ರೀ–ಟೆಂಡರಿಂಗ್' ಪ್ರಕ್ರಿಯೆ ಮುಗಿದ ನಂತರ ಗುತ್ತಿಗೆದಾರರನ್ನು ನಿಗದಿಪಡಿಸಿ ಮುಂಬರುವ ವರ್ಷವಾದ

2005–06 ರಲ್ಲಿ ಸದರೀ ವಿದ್ಯುತ್ ಸಬ್–ಸ್ಟೇಷನ್ನಿನ ನಿರ್ಮಾಣ ಕಾರ್ಯವನ್ನು ಕೈಗೆತ್ತಿಕೊಂಡು ಅದೇ ವರ್ಷದ ಅಂತ್ಯದೊಳಗೆ ಪೂರ್ಣಗೊಳಿಸಲು ಗುರಿಯನ್ನು ಹೊಂದಲಾಗಿದೆ. ಆದರೆ ವಿದ್ಯುತ್ ಲೈನನ್ನೂ ರಕ್ಷಿತ ಅರಣ್ಯ ಪ್ರದೇಶದಲ್ಲಿ ತೆಗೆದುಕೊಂಡು ಹೋಗಬೇಕಾಗಿರುವುದರಿಂದ ಅರಣ್ಯ ಇಲಾಖೆಯ ಸಂಬಂಧಪಟ್ಟ ಅಧಿಕಾರ ವರ್ಗದಿಂದ ಅನುಮತಿ ತೆಗೆದುಕೊಳ್ಳಬೇಕಾಗುತ್ತದೆ. ಈ ಅನುಮತಿ ಬಂದ ನಂತರವೇ ವಿದ್ಯುತ್ ಲೈನಿನ ಕಾಮಗಾರಿಯನ್ನು ಕೈಗೆತ್ತಿಕೊಳ್ಳಬಹುದಾಗಿದೆ.
ಈ ಅನುಮತಿ ಬಂದ ನಂತರವೇ ವಿದ್ಯುತ್ ಲೈನಿನ ಕಾಮಗಾರಿಯನ್ನು ಕೈಗೆತ್ತಿಕೊಳ್ಳಬಹುದಾಗಿದೆ.

68 (1055) Sri. Jeevaraja D.N. (Sringeri) : Hon'ble Minister for Public works & Energy will be pleased to State?

a) Whether it has come to notice of Government that, heavily loaded vehicles are plying on the roads, coming under Sringeri, Narasimharajapura and Koppa Taluks Perview?

b) What actions are being taken by the Govt., to prevent damages to the roads on account of lorries carrying sand and Iron Ore with loads more than the permitted load.

c) What is permissible load allowed by the Govt., for carrying load by vehicles?

d) Is there any proposal before the Govt. to sanction special grants for improvements of these roads.

Sri. H.D.Revanna (Hon'ble Minister for Public works & Energy)

a) Yes

b) Deputy commissioner, Chikkamagalure has issued orders to ban vehicles carrying load more than 15 tonnes.

c) Details furnished in Annexure Enclosed.

d) Special grants are not being released. However Annual grants are being released for maintenance of roads from time to time.

APPENDIX XII

SPECIFICATION OF MAXIMUM GROSS VEHICLE WEIGHT AND MAXIMUM SAFE AXLE WEIGHT

S.O.416(E), dated 8-6-1989-Superseded by S.O.479(E), dated 4-7-1996

S.O.681(E), dated 30-8-1989 in Partial modification of S.O.416(E) dated 8-6-1989- Superseded by S.O.479(E), dated 4-7-1996.

S.O.479(E), dated 4-7-1996-Superseded by S.O.728(E), dated 18-10-1996.

In exercise of the powers onferred by sub-section(1) of section 58 of the Motor Vehicles Act, 1988 (59 of 1988) and in supersession of the notificaion of the Government of India in the Ministry of Surface Transport S.O.No.479(E), dated the 4th July, 1996, the Central Government hereby specifies that in relation to the transport vehicles (other than motor cabs) of various categories detailed in the Schedule below, the maximum gross vehicle weight and the maximum safe axle weight of each axle of such vehicles shall, having regard to the size,nature and number of tyres and maximum weight permitted to be carried by the tyres as per rule 95 of the Central Motor Vechicles Rules, 1989, be-

(i) Vehicle manufacturers rating of the gross vehicle weight and axle weight respectively for each make and model as duly certified by the testing agencies for compliance of rule 126 of the Central Motor Vehicles Rules, 1989, or

(ii) The maximum gross vehecle weight and the maximum safe axle weight of each vehicle respectively as specified in the Schedule below for the relevant category, or

(iii) The maximum load permitted to be carried by the tyre(s) as specified in the rule 95 of the Central Motor Vehicles Rules, 1989, for the size and number of the tyres fitted on the axle (s) of the relevant make and model, whichever is less:

Provided that the maximum gross vehicle weight in respect of all such transport vehicles, including multi-axle vehicles shall not be more than the sum total of all the maximum safe axle weight put together subject to the restrictions, if any, on the maximum gross vehicle weight given in the said Schedule.

SCHEDULE

	Transport Vehicle Category	Max GVW Tonnes	Maximum Safe Axle Weight
1	2	3	4
I Rigid Vehicles			
(i)	Two Axle	9.00	
	One tyre on front axle, and		3 tonnes on front axle
	Two tyres on rear axle,		6 tonnes on rear axle

	(ii) Two Axle Two tyres on each axle	12.0	6 tonnes on front axle 6 tonnes on rear axle
	(iii) Two Axle Two tyres on front axle and Four tyres on rear axle	16.2	tonnes on front axle tonnes on rear axle

1	2	3	4
	(iv) Three Axle Two tyres on front axle, and Eight tyres on rear tandem axle	25.0	6 tonnes on front axle 19 tonnes on rear tandem axle
	(v) Four Axle Four tyres on front axle,and Eight tyres on rear tandem axle	31.0	12 tonnes on two front axle 19 tonnes on rear tandem axle
II Semi-Articulated Vehicles			
	(i) Two Axle Tractor Single Axle Trailer Tractor: 2 tyres on front axle 4 tyres on rear axle Trailer: 4 tyres on single axle	26.4	6 tonnes on front axle 10.2 tonnes on rear axle 10.2 tonnes on single Trailer axle
	(ii) Two Axle Tractor Tandem Axle Trailer Tractor 2 tyres on front axle 4 tyres on rear axle Trailer: 8 tyres on tandem axle	35.2	6 tonnes on front axle 10.2 tonnes on rear axle 19 tonnes on trandem axle
	(iii) Two Axle Tractor Three Axle Trailer Tractor: 2 tyres on front axle 4 tyres on rear axle Trailer: 12 tyres on 3 axles	40.2	6 tonnes on front axle 10.2 tonnes on rear axle 24 tonnes on 3 axles
	(iv) Three Axle Tractor Single Axle Trailer Tractor: 2 tyres on front axle	35.2	6 tonnes on front axle

	8 tyres on rear axle Trailer:		19 tonnes on rear axle
	8 tyres on single axle		10.2 tonnes on single axle
(v)	Three Axle Tractor	44.0	
	Tandem Axle Trailer		
	Tractor:		
	2 tyres on front axle		6 tonnes on front axle
	8 tyres on tandem axle		19 tonnes on rear tandem axle
	Trailer:		
	8 tyres on tandem axle		19 tonnes on tandem axle

1	2	3	4
III Truck-Trailer combinations			
(i)	Two Axle Truck	36.6	
	Two Axle Trailer Truck:		
	2 tyres on front axle		6 tonnes on front axle
	4 tyres on rear axle		10.2 tonnes on rear alxe
	Trailer:		
	4 tyres on front axle		10.2 tonnes front axle
	4 tyres on rear axle		10.2 tonnes on rear axle
(ii)	Three Axle Truck	45.4	
	Two Axle Trailer	(restricted to 44.0 tonnes)	
	Truck:		
	2 tyres on front axle		6 tonnes on front axle
	8 tyres on rear tandem axle		19 tonnes on rear tandem axle
	4 tyres on front axle		10.2 tonnes on front axle
	4 tyres on rear axle		10.2 tonnes on rear axle
(iii)	Three Axle Truck	45.4	
	Three Axle Trailer	(restricted to 44.0 tonnes)	
	Truck:		
	2 tyres on front axle		6 tonnes on front axle
	4 tyres on rear axle		10.2 tonnes on rear axle
	Trailer:		
	4 tyres on rear axle		10.2 tonnes on fron axle

	8 tyres on rear tandem axle		19.0 tonnes on rear tandem axle
(iv)	Three Axle Truck Three Axle Trailar	54.2 (restricted to 44.0 tonnes)	
	Truck:		
	2 tyres on front axle		6 tonnes on front axle
	8 tyres on rear tandem axle		19 tonnes on rear tandem axle
	Trailer:		
	4 tyres on front axle		10.2 tonnes on front axle
	8 tyres on rear tandem axle		19.0 tonnes on rear tandam axle

69 (1452) : ಶ್ರೀ ಅಶೋಕ ಗುರಪ್ಪ ಶಬಾದಿ (ಸಿಂಧಗಿ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಿಜಾಪುರ ಜಿಲ್ಲೆ ಸಿಂಧಗಿ ತಾಲ್ಲೂಕಿಗೆ 2004–05ನೇ ಸಾಲಿನಲ್ಲಿ ಬರಪರಿಹಾರ ಕಾಮಗಾರಿಗಳನ್ನು ಕೈಗೊಳ್ಳಲು ಮಂಜೂರು ಮಾಡಿರುವ ಅನುದಾನದ ಒಟ್ಟು ಮೊತ್ತವೆಷ್ಟು;

ಆ) ಸದರಿ ಅನುದಾನದಲ್ಲಿ ಈಗಾಗಲೇ ಕಾಮಗಾರಿವಾರು ಬಿಡುಗಡೆಯಾಗಿರುವ ಮೊತ್ತವೆಷ್ಟು (ವಿವರ ನೀಡುವುದು);

ಇ) ಈ ತಾಲ್ಲೂಕು ಅತ್ಯಂತ ಬರಪೀಡಿತ ತಾಲ್ಲೂಕಾಗಿರುವುದರಿಂದ ಇನ್ನೂ ಹೆಚ್ಚಿನ ಅನುದಾನ ನೀಡಲು ಸರ್ಕಾರ ಪರಿಶೀಲಿಸುವುದೆ; ಹಾಗಿದ್ದರೆ, ಎಷ್ಟು ಹೆಚ್ಚುವರಿ ಮೊತ್ತವನ್ನು ನೀಡಲು ನಿರ್ಧರಿಸಿದೆ?

ಶ್ರೀ ಎಂ. ಪಿ. ಪ್ರಕಾಶ್ (ಕಂದಾಯ ಸಚಿವರು) :

ಅ) 2004–05ನೇ ಸಾಲಿನಲ್ಲಿ ಸಿಂಧಗಿ ತಾಲ್ಲೂಕಿಗೆ ಬರಪರಿಹಾರ ಕಾಮಗಾರಿಗಳನ್ನು ಕೈಗೊಳ್ಳಲು ಒಟ್ಟು ರೂ. 94.50 ಲಕ್ಷಗಳನ್ನು ಮಂಜೂರು ಮಾಡಲಾಗಿದೆ. (ಹಣ ಮತ್ತು ಆಹಾರಧಾನ್ಯಗಳು ಸೇರಿ)

ಆ) ಬರಪರಿಹಾರದಡಿಯಲ್ಲಿ ಮಂಜೂರಾದ ಕಾಮಗಾರಿಗಳಿಗಾಗಿ ಹಣ ರೂ. 31.50 ಲಕ್ಷಗಳನ್ನು ಮತ್ತು ಆಹಾರಧಾನ್ಯಗಳನ್ನು ಬಿಡುಗಡೆ ಮಾಡಲಾಗಿದೆ.

ಇ) ಅಗತ್ಯತೆಗನುಸಾರವಾಗಿ ಪರಿಶೀಲಿಸಿ ಅನುದಾನವನ್ನು ನೀಡಲಾಗುವುದು.

71 (711) : ಶ್ರೀ ಅಲ್ಕೋಡ್ ಹನುಮಂತಪ್ಪ (ದೇವದುರ್ಗ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಯಚೂರು ಜಿಲ್ಲೆ, ದೇವದುರ್ಗ ತಾಲ್ಲೂಕಿಗೆ ಕಳೆದ ಮೂರು ವರ್ಷಗಳಿಂದ ನೀಡಿದ ಬರಪರಿಹಾರದ ನಿಧಿ ಎಷ್ಟು ಹಾಗೂ ಖರ್ಚಾದ ಹಣ ಎಷ್ಟು? ಕಾಮಗಾರಿಗಳಿಗೆ ಖರ್ಚಾದ ಹಾಗೂ ಉಳಿದ ಹಣ ಎಷ್ಟು (ವಿವರವಾದ ಮಾಹಿತಿ ನೀಡಿರಿ)

ಆ) ದೇವದುರ್ಗ ತಾಲ್ಲೂಕಿನಲ್ಲಿ ಕಳೆದ ಮೂರು ವರ್ಷಗಳಲ್ಲಿ ಅಕ್ರಮ ಜಮೀನು ಸಕ್ರಮಗೊಳಿಸಿರುವುದು ನಿಜವೇ?

ಇ) ಹಾಗಿದ್ದಲ್ಲಿ ಯಾವ ನಿಯಮಾನುಸಾರ ಜಮೀನನ್ನು ಸಕ್ರಮಗೊಳಿಸಲಾಗಿದೆ:

ಈ) ಇದಕ್ಕಿರುವ ಮಾನದಂಡ ಏನು:

ಉ) ಸದರಿ ತಾಲ್ಲೂಕಿನಲ್ಲಿ ಲಾಭ ಪಡೆದ ಫಲಾನುಭವಿಗಳು ಎಷ್ಟು (ಹೆಸರು, ವಿಳಾಸ, ಜಾತಿ, ಸ.ನಂ. ವಿವರವಾದ ಮಾಹಿತಿ ನೀಡುವುದು)

ಶ್ರೀ ಎಂ. ಪಿ. ಪ್ರಕಾಶ್ (ಮಾನ್ಯ ಕಂದಾಯ ಸಚಿವರು) :

ಅ) ದೇವದುರ್ಗ ತಾಲ್ಲೂಕಿಗೆ ಕಳೆದ 3 ವರ್ಷ 2002.03, 2003.04 ಹಾಗೂ 2004.05ರಲ್ಲಿ ಪ್ರಕೃತಿ ವಿಕೋಪ ಪರಿಹಾರ ನಿಧಿಯಿಂದ ದಿನಾಂಕ 15.1.05ರ ವರೆಗೆ ನೀಡಿದ ವಿವರ ಕೆಳಗಿನಂತಿದೆ.

ಬಿಡುಗಡೆ ಅನುದಾನ	ಖರ್ಚಾದ ಅನುದಾನ	ಉಳಿದ ಅನುದಾನ
137.35	129.48	7.87

ಆ) ಹೌದು

ಇ) ಕರ್ನಾಟಕ ಲ್ಯಾಂಡ್ ರೆವಿನ್ಯೂ ಕಾಯಿದೆಯಲ್ಲಿಯ ನಿಯಮಾವಳಿಯಂತೆ ಅಕ್ರಮ-ಜಮೀನನ್ನು ಸಕ್ರಮಗೊಳಿಸಲಾಗಿದೆ.

ಈ) ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರ ಕಲಂ 94ರನ್ವಯ ಜಮೀನು ಸಕ್ರಮಗೊಳಿಸಲು ಸರಕಾರಿ ಜಮೀನನ್ನು 14.4.90ರ ಹಿಂದಿನ ಮೂರು ವರ್ಷ ಸಾಗುವಳಿ ಮಾಡುತ್ತಿರಬೇಕು ಮತ್ತು ಅವರು ಭೂ ರಹಿತರಾಗಿರಬೇಕು ಇಲ್ಲವೇ ಸಣ್ಣ ಹಿಡುವಳಿಕಾರರಾಗಿರಬೇಕು ಹಾಗೂ ನಮೂನೆ-50 ಮತ್ತು 53ರಡಿ ಅರ್ಜಿಸಲ್ಲಿಸಲು ನಿಗದಿಪಡಿಸಿದ ದಿನಾಂಕ 30.4.99ರೊಳಗೆ ಅರ್ಜಿಸಲ್ಲಿಸಬೇಕು. ಕರ್ನಾಟಕ ಭೂ ಕಂದಾಯ ನಿಯಮಾವಳಿ 1966ರ ನಿಯಮ 108ಇ ರನ್ವಯ ಕೃಷಿ ಉದ್ದೇಶಕ್ಕೆ ಜಮೀನನ್ನು ಹೊಂದಲು ಅರ್ಹರಿರಬೇಕು.

ಉ) ಪಟ್ಟಿ ಲಗತ್ತಿಸಿದೆ.

ದೇವದುರ್ಗ ತಾಲ್ಲೂಕಿನಲ್ಲಿ ಅಕ್ರಮ – ಸಕ್ರಮ ಯೋಜನೆಯಡಿ ಮಂಜೂರಾದ ಫಲಾನುಭವಿಗಳ ಯಾದಿ.

ಕ್ರಮ:	ಫಲಾನುಭವಿಗಳ ಹೆಸರು ಮತ್ತು ವಿಳಾಸ	ಗ್ರಾಮ	ಸರ್ವೆನಂಬರು	ವಿಸ್ತೀರ್ಣ	ಜಾತಿ	ಷರಾ
1	2	3	4	5	6	7
1	ಅಕ್ಕನಾಗಮ್ಮ ಗ: ರುದ್ರಯ್ಯ	ದೇವತಗಲ್	83	4–00	ಇತರೆ	
2	ಮಾರಮ್ಮ ಗ: ಜೀರಪ್ಪ	ಶೂಲದಗುಡ್ಡ	77	4–00	ಎಸ್‌ಸಿ	
3	ಶಿವಮ್ಮ ತಾಯಿ: ರಂಗಮ್ಮ	"	77ಅ	3–00	ಎಸ್‌ಸಿ	
4	ಯಲ್ಲಮ್ಮ ಗ: ರಂಗಯ್ಯ	"	50ಎ	4–00	ಎಸ್‌ಟಿ	
5	ಗೋಪಾಲ ತ: ಸೋಮಯ್ಯ	"	50ಎ	4–00	ಎಸ್‌ಟಿ	
6	ಮಾಳಮ್ಮ ಗ: ಹನುಮಪ್ಪ	ಗಲಗ	12	4–00	ಇತರೆ	
7	ಯಂಕಪ್ಪ ತ: ದುರ್ಗಯ್ಯ	ಚಿಂಚೋಡಿ	1	3–00	ಎಸ್‌ಸಿ	
8	ಮಾನಪ್ಪ ತ: ಮರಗಪ್ಪ	ಚಿಂಚೋಡಿ	1	3–00	ಎಸ್‌ಟಿ	
9	ಶಿವರಾಜ ತ: ಬಡಕಪ್ಪ	ಸುಣ್ಣದಕಲೆ	30:2	3–00	ಇತರೆ	
10	ಮಲ್ಲೇಶಪ್ಪ ತ: ಬಡಕಪ್ಪ	"	92	3–00	ಇತರೆ	
11	ಹನುಮಂತಪ್ಪ ತ: ಯಮನಪ್ಪ	ಗಾಣದಾಳ	92	4–00	ಎಸ್‌ಸಿ	
12	ಹನುಮಂತ ತ: ಬೀಮಶೆಟ್ಟಿ	"	92	4–00	ಎಸ್‌ಟಿ	
13	ನಾಗಮ್ಮ ಗ: ಯಲ್ಲಯ್ಯ	"	92	4–00	ಎಸ್‌ಟಿ	
14	ಹನುಮಂತ ತ: ಬೀಮಪ್ಪ	"	92	4–00	ಎಸ್‌ಸಿ.	
15	ಚಂದಾಹುಸೇನಿ ತ: ಸಟ್ಟರಿಲ	"	92	4–00	ಇತರೆ	
16	ದುರಗಪ್ಪ ತ: ಹನುಮಂತಪ್ಪ	"	92	4–00	ಎಸ್‌ಸಿ	
17	ಕರಿಯಮ್ಮ ಗ: ಹನುಮಪ್ಪ	"	92	4–00	ಎಸ್‌ಸಿ	

18	ಹನುಮಂತಪ್ಪ ತ: ದುರಗಯ್ಯ	“	92	4–00	ಎಸ್‌ಟಿ
19	ಮಾರಪ್ಪ ತ: ತಿಮ್ಮಯ್ಯ	“	92	4–00	ಎಸ್‌ಟಿ
20	ಲಾಲಸಾಬ ತ: ಸಬ್ಬರೀಸಾಬ	“	92	4–00	ಇತರೆ
21	ಕರೀಂಬೀ ಗ: ಕಾಸಿಂ	“	92	4–00	ಇತರೆ
22	ಕರಿಯಪ್ಪ ತ: ದುರಗಪ್ಪ	“	92	4–00	ಎಸ್‌ಸಿ
23	ಪೀರಮ್ಮ ಗ: ಬಾವಾಸಾಬಸ	“	92	4–00	ಇತರೆ
24	ಪರಸಪ್ಪ ತ: ದುರಗಪ್ಪ	“	92	4–00	ಎಸ್‌ಸಿ
25	ಶಿವಣ್ಣ ತ: ದುರಗಪ್ಪ	“	92	4–00	ಎಸ್‌ಸಿ
26	ಹುಲಿಗಪ್ಪ ತ: ಬಸ್ಸಪ್ಪ	“	92	4–00	ಎಸ್‌ಸಿ
27	ರತ್ನಮ್ಮ ಗ: ಅಮರಪ್ಪ	“	92	4–00	ಎಸ್‌ಸಿ
28	ಗೋವಿಂದಪ್ಪ ತ: ಹುಸೇನಪ್ಪ	ಜಾಲಹಳ್ಳಿ	39	3–00	ಇತರೆ
29	ಗುಂಡಪ್ಪ ತ: ಶಿವಪ್ಪ	“	39	2–00	ಇತರೆ
30	ತಾಯಮ್ಮ ಗ: ಮಾರಪ್ಪ	“	130	3–00	ಎಸ್‌ಸಿ
31	ಚಲುವಪ್ಪ ತ: ರಂಗಯ್ಯ	“	33	3–20	ಎಸ್‌ಟಿ
32	ತಿರುಪತಿ ತ: ಹುಸೇನಪ್ಪ	“	39	3–00	ಇತರೆ
33	ಹೊಳಮ್ಮ ತಾ: ರಂಗಮ್ಮ	“	87	1–20	ಎಸ್‌ಸಿ
34	ರಂಗಯ್ಯ ತ: ರಂಗಯ್ಯ	“	59	3–20	ಎಸ್‌ಟಿ
35	ಮಾನಶಪ್ಪ ತ: ರಾಮಪ್ಪ	ಪರಾಪುರ	87	1–20	ಎಸ್‌ಸಿ
36	ಹುಲಿಗಮ್ಮ ತ: ರಾಮಪ್ಪ	“	87	2–00	ಎಸ್‌ಸಿ
37	ಹೊಳೆಮ್ಮ ತಾ: ರಂಗಮ್ಮ	“	87	1–20	ಎಸ್‌ಸಿ
38	ಶಿವಮ್ಮ ತ: ತಿಮ್ಮಪ್ಪ	“	87	2–00	ಎಸ್‌ಸಿ

39	ಯಲ್ಲಮ್ಮ ಗ: ಹನುಮಂತ	ಪರಾಪೂರ	87	1–00	ಎಸ್‌ಸಿ
40	ಮಲ್ಲಪ್ಪ ತಾ: ಮಲ್ಲಪ್ಪ	“	87	3–00	ಎಸ್‌ಸಿ
41	ತಿಮ್ಮಪ್ಪ ತ: ಮಲ್ಲಪ್ಪ	“	87	1–20	ಎಸ್‌ಸಿ
42	ಹುಲ್ಲಪ್ಪ ತ: ಕನಕಪ್ಪ	“	87	1–20	ಎಸ್‌ಸಿ
43	ಮಾನಶಪ್ಪ ತ: ಕನಕಪ್ಪ	“	87	3–20	ಎಸ್‌ಸಿ
44	ಬುಸ್ಸಪ್ಪ ತಾ: ಹುಸೇನಮ್ಮ	“	87	2–00	“
45	ರಂಗಮ್ಮ ತಂದೆ: ಹುಸೇನಪ್ಪ	“	87	1–20	“
46	ಹುಲಿಗೆಮ್ಮ ತ: ಹುಲಿಗಪ್ಪ	“	87	1–20	“
47	ಶಿವಪ್ಪ ತ: ಬಾಲಪ್ಪ	“	87	2–00	“
48	ಹುಲಿಗೆಪ್ಪ ತ: ರಂಗಪ್ಪ	“	87	1–20	“
49	ಶಿವರಾಜ ತ: ಬಸವರಾಜ	“	71:2	1–36	“
50	ಮುದ್ದಮ್ಮ ಗ: ಹನುಮಂತ	“	79:1	3–30	“
51	ಹನುಮಂತ ತ: ಬಾಲದಂಡಪ್ಪ	“	24	3–20	ಎಸ್‌ಟಿ
52	ರಂಗಯ್ಯ ತ: ರಂಗಯ್ಯ	“	59	3–00	ಎಸ್‌ಟಿ
53	ಶಿವಪ್ಪ ತ: ಶಿವಪ್ಪ	“	87	2–00	ಎಸ್‌ಸಿ
54	ಗಂಗಪ್ಪ ತ: ಶಿವಪ್ಪ	“	87	1–20	ಎಸ್‌ಸಿ
55	ಶಿವಪ್ಪ ತ: ಮಲ್ಲಯ್ಯ	“	87	2–00	ಇತರೆ
56	ಲಕ್ಷ್ಮಿ ತ: ದುರಗಪ್ಪ	“	87	1–20	ಎಸ್‌ಸಿ
57	ಪಿಡ್ಡಪ್ಪ ತ: ಲಚಮಪ್ಪ	“	87	3–00	ಎಸ್‌ಸಿ
58	ಹೊಳೆಪ್ಪ ತ: ದುರಗಪ್ಪ	“	87	3–00	ಎಸ್‌ಸಿ
59	ಹನುಮಂತ ತ: ರಂಗಪ್ಪ	“	87	1–20	ಎಸ್‌ಸಿ

60	ಹುಸೇನಪ್ಪ ತ: ಹುಸೇನಪ್ಪ	"	87	1–00	ಎಸ್‌ಸಿ
61	ಹನುಮಪ್ಪ ತ: ಶಿವಪ್ಪ	"	87	2–00	ಎಸ್‌ಸಿ
62	ರಂಗಪ್ಪ ತ: ಹೊನ್ನಪ್ಪ	"	87	1–04	"
63	ಹನುಮಂತ ತ: ಅಡಿವೆಪ್ಪ	"	87	3–00	ಎಸ್‌ಸಿ
64	ಶಿವಪ್ಪ ತ: ಹನುಮಯ್ಯ	ಹೊ:ಸಿದ್ದಾಪುರ	41	4–00	ಎಸ್‌ಟಿ
65	ಸಿದ್ದಯ್ಯ ತ: ಹನುಮಯ್ಯ	"	77	3–00	ಎಸ್‌ಸಿ
66	ದುರಗಪ್ಪ ತ: ಶಿವಪ್ಪ	"	84	2–35	ಎಸ್‌ಟಿ
67	ಚಾಲಮ್ಮ ಗ: ಹನುಮಯ್ಯ	"	82	2–32	ಎಸ್‌ಟಿ
68	ಸಿದ್ದಪ್ಪ ತ: ಶಿವಪ್ಪ	"	84	2–35	ಎಸ್‌ಟಿ
69	ರಂಗಪ್ಪ ತ: ಸಿವಪ್ಪ	"	84	2–35	ಎಸ್‌ಟಿ
70	ಸಿದ್ದಪ್ಪ ತ: ಶಿವಣ್ಣ	ಸಲಕನಮರಡಿ	127	3–00	ಇತರೆ
71	ದ್ಯಾವಪ್ಪ ತ: ಶಿವಣ್ಣ	"	39	4–00	ಎಸ್‌ಟಿ
72	ಶಿವಲಿಂಗಪ್ಪ ತ: ಸಾಬಣ್ಣ	"	140	3–00	ಎಸ್‌ಸಿ
73	ಹನುಮಂತ ತ: ಬೀಮಪ್ಪ	ವಂದಲಿ	116	4–00	ಎಸ್‌ಟಿ
74	ಶಿವಮ್ಮ ಗ: ಮಲ್ಲಪ್ಪ	"	116	4–00	ಇತರೆ
75	ದುರಗಪ್ಪ ತ: ಬಸ್ಸಣ್ಣ	"	116	4–00	ಇತರೆ
76	ದುರಗಪ್ಪ ತ: ಅಂಚಾಳಪ್ಪ	"	116	4–00	ಇತರೆ
77	ಹನುಮಂತ ತ: ಮಲ್ಲಯ್ಯ	ಗಾಜಲದಿನ್ನಿ	16	4–00	ಇತರೆ
78	ಚಂದಾವಲೀ ತ: ಬಾಲೇಸಾಬ	ಹುಲಿಗುಡ್ಡ	1	3–00	ಇತರೆ
79	ಸಾಬಣ್ಣ ತ: ಹನುಮಂತ	ಮುಕನಾಳ	79:2	1–23	ಎಸ್‌ಸಿ
80	ತಿಮ್ಮಣ್ಣ ತ: ಬಸ್ಸಪ್ಪನಾಯಕ	ಬುಂಕಲದೊಡ್ಡಿ	24	4–00	ಎಸ್‌ಟಿ

81	ತಮ್ಮಣ್ಣ ತ: ತಮ್ಮಣ್ಣನಾಯಕ	"	24	4–00	ಎಸ್‌ಟಿ
82	ಹನುಮಂತ ತ: ಬಾಲದಂಡಪ್ಪ	"	24	4–00	ಎಸ್‌ಟಿ
83	ರಾಮಚಂದ್ರಪ್ಪ ತ: ಹನುಮಂತ್ರಾಯ	ಕಮಲದಿನ್ನಿ	39	4–10	ಎಸ್‌ಟಿ
84	ವಿಜಯಕುಮಾರ ತ: ದಾನಪ್ಪ	"	39:ಅ	2–30	ಎಸ್‌ಸಿ
85	ಲಿಂಗಪ್ಪ ತ: ದೇವಪ್ಪ	ಹೇರುಂಡಿ	8	1–00	ಎಸ್‌ಸಿ
86	ಮಲ್ಲಪ್ಪ ತ: ಮಹದೇವಪ್ಪ	"	8	1–00	ಎಸ್‌ಸಿ
87	ಮಲ್ಲಪ್ಪ ತ: ಮಹಾದೇವಪ್ಪ	"	8	1–00	ಎಸ್‌ಸಿ
88	ಶಿದ್ದಪ್ಪ ತ: ಬೀಮಪ್ಪ	"	8	1–00	ಎಸ್‌ಸಿ
89	ಬಾಲಪ್ಪ ತ: ಶಿವಪ್ಪ	"	8	1–00	ಎಸ್‌ಸಿ
90	ಬೀಮಪ್ಪ ತ: ಹನುಮಪ್ಪ	"	8	1–00	ಎಸ್‌ಸಿ
91	ಲಚಮಪ್ಪ ತ: ಶಿವಪ್ಪ	"	8	1–00	ಎಸ್‌ಸಿ
92	ರಾಮಪ್ಪ ತ: ಮಾನಶಪ್ಪ	"	8	1–00	ಎಸ್‌ಸಿ
93	ತಿಪ್ಪಮ್ಮ ತ: ಮಾನಶಪ್ಪ	"	8	1–00	ಎಸ್‌ಸಿ
94	ಚಂದಪ್ಪ ತ: ಶಿವಪ್ಪ	"	8	1–00	ಎಸ್‌ಸಿ
95	ಹುಲಿಗಪ್ಪ ತ: ರಾಮಣ್ಣ	"	8	0–35	ಎಸ್‌ಸಿ
96	ದ್ಯಾವಪ್ಪ ತ: ರಂಗಪ್ಪ	"	8	1–00	ಎಸ್‌ಸಿ
97	ಶಿವಪ್ಪ ತ: ಬಸ್ಸಪ್ಪ	"	8	1–00	ಎಸ್‌ಸಿ
98	ಬೂತಪ್ಪ ತ: ಜಗದೇವಪ್ಪ	"	8	1–00	ಎಸ್‌ಸಿ
99	ಮಾನಪ್ಪ ತ: ಬಸ್ಸಪ್ಪ	"	8	1–00	ಎಸ್‌ಸಿ
100	ಹನುಮಂತ ತ: ಶಿವಪ್ಪ	"	8	1–00	ಎಸ್‌ಸಿ
101	ಬಸ್ಸಪ್ಪ ತ: ಶಿವಪ್ಪ	"	8	1–00	ಎಸ್‌ಸಿ
102	ರಂಗಪ್ಪ ತ: ದುರಗಪ್ಪ	"	8	1–00	ಎಸ್‌ಸಿ

103	ಸಂಗಮ್ಮ ಗ: ಹನುಮಂತರಾಯ	ಹೊರಟ್ಟಿ	33	3–00	ಎಸ್‌ಟಿ
104	ಯಲ್ಲಮ್ಮ ಗ: ರಾಯಪ್ಪ	“	33	3–00	ಎಸ್‌ಟಿ
105	ಬಸವರಾಜಪ್ಪ ತ: ಜಡೆಯ್ಯ	ಕಕಾಲದೊಡ್ಡಿ	13	4–00	ಇತರೆ
106	ಸೂಗಯ್ಯ ತ: ಬಸ್ಸಯ್ಯ	“	13	4–00	ಇತರೆ
107	ಶಿದ್ದಪ್ಪ ತಾ: ಹುಲಿಗೆಮ್ಮ	ಮೇಕಲದೊಡ್ಡಿ	25	4–00	ಎಸ್‌ಸಿ
108	ಯಲ್ಲಪ್ಪ ತ: ಶಿದ್ದಪ್ಪ	“	42	2–00	ಎಸ್‌ಸಿ
109	ಬಾಳಪ್ಪ ತ: ಮಲ್ಲಪ್ಪ	“	25	4–00	“
110	ಮುದಕಮ್ಮ ಗ: ಜಾಲಪ್ಪ	“	34	4–00	“
111	ದುರಗಪ್ಪ ತ: ಬೀಮಪ್ಪ	“	42	4–00	“
112	ಮಾರತಂಡಯ್ಯ ತ: ಮಲ್ಲಿಕಾರ್ಜುನಯ್ಯ	ಚಪ್ಪಳಿಕಿ	02	4–00	ಇತರೆ
113	ವಿರುಪಾಕ್ಷಿ ತ: ನಾಗಪ್ಪ	“	2	4–00	ಇತರೆ
114	ಮಲ್ಲಪ್ಪ ತ: ಶರಣಪ್ಪ	“	2	4–00	ಇತರೆ
115	ಲಕ್ಷ್ಮಣ ತ: ಸೋಮಣ್ಣ	ಚಿಕ್ಕಹೊನಕುಣಿ	69	4–00	ಇತರೆ
116	ರಂಗಮ್ಮ ಗ: ಸಿದ್ರಾಮಪ್ಪ	ಅರಿಷಿಣಗಿ	16	3–39	ಎಸ್‌ಸಿ
117	ಬಸ್ಸಮ್ಮ ಗ: ಲಿಂಗಯ್ಯ	“	131	3–00	ಇತರೆ
118	ಚಂದ್ರಮ್ಮ ತ: ಲಿಂಗಯ್ಯ	“	31	4–00	ಎಸ್‌ಟಿ
119	ಮಲ್ಲಿಕಾರ್ಜುನ ತ: ಹನುಮಂತ	ದೇವದುರ್ಗ	24	3–00	ಎಸ್‌ಸಿ
120	ಹನುಮಂತ ತ: ಮಲ್ಲಪ್ಪ	“	24	3–00	ಎಸ್‌ಸಿ
121	ಜನಾರ್ದನ ತ: ವೆಂಕಟದಾಸ	ಸಾಸ್ವಿಗೇರಾ	6	4–00	ಎಸ್‌ಸಿ
122	ಗೋವಿಂದಯ್ಯ ಗ: ಗಿರಿಯಪ್ಪ	‘	6	4–00	ಎಸ್‌ಟಿ
123	ಬಸ್ಸರಾಜ್ ತ: ಯಲ್ಲಪ್ಪ	ನಿಂಬಾಯದೊಡ್ಡಿ	10	4–00	ಇತರೆ

124	ಮಾನಶಯ್ಯ ತ: ರಾಯಸಾಬ		10	4–00	ಎಸ್‌ಟಿ
125	ಖೀರ್‍ಯಾ ತ: ಖೀಮಣ್ಣ	ಕೆ:ಇರಬಗೇರಾ	17	3–00	ಎಸ್‌ಸಿ
126	ಬಸ್ಸಪ್ಪ ತ: ಲಿಂಗಪ್ಪ	ಕೋತಿಗುಡ್ಡ	101	4–00	ಎಸ್‌ಸಿ
127	ಹನುಮಂತ ತ: ರಾಯಪ್ಪ	"	101	3–00	ಎಸ್‌ಸಿ
128	ರಂಗಪ್ಪ ತ: ಗೌರಮ್ಮ	"	101	4–00	"
129	ಹನುಮ್ಮ ತ: ರಾಮಣ್ಣ	"	100	4–00	ಎಸ್‌ಸಿ
130	ರಂಗಪ್ಪ ತಂದೆ: ತಾಯಪ್ಪ	"	101	3–00	ಎಸ್‌ಸಿ
131	ಬಸ್ಸಪ್ಪ ತಾ: ನಾಗಮ್ಮ	"	101	4–00	ಎಸ್‌ಸಿ
132	ರಂಗಯ್ಯ ತ: ಜಾಲಯ್ಯ	"	100	3–00	ಎಸ್‌ಸಿ
133	ಬೀಮಶೆಟ್ಟಿ ತ: ಬೀಮಪ್ಪ	"	100	4–00	ಎಸ್‌ಸಿ
134	ಹನುಮಂತ ತ: ರಾಮಣ್ಣ	"	100	4–00	ಎಸ್‌ಸಿ
135	ರಂಗಯ್ಯ ತ: ಬೆಳ್ಳಯ್ಯ	"	100	3–00	ಎಸ್‌ಟಿ

70 (953) ಶ್ರೀ ಧ್ರುವನಾರಾಯಣ ಆರ್. (ಸಂತೆಮರಳ್ಳಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ನೀರಾ ಬಗ್ಗೆ ಸರ್ಕಾರಿ ಆದೇಶ ಮಾಡುವ ಕಾರ್ಯ ಎಲ್ಲಿಯವರೆಗೆ ಬಂದಿದೆ?

ಆ) ಬಂದಿದ್ದಲ್ಲಿ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?

ಶ್ರೀ ಸಿದ್ದರಾಮಯ್ಯ (ಮಾನ್ಯ ಉಪ ಮುಖ್ಯ ಮಂತ್ರಿಗಳು) :

ಅ) ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳನ್ನು ಹೊರತುಪಡಿಸಿ, ಮಿಕ್ಕ ಎಲ್ಲಾ ಜಿಲ್ಲೆಗಳಲ್ಲಿ ನೀರಾ/ಸೇಂದಿ ಇಳಿಸುವುದನ್ನು ನಿಷೇಧಿಸಲಾಗಿದೆ. ಈ ದಿಸೆಯಲ್ಲಿ ಮರು ಪರಿಶೀಲನೆಯ ಚಿಂತನೆ ಸಧ್ಯಕ್ಕೆ ಇರುವುದಿಲ್ಲ.

ಆ) ಉದ್ಭವಿಸುದಿಲ್ಲ.

72 (1170) ಶ್ರೀರಾಮುಲು ಬಿ. (ಬಳ್ಳಾರಿ) : ಮಾನ್ಯ ಉಪ ಮುಖ್ಯ ಮಂತ್ರಿಗಳು ಕೆಳಕಂಡ ಪ್ರಶ್ನೆಗೆ ಉತ್ತರಿಸುವರೇ?

ಅ) ಬಳ್ಳಾರಿ ಜಿಲ್ಲೆಯಲ್ಲಿ, ಬಳ್ಳಾರಿ ಜಿಲ್ಲೆಯ ಅಭಿವೃದ್ಧಿ ಕಾಮಗಾರಿಗಾಗಿ ರೂ. 3.300 ಕೋಟಿಗಳ ಪ್ಯಾಕೇಜ್‌ನ್ನು ನೀಡುವುದಾಗಿ ಹಿಂದಿನ ಸರ್ಕಾರ ಘೋಷಿಸಿರುವುದು ನಿಜವೇ?

ಆ) ಹಾಗಿದ್ದಲ್ಲಿ, ಯಾವ ಯಾವ ಕಾಮಗಾರಿಗಳಿಗೆ ಎಷ್ಟು ಹಣ ಬಿಡುಗಡೆಯಾಗಿದೆ?

ಇ) ಇದರಲ್ಲಿ ಪೂರ್ಣಗೊಂಡ ಮತ್ತು ಅಪೂರ್ಣಗೊಂಡ ಹಾಗೂ ಬಾಕಿ ಉಳಿದಿರುವ ಕಾಮಗಾರಿಗಳು ಯಾವುವು (ವಿವರ ನೀಡುವುದು);

ಈ) ಗುತ್ತಿಗೆ ಆಧಾರದ ಮೇಲೆ ಕಾಮಗಾರಿಗಳನ್ನು ನೀಡಿದ್ದು ಸದರಿ ಕಾಮಗಾರಿಗಳನ್ನು ಗುತ್ತಿಗೆದಾರರು ಪೂರ್ಣಗೊಳಿಸಿದ್ದು ಅವರಿಗೆ ಹಣ ಬಿಡುಗಡೆಯಾಗದೆ ಸಂಕಷ್ಟದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಹಾಗಿದ್ದಲ್ಲಿ, ಗುತ್ತಿಗೆದಾರರಿಗೆ ಹಣ ಪಾವತಿಸಲು ಕೂಡಲೆ ಕ್ರಮ ಕೈಗೊಳ್ಳುವುದೇ?

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯ ಮಂತ್ರಿಗಳು) :

ಅ) ಹೌದು.

ಆ) ಬಿಡುಗಡೆಯಾದ ಅನುದಾನದ ವಿವರ ಈ ಕೆಳಗಿನಂತಿದೆ:

ಶಿಕ್ಷಣ – ರೂ. 1500 ಲಕ್ಷಗಳು

ಆರೋಗ್ಯ – ರೂ. 1000 ಲಕ್ಷಗಳು

ರಸ್ತೆ ಮತ್ತು ಸೇತುವೆ – ರೂ. 4002.50 ಲಕ್ಷಗಳು

ಇ) ವಿವರಗಳನ್ನು ಅನುಬಂಧ–1 ರಲ್ಲಿ ನೀಡಲಾಗಿದೆ.

ಈ) ಹೌದು.

ಉ) ಹೌದು. ಇದು ಸರ್ಕಾರದ ಪರಿಶೀಲನೆಯಲ್ಲಿದೆ.

ANNEXURE - 1

Sl No	Details	Works taken up	Works completed	Tobe completed
	Education Sector			
1	a) Primary class rooms construction	880	860	20
	b) High school rooms construction	266	244	22
	Total	**1146**	**1140**	**42**
	Health Sector			
1	Construction of Health sub Centre	99	69	30
2	Construction of Primary Health Centre	10	2	8
3	Construction of Community Health Centres	1	1	0
4	Construction of Medical Officers Quarters	74	31	43
5	Construction of Family Health Units	3	2	1
6	Construction of Maternity Homes	6	2	4
7	Construction of Postmortem Rooms	54	23	31

8	Construction of ANM Quarters	103	56	52
9	Construction of Group 'D' Quarters	190	92	98
10	Repairs of District Health Office	1	1	0
	Total	**546**	**279**	**267**
	Rural Roads			
	Number of works	394	349	75
	Number of Kms-asphalting	718	566	162
	Total	**1112**	**875**	**237**
	Grand Total	**2804**	**2258**	**546**

73 (330) ಶ್ರೀ ಓಲೇಕಾರ ನೆಹರು ಚನ್ನಬಸಪ್ಪ (ಬ್ಯಾಡಗಿ) : ಮಾನ್ಯ ಉಪ ಮುಖ್ಯಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಕಳೆದ ಐದು ವರ್ಷಗಳಲ್ಲಿ ವಿವಿಧ ಇಲಾಖೆಗಳ ಅನುದಾನದ ಮೊತ್ತದಲ್ಲಿ ವೆಚ್ಚವಾಗದೇ ಉಳಿದ ಹಣವೆಷ್ಟು?

ಆ) ಈ ಅವಧಿಯಲ್ಲಿ ವಿವಿಧ ಇಲಾಖೆಗಳಿಗೆ ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ಅನುದಾನವೆಷ್ಟು; ಹಾಗೂ ಅದರಲ್ಲಿ ಬಳಕೆಯಾಗದೆ ಉಳಿದ ಮೊತ್ತವೆಷ್ಟು?

ಇ) ಸದರಿ ಮೊತ್ತವನ್ನು ಯಾವ ರೀತಿಯಲ್ಲಿ ನಿರ್ವಹಿಸಲಾಗಿದೆ?

ಶ್ರೀ ಸಿದ್ದರಾಮಯ್ಯ (ಮಾನ್ಯ ಉಪ ಮುಖ್ಯಮಂತ್ರಿಗಳು) :

ಅ) ಕಳೆದ 5 ವರ್ಷಗಳಲ್ಲಿ ಉಂಟಾದ ಉಳಿತಾಯ / ಹೆಚ್ಚಳ ಕುರಿತಾದ ವಿವರಗಳು ಈ ಕೆಳಕಂಡಂತಿದೆ:

(ರೂ.ಕೋಟಿಗಳಲ್ಲಿ)

ವರ್ಷ	ಒಟ್ಟು ಅನುದಾನ	ವೆಚ್ಚ	ಉಳಿಕೆ	ಹೆಚ್ಚಳ
1998–99	19088.19	15164.43	3959.61	35.85
1999–2000	22227.01	18112.75	4448.72	334.46
2000–01	23319.58	19860.42	3573.62	114.46
2001–02	27056.57	22869.17	4300.76	113.37
2002–03	32684.76	28480.05	5295.68	1090.96

ಅನುದಾನಗಳು ಪ್ರಾಯೋಜಿತ ವೆಚ್ಚವನ್ನು ಪ್ರತಿಫಲಿಸುತ್ತವೆ. ಆದರೆ ಮಾಡಲಾದ ವಾಸ್ತವಿಕ ವೆಚ್ಚವು ಸಂಪನ್ಮೂಲಗಳ ಲಭ್ಯತೆಯನ್ನು ಅವಲಂಬಿಸಿರುತ್ತದೆ. ಆದ್ದರಿಂದ ತೋರಿಸಲಾದ ಉಳಿತಾಯವು ವಾಸ್ತವಿಕವಾಗಿರುವುದಿಲ್ಲ. ಇದು ಸಂಪನ್ಮೂಲದ ಕೊರತೆಯನ್ನು ತೋರಿಸುತ್ತದೆ.

ಆ) ಕಳೆದ 5 ವರ್ಷಗಳಲ್ಲಿ ವಿವಿಧ ಯೋಜನೆಗಳಿಗಾಗಿ ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಬಿಡುಗಡೆಯಾದ ಹಾಗೂ ಖರ್ಚಾಗದೆ ಉಳಿಕೆಯಾಗಿರುವ ಮೊತ್ತದ ವಿವರಗಳು ಈ ಕೆಳಕಂಡಂತಿದೆ:

(ರೂ.ಕೋಟಿಗಳಲ್ಲಿ)

ವರ್ಷ	ಕೇಂದ್ರ ರಾಜಸ್ವ	ವೆಚ್ಚ	ವೆಚ್ಚವಾಗದೇ ಉಳಿದ (–)/ ಹೆಚ್ಚಳ (+)
1999–2000 ಲೆಕ್ಕ	734.59	682.09	(–) 52.50
2000–2001 ಲೆಕ್ಕ	678.49	677.41	(–) 1.08
2001–2002 ಲೆಕ್ಕ	805.01	818.96	13.95

2002–2003			
ಲೆಕ್ಕ	674.46	806.49	(–) 132.03
2003–2004			
ಪರಿಷ್ಕೃತ ಅಂದಾಜು	972.45	918.07	(–) 54.38

ಖರ್ಚಾಗದೇ ಉಳಿಕೆಯಾದ ಮೊತ್ತವನ್ನು ತದನಂತರದ ವರ್ಷಗಳಲ್ಲಿ ಮರು ಸಿಂಧುತ್ವಗೊಳಿಸಿ ಬಳಸಲಾಗುವುದು.

ಇ) ಪ್ರಶ್ನೆ ಸಂಖ್ಯೆ (ಆ)ದಲ್ಲಿ ಸೂಚಿಸಿದಂತೆ, ಖರ್ಚಾಗದೇ ಉಳಿಕೆ ಆದ ಮೊತ್ತವನ್ನು ಮರು ಸಿಂಧುತ್ವಗೊಳಿಸಿ ಸದರಿ ಮೊತ್ತವನ್ನು ಯಾವ ಕಾರಣಕ್ಕಾಗಿ ಮಂಜೂರು ಮಾಡಲಾಗಿತ್ತೋ, ಅದೇ ಕಾರಣಕ್ಕಾಗಿ ಬಳಸಲಾಗುವುದು.

81 (1087) ಶ್ರೀ ಶಿವಾನಂದ ನಾಯಕ್ (ಭಟ್ಕಳ) : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮ್ಯಾಂಗನೀಸ್ ಖನಿಜ ಹೊತ್ತ ಹೆಚ್ಚು ಭಾರದ ಲಾರಿಗಳು ಶರಾವತಿ ಸೇತುವೆಯ ಮೇಲೆ ಅಕ್ರಮವಾಗಿ ಸಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ ಇದರಿಂದ ಸೇತುವೆಯ ಗುಣ ಸಾಮರ್ಥ್ಯಕ್ಕೆ ಧಕ್ಕೆ ಉಂಟಾಗುವುದಿಲ್ಲವೇ?

ಇ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಯಾವ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿದೆ?

ಈ) ಇಂತಹ ಲಾರಿಗಳ ಸಾಗಾಣಿಕೆಗೆ ಸರ್ಕಾರ ಯಾವ ನಿರ್ಬಂಧಗಳನ್ನು ವಿಧಿಸಿದೆ?

ಉ) ಇಲ್ಲದಿದ್ದಲ್ಲಿ ಸದರಿ ಸೇತುವೆಗೆ ಹಾನಿ ಆಗುವುದೆಂದು ಸರ್ಕಾರ ಭಾವಿಸುವುದಿಲ್ಲವೇ?

ಊ) ಈ ಅಕ್ರಮ ಮ್ಯಾಂಗನೀಸ್ ಸಾಗಾಣಿಕೆ ತಡೆಗೆ ಯಾವ ಕ್ರಮ ಕೈಗೊಂಡಿದೆ? ವಿವರ ಒದಗಿಸುವುದು?

ಶ್ರೀ ಹೆಚ್. ಡಿ. ರೇವಣ್ಣ (ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಹೆಚ್ಚು ಭಾರದ ಮ್ಯಾಂಗನೀಸ್ ಲಾರಿಗಳು ಶರಾವತಿ ಸೇತುವೆ ಮೇಲೆ ಸಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಅತೀ ಭಾರದ ವಾಹನಗಳ ಓಡಾಟದಿಂದ ಸೇತುವೆ ಗುಣ ಸಾಮರ್ಥ್ಯಕ್ಕೆ ಧಕ್ಕೆ ಉಂಟಾಗುವ ಸಾಧ್ಯತೆಗಳಿವೆ.

ಇ) ಅತೀ ಭಾರದ ಮ್ಯಾಂಗನೀಸನ್ನು ಹೊತ್ತ ಲಾರಿಗಳ ಸಾಗಾಣಿಕೆಯನ್ನು ನಿಯಂತ್ರಿಸುವಂತೆ ಜಿಲ್ಲಾಧಿಕಾರಿಗಳು, ಜಿಲ್ಲಾ ವರಿಷ್ಠಾಧಿಕಾರಿಗಳು ಹಾಗೂ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಕ್ರಮ ಕೈಗೊಳ್ಳುತ್ತಿದ್ದಾರೆ. ಇತ್ತೀಚೆಗೆ ಅತಿ ಭಾರದ ಮ್ಯಾಂಗನೀಸ್ ಹೊತ್ತ ಲಾರಿಗಳ ಸಾಗಾಣಿಕೆಯನ್ನು ಬಹುಮಟ್ಟಿಗೆ ನಿಯಂತ್ರಿಸಲಾಗಿದೆ.

ಈ) ದಿನಾಂಕ 4.7.96 ರ ಸಾರಿಗೆ ಇಲಾಖೆ ಅಧಿಸೂಚನೆಯಲ್ಲಿ ವಿವಿಧ ವರ್ಗದ ಲಾರಿಗಳಿಗೆ ತೂಕದ ಮಿತಿಯನ್ನು ಸೂಚಿಸಲಾಗಿದೆ.

ಉ) ಸದರಿ ಸೇತುವೆಗೆ ಹಾನಿ ಆಗುವುದೆಂಬ ಕಾರಣದಿಂದ ಅತೀ ಭಾರ ಹೊತ್ತ ಲಾರಿಗಳ ಸಾಗಾಟವನ್ನು ಸಾರಿಗೆ ಹಾಗೂ ಪೋಲೀಸ್ ಇಲಾಖೆ ಮುಖಾಂತರ ನಿಯಂತ್ರಿಸಲಾಗಿದೆ.

ಊ) ಪರಿಶೀಲನೆಯಲ್ಲಿರುತ್ತದೆ.

659 (1471) ಶ್ರೀ ಅಕ್ಕಿ ಮಲ್ಲಿಕಾರ್ಜುನ್ ಸಹದೇವಪ್ಪ (ಕುಂದಗೋಳ): ಮಾನ್ಯ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ಯುವಜನ ಸೇವೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸಮಾಜ ಕಲ್ಯಾಣ ಇಲಾಖಾವತಿಯಿಂದ ಕಟ್ಟಿಸಿದ ಅಲ್ಪಸಂಖ್ಯಾತರ ವಸತಿನಿಲಯಗಳ ಸಂಖ್ಯೆ ಎಷ್ಟು?

ಆ) ವಾರ್ಡನ್‌ಗಳಿಲ್ಲದಿರುವ ಹಾಸ್ಟೆಲ್‌ಗಳ ಸಂಖ್ಯೆ ಎಷ್ಟು?

ಇ) ಹಾಸ್ಟೆಲ್ ವಾರ್ಡನ್‌ಗಳ ಖಾಲಿ ಇರುವ ಸ್ಥಳಗಳು ಎಷ್ಟು?

ಶ್ರೀ ಜಬ್ಬಾರ್ ಖಾನ್ ಹೊನ್ನಳ್ಳಿ (ಅಲ್ಪಸಂಖ್ಯಾತರ ಕಲ್ಯಾಣ ಮತ್ತು ಯುವಜನ ಸೇವೆ ಸಚಿವರು) :

ಅ) 7 (ಏಳು ಮಾತ್ರ)

ಆ) ಇಲ್ಲ

ಇ) ಅಲ್ಪಸಂಖ್ಯಾತರ ಇಲಾಖೆಗೆ ಮಂಜೂರಾದ 7 ಹಾಸ್ಟೆಲ್ ವಾರ್ಡನ್‌ಗಳ ಹುದ್ದೆಗಳನ್ನು ಹಿಂದುಳಿದ ವರ್ಗಗಳ ಇಲಾಖಾ ವತಿಯಿಂದ ನಿಯೋಜನೆ ಮೇಲೆ ಭರ್ತಿ ಮಾಡಲಾಗಿದೆ.

661 (706) ಶ್ರೀ ಅಲ್ಕೋಡ್ ಹನುಮಂತಪ್ಪ (ದೇವದುರ್ಗ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಯಚೂರು ಜಿಲ್ಲೆ, ದೇವದುರ್ಗ ತಾಲ್ಲೂಕಿನ ಕಂದಾಯ ಇಲಾಖೆಯ ಕಛೇರಿಗಳು ಶಿಥಿಲಗೊಂಡಿರುವುದು ನಿಜವೇ.

ಆ) ಹಾಗಿದ್ದಲ್ಲಿ, ಇದನ್ನು ದುರಸ್ತಿ ಅಥವಾ ಹೊಸದಾಗಿ ಮಿನಿ ವಿಧಾನ ಸೌಧ ನಿರ್ಮಿಸುವ ಪ್ರಸ್ತಾವನೆ ಸರ್ಕಾರದ ಗಮನಕ್ಕೆ ಬಂದಿದೆಯೇ.

ಇ) ಹಾಗಿದ್ದಲ್ಲಿ, ತೆಗೆದುಕೊಂಡ ಕ್ರಮವೇನು.

ಈ) ದೇವದುರ್ಗ ತಾಲ್ಲೂಕಿನ ಕಂದಾಯ ಇಲಾಖೆಯಲ್ಲಿ ಸಿಬ್ಬಂದಿ ವರ್ಗದ ಕೊರತೆ ಇರುವುದು ನಿಜವೇ (ದರ್ಜೆವಾರು ಮಾಹಿತಿ ನೀಡುವುದು)

ಉ) ಇದನ್ನು ಭರ್ತಿ ಮಾಡುವ ಉದ್ದೇಶ ಸರ್ಕಾರದ ಗಮನದಲ್ಲಿ ಇದೆಯೇ.

ಊ) ಹಾಗಿದ್ದಲ್ಲಿ ಎಷ್ಟು ದಿವಸಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲಾಗುವುದು?

ಶ್ರೀ ಎಂ. ಪಿ. ಪ್ರಕಾಶ್ ಮಾನ್ಯ (ಕಂದಾಯ ಸಚಿವರು) :

ಅ) ರಾಯಚೂರು ಜಿಲ್ಲೆ, ದೇವದುರ್ಗ ತಾಲ್ಲೂಕು ಕಛೇರಿಗಳ ಕಟ್ಟಡ ಶಿಥಿಲಗೊಂಡಿರುವುದು ನಿಜವಿರುತ್ತದೆ.

ಆ) ಪ್ರಸ್ತಾವನೆ ಗಮನಕ್ಕೆ ಬಂದಿದೆ.

ಇ) ದೇವದುರ್ಗ ತಾಲ್ಲೂಕು ಸೇರಿದಂತೆ ರಾಜ್ಯದ 86 ತಾಲ್ಲೂಕುಗಳಲ್ಲಿ ಮಿನಿ ವಿಧಾನ ಸೌಧ ನಿರ್ಮಾಣದ ಪ್ರಕ್ರಿಯೆ ಸರ್ಕಾರದ ಪರಿಶೀಲನೆಯಲ್ಲಿದೆ.

ಈ) ನಿಜವಿರುತ್ತದೆ. ದರ್ಜೆವಾರು ಮಾಹಿತಿ ಈ ಕೆಳಕಂಡಂತಿದೆ:

ಕ್ರ.ಸ.	ಖಾಲಿಹುದ್ದೆಗಳ ವಿವರ	ಮಂಜೂರಿ	ಭರ್ತಿ	ಖಾಲಿ
1)	ದ್ವಿ.ದ.ಸಹಾಯಕ	15	11	04
2)	ಗ್ರಾಮ ಲೆಕ್ಕಿಗರು	39	32	07
3)	ಬೆರಳಚ್ಚುಗಾರ	01	–	01
4)	ಪರಿಚಾರಕರು	14	09	05

ಉ) ಇದೆ.

ಊ) ಆರ್ಥಿಕ ಮಿತವ್ಯಯದ ಆದೇಶ ಜಾರಿಯಲ್ಲಿದೆ. ಮೇಲೆ ಕಾಣಿಸಿದ ಖಾಲಿ ಹುದ್ದೆಗಳನ್ನು ಭರ್ತಿಮಾಡುವ ಬಗ್ಗೆ ನಿಯಮಾನುಸಾರ ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

662 (714) ಶ್ರೀ ಅಲ್ಕೋಡ್ ಹನುಮಂತಪ್ಪ (ದೇವದುರ್ಗ) : ಮಾನ್ಯ ಪ್ರವಾಸೋದ್ಯಮ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಯಚೂರು ಜಿಲ್ಲೆ ದೇವದುರ್ಗ ತಾಲ್ಲೂಕಿನಲ್ಲಿರುವ ಪ್ರೇಕ್ಷಣೀಯ ಸ್ಥಳಗಳು ಯಾವುವು;

ಆ) ಹಾಗಿದ್ದಲ್ಲಿ, ಸದರಿ ಸ್ಥಳಗಳ ಅಭಿವೃದ್ಧಿಗೆ ಇಲಾಖೆಯ ವತಿಯಿಂದ ತೆಗೆದುಕೊಂಡ ಕ್ರಮಗಳೇನು;

ಇ) ಗಬ್ಬೂರು, ಚಂದನಕೆರೆ ಹಾಗೂ ಕ್ಯಾದಗೆರೆ ಮುಂತಾದ ಪ್ರೇಕ್ಷಣೀಯ ಸ್ಥಳಗಳನ್ನು ಅಭಿವೃದ್ಧಿಪಡಿಸಲು ತೆಗೆದುಕೊಂಡ ಕಾಮಗಾರಿಗಳು ಯಾವುವು;

ಈ) ಇಲ್ಲದಿದ್ದಲ್ಲಿ ಯಾವಾಗ ಈ ಪ್ರೇಕ್ಷಣೀಯ ಸ್ಥಳಗಳನ್ನು ಅಭಿವೃದ್ಧಿಪಡಿಸಲಾಗುವುದು;

ಉ) ಸದರಿ ಗ್ರಾಮಗಳಲ್ಲಿ ತಮ್ಮ ಇಲಾಖೆಯಿಂದ ಪ್ರೇಕ್ಷಕರಿಗಾಗಿ ಪ್ರವಾಸಿ ಮಂದಿರಗಳನ್ನು ನಿರ್ಮಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ;

ಊ) ಯಾವ ವರ್ಷದಿಂದ ಈ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದು;

ಶ್ರೀ ಡಿ. ಟಿ. ಜಯಕುಮಾರ್ (ಮಾನ್ಯ ಪ್ರವಾಸೋದ್ಯಮ ಸಚಿವರು) :

ಅ) ದೇವದುರ್ಗ ತಾಲ್ಲೂಕಿನಲ್ಲಿ ಗಬ್ಬೂರನ್ನು ಪ್ರೇಕ್ಷಣೀಯ ಸ್ಥಳವೆಂದು ಗುರುತಿಸಲಾಗಿದೆ.

ಆ) ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿಲ್ಲ.

ಇ) ಇಲ್ಲ.

ಈ) ಹೆಚ್ಚು ಪ್ರವಾಸಿಗರು ಭೇಟಿ ನೀಡುವ ಪ್ರಮುಖ ಪ್ರವಾಸಿ ಕೇಂದ್ರಗಳನ್ನು ಆದ್ಯತೆ ಮೇಲೆ ಅಭಿವೃದ್ಧಿಪಡಿಸಿದ ನಂತರ ಅನುದಾನದ ಲಭ್ಯತೆ ಮೇರೆಗೆ ಇತರೆ ಸ್ಥಳಗಳನ್ನು ಅಭಿವೃದ್ಧಿ ಪಡಿಸಲಾಗುವುದು.

ಉ) ಇಲ್ಲ

ಊ) ಉದ್ಭವಿಸುವುದಿಲ್ಲ.

664 (1612) ಶ್ರೀ ಆಲ್ಕೋಡ್ ಹನುಮಂತಪ್ಪ (ದೇವದುರ್ಗ) : ಮಾನ್ಯ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ಯುವಜನ ಸೇವಾ ಹಾಗೂ ಕ್ರೀಡಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಯಚೂರು ಜಿಲ್ಲೆ, ದೇವದುರ್ಗ ತಾಲ್ಲೂಕಿನ ಯುವಜನ ಸೇವೆ ಮತ್ತು ಕ್ರೀಡೆಗಳ ಯಾವ ಯಾವ ಯೋಜನೆಗಳಿಗೆ ಹಣ ಮಂಜೂರು ಮಾಡಲಾಗಿದೆ;

ಆ) ಖರ್ಚಾದ ಹಣ ಎಷ್ಟು;

ಇ) ಉಳಿದ ಹಣ ಎಷ್ಟು (ವಿವರವಾದ ಯೋಜನಾವಾರು ಮಾಹಿತಿ ನೀಡಿರಿ);

ಈ) ಯುವಜನ ಸೇವಾ ಇಲಾಖೆಯಿಂದ ದೇವದುರ್ಗ ತಾಲ್ಲೂಕಿನಲ್ಲಿ ಆಟದ ಮೈದಾನವನ್ನು ನಿರ್ಮಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ;

ಉ) ಹಾಗಿದ್ದಲ್ಲಿ, ಇದಕ್ಕೆ ಮಂಜೂರಾದ ಹಾಗೂ ಖರ್ಚಾದ ಹಣವೆಷ್ಟು;

ಊ) ಹಾಗಿದ್ದಲ್ಲಿ, ಮಂಜೂರು ಮಾಡುವ ಉದ್ದೇಶ ಸರ್ಕಾರಕ್ಕಿದೆಯೇ;

ಋ) ಇದ್ದಲ್ಲಿ, ಇದಕ್ಕೆ ಬೇಕಾಗುವ ಜಮೀನು ಎಷ್ಟು (ವಿವರವಾದ ಮಾಹಿತಿ ನೀಡಿರಿ)?

ಶ್ರೀ ಜಬ್ಬಾರ್ ಖಾನ್ ಹೊನ್ನಳ್ಳಿ (ಅಲ್ಪಸಂಖ್ಯಾತರ ಕಲ್ಯಾಣ ಮತ್ತು ಯುವಜನ ಸೇವಾ ಹಾಗೂ ಕ್ರೀಡಾ ಸಚಿವರು) :

ಅ)	ಅ)	ಕ್ರೀಡಾಕೂಟ ಮತ್ತು ರ್‍ಯಾಲಿಗಳಲ್ಲಿ ಭಾಗವಹಿಸುವವರಿಗೆ ಪ್ರಯಾಣ ಭತ್ಯೆ ಮತ್ತು ದಿನಭತ್ಯೆ	ರೂ.	30,000
	ಆ)	ಮಂಡಲ/ತಾಲ್ಲೂಕು ಮಟ್ಟದ ಕ್ರೀಡಾಂಗಣ ನಿರ್ಮಾಣ	ರೂ.	1,43,000
	ಇ)	ಒಳ ಕ್ರೀಡಾಂಗಣ ಮತ್ತು ಬಯಲು ರಂಗ ಮಂದಿರ ನಿರ್ಮಾಣ	ರೂ.	7,000
	ಈ)	ಕ್ರೀಡಾ ಉತ್ತೇಜನ ಕೇಂದ್ರ	ರೂ.	5,000
		ಒಟ್ಟು	ರೂ.	**1,85,000**

ಆ) ರೂ. 30,000/-

ಇ)	ಅ)	ಮಂಡಲ/ತಾಲ್ಲೂಕು ಮಟ್ಟದ ಕ್ರೀಡಾಂಗಣ ನಿರ್ಮಾಣ	ರೂ.	1,43,000
	ಆ)	ಒಳ ಕ್ರೀಡಾಂಗಣ ಮತ್ತು ಬಯಲು ರಂಗ ಮಂದಿರ ನಿರ್ಮಾಣ	ರೂ.	7,000
	ಇ)	ಕ್ರೀಡಾ ಉತ್ತೇಜನ ಕೇಂದ್ರ	ರೂ.	5,000
		ಒಟ್ಟು	ರೂ.	**1,55,000**

ಈ) ದೇವದುರ್ಗ ತಾಲ್ಲೂಕಿನಲ್ಲಿ ತಾಲ್ಲೂಕು ಮಟ್ಟದ ಕ್ರೀಡಾಂಗಣ ನಿರ್ಮಾಣ ಯೋಜನೆಯು ಇಲಾಖೆಯಲ್ಲಿ ಜಾರಿಯಲ್ಲಿರುತ್ತದೆ.

ಉ) ನಿವೇಶನ ದೊರಕದೆ ಇರುವುದರಿಂದ ಕ್ರೀಡಾಂಗಣ ನಿರ್ಮಾಣ ಕಾರ್ಯವು ಪ್ರಾರಂಭವಾಗಿರುವುದಿಲ್ಲ.

ಊ) ಉದ್ಭವಿಸುವುದಿಲ್ಲ.

ಋ) 400 ಮೀ. ಟ್ರಾಕ್ ಜೊತೆಗೆ ಇನ್ನಿತರೆ ಆಟಗಳಾದ ಫುಟ್ಬಾಲ್, ವಾಲಿಬಾಲ್, ಖೋಖೋ, ಕಬಡ್ಡಿ ಮತ್ತು ಬಾಸ್ಕೆಟ್‌ಬಾಲ್ ಮುಂತಾದ ಅಂಕಣಗಳು ನಿರ್ಮಿಸಲು ಕನಿಷ್ಟ 6 ಎಕರೆ ಜಮೀನು ಬೇಕಾಗುತ್ತದೆ.

665 (808) ಶ್ರೀ ಅಂಗಾರ ಎಸ್. (ಸೂಳ್ಯ) : ಮಾನ್ಯ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ಯುವಜನ ಸೇವಾ ಹಾಗೂ ಕ್ರೀಡಾ ಸಚಿವರು ಈ ಕೆಳಕಂಡ ಪ್ರಶ್ನೆಗೆ ಉತ್ತರಿಸುವರೇ?

ಅ) ಕೇಂದ್ರ ಸರ್ಕಾರದಿಂದ ರಾಜ್ಯ ಸಕಾರಕ್ಕೆ ಯುವಜನ ಸೇವೆಗಾಗಿ ಯಾವ ಯಾವ ಯೋಜನೆಯಡಿಯಲ್ಲಿ ಎಷ್ಟೆಷ್ಟು ಅನುದಾನವನ್ನು ಬಿಡುಗಡೆ ಮಾಡಲಾಗಿದೆ (ಯೋಜನೆಗಳ ಅನುದಾನವಾರು ವಿವರ ನೀಡುವುದು).

ಆ) ರಾಜ್ಯ ಸರ್ಕಾರದಿಂದ ಯುವಜನ ಸೇವೆಗಾಗಿ ಯಾವ ಯಾವ ಯೋಜನೆಯಡಿಯಲ್ಲಿ ಎಷ್ಟೆಷ್ಟು ಅನುದಾನವನ್ನು ಬಿಡುಗಡೆ ಃ ಾಡಲಾಗಿದೆ (ಯೋಜನಾವಾರು ವಿವರ ನೀಡುವುದು)?

ಶ್ರೀ ಜಬ್ಬಾರ್ ಖಾನ್ ಹೊನ್ನಳ್ಳಿ (ಅಲ್ಪಸಂಖ್ಯಾತರ ಕಲ್ಯಾಣ ಮತ್ತು ಯುವಜನ ಸೇವಾ ಹಾಗೂ ಕ್ರೀಡಾ ಸಚಿವರು) :

ಅ) ಕಳೆದ ಎರಡು ವರ್ಷಗಳಿಂದ ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಯುವಜನ ಸೇವೆಗಾಗಿ ಯಾವುದೇ ಅನುದಾನ ಬಿಡುಗಡೆ ಮಾಡಿರುವುದಿಲ್ಲ.

ಆ) ರಾಜ್ಯ ಸರ್ಕಾರದಿಂದ ಯುವಜನ ಸೇವೆಗಾಗಿ ಕಳೆದ ಎರಡು ವರ್ಷಗಳಲ್ಲಿ 2003-04ನೇ ಸಾಲಿನಲ್ಲಿ ಯೋಜನೆ ಅಡಿಯಲ್ಲಿ 679.86 ಲಕ್ಷಗಳು ಹಾಗೂ ಯೋಜನೇತರ ಅಡಿಯಲಿ ರೂ. 117.75 ಲಕ್ಷಗಳು ಒಟ್ಟು 815.61 ಲಕ್ಷಗಳನ್ನು ಬಿಡುಗಡೆ ಮಾಡಿದೆ.

2004-05ನೇ ಸಾಲಿಗೆ ಯೋಜನೆಯಡಿಯಲ್ಲಿ 9.00 ಲಕ್ಷ ರೂ.ಗಳನ್ನು ಯೋಜನೇತರದಡಿಯಲ್ಲಿ 100.77 ಲಕ್ಷ ರೂ.ಗಳನ್ನು ಒಟ್ಟು 109.77 ಲಕ್ಷ ರೂ.ಗಳ ಅನುದಾನವನ್ನು ಆಯವ್ಯಯದಲ್ಲಿ ಒದಗಿಸಿದೆ.

ಈವರೆವಿಗೂ ಯೋಜನೆಯಡಿಯಲ್ಲಿ ರೂ. 6.00 ಲಕ್ಷಗಳನ್ನು ಬಿಡುಗಡೆ ಮಾಡಿದ್ದು, ರೂ. 3.00 ಲಕ್ಷ ರೂ.ಗಳು ಬಾಕಿ ಇರುತ್ತವೆ. ಯೋಜನೇತರದಡಿಯಲ್ಲಿ 89.16 ಲಕ್ಷಗಳನ್ನು ಬಿಡುಗಡೆ ಮಾಡಿದ್ದು, ರೂ. 11.61 ಲಕ್ಷಗಳು ಉಳಿಕೆ ಇರುತ್ತದೆ. ಉಳಿದ ಯೋಜನೆ ಹಾಗೂ ಯೋಜನೇತರ ಅಡಿಯಲ್ಲಿಯ ಅನುದಾನವನ್ನು ಫೆಬ್ರವರಿ 2005ರ ಅಂತ್ಯದಲ್ಲಿ ಬಿಡುಗಡೆ ಮಾಡಲಾಗುವುದು.

666 (809) ಶ್ರೀ ಅಂಗಾರ ಎಸ್. (ಸೂಳ್ಯ) : ಮಾನ್ಯ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗೆ ಉತ್ತರಿಸುವರೇ?

ಅ) ಸುಳ್ಯ ಕ್ಷೇತ್ರದಲ್ಲಿ ಕಳೆದ ಇಪ್ಪತ್ತು ವರ್ಷಗಳಿಂದ ಬಳಸುತ್ತಿದ್ದ ಗ್ರಾಮೀಣ ಜನರ ಸಂಪರ್ಕ ರಸ್ತೆಗಳನ್ನು ಅರಣ್ಯ ಇಲಾಖೆಗೆ ಸಂಬಂಧಿಸಿದೆಯೆಂದು ಮುಚ್ಚಿ ಗ್ರಾಮೀಣ ಜನರ ಸಂಪರ್ಕಕಾಗಿ ತಡೆಯೊಡ್ಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ ಯಾವ ಕ್ರಮವನ್ನು ಕೈಗೊಳ್ಳಲಾಗುವುದು (ವಿವರ ನೀಡುವುದು)?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):

ಅ) ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ಕ್ಷೇತ್ರದ ಅರಣ್ಯ ಪ್ರದೇಶಗಳಲ್ಲಿ ಕರ್ನಾಟಕ ಅರಣ್ಯ ಅಧಿನಿಯಮ 1963 ಮತ್ತು ಅರಣ್ಯ ಸಂರಕ್ಷಣಾ ಕಾಯ್ದೆ 1980 ರ ನಿಯಮಗಳ ಉಲ್ಲಂಘನೆಯಿಂದ ರಸ್ತೆಗಳನ್ನು ನಿರ್ಮಿಸಲಾಗಿದೆ. ಇದು ಅರಣ್ಯ ಇಲಾಖೆಯ ಗಮನಕ್ಕೆ ಬಂದಿದೆ. ಈ ಪ್ರಕರಣಗಳಲ್ಲಿ ವಿಚಾರಣೆ ನಡೆಯುತ್ತಿದೆ. ಆದರೆ ಇಂತಹ ಯಾವುದೇ ರಸ್ತೆಗಳನ್ನು ತಡೆದಿರುವುದಿಲ್ಲ.

ಇ) ಪ್ರಸ್ತುತ ಈ ಪ್ರಶ್ನೆ ಉದ್ಭವಿಸುವುದಿಲ್ಲ.

667 (810) ಶ್ರೀ ಅಂಗಾರ ಎಸ್. (ಸೂಳ್ಯ) : ಮಾನ್ಯ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗೆ ಉತ್ತರಿಸುವರೇ?

ಅ) ಸೂಳ್ಯ ವಿಧಾನ ಸಭೆ ಕ್ಷೇತ್ರ ವ್ಯಾಪ್ತಿಯ ಗ್ರಾಮೀಣ ಜನರ ಸಂಪರ್ಕಕ್ಕೆ ಇರುವ ರಸ್ತೆಗಳನ್ನು ಮುಚ್ಚುವ ಉದ್ದೇಶ ಸರ್ಕಾರಕ್ಕೆ ಇದೆಯೇ;

ಆ) ಹಾಗಿದ್ದಲ್ಲಿ, ಸಂಪರ್ಕಕ್ಕಾಗಿ ಬದಲಿ ವ್ಯವಸ್ಥೆ ಮಾಡಿಕೊಡಲಾಗುವುದೇ (ವಿವರ ನೀಡುವುದು)?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಮಾನ್ಯ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

668 (811) ಶ್ರೀ ಅಂಗಾರ ಎಸ್. (ಸೂಳ್ಯ) : ಮಾನ್ಯ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸೂಳ್ಯ ವಿಧಾನ ಸಭಾ ಕ್ಷೇತ್ರದ ಯಾವ ಯಾವ ಗ್ರಾಮಗಳಲ್ಲಿ ಎಷ್ಟೆಷ್ಟು ಕುಟುಂಬಗಳು ಒತ್ತುವರಿ ಮಾಡಿ ಕೃತವಳಿಯನ್ನು ಮಾಡುತ್ತಿದ್ದಾರೆ (ಗ್ರಾಮ, ಕುಟುಂಬವಾರು ವಿವರ ನೀಡುವುದು):

ಆ) ಸದರಿ ಕಟುಂಬಗಳು ಒತ್ತುವರಿ ಮಾಡಿದ ಕೃತವಳಿಯನ್ನು ಸಕ್ರಮಗೊಳಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ; ಇದ್ದಲ್ಲಿ ಕೈಗೊಂಡ ಕ್ರಮಗಳೇನು ವಿವರ ನೀಡುವುದು?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :

ಅ) ಸೂಳ್ಯ ವಿಧಾನ ಸಭಾ ಕ್ಷೇತ್ರದ 38 ಗ್ರಾಮಗಳಲ್ಲಿ ಒಟ್ಟು 1034 ಕುಟುಂಬಗಳು ಅರಣ್ಯ ಪ್ರದೇಶ ಒತ್ತುವರಿ ಮಾಡಿ ಕೃತವಳಿಗಳನ್ನು ಮಾಡುತ್ತಿದ್ದಾರೆ. ಈ ಎಲ್ಲಾ ಒತ್ತುವರಿಗಳು ದಿನಾಂಕ: 27–4–1978 ರ ನಂತರದ ಒತ್ತುವರಿಯಾಗಿರುತ್ತದೆ. (ಗ್ರಾಮಾವಾರು ವಿವರಗಳ ಪಟ್ಟಿಯನ್ನು ಲಗತ್ತಿಸಿದೆ).

ಆ) ಈ ಒತ್ತುವರಿಯನ್ನು ಸಕ್ರಮಗೊಳಿಸಬೇಕಾದಲ್ಲಿ ಅರಣ್ಯ (ಸಂರಕ್ಷಣಾ) ಕಾಯ್ದೆ 1980 ರಡಿಯಲ್ಲಿ ಕೇಂದ್ರ ಸರ್ಕಾರದ ಪೂರ್ವಾನುಮೋದನೆ ಬೇಕಾಗಿರುತ್ತದೆ. ಸರ್ವೋಚ್ಚ ನ್ಯಾಯಾಲಯದ ಆದೇಶದನ್ವಯ ಹಾಗೂ ಕೇಂದ್ರ ಸರ್ಕಾರದ ನಿರ್ದೇಶನದನ್ವಯ 1980 ರ ನಂತರದ ಒತ್ತುವರಿಗಳನ್ನು ತೆರವುಗೊಳಿಸಬೇಕಾಗಿದೆ. ದಿನಾಂಕ: 24–10–1980ರ ಪೂರ್ವದ ಅರಣ್ಯ ಭೂಮಿಯಲ್ಲಿನ ಅತಿಕ್ರಮಣಗಳನ್ನು ಸಕ್ರಮಗೊಳಿಸುವ ಬಗ್ಗೆ ಪರಿಶೀಲಿಸಲು ತಾಲ್ಲೂಕು ಮಟ್ಟದ ಸಮಿತಿಗಳನ್ನು ರಚಿಸಲಾಗಿದೆ. ದಿನಾಂಕ: 24–10–1980 ರ ನಂತರ ಅರಣ್ಯ ಒತ್ತುವರಿಯಾಗಿರುವ ಅರ್ಹ ಪ್ರಕರಣಗಳನ್ನು ಸಕ್ರಮಗೊಳಿಸಲು ಅರಣ್ಯ (ಸಂರಕ್ಷಣಾ) ಕಾಯ್ದೆ 1980 ರ ಮಾರ್ಗ ಸೂಚಿಗಳನ್ನು ಸಡಿಲಿಸುವಂತೆ ಕೇಂದ್ರ ಸರ್ಕಾರವನ್ನು ಕೋರಲಾಗಿತ್ತು. ಕೇಂದ್ರ ಸರ್ಕಾರವು ಪ್ರಸ್ತಾವನೆಯನ್ನು ತಿರಸ್ಕರಿಸಿದೆ. ಆದರೆ ದಿನಾಂಕ: 24–10–1980 ರ ನಂತರ ಆದ ಅರ್ಹ ಒತ್ತುವರಿಗಳನ್ನು ಸಕ್ರಮಗೊಳಿಸಲು ಮಾರ್ಗ ಸೂಚಿಗಳನ್ನು ಸಡಿಲಿಸುವಂತೆ ಪುನಃ ಕೇಂದ್ರ ಸರ್ಕಾರವನ್ನು ಕೋರಿದೆ

ಕ್ರಮ ಸಂಖ್ಯೆ	ಗ್ರಾಮ	ಒತ್ತುವರಿ ಮಾಡಿರುವ ಕುಟುಂಬಗಳ ಸಂಖ್ಯೆ
1	ಕೀನ್ಯ	1
2	ಬಳ್ಪ	3
3	ಕಲ್ಲಡ್ಕ	1
4	ಸುಳ್ಯ	9

5	ಉಬರಡ್ಕ ಮಿತ್ತೂರು	72
6	ಮರ್ಕಂಜ	79
7	ಆರಂತೋಡು	40
8	ಅಲೆಟ್ಟಿ	65
9	ಸಂಪಾಜ	26
10	ತೋಡಕಾನ	93
11	ದೇವಚಳ್ಳ	177
12	ಅಜ್ಜಾದಲೆ	23
13	ನೆಲ್ಲೂರು–ಕಮ್ರಾಜೆ	138
14	ದುಂಡೆಕೋಲು	2
15	ಗುತ್ತಿಗಾರು	26
16	ಬಾಂದು	2
17	ಬಿಳಿಸೆಲೆ	16
18	ನಾಲ್ಕೂರು	93
19	ಬತ್ತೂರು	7
20	ರಂಜಿಲಾಡಿ	6
21	ಸಿಂಬಾಗಿಲು	4
22	ಕೊಂಬಾರು	5
23	ಕೋಡಿಂಬಾಳ	46
24	ಬೆಳ್ಳಾರೆ	1
25	ಬರ್ಪನಾಡು	51
26	ಮುಪ್ಪೇರಿಯ	1
27	ಜಲ್ಸೂರು	13
28	ಪಾಲ್ತಾಡಿ	5
29	ಸವಣೂರು	3
30	ಬೆಳಂದೂರು	5
31	ಕೈಮಣ	4
32	ಕಾಣಿಯೂರು	2
33	ಬೊಳ್ವಾಡಿ	2
34	ಕೊಯಿಲ	1
35	ಕುರಾಬೆ	3
36	ವಿಡಮಂಗಲ	4
37	ವಿಣ್ಣೂರು	1
38	ಕುಂತೂರು	5
	ಒಟ್ಟು	**1034**

669 (812) ಶ್ರೀ ಅಂಗಾರ ಎಸ್. (ಸೂಳ್ಯ): ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗೆ ಉತ್ತರಿಸುವರೇ?

ಅ) ಸೂಳ್ಯದ ಉಪ್ಪಿನಂಗಡಿ – ಕಡಬ ರಸ್ತೆಯು ತುಂಬಾ ಕೆಟ್ಟಿದ್ದು ವಾಹನ ಸಂಚಾರಕ್ಕೆ ಮತ್ತು ಜನಸಂಪರ್ಕಕ್ಕೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ರಸ್ತೆಯ ಗುಂಡಿಗಳನ್ನು ತುಂಬುವ ಹಾಗೂ ನವೀಕರಣ ಕಾರ್ಯ ಎಂದಿನಿಂದ ಕೈಗೊಳ್ಳಲಾಗುವುದು (ವಿವರ ನೀಡುವುದು)?

ಶ್ರೀ ಹೆಚ್. ಡಿ. ರೇವಣ್ಣ (ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು):

ಅ) ಹೌದು

ಆ) ರಸ್ತೆಯಲ್ಲಿ ಗುಂಡಿಗಳನ್ನು ಮುಚ್ಚುವ ಕಾರ್ಯವನ್ನು ಈಗಾಗಲೇ ಕೈಗೊಂಡಿದ್ದು ಕಾಮಗಾರಿ ಪ್ರಗತಿಯಲ್ಲಿದೆ. ಅನುದಾನದ ಲಭ್ಯತೆಯ ಮೇರೆಗೆ ಹಂತ ಹಂತವಾಗಿ ತೆಗೆದುಕೊಳ್ಳಲು ಪರಿಶೀಲಿಸಲಾಗುವುದು.

670(1472) ಶ್ರೀ. ಡಾ. ಅನ್ನದಾನಿ ಕೆ. (ಮಳವಳ್ಳಿ): ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಪ್ರಸ್ತುತ ರಾಜ್ಯದಲ್ಲಿ ದಿನವೊಂದರ ವಿದ್ಯುತ್ ಬಳಕೆಯ ಪ್ರಮಾಣವೇನು;

ಆ) ಇದನ್ನು ಪೂರೈಸಲು ಸರಕಾರ ಯಾವ ಯಾವ ವಿದ್ಯುತ್ ಮೂಲಗಳನ್ನು ಅವಲಂಬಿಸಿಕೊಂಡಿದೆ;

ಇ) ದಿನೇ ದಿನೇ ಹೆಚ್ಚುತ್ತಿರುವ ವಿದ್ಯುತ್‌ನ ಬೇಡಿಕೆಯನ್ನು ಪೂರೈಸಲು ಹೊರ ರಾಜ್ಯಗಳಿಂದ ವಿದ್ಯುತ್ ಖರೀದಿ ಮಾಡಲು ಕ್ರಮ ಜರುಗಿಸಿದ್ದೆಯೇ;

ಈ) ಹೌದಾದಲ್ಲಿ ವಿವರಗಳೇನು;

ಶ್ರೀ ಹೆಚ್. ಡಿ. ರೇವಣ್ಣ (ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಜನವರಿ 2005 ನೇ ಮಾಹೆಯಲ್ಲಿ ರಾಜ್ಯದ ದಿನಂಪ್ರತಿ ವಿದ್ಯುತ್ ಬಳಕೆಯ ಪ್ರಮಾಣ, ಸರಾಸರಿ 100.5 ದಶಲಕ್ಷ ಯೂನಿಟ್ಟುಗಳು.

ಆ) ಇದನ್ನು ಈ ಕೆಳಕಂಡ ಮೂಲಗಳಿಂದ ಪೂರೈಸಲಾಗುತ್ತಿದೆ.

ಕ್ರ. ಸಂ.	ಮೂಲಗಳ ವಿವರಗಳು	ಪ್ರತಿದಿನ ಲಭ್ಯವಾಗುತ್ತಿರುವ ವಿದ್ಯುತ್‌ನ ಪ್ರಮಾಣ (ದ.ಲ. ಯೂನಿಟ್‌ಗಳಲ್ಲಿ)
1	ಜಲ ವಿದ್ಯುತ್ (ಕೆ.ಪಿ.ಸಿ.ಎಲ್)	25.249
2	ಶಾಖೋತ್ಪನ್ನ (ಕೆ.ಪಿ.ಸಿ.ಎಲ್)	24.882
3	ಜಲ ವಿದ್ಯುತ್ (ವಿ.ವಿ.ಎನ್.ಎಲ್)	1.286
4	ಶಾಖೋತ್ಪನ್ನ (ವಿ.ವಿ.ಎನ್.ಎಲ್)	1.636
5	ಕೇಂದ್ರೀಯ ವಿದ್ಯುತ್ ಉತ್ಪಾದನಾ ಘಟಕ ಮತ್ತು ಲಭ್ಯತೆ ಆಧಾರಿತ ದರ ಪ್ರಕಾರ	35.209

6 ಸಂಪ್ರದಾಯ ಮತ್ತು ಅಸಂಪ್ರದಾಯ ಮೂಲಗಳಿಂದ (ಖಾಸಗಿ ವಿದ್ಯುತ್ ಉತ್ಪಾದಕರಿಂದ) 12.306

ಒಟ್ಟು 100.568

ಇ) ಮತ್ತು ಈ)

ಹೌದು, ರಾಜ್ಯಕ್ಕೆ ಪೀಕ್ ಲೋಡ್ ಸಮಯದಲ್ಲಿ ಕೆ.ಪಿ.ಸಿ.ಎಲ್., ಕೇಂದ್ರೀಯ ವಿದ್ಯುತ್ ಉತ್ಪಾದನಾ ಘಟಕಗಳು ಮತ್ತು ಎಲ್ಲಾ ಖಾಸಗೀ ವಿದ್ಯುತ್ ಉತ್ಪಾದಕರುಗಳಿಂದ ಲಭ್ಯವಾಗುವ ಸುಮಾರು 5429 ಮೆ.ವಾಟ್ ವಿದ್ಯುತ್‌ನ ಜೊತೆಗೆ ದಿನೇ ದಿನೇ ಹೆಚ್ಚುತ್ತಿರುವ ರಾಜ್ಯದ ವಿದ್ಯುತ್ ಬೇಡಿಕೆಯನ್ನು ಪೂರೈಸಲು ಪವರ್ ಟ್ರೇಡಿಂಗ್ ಕಾರ್ಪೋರೇಷನ್‌ನ್ನಿಂದ (ಪಿ.ಟಿ.ಸಿ) 117 ಮೆಗಾ ವಾಟ್ಸ್ ಮತ್ತು ನ್ಯಾಷನಲ್ ವಿದ್ಯುತ್ ವ್ಯಾಪಾರ ನಿಗಮ್ ಲಿಮಿಟೆಡ್‌ನ್ನಿಂದ (ಎನ್.ವಿ.ವಿ.ಎನ್.ಎಲ್) 100ಮೆಗಾವಾಟ್ಸ್ – ಈ ಎರಡೂ ಸಂಸ್ಥೆಗಳಿಂದ ಒಟ್ಟು 217 ಮೆ.ವ್ಯಾಟ್‌ನಷ್ಟು ವಿದ್ಯುತ್ತನ್ನು ಪಡೆಯಲು ಕ್ರಮ ಕೈಗೊಳ್ಳಲಾಗುತ್ತಿದೆ.

671(1473) ಶ್ರೀ ಡಾ. ಅನ್ನದಾನಿ ಕೆ. (ಮಳವಳ್ಳಿ): ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗೆ ಉತ್ತರಿಸುವರೇ?

ಅ) ಕೊಳ್ಳೇಗಾಲ ತಲ್ಲೂಕಿನ ಕಾವೇರಿನದಿ ಪಾತ್ರದಲ್ಲಿ ಯಾವ ಯಾವ ಖಾಸಗಿ ಜಲವಿದ್ಯುತ್ ಕಂಪನಿಗಳಿಗೆ ಜಲವಿದ್ಯುತ್ ತಯಾರಿಕಾ ಘಟಕವನ್ನು ಸ್ಥಾಪಿಸಲು ಅನುಮತಿ ನೀಡಲಾಗಿದೆ ಹಾಗೂ ಅವುಗಳ ವಿವರಗಳೇನು:

ಆ) ಅನುಮತಿ ಕೋರಿ ಬಂದ ಮನವಿಗಳು ಎಷ್ಟು:

ಇ) ಅನುಮತಿ ನೀಡುವಲ್ಲಿ ಅನುಸರಿಸಿದ ಮಾನದಂಡಗಳೇನು:

ಈ) ಈ ಪ್ರದೇಶದಲ್ಲಿ ಜಲವಿದ್ಯುತ್ ಘಟಕಗಳನ್ನು ಸ್ಥಾಪಿಸುವುದರಿಂದ ಉಂಟಾಗಬಹುದಾದ ನೈಸರ್ಗಿಕ ಏರು ಪೇರುಗಳ ಕುರಿತು ಸರಕಾರ ಸಮಗ್ರ ಪರಿಶೀಲನೆ ನಡೆಸಿದೆಯೇ;

ಉ) ಹೌದಾದಲ್ಲಿ ಪರಿಶೀಲನೆಯ ವಿವರಗಳೇನು:

ಊ) ಭರಚುಕ್ಕಿ ಬಳಿ ಸ್ಥಾಪಿಸಲುದ್ದೇಶಿಸಿರುವ ವಿದ್ಯುತ್ ಘಟಕದಿಂದ ಉಂಟಾಗಬಹುದಾದ ಅನಾಹುತಗಳ ಬಗ್ಗೆ ಸರಕಾರದ ನಿಲುವುಗಳೇನೆ:

ಋ) ಈ ಯೋಜನೆಗಾಗಿ ಕಂಪನಿಗೆ ನೀಡಿದ ಅರಣ್ಯ ಭೂಮಿ ಮತ್ತು ಸರಕಾರಿ ಭೂಮಿಯ ವಿಸ್ತೀರ್ಣವೇನು (ವಿವರಗಳನ್ನು ನೀಡುವುದು)

ೠ) ಅಮೂಲ್ಯ ನಿಸರ್ಗ ಸಂಪತ್ತನ್ನು ಉಳಿಸಿಕೊಳ್ಳುವ ದೃಷ್ಟಿಯಿಂದ ಭರಚುಕ್ಕಿ ಬಳಿ ಸ್ಥಾಪಿಸಲುದ್ದೇಶಿಸಿರುವ ಮಿನಿ ಹೈಡಲ್ ಪ್ರಾಜೆಕ್ಟನ್ನು ಕೈಬಿಡಲು ಸರಕಾರ ಮುಂದಾಗುವರೇ;

ಶ್ರೀ ಹೆಚ್. ಡಿ. ರೇವಣ್ಣ (ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಕೊಳ್ಳೆಗಾಲ ತಾಲ್ಲೂಕಿನ ಕಾವೇರಿ ನದಿ ಪಾತ್ರದಲ್ಲಿ ಕಿರುಜಲ ವಿದ್ಯುತ್ ತಯಾರಿಕಾ ಘಟಕವನ್ನು ಸ್ಥಾಪಿಸಲು ಅನುಮತಿ ನೀಡಲಾದ ಖಾಸಗಿ ಜಲವಿದ್ಯುತ್ ಕಂಪನಿಗಳ ಪಟ್ಟಿಯನ್ನು ಲಗತ್ತಿಸಲಾಗಿದೆ.

ಆ) ಅನುಮತಿ ಕೋರಿ ಬಂದ ಮನವಿಗಳು ಒಟ್ಟು 12

ಇ) 1. ಹಂಚಿಕೆಗಾಗಿ ಬಂದ ಎಲ್ಲಾ ಯೋಜನೆಗಳು ಸ್ವಸಂಶೋಧಿತ ಯೋಜನೆಗಳಾಗಿರುವುದರಿಂದ, ಪ್ರಸ್ತಾವಿತ ಯೋಜನೆಗಳ ಬಗ್ಗೆ ಸರಿಯಾದ ತಾಂತ್ರಿಕ ವಿವರಗಳನ್ನು ಒಳಗೊಂಡ ಪಿ.ಎಫ್.ಆರ್ ವರದಿಯನ್ನು, ಆರ್ಥಿಕ ಸಮರ್ಪಕತೆಯನ್ನು ನೀಡಿದ ಕಂಪನಿಗಳ ಅರ್ಜಿಯನ್ನು ಹಂಚಿಕೆ ಸಮಿತಿಯು ಪರಿಶೀಲಿಸಿ ಹಂಚಿಕೆ ಮಾಡುತ್ತದೆ.

2. ಒಂದೇ ಯೋಜನೆಗೆ ಒಂದಕ್ಕಿಂತ ಹೆಚ್ಚು ಕಂಪನಿಗಳು ಅರ್ಜಿಯನ್ನು ಸಲ್ಲಿಸಿದಲ್ಲಿ ಮೊದಲು ಅರ್ಜಿಯನ್ನು ಸಲ್ಲಿಸಿದ ಕಂಪನಿಗೆ ಮೊದಲ ಆದ್ಯತೆಯನ್ನು ನೀಡಿ ಹಂಚಿಕೆ ಮಾಡಲಾಗುವುದು.

ಈ) ಕಿರುಜಲ ವಿದ್ಯುತ್ ಯೋಜನೆಗಳು ಪರಿಸರ ಸ್ನೇಹಿಯಾಗಿದ್ದು, ಹಸಿರು ಶಕ್ತಿಯಾದುದರಿಂದ ಅಸಂಪ್ರದಾಯಿಕ ಯೋಜನೆಗಳೆಂದು ಪರಿಗಣಿಸಲಾಗಿದೆ. ಈ ಯೋಜನೆಗಳಿಗಾಗಿ, ಇದ್ದ ಆಣೆಕಟ್ಟನ್ನಾಗಲಿ ಅಥವಾ ಕಾಲುವೆಗಳಲ್ಲಿ ಎತ್ತರವನ್ನು ಉಪಯೋಗಿಸಿ ಕೊಳ್ಳಲಾಗುತ್ತದೆ. ನದಿ/ಹೊಳೆಯ ಪಾತ್ರದಲ್ಲಿ ಎತ್ತರವು ಲಭ್ಯವಿದ್ದಲ್ಲಿ ಚಿಕ್ಕ ಒಡ್ಡನ್ನು ಕಟ್ಟಿ ನೀರನ್ನು ತಿರುವು ನಾಲೆಗಳ ಮೂಲಕ ತಿರುಗಿಸಿ ವಿದ್ಯುತ್ ಉತ್ಪಾದಿಸಿ ತಿರುಗಿ ಹೊಳೆಗೇ ಬಿಡಲಾಗುತ್ತದೆ. ಇಂತಹ ಯೋಜನೆಗಳಲ್ಲಿ ನೀರನ್ನು ಹಿಡಿದಿಟ್ಟುಕೊಳ್ಳಲು ಆಸ್ಪದವಿರದೇ ಇದ್ದ ಕಾರಣ ನೈಸರ್ಗಿಕ ಏರು ಪೇರುಗಳಾಗುವ ಯಾವುದೇ ಸಾಧ್ಯತೆಗಳು ಇರುವುದಿಲ್ಲ. ಆದರೂ ಈ ಯೋಜನೆಗಳ ವಿವರವಾದ ತಾಂತ್ರಿಕ ವರದಿಗೆ ಸಂಬಂಧಿತ ನೀರಾವರಿ, ಅರಣ್ಯ, ಪರಿಸರ ಮಾಲಿನ್ಯ ನಿಯಂತ್ರ ಮಂಡಳಿ, ಕೆ.ಪಿ.ಟಿ.ಸಿ.ಎಲ್, ಕೆ.ಪಿ.ಸಿ.ಎಲ್, ಕೆ.ಆರ್.ಇ.ಡಿ.ಎಲ್ ಸಂಸ್ಥೆಗಳಿಂದ ಅನುಮೋದನೆ ಪಡೆದುಕೊಂಡ ನಂತರ ಕಾಮಗಾರಿಗಳನ್ನು ಪ್ರಾರಂಭಿಸಬೇಕಾಗುತ್ತದೆ. ಈ ಅನುಮೋದನೆ ಪತ್ರದಲ್ಲಿ ಈ ಯೋಜನೆಯಿಂದ ಯಾವುದೇ ತೊಂದರೆಯಾಗದಂತೆ ಯೋಜನೆಯನ್ನು ಅನುಷ್ಠಾನಗೊಳಿಸಲು ಷರತ್ತುಗಳನ್ನು ಅಳವಡಿಸಲಾಗಿರುತ್ತದೆ.

ಉ) ಕಿರುಜಲ ವಿದ್ಯುತ್ ಯೋಜನೆಗಳು ಪರಿಸರ ಸ್ನೇಹಿಯಾಗಿರುವುದು ಅಲ್ಲದೇ, ಅಸಂಪ್ರದಾಯಿಕ ಇಂಧನದ ಅಂಗವಾಗಿರುವುದರಿಂದ ಇಂತಹ ಯಾವುದೇ ಸಮಸ್ಯೆಗಳು ಉದ್ಭವಿಸುವುದಿಲ್ಲ.

ಊ) ಭರಚುಕ್ಕಿ ಬಳಿ ಸ್ಥಾಪಿಸಲುದ್ದೇಶಿಸಿರುವ ವಿದ್ಯುತ್ ಘಟಕಕ್ಕೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ನೀರಾವರಿ ಇಲಾಖೆಗಳಿಂದ ಅನುಮೋದನೆ ದೊರಕಿವೆ. ಕಿರುಜಲ ವಿದ್ಯುತ್ ಯೋಜನೆಗಳು ಪರಿಸರ ಸ್ನೇಹಿಯಾರಿರುವುದು ಅಲ್ಲದೇ, ಅಸಂಪ್ರದಾಯಿಕ ಇಂಧನದ ಅಂಗವಾಗಿರುವುದರಿಂದ ಇಂತಹ ಯಾವುದೇ ಸಮಸ್ಯೆಗಳು ಉದ್ಭವಿಸುವುದಿಲ್ಲ.

ಋ) ಈ ಯೋಜನೆಗಾಗಿ ಬೇಕಾಗಿರುವ 19.64 ಎಕರೆ ಕಂದಾಯ ಭೂಮಿಯಲ್ಲಿ 9.64 ಎಕರೆ ಭೂಮಿಯನ್ನು ಸರ್ಕಾರವು ಮಂಜೂರು ಮಾಡಿ ಕಂಪನಿಗೆ ಉಪಗುತ್ತಿಗೆಗೆ ನೀಡಿದೆ ಆದರೆ ಇನ್ನೂ 10 ಎಕರೆ ಕಂದಾಯ ಭೂಮಿಯನ್ನು ಅರಣ್ಯ ಇಲಾಖೆಯ ನಿರಾಪೇಕ್ಷಣೆಗಾಗಿ ಕಾಯ್ದಿದೆ.

ೠ) ಕಿರುಜಲ ವಿದ್ಯುತ್ ಯೋಜನೆಗಳು ಪರಿಸರ ಸ್ನೇಹಿಯಾಗಿರುವುದು ಅಲ್ಲದೇ, ಅಸಂಪ್ರದಾಯಿಕ ಇಂಧನದ ಅಂಗವಾಗಿರುವುದರಿಂದ ಇಂತಹ ಯಾವುದೇ ಸಮಸ್ಯೆಗಳು ಉದ್ಭವಿಸುವುದಿಲ್ಲ. ಆದರೂ ಈ ಯೋಜನೆಗೆ ಅನುಮೋದನೆಗಳನ್ನು ನೀಡುವಾಗ ಸಂಬಂಧಿತ ಇಲಾಖೆಗಳು ಹಾಕಿದ ಷರತ್ತುಗಳನ್ನು ಅಭಿವೃದ್ಧಿದಾರರು ಯೋಜನಾ ಅನುಷ್ಠಾನ ಮಾಡುವಾಗ ಆಗಲಿ ಅಥವಾ ಅನುಷ್ಠಾನ ಮಾಡಿದ ಮೇಲೂ ಆಗಲಿ ಉಲ್ಲಂಘಿಸಿದಲ್ಲಿ ಯಾವುದೇ ಹಂತದಲ್ಲಿ ಈ ಯೋಜನೆಯ ಹಂಚಿಕೆಯನ್ನು ರದ್ದುಪಡಿಸಲು ಸರ್ಕಾರ ಸಮರ್ಥವಾಗಿದೆ.

ಅನುಬಂಧ

ಚಾಮರಾಜನಗರ ಜಿಲ್ಲೆ, ಕೊಳ್ಳಗಾಲ ತಾಲ್ಲೂಕಿನಲ್ಲಿ ಕಾವೇರಿ ನದಿಗೆ ಅಡ್ಡಲಾಗಿ ಹಂಚಿಕೆ ಕೋರಿ ಬಂದ ಯೋಜನೆಗಳ ವಿವರ

ಕ್ರಮ ಸಂಖ್ಯೆ	ಅಭಿವೃದ್ಧಿದಾರರು	ಸ್ಥಳ	ಸಾಮರ್ಥ್ಯ ಮೆ.ವ್ಯಾ	ಷರಾ
1	ಎಸ್.ಎಲ್.ಎಸ್ ಪವರ್ ಇಂಡಸ್ಟ್ರೀ ಲಿ., #700ಮ 2ನೇ ಸಿ ಅಡ್ಡರಸ್ತೆ, 9ನೇ ಮುಖ್ಯ ರಸ್ತೆ, 3ನೇ ಬ್ಲಾಕ್, 3ನೇ ಹಂತ, ಬಸವೇಶ್ವರ ನಗರ ಬೆಂಗಳೂರು – 560 079.	ಚಾಮರಾಜ ನಗರ ಜಿಲ್ಲೆ ಕೊಳ್ಳೇಗಾಲ ತಾಲ್ಲೂಕು ಸತ್ತೇಗಾಲ ಗ್ರಾಮದ ಬಳಿ ಕಾವೇರಿ ನದಿಯ 2 ಕಿ.ಮೀ ಕೆಳತೊರೆಯಲ್ಲಿ	4.00	ಡಿಇ 32ಎನ್.ಸಿ.ಇ 2002 ದಿನಾಂಕ 13.06.2002
2	ಚಾಣಕ್ಯ ಸಿಮೆಂಟ್ಸ್ ಲಿ., # 2629, 17ನೇ ಮುಖ್ಯ ರಸ್ತೆ, 3ನೇ ಅಡ್ಡರಸ್ತೆ, ಹೆಚ್.ಎ.ಎಲ್ 2ನೇ ಹಂತ, ಬೆಂಗಳೂರು – 560008.	ಚಾಮರಾಜನಗರ ಜಿಲ್ಲೆಯ ಬೂದಿಕಟ್ಟೆ ಗ್ರಾಮದ ಬಳಿ ರಂಗನಾಥಸ್ವಾಮಿ ಅಣೆಕಟ್ಟೆಗೆ ಅಡ್ಡಲಾಗಿ ಕಾವೇರಿ ನದಿಯ 2 ಕಿ.ಮೀ ಮೇಲ್ತೊರೆಯಲ್ಲಿ	2.00	ಡಿಇ 33ಎನ್.ಸಿ.ಇ 2002 ದಿನಾಂಕ 13.06.2002
3	ಚಾಣಕ್ಯ ಸಿಮೆಂಟ್ಸ್ ಲಿ., (ಪಯೋನಿರ್ ಪವರ್ ಕಾರ್ಪೋರೇಷನ್ ಲಿ.,) # 2629, 17ನೇ ಮುಖ್ಯ ರಸ್ತೆ, 3ನೇ ಅಡ್ಡರಸ್ತೆ, ಹೆಚ್.ಎ.ಎಲ್ 2ನೇ ಹಂತ, ಬೆಂಗಳೂರು – 560 008.	ಚಾಮರಾಜ ನಗರ ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕಿನ ಬುದಿಕಟ್ಟೆ ಗ್ರಾಮದ ಬಳಿ ಶಿವನಸಮುದ್ರಂ ಜಲಪಾತದ ಬಳಿ ಕಾವೇರಿ ನದಿಯ ಕೆಳತೊರೆಯಲ್ಲಿ	2.00	ಡಿಇ 34ಎನ್.ಸಿ.ಇ 2002 ದಿನಾಂಕ 13.06.2002.

4	ಶಿವನಸಮುದ್ರಂ ಪವರ್ ಪ್ರೈ.ಲಿ., # 5/10, 2ನೇ ಕ್ರಾಸ್, ನೆಹರು ನಗರ, ಬೆಂಗಳೂರು–560 020.	ಕಾವೇರಿ ನದಿಯ ಬಲದಂಡೆ ಕಾಲುವೆಗೆ ಅಡ್ಡಲಾಗಿ ಗಗನಚುಕ್ಕಿ ಜಲಾಶಯದಲ್ಲಿ ಗಗನಚುಕ್ಕಿ ಸ್ಕೀಮ್–1	4.00	ಡಿಇ 70 ಎನ್.ಸಿ.ಇ 2002 ದಿನಾಂಕ 11.7.2002
5	ಶಿವನಸಮುದ್ರಂ ಪವರ್ ಪ್ರೈ ಲಿ., # 5/10, 2ನೇ ಕ್ರಾಸ್, ನೆಹರು ನಗರ, ಬೆಂಗಳೂರು–560 020	ಕಾವೇರಿ ನದಿಯ ಬಲದಂಡೆ ಕಾಲುವೆಗೆ ಅಡ್ಡಲಾಗಿ ಗಗನಚುಕ್ಕಿ ಜಲಾಶಯದಲ್ಲಿ ಗಗನಚುಕ್ಕಿ ಸ್ಕೀಮ್–2	4.00	ಡಿಇ 70 ಎನ್.ಸಿ.ಇ 2002 ದಿನಾಂಕ 11.7.2002
6	ಇಂದ್ರಧನುಷ್ ಪವರ್ ಪ್ರೈ ಲಿ., #5/10, 2ನೇ ಅಡ್ಡರಸ್ತೆ, ನೆಹರು ನಗರ, ಬೆಂಗಳೂರು–560 020	ಚಾಮರಾಜನಗರ ಜಿಲ್ಲೆಯ ಕೊಳ್ಳೆಗಾಲ ತಾಲ್ಲೂಕಿನ ಧನಗೆರೆ ಬಲದಂಡೆ ಕಾಲುವೆಯಲ್ಲಿ	2.00	ಡಿಇ 71 ಎನ್.ಸಿ.ಇ. 2002 ದಿನಾಂಕ15.7.2002
7	ಬಾಲಾಜಿ ಪವರ್ ಪ್ರೈ ಲಿ., ನಂ. 44, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560 001.	ಚಾಮರಾಜ ನಗರ ಜಿಲ್ಲೆಯ, ಕೊಳ್ಳೆಗಾಲ ತಾಲ್ಲೂಕಿನ ಧನಗೆರೆ ಆಣೆಕಟ್ಟೆಗೆ ಅಡ್ಡಲಾಗಿ	2.5	ಡಿಇ 125 ಎನ್.ಸಿ.ಇ 96(1) ದಿನಾಂಕ10.6.1997
8	ಎಸ್.ಎಲ್.ಎಸ್ ಪವರ್ ಇಂಡಸ್ಟೀಸ್ ಲಿ., # 700, 2ನೇ ಸಿ ಅಡ್ಡರಸ್ತೆ, 9ನೇ ಮುಖ್ಯ ರಸ್ತೆ, 3ನೇ ಬ್ಲಾಕ್, 3ನೇ ಹಂತ ಬಸವೇಶ್ವರನಗರ, ಬೆಂಗಳೂರು–560 079.	ಚಾಮರಾಜ ನಗರ ಜಿಲ್ಲೆಯ, ಕೊಳ್ಳೆಗಾಲ ತಾಲ್ಲೂಕಿನ ಧನಗೆರೆ ಆಣೆಕಟ್ಟೆಗೆ ಅಡ್ಡಲಾಗಿ	3.00	ಈ ಯೋಜನೆಯನ್ನು ಬಾಲಾಜಿ ಪವರ್ ಪ್ರೈ ಲಿ., ಅವರಿಗೆ ಹಂಚಿಕೆ ಮಾಡಿದ್ದರಿಂದ ಈ ಹಂಚಿಕೆಯನ್ನು ತಿರಸ್ಕರಿಸಲಾಗಿದೆ.
9	ಮಸಾಲ ಪವರ್ ಪ್ರೊಜೆಕ್ಟ್ ಪ್ರೈ ಲಿ., 1–4–908/ಸಿ, ಬಾಕ್ರಂ ರಸ್ತೆ, ಹೈದರಾಬಾದ್–500 048.	ಚಾಮರಾಜ ಜಿಲ್ಲೆ, ಕೊಳ್ಳೆಗಾಲ ತಾಲ್ಲೂಕು ಬುದಿಕಟ್ಟೆ ಗ್ರಾಮದ ಬಳಿ ಕಾವೇರಿ ನದಿಗೆ ಅಡ್ಡಲಾಗಿ ಭರಚುಕ್ಕಿ ಜಲಾಶಯದ ಮೇಲ್‌ತೊರೆಯಲ್ಲಿ	2.00	ಕೆ.ಪಿ.ಸಿ.ಎಲ್ ನವರು 240 ಮೆ.ವ್ಯಾ ಸಾಮರ್ಥ್ಯ ಜಲವಿದ್ಯುತ್ ಯೋಜನೆಯ ಪ್ರಸ್ತಾವನೆಯಿದ್ದುದರಿಂದ ಅರ್ಜಿಯನ್ನು ತಿರಸ್ಕರಿಸಲಾಯಿತು.

10	ಶಿವನಸಮುದ್ರಂ ಪವರ್ ಪ್ರೈ. ಲಿ., # 5/10, 2ನೇ ಕ್ರಾಸ್, ನೆಹರು ನಗರ, ಬೆಂಗಳೂರು–560 020	ಚಾಮರಾಜ ಜಿಲ್ಲೆ, ಕೊಳ್ಳೆಗಾಲ ತಾಲ್ಲೂಕು ಬುದಿಕಟ್ಟೆ ಗ್ರಾಮದ ಬಳಿ ಕಾವೇರಿ ನದಿಗೆ ಅಡ್ಡಲಾಗಿ ಭರಚುಕ್ಕಿ ಜಲಾಶಯದ ಮೇಲ್‌ತೊರೆಯಲ್ಲಿ	2.00	
11	ಇಂದ್ರಧನುಷ್ ಪವರ್ ಪ್ರೈ. ಲಿ., # 5/10, 2ನೇ ಅಡ್ಡರಸ್ತೆ, ನೆಹರು ನಗರ, ಬೆಂಗಳೂರು–650 020	ಸತ್ತೇಗಾಲ	4.00	ಈ ಸ್ಥಳದಲ್ಲಿ ವಿದ್ಯುತ್ ಉತ್ಪಾದಿಸಲು ಬೇಕಾಗುವ ಯಂತ್ರ ವಿಲ್ಲದಿದ್ದುದರಿಂದ ಹಾಗೂ ತಾಂತ್ರಿಕ ಮಾಹಿತಿಗಳು ಸರಿಯಾಗಿಲ್ಲದಿದ್ದುದರಿಂದ ಅರ್ಜಿಯನ್ನು ತಿರಸ್ಕರಿಸಲಾಯಿತು.
12	ಐಸಿಇಆರ್ ಪವರ್ ಪ್ರೈ. ಲಿ., ಜಿ.ಎಸ್.ಆರ್. ಕಾಂಪ್ಲೆಕ್ಸ್, 2ನೇ ಮಹಡಿ, #32–33, 8ನೇ ಅಡ್ಡರಸ್ತೆ, ವಿಲ್ಸನ್ ಗಾರ್ಡನ್, ಬೆಂಗಳೂರು–27.	ಚಾಮರಾಜನಗರ ಜಿಲ್ಲೆಯ ಬುದಿಕಟ್ಟೆ ಗ್ರಾಮದ ಬಳಿ ಈಗಾಗಲೇ ಇರುವ ರಂಗನಾಥಸ್ವಾಮಿ ಆಣೆಕಟ್ಟಿನ ಬಳಿ ಕಾವೇರಿ ನದಿಗೆ ಅಡ್ಡಲಾಗಿ ಶಿವನಸಮುದ್ರಂ ಜಲಾಶಯದಿಂದ 2 ಕಿ.ಮೀ ಕೆಳತೊರೆಯಲ್ಲಿ	2.00	ತಾಂತ್ರಿಕ ಮಾಹಿತಿಗಳು ಸರಿಯಾಗಿಲ್ಲದಿದ್ದುದರಿಂದ ಅರ್ಜಿಯನ್ನು ತಿರಸ್ಕರಿಸಲಾಯಿತು.

672(1586) ಶ್ರೀ ಡಾ. ಅನ್ನದಾನಿ ಕೆ. (ಮಳವಳ್ಳಿ): ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಶಿವನಸಮುದ್ರ ಪ್ರದೇಶದಲ್ಲಿ ಖಾಸಗಿ ಕಂಪನಿಗಳಿಗೆ ಜಲ ವಿದ್ಯುತ್ ಘಟಕವನ್ನು ಸ್ಥಾಪಿಸಲು ಅನುಮತಿ ನೀಡಿರುವುದು ನಿಜವೆ?

ಆ) ಸದರಿ ಯೋಜನೆಯ ಕಾಮಗಾರಿ ಆರಂಭಗೊಂಡಿರುವುದು ನಿಜವಾಗಿದ್ದಲ್ಲಿ ಯೋಜನೆಯ ರೂಪು–ರೇಷೆಗಳು ಏನು?

ಇ) ಇದರಿಂದಾಗಿ ರಮಣೀಯ ಜಲಪಾತ ಗಗನಚುಕ್ಕಿ–ಭರಚುಕ್ಕಿ ಜಲಪಾತ ಕಣ್ಮರೆಯಾಗುವ ವರದಿಗಳ ಕುರಿತು ಸರಕಾರದ ಸ್ಪಷ್ಟೀಕರಣಗಳೇನು?

ಈ) ಈ ಕುರಿತಂತೆ ಸರ್ಕಾರ ಸಮಗ್ರ ಪರಿಶೀಲನೆ ನಡೆಸಿ ಅನುಮತಿ ನೀಡಿದೆಯೇ: ಹೌದಾದಲ್ಲಿ ಅನುಮತಿಯ ವಿವರಗಳೇನು?

ಶ್ರೀ ಹೆಚ್. ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಹೌದು, ನಿಜ

ಆ) ಸದರಿ ಯೋಜನೆಯ ಕಾಮಗಾರಿ ಆರಂಭಗೊಂಡಿರುವುದು ನಿಜ. ಯೋಜನೆಗಳ ರೂಪುರೇಷೆಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ಈ ಯೋಜನೆಯನ್ನು ಸರ್ಕಾರದ ಆದೇಶ ಸಂಖ್ಯೆ ಇಂಇ 341 ಎನ್.ಸಿ.ಇ 2004 ದಿನಾಂಕ 20.12.2004 ರನ್ವಯ **"ಐತಿಹಾಸಿಕ ಜಲಪಾತದ ಶಿವನ ಸಮುದ್ರಂ ಜಲಪಾತದ ಸೌಂದರ್ಯಕ್ಕೆ ಹಾಗೂ ಕೆಳತೊರೆಯಲ್ಲಿ ಹಂಚಿಕೆಯಾಗಿರುವ ಯೋಜನೆಗಳಿಗೆ ಯಾವುದೇ ತರಹದ ಕುಂದಾಗಕೂಡದು ಹಾಗೂ ಧಕ್ಕೆಯಾಗಕೂಡದು"** ಎಂಬ ಷರತ್ತುಗಳನ್ನೊಳಗೊಂಡಂತೆ ಹಂಚಿಕೆ ಮಾಡಲಾಗಿದೆ. ಈ ಯೋಜನೆಗೆ ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ, ನೀರಾವರಿ ಇಲಾಖೆಗಳಿಂದ ನಿರಾಪೇಕ್ಷಣೆ ಪತ್ರ ದೊರಕಿದೆ. ಕೆ.ಆರ್.ಇ.ಡಿ.ಎಲ್ ಸಂಸ್ಥೆಯಿಂದ ಈ ಯೋಜನೆಯ ವಿವರವಾದ ವರದಿಗೆ ನೀಡಿದ ತಾಂತ್ರಿಕ ಅನುಮೋದನೆಯಲ್ಲಿ ಈ ಕುರಿತಂತೆ ಷರತ್ತುಗಳನ್ನು ಅಳವಡಿಸಲಾಗಿದೆ. ಆದ್ದರಿಂದ ರಮಣೀಯ ಜಲಪಾತ ಗಗನ ಚುಕ್ಕಿ ಭರಚುಕ್ಕಿ ಜಲಪಾತ ಕಣ್ಮರೆಯಾಗುವ ಸಾಧ್ಯತೆಗಳಿಲ್ಲ. ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.

ಈ) ಹೌದು. ಈ ಕುರಿತಂತೆ ಪರಿಶೀಲನೆ ಪಡೆಸಿ ಅನುಮತಿ ನೀಡಲಾಗಿದೆ. ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.

ಅನುಬಂಧ

ಮೆ।। ಪಯೋನೀರ್ ಪವರ್ ಕಾರ್ಪೋರೇಷನ್ ಲಿ., ಅವರಿಗೆ ರಂಗನಾಥಸ್ವಾಮಿ ದೇವಸ್ಥಾನದ ಬಳಿ ಕಾವೇರಿ ನದಿಗೆ ಅಡ್ಡಲಾಗಿ 24.75 ಮೆ.ವ್ಯಾ ಸಾಮರ್ಥ್ಯದ ಕಿರುಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಲಾಗಿದೆ. ಈ ಸ್ಥಳದಲ್ಲಿ ನೀರಿನ ಹರಿವು ವರ್ಷದಲ್ಲಿ 6 ತಿಂಗಳುಗಳ ವರೆಗೂ 100 ಕ್ಯೂಸೆಕ್ಸ್ ಗಿಂತ ಹೆಚ್ಚಿಗೆ ಇರುವುದರಿಂದ ಹಾಗೂ ಯೋಜನೆಗೆ ಕೇವಲ 27.6 ಕ್ಯೂಸೆಕ್ಸ್ ಬಳಸಿಕೊಳ್ಳುವುದರಿಂದ ಕೆಳತೊರೆಯಲ್ಲಿರುವ ಶಿವನಸಮುದ್ರಂ ಜಲಪಾತ ಸೌಂದರ್ಯಕ್ಕೆ ಧಕ್ಕೆಯಾಗುವುದಿಲ್ಲವೆಂಬುದನ್ನು ಮನಗಂಡು **"ಐತಿಹಾಸಿಕ ಜಲಪಾತವಾದ ಶಿವನ ಸಮುದ್ರಂ ಜಲಪಾತದ ಸೌಂದರ್ಯಕ್ಕೆ ಹಾಗೂ ಕೆಳತೊರೆಯಲ್ಲಿ ಹಂಚಿಕೆಯಾಗಿರುವ ಯೋಜನೆಗಳಿಗೆ ಯಾವುದೇ ತಹರಹ ಕುಂದಾಗಕೂಡದು ಹಾಗೂ ದಕ್ಕೆಯಾಗಕೂಡದು"** ಎಂಬ

ಷರತ್ತುಗಳನ್ನೊಳಗೊಂಡು ಸರ್ಕಾರದ ಆದೇಶ ಸಂಖ್ಯೆ ಎಂಇ 341 ಎನ್.ಸಿ.ಇ 2004 ದಿನಾಂಕ 20.12.2004 ರನ್ವಯ 24.75 ಮೆ.ವ್ಯಾಗೆ ಅನುಮತಿ ನೀಡಲಾಗಿದೆ. ವಿವರವಾದ ಯೋಜನಾ ವರದಿಯ ಪ್ರಕಾರ ಈ ಯೋಜನೆಗೆ ಈಗಾಗಲೇ ಇರುವ ಶಿವಾ ಅಣೆಕಟ್ಟಿನಿಂದ 400 ಮೀ ಕೆಳತೊರೆಯಲ್ಲಿ ಇನ್ನೊಂದು ಚಿಕ್ಕ ತಿರುವುನಾಲೆಯನ್ನು ನಿರ್ಮಿಸಿ ಗರಿಷ್ಠ 27.6 ಕ್ಯೂಸೆಕ್ಸ್ ನೀರನ್ನು 4 ಕಿ.ಮೀ ಉದ್ದದ ಕೆನಾಲ್ (3.7 ಕಿಮೀ ಪವರ್ ಕೆನಾಲ್ ಅಂಡ್ 300 ಮೀ ಪೆನ್ ಸ್ಟಾಕ್) ಮುಖಾಂತರ ತೆಗೆದುಕೊಂಡು ವಿದ್ಯುತ್ ಉತ್ಪಾದನೆ ಮಾಡಿಮರಳಿ ಟೇಲ್ ರೇಸ್ ಮುಖಾಂತರ ನದಿಗೆ ಬಿಡಲಾಗುವುದು. ಈ ಯೋಜನೆಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ನೀರಾವರಿ ಇಲಾಖೆಗಳಿಂದ ನಿರಾಪೇಕ್ಷಣೆ ಪತ್ರ ದೊರಕಿದೆ, ಹಾಗೂ ಕೆ.ಆರ್.ಇ.ಡಿ.ಎಲ್ ಸಂಸ್ಥೆಯಿಂದ ಈ ವಿವರವಾದ ಯೋಜನಾ ವರದಿಗೆ ತಾಂತ್ರಿಕ ಅನುಮೋದನೆ ನೀಡಿದ ಪತ್ರದಲ್ಲಿ ಐತಿಹಾಸಿಕ ಜಲಪಾತದ ಸೌಂದರ್ಯಕ್ಕೆ ಯಾವುದೇ ಧಕ್ಕೆಯಾಗದಂತೆ ಯೋಜನೆಯನ್ನು ಅನುಷ್ಠಾನಗೊಳಿಸಲು ಈ ಕೆಳಕಂಡ ಷರತ್ತುಗಳನ್ನು ವಿಧಿಸಲಾಗಿದೆ.

* ಈ ಯೋಜನೆಯಿಂದ ಐತಿಹಾಸಿಕ ಜಲಪಾತದ ಸೌಂದರ್ಯಕ್ಕೆ ಕುಂದುಬರದಂತೆ ಯಾವುದೇ ಕಾರಣಕ್ಕೂ ಕನಿಷ್ಠ 10 ಕ್ಯೂಸೆಕ್ಸ್ ನೀರನ್ನು ಜಲಪಾತಕ್ಕೆ ಬಿಡಲೇಬೇಕು ಎಂಬ ಷರತ್ತನ್ನು ವಿಧಿಸಲಾಗಿದೆ (ಈ ನೀರಿನ ಪ್ರಮಾಣವನ್ನು ಕೆ.ಪಿ.ಸಿ.ಎಲ್‌ನ ಶರಾವತಿ ಜಲವಿದ್ಯುತ್ ಯೋಜನೆಗಾಗಿ ಉಪಯೋಗಿಸಿಕೊಂಡಿರುವ ಜೋಗ ಜಲಪಾತದ ಅನುಸರಣೆ ಮಾಡಿ ಈ ನಿರ್ಧಾರ ಕೈಗೊಳ್ಳಲಾಗಿದೆ).
* ಈ ಯೋಜನೆಗಾಗಿ ನದಿಯಲ್ಲಿ ನೀರಿರುವಾಗ 13.5 ಕ್ಯೂಸೆಕ್ಸ್ ನೀರನ್ನು ಜಲಪಾತದ ಸೌಂದರ್ಯ ಕಾಯ್ದುಕೊಳ್ಳಲು ನೀರು ಬಿಟ್ಟು, ನಂತರ ಕೆಳಗಿನ ಪಟ್ಟಿಯಲ್ಲಿ ನಮೂದಿಸಿರುವಷ್ಟೇ ನೀರನ್ನು ಉಪಯೋಗಿಸಿಕೊಳ್ಳಬೇಕೆಂದು ಷರತ್ತನ್ನು ವಿಧಿಸಲಾಗಿದೆ.

Total flow in the river Q_{total} (m^3/Sec)	Mandatory river lease $Q_{release}$ (m^3/Sec)	Maximum Permissible flow through TG units $Q_{TG\ units}$ (m^3/Sec)
Upto 13.5	Full	Nil
13.5	10.0	3.5
20	10	10
30	15	15
40	20	20
50	25	25
60	32.4	27.6
>60	$Q_{release}$ - 27.6	27.6.Maximum

* ಗರಿಷ್ಠ 27.6 ಕ್ಯೂಸೆಕ್ಸ್ ನೀರನ್ನು ಮಾತ್ರ ಅಭಿವೃದ್ಧಿದಾರರು ಉಪಯೋಗಿಸಿಕೊಳ್ಳಬೇಕೆಂದು ಈ ಕುರಿತಂತೆ ರಚಿಸಿದ ತಾಂತ್ರಿಕ ನಕ್ಷೆಗಳಿಗೆ ಅನುಮೋದನೆ ನೀಡಿದೆ.

* ಅದೂ ಅಲ್ಲದೇ State water policy ಯ ಆದ್ಯತೆಗಳನ್ನು ಗಮನದಲ್ಲಿರಿಸಿಕೊಂಡು ಯೋಜನೆಗೆ ಅನುಮತಿ ನೀಡಲಾಗಿದೆ.

674(1343) ಶ್ರೀ (ಅಪ್ಪಾಜಿ) ಚನ್ನಬಸವರಾಜ್ ಶಂಕರ್‌ರಾವ್ ನಾಡಗೌಡರ್ (ಮುದ್ದೇಬಿಹಾಳ್): ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮುದ್ದೇಬಿಹಾಳ ತಾಲ್ಲೂಕು ತಾಳಿಕೋಟೆ – ಪಿರಾಪುರ್ ಮಾರ್ಗವಾಗಿ ಕೆಂಬಾವಿಗೆ ಹೋಗುವ ರಸ್ತೆ ಸಂಪೂರ್ಣ ದುರಸ್ಥಿಗೊಳಗಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ರಸ್ತೆಯ ದುರಸ್ತಿಗೆ ಕೈಗೊಂಡ ಕ್ರಮಗಳೇನು?

ಶ್ರೀ ಹೆಚ್. ಡಿ. ರೇವಣ್ಣ (ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಹೌದು ಬಂದಿದೆ.

ಆ) ಸದರಿ ರಸ್ತೆಯು ಹುನಗುಂದ ಸುರಪುರ ರಾಜ್ಯ ಹೆದ್ದಾರಿ ಸಂ:60 ರ ಭಾಗವಾಗಿದೆ. ಈ ರಸ್ತೆಯನ್ನು ಇತ್ತೀಚೆಗೆ ರಾ.ಹೆ.ಎಂದು ಮೇಲ್ದರ್ಜೆಗೇರಿಸಲಾಗಿದೆ. ಒಟ್ಟು:44.0 ಕಿಮೀ ಪೈಕಿ 2.10 ರಸ್ತೆ ಸುಧಾರಣೆಗಾಗಿ 2004–05 ನೇ ಸಾಲಿಗೆ ರೂ.18.00 ಲಕ್ಷಗಳ ಅನುದಾನ ಬಿಡುಗಡೆಯಾಗಿದೆ. ಗುತ್ತಿಗೆ ಪ್ರಕ್ರಿಯೆ ಜಾರಿಯಲ್ಲಿದ್ದು ಕಾಮಗಾರಿಯನ್ನು ಮಾರ್ಚ್ 2005 ಅಂತ್ಯದೊಳಗೆ ಪೂರ್ಣಗೊಳಿಸಲಾಗುವುದು.

ಸದರಿ ರಸ್ತೆಯನ್ನು 2005 ರಿಂದ 2008 ರವರೆಗೆ 3 ವರ್ಷಗಳ ನಿರ್ವಹಣೆ ಅಡಿಯಲ್ಲಿ ಕೆಆರ್‌ಡಿಸಿಎಲ್ ನಿಂದ ರೂ. 135.0 ಲಕ್ಷಗಳ ಅಂದಾಜು ಮೊತ್ತದಲ್ಲಿ ನಿರ್ವಹಣೆ ಮಾಡಲು ಯೋಜಿಸಲಾಗಿದೆ.

675(1344) ಶ್ರೀ (ಅಪ್ಪಾಜಿ) ಚನ್ನಬಸವರಾಜ್ ಶಂಕರ್‌ರಾವ್ ನಾಡಗೌಡರ್ (ಮುದ್ದೇಬಿಹಾಳ್): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗೆ ಉತ್ತರಿಸುವರೇ?

ಅ) ಮುದ್ದೇಬಿಹಾಳ ತಾಲ್ಲೂಕಿನಲ್ಲಿ ಮಿನಿ ವಿಧಾನ ಸೌಧ ನಿರ್ಮಾಣ ಮಾಡುವ ಆಲೋಚನೆ ಸರ್ಕಾರಕ್ಕಿದೆಯೇ

ಆ) ಈಗಾಗಲೇ ನಡೆಯುತ್ತಿರುವ ವಿವಿಧ ಇಲಾಖೆಯ ಕಛೇರಿಗಳು ಗ್ರಾಮದ ಪುರಾತನ ಒಂದು ಚಿಕ್ಕದಾದ ಹಂಚಿನ ಕಟ್ಟಡದಲ್ಲಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಇ) ಈ ಬಗ್ಗೆ ಸರ್ಕಾರಕ್ಕೆ ಹಲವಾರು ಬಾರಿ ಪ್ರಸ್ತಾವನೆ ಸಲ್ಲಿಸಿದ್ದರು ಸಹ ಇಲ್ಲಿಯವರೆಗೂ ಯಾವುದೇ ಕ್ರಮವನ್ನು ಕೈಗೊಳ್ಳದಿರಲು ಕಾರಣವೇನು (ವಿವರಗಳನ್ನು ನೀಡುವುದು)?

ಶ್ರೀ ಎಂ. ಪಿ. ಪ್ರಕಾಶ್ (ಕಂದಾಯ ಸಚಿವರು) :

ಅ) ಮುದ್ದೇಬಿಹಾಳ ತಾಲ್ಲೂಕು ಸೇರಿದಂತೆ ರಾಜ್ಯದ 86 ತಾಲ್ಲೂಕುಗಳಲ್ಲಿ ಮಿನಿ ವಿಧಾನ ಸೌಧದ ನಿರ್ಮಾಣದ ಪ್ರಕ್ರಿಯೆ ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ತಾಲ್ಲೂಕಿನ ಇಲಾಖೆಯ ಕಾರ್ಯಾಲಯಗಳು ಬೇರ ಬೇರೆ ಕಟ್ಟಡಗಳಲ್ಲಿ ನಿರ್ವಹಿಸುತ್ತಿವೆ.

ಇ) ಈ ಕಟ್ಟಡದ ನಿರ್ಮಾಣಕ್ಕಾಗಿ ಸೂಕ್ತ ನಿವೇಶನ ಪಡೆಯುವ ಪ್ರಯತ್ನ ಜಾರಿಯಲ್ಲಿದೆ.

ಅದಲ್ಲದೆ ಮಿನಿ ವಿಧಾನ ಸೌಧಗಳ ನಿರ್ಮಾಣಕ್ಕಾಗಿ ಅಗತ್ಯ ಸಂಪನ್ಮೂಲಗಳ ವ್ಯವಸ್ಥೆಯ ಬಗ್ಗೆ ಸರ್ಕಾರವು ಕ್ರಮ ಜರುಗಿಸುತ್ತಿದೆ. ಸೂಕ್ತ ನಿವೇಶನ ಹಾಗೂ ಸಂಪನ್ಮೂಲಗಳ ವ್ಯವಸ್ಥೆ ಆಗುತ್ತಲೇ ಮುದ್ದೇಬಿಹಾಳದಲ್ಲಿ ಮಿನಿ ವಿಧಾನ ಸೌಧ ನಿರ್ಮಾಣ ಕಾರ್ಯವನ್ನು ಕೈಗೊಳ್ಳಲಾಗುವುದು.

676(1346) ಶ್ರೀ (ಅಪ್ಪಾಜಿ) ಚನ್ನಬಸವರಾಜ್ ಶಂಕರ್‌ರಾವ್ ನಾಡಗೌಡರ್ (ಮುದ್ದೇಬಿಹಾಳ): ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗೆ ಉತ್ತರಿಸುವರೇ?

ಅ) ಮೇಲಿಂದ ಮೇಲೆ ಟ್ರಾನ್ಸ್‌ಫಾರ್ಮರ್‌ಗಳು ಹಾಳಾಗಿ ದುರಸ್ತಿಗೆ ಒಳಗಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಆ) ಹಾಗಿದ್ದಲ್ಲಿ, ಅದಕ್ಕೆ ಕಾರಣಗಳೇನು:

ಇ) ದುರಸ್ತಿಗೊಳಗಾದ ಟ್ರಾನ್ಸ್‌ಫಾರ್ಮರ್‌ಗಳ ಬದಲಾವಣೆ ಸಮಯಕ್ಕೆ ಸರಿಯಾಗಿ ಆಗದೆ ಸಾರ್ವಜನಿಕರಿಗೆ ಅದರಲ್ಲೂ ವಿಶೇಷವಾಗಿ ರೈತರ ಪಂಪ್ ಸೆಟ್‌ಗಳಿಗೆ ಆಗುತ್ತಿರುವ ತೊಂದರೆ ನಿವಾರಣೆಗೆ ಕೈಗೊಂಡ ಕ್ರಮಗಳೇನು?

ಶ್ರೀ ಹೆಚ್. ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು):

ಅ) ಹೌದು, ಗಮನಕ್ಕೆ ಬಂದಿರುತ್ತದೆ.

ಆ) ಟ್ರಾನ್ಸ್‌ಫಾರ್ಮರ್‌ಗಳ ವಿಫಲತೆಗೆ ಹಲವಾರು ಕಾರಣಗಳಿದ್ದು, ಅವುಗಳಲ್ಲಿ ಮುಖ್ಯವಾದವುಗಳೆಂದರೆ

1 ಅನಧಿಕೃತ ನೀರಾವರಿ ಪಂಪುಸೆಟ್ಟುಗಳ ಹೊರೆ.

2 ಅನಧಿಕೃತವಾಗಿ ರೈತರು ಪರಿವರ್ತಕಗಳ ಫ್ಯೂಜ್ ಬದಲಾವಣೆ ಮಾಡಿ ಅಲ್ಯುಮಿನಿಯಂ ತಂತಿಗಳನ್ನು ಉಪಯೋಗಿಸುತ್ತಿರುವುದು.

3 ಮಳೆ, ಗಾಳಿ ಇತ್ಯಾದಿ ಕಾರಣಗಳಿಂದ ಮರದ ಕೊಂಬೆಗಳು ಹೆಚ್.ಟಿ.ಎಲ್.ಟಿ. ಮಾರ್ಗಗಳ ಮೇಲೆ ಬಿದ್ದು ಶಾರ್ಟ್ ಸರ್ಕ್ಯೂಟ್ ಆಗುವುದರಿಂದ ಟ್ರಾನ್ಸ್‌ಫಾರ್ಮರ್‌ಗಳು ವಿಫಲಗೊಳ್ಳುತ್ತಿರುತ್ತವೆ.

4. ಟ್ರಾನ್ಸ್‌ಫಾರ್ಮರ್‌ಗಳು ದೀರ್ಘ ಕಾಲದಿಂದ ಸೇವೆಯಲ್ಲಿರುವುದರಿಂದ.

ಇ) ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗವು ಹೊರಡಿಸಿರುವ ಪರ್ಸ್‌ಫಾರ್ಮೆನ್ಸ್ ಸ್ಟಾಂಡರ್ಡ್ಸ್ ಪ್ರಕಾರವಾಗಿ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳು ವಿಫಲಗೊಂಡ ಸಂದರ್ಭದಲ್ಲಿ ನಗರ ಪ್ರದೇಶಗಳಲ್ಲಿ 24 ತಾಸು ಒಳಗಾಗಿ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ 72 ತಾಸುಗಳ ಒಳಗಾಗಿ ವಿಫಲಗೊಂಡ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳನ್ನು ಬದಲಾಯಿಸಬೇಕಾಗಿರುತ್ತದೆ. ಗ್ರಾಮೀಣ ಪ್ರದೇಶಗಳಲ್ಲಿ ವಿಫಲಗೊಂಡ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳನ್ನು 72 ಗಂಟೆಗಳ ಒಳಗಾಗಿ ಬದಲಾಯಿಸಲು ಎಲ್ಲಾ ಪ್ರಯತ್ನಗಳನ್ನು ಮಾಡಲಾಗುತ್ತಿದೆ.

ಟ್ರಾನ್ಸ್‌ಫಾರ್ಮರ್‌ಗಳ ದುರಸ್ತಿಗಾಗಿ ಸರ್ಕಾರವು 60 ಕೋಟಿ ರೂ. ಗಳನ್ನು ವಿದ್ಯುತ್ ಸರಬರಾಜು ಕಂಪನಿಗಳಿಗೆ ಬಿಡುಗಡೆ ಮಾಡಿರುತ್ತದೆ. ರಾಜ್ಯದ ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ ಒಟ್ಟು ಮೂವತ್ತು ಟ್ರಾನ್ಸ್‌ಫಾರ್ಮರ್ ರಿಪೇರಿ ಕೇಂದ್ರಗಳಿವೆ. ಅವುಗಳ ಕಂಪನಿವಾರು ವಿವರ ಈ ಕೆಳಕಂಡಂತಿದೆ.

ಕ್ರಮ ಸಂಖ್ಯೆ	ಕಂಪನಿಯ ಹೆಸರು	ಟ್ರಾನ್ಸ್‌ಫಾರ್ಮರ್ ರಿಪೇರಿ ಕೇಂದ್ರಗಳ ಸಂಖ್ಯೆ
1	ಬೆ.ವಿ.ಸ.ಕಂ.	7
2	ಮ.ವಿ.ಸ.ಕಂ.	9
3	ಹು.ವಿ.ಸ.ಕಂ	7
4	ಗು.ವಿ.ಸ.ಕಂ	7
	ಒಟ್ಟು	30

ಈ ಕೇಂದ್ರಗಳಲ್ಲಿ ವಿಫಲಗೊಂಡ ಪರಿವರ್ತಕಗಳನ್ನು ತ್ವರಿತವಾಗಿ ರಿಪೇರಿಗೊಳಿಸಿ, ಬದಲಾಯಿಸಲಾಗುತ್ತಿದೆ.

ಅಲ್ಲದೇ, ವಿಫಲವಾದ ಟ್ರಾನ್ಸ್‌ಫಾರ್ಮರ್‌ಗಳ ದುರಸ್ತಿಯನ್ನು ಮತ್ತಷ್ಟು ತ್ವರಿತಗೊಳಿಸುವ ಸಲುವಾಗಿ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ಮತ್ತು ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಗಳು ತಲಾ 3 ಟ್ರಾನ್ಸ್‌ಫಾರ್ಮರ್ ದುರಸ್ತಿ ಕೇಂದ್ರಗಳನ್ನು ಹೆಚ್ಚುವರಿಯಾಗಿ ಸ್ಥಾಪಿಸಲು ಕ್ರಮ ತೆಗೆದುಕೊಳ್ಳುತ್ತಿವೆ.

677(1171) ಶ್ರೀ ಅಪ್ಪಸಾಹೇಬ್(ಅಪ್ಪು) ಮಲ್ಲಪ್ಪ ಪಟ್ಟಣಶೆಟ್ಟಿ (ಬಿಜಾಪುರ): ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗೆ ಉತ್ತರಿಸುವರೇ?

ಅ) ರಾಜ್ಯ ಸರ್ಕಾರಿ ನೌಕರರಿಗೆ ಐದನೇ ವೇತನ ಆಯೋಗ ರಚನೆ ಕುರಿತ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಆಯೋಗ ರಚಿಸಲಾಗಿದೆಯೇ;

ಇ) ಇಲ್ಲದಿದ್ದಲ್ಲಿ, ಆಯೋಗವನ್ನು ಎಂದು ರಚಿಸಲಾಗುವುದು?

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯ ಮಂತ್ರಿಗಳು) :

ಅ) ಇದೆ.

ಆ) ಇಲ್ಲ.

ಇ) ಪೂರ್ವಭಾವಿ ಕ್ರಮಗಳನ್ನು ಶೀಘ್ರದಲ್ಲೇ ಕೈಗೊಳ್ಳಲಾಗುವುದು.

681(1590) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗೆ ಉತ್ತರಿಸುವರೇ?

ಅ) ತೀರ್ಥಹಳ್ಳಿ ತಾಲ್ಲೂಕು ನೊಣಬೂರು ಗ್ರಾಮದಲ್ಲಿ ಸರ್ಕಾರಿ ಪ್ರೌಢಶಾಲೆಯನ್ನು ಖಾಸಗಿಯವರ ಜಾಗದಲ್ಲಿ ಕಟ್ಟಿರುವುದರಿಂದ ಅವರಿಗೆ ಬದಲಿ ಜಾಗ ಕೊಡಲು ಶಿವಮೊಗ್ಗ ಜಿಲ್ಲಾಧಿಕಾರಿಗಳು ಕಳುಹಿಸಿದ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಹೌದಾದಲ್ಲಿ ಜಿಲ್ಲಾಧಿಕಾರಿಗಳು ಸರ್ಕಾರಕ್ಕೆ ಪ್ರಸ್ತಾವನೆ ಕಳಿಸಿದ್ದು ಯಾವಾಗ; ಇದುವರೆಗೂ ಸರ್ಕಾರ ಪರ್ಯಾಯ ಭೂಮಿ ನೀಡಲು ಅನುಮತಿ ನೀಡದಿರುವುದಕ್ಕೆ ಕಾರಣ ಏನು; ಅನುಮತಿಯನ್ನು ಯಾವಾಗ ನೀಡಲಾಗುವುದು;

ಇ) ಈ ಪ್ರಕರಣದಲ್ಲಿ ನ್ಯಾಯಾಲಯವು ತೀರ್ಪು ನೀಡಿದೆಯೇ ಮತ್ತು ತೀರ್ಪಿನ ಸಾರಾಂಶ ಏನು:

ಈ) ಪರ್ಯಾಯ ಭೂಮಿಯನ್ನು ಸರ್ಕಾರ ಇನ್ನೂ ನೀಡದೇ, ಈ ಪ್ರೌಢಶಾಲೆಯ ದೈನಂದಿನ ಕಾರ್ಯಕ್ಕೆ ಹಾಗೂ ಅಭಿವೃದ್ಧಿ ಕಾರ್ಯಕ್ಕೆ ತೊಂದರೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ, ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ಎಂ. ಪಿ. ಪ್ರಕಾಶ್ (ಕಂದಾಯ ಸಚಿವರು) :

ಅ) ಹೌದು.

ಆ) ತೀರ್ಥಹಳ್ಳಿ ತಾಲ್ಲೂಕು, ಶಿರೂರು ಗ್ರಾಮದ ಸ.ನಂ.228 ರಲ್ಲಿ 2.00 ಎಕರೆ ಜಮೀನನ್ನು ನೊಣಬೂರು ಸರ್ಕಾರಿ ಪ್ರೌಢಶಾಲೆಗೆ ಶ್ರೀ ಶ್ರೀನಿವಾಸ ಉಡಪ ಇವರು ಬಿಟ್ಟುಕೊಡಲು ಒಪ್ಪಿರುವುದರಿಂದ ಇದರ ಬದಲಾಗಿ ಶಿರಗೂರು ಗ್ರಾಮ ಸ.ನಂ.15 ರಲ್ಲಿ 2.00 ಎಕರೆ ಜಮೀನು ಮಂಜೂರಾತಿಗೆ ಜಿಲ್ಲಾಧಿಕಾರಿಗಳಿಂದ ದಿನಾಂ: 15.06.2004 ರಂದು ಬಂದಿರುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

ಇ) ಇಲ್ಲ.

ಈ) ಸರ್ಕಾರದ ಮಟ್ಟದಲ್ಲಿ ತೀವ್ರ ಪರಿಶೀಲನೆಯಲ್ಲಿದೆ.

682(1592) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ಯುವಜನ ಸೇವಾ ಮತ್ತು ಕ್ರೀಡಾ ಸಚಿವರು ಈ ಕೆಳಕಂಡ ಪ್ರಶ್ನೆಗೆ ಉತ್ತರಿಸುವರೇ?

ಅ) ಯುವಜನ ಸೇವಾ ಇಲಾಖೆಗೆ ಕಳೆದ 3 ವರ್ಷಗಳಲ್ಲಿ ನಿಗದಿ ಮಾಡಿದ ಹಾಗೂ ಖರ್ಚು ಮಾಡಿದ ಹಣ ಎಷ್ಟು;

ಆ) ಇಲಾಖೆ ವತಿಯಿಂದ ನಡೆಸುತ್ತಿರುವ ಕ್ರೀಡಾ ವಸತಿ ನಿಲಯಕ್ಕೆ ಈ ಸಾಲಿನಲ್ಲಿ ನಿರ್ವಹಣೆ, ಭೋಜನ ವೆಚ್ಚ, ಬಟ್ಟೆ ಇತ್ಯಾದಿಗಳಿಗೆ ಬೇಕಾಗುವ ಹಣ ಎಷ್ಟು, ಈ ವರ್ಷ ನಿಗಧಿ ಮಾಡಿರುವ ಮತ್ತು ಬಿಡುಗಡೆ ಮಾಡಿರುವ ಹಣ ಎಷ್ಟು;

ಇ) ವಸತಿ ನಿಲಯ ವಿದ್ಯಾರ್ಥಿಗಳಿಗೂ ಭೋಜನ ವೆಚ್ಚಕ್ಕೂ ಸಾಲದಷ್ಟು ಹಣ ನಿಗಧಿ ಮಾಡಿರುವುದಕ್ಕೆ ಕಾರಣಗಳೇನು;

ಈ) ಸರ್ಕಾರ ಕ್ರೀಡಾಳುಗಳಿಗೆ ನೀಡುತ್ತಿರುವ ಸೌಲಭ್ಯಗಳನ್ನು ಸಂಪೂರ್ಣ ಸ್ಥಗಿತಗೊಳಿಸಲು ತೀರ್ಮಾನಿಸಿದೆಯೇ;

ಉ) ರಾಜ್ಯದಲ್ಲಿ ಎಷ್ಟು ರಾಜೀವಗಾಂಧಿ ಯುವಶಕ್ತಿ ಸಂಘಗಳು ಅಸ್ತಿತ್ವದಲ್ಲಿವೆ; ಇವುಗಳಿಗೆ ಇದುವರೆಗೆ ಬಿಡುಗಡೆ ಮಾಡಿದ ಹಣ ಎಷ್ಟು (ಜಿಲ್ಲಾವಾರು ನೆರವು ನೀಡಿದ ಸಂಘಗಳ ಸಂಖ್ಯೆ ನಮೂದಿಸಿ ವಿವರ ನೀಡುವುದು):

ಊ) ಈ ಸಾಲಿನಲ್ಲಿ ಈ ಸಂಘಗಳಿಗೆ ಸರ್ಕಾರ ಹಣ ಬಿಡುಗಡೆ ಮಾಡಿದೆಯೇ; ಮಾಡದಿದ್ದಲ್ಲಿ, ಕಾರಣಗಳೇನು:

ಋ) ಈ ಸಂಘಗಳನ್ನು ಸ್ಥಾಪಿಸಿದ ಉದ್ದೇಶಗಳೇನು; ಈ ನಿಟ್ಟಿನಲ್ಲಿ ಅವು ಹಮ್ಮಿಕೊಂಡ ಕಾರ್ಯಕ್ರಮಗಳೇನು?

ಶ್ರೀ ಜಬ್ಬಾರ್ ಖಾನ್ ಹೊನ್ನಳ್ಳಿ (ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ಯುವಜನ ಸೇವಾ ಮತ್ತು ಕ್ರೀಡಾ ಸಚಿವರು) :

ಅ) ರಾಜ್ಯ ವಲಯ

ವರ್ಷ	ಯೋಜನೆ		ಯೋಜನೇತರ	
	ಹಂಚಿಕೆ	ವೆಚ್ಚ	ಹಂಚಿಕೆ	ವೆಚ್ಚ
2001–02	719.00	719.00	473.11	473.11
2002–03	627.00	627.00	498.83	498.83
2003–04	1293.00	1025.51	718.81	535.46

ಜಿಲ್ಲಾಪಂಚಾಯತ್ ವಲಯ

ವರ್ಷ	ಯೋಜನೆ ಹಂಚಿಕೆ	ಯೋಜನೇತರ ಹಂಚಿಕೆ	
2001–02	399.74	182.03	ಸಂಬಂಧಪಟ್ಟ
2002–03	308.51	233.74	ಜಿಲ್ಲಾಪಂಚಾಯತ್
2004–05	313.14	246.76	ಗಳಲ್ಲಿ ಹಣ ವೆಚ್ಚ
			ಮಾಡಿರುವ ಬಗ್ಗೆ ಕ್ರಮ
			ತೆಗೆದುಕೊಳ್ಳಲಾಗಿದೆ.

ಆ) ಇಲಾಖೆಯ ವತಿಯಿಂದ ನಡೆಸುತ್ತಿರುವ ಕ್ರೀಡಾ ವಸತಿ ನಿಲಯಗಳಿಗೆ ಈ ಸಾಲಿನಲ್ಲಿ ನಿರ್ವಹಣೆ, ಭೋಜನಾ ವೆಚ್ಚ, ಬಟ್ಟೆ ಇತ್ಯಾದಿಗಳಿಗೆ ಒಟ್ಟು ರೂ. 91.19 ಲಕ್ಷ ಹಣದ ಅಗತ್ಯವಿರುತ್ತದೆ.

2004–05ನೇ ಸಾಲಿನಲ್ಲಿ ಸರ್ಕಾರದಿಂದ ಕ್ರೀಡಾ ವಸತಿ ಶಾಲೆ/ನಿಲಯಗಳ ನಿರ್ವಹಣೆಗಾಗಿ ರೂ. 56.53 ಲಕ್ಷ ಹಣವನ್ನು ನಿಗದಿಪಡಿಸಿದ್ದು ಸದರಿ ಮೊತ್ತವು ಬಿಡುಗಡೆಯಾಗಿರುತ್ತದೆ.

ಇ) ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆ ಹೊರತುಪಡಿಸಿ ಇಲಾಖೆಯ ಯೋಜನಾ ಬಾಬ್ತಿನ ಆಯವ್ಯಯದ ಶೇ. 46.75 ರಷ್ಟನ್ನು ಕ್ರೀಡಾಶಾಲಾ ನಿಲಯ ಯೋಜನೆಗೆ ಒದಗಿಸಲಾಗಿದೆ.

ಈ) ಇಲ್ಲ.

ಉ) ರಾಜ್ಯದಲ್ಲಿ ಒಟ್ಟು 7872 ರಾಜೀವ್ ಗಾಂಧಿ ಯುವಶಕ್ತಿ ಸಂಘಗಳು ಅಸ್ತಿತ್ವದಲ್ಲಿವೆ. ಈ ಸಂಘಗಳಿಗೆ ಇದುವರೆಗೆ ರೂ. 5,65,90,000/–ಗಳನ್ನು ಬಿಡುಗಡೆ ಮಾಡಲಾಗಿದೆ. ಜಿಲ್ಲಾವಾರು ನೆರವು ನೀಡಿದ ಸಂಘಗಳ ಸಂಖ್ಯೆ ಹಾಗೂ ವಿವರಗಳು ಈ ಕೆಳಕಂಡಂತಿದೆ:

ಜಿಲ್ಲೆ	ನೆರವು ನೀಡಿದ ಸಂಘಗಳ ಸಂಖ್ಯೆ	ಮೊತ್ತ ರೂ.
ಬೆಂಗಳೂರು ನಗರ	112	11,20,000/–
ಬೆಂಗಳೂರು ಗ್ರಾ	228	22,80,000/–
ಕೋಲಾರ	307	30,70,000/–

ತುಮಕೂರು	321	32,10,000/–
ಶಿವಮೊಗ್ಗ	260	26,00,000/–
ಚಿತ್ರದುರ್ಗ	185	18,50,000/–
ದಾವಣಗೆರೆ	230	23,00,000/–
ಮೈಸೂರು	235	23,50,000/–
ಮಂಡ್ಯ	232	23,20,000/–
ಚಿಕ್ಕಮಗಳೂರು	226	22,60,000/–
ಹಾಸನ	258	25,80,000/–
ಮಂಗಳೂರು	203	20,30,000/–
ಮಡಿಕೇರಿ	98	9,80,000/–
ಬೆಳಗಾಂ	485	48,50,000/–
ಧಾರವಾಡ	127	12,70,000/–
ಬಿಜಾಪುರ	201	20,10,000/–
ಕಾರವಾರ	208	20,80,000/–
ಗುಲ್ಬರ್ಗಾ	338	33,80,000/–
ಬೀದರ್	175	17,50,000/–
ಬಳ್ಳಾರಿ	191	19,10,000/–
ರಾಯಚೂರು	1616	16,60,000/–
ಚಾಮರಾಜನಗರ	121	12,10,000/–
ಗದಗ	106	10,60,000/–
ಉಡುಪಿ	143	14,30,000/–
ಬಾಗಲಕೋಟೆ	163	16,30,000/–
ಕೊಪ್ಪಳ	134	13,40,000/–
ಹಾವೇರಿ	206	20,60,000/–
ಒಟ್ಟು	**5659**	**5,65,90,000/-**

ಊ) ಈ ಸಾಲಿನಲ್ಲಿ ರಾಜೀವ್ ಗಾಂಧಿ ಯುವಶಕ್ತಿ ಸಂಘಗಳಿಗೆ ಹಣ ಬಿಡುಗಡೆ ಮಾಡಿರುವುದಿಲ್ಲ. ಕಾರಣ, ಆಯವ್ಯಯದಲ್ಲಿ ಈ ಉದ್ದೇಶಕ್ಕಾಗಿ ಯಾವುದೇ ಹಣ ಒದಗಿಸಿರುವುದಿಲ್ಲ.

ಋ) ಕ್ರೀಡೆ ಸಂಸ್ಕೃತಿ ಮತ್ತು ಸಮುದಾಯ ಅಭಿವೃದ್ಧಿ ಚಟುವಟಿಕೆಗಳಲ್ಲಿ ಯುವಕ/ಯುವತಿಯರನ್ನು ತೊಡಗಿಸುವುದೇ ರಾಜೀವ್ ಗಾಂಧಿ ಯುವಶಕ್ತಿ ಸಂಘಗಳ ಮುಖ್ಯ ಉದ್ದೇಶವಾಗಿದೆ. ಈ ನಿಟ್ಟಿನಲ್ಲಿ ಸಂಘಗಳು ಸಮುದಾಯ ಅಭಿವೃದ್ಧಿ, ಕ್ರೀಡಾಭಿವೃದ್ಧಿ, ಸಾಂಸ್ಕೃತಿಕ, ಶೈಕ್ಷಣಿಕ, ಆರೋಗ್ಯ ಮತ್ತು ವ್ಯಕ್ತಿತ್ವ ವಿಕಸನ ಕ್ಷೇತ್ರಗಳಲ್ಲಿ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿವೆ.

683(1593) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಪ್ರವಾಸೋದ್ಯಮ ಸಚಿವರು ಈ ಕೆಳಕಂಡ ಪ್ರಶ್ನೆಗೆ ಉತ್ತರಿಸುವರೇ?

ಅ) ನೆರೆ ರಾಜ್ಯವಾದ ಕೇರಳವು ಪ್ರವಾಸೋದ್ಯಮಕ್ಕೆ ಹೆಚ್ಚಿಗೆ ಒತ್ತು ಕೊಟ್ಟು ದೇಶೀಯ ಹಾಗೂ ವಿದೇಶಿ ಪ್ರವಾಸಿಗರನ್ನು ಸೆಳೆಯಲು ಯಶಸ್ವಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ರಾಜ್ಯ ಸರ್ಕಾರ ರಾಜ್ಯದಲ್ಲಿ ಇದೇ ರೀತಿ ಪ್ರವಾಸೋದ್ಯಮ ಅಭಿವೃದ್ಧಿ ಪಡಿಸಲು ತೆಗೆದುಕೊಂಡ ಕ್ರಮಗಳೇನು; ಈ ಕ್ರಮಗಳು ಸಫಲವಾಗಿದೆಯೇ;

ಇ) ರಾಜ್ಯಕ್ಕೆ ಭೇಟಿ ನೀಡುತ್ತಿರುವ ದೇಶೀಯ ಹಾಗೂ ವಿದೇಶಿ ಪ್ರವಾಸಿಗರ ಸಂಖ್ಯೆ ಎಷ್ಟು; ಇದರಿಂದ ರಾಜ್ಯಕ್ಕೆ ಬರುತ್ತಿರುವ ಆದಾಯ ಎಷ್ಟು;

ಈ) ಈ ಪ್ರವಾಸಿಗರು ಹೆಚ್ಚಾಗಿ ಸಂದರ್ಶಿಸುತ್ತಿರುವ ಸ್ಥಳಗಳಾವುವು;

ಉ) ಆಯುರ್ವೇದ ಚಿಕಿತ್ಸಾ ಸೌಲಭ್ಯಗಳನ್ನು ಒದಗಿಸಿ ವಿದೇಶಿ ಪ್ರವಾಸಿಗರನ್ನು ಆಕರ್ಷಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;

ಊ) ರಾಜ್ಯದ ಕಡಲ ತೀರದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿ ಪಡಿಸಲು ಬರುವ ಉದ್ಯಮಗಳಿಗೆ ಸರ್ಕಾರ ನೆರವು ನೀಡುತ್ತಿದೆಯೇ ಇದ್ದಲ್ಲಿ ಎಲ್ಲಾ ವಿವರಗಳನ್ನು ಒದಗಿಸುವುದು?

ಶ್ರೀ ಡಿ. ಟಿ. ಜಯಕುಮಾರ್ (ಮಾನ್ಯ ಪ್ರವಾಸೋದ್ಯಮ ಸಚಿವರು) :

ಅ) ಹೌದು,

ಆ) ಕೇಂದ್ರ ಸರ್ಕಾರದ ನೆರವಿನಿಂದ ಹಾಗೂ ರಾಜ್ಯ ಸರ್ಕಾರದ ಅನುದಾನದಿಂದ ಪ್ರಮುಖ ಪ್ರವಾಸಿ ಸ್ಥಳಗಳಲ್ಲಿ ಮೂಲಭೂತ ಸೌಲಭ್ಯಗಳನ್ನು ನಿರ್ಮಿಸಲಾಗುತ್ತಿದೆ. ಪ್ರವಾಸಿ ಆಕರ್ಷಣೆಗಳ ಬಗ್ಗೆ ಹಾಗೂ ಸೌಲಭ್ಯಗಳ ಬಗ್ಗೆ ರಾಷ್ಟ್ರೀಯ ಹಾಗೂ ಅಂತರ ರಾಷ್ಟ್ರೀಯ ಮಟ್ಟದಲ್ಲಿ ಪ್ರಚಾರ ನೀಡಲಾಗುತ್ತಿದೆ.

ಇ) ರಾಜ್ಯಕ್ಕೆ ಸುಮಾರು 1.9 ಕೋಟಿ ದೇಶಿಯ ಪ್ರವಾಸಿಗರು ಹಾಗೂ 1.43 ಲಕ್ಷ ವಿದೇಶಿ ಪ್ರವಾಸಿಗರು ಭೇಟಿ ನೀಡುತ್ತಿದ್ದಾರೆ. ರಾಜ್ಯಕ್ಕೆ ಪ್ರತ್ಯಕ್ಷ ಆದಾಯ ಇಂತಿಷ್ಟೇ ಎಂದು ಹೇಳಲು ಸಾಧ್ಯವಿರುವುದಿಲ್ಲ. ಆದರೆ ಪ್ರವಾಸಿಗರ ತಂಗುವ ಹೋಟೆಲ್‌ಗಳ ಮೇಲೆ ವಿಧಿಸುವ ಐಷಾರಾಮಿ ತೆರಿಗೆ, ಪ್ರವಾಸಿಗರು ಉಪಯೋಗಿಸುವ ಮೋಟಾರು ವಾಹನಗಳ ಮೇಲೆ ವಿಧಿಸುವ ತೆರೆಗೆ ಹಾಗೂ ಪ್ರವಾಸಿಗರು ಉಪಯೋಗಿಸುವ ಸೌಲಭ್ಯಗಳ ಮೇಲೆ ವಿಧಿಸುವ ತೆರೆಗೆ ಮೂಲಕ ಪರೋಕ್ಷವಾಗಿ ರಾಜ್ಯಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಆದಾಯ ಬರುತ್ತದೆ.

ಈ) ಬೆಂಗಳೂರು, ಮೈಸೂರು, ಹಂಪಿ, ಬಾದಾಮಿ, ಐಹೊಳೆ, ಪಟ್ಟದಕಲ್ಲು, ಬಿಜಾಪುರ, ಬೇಲೂರು, ಹಳೇಬೀಡು, ಶ್ರವಣಬೆಳಗೋಳ ಹಾಗೂ ಕೊಡಗು.

ಉ) 1. ಆಯುರ್ವೇದ ಚಿಕಿತ್ಸಾ ಸೌಲಭ್ಯಗಳನ್ನು ಒಳಗೊಂಡ ಖಾಸಗಿ ಪ್ರವಾಸೋದ್ಯಮ ಯೋಜನೆಗಳಿಗೆ ಇಲಾಖೆ ರಿಯಾಯಿತಿ ಮತ್ತು ಉತ್ತೇಜನಗಳನ್ನು ಹಾಗೂ ಪ್ರಚಾರ ನೀಡಲಾಗಿದೆ.

2. ಮಂಗಳೂರು ಸಮೀಪದ ಪಿಲಿಕುಲ ನಿಸರ್ಗ ಧಾಮದಲ್ಲಿ ಆಯುರ್ವೇದ ಚಿಕಿತ್ಸಾ ಕೇಂದ್ರದ ನಿರ್ಮಾಣವನ್ನು ಕೇಂದ್ರದ ನೆರವಿನೊಂದಿಗೆ 50.00 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಕೈಗೊಂಡಿದ್ದು ಯೋಜನೆಯ ಕಾಮಗಾರಿ ಪ್ರಗತಿಯಲ್ಲಿದೆ.

3. ಮೆ: ಅರಣ್ಯ, ವಸತಿ ಮತ್ತು ವಿಹಾರ ಧಾಮಗಳ ಸಂಸ್ಥೆಗೆ ಸೇರಿರುವ ಓಂ ಬೀಚ್ ರೆಸಾರ್ಟ್ಸ್, ಗೋಕರ್ಣ ಹಾಗೂ ಹಿಸ್ಟರಿ ವ್ಯೂ ರೆಸಾರ್ಟ್ಸ್, ಕಾರವಾರ ಇವುಗಳನ್ನು ಮೆ: ಕೈರಾಲಿ ಆಯುರ್ವೇದಿಕ್ ರೆಸಾರ್ಟ್ಸ್ ಇವರೊಂದಿಗೆ ಮ್ಯಾನೇಜ್‌ಮೆಂಟ್ ಕಾಂಟ್ರಾಕ್ಟ್ ಮೇರೆಗೆ ನಡೆಸಲಾಗುತ್ತಿದೆ.

ಊ) ಹೌದು,

1992ರಿಂದ 2002ರ ಮೇ 31 ರವರೆಗೆ ರಾಜ್ಯದ ಕಡಲ ತೀರಗಳಲ್ಲಿ ಅನುಮೋದಿಸಲ್ಪಟ್ಟ ಪ್ರವಾಸೋದ್ಯಮ ಯೋಜನೆಗಳಿಗೆ ಸಹಾಯಧನ, ತೆರಿಗೆ ವಿನಾಯಿತಿ ರಿಯಾಯಿತಿ ದರದಲ್ಲಿ ವಿದ್ಯುಚ್ಛಕ್ತಿ, ಭೂಪರಿವರ್ತನಾ ಶುಲ್ಕವನ್ನು ಮನ್ನಾ ಮಾಡುವುದು, ಮುಂತಾದ ರಿಯಾಯಿತಿ ಮತ್ತು ಉತ್ತೇಜನಗಳನ್ನು ನೀಡಲಾಗಿದೆ.

684(1594): ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗೆ ಉತ್ತರಿಸುವರೇ?

ಅ) ರಾಜ್ಯದಲ್ಲಿ ಕಳೆದ ಮೂರು ವರ್ಷದಲ್ಲಿ ಸಂಗ್ರಹವಾದ ಅಬಕಾರಿ ಆದಾಯ ಎಷ್ಟು? (ವರ್ಷವಾರು, ಜಿಲ್ಲಾವಾರು, ಸಾರಾಯೀ (IMFL) ವಾರು ವಿವರ ಒದಗಿಸುವುದು):

ಆ) ಇದೇ ಅವಧಿಯಲ್ಲಿ ಇಲಾಖೆ ವಿವಿಧ ಕಡೆ ನಡೆಸಿದ ತಪಾಸಣೆಗಳೆಷ್ಟು? (ವಶಪಡಿಸಿಕೊಂಡ ಮದ್ಯದ ವಿವರ, ವಿಧಿಸಿದ ದಂಡ, ಪರವನಗಿ ರದ್ದುಪಡಿಸಿದ ಬಗ್ಗೆ ಜಿಲ್ಲಾವಾರು, ವರ್ಷಾವಾರು ವಿವರ ನೀಡುವುದು):

ಇ) ಮದ್ಯದ ಅಂಗಡಿಗಳಲ್ಲಿ ಸೆಕೆಂಡ್ಸ್, ಥರ್ಡ್ಸ್ ಮದ್ಯ ಪತ್ತೆಯಾದಲ್ಲಿ ಈಗ ತೆಗೆದುಕೊಳ್ಳುತ್ತಿರುವ ಕಾನೂನು ಕ್ರಮಗಳೇನು?

ಈ) ಇಂತಹ ಪ್ರಕರಣಗಳು ಪತ್ತೆಯಾದಾಗ ಅಂಗಡಿಗಳ ಪರವಾನಗಿಯನ್ನು ರದ್ದುಪಡಿಸಲು ಸರ್ಕಾರ ಕಾನೂನಿಗೆ ತಿದ್ದುಪಡಿ ತರುವುದೇ: ಹೌದಾದಲ್ಲಿ, ಯಾವಾಗ ತರಲಾಗುವುದು, ಇಲ್ಲವಾದಲ್ಲಿ ಕಾರಣಗಳೇನು?

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯ ಮಂತ್ರಿಗಳು) :

ಅ) ಕಳೆದ ಮೂರು ವರ್ಷದಲ್ಲಿ ಸಂಗ್ರಹವಾದ ಆದಾಯದ ವಿವರ ಈ ಕೆಳಕಂಡಂತಿದೆ.

2001–02 – ರೂ. 2004.11 ಕೋಟಿಗಳು

2002–03 – ರೂ. 2118.59 ಕೋಟಿಗಳು

2003–04 – ರೂ. 2364.90 ಕೋಟಿಗಳು

ವಿವರವನ್ನು ಅನುಬಂಧ–ಎ ನಲ್ಲಿ ಒದಗಿಸಿದೆ.

ಆ) ವಿವರಗಳನ್ನು ಅನುಬಂಧ–ಬಿ ನಲ್ಲಿ ಒದಗಿಸಿದೆ.

ಇ) ಮದ್ಯದ ಅಂಗಡಿಗಳಲ್ಲಿ ಸೆಕೆಂಡ್ಸ್ , ಥರ್ಡ್ಸ್ ಮದ್ಯ ಪತ್ತೆಯಾದಲ್ಲಿ ಆಯಾ ಅಂಗಡಿಯ ಸನ್ನದನ್ನು ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 29ರ ಪ್ರಕಾರ ಅಮಾನತ್ತು ಅಥವಾ ರದ್ದುಗೊಳಿಸಬಹುದಾಗಿದೆ. ಜೊತೆಗೆ ಪೂರ್ಣ ಪ್ರಮಾಣದ ಮದ್ಯ ದಾಸ್ತಾನನ್ನು ಜಪ್ತು ಮಾಡಿ ಅದರ ಮೌಲ್ಯವನ್ನು ವಸೂಲು ಮಾಡಿ ದಂಡ ವಿಧಿಸಬಹುದಾಗಿದೆ.

ಇದನ್ನು ತಿದ್ದುಪಡಿ ಮಾಡಿ ಸನ್ನದನ್ನು ರದ್ದುಗೊಳಿಸತಕ್ಕದೆಂದು ಉಪಬಂಧ ತರುವ ವಿಷಯವು ಪರಿಶೀಲನೆಯಲ್ಲಿದೆ.

ANNEXURE-A

DISTRICTWISE YEARWISE AND SOURCEWISE EXCISE REVENUE

S. No.	District	2001-02 ARRACK	2001-02 NIL	2001-02 OTHERS	2001-02 TOTAL	2002-03 ARRACK	2002-03 NIL	2002-03 OTHERS	2002-03 TOTAL	2003-04 ARRACK	2003-04 NIL	2003-04 OTHERS	2003-04 TOTAL
1	BANGALORE(U)	85.22	38.05	105.99	372.26	99.55	331.80	110.41	595.56	83.34	609.71	91.20	784.25
2	BANGALORE(R)	50.94	41.04	57.41	58.39	60.35	36.90	107.58	201.03	61.27	151.81	180.97	317.11
3	BAGALKOT	18.76	1.01	14.65	35.41	20.52	0.00	14.89	33.41	16.90	9.00	14.11	31.01
4	BELGAUM	56.04	11.61	10.14	98.70	61.85	0..76	37.85	107.46	62.29	19.76	35.19	98.24
5	BELARY	35.78	32	13.25	76.35	60.30	1.85	15.84	78.59	60.45	48.70	9.12	118.93
6	BIDAR	51.94	14.51	9.14	45.52	98.54	15.41	10.11	53.89	24.44	9.84	14.88	46.16
7	BIJAPUR	20.31	1.38	7.02	29.11	9.36	0.41	5.89	26.16	17.94	9.00	4.01	21.93
8	C'R' NAGAR	18.12	0.00	5.78	20.90	9.07	0.00	2.71	21.78	18.14	0.00	1.93	20.07
9	CHICKMAGALUR	54.55	0.01	6.78	41.3	36.15	0.00	7.18	43.31	37.33	0.00	2.10	39.43
10	CHITRADURGA	23.47	0.01	8.34	31.78	27.84	0.00	9.42	36.46	28.07	0.00	3.83	31.90
11	D. KANNADA	50.87	10.41	18.35	89.63	68.23	12.58	17.13	98.41	63.05	37.81	14.83	15.72
12	DAVANA GERE	14.57	0.45	19.86	54.83	26.34	18.91	11.24	57.41	36.65	11.90	5.19	53.74
13	DHARWAD	14.71	26.43	11.46	52.63	15,30	12.64	9,13	37.57	12.47	7.46	10.61	30.54
14	GADAG	12.02	0.00	0.61	12.63	11.30	1.58	3.04	13.92	9.61	1.36	0.21	11.68
15	GULBARGA	92.82	2.89	6.11	61.82	81.54	0.00	3.57	8.51	58.71	0.00	4.23	62.84
16	HASSAN	42.13	0.00	11.32	53.43	16.34	0.00	5.12	51.40	40.72	0.00	6.32	47.09
17	HAVERI	30.72	0.00	4.13	34.85	33.13	0.00	2.19	33.32	26.65	0.00	3.65	10.30
18	KODAGU	26.28	0.00	7.83	32.11	29.64	0.00	3.54	32.86	30.10	0.00	3.26	33.36
19	KOLAR	39.74	0.00	16.77	56.51	36.63	0.00	21.60	53.21	42.73	0.00	12.27	55.00
20	KOPPAL	22.73	0.00	3.56	26.29	25.38	0.00	3.55	29.13	21.16	0.00	1.99	12.35
21	MANDYA	46.44	0.78	21.43	68.67	48.39	0.27	14.38	63.29	18.09	0.00	11.33	59.42
22.	MYSORE	51.67	11.89	34.29	00.76	68.95	7.3	26.62	102.58	66.11	13.81	21.52	103.44
23.	RAICHUR	38.18	0.00	5.97	44.13	17.38	0.00	32.00	44.78	31.86	0.00	3.70	35.56
24.	SHIMOGA	34.91	0.71	9.10	40.93	41.96	1.6	8.37	54.24	38.31	0.38	5.51	44.38
25.	TUMKUR	46.68	0.00	14.39	61.07	48.19	6.90	6.44	61.54	49.40	0.00	9.21	58.69
26	UDUPI	43.79	18.99	1.86	5.64	32.64	26.64	3.51	53.35	13.32	26.50	1.80	64.62
27	U. KANNADA	22.87	2.83	4.16	36.18	26.41	1.45	4.40	32.20	12.29	0.23	7.06	29.62
	TOTAL	1016.66	53.25	450.19	2104.11	1112.74	532.02	473.83	2118.59	1035.65	932.52	400.73	2364.90

ANNEXURE-B (LAQ NO. 1594)

DISTRICTWISE YEARWISE AND SOURCEWISE EXCISE REVENUE

S.No.	District	Fines Confiscation (In Lakh Rupees)			Inspection (In No.)			Sized Liquor (In B.L)			Licence cancelled		
		2001-02	2002-03	2003-04	2001-02	2002-03	2003-04	2001-02	2003-04	2004-05	2001-02	2002-03	2003-04
1	BANGALORE(U)	882.00	1042.00	5041	355.00	5874	5790	217526	273170	131805	-	-	-
2	BANGALORE(R)	207.00	207.00	113.00	0	0	0	496.50	330.30	1735	-	-	
3	BAGALKOTE	0.85	1.75	7.48	54	35	180	6048	1920	1830	-	-	-
4	BELGAUM	16.83	29.48	7.96	37111	3365	3164	75111	126156	69786	-	-	-
5	BELLARY	17.58	29.10	29.57	1823	1691	1147	125534	140101	22	-	-	-
6	BIDAR	132.75	48.00	6.82	150	275	170	10000	80000	1500	-	-	-
7	BIJAPUR	17.00	8.00	5.00	470	501	433	32000	35000	30000	-	-	-
8	C'R' NAGAR	6.68	7.00	6.91	239	229	168	33027	23799	6827	-	-	-
9	CHIKMAGALUR	37.15	9.76	1.45	432	1112	638	87000	9700	353	-	-	-
10	CHIRTADURGA	310.00	85.87	237.00	291	247	177	75000	45000	3500	-	-	-
11	D. KANNADA	25.67	35.34	10.61	2500	2000	800	151000	112000	4800	-	-	-
12	DAVANAGERE	32.93	13.98	5.00	579	443	209	83203	17954	9732	-	-	-
13	DHARWAD	176.00	244.67	119.59	1754	2410	2611	82880	108285	20411	-	-	-
14	GADAG	0.90	2.09	1.24	677	580	522	7737	512000	3466	-	-	-
15	GULBARGA	25.19	68.23	44.82	435	480	415	138825	169842	11690	-	-	-
16	HASSAN	22.26	28.69	7.67	716	666	238	231000	115000	22520	-	-	-
17	HAVERI	8.74	9.92	9.28	15.23	16.34	1612	34990	14943	1041	-	-	-
18	KODAGU	9.65	14.56	5.02	141	243	87	4896	20269	916	-	-	-
19	KOLAR	28.40	47.11	17.56	477	633	165	17692	8657	2600	-	-	-
20	KOPPAL	5.18	2.83	2.94	186	169	137	20011	39674	10342	-	-	-
21	MANDYA	270.74	225.84	97.76	380	320	135	72829	85306	29570	-	-	-
22	MYSORE	276.00	225.00	58.73	837	687	341	170000	91500	51725	-	-	-
23	RAICHUR	47.00	226.00	34.52	557	646	471	45471	57657	9370	-	-	-
24	SHIMOGA	10.58	16.29	7.49	2373	2416	2217	121024	132180	25645	-	-	-
25	TUMKUR	41.00	42.02	2115	3508	3416	3718	118000	150000	120000	-	-	-
26	UDUPI	148.00	225.00	86.73	858	1065	1498	67191	66666	8000	-	-	-
27	U' KANNADA	78.74	104.85	65.26	9986	7945	6101	27355	29841	21746	-	-	-
	TOTAL	3034.82	3000.38	1365.56	73.098	39082	33144	2105000	2427650	600932	-	-	-

685(1453) ಶ್ರೀ ಅಶೋಕ ಗುರಪ್ಪ ಶಬಾದಿ (ಸಿಂಧಗಿ): ಮಾನ್ಯ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗೆ ಉತ್ತರಿಸುವರೇ?

ಅ) 2003–04 ಮತ್ತು 2004–05ನೇ ಸಾಲಿನಲ್ಲಿ ಸಿಂಧಗಿ ತಾಲ್ಲೂಕಿನಲ್ಲಿ ಅಭಿವೃದ್ಧಿ ಪಡಿಸಿರುವ ಅರಣ್ಯ ಪ್ರದೇಶವೆಷ್ಟು; ಇದಕ್ಕೆ ವೆಚ್ಚ ಮಾಡಿರುವ ಮೊತ್ತವೆಷ್ಟು;

ಆ) ಅರಣ್ಯಾಭಿವೃದ್ಧಿಗೆ ರೂಪಿಸಿರುವ ಹೊಸ ಯೋಜನೆಗಳೇನು?

ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :

ಅ) ಸಿಂಧಗಿ ತಾಲ್ಲೂಕಿನಲ್ಲಿ ಈ ಎರಡು ವರ್ಷಗಳ ಅವಧಿಯಲ್ಲಿ ಒಟ್ಟು 49 ಹೆಕ್ಟೇರ್ ಪ್ರದೇಶದಲ್ಲಿ ರೂ. 6.33 ಲಕ್ಷ ವೆಚ್ಚದಲ್ಲಿ ನೆಡುತೋಪುಗಳನ್ನು ರಚಿಸಲಾಗಿದೆ ಹಾಗೂ 183 ಹೆಕ್ಟೇರ್ ಪ್ರದೇಶದಲ್ಲಿ ರೂ. 20.18 ಲಕ್ಷ ವೆಚ್ಚದಲ್ಲಿ ಎರಡನೇ ಮತ್ತು ಮೂರನೇ ವರ್ಷದ ನೆಡುತೋಪು ಪೋಷಣೆ ಕಾರ್ಯ ನಿರ್ವಹಿಸಲಾಗಿದೆ. ವಿವರ ಕೆಳಗಿನಂತಿದೆ.

ವರ್ಷ ವಿಭಾಗ	ನೆಡುತೋಪು ಬೆಳೆಸುವುದು		ಹಳೆಯ ನೆಡುತೋಪು ನಿರ್ವಹಣೆ	
	ವಿಸ್ತೀರ್ಣ	ವೆಚ್ಚ (ರೂ.	ವಿಸ್ತೀರ್ಣ	ವೆಚ್ಚ ರೂ.
2003–04				
ಸಾಮಾಜಿಕ	5	0.91	–	0
ಅರಣ್ಯ ಪ್ರಾದೇಶಿಕ	–	–	108	14.02
2004–05				
ಸಾಮಾಜಿಕ	44	5.42	–	–
ಅರಣ್ಯ ಪ್ರಾದೇಶಿಕ	–	–	75	6.16
ಒಟ್ಟು	**49**	**6.33**	**183**	**20.18**

ಆ) ಸಿಂಧಗಿ ತಾಲ್ಲೂಕಿನಲ್ಲಿ 2005ನೇ ಸಾಲಿನ ಮಳೆಗಾಲದಲ್ಲಿ 47 ಹೆಕ್ಟೇರ್ ಪ್ರದೇಶದಲ್ಲಿ ನೆಡುತೋಪು ಅಭಿವೃದ್ಧಿ ಪಡಿಸಲು ಸಂಪೂರ್ಣ ಗ್ರಾಮೀಣ ರೋಜ್‌ಗಾರ್ ತಾಲ್ಲೂಕ್ ಪಂಚಾಯತ್ ಯೋಜನೆ ಅಡಿ ಮಂಜೂರಾತಿಗಾಗಿ ಸಾಮಾಜಿಕ ಅರಣ್ಯ ವಲಯ ವತಿಯಿಂದ ಪ್ರಸ್ತಾವನೆ ಒಪ್ಪಿಸಲಾಗಿದೆ.

686(1474): ಶ್ರೀ ಅಶೋಕ ಗುರಪ್ಪ ಶಬಾದಿ (ಸಿಂಧಗಿ): ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗೆ ಉತ್ತರಿಸುವರೇ?

ಅ) ಸಿಂಧಗಿ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ರಸ್ತೆಗಳು ತುಂಬಾ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದರೆ, ರಸ್ತೆಗಳ ದುರಸ್ತಿಗೆ ಕೈಗೊಂಡಿರುವ ಕ್ರಮಗಳೇನು;

ಇ) ಸಾರ್ವಜನಿಕರಿಗೆ ತುಂಬಾ ಅವಶ್ಯವಿರುವ ಜಾಲವಾದದಿಂದ ಕೋರವಾರ ಮತ್ತು ಕೋರವಾರದಿಂದ ಕೊಂಡಗೂಳಿ ರಸ್ತೆಗಳು ಹಾಗೂ ಇನ್ನಿತರ ರಸ್ತೆಗಳ ಡಾಬಂರಿಕರಣಗೊಳಿಸಲು ಸರ್ಕಾರ ಮುಂದಾಗುವುದೇ;

ಈ) ಹಾಗಿದ್ದಲ್ಲಿ, ಈ ಯೋಜನೆಯನ್ನು ಯಾವಾಗ ಕೈಗೆತ್ತಿಕೊಳ್ಳಲಾಗುವುದು?

ಶ್ರೀ ಹೆಚ್. ಡಿ. ರೇವಣ್ಣ (ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಹೌದು ಬಂದಿರುತ್ತದೆ.

ಆ) ಸಿಂಧಗಿ ತಾಲ್ಲೂಕಿನಲ್ಲಿಯ ಜಿಲ್ಲಾ ಮುಖ್ಯ ರಸ್ತೆಗಳಲ್ಲಿನ ಗುಂಡಿಗಳನ್ನು ತುಂಬಿ ನಿರ್ವಹಣೆ ಮಾಡುವುದರ ಸಲುವಾಗಿ ರೂ. 37.60 ಲಕ್ಷ ಅನುದಾನ ಮತ್ತು ಸುಧಾರಣೆ ಸಲುವಾಗಿ 20.70 ಲಕ್ಷಗಳ ಅನುದಾನ ಒದಗಿಸಲಾಗಿದೆ. ಸದರಿ ಕಾಮಗಾರಿಗೆ ಗುತ್ತಿಗೆ ನಿಗದಿಯಾಗಿದ್ದು ಗುಂಡಿ ತುಂಬುವ ಕಾಮಗಾರಿ ಪ್ರಗತಿಯಲ್ಲಿದೆ. ಈ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ರಾಜ್ಯ ಹೆದ್ದಾರಿಗಳ ನಿರ್ವಹಣೆಯನ್ನು ರೂ.40.80 ಲಕ್ಷದಲ್ಲಿ ಮಾಡಲಾಗುತ್ತಿದೆ. (ಅನುದಾನ ಬಿಡುಗಡೆಯಾಗಿದೆ) ಸದರಿ ಕಾಮಗಾರಿಯನ್ನು ಮಾರ್ಚ್ ಅಂತ್ಯದೊಳಗಾಗಿ ಪೂರ್ಣಗೊಳಿಸಲಾಗುವುದು.

ಇ) ಅನುದಾನದ ಲಭ್ಯತೆಯನ್ನು ಆಧರಿಸಿ ಯವುದಾದರು ಯೋಜನೆಯಡಿಯಲ್ಲಿ ಕಾಮಗಾರಿಯನ್ನು ತೆಗೆದುಕೊಳ್ಳುವ ಬಗ್ಗೆ ಪರಿಶೀಲಿಸಲಾಗುವುದು.

ಈ) ಮೇಲ್ಕಂಡಂತೆ ಕ್ರಮ ಕೈಗೊಳ್ಳಲಾಗುವುದು.

688(153) ಶ್ರೀ ಅಶೋಕ್ ಆರ್. (ಉತ್ತರಹಳ್ಳಿ): ಮಾನ್ಯ ಪೌರಾಡಳಿತ ಹಾಗೂ ಕೆಯುಐಡಿಎಫ್‌ಸಿ ಸಚಿವರು ಈ ಕೆಳಕಂಡ ಪ್ರಶ್ನೆಗೆ ಉತ್ತರಿಸುವರೇ?

ಅ) ಉತ್ತರಹಳ್ಳಿ ವಿಧಾಸಭೆ ವ್ಯಾಪ್ತಿಯಲ್ಲಿ ಬರುವ ದಾಸರಹಳ್ಳಿ ಕೆರೆಗೆ ಪೀಣ್ಯದ ಸಣ್ಣ ಕೈಗಾರಿಕೆಗಳಿಂದ ಬರುವ ಕಲುಷಿತ ಮತ್ತು ಒಳಚರಂಡಿ ನೀರು ತುಂಬಿ ಸುತ್ತಮುತ್ತಲಿನ ನೂರಾರು ಕೊಳವೆ ಬಾವಿಗಳು ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಕೆರೆಗೆ ಹರಿದು ಬರುವ ಕಲುಷಿತ ಒಳಚರಂಡಿ ನೀರನ್ನು ತಡೆಯುವ ಯೋಜನೆ ಏನಾದರೂ ಸರ್ಕಾರದ ಮುಂದಿದೆಯೇ;

ಇ) ಇದ್ದಲ್ಲಿ, ಅದನ್ನು ಯಾವಾಗ ಅನುಷ್ಠಾನಕ್ಕೆ ತರಲಾಗುವುದು?

ಶ್ರೀ ಎಸ್. ಆರ್. ಮೋರೆ (ಪೌರಾಡಳಿತ ಹಾಗೂ ಕೆಯುಐಡಿಎಫ್‌ಸಿ ಸಚಿವರು) :

ಅ) – ಇಲ್ಲ –

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

689(160) ಶ್ರೀ ಅಶೋಕ್ ಆರ್. (ಉತ್ತರಹಳ್ಳಿ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗೆ ಉತ್ತರಿಸುವರೇ?

ಅ) ಬೆಂಗಳೂರು ಉತ್ತರ ತಾಲ್ಲೂಕು ಯಶವಂತಪುರ ಹೋಬಳಿ ಕೊಡಿಗೇಹಳ್ಳಿ ಗ್ರಾಮದ ಸರ್ವೆ ನಂ. 88 ರಲ್ಲಿ ಕಳೆದ 40 ವರ್ಷಗಳಿಂದ ಬಗರ್ ಹುಕುಂ ಸಾಗುವಳಿ ಮಾಡಿಕೊಂಡು ಬಂದಿದ್ದ ಬಡ ರೈತರ ಜಮೀನನ್ನು ಸರ್ಕಾರದಿಂದ ಕಾರಿಡಾರ್ ಯೋಜನೆಯಲ್ಲಿ ವಶಪಡಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಬಗರ್ ಹುಕುಂ ಸಾಗುವಳಿಯಲ್ಲಿ ಜಮೀನನ್ನು ಕಳೆದುಕೊಂಡ ಬಡ ರೈತರಿಗೆ ಸರ್ಕಾರ ಬೇರೆ ಬದಲಿ ಜಮೀನಿನ ಪರಿಹಾರವನ್ನು ನೀಡಲಾಗಿದೆಯೇ;

ಇ) ಇಲ್ಲವಾದಲ್ಲಿ, ಈ ಪರಿಹಾರವನ್ನು ಯಾವಾಗ ನೀಡಲಾಗುವುದು;

ಶ್ರೀ ಎಂ. ಪಿ. ಪ್ರಕಾಶ್ (ಮಾನ್ಯ ಕಂದಾಯ ಸಚಿವರು) :

ಅ) ಬೆಂಗಳೂರು ಉತ್ತರ ತಾಲ್ಲೂಕು ಯಶವಂತಪುರ ಹೋಬಳಿ, ಕೊಡಿಗೇಹಳ್ಳಿ ಗ್ರಾಮದ ಸ.ನಂ.88ರ ಜಮೀನನ್ನು ಸರ್ಕಾರದಿಂದ ಕಾರಿಡಾರ್ ಯೋಜನೆಗಾಗಿ ವಶಪಡಿಸಿಕೊಂಡಿರುವುದಿಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

690(164) ಶ್ರೀ ಅಶೋಕ್ ಆರ್. (ಉತ್ತರಹಳ್ಳಿ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗೆ ಉತ್ತರಿಸುವರೇ?

ಅ) ಉತ್ತರಹಳ್ಳಿ ಕ್ಷೇತ್ರದ ವ್ಯಾಪ್ತಿಗೆ ಬರತಕ್ಕಂತಹ ಆಶ್ರಯ, ಆರಾಧನಾ ಮತ್ತು ಬಗರ್ ಹುಕುಂ ಸಾಗುವಳಿ ಸಕ್ರಮ ಸಮಿತಿ ರಚಿಸದೇ ಇರಲು ಕಾರಣವೇನು?

ಆ) ಈ ಸಮಸ್ಯೆಯಿಂದ ನೂರಾರು ಬಡ ಕುಟುಂಬಗಳಿಗೆ ಕಳೆದ 6 ತಿಂಗಳಿಂದ ಅನ್ಯಾಯ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಈ ಸಮಿತಿಗಳನ್ನು ರಚನೆ ಮಾಡಲು ಸರ್ಕಾರಕ್ಕೆ ಅಡಚಣೆಗಳೇನಾದರೂ ಇವೆಯೇ:

ಈ) ಇಲ್ಲವಾದಲ್ಲಿ ಯಾವಾಗ ಸಮಿತಿಗಳನ್ನು ರಚನೆ ಮಾಡಲಾಗುವುದು?

ಶ್ರೀ ಎಂ. ಪಿ. ಪ್ರಕಾಶ್ (ಮಾನ್ಯ ಕಂದಾಯ ಸಚಿವರು) :

ಅ) 1. ವಸತಿ ಇಲಾಖೆಯ ಸುತ್ತೋಲೆ ಸಂಖ್ಯೆ:ಏ:74:ಹೆಚ್.ಎ.ವೈ 04 ದಿ:20.11.04ರಂತೆ ವಸತಿ ಇಲಾಖೆಯು ಪಂಚಯತ್ ರಾಜ್ಯ ಸಂಸ್ಥೆಗಳ ಮೂಲಕ ವಸತಿ ಕಾರ್ಯಕ್ರಮಗಳ ಅನುಷ್ಟಾನದ ಬಗ್ಗೆ ಮಾರ್ಗಸೂಚಿಗಳನ್ನು ಹೊರಡಿಸಿದ್ದು, ಇದರನ್ವಯ ಆಶ್ರಯ ಯೋಜನೆ ಹಾಗೂ ಇತರ ಫಲಾನುಭವಿಗಳ ಆಧಾರಿತ ಯೋಜನೆಯ ಆಯ್ಕೆಯನ್ನು ಗ್ರಾಮ ಪಂಚಾಯ್ತಿಗಳು ಗ್ರಾಮ ಸಭೆಗಳ ಮೂಲಕ ಮಾಡಬೇಕಾಗುತ್ತದೆ. ಆದಕಾರಣ ಕಾನೂನು ಬದ್ಧವಾಗಿ ಆಶ್ರಯ ಸಮಿತಿಗಳನ್ನು ಪುನರ್ ರಚಿಸುವ ಅಗತ್ಯವಿರುವುದಿಲ್ಲ. ಆರಾಧನಾ ಹಾಗೂ ಅಕ್ರಮ-ಸಕ್ರಮ ಸಮಿತಿಗಳನ್ನು ಈವರೆಗೆ ರಚಿಸಿಲ್ಲ.

2. ಚುನಾವಣೆಗಳನ್ನು ಘೋಷಿಸಿದ್ದರಿಂದ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿದ್ದ ಕಾರಣ ಹಿಂದೆ ರಚಿಸಲಾಗಿದ್ದ ಅಕ್ರಮ-ಸಕ್ರಮ ಮತ್ತು ಆರಾಧನಾ ಸಮಿತಿಗಳನ್ನು ಸ್ಥಗಿತಗೊಳಿಸಲಗಿತ್ತು. ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ ಅಕ್ರಮ-ಸಕ್ರಮ ಮತ್ತು ಆರಾಧನಾ ಸಮಿತಿಗಳನ್ನು ರಚಿಸಲು ಜಿಲ್ಲಾಧಿಕಾರಿಗಳಿಂದ ಪ್ರಸ್ತಾವನೆ ಪಡೆಯಲಾಗುತ್ತಿದ್ದು ಸಮಿತಿಗಳನ್ನು ರಚಿಸಲು ಸರ್ಕಾರದಲ್ಲಿ ಪರಿಶೀಲಿಸಲಾಗುತ್ತಿದೆ.

ಆ) ಸಮಿತಿಗಳನ್ನು ರಚಿಸಲು ಕ್ರಮ ಜರುಗಿಸಲಾಗುತ್ತಿದೆ.

ಇ) ಇಲ್ಲ.

ಈ) ಶೀಘ್ರದಲ್ಲಿಯೇ ಸಮಿತಿಗಳನ್ನು ರಚಿಸಲಾಗುವುದು.

692(1164) : ಶ್ರೀ ಬಾದರ್ಲಿ ಹಂಪನಗೌಡ (ಸಿಂಧನೂರು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 2004–05, 2005–06 ನೇ ಸಾಲುಗಳಲ್ಲಿ ಚಿಕ್ಕಮಗಳೂರು ಜಿಲ್ಲೆ ವ್ಯಾಪ್ತಿಯಲ್ಲಿ ಬರಗಾಲಕ್ಕೆ ಎಷ್ಟು ಹಣ ಹಾಗೂ ಆಹಾರಧಾನ್ಯ ಬಿಡುಗಡೆ ಮಾಡಲಾಗಿದೆ ;

ಆ) 2004 ರಿಂದ 2006ರವರೆಗೆ ತರೀಕೆರೆ ವ್ಯಾಪ್ತಿಯಲ್ಲಿ ಬರಗಾಲಕ್ಕೆ ಎಷ್ಟು ಹಣ ಆಹಾರಧಾನ್ಯ ಬಿಡುಗಡೆ ಮಾಡಲಾಗಿದೆ ;

ಇ) ಈವರೆಗೆ, ಖರ್ಚಾದ ಹಣ ಮತ್ತು ಆಹಾರಧಾನ್ಯ ಹಾಗೂ ಪೂರ್ಣಕಾಮಗಾರಿ ಬಗ್ಗೆ ವಿವರ ನೀಡುವುದು?

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು)

ಅ) 2004–05ನೇ ಸಾಲಿನ ಬರಪರಿಹಾರ ನಿಧಿಯಡಿಯಲ್ಲಿ ರೂ. 210.00ಲಕ್ಷ ಅನುದಾನವನ್ನು ಹಾಗೂ 7870 ಮೆ.ಟನ್ ಅಕ್ಕಿಯನ್ನು ಬಿಡುಗಡೆ ಮಾಡಲಾಗಿದೆ.

ಆ) 2004–05ನೇ ಸಾಲಿನಲ್ಲಿ ತರೀಕೆರೆ ತಾಲ್ಲೂಕಿಗೆ ರೂ. 56.11 ಲಕ್ಷ ಅನುದಾನವನ್ನು ಹಾಗು 1041.92 ಮೆ.ಟನ್ ಅಕ್ಕಿಯನ್ನು ಹಂಚಿಕೆ ಮಾಡಲಾಗಿದೆ.

ಇ) ರೂ. 165.00 ಲಕ್ಷ ಹಣ ಹಾಗೂ 6515.00 ಮೆ.ಟನ್ ಅಕ್ಕಿ ಖರ್ಚಾಗಿರುತ್ತದೆ. ಜಿಲ್ಲೆಯಲ್ಲಿ ಒಟ್ಟು 463 ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.

694(1166) : ಶ್ರೀ ಬಾದರ್ಲಿ ಹಂಪನಗೌಡ (ಸಿಂಧನೂರು) : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಚಿಕ್ಕಮಗಳೂರು ಜಿಲ್ಲೆ ತರೀಕೆರೆ ತಾಲ್ಲೂಕಿನ ನೇರಲೀಕೇರಿ ಗ್ರಾಮ ವ್ಯಾಪ್ತಿ 64 ಕೆ.ವಿ. ಎಂ.ಯು.ಎಸ್. ಸ್ಟೇಷನ್ ಪ್ರಾರಂಭಿಸಲು ಸರ್ಕಾರವು ಸ್ಥಳವನ್ನು (ಜಾಗವನ್ನು) ಪಡೆದು ಕೊಂಡಿರುವುದು ನಿಜವೇ.

ಆ) ಹಾಗಿದ್ದಲ್ಲಿ, ಎಂ.ಯು.ಎಸ್. ಸ್ಟೇಷನ್ ಅನ್ನು ಎಂದು ಪ್ರಾರಂಭಿಸಲಾಗುವುದು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲ್ಲೂಕಿನ ನೇರಲೀಕೆರಿ ಗ್ರಾಮದ ವ್ಯಾಪ್ತಿಯಲ್ಲಿ ಒಂದು 110 ಕೆವಿ ವಿದ್ಯುತ್ ಸಬ್–ಸ್ಟೇಷನ್ (ಎಂ.ಯು.ಎಸ್.ಎಸ್) ಸ್ಥಾಪಿಸಲು ಜಾಗವನ್ನು ಪಡೆದುಕೊಂಡಿರುವುದು ನಿಜ.

ಆ) ಈ ಉದ್ದೇಶಿತ ಸಬ್–ಸ್ಟೇಷನ್ನಿನ ಕಾಮಗಾರಿಯನ್ನು ಮುಂಬರುವ ವರ್ಷವಾದ 2005–06ರಲ್ಲಿ ಪ್ರಾರಂಭಿಸಲು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

695(1167) : ಶ್ರೀ ಬಾದರ್ಲಿ ಹಂಪನಗೌಡ (ಸಿಂಧನೂರು) : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಷ್ಟ್ರೀಯ ಹೆದ್ದಾರಿ 206 ಕಿಮೀ ಇಂದ 168,73 ಹಾಗೂ 170,88 ಕಿಮೀ ವರೆಗಿನ ಅಭಿವೃದ್ಧಿ ಮತ್ತು ಡಬಲ್ ರಸ್ತೆ ಮಾಡಲು ಅಂದಾಜು ವೆಚ್ಚ ತಯಾರಿಸಲಾಗಿದೆಯೇ; ಈ ಕಾಮಗಾರಿಯನ್ನು ಯಾವಾಗ ತೆಗೆದುಕೊಳ್ಳಲಾಗುವುದು.

695(1167) : **ಶ್ರೀ ಬಾದರ್ಲಿ ಹಂಪನಗೌಡ (ಸಿಂಧನೂರು)** : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಷ್ಟ್ರೀಯ ಹೆದ್ದಾರಿ 206 ಕಿಮೀ ಇಂದ 168,73 ಹಾಗೂ 170,88 ಕಿಮೀ ವರೆಗಿನ ಅಭಿವೃದ್ಧಿ ಮತ್ತು ಡಬಲ್ ರಸ್ತೆ ಮಾಡಲು ಅಂದಾಜು ವೆಚ್ಚ ತಯಾರಿಸಲಾಗಿದೆಯೇ ;

ಆ) ಈ ಪ್ರದೇಶ ವ್ಯಾಪ್ತಿಗೆ ಬರುವ ಅಂಗಡಿ ಮತ್ತು ಕಟ್ಟಡ ತೆರವುಗೊಳಿಸಲು ಆದೇಶ ಆಗಿದೆಯೇ; ಇದನ್ನು ಯಾವಾಗ ಮಾಡಲಾಗುವುದು;

ಇ) ರಾಷ್ಟ್ರೀಯ ಹೆದ್ದಾರಿ 206 ಕಿಮೀ 163 ರ ವ್ಯಾಪ್ತಿಯಲ್ಲಿ ಅಭಿವೃದ್ಧಿ ಮತ್ತು ಚರಂಡಿ ವ್ಯವಸ್ಥೆಗಾಗಿ ಅಂದಾಜು ವೆಚ್ಚ ನಕ್ಷೆ ತಯಾರಿಸಲಾಗಿದೆಯೇ ; ಈ ಕಾಮಗಾರಿಯನ್ನು ಯಾವಾಗ ಕ್ರಮ ತೆಗೆದುಕೊಳ್ಳಲಾಗುವುದು;

ಈ) ಹಾಗಿದ್ದಲ್ಲಿ ಇದರ ಮೊತ್ತವೆಷ್ಟು; ಈ ಕಾಮಗಾರಿ ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಹೆಚ್.ಡಿ. ರೇವಣ್ಣ(ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ರಾಷ್ಟ್ರೀಯ ಹೆದ್ದಾರಿ 206 ಕಿ.ಮೀ. 168.50 ರಿಂದ 171.50 ಕಿಮೀ ವರೆಗಿನ ಹೆದ್ದಾರಿಯನ್ನು ಅಗಲಪಡಿಸುವ ಕಾಮಗಾರಿಯ ಅಂದಾಜನ್ನು ಕೇಂದ್ರ ಭೂ ಸಾರಿಗೆ ಸಚಿವಾಲಯದ ಅನುಮೋದನೆಗೆ ದೊರೆತ ನಂತರ ಕಾಮಗಾರಿ ಪ್ರಾರಂಭಿಸಲಾಗುವುದು.

ಆ) ಈ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಅಂಗಡಿ ಮತ್ತು ಕಟ್ಟಡಗಳನ್ನು ತೆರವುಗೊಳಿಸಲು ಜಿಲ್ಲಾಧಿಕಾರಿಗಳು ಸಂಬಂಧಪಟ್ಟವರಿಗೆ ಸೂಚಿಸಿರುತ್ತಾರೆ. ಹಾಗೂ ಅತಿಕ್ರಮಣ ತೆರವುಗೊಳಿಸುವಿಕೆ ಪ್ರಗತಿಯಲ್ಲಿದೆ.

ಇ) ರಾಷ್ಟ್ರೀಯ ಹೆದ್ದಾರಿ 206 ತುಮಕೂರು–ಹೊನ್ನಾವರ ರಸ್ತೆಯ ಕಿಮೀ 153.00 ರಿಂದ 163.00 ರವರೆಗಿನ ರಾಷ್ಟ್ರೀಯ ಹೆದ್ದಾರಿ ಅಗಲಪಡಿಸುವ (ಚರಂಡಿ ವ್ಯವಸ್ಥೆಯು ಸೇರಿದಂತೆ) ಕಾಮಗಾರಿಗೆ ಅಂದಾಜು ತಯಾರಿಸಿ ಕೇಂದ್ರ ಭೂ ಸಾರಿಗೆ ಸಚಿವಾಲಯದ ಅನುಮೋದನೆಗೆ ಸಲ್ಲಿಸಲಾಗಿದೆ.

ಈ) ಈ ಕಾಮಗಾರಿಯ ಅಂದಾಜು ವೆಚ್ಚ ರೂ. 346.51 ಲಕ್ಷಗಳು ಕೇಂದ್ರ ಭೂ ಸಾರಿಗೆ ಸಚಿವಾಲಯದ ಅನುಮೋದನೆ ನಂತರ ಕಾಮಗಾರಿ ಪ್ರಾರಂಭಿಸಲಾಗುವುದು.

696(1367) : **ಶ್ರೀ ಬಾಲಕೃಷ್ಣ ಹೆಚ್.ಸಿ. (ಮಾಗಡಿ)** : ಮಾನ್ಯ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ಯುವಜನ ಸೇವೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮಾಗಡಿ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಗೆ ಬರುವ ಅಲ್ಪಸಂಖ್ಯಾತರ ಜನಗಳಿಗೆ ಸರ್ಕಾರ ಯಾವ ಯೋಜನೆಯನ್ನು ಜಾರಿಗೆ ತಂದಿದೆ ;

ಆ) ಹಾಗಿದ್ದಲ್ಲಿ, ಯೋಜನೆಯ ಪ್ರಗತಿ ಏನು?

ಶ್ರೀ ಜಬ್ಬಾರ್ ಖಾನ್ ಹೊನ್ನಳ್ಳಿ(ಅಲ್ಪಸಂಖ್ಯಾತರ ಕಲ್ಯಾಣ ಮತ್ತು ಯುವಜನ ಸೇವೆ ಸಚಿವರು)

ಅ) ಅಲ್ಪಸಂಖ್ಯಾತರ ಸಮುದಾಯಕ್ಕೆ ಸಂಬಂಧಪಟ್ಟ ಕಾರ್ಯಕ್ರಮ ಯೋಜನೆಗಳನ್ನು ಅನುಬಂಧ–1 ರಲ್ಲಿ ನೀಡಿದೆ. ಮಾಗಡಿ ತಾಲ್ಲೂಕಿಗಾಗಿ ಯಾವುದೇ ನಿರ್ದಿಷ್ಟ ಯೋಜನೆ ಇರುವುದಿಲ್ಲ.

ಅನುಬಂಧ-1

ಕಾರ್ಯಕ್ರಮಗಳ ವಿವರ

ರಾಜ್ಯವಲಯ

1 ಅಲ್ಪ ಸಂಖ್ಯಾತರ ನಿರ್ದೇಶಕರು

2 ಅಲ್ಪ ಸಂಖ್ಯಾತರರಿಗಾಗಿ ತರಬೇತಿ

3 ಅಲ್ಪ ಸಂಖ್ಯಾತರರಿಗಾಗಿ ಹಾಸ್ಟೆಲ್‌ಗಳು

4 ಅಲ್ಪ ಸಂಖ್ಯಾತರರಿಗಾಗಿ ಶಿಷ್ಯವೇತನ ಮತ್ತು ಫೀಶ

5 ಅಲ್ಪ ಸಂಖ್ಯಾತರ ಸಂಸ್ಥೆಗಳಿಂದ ನಡೆಸಲ್ಪಡುತ್ತಿರುವವ ವಿದ್ಯಾರ್ಥಿನಿಲಯಗಳು

6 ಅಲ್ಪ ಸಂಖ್ಯಾತರರಿಗಾಗಿ ಸಮುದಾಯ ಭವನ/ಶಾದಿಮಹಲ್ ನಿರ್ಮಾಣ

7 ಅಲ್ಪ ಸಂಖ್ಯಾತರರಿಗಾಗಿ ಹಾಸ್ಟೆಲ್ ಕಟ್ಟಡಗಳ ನಿರ್ಮಾಣ

8 ಅಲ್ಪ ಸಂಖ್ಯಾತರರಿಗಾಗಿ ವೃತ್ತಿ ಪರ ತರಬೇತಿ

9 ಅಲ್ಪ ಸಂಖ್ಯಾತರ ಖಾಸಗಿ ಅನುದಾನಿತ ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣ

ಜಿಲ್ಲಾ ವಲಯ

1 ಅಲ್ಪ ಸಂಖ್ಯಾತರರಿಗಾಗಿ ಅನಾಥಾಲಯಗಳು

1. ಸ್ವಾವಲಂಬನಾ ಸಾಫ್ಟ್ ಲೋನ್ ಯೋಜನೆ

2. ಅರಿವು ಯೋಜನೆ (ವಿಧ್ಯಾಭ್ಯಾಸ ಸಾಲ)

3. ಗಂಗಾ ಕಲ್ಯಾಣ ಯೋಜನೆ.

697(1368) : ಶ್ರೀ ಬಾಲಕೃಷ್ಣ ಹೆಚ್.ಸಿ. (ಮಾಗಡಿ) : ಮಾನ್ಯ ಪ್ರವಾಸೋದ್ಯಮ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮಾಗಡಿ ವಿಧಾನ ಸಭಾ ಕ್ಷೇತ್ರಕ್ಕೆ ಬರುವ ಸಾವನದುರ್ಗ ಮತ್ತು ದೊಡ್ಡ ಆಲದಮರ ಹಾಗೂ ತಿರುಮಲೆ ಯಾತ್ರಾ ಸ್ಥಳಗಳನ್ನು ಅಭಿವೃದ್ಧಿ ಪಡಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೆ;

ಆ) ಹಾಗಿದ್ದಲ್ಲಿ ಸರ್ಕಾರ ತೆಗೆದುಕೊಂಡ ಕ್ರಮವೇನು?

ಶ್ರೀ ಡಿ.ಟಿ. ಜಯಕುಮಾರ್(ಪ್ರವಾಸೋದ್ಯಮ ಸಚಿವರು)

ಅ) ದೊಡ್ಡ ಆಲದ ಮರದ ಬಳಿ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮವು ಉಪಹಾರ ಗೃಹ ನಿರ್ಮಿಸಿದ್ದು, ಅದನ್ನು ಖಾಸಗೀಕರಣಗೊಳಿಸಲು ಕ್ರಮ ಕೈಗೊಳ್ಳಲಾಗಿದೆ. ಸಾವನದುರ್ಗ ಮತ್ತು ತಿರುಮಲೆ ಯಾತ್ರಾ ಸ್ಥಳಗಳಲ್ಲಿ ಅಭಿವೃದ್ಧಿ ಪಡಿಸುವ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

698(1369) : ಶ್ರೀ ಬಾಲಕೃಷ್ಣ ಹೆಚ್.ಸಿ. (ಮಾಗಡಿ) : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮಾಗಡಿ ವಿಧಾನ ಸಭಾಕ್ಷೇತ್ರ ವ್ಯಾಪ್ತಿಯಲ್ಲಿ ವಿದ್ಯುತ್ ಅಭಾವವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ, ಸರ್ಕಾರ ತೆಗೆದುಕೊಂಡ ಕ್ರಮವೇನು ;

ಇ) ವಿದ್ಯುತ್ ಸಬ್ ಸ್ಟೇಷನ್‌ನನ್ನು ಸ್ಥಾಪಿಸುವ ಉದ್ದೇಶ ಸರ್ಕಾರದಲ್ಲಿ ಇದೆಯೇ;

ಈ) ಹಾಗಿದ್ದಲ್ಲಿ, ಸರ್ಕಾರ ತೆಗೆದುಕೊಂಡ ಕ್ರಮವೇನು ?

ಶ್ರೀ ಹೆಚ್.ಡಿ. ರೇವಣ್ಣ(ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಮಾಗಡಿ ವಿಧಾನ ಸಭಾ ಕ್ಷೇತ್ರಕ್ಕೆ ಈಗ ಮಾಗಡಿ, ತಾವರೆಕೆರೆ ಮತ್ತು ಕುದೂರು ಗ್ರಾಮಗಳಲ್ಲಿರುವ ವಿದ್ಯುತ್ ಉಪ ಕೇಂದ್ರಗಳಿಂದ ವಿದ್ಯುತ್ ಸರಬರಾಜಾಗುತ್ತಿದೆ. 06.01.2005 ರಿಂದ ಗ್ರಾಮೀಣ ಪ್ರದೇಶಗಳಿಗೆ ಪ್ರತಿ ದಿನ 9 ಗಂಟೆ 3 ಫೇಸ್ ಹಾಗೂ 9 ಗಂಟೆ ಸಿಂಗಲ್ ಫೇಸಿನ ವಿದ್ಯುತ್ ಸರಬರಾಜನ್ನು ಮಾಡಲಾಗುತ್ತಿದೆ. ಈ ವಿದ್ಯುತ್ ಉಪಕೇಂದ್ರಗಳಿಗೆ ಬೆಂಗಳೂರಿನ ಪೀಣ್ಯ ಮತ್ತು ತುಮಕೂರಿನ ಅಂಚೆಪಾಳ್ಯ ಸ್ವೀಕರಣ ಕೇಂದ್ರಗಳಿಂದ 66 ಕೆ.ವಿ. ಒತ್ತಡದಲ್ಲಿ ವಿದ್ಯುತ್ ಪ್ರವಹಿಸುತ್ತಿದ್ದು. ವಿದ್ಯುತ್ ಪ್ರಸರಣ ಮಾರ್ಗಗಳಲ್ಲಿ ಕೆಲವೊಮ್ಮೆ ವ್ಯತ್ಯಯಗಳುಂಟಾದಾಗ ಮಾತ್ರ ವಿದ್ಯುತ್ ಅಡಚಣೆ ಉಂಟಾಗುತ್ತದೆ.

ಆ) ಮಾಗಡಿ ವಿಧಾನ ಸಭಾ ಕ್ಷೇತ್ರದಲ್ಲಿ ವಿದ್ಯುತ್ ಸರಬರಾಜಿನ ಸುಧಾರಣೆಗಾಗಿ, ಮಾಗಡಿಯಲ್ಲಿರುವ 66/11 ಕೆ.ವಿ. ವಿದ್ಯುತ್ ಉಪ ಕೇಂದ್ರದ ಸಾಮರ್ಥ್ಯವನ್ನು 12.5 ಎಂ.ವಿ.ಎ ನಿಂದ 20 ಎಂ.ವಿ.ಎ. ಗೆ ಸುಮಾರು 102 ಲಕ್ಷ ರೂ. ವೆಚ್ಚದಲ್ಲಿ ಹೆಚ್ಚಳಗೊಳಿಸಲಾಗಿದೆ. ಈ ಕಾಮಗಾರಿಯನ್ನು ಅಕ್ಟೋಬರ್ 2004 ರಲ್ಲಿ ನಿರ್ವಹಿಸಿದೆ. ಕುದೂರಿನಲ್ಲಿರುವ 66/11 ಕೆ.ವಿ. ವಿದ್ಯುತ್ ಉಪ ಕೇಂದ್ರದ ಸಾಮರ್ಥ್ಯವನ್ನು 6.3 ಎಂ.ವಿ.ಎ ನಿಂದ 12.5 ಎಂ.ವಿ.ಎ.ಗೆ ಸುಮಾರು 72 ಲಕ್ಷ ರೂ.ಗಳ ವೆಚ್ಚದಲ್ಲಿ ಹೆಚ್ಚಳಗೊಳಿಸಲಾಗಿದೆ. ಈ ಕಾಮಗಾರಿಯನ್ನು ಜುಲೈ 2004 ರಲ್ಲಿ ನಿರ್ವಹಿಸಿದೆ. ಹಾಗೂ ತಾವರೆಕೆರೆಯಲ್ಲಿರುವ 66/11 ಕೆ.ವಿ. ಉಪ ಕೇಂದ್ರದ ಸಾಮರ್ಥ್ಯವನ್ನು 8 ಎಂ.ವಿ.ಎ. ನಿಂದ 16 ಎಂ.ವಿ.ಎ.ಗೆ ಸುಮಾರು 53 ಲಕ್ಷ ರೂ.ಗಳ ವೆಚ್ಚದಲ್ಲಿ ಹೆಚ್ಚಳಗೊಳಿಸಲಾಗಿದೆ. ಈ ಕಾಮಗಾರಿಯನ್ನು ಜುಲೈ 2004 ರಲ್ಲಿ ನಿರ್ವಹಿಸಲಾಗಿದೆ.

ಇ) ಮಾಗಡಿ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಇನ್ನೂ ಎರಡು ವಿದ್ಯುತ್ ಉಪ ಕೇಂದ್ರಗಳನ್ನು ಸ್ಥಾಪಿಸಲು ಉದ್ದೇಶಿಸಿದೆ.

ಈ) ಮಾಗಡಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಇನ್ನೂ ಉತ್ತಮ ಗುಣಮಟ್ಟದ ವಿದ್ಯುತ್ ಸರಬರಾಜು ಮಾಡಲು ಗುಡೇಮಾರನಹಳ್ಳಿಯ ಬಳಿ 2X8 ಎಂ.ವಿ.ಎ. 66/11 ಕೆ.ವಿ. ವಿದ್ಯುತ್ ಉಪ–ಕೇಂದ್ರವನ್ನು ಮತ್ತು ತಿಪ್ಪಗೊಂಡನ ಹಳ್ಳಿಯಲ್ಲಿ 1X8 ಎಂ.ವಿ.ಎ 66/11 ಕೆ.ವಿ. ವಿದ್ಯುತ್ ಉಪ–ಕೇಂದ್ರವನ್ನು ಸ್ಥಾಪಿಸುವ ಪ್ರಸ್ತಾವನೆಗೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ತಾಂತ್ರಿಕ ಸಮನ್ವಯ ಸಮಿತಿಯ ತಾತ್ವಿಕವಾಗಿ ಅನುಮೋದನೆ ನೀಡಿದೆ. ಈ ಪ್ರಸ್ತಾವನೆಗಳಿಗೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ತಾಂತ್ರಿಕ ಸಲಹಾ ಸಮಿತಿಯು ಅನುಮೋದನೆ ನೀಡಿದ ನಂತರ ಮುಂದಿನ ಕ್ರಮಗಳನ್ನು ಜರುಗಿಸಲಾಗುವುದು.

699(1370) ಶ್ರೀ ಬಾಲಕೃಷ್ಣ ಹೆಚ್.ಸಿ. (ಮಾಗಡಿ) : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮಾಗಡಿ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿ ಬಿ.ಎಂ.ಹೆಚ್ ರಸ್ತೆಯು ತುಂಬಾ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ;

ಆ) ಹಾಗಿದ್ದಲ್ಲಿ, ಸರ್ಕಾರ ತೆಗೆದುಕೊಂಡ ಕ್ರಮವೇನು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಬಂದಿರುತ್ತದೆ.

ಆ) ಮಾಗಡಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಸದರಿ ರಸ್ತೆಯ ಸರಪಳಿ ಕಿಮೀ 20.00 ರಿಂದ 67.00 ರವರೆಗೆ ಬರುತ್ತದೆ. ಈ ರಸ್ತೆಯ ಕಿಮೀ 20.00 ರಿಂದ 35.00 ರವರೆಗೆ ಗುಂಡಿ ಮುಚ್ಚಲು ಕ್ರಮ ಕೈಗೊಂಡಿದೆ. ಹಾಗೂ ಕಿಮೀ 35.00 ರಿಂದ 67.00 ವರೆಗೆ ಬಿದ್ದಿರುವ ಗುಂಡಿಗಳನ್ನು ಮುಚ್ಚುವ ಕೆಲಸ ಪ್ರಗತಿಯಲ್ಲಿರುತ್ತದೆ.

700(1371) : ಶ್ರೀ ಬಾಲಕೃಷ್ಣ ಹೆಚ್.ಸಿ. (ಮಾಗಡಿ) : ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮಾಗಡಿ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಗೆ ಬರುವ ಸಾವನದುರ್ಗ ಅರಣ್ಯವನ್ನು ರಕ್ಷಣೆ ಮಾಡಲಾಗುವುದೇ;

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮವೇನು?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ಬೆಂಗಳೂರು ಗ್ರಾಮಾಂತರ ವಿಭಾಗ ವ್ಯಾಪ್ತಿಯ ಮಾಗಡಿ ವಲಯದ ಸಾವನದುರ್ಗ ಅರಣ್ಯವನ್ನು ಸಂಪೂರ್ಣವಾಗಿ ರಕ್ಷಣೆ ಮಾಡುವಲ್ಲಿ ಅವಶ್ಯ ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಆ) ಸಾವನದುರ್ಗ ಅರಣ್ಯ ಪ್ರದೇಶವನ್ನು ರಕ್ಷಣೆ ಮಾಡಲು ಅವಶ್ಯ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಸದರಿ ಸಿಬ್ಬಂದಿಯು ಸಾವನದುರ್ಗ ಅರಣ್ಯ ಪ್ರದೇಶದಲ್ಲಿ ಗಸ್ತು ತಿರುಗಿ, ಅರಣ್ಯ ಅಪರಾಧ ಪ್ರಕರಣಗಳನ್ನು ತಡೆಗಟ್ಟುವಲ್ಲಿ ತನ್ಮೂಲಕ ಅರಣ್ಯ ಹಾಗೂ ವನ್ಯಪ್ರಾಣಿ ಸಂಪತ್ತನ್ನು ಸಂರಕ್ಷಿಸಿ ಬೆಳೆಸುವಲ್ಲಿ ಎಲ್ಲಾ ಅವಶ್ಯ ಕ್ರಮ ಕೈಗೊಳ್ಳಲಾಗುತ್ತಿದೆ. ಮುಂದುವರೆದು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ಗ್ರಾಮಾಂತರ ಉಪ ವಿಭಾಗ ಹಾಗೂ ವಲಯ ಅರಣ್ಯಾಧಿಕಾರಿ, ಮಾಗಡಿ ವಲಯ ಇವರುಗಳು ಆಗಿಂದಾಗ್ಗೆ ಸಾವನದುರ್ಗ ಅರಣ್ಯ ಪ್ರದೇಶದಲ್ಲಿ ತಪಾಸಣೆ ಕಾರ್ಯ ಕೈಗೊಂಡು ಸಿಬ್ಬಂದಿಗಳಿಗೆ ಸೂಕ್ತ ನಿರ್ದೇಶನ ನೀಡುತ್ತಿದ್ದಾರೆ. ಅರಣ್ಯಗಳಿಗೆ ಹೊಂದಿಕೊಂಡಿರುವ ಗ್ರಾಮಗಳಲ್ಲಿ ವಾಸಿಸುವ ಜನರು ಅರಣ್ಯಗಳ ಸಂರಕ್ಷಣೆ ಯೋಜನೆ, ಪುನರ್ ನಿರ್ಮಾಣ ಅಭಿವೃದ್ಧಿ ಮತ್ತು ನಿರ್ವಹಣೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕೆಂಬ ದೃಷ್ಟಿಯಿಂದ ಜಂಟಿ ಅರಣ್ಯ ಯೋಜನೆ ಮತ್ತು ನಿರ್ವಹಣೆ ಕಾರ್ಯಕ್ರಮದಡಿಯಲ್ಲಿ ಸಾವನದುರ್ಗ ಗ್ರಾಮ ಅರಣ್ಯ ಸಮಿತಿಯನ್ನು ರಚಿಸಿ ನೋಂದಾಯಿಸಲಾಗಿದೆ. ಸದರಿ ಗ್ರಾಮ ಸಮಿತಿಯು ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿದ್ದು ರಾಷ್ಟ್ರೀಯ ಅರಣ್ಯೀಕರಣ ಯೋಜನೆಯಡಿ ಅರಣ್ಯೀಕರಣದ ಹಾಗೂ ಪ್ರಾರಂಭಿಕ ಹಂತದ ಚಟುವಟಿಕೆಗಳನ್ನು ಕೈಗೊಳ್ಳುತ್ತಿದೆ.

701(1160) : ಶ್ರೀ ಭರಮಗೌಡ ಆಲಗೌಡ ಕಾಗೆ (ಕಾಗವಾಡ) : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೆ.ಪಿ.ಟಿ.ಸಿ.ಎಲ್. ನಿಗಮದಿಂದ ರೈತರ ನೀರಾವರಿ ಪಂಪ್ ಸೆಟ್‌ಗಳ ಅಕ್ರಮ-ಸಕ್ರಮಕ್ಕೆ ಎಷ್ಟು ಹಣವನ್ನು ನಿಗಧಿಪಡಿಸಲಾಗಿದೆ;

ಆ) ನಿಗಧಿ ಪಡಿಸಿರುವ ಮೊತ್ತ ಕಟ್ಟಲು ರೈತರಿಗೆ ದುಬಾರಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಬಗ್ಗೆ ಸರ್ಕಾರದ ಮುಂದಿನ ಕ್ರಮವೇನು?

ಶ್ರೀ ಹೆಚ್.ಡಿ. ರೇವಣ್ಣ(ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಪ್ರಸ್ತುತ ಅನಧಿಕೃತ ನೀರಾವರಿ ಪಂಪು ಸೆಟ್ಟು ಸ್ಥಾವರಗಳನ್ನು ನಿಮ್ಮದೇ ಆದ ಸ್ವಂತ ಟ್ರಾನ್ಸ್‌ಫಾರ್ಮರನ್ನು ಹೊಂದಿ (ಓವೈಟಿ) ಯೋಜನೆಯಡಿ ಸಕ್ರಮೀಕರಣಗೊಳಿಸಿಕೊಳ್ಳಲು ಅವಕಾಶವನ್ನು ಕಲ್ಪಿಸಲಾಗಿರುತ್ತದೆ. ಸಕ್ರಮೀಕರಣಕ್ಕಾಗಿ ನಿಗಧಿಪಡಿಸಿರುವ ಶುಲ್ಕ ಪ್ರತಿಯೊಂದು ಅನಧಿಕೃತ ನೀರಾವರಿ ಪಂಪುಸೆಟ್ಟಿಗೆ ರೂ 25,000/-

ಆ) ಹಲವಾರು ಸಂದರ್ಭಗಳಲ್ಲಿ ಈ ವಿಷಯವನ್ನು ಜನಪ್ರತಿನಿಧಿಗಳು ಸರ್ಕಾರದ ಗಮನಕ್ಕೆ ತಂದಿರುತ್ತಾರೆ. ಓವೈಟಿ ಯೋಜನೆಯಡಿ ಅನಧಿಕೃತ ನೀರಾವರಿ ಪಂಪು ಸೆಟ್ಟುಗಳ ಸಕ್ರಮೀಕರಣಕ್ಕೆ ರೈತರಿಂದ ಬಹಳ ನೀರಸ ಪ್ರತಿಕ್ರಿಯೆ ಬಂದಿರುತ್ತದೆ. ಈ ಹಿನ್ನೆಲೆಯಲ್ಲಿ ಅನಧಿಕೃತ ನೀರಾವರಿ ಪಂಪುಸೆಟ್ಟುಗಳ ಸಕ್ರಮೀಕರಣಕ್ಕೆ ಓವೈಟಿ ಯೋಜನೆಗೆ ಬದಲಾಗಿ ಇನ್ನೊಂದು ಹೊಸ ಪ್ರಸ್ತಾವನೆಯು ಈಗ ಸರ್ಕಾರದ ಪರಿಶೀಲನೆಯಲ್ಲಿದೆ.

702(1161) ಶ್ರೀ ಭರಮಗೌಡ (ರಾಜು) ಆಲಗೌಡ ಕಾಗೆ (ಕಾಗವಾಡ) : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಕೆ.ಪಿ.ಟಿ.ಸಿ.ಎಲ್. ನಿಗಮದಿಂದ ದಿನಾಂಕ 31-3-2001 ರಿಂದ 01-03-2003 ರವರೆಗೆ, 10 ಅಶ್ವಶಕ್ತಿ ಉಪಯೋಗಿಸುತ್ತಿರುವ ರೈತರಿಗೆ ವಿದ್ಯುತ್ ಬಿಲ್ಲನ್ನು ಮನ್ನಾ ಮಾಡಲಾಗಿದೆಯೇ;

ಆ) ಸಹಕಾರಿ ಸಂಘಗಳನ್ನು ಮಾಡಿಕೊಂಡು 10 ಅಶ್ವಶಕ್ತಿಗಿಂತ ಹೆಚ್ಚಾಗಿ ವಿದ್ಯುತ್‌ನ್ನು ಉಪಯೋಗಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಸಂಘದ ಸದಸ್ಯರುಗಳು ಅತಿ ಸಣ್ಣ ರೈತರೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) 10 ಅಶ್ವಶಕ್ತಿಗಿಂತ ಹೆಚ್ಚು ವಿದ್ಯುತ್ ಬಳಸುತ್ತಿರುವ ಸಹಕಾರ ಸಂಘಗಳಿಗೆ ವಿದ್ಯುತ್ ಮನ್ನಾ ಮಾಡುವ ಯೋಜನೆ ಸರ್ಕಾರದ ಗಮನದಲ್ಲಿದೆಯೇ?

ಶ್ರೀ ಹೆಚ್.ಡಿ. ರೇವಣ್ಣ(ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಹೌದು. ಸರ್ಕಾರದ ದಿನಾಂಕ 21-02-2004ರ ಆದೇಶದನ್ವಯ 10 ಅಶ್ವಶಕ್ತಿವರೆಗಿನ ನೀರಾವರಿ ಪಂಪುಸೆಟ್ಟುಗಳನ್ನು ಹೊಂದಿರುವ ರೈತರ ದಿನಾಂಕ 31-03-2003ರ ಅಂತ್ಯದವರೆಗಿನ ವಿದ್ಯುತ್ ಬಾಕಿಯನ್ನು ಮನ್ನಾ ಮಾಡಲಾಗಿದೆ.

ಆ) ರಾಜ್ಯದಲ್ಲಿ ಸಹಕಾರಿ ಸಂಘಗಳನ್ನು ಮಾಡಿಕೊಂಡು ಸಾಮೂಹಿಕ ಏತ ನೀರಾವರಿ ಯೋಜನೆಗಳನ್ನು ರೈತರು ಹೊಂದಿರುವುದು ಸರ್ಕಾರದ ಗಮನಕ್ಕೆ ಬಂದಿದ್ದು, ಅದರಲ್ಲಿಯೂ ವಿಶೇಷವಾಗಿ ಬೆಳಗಾವಿ, ಬಾಗಲಕೋಟೆ ಹಾಗೂ ಬಿಜಾಪುರ ಜಿಲ್ಲೆಗಳಲ್ಲಿ ಇಂತಹ ಸಹಕಾರಿ ಸಂಘಗಳ ಸಂಖ್ಯೆಗಳು ಹೆಚ್ಚಾಗಿರುತ್ತದೆ. ಸಾಮಾನ್ಯವಾಗಿ ಇಂತಹ ಸಹಕಾರಿ ಸಂಘಗಳು, ಸಣ್ಣ ರೈತರುಗಳು ಮಾಡಿಕೊಂಡಿರುವ ಸಹಕಾರಿ ಸಂಘಗಳಾಗಿರುತ್ತವೆ.

ಇ) ಇಂತಹ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

703(1162) : ಶ್ರೀ ಭರಮಗೌಡ (ರಾಜು) ಅಲಗೌಡ ಕಾಗೆ (ಕಾಗವಾಡ) : ಮಾನ್ಯ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ಯುವಜನ ಸೇವೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 2004-05ನೇ ಸಾಲಿನಲ್ಲಿ ಕಾಗವಾಡ ಮತ ಕ್ಷೇತ್ರದ ಎಷ್ಟು ಗಂಗಾಕಲ್ಯಾಣ ಯೋಜನೆಯಡಿಯಲ್ಲಿ ಅನುಮೋದನೆ ನೀಡಲಾಗಿದೆ; ಹಾಗೂ ಇತರ ತಾಲ್ಲೂಕುಗಳಿಗೆ ಈ ಯೋಜನೆಯಡಿ ನೀಡಿರುವ ಅನುಮೋದನೆಗಳ ವಿವರಗಳನ್ನು ಒದಗಿಸುವುದು;

ಆ) 2004-05ನೇ ಸಾಲಿನಲ್ಲಿ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಯಾವ ಯಾವ ಅಭಿವೃದ್ಧಿ ಕಾರ್ಯಗಳನ್ನು ಕೈಗೆತ್ತಿ ಕೊಳ್ಳಲಾಗಿದೆ(ವಿವರಗಳನ್ನು ತಾಲ್ಲೂಕುವಾರು ಒದಗಿಸುವುದು)?

ಶ್ರೀ ಜಬ್ಬಾರ್ ಖಾನ್ ಹೊನ್ನಳ್ಳಿ(ಅಲ್ಪಸಂಖ್ಯಾತರ ಕಲ್ಯಾಣ ಮತ್ತು ಯುವಜನ ಸೇವೆ ಸಚಿವರು)

ಅ) 2004-05ನೇ ಸಾಲಿನಲ್ಲಿ ಕಾಗವಾಡ ಮತ ಕ್ಷೇತ್ರದಲ್ಲಿ ವೈಯಕ್ತಿಕ ಕೊಳವೆ ಬಾವಿ ಯೋಜನೆಯಡಿ 2 ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದ್ದು, ಇದಲ್ಲದೇ 7 ಏತ ನೀರಾವರಿ ಯೋಜನೆಗೆ ಫಲಾನುಭವಿಗಳನ್ನು ತಾಲ್ಲೂಕು ಸಮಿತಿಯಿಂದ ಆಯ್ಕೆ ಮಾಡಲಾಗಿದೆ.

ಈ ಕೆಳಕಂಡ ತಾಲ್ಲೂಕುಗಳಿಗೆ ಗುರಿಯನ್ನು ನಿಗಧಿಪಡಿಸಿದ್ದು, ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದ್ದು, ಕೊಳವೆ ಬಾವಿಗಳನ್ನು ಕೊರೆಸಬೇಕಾಗಿದೆ.

ತಾಲ್ಲೂಕು ಗಂಗಾ ಕಲ್ಯಾಣ ಯೋಜನೆ

	ವೈ.ಕೊ.	ಸಾ.ಕೊ.
ಅಥಣಿ	4	–
ಚಿಕ್ಕೋಡಿ	4	–
ರಾಯಭಾಗ	2	–
ಹುಕ್ಕೇರಿ	4	–
ಗೋಕಾಕ್	2	–
ಬೈಲಹೊಂಗಲ	2	–
ಸವದತ್ತಿ	2	–
ರಾಮದುರ್ಗ	2	–
ಖಾನಾಪುರ	2	1
ಬೆಳಗಾವಿ	2	–
ಒಟ್ಟು	26	1

ಆ) 2004-05ನೇ ಸಾಲಿನಲ್ಲಿ ಅಲ್ಪ ಸಂಖ್ಯಾತ ಅಭಿವೃದ್ಧಿ ನಿಗಮದಿಂದ ಕೈಗೊಂಡ ಯೋಜನೆಗಳ ತಾಲ್ಲೂಕು ವಾರು ವಿವರ ಈ ಕೆಳಗಿನಂತಿದೆ :

ತಾಲ್ಲೂಕು	ಸ್ಥಾವ ಲಂಬನಾ ಸಾಲ	ಅರಿವು ಸಾಲ	ಗಂಗಾಕಲ್ಯಾಣ ಯೋಜನೆ ಮೈಕೊ	ಸಾಕೊ
ಅಥಣಿ	3	2	4	–
ಚಿಕ್ಕೋಡಿ	8	5	4	–
ರಾಯಬಾಗ್	6	1	2	–
ಹುಕ್ಕೇರಿ	6	–	4	–
ಗೋಕಾಕ್	4	–	2	–
ಬೈಲಹೊಂಗಲ	–	1	2	–
ಸವದತ್ತಿ	4	–	2	–
ರಾಮದುರ್ಗ	5	2	2	–
ಖಾನಾಪುರ	7	–	2	1
ಬೆಳಗಾವಿ	35	1	2	–
ಒಟ್ಟು	78	12	26	1

704(1163) ಶ್ರೀ ಭರಮಗೌಡ (ರಾಜು) ಅಲಗೌಡ ಕಾಗೆ (ಕಾಗವಾಡ) : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಜೇವರ್ಗಿ-ಸಂಕೇಶ್ವರ ರಾಷ್ಟ್ರೀಯ ಹೆದ್ದಾರಿ ಕಾಮಗಾರಿಯು ಯಾವ ಹಂತದಲ್ಲಿದೆ:

ಆ) ಕಾಗವಾಡದಿಂದ ಚಿಕ್ಕೋಡಿಯವರೆಗೆ ರಸ್ತೆ ಹದಗೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಇ) ಬಂದಿದ್ದಲ್ಲಿ, ಸದರಿ ಕಾಮಗಾರಿಯನ್ನು ಆದಷ್ಟು ತೀವ್ರಗತಿಯಲ್ಲಿ ಕೈಗೊಳ್ಳಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಬಿಜಾಪುರದಿಂದ ಸಂಕೇಶ್ವರದವರೆಗಿನ ರಾಜ್ಯ ಹೆದ್ದಾರಿಯನ್ನು (ತಿಕೋಟಾ-ಅಥಣಿ-ಶೇಡ್‌ಬಾಳ್-ಚಿಕ್ಕೋಡಿ ಮೂಲಕ) ವಿಶ್ವಬ್ಯಾಂಕ್ ಸಾಲದ ನೆರವಿನಡಿಯಲ್ಲಿ ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆಯಿಂದ ಅಭಿವೃದ್ಧಿಗೊಳಿಸಲಾಗುತ್ತಿದೆ. ಬಿಜಾಪುರದಿಂದ ಸಂಕೇಶ್ವರದವರೆಗಿನ ರಸ್ತೆಯನ್ನು ನಾಲ್ಕು ಕಾಮಗಾರಿಗಳನ್ನಾಗಿ ಭಾಗ ಮಾಡಿದ್ದು ಒಟ್ಟು 150 ಕಿಮಿ. ಕಾಮಗಾರಿ ಭಾಗಶಃ ಮುಗಿದಿದೆ.

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ವತಿಯಿಂದ ಜೇವರ್ಗಿ-ಸಂಕೇಶ್ವರ ರಾಜ್ಯ ಹೆದ್ದಾರಿಯ ಜೇವರ್ಗಿಯಿಂದ-ಬಿಜಾಪುರವರೆಗಿನ 119.00 ಕಿಮೀ. ರಸ್ತೆಯ ಭಾಗದ ಅಗಲೀಕರಣ ಮತ್ತು ಬಲಪಡಿಸುವ ಕಾರ್ಯವನ್ನು ತೆಗೆದುಕೊಳ್ಳಲಾಗಿದೆ. ಈ 119.00 ಕಿಮೀ. ರಸ್ತೆಯ ಅಭಿವೃದ್ಧಿಯನ್ನು ನಾಲ್ಕು ಪ್ಯಾಕೇಜುಗಳಲ್ಲಿ ತೆಗೆದುಕೊಳ್ಳಲಾಗಿದೆ.

ಪ್ಯಾಕೇಜ್	ವಿವರ	ರಸ್ತೆಯ ಉದ್ದ (ಕಿಮೀ.) ಗಳಲ್ಲಿ	ಸಧ್ಯದ ಹಂತ
1	ಜೇವರಗಿಯಿಂದ ಮೊರಟಗಿವರೆಗೆ	36.80	ಈ ಪ್ಯಾಕೇಜಿನ ಕಾಮಗಾರಿ ಗಳು ಮುಕ್ತಾಯಗೊಂಡಿವೆ
2	ಮೊರಟಗಿಯಿಂದ ಸಿಂಧಗಿವರೆಗೆ	22.20	ಕಾಮಗಾರಿ ಪ್ರಗತಿಯಲ್ಲಿದ್ದು, ಮೇ 2005ರಲ್ಲಿ ಮುಕ್ತಾಯಗೊಳ್ಳುವುದು.
3	ಸಿಂಧಗಿಯಿಂದ ದೇವರ ಹಿಪ್ಪರಗಿಯಿಂದ ಬಿಜಾಪುರದವರೆಗೆ	31.00	ಈ ಕಾಮಗಾರಿಯು ಪ್ರಗತಿ ಯಲ್ಲಿದ್ದು, ಡಿಸೆಂಬರ್ 2005 ರಲ್ಲಿ ಮುಕ್ತಾಯಗೊಳ್ಳುವುದು.
4	ದೇವರಹಿಪ್ಪರಗಿವರೆಗೆ	29.00	ಈ ಕಾಮಗಾರಿಯು ಪ್ರಗತಿಯಲ್ಲಿದ್ದು, ಡಿಸೆಂಬರ್ 2005 ರಲ್ಲಿ ಮುಕ್ತಾಯಗೊಳ್ಳುವುದು.

ಆ) ಸರ್ಕಾರದ ಗಮನಕ್ಕೆ ಬಂದಿದೆ.

ಇ) ಇದರ ಪರಿಹಾರಕ್ಕೆ ಕಾಗವಾಡದಿಂದ ಚಿಕ್ಕೋಡಿಯವರೆಗಿನ 34 ಕಿಮೀ. ರಸ್ತೆಯ ಉದ್ದದಲ್ಲಿ ಈಗಾಗಲೇ 24.57 ಕಿಮೀ. ಉದ್ದವು (Bituminous Macadam) ಮುಗಿದಿದ್ದು ಉಳಿದ ಭಾಗದ ರಸ್ತೆಯನ್ನು ನಾಲ್ಕು ತಿಂಗಳಲ್ಲಿ ಪೂರ್ಣಗೊಳಿಸಲಾಗುವುದು.

705(92) ಶ್ರೀ ಬಸವರಾಜು ಎ.ಎಸ್. (ಅರಸೀಕೆರೆ) : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ ರಸ್ತೆ ಅಭಿವೃದ್ಧಿ ಕಾರ್ಯದಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ಎಷ್ಟು ಕಿ.ಮೀ. ರಸ್ತೆ ಈವರೆಗೆ ದುರಸ್ಥಿ ಹಾಗೂ ನಿರ್ಮಾಣ ಮಾಡಲಾಗಿದೆ ಹಾಗೂ ಎಷ್ಟು ಕಿ.ಮೀ. ರಸ್ತೆಗಳ ದುರಸ್ಥಿ ಹಾಗೂ ನಿರ್ಮಾಣ ಮಾಡಬೇಕಿದೆ;

ಆ) ಈ ವರ್ಷ ರಾಜ್ಯದ ನಗರ ಪ್ರದೇಶದಲ್ಲಿ ಎಷ್ಟು ಕಿ.ಮೀ. ರಸ್ತೆಯನ್ನು ದುರಸ್ಥಿ ಮಾಡಲಾಗಿದೆ ಹಾಗೂ ಇನ್ನು ಮಾಡಬೇಕಾದ ರಸ್ತೆಗಳ ಉದ್ದ ಎಷ್ಟು;

ಇ) ಅತೀ ಹೆಚ್ಚು ವಾಹನಗಳ ಓಡಾಟದಿಂದ ಬೇಗ ಹಾಳಾಗುವ ರಸ್ತೆಗಳನ್ನು ಡಾಂಬರೀಕರಣದ ಬದಲು ಸಿಮೆಂಟ್ ರಸ್ತೆಗಳನ್ನು ಮಾಡುವ ಯೋಜನೆ ಸರ್ಕಾರಕ್ಕೆ ಇದೆಯೇ?

ಶ್ರೀ ಹೆಚ್.ಡಿ. ರೇವಣ್ಣ(ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಗ್ರಾಮಾಂತರ ಪ್ರದೇಶದಲ್ಲಿ ಲೋಕೋಪಯೋಗಿ ಇಲಾಖೆಯಿಂದ 16353 ಕಿಮೀ. ರಸ್ತೆಗಳ ದುರಸ್ಥಿ ಮಾಡಲಾಗಿದೆ ಹಾಗೂ 4740 ಕಿಮೀ. ರಸ್ತೆಗಳ ದುರಸ್ಥಿ ಕಾರ್ಯ ಪ್ರಗತಿಯಲ್ಲಿದೆ.

ಆ) ಈ ವರ್ಷ ನಗರ ಪ್ರದೇಶದಲ್ಲಿ 735 ಕಿಮೀ. ರಸ್ತೆ ದುರಸ್ಥಿ ಮಾಡಲಾಗಿದೆ ಹಾಗೂ ಬಾಕಿ 61 ಕಿಮೀ. ರಸ್ತೆ ದುರಸ್ಥಿ ಕಾರ್ಯ ಪ್ರಗತಿಯಲ್ಲಿದೆ. ನಗರ ಪ್ರದೇಶದ ಇತರೆ ರಸ್ತೆ ನಿರ್ವಹಣೆಯನ್ನು ನಗರ ಸಭೆ ಹಾಗೂ ನಗರ ಮಹಾಪಾಲಿಕೆಗಳು ಕೈಗೊಳ್ಳುತ್ತವೆ.

ಇ) ಸಧ್ಯಕ್ಕೆ ಯಾವುದೇ ಪ್ರಸ್ತಾವನೆ ಇರುವುದಿಲ್ಲ.

706(93) : ಶ್ರೀ ಬಸವರಾಜು ಎ.ಎಸ್. (ಅರಸೀಕೆರೆ) : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಸೌರಶಕ್ತಿ ಗ್ರಾಮಗಳನ್ನು ರಚನೆ ಮಾಡಲು ಸರ್ಕಾರ ಮುಂದಾಗಿದೆಯೇ;

ಆ) ಅದಕ್ಕೆ ಯಾವ ಯಾವ ಗ್ರಾಮಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ ಮತ್ತು ಇದಕ್ಕೆ ತಗಲುವ ವೆಚ್ಚ ಎಷ್ಟು;

ಇ) ಈ ಯೋಜನೆ ಪೂರ್ಣಗೊಳ್ಳಲು ಕಾಲಮಿತಿಯನ್ನು ಮಾಡಿಕೊಳ್ಳಲಾಗಿದೆಯೇ;

ಈ) ಸದರಿ ಯೋಜನೆಯು ಈಗಾಗಲೇ ರಾಜ್ಯದ ಎಲ್ಲಾ ಕಡೆ ಅನುಷ್ಠಾನಗೊಂಡಿದೆಯೆ;

ಉ) ಇದರನ್ವಯ ವಿದ್ಯುತ್ ಸಂಪರ್ಕ ಹೊಂದಿಲ್ಲದ ಗ್ರಾಮಗಳ ಸಂಖ್ಯೆ ಮನೆಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ವಿವರ ನೀಡಿ)

ಊ) ಇಂತಹ ಸೌಲಭ್ಯವಿಲ್ಲದ ಗ್ರಾಮಗಳಿಗೆ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದೇ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಹೌದು.

ಅ) ಅನುಬಂಧ–1ರಲ್ಲಿ ವಿವರಗಳನ್ನು ಸಲ್ಲಿಸಿದೆ.

ಇ) ಹೌದು, ಅನುಬಂಧ 1ರಲ್ಲಿ ತಿಳಿಸಿದ 1 ರಿಂದ 10 ಗ್ರಾಮಗಳು ಈಗಾಗಲೇ ಸೌರಶಕ್ತಿಯಿಂದ ವಿದ್ಯುದ್ದೀಕರಣಗೊಂಡಿರುತ್ತದೆ. 11ನೇ ಗ್ರಾಮವು ಫೆಬ್ರವರಿಯ ಕೊನೆಯ ವಾರದಲ್ಲಿ ಸೌರಶಕ್ತಿಯಿಂದ ವಿದ್ಯುದ್ದೀಕರಣಗೊಳ್ಳುತ್ತದೆ.

ಈ) ಸದರಿ ಯೋಜನೆಯನ್ನು ರಾಜ್ಯದ 8 ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗಿದೆ. ವಿವರ ಅನುಬಂಧ 1 ರಲ್ಲಿದೆ.

ಉ) ಅನುಬಂಧ–2 ರಲ್ಲಿ ವಿವರಗಳನ್ನು ಸಲ್ಲಿಸಿದೆ.

ಊ) ಹೌದು, ಅಸಂಪ್ರದಾಯಕ ಇಂಧನ ಮೂಲಗಳ ಮಂತ್ರಾಲಯ, ನವದೆಹಲಿ ಇವರು 2012 ನೇ ಇಸವಿಯೊಳಗೆ ವಿದ್ಯುದ್ದೀಕರಣಗೊಳ್ಳದ ಎಲ್ಲಾ ಗ್ರಾಮಗಳು/ಮಜಿರೆಗಳನ್ನೂ ನವೀಕರಿಸಬಹುದಾದ ಇಂಧನ ಮೂಲಗಳಿಂದ ವಿದ್ಯುದ್ದೀಕರಣಗೊಳಿಸಲು ಯೋಜನೆಯನ್ನು ಹಾಕಿಕೊಂಡಿದೆ. ಇದಕ್ಕೆ ತಗಲುವ ಒಟ್ಟು ವೆಚ್ಚದಲ್ಲಿ ಶೇ 90 ರಷ್ಟು ಹಣವನ್ನು ಅವರು ಭರಿಸುತ್ತಾರೆ ಇನ್ನುಳಿದ ಶೇ 10 ರಷ್ಟು ಹಣವನ್ನು ರಾಜ್ಯ ಸರ್ಕಾರವು ಭರಿಸಬೇಕಾಗುತ್ತದೆ. ಈ ಕಾರ್ಯಕ್ಕೆ ನಿರ್ದಿಷ್ಟ ಕಾರ್ಯಕ್ರಮವನ್ನು ಹಮ್ಮಿಕೊಂಡು 2005–06ನೇ ಸಾಲಿಗೆ 1000 ಮಜಿರೆಗಳನ್ನು ಅಸಂಪ್ರದಾಯಕ ಇಂಧನ ಮೂಲಗಳಿಂದ ವಿದ್ಯುದ್ದೀಕರಣ ಗೊಳಿಸಲು ಯೋಜಿಸಲಾಗಿದೆ. ಉಳಿದ ಮಜಿರೆಗಳನ್ನು ಕ್ರಮೇಣ ಮುಂಬರುವ ವರ್ಷಗಳಲ್ಲಿ ಕೈಗೆತ್ತಿಕೊಳ್ಳಲಾಗುವುದು.

ಅನುಬಂಧ-1

ಕ್ರಮ ಸಂ.	ಗ್ರಾಮದ ಹೆಸರು	ಜಿಲ್ಲೆಯ ಹೆಸರು	ಸೌರಶಕ್ತಿ ಮನೆದೀಪಗಳನ್ನು ಅಳವಡಿಸಿದ ಸಂಖ್ಯೆ	ಸೌರಶಕ್ತಿ ಬೀದಿ ದೀಪಗಳನ್ನು ಅಳವಡಿಸಿದ ಸಂಖ್ಯೆ	ಯೋಜನೆಯ ಒಟ್ಟು ಮೊತ್ತ(ರೂ)
1	ಹೆಚ್. ಕೋಡಿ ಹಳ್ಳಿ.	ಮಂಡ್ಯ	211	15	21,47,400/-
2	ಬೋಡ ಬಂದ,	ಗುಲ್ಬರ್ಗಾ	210	15	21,39,000/-
3	ಕೋಲೂರು ಗ್ರಾಮ,	ರಾಯಚೂರು	85	15	10,89,000/-
4	ಹೆಮ್ಮಕ್ಕಿ ಗ್ರಾಮ,	ಚಿಕ್ಕಮಗಳೂರು	87	10	9,80,800/-
5	ಹರದನ ಹಳ್ಳಿ,	ಹಾಸನ	150	20	17,60,000/-
6	ಕೂಡಲಗಿ,	ಗುಲ್ಬರ್ಗಾ	125	10	13,00,000/-
7	ಕಬ್ಬತ್ತಿ,	ಹಾಸನ	168	20	19,11,200/-
8	ಕವನಪುರ,	ಬೆಂಗಳೂರು ಗ್ರಾಮಾಂತರ	300	15	28,95,000/-
9	ಕಾರವಾರದ ಮಜಿರೆಗಳು (ಅತುಗ, ಕುಚೆಗಾರ್ ಮತ್ತು ಕೋದರ್)	ಕಾರವಾರ	84	10	9,55,600/-
10	ಉರಗಹಳ್ಳಿ,	ಬೆಂಗಳೂರು ಗ್ರಾಮಾಂತರ	160	05	14,69,000/-
11	ಬಾಳೇನಹಳ್ಳಿ,	ಚಿತ್ರದುರ್ಗ	238	10	22,49,200/-
	ಒಟ್ಟು		1818	145	1,88,96,200/-

ಅನುಬಂಧ-2

ಕರ್ನಾಟಕ ರಾಜ್ಯದಲ್ಲಿ ವಿದ್ಯುತ್ ಸಂಪರ್ಕ ಇನ್ನೂ ಹೊಂದಿಲ್ಲಗ ಗ್ರಾಮಗಳ ಸಂಖ್ಯೆ ಒಟ್ಟು-22 ವಿವರಗಳು ಕೆಳಕಂಡಂತಿವೆ.

ಕ್ರಮ ಸಂಖ್ಯೆ	ಜಿಲ್ಲೆ	ಗ್ರಾಮಗಳ ಸಂಖ್ಯೆ	ಒಟ್ಟು ಮನೆಗಳ ಸಂಖ್ಯೆ
1.	ಮೈಸೂರು	2	25
2.	ಚಾಮರಾಜ ನಗರ	1	80

3.	ಉತ್ತರ ಕನ್ನಡ	15	623
4.	ಬೆಳಗಾಂ	4	71
	ಒಟ್ಟು	22	799

ವಿದ್ಯುತ್ ಸಂಪರ್ಕ ಹೊಂದಿಲ್ಲದ ಜಿಲ್ಲಾವಾರು ಮಜಿರೆಗಳ ವಿವರ ಕೆಳಕಂಡಂತಿದೆ.

ಕ್ರಮ ಸಂಖ್ಯೆ	ಜಿಲ್ಲೆ	ಮಜಿರೆಗಳ ಸಂಖ್ಯೆ
1	ಬೆಂಗಳೂರು ಗ್ರಾಮೀಣ	754
2	ಬೆಳಗಾಂ	255
3	ಬಳ್ಳಾರಿ	76
4	ಬಿಜಾಪುರ	218
5	ಚಾಮರಾಜ ನಗರ	149
6	ಚಿಕ್ಕಮಗಳೂರು	575
7	ಚಿತ್ರದುರ್ಗ	104
8	ದಕ್ಷಿಣ ಕನ್ನಡ	1029
9	ದಾವಣಗೆರೆ	104
10	ಧಾರವಾಡ	28
11	ಗುಲ್ಬರ್ಗಾ	265
12	ಹಾಸನ	1397
13	ಹಾವೇರಿ	05
14	ಕೊಡಗು	42
15	ಕೋಲಾರ	118
16	ಕೊಪ್ಪಳ	50
17	ಮಂಡ್ಯ	15
18	ಮೈಸೂರು	195
19	ರಾಯಚೂರು	580
20	ಶಿವಮೊಗ್ಗ	894
21	ತುಮಕೂರು	200
22	ಉಡುಪಿ	108
23	ಉತ್ತರ ಕನ್ನಡ	358
	ಒಟ್ಟು	**7519**

ಕರ್ನಾಟಕ ರಾಜ್ಯದಲ್ಲಿ ಒಟ್ಟು ಅಂದಾಜು 22 ಲಕ್ಷ ಮನೆಗಳು ವಿದ್ಯುದ್ದೀಕರಣ ಹೊಂದಿಲ್ಲದೆ ಇರುತ್ತವೆ.

ಮೇಲೆ ತಿಳಿಸಿದ ವಿವರಗಳಲ್ಲಿ ಮೈಸೂರು ಚಾಮರಾಜನಗರ ಮತ್ತು ಉತ್ತರ ಕನ್ನಡ ಜಿಲ್ಲೆಯ 18 ಗ್ರಾಮಗಳು ಮತ್ತು ಉತ್ತರ ಕನ್ನಡ ಜಿಲ್ಲೆಯ 8 ಮಜಿರೆಗಳನ್ನು ಸೌರಶಕ್ತಿಯಿಂದ ವಿದ್ಯುದ್ದೀಕರಣಗೊಳಿಸಲು ಅಸಂಪ್ರದಾಯಿಕ ಇಂಧನಮೂಲಗಳ ಮಂತ್ರಾಲಯ ನವದೆಹಲಿ, ಇವರಿಗೆ ಪ್ರಸ್ತಾವನೆಯನ್ನು ಕಳುಹಿಸಲಾಗಿದೆ. ಅವರಿಂದ ಅನುಮತಿ ಬಂದ ಕೂಡಲೇ ಈ ಕಾರ್ಯವನ್ನು 2004–05ನೇ ಸಾಲಿನಲ್ಲಿಯೇ ತೆಗೆದುಕೊಳ್ಳಲಾಗುವುದು.

707(97) : **ಶ್ರೀ ಬಸವರಾಜು ಎ.ಎಸ್. (ಅರಸೀಕೆರೆ)** : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಂದಾಯ ಭೂಮಿ ಕಾಯ್ದೆಗೆ ತಿದ್ದುಪಡಿ ತರಲು ಸರ್ಕಾರ ಚಿಂತಿಸುತ್ತಿದೆಯೇ; ತಿದ್ದುಪಡಿ ತರಲು ಕಾರಣಗಳೇನು;

ಆ) ಯಾವ ಯಾವ ವಿಚಾರಗಳಿಗೆ ಸಂಬಂಧಪಟ್ಟಂತೆ ತಿದ್ದುಪಡಿ ತರಲಾಗುವುದು;

ಇ) ಈ ರೀತಿ ತಿದ್ದುಪಡಿ ಮಾಡುವುದರಿಂದ ರೈತರು ಈಗಾಗಲೇ ಸಾಗುವಳಿ ಮಾಡುತ್ತಿರುವ ಭೂಮಿಯನ್ನು ಸರ್ಕಾರ ವಶಪಡಿಸಿಕೊಳ್ಳಬಹುದೆ;

ಈ) ಇದರಿಂದ ರೈತರಿಗೆ ಅನ್ಯಾಯ ಮಾಡಿದಂತಾಗುವುದಿಲ್ಲವೇ?

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು)

ಅ) ಇಲ್ಲ. ಉದ್ಭವಿಸುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

708(99) **ಶ್ರೀ ಬಸವರಾಜು ಎ.ಎಸ್. (ಅರಸೀಕೆರೆ)** : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮುಜರಾಯಿ ಕಾನೂನಿಗೆ ತಿದ್ದುಪಡಿ ತರಲು ಸರ್ಕಾರ ನಿರ್ಧರಿಸಿದೆಯೇ; ತಿದ್ದುಪಡಿಗೆ ಕಾರಣಗಳೇನು;

ಆ) ಯಾವ ವಿಚಾರಕ್ಕೆ ಸಂಬಂಧಪಟ್ಟಂತೆ ತಿದ್ದುಪಡಿ ತರಲಾಗುವುದು;

ಇ) ಹಾಲಿ ಇರುವ ಕಾನೂನಿನ ಚೌಕಟ್ಟಿನೊಳಗೆ ಬಡ ದೇವಸ್ಥಾನಗಳನ್ನು ಅಭಿವೃದ್ಧಿಗೊಳಿಸಲು ಸಾಧ್ಯವಿಲ್ಲವೇ;

ಈ) ಈ ಬಗ್ಗೆ ಸರ್ಕಾರದ ನಿಲುವೇನು?

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು)

ಅ) ಪರಿಶೀಲನೆಯಲ್ಲಿರುತ್ತದೆ. ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ 1997ನ್ನು ಸಮರ್ಪಕವಾಗಿ ಹಾಗೂ ಪರಿಣಾಮಕಾರಿಯಾಗಿ ಜಾರಿಗೊಳಿಸಲು ಉಂಟಾಗಿರುವ ತೊಂದರೆಗಳನ್ನು ನಿವಾರಿಸುವ ದೃಷ್ಟಿಯಿಂದ ತಿದ್ದುಪಡಿ ತರಲು ಉದ್ದೇಶಿಸಿದೆ;

ಆ) ಈ ಕೆಳಕಂಡ ವಿಚಾರಗಳಿಗೆ ಸಂಬಂಧಿಸಿದಂತೆ ತಿದ್ದುಪಡಿ ತರಲು ಪರಿಶೀಲಿಸಲಾಗುತ್ತಿದೆ:-

ಒಂದು ಪಂಗಡಕ್ಕೆ ಸೇರಿದ ಹಿಂದೂ ಧಾರ್ಮಿಕ ಸಂಸ್ಥೆಗಳ ವ್ಯಾಖ್ಯಾನ ರೂಪಿಸುವ ಕುರಿತು. ದೇವಾಲಯದ ನೌಕರರ ವಿರುದ್ಧ ಶಿಸ್ತು ಕ್ರಮ ಜರುಗಿಸುವ ಕುರಿತು, ಸಾಮಾನ್ಯ ಸಂಗ್ರಹಣಾ ನಿಧಿ ವ್ಯವಹರಣೆ, ಬಾಂಬೆ ಪಬ್ಲಿಕ್ ಟ್ರಸ್ಟ್ ಆಕ್ಟ್ 1950ಕ್ಕೆ ಒಳಪಟ್ಟ ಪ್ರದೇಶಗಳ ಸಂಸ್ಥೆಗಳನ್ನು ಅಧಿನಿಯಮ 1997ರಡಿ ಅಧಿಸೂಚಿತ ಸಂಸ್ಥೆಗಳ ಘೋಷಣೆ, ಆಡಳಿತ ಮಂಡಳಿ ರಚನೆ ಕುರಿತು. ಆಡಳಿತಾಧಿಕಾರಿ ಅವಧಿ ಕುರಿತು, ಶಿಕ್ಷಣ ಸಂಸ್ಥೆಗಳ ಸ್ಥಾಪನೆ ಮತ್ತು ನಿರ್ವಹಣೆ, ಶೈಕ್ಷಣಿಕ, ಧಾರ್ಮಿಕ ದತ್ತಿ ಶಿಕ್ಷಣ, ಆರೋಗ್ಯ ಮತ್ತಿತರ ಚಟುವಟಿಕೆಗಳಿಗೆ ದೇವಾಲಯದ ನಿಧಿ ಬಳಸುವ ಬಗ್ಗೆ, ದೇವಾಲಯದ ಅಭಿವೃದ್ಧಿ ಸಮಿತಿ, ಧಾರ್ಮಿಕ ಸಂಸ್ಥೆಗಳನ್ನು ದತ್ತು ಪಡೆಯುವ ಬಗ್ಗೆ ಮತ್ತು ಗುತ್ತಿಗೆ ಅವದಿಯ ಕುರಿತು.

ಇ) ವಾರ್ಷಿಕ ರೂ. 5,000 ಗಳಿಗಿಂತ ಕಡಿಮೆ ಆದಾಯವುಳ್ಳ ಅಧಿಸೂಚಿತ ಸಂಸ್ಥೆಯನ್ನು ಅಧಿಕ ಆದಾಯುವುಳ್ಳ ಬೇರೊಂದು ಅಧಿಸೂಚಿತ ಸಂಸ್ಥೆಯು ದತ್ತು ತೆಗೆದುಕೊಂಡು ಅಭಿವೃದ್ಧಿಪಡಿಸಲು ಕಾಯಿದೆಯಲ್ಲಿ ಅವಕಾಶ ಇದೆ.

ಈ) ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಪ್ರಶ್ನೆ ಉದ್ಭವಿಸುವುದಿಲ್ಲ.

710(1378) : ಶ್ರೀ ಬಸವರಾಜು ಹೆಚ್.ಡಿ. (ವಿರಾಜಪೇಟೆ) : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ವಿವಿಧ ವಿದ್ಯುತ್ ಸರಬರಾಜು ಕಂಪನಿಗಳಿಗೆ (ಕೆ.ಪಿ.ಟಿ.ಸಿ.ಎಲ್) ಕಳೇದ ಮೂರು ವರ್ಷಗಳಿಂದ ಗೃಹ ಬಳಕೆ ಹಾಗೂ ವಾಣಿಜ್ಯ ಕೈಗಾರಿಕೆಗಳಿಂದ ಬರಬೇಕಾಗಿರುವ ಬಾಕಿ ಮೊತ್ತ ಎಷ್ಟು (ಜಿಲ್ಲಾವಾರು ಹಾಗೂ ಕೊಡಗು ಜಿಲ್ಲೆಯ ತಾಲ್ಲೂಕುವಾರು ವಿವರ ನೀಡುವುದು);

ಆ) ಬರಬೇಕಾದ ಬಾಕಿ ಮೊತ್ತವನ್ನು ಪಡೆಯಲು ಸರ್ಕಾರ ಯಾವ ಯಾವ ಕ್ರಮ ಕೈಗೊಂಡಿದೆ;

ಇ) ಪಾವತಿಸದಿರುವವರ ವಿರುದ್ಧ ಸರ್ಕಾರದ ಕ್ರಮಗಳೇನು;

ಈ) ಇದರಿಂದಾಗಿ ಕೆ.ಪಿ.ಟಿ.ಸಿ.ಎಲ್.ಗೆ ನಷ್ಟವಾಗುತ್ತಿರುವ ಮೊತ್ತವೆಷ್ಟು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ರಾಜ್ಯದಲ್ಲಿರುವ ನಾಲ್ಕು ವಿದ್ಯುತ್ ಸರಬರಾಜು ಕಂಪನಿಗಳಿಗೆ ಕಳೆದ ಮೂರು ವರ್ಷಗಳಿಂದ ಗೃಹ ಬಳಕೆ, ವಾಣಿಜ್ಯ ಹಾಗೂ ಕೈಗಾರಿಕೆಗಳಿಂದ ಬರಬೇಕಿರುವ ಬಾಕಿ ಮೊತ್ತದ ವಿದ್ಯುತ್ ಸರಬರಾಜು ಕಂಪನಿವಾರು ವಿವರಗಳನ್ನು ಅನುಬಂಧ-1ರಲ್ಲಿ ಹಾಗೂ ಜಿಲ್ಲಾವಾರು ವಿವರಗಳನ್ನು ಮತ್ತು ಕೊಡಗು ಜಿಲ್ಲೆಯ ತಾಲ್ಲೂಕುವಾರು ಬಾಕಿಯ ವಿವರಗಳನ್ನು ಅನುಬಂಧ-2 ಒದಗಿಸಲಾಗಿದೆ.

ಆ) ಬರಬೇಕಾದ ಬಾಕಿ ಮೊತ್ತವನ್ನು ವಸೂಲಿ ಮಾಡಲು ಹಾಗೂ ಬಿಲ್ ಪಾವತಿಸದಿರುವವರ ವಿರುದ್ಧ ವಿದ್ಯುತ್ ಸರಬರಾಜು ಕಂಪನಿಗಳು ಈ ಕೆಳಕಂಡ ಕ್ರಮಗಳನ್ನು ತೆಗೆದುಕೊಂಡಿರುತ್ತವೆ.

ಇ) 1.ಕೆ.ಇ.ಆರ್.ಸಿ. ಸಪ್ಲೈ ಅಂಡ್ ಡಿಸ್ಟ್ರಿಬ್ಯೂಷನ್ ಕೋಡ್ 2000-01ರ ನಿಯಮ 29.07(ಅ) ರ ಪ್ರಕಾರ ಬಿಲ್ ನೀಡಿದ 15 ದಿನಗಳೊಳಗೆ ಹಣವನ್ನು ಪಾವತಿಸದಿದ್ದಲ್ಲಿ 7 ದಿನಗಳ ನೋಟೀಸ್ ಜಾರಿ ಮಾಡಿ. ಆಗಲೂ ಹಣ ಸಂದಾಯ ಮಾಡದಿದ್ದಲ್ಲಿ ಸ್ಥಾವರ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಲಾಗುವುದು.

2. ಒಂದು ವೇಳೆ ವಿದ್ಯುತ್ ಸಂಪರ್ಕ ಕಡಿತ ಮಾಡಿದ ಮೂರು ತಿಂಗಳ ನಂತರವೂ ಬಾಕಿ ಹಣ ಸಂದಾಯ ಮಾಡಿ ಪುನರ್ ಸಂಪರ್ಕ ಪಡೆಯದೇ ಇದ್ದಲ್ಲಿ ಅಂತಹ ಗ್ರಾಹಕರಿಗೆ ಮೂರು ತಿಂಗಳ ಅವಧಿಯ ಕರಾರು ಪತ್ರ ರದ್ದತಿಯ ನೋಟೀಸ್ ಜಾರಿ ಮಾಡಲಾಗುವುದು. ಆಗಲೂ ಗ್ರಾಹಕರು ಸ್ಪಂದಿಸದಿದ್ದಲ್ಲಿ ಕೆ.ಇ.ಆರ್.ಸಿ. ಸಪ್ಲೈ ಅಂಡ್ ಡಿಸ್ಟ್ರಿಬ್ಯೂಷನ್ ಕೋಡ್ 2000-01ರ ನಿಯಮ 32.08 ರಂತೆ ಅವರ ಕರಾರು ಪತ್ರವನ್ನು ರದ್ದುಗೊಳಿಸಿ ವಿದ್ಯುತ್ ಮಾರ್ಗವನ್ನು ತೆಗೆಯಲಾಗುವುದು.

3. ಕೆ.ಇ.ಆರ್.ಸಿ. ಸಪ್ಲೈ ಅಂಡ್ ಡಿಸ್ಟ್ರಿಬ್ಯೂಷನ್ ಕೋಡ್ 2000-01ರ ನಿಯಮ 41.00ರ ಪ್ರಕಾರ ಹಣವನ್ನು ಕಟ್ಟದೇ ಬಾಕಿ ಉಳಿಸಿಕೊಂಡಿರುವ ಗ್ರಾಹಕರಿಂದ ಬಾಕಿ ಹಣ ವಸೂಲು ಮಾಡಲು, ಬರಬೇಕಾಗಿರುವ ಬಾಕಿಯನ್ನು ಭೂ ಕಂದಾಯಯೆಂದು ಪರಿಗಣಿಸಿ ಸಿ ಭೂ ಕಂದಾಯ ವಸೂಲಾತಿ ಕಾನೂನು ಮತ್ತಿತರ ನಿಯಮಗಳಡಿಯಲ್ಲಿ ಕ್ರಮ ತೆಗೆದುಕೊಳ್ಳಲಾಗುವುದು.

ಈ) ಇದು ಬರಬೇಕಾದ ಬಾಕಿ ಮೊತ್ತವಾಗಿರುವುದರಿಂದ ಇದನ್ನು ನಷ್ಟವೆಂದು ಹೇಳಲು ಬರುವುದಿಲ್ಲ.

ಅನುಬಂಧ-1

ರಾಜ್ಯದಲ್ಲಿರುವ ನಾಲ್ಕು ವಿದ್ಯುತ್ ಸರಬರಾಜು ಕಂಪನಿಗಳಿಗೆ ಗೃಹಬಳಕೆ, ವಾಣಿಜ್ಯ ಮತ್ತು ಕೈಗಾರಿಕಾ ಗ್ರಾಹಕರಿಂದ ಬರಬೇಕಾಗಿರುವ ಬಾಕಿಮೊತ್ತ 2002-2003 ರಿಂದ 2004-05 ರವರೆಗೆ (ಡಿಸೆಂಬರ್-04ರ ಅಂತ್ಯಕ್ಕೆ)

(ರೂ.ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ಕಂಪನಿ	ಗೃಹಬಳಕೆ ಸ್ಥಾವರಗಳಿಂದ	ವಾಣಿಜ್ಯ ಸ್ಥಾವರಗಳಿಂದ	ಕೈಗಾರಿಕಾ ಸ್ಥಾವರಗಳಿಂದ	ಒಟ್ಟು
1	ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ				
	2002-03	12354.00	2265.00	5340.00	19959.00
	2002-03	15910.00	3519.00	5921.00	25350.00
	2004-05 (ಡಿಸೆಂಬರ್ 04ರ ಅಂತ್ಯಕ್ಕೆ)	21050.00	5866.00	7454.00	34370.00
2	ಮಂಗಳೂರು ವಿದ್ಯುತ್ ಸರಬರಾಜು ಕಂಪನಿ				
	2002-03	3916.46	736.88	2985.78	7639.12
2003-04	5667.68	865.64	3293.34	9826.66	
	2004-05 (ಡಿಸೆಂಬರ್ 04ರ ಅಂತ್ಯಕ್ಕೆ)	7467.19	982.41	3650.79	12100.39

3 ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ				
2002–03	5084.21	879.48	2096.05	8059.74
2003–04	6652.95	1075.63	2207:05	9935.63
2004–05 (ಡಿಸೆಂಬರ್ 04ರ ಅಂತ್ಯಕ್ಕೆ)	8663.17	1143,40	2513.10	12319.67
4 ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ				
2002–03	5865.23	861.01	815.06	7541.3
2003–04	7811.47	1035.79	902.53	9749.79
2004–05 (ಡಿಸೆಂಬರ್ 04ರ ಅಂತ್ಯಕ್ಕೆ)	9468.53	1114.09	937.91	11546.53

ಕಳೆದ ಮೂರು ವರ್ಷಗಳಿಂದ ಗೃಹ ಬಳಕೆ, ವಾಣಿಜ್ಯ ಹಾಗೂ ಕೈಗಾರಿಕಾ ಗ್ರಾಹಕರಿಂದ ಬರಬೇಕಾಗಿರುವ ಬಾಕಿ ಮೊತ್ತದ ಜಿಲ್ಲಾವಾರು ವಿವರ

(ರೂ. ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ಜಿಲ್ಲೆ	2002-03			2003-04			2004-05 (ಡಿಸೆಂಬರ್-04ರ ಅಂತ್ಯಕ್ಕೆ)		
		ಗೃಹ ಬಳಕೆ ಸ್ಥಾವರಗಳು	ವಾಣಿಜ್ಯ ಸ್ಥಾವರಗಳು	ಕೈಗಾರಿಕಾ ಸ್ಥಾವರಗಳು	ಗೃಹ ಬಳಕೆ ಸ್ಥಾವರಗಳು	ವಾಣಿಜ್ಯ ಸ್ಥಾವರಗಳು	ಕೈಗಾರಿಕಾ ಸ್ಥಾವರಗಳು	ಗೃಹ ಬಳಕೆ ಸ್ಥಾವರಗಳು	ವಾಣಿಜ್ಯ ಸ್ಥಾವರಗಳು	ಕೈಗಾರಿಕಾ ಸ್ಥಾವರಗಳು
ಅ)	**ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ:**									
1	ಬೆಂಗಳೂರು ನಗರ	5195.00	1461.00	2549.00	7682.00	2422.00	2900.00	8821.00	2491.00	2886.00
2	ಬೆಂಗಳೂರು ಗ್ರಾಮಾಂತರ	2203.00	285.00	855.00	2740.00	386.00	1062.00	3227.00	35.00	1009.00
3	ತುಮಕೂರು	1859.00	196.00	1022.00	2442.00	227.00	1045.00	3006.00	2889.00	2774.00
4	ಕೋಲಾರ	1376.00	122.00	406.00	171.00	140.00	399.00	2114.00	158.00	375.00
5	ದಾವಣಗೆರೆ	755.00	110.00	342.00	1486.00	237.00	326.00	2013.00	176.00	214.00
6	ಚಿತ್ರದುರ್ಗ	966.00	91.00	166.00	1389.00	107.00	189.00	1869.00	117.00	196.00
	ಕಂಪನಿ ಮೊತ್ತ	**12354.00**	**2265.00**	**5340.00**	**15910.00**	**3519.00**	**5921.00**	**21050.00**	**5866.00**	**7454.00**
ಆ)	**ಮಂಗಳೂರು ವಿದ್ಯುತ್ ಸರಬರಾಜು ಕಂಪನಿ:**									
1	ದಕ್ಷಿಣ ಕನ್ನಡ	370.43	176.39	340.7	444.86	197.71	379.41	465.42	233.68	255.09
2	ಉಡುಪಿ	151.11	48.02	96.54	208.13	60.75	88.16	300.89	61.48	84
3	ಶಿವಮೊಗ್ಗ	286.5	61.29	1850.78	603.32	74.53	2032.74	1148.44	89.9	2482.7
4	ಚಿಕ್ಕಮಗಳೂರು	246.19	48.18	45.09	382.86	54.03	47.15	477.52	64.76	40.42
5	ಮೈಸೂರು	808.12	145.29	209.82	1152.96	178.8	240.05	1391.18	196.04	280.29
6	ಚಾಮರಾಜನಗರ	286.85	30.87	39.96	484.16	38.84	43.33	649.14	59.35	67.18

7	ಮಂಡ್ಯ	937.8	117.75	280.74	1285.85	138.1	315.49	1718.02	143.9	327.23
8	ಹಾಸನ	678.06	69.78	105.94	923.83	823.02	129.51	1111.75	95.36	98.02
9	ಕೊಡಗು:	151.4	39.31	16.21	181.71	40.86	17.5	204.83	37.94	15.86
	ಕಂಪನಿ ಮೊತ್ತ	3916.46	736.88	2985.78	5667.68	865.64	3293.34	7467.19	982.41	3650.79
ಇ)	ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ									
1	ಧಾರವಾಡ	787.35	149.57	437.12	1039.88	169.29	540.94	1512.06	223.06	565.96
2	ಗದಗ	212.57	32.22	97.44	481.43	45.74	106.67	716.47	53.56	114.36
3	ಹಾವೇರಿ	520.32	53.33	64.94	573.75	60.42	148.81	349.14	68.64	197.68
4	ಉತ್ತರ ಕನ್ನಡ	192.53	33.63	136.34	285.88	49.19	87.01	977.06	87.21	98.39
5	ಬೆಳಗಾವಿ	1330.39	285.62	662.97	1543.44	290.27	644.1	1807.59	323.29	767.01
6	ಬಿಜಾಪುರ	829.05	149.51	181.23	1267.12	290.89	197.47	1539.61	210.16	220.61
7	ಬಾಗಲಕೋಟೆ	1212	175.6	516.01	1461.45	169.83	482.05	1761.24	177	549.09
	ಕಂಪನಿ ಮೊತ್ತ	5084.21	879.48	2096.05	6652.95	1075.63	2207.05	8663.17	1143.4	2513.1
ಈ)	ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ									
1	ಗುಲ್ಬರ್ಗ	1506.02	197.22	289.97	2009.4	267	327.83	2464.83	321.59	372.37
2	ಬೀದರ್	900.14	163.76	119.59	1242.26	193.01	130.74	1589.75	231.55	161.58
3	ರಾಯಚೂರು	1317.94	177.03	129.45	1704.99	189.01	134.94	2002.11	201.73	141.95
4	ಬಳ್ಳಾರಿ	1572.58	240.98	200.97	2113.06	295.9	227.01	2542.01	289.78	204.5
5	ಕೊಪ್ಪಳ	568.55	82.02	75.08	741.76	90.87	82.01	869.83	95.44	57.51
	ಕಂಪನಿ ಮೊತ್ತ	5865.23	861.01	815.06	7811.47	1035.79	902.53	9468.53	1140.09	937.91
	ರಾಜ್ಯದ ಒಟ್ಟು ಮೊತ್ತ	27219.9	4742.37	11236.89	36042.1	6496.06	12323.92	46648.89	9131.9	14555.8

ಕೊಡಗು ಜಿಲ್ಲೆಗೆ ಸಂಬಂಧಿಸಿದಂತೆ ತಾಲ್ಲೂಕುವಾರು ವಿವರಗಳು

ಕ್ರಮ ಸಂಖ್ಯೆ	ಜಿಲ್ಲೆ	2002–03			2003–04			2004–05 (ಡಿಸೆಂಬರ್–04ರ ಅಂತ್ಯಕ್ಕೆ)		
		ಗೃಹ ಬಳಕೆ ಸ್ಥಾವರಗಳು	ವಾಣಿಜ್ಯ ಸ್ಥಾವರಗಳು	ಕೈಗಾರಿಕಾ ಸ್ಥಾವರಗಳು	ಗೃಹ ಬಳಕೆ ಸ್ಥಾವರಗಳು	ವಾಣಿಜ್ಯ ಸ್ಥಾವರಗಳು	ಕೈಗಾರಿಕಾ ಸ್ಥಾವರಗಳು	ಗೃಹ ಬಳಕೆ ಸ್ಥಾವರಗಳು	ವಾಣಿಜ್ಯ ಸ್ಥಾವರಗಳು	ಕೈಗಾರಿಕಾ ಸ್ಥಾವರಗಳು
1	ಕೊಡಗು									
	1) ಮಡಿಕೇರಿ	30.67	8.24	3.25	44.3	11.08	3.88	47.64	10.7	3.56
	2) ಸೋಮವಾರಪೇಟೆ	42.2	10.2	4.39	53.32	9.66	5.2	60.75	9.75	5.89
	3) ವಿರಾಜಪೇಟೆ	78.53	20.87	8.57	84.09	20.12	8.42	96.44	17.49	6.41
	ಕೊಡಗು ಜಿಲ್ಲಾ ಮೊತ್ತ	**151.4**	**39.31**	**16.21**	**181.71**	**40.86**	**17.5**	**204.83**	**37.94**	**15.86**

711(991) ಶ್ರೀ ಬೋಪಯ್ಯ ಕೆ.ಜಿ. (ಮಡಿಕೇರಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೊಡಗು ಜಿಲ್ಲೆಯ ಸಿ ಅಂಡ್ ಡಿ ಜಮೀನಿನಲ್ಲಿ ಎಷ್ಟು ಜನರು ಕೃಷಿ ಮಾಡುತ್ತಿದ್ದಾರೆ.

ಆ) ಸಿ ಅಂಡ್ ಡಿ ವರ್ಗದ ಎಷ್ಟು ಜಮೀನನ್ನು ಅರಣ್ಯ ಇಲಾಖೆಗೆ ನೀಡಲಾಗಿದೆ.

ಇ) ಯಾವ ಉದ್ದೇಶಕ್ಕಾಗಿ ನೀಡಲಾಗಿದೆ;

ಈ) ಸಿ ಅಂಡ್ ಡಿ ವರ್ಗದ ಎಷ್ಟು ಜಮೀನುಗಳನ್ನು ಸಾರ್ವಜನಿಕ ಉಪಯೋಗಕ್ಕಾಗಿ ವಾಪಸ್ಸು ಪಡೆಯಲಾಗಿದೆ;

ಉ) ಸಿ ಅಂಡ್ ಡಿ ವರ್ಗದ ಜಮೀನಿನಲ್ಲಿ ಅಕ್ರಮವಾಗಿ ಕೃಷಿ ಮಾಡಿರುವ ಜಮೀನನ್ನು ಸಕ್ರಮಗೊಳಿಸದೆ ಇರಲು ಕಾರಣವೇನು;

ಊ) ಈ ಬಗ್ಗೆ ಸರ್ಕಾರದ ಸ್ಪಷ್ಟ ನಿಲುವೇನು?

ಶ್ರೀ ಎಂ.ಪಿ. ಪ್ರಕಾಶ್(ಕಂದಾಯ ಸಚಿವರು)

ಅ)	ಮಡಿಕೇರಿ ತಾಲ್ಲೂಕು	605
	ವಿರಾಜಪೇಟೆ ತಾಲ್ಲೂಕು	619
	ಸೋಮವಾರಪೇಟೆ	5504
	ಒಟ್ಟು	6728

ಆ) ಸರ್ಕಾರಿ ಆದೇಶ ಸಂ:ಆರ್‌ಡಿ 106 ಎಲ್‌ಜಿಪಿ 88. ದಿನಾಂಕ 20.7.94 ರನ್ವಯ ಈ ಕೆಳಕಂಡ ಗ್ರಾಮಗಳ ಸರ್ವೆ ನಂಬರಿನ ವಿಸ್ತೀರ್ಣದ ಜಮೀನನ್ನು ಲ್ಯಾಂಡ್ ಬ್ಯಾಂಕ್ ಉದ್ದೇಶಕ್ಕಾಗಿ ನೀಡಲಾಗಿದೆ.

ಇ)	ಮಡಿಕೇರಿ ತಾಲ್ಲೂಕು	6050.98 ಎಕರೆಗಳು
	ವಿರಾಜಪೇಟೆ ತಾಲ್ಲೂಕು	5444.54 ಎಕರೆಗಳು
	ಸೋಮವಾರ ಪೇಟೆ	19293.00 ಎಕರೆಗಳು
	ಒಟ್ಟು	30788.52 ಎಕರೆಗಳು
ಈ)	ಮಡಿಕೇರಿ ತಾಲ್ಲೂಕು	ವಾಪಸ್ಸು ಪಡೆದಿರುವುದಿಲ್ಲ
	ವಿರಾಜಪೇಟೆ ತಾಲ್ಲೂಕು	454.02 ಎಕರೆ
	ಸೋಮವಾರ ಪೇಟೆ	1.00 ಎಕರೆ

ಉ) ಸರ್ಕಾರದ ಆದೇಶ ಸಂ:ಆರ್‌ಡಿ 106 ಎಲ್‌ಜಿಪಿ 88. ದಿನಾಂಕ :20.7.1994 ರ ಮೇರೆಗೆ ಲ್ಯಾಂಡ್ ಬ್ಯಾಂಕ್ ನಿರ್ಮಿಸುವ ಸಲುವಾಗಿ ಕಾಯ್ದಿರಿಸಿದ್ದರಿಂದ ಅಕ್ರಮವಾಗಿ ಕೃಷಿ ಮಾಡಿರುವ ಜಮೀನನ್ನು ಸಕ್ರಮಗೊಳಿಸಲು ಅವಕಾಶವಿರುವುದಿಲ್ಲ.

ಊ) ಮೇಲ್ಕಂಡ ಪ್ರಶ್ನೆಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

712(992) Sri. Bopaiah K.G.

a) In Kodagu District till now how much 'C' and 'D' class Revenue land has been given to the Land Development Bank and Forest Department. Details may be given along with Village Survey numbers;

b) Whethr the Forest Department has continued these lands 'C' and 'D' lands;

c). From many years how many people are unauthorisly cultivating this 'C' and 'D' land;

d) Has a proposal been received by the Revenue Department to take back this land from Forest Department (Details may be given);

e) What is the stand of Government on 'C' and 'D' land?

Sri. Gurupadappa Nagamara Palli(Minister for Forest, Ecology and Environment)

a) In Kodagu district 11,722.29 ha, 'C' and 'D' class land has been transferred from Revenue Department to Forest Department. Taluk wise details are given below:

		In Ha.
1	Madikeri	10,100.71
2	Somawara Pet	1,528.71
3	Viraj Pet	11,722.29

Village wise and Sy. No. wise details are enclosed in the Annexure.

b) No. As per Section 2(2) of Karnataka Forest Act 1963 'C' and 'D' class lands have been defined as District Forests.

Plantations have been raised in 1123.61 ha. in Madikeri Taluk of Madikeri Division and 91.64 ha. in Somawarpet Taluk. Totally 1215.25 ha. of land has been given to the Land Bank.

Notification has been issued under Section 4 to change 935.66 ha. of land in Madikeri Taluk and 225.20 ha. of land in Somawarpet Taluk under the Jurisdiction of Madikeri Forest Division, totaling to 1160.86 ha. 'C' and 'D' land as Reserve Forest.

The 'C' and 'D' lands under the jurdiction is Madikeri Forest Division also include 308.63 ha. Reserve Forest and 1 ha. Devarakadu. This has been excluded from the 'C' and 'D' jurisdiction.

93.11 ha. area of Virajpet Division has been registered as forest pysari and in ledger as Forest Department in the Mutation register 15/ 99-00. dated: 20.7.99.

c) Out of a total area of 279.20 acres of 'C' and 'D' land in Sy. No 1/1 of Hysodloru of Virajpet Taluk 230 acres have been transfered to Forest Department. Here totally 35 people have encroached 246.50 acres of land and cultivating.

d) No proposal has been received from Revenue Department to take back this land.

e) The 'C' and 'D' lands transferred from Revenue Department to Forest Department are full of abundant forest wealth and it is appropriate to protect this as forest land. Notice under Section 64(A) of Karnataka Forest Act, 1963 has been issued to evict the encroachments and further action will be taken.

Details of c' and d' Lands in KODAGU DISTRICT GOVERNMENT ORDER NO. RD-106/LGP-88/20-7-1994 & its Annexure (Details from the land book)

Sl. No.	Name of the Village	Sl.No.	Extent (In ha)
1	Madikeri Taluk		
1	Dhannarnara, Chorangala	10/1, 2/14, 2/3	181,92
2	Avandi	11/5	378.16
3	Muttor	1/17, 1/18, 1/22	142.94
4	Kunjila	1/5	241.00
5	Naladi	2/1	240.00
6	Hoddur	167/1	3.84
7	Thannimani	10/1	108.82
8	Galiboadu	100/1	50.20
9	Thannimani	47	0.98
10	Thannimani	117/5	11.28

11	Thannimani	163/8	3.16
12	Thannimani	68/2	7.11
13	Thannimani	121/1	4.66
14	Thannimani	166	4.32
15	Thannimani	10/4	2.82
16	Thannimani	10/6	1.31
17	Thannimani	15/1	2.65
18	Thannimani	13/1	5.95
19	Thannimani	13/3	0.61
20	Thannimani	18/2	18.00
21	Thannimani	57	1.15
22	Thannimani	16	1.62
23	Thannimani	163/1	2.16
24	Thannimani	55	0.83
25	Thannimani	166/1	2.00
26	Thannimani	62/1	1.30
27	Thannimani	29/1	2.47
28	Thannimani	29/1	2.47
29	Thannimani	30/2	2.37
30	Thannimani	163/1	4.00
31	Thannimani	153/1	4.20
32	Thannimani	60	0.73
33	Thannimani	24	1.81
34	Thannimani	70/3	3.74
35	Thannimani	153/11	2.24
36	Thannimani	77/1	1.90
37	Thannimani	55/26	3.97
38	Bhagamandala	85/25	6.86
39	Bhagamandala	85/10	2.27
40	Bhagamandala	85/5	28.84
41	Bhagamandala	85/24	10.00

42	Bhagamandala	85/11	0.34
43	Thavoor	1/1	59.98
44	Thavoor	140	1.86
45	Thavoor	130	0.61
46	Thavoor	137	0.74
47	Thavoor	116	3.18
48	Thavoor	1/6	4.11
49	Thavoor	1/2	1.68
50	Thavoor	1/5	3.41
51	Thavoor	171/1	13.03
52	Thavoor	173/1	3.04
53	Thavoor	186/1	2.74
54	Thavoor	166/1	2.74
55	Thavoor	174	5.44
56	Thavoor	188	1.98
57	Thavoor	212	1.42
58	Thavoor	172	7.78
59	Thavoor	1/29	10.80
60	kulagadalu	2/1	274.48
61	Bangoor	7/10	4.00
62	Bungoor	0/18	666.60
63	Kopalli	1/16	76.00
64	Kopalli	1/16	120.00
65	Konali	17/16	120.00
66	Cherangala	2/6	60.39
67	Cherangala	1	271.52
68	Cherangala	2/1	170.52
69	Cherangala	2/2	11.88
70	Cherangala	2/16	40.80
71	Cherangala	5	135.52
72	Cherangala	7	54.58

73	Cherangala	13	36.49
74	Cherangala	14	151.94
75	Mandrot	4/16	329.73
76	Mundrot	4/17	9/91
77	Avandoor	1/1	3.62
78	Avandoor	28/1	3.62
79	Avandoor	56	12.69
80	Avandoor	87	0.82
81	Avandoor	94	0.78
82	Kauka	426/1	0.60
83	Yevakapadi	14	1869.42
84	Yevakapadi	14	8.62
85	Yevakapadi	21	8.82
86	Yevakapadi	82	2.30
87	Yevakapadi	92/1	0.02
88	Yevakapadi	102/2	0.08
89	Yevakapadi	102/3	0.38
90	Yevakapadi	102/8	0.36
91	Yevakapadi	152	10.19
92	Yevakapadi	100	1.31
93	Yevakapadi	103	0.62
94	Yevakapadi	204	0.62
95	Yevakapadi	211	9.42
96	Yevakapadi	254/9	296.60
97	Yevakapadi	254	10.98
98	Naladi	2/1	221.67
99	Naladi	2/5	0.64
100	Naladi	2/6	2.00
101	Naladi	2/3	6/2
102	Naladi	2/3	6/2
103	Naladi	71/1	16.97
104	Naladi	70	36.20

105	Naladi	8	0.64
106	Naladi	11/1	1.02
107	Naladi	61	0.88
108	Naladi	64/2	3.74
109	Naladi	9/2	0.02
110	Naladi	26/2	8.62
111	Naladi	7/1	0.32
112	Naladi	126/4	0.08
113	Naladi	130	0.97
114	Naladi	190	1.86
115	Naladi	151	4.02
116	Naladi	25/2	0.11
117	Naladi	61/6	0.12
118	Naladi	158/2	8.48
119	Naladi	295/2	0.21
120	Naladi	256	0.08
121	Naladi	270	0.69
122	Naladi	762	0.61
123	Naladi	205/1	2.20
124	Naladi	301/1	80.00
125	Naladi	17/1	2.14
126	Naladi	174/1	70.37
127	Hebbelageri	20/3	22.40
128	Hebbelageri	31/2	28.85
129	Hamiyala	21/1	7.28
130	Hamiyala	2/1	48.00
131	Hamiyala	3/1	24.00
132	Hamiyala	32/1	10.14
133	Hamiyala	32	2.48
134	Hamiyala	1/1	160.00

135	Hamiyala	167/A	28.00
136	Hamiyala	1/6A	160.00
137	Avandi	12/1	32.62
138	Avandur	1/1	8.62
139	Galibeedu	7/7	321.00
140	Galibeedu	41/4	70.00
141	Galibeedu	67/14	148.00
142	Galibeedu	100/2	68.00
143	Monnangeri	8	64.62
143	Monnangeri	8	64.62
143	Monnangeri	8	64.62
144	Monnangeri	9	64.00
145	Monnangeri	10	36.94
146	Monnangeri	141	56.28
147	Monnangeri	20/1	628.00
148	Monnangeri	26/3	242.85
149	Made	38/1	48.00
150	Made	40	18.00
151	Made	69/1	132.00
152	Made	60/1	16.00
153	Made	61/1	21.24
154	Made	63/1	11.24
155	Made	62	32.08
156	Made	29/1	44.82
157	Hebbelageri	20/1	64.82
158	Hebbetageri	1/1	8.09
159	Hebbalageri	41/1	12.88
160	Mukkodlu	33/1	9.64
161	Mukkodlu	33/2	25.68
162	Mukkodlu	37/1	10.08
163	Mukkodlu	38/1	9.68
164	Mukkodlu	56	5.68

165	Mukkodlu	65/1	136.48
166	Mukkodlu	1/1	174.66
167	Mukkodlu	1/1	62.08
168	Kaloor	101/1	19.00
169	Kaloor	121	40.52
170	Kaloor	69/3	11.68
171	Kaloor	74/1	4.84
172	Kaloor	84/1	4.82
173	Kaloor	6/1	94.90
174	Makkandor	39	24.47
175	Makkandor	38	2.00
	Total		10100.71

Somar pet Taluk

176	Alur (Masalla)	16/1.5/3	38.36
177	Bageri	38/1,100	17.76
178	Kumbaragadige	6	24.80
179	Nagadi Karkalli	235.726/2	30.00
180	Rottadalli	338/6A	78.72
181	Kumbaragadigo	126/2	15.04
182	Shivarajji	55/4	16.56
183	Vadayamapura	124.14050	30.00
184	Hegula	39,36.37	15.00
185	Kalkandur	55/1,55/16	52.40
186	Haraga	34/0	511.68
187	Shirangalli	1/1	277/44
188	Kumbaragadigo	134/2,124/11	73.28
189	Sunli	735/4	10.00
190	Kuthi	735/4	114.24
191	Shanthalli	21/2	12.48
192	Ajyangen	163/7	138.56
193	Kerla	133/7	54.95
	Total	ha	1528.47

	Madikeri & Somwarpet taluk 'G and D' lands - Grand Total	ha	11629.15
	Virajpet Taluk		
194	Highsodlur	1/1	93.11
	Grand Total(District)		11722.29

The following category of lands are overlapping in these 'C and O' lands

Reserve Forest	Devarakadu	Section-1 Notified area	Plantations	Total
308.63	0.99	1100.86	1216.26	2665.73

Total 'C and D lands as per G.O. list	11629,18
Total Overlapping area	2685.73
Not 'C and D' lands area	5913.45 Ha,

714(1056) ಶ್ರೀ ಚಂದ್ರಶೇಖರ್ ಪಾಟೀಲ್ ರೇವೂರ : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗುಲ್ಬರ್ಗಾ ಮಹಾನಗರದ ಮುಖ್ಯರಸ್ತೆ ಸರ್ದಾರ್ ವಲ್ಲಭಬಾಯಿ ಪಟೇಲ್ ವೃತ್ತದಿಂದ ಡಾ:ಅಂಬೇಡ್ಕರ್ ವೃತ್ತದ(ಜಗತ್) ವರೆಗೆ ರಸ್ತೆ ಕಾಮಗಾರಿ ಕೆಲಸ ಒಂದು ವರ್ಷದಿಂದ ಮಂದಗತಿಯಿಂದ ಸಾಗುತ್ತಿರಲು ಕಾರಣವೇನು;

ಆ) ರಸ್ತೆ ಕಾಮಗಾರಿ ನಿರ್ಮಿಸಲು ಟೆಂಡರ್ ಅನ್ನು ಯಾವ ಗುತ್ತಿಗೆದಾರರಿಗೆ ವಹಿಸಲಾಗಿದೆ;

ಇ) ಇದಕ್ಕೆ ನಿಗದಿಪಡಿಸಿರುವ ಸಮಯ ಎಷ್ಟು;

ಈ) ಕಾಮಗಾರಿಯ ಅಂದಾಜು ವೆಚ್ಚ ಎಷ್ಟು;

ಉ) ಇಲ್ಲಿಯವರೆಗೆ ಖರ್ಚು ಮಾಡಿರುವ ಹಣ ಎಷ್ಟು (ಸಂಪೂರ್ಣ ವಿವರ ನೀಡುವುದು)?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಮಂಜೂರಾಗಿದ್ದು ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. ಈ ಕಾಮಗಾರಿಯು ಮಾರ್ಚ್ 2005 ಕ್ಕೆ ಪೂರ್ಣಗೊಳಿಸಲಾಗುವುದು.

ಆ) ಮೆ: ಬಾಲಾಜಿ ಕನ್‌ಸ್ಟ್ರಕ್ಷನ್ ಕಂ. ಉಮರ್ಗಾ ಇವರಿಗೆ ಟೆಂಡರ್ ಮುಖಾಂತರ ಕೆಲಸವನ್ನು ವಹಿಸಲಾಗಿದೆ.

ಇ) ನಾಲ್ಕು ತಿಂಗಳು (4 ತಿಂಗಳು)

ಈ) ರೂ. 130.00 ಲಕ್ಷಗಳು

ಉ) ಇಂದಿನವರೆಗೆ ರೂ. 13.00 ಲಕ್ಷಗಳು ಖರ್ಚಾಗಿರುತ್ತದೆ.

716(1587) : ಶ್ರೀ ದಿಗಂಬರ್ ಯಶವಂತರಾವ್ ಪಾಟೀಲ್ (ಖಾನಾಪುರ): ಮಾನ್ಯ ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಖಾನಾಪುರ ತಾಲ್ಲೂಕಿನ ಅಸೋಗಾ ಗ್ರಾಮವು ಮಲಪ್ರಭಾ ನದಿಯ ದಂಡೆಯಲ್ಲಿದ್ದು ಇಲ್ಲಿರುವ ಪುರಾತನ ದೇವಾಲಯವನ್ನು ಸುಂದರವಾದ ಶೈಕ್ಷಣಿಕ ಸ್ಥಳವನ್ನಾಗಿ ಅಭಿವೃದ್ಧಿಗೊಳಿಸದಿರಲು ಕಾರಣವೇನು:

ಆ) ಈ ಸ್ಥಳವನ್ನು ಪ್ರವಾಸಿ ಸ್ಥಳವನ್ನಾಗಿ ಮಾರ್ಪಡಿಸಲು ಸರ್ಕಾರ ಕ್ರಮ ಕೈಗೊಳ್ಳುವುದಿಲ್ಲ;

ಇ) ಪ್ರವಾಸೋದ್ಯಮ ಇಲಾಖೆವತಿಯಿಂದ ಖಾನಾಪುರ ಕ್ಷೇತ್ರದಲ್ಲಿ ಎಷ್ಟು ಪ್ರವಾಸಿ ಕೇಂದ್ರಗಳನ್ನು ಇಲ್ಲಿಯವರೆಗೆ ಅಭಿವೃದ್ಧಿಪಡಿಸಲಾಗಿದೆ; ಅವುಗಳು ಯಾವುವು;

ಈ) ಅಭಿವೃದ್ಧಿ ಪಡಿಸದಿದ್ದಲ್ಲಿ ಕಾರಣಗಳೇನು?

ಶ್ರೀ ಡಿ.ಟಿ. ಜಯಕುಮಾರ್(ಪ್ರವಾಸೋದ್ಯಮ ಸಚಿವರು)

ಅ) ಶೈಕ್ಷಣಿಕ ಸ್ಥಳವನ್ನಾಗಿ ಅಭಿವೃದ್ಧಿ ಪಡಿಸುವುದು ಪ್ರವಾಸೋದ್ಯಮ ಇಲಾಖೆಯ ವ್ಯಾಪ್ತಿಗೊಳಪಟ್ಟಿರುವುದಿಲ್ಲ.

ಆ) ಭೇಟಿ ನೀಡುವ ಪ್ರವಾಸಿಗರ ಸಂಖ್ಯೆಯನ್ನು ಪರಿಗಣಿಸಿ ಕ್ರಮ ಕೈಗೊಳ್ಳಲಾಗುವುದು.

ಇ) ಇಲ್ಲ.

ಈ) ಹೆಚ್ಚು ಪ್ರವಾಸಿಗರು ಭೇಟಿ ನೀಡುವ ಪ್ರವಾಸಿ ಕೇಂದ್ರಗಳನ್ನು ಆದ್ಯತೆ ಮೇಲೆ ಅಭಿವೃದ್ಧಿ ಪಡಿಸಲಾಗುತ್ತಿದೆ.

717(1588) ಶ್ರೀ ದಿಗಂಬರ್ ಯಶವಂತರಾವ್ (ಖಾನಾಪುರ) : ಮಾನ್ಯ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಪಶ್ಚಿಮ ಘಟ್ಟದ ಖಾನಾಪುರ ತಾಲ್ಲೂಕಿನ ನಾಗರಗಾಳಿ, ಲೋಂಡಾ, ಕಣಕುಂಬಿ, ಖಾನಾಪುರ ವಲಯದ ಅರಣ್ಯಾಧಿಕಾರಿಗಳು ಅಕ್ರಮ ಚಟುವಟಿಕೆ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಕೈಗೊಂಡ ಕ್ರಮಗಳಾವುವು;

ಆ) ಕೇವಲ, ಶೋಕಾಸ್ ನೋಟೀಸ್ ನೀಡುವುದು ಸರಿಯೇ;

ಇ) ಇವರ ಮೇಲೆ ಇನ್ನೂ ಸರ್ಕಾರ ಯಾವ ಯಾವ ಉಗ್ರ ಕ್ರಮಗಳನ್ನು ಕೈಗೊಳ್ಳಲಿದೆ;

ಈ) ಇವರ ಆಸ್ತಿ ಪಾಸ್ತಿಗಳನ್ನು ಸರ್ಕಾರ ಮುಟ್ಟುಗೋಲು ಹಾಕಿಕೊಳ್ಳುವುದೇ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ(ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ಲೋಂಡಾ ಮತ್ತು ಕಣಕುಂಬಿ ವಲಯಗಳಲ್ಲಿ ಮಾಲ್ಕಿ ಪ್ರದೇಶಗಳಲ್ಲಿ ಅಕ್ರಮ ಕಡಿತಲೆ ಹಾಗೂ ಸಾಗುವಳಿಗಾಗಿ ಭೂ ಮಟ್ಟದಲ್ಲಿ ಬೆಂಕಿ ಇಡುವುದರ ಪರಿಣಾಮವಾಗಿ ಅಕ್ಕಪಕ್ಕದ ಅರಣ್ಯ ಪ್ರದೇಶಕ್ಕೂ ವ್ಯಾಪಿಸಿದ್ದು, ಅರಣ್ಯ ಪ್ರದೇಶದಲ್ಲಿ ಅಕ್ರಮ ಕಡಿತಲೆ ಹಾಗೂ ಬೆಂಕಿಯಿಂದ ನಷ್ಟವಾಗಿದೆ.

ನಾಗರಗಾಳಿ ಮತ್ತು ಖಾನಾಪುರ ವಲಯಗಳ ವ್ಯಾಪ್ತಿಯಲ್ಲಿ ಅಕ್ರಮಗಳು ನಡೆದ ಬಗ್ಗೆ ವರದಿಯಾಗಿರುವುದಿಲ್ಲ.

ಆ) ಪ್ರಾಥಮಿಕವಾಗಿ ಸಂಬಂಧಪಟ್ಟ ನೌಕರರಿಗೆ ಕಾರಣಕೇಳುವ ನೋಟೀಸನ್ನು ಜಾರಿಗೊಳಿಸಲಾಗಿತ್ತಾದರೂ, ತದನಂತರ ಕಣಕುಂಬಿ ಮತ್ತು ಲೋಂಡಾ ವಲಯದ ವಲಯ ಅರಣ್ಯಾಧಿಕಾರಿ, ಒಬ್ಬ ವನಪಾಲಕ ಮತ್ತು ಇಬ್ಬರು ಅರಣ್ಯ ರಕ್ಷಕರನ್ನು ಅಮಾನತ್ತಿನಲ್ಲಿರಿಸಲಾಗಿದೆ. ಜೊತೆಗೆ ಖಾನಾಪುರ ಉಪವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಬೆಳಗಾವಿ ವಿಭಾಗದ

ಉಪ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಬೆಳಗಾವಿ ವೃತ್ತ ಅರಣ್ಯ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಇ) ಅಕ್ರಮಗಳ ಕುರಿತು ವಿವರವಾದ ತನಿಖೆ ನಡೆಸಲು ಉನ್ನತ ಮಟ್ಟದ ಅಧಿಕಾರಿಯವರನ್ನು ನೇಮಿಸಲಾಗಿದ್ದು, ಅವರಿಂದ ತನಿಖಾ ವರದಿ ಪ್ರಾಪ್ತವಾದ ನಂತರ ಸಂಬಂಧಪಟ್ಟ ತಪ್ಪಿತಸ್ಥ ಅಧಿಕಾರಿ/ ಸಿಬ್ಬಂದಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವ ಬಗ್ಗೆ ಪರಿಶೀಲಿಸಲಾಗುವುದು.

ಈ) ಅಕ್ರಮ ಹಾಗೂ ಅವ್ಯವಹಾರಗಳ ಬಗ್ಗೆ ತಪ್ಪಿತಸ್ಥ ಅಧಿಕಾರಿ/ಸಿಬ್ಬಂದಿಯವರ ವಿರುದ್ಧ ಅವಶ್ಯವಿದ್ದಲ್ಲಿ ಇಲಾಖಾ ವಿಚಾರಣೆ ನಡೆಸಿ, ಆರೋಪಗಳು ಸಾಬೀತಾದ ಪಕ್ಷದಲ್ಲಿ ನಿಯಮಾನುಸಾರ ಸೂಕ್ತ ದಂಡನೆಯನ್ನು ವಿಧಿಸುವ ಬಗ್ಗೆ ಪರಿಶೀಲಿಸಬೇಕಾಗುವುದು.

718(1589) **ಶ್ರೀ ದಿಗಂಬರ್ ಯಶವಂತ್‌ರಾವ್ ಪಾಟೀಲ್ (ಖಾನಾಪುರ)** : ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಖಾನಾಪುರ ತಾಲ್ಲೂಕಿನ ಅರಣ್ಯ ವಲಯಗಳಲ್ಲಿರುವ ಆನೆಗಳ ಸಂಖ್ಯೆ ಎಷ್ಟು;

ಆ) ಸದರಿ ಪ್ರದೇಶಗಳಲ್ಲಿರುವ ಗ್ರಾಮಗಳಲ್ಲಿ ಆನೆಗಳ ಹಾವಳಿಯಿಂದ ಮೃತರಾದವರ ಸಂಖ್ಯೆ ಎಷ್ಟು;

ಇ) ಆನೆಗಳ ಹಾವಳಿಯನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ(ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ಬೆಳಗಾವಿ ವಿಭಾಗದ ಖಾನಾಪುರ ವಲಯದ ಕಟಗಾಳಿ ಅರಣ್ಯ ಕ್ಷೇತ್ರದಲ್ಲಿ 1ರಿ0 ಆನೆಗಳು ಇರುತ್ತವೆ.

ಆ) ಈ ವಿಭಾಗದಲ್ಲಿ ಕಳೆದ ಮೂರು ವರ್ಷಗಳಲ್ಲಿ ಆನೆಗಳ ಹಾವಳಿಯಿಂದ ಮೃತರಾದ ಜನರ ಸಂಖ್ಯೆ ಕೆಳಗಿನಂತೆ ಇದೆ.

ಕ್ರ. ಸಂ.	ವರ್ಷ	ಮೃತರಾದವರ ಸಂಖ್ಯೆ
1	2002–03	–
2	2003–04	3
3	2004–05 31/12 ರವರೆಗೆ	1
	ಒಟ್ಟು	4

ಇ) ಆನೆಗಳ ಹಾವಳಿ ಹೆಚ್ಚಿಗೆ ಇದ್ದ ಪ್ರದೇಶಗಳಲ್ಲಿ ಆನೆ ನಿರೋಧಕ ಕಂದಕಗಳನ್ನು ತೋಡಲಾಗಿದೆ. ಆನೆಗಳು ರೈತರ ಜಮೀನುಗಳಲ್ಲಿ ನುಗ್ಗದಂತೆ ಸಿಬ್ಬಂದಿಗಳೊಂದಿಗೆ ಮತ್ತು ಗ್ರಾಮಸ್ಥರ ಸಹಾಯದಿಂದ ಸದರಿ ಆನೆಗಳನ್ನು ಸಮೀಪದ ಅರಣ್ಯ ಪ್ರದೇಶಕ್ಕೆ ಓಡಿಸಲು ಕ್ರಮ ತೆಗೆದುಕೊಳ್ಳಲಾಗಿದೆ. ಮತ್ತು ಆನೆಗಳನ್ನು ಓಡಿಸಲು ಪಟಾಕಿಗಳನ್ನು ಸಿಡಿಸಿ, ತಮಟೆ ಭಾರಿಸಿ ಗ್ರಾಮಸ್ಥರ ಸಹಾಯದಿಂದ ಓಡಿಸಲು ಕ್ರಮ ಕೈಗೊಳ್ಳಲಾಗಿದೆ.

720(1371) **ಶ್ರೀ ಈಶ್ವರಪ್ಪ ಕೆ.ಎಸ್.(ಶಿವಮೊಗ್ಗ)** : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಭಾಗ್ಯಜ್ಯೋತಿ ಯೋಜನೆಯಡಿಯಲ್ಲಿ ಬಡವರಿಗೆ ವಿದ್ಯುತ್ತನ್ನು ಉಚಿತವಾಗಿ ಕೊಡಲು ಸಾಧ್ಯವೇ;

ಆ) ವಿದ್ಯುತ್ ಬಿಲ್ಲನ್ನು ಪಾವತಿಸಲು ಬಾಕಿ ಉಳಿದಿರುವ ಭಾಗ್ಯಜ್ಯೋತಿ ಫಲಾನುಭವಿದಾರರಾದ ಬಡವರ ವಿದ್ಯುತ್ ಸಂಪರ್ಕವನ್ನು ತೆಗೆಯಲು ಆದೇಶ ಹೊರಡಿಸಲಾಗಿದೆಯೇ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಭಾಗ್ಯಜ್ಯೋತಿ/ಕುಟೀರ ಜ್ಯೋತಿ ಯೋಜನೆಗಳಡಿಯಲ್ಲಿ ವಿದ್ಯುತ್ ಸಂಪರ್ಕ ಪಡೆದಿರುವ ಬಡವರಿಗೆ ಮಾಹೆಯಾನ 18 ಯೂನಿಟ್ಟುಗಳವರೆಗೆ ಉಚಿತ ವಿದ್ಯುತ್ತನ್ನು ಸರಬರಾಜು ಮಾಡುವ ಬಗ್ಗೆ ಒಂದು ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸುತ್ತಿದೆ.

ಆ) ಭಾಗ್ಯ ಜ್ಯೋತಿ/ಕುಟೀರ ಜ್ಯೋತಿ ಸ್ಥಾವರಗಳಿಗೆ ವಿಧಿಸಲಾಗುತ್ತಿರುವ ವಿದ್ಯುತ್ ದರ ಮಾಜಿಯಾನ ಕೇವಲ ರೂ. 30.00 ಮಾತ್ರ ಪ್ರತಿ ಯೂನಿಟ್ಟು ವಿದ್ಯುತ್ ಸರಬರಾಜಿಗೆ ತಗಲುವ ವೆಚ್ಚ ರೂ. 3.73. ಆದರೆ, ಈ ದರವನ್ನು ಭಾಗ್ಯ ಜ್ಯೋತಿ/ಕುಟೀರ ಜ್ಯೋತಿ ಫಲಾನುಭವಿಗಳಿಗೆ ವಿಧಿಸದೆಯೇಸ, ಪ್ರತಿ ಯೂನಿಟ್ಟಿಗೆ ರೂ.1.66 ಸಹಾಯ ಧನವನ್ನು ಸರ್ಕಾರವು ನೀಡುತ್ತಿದೆ. ಈ ಹಿನ್ನೆಲೆಯಲ್ಲಿ ಭಾಗ್ಯ ಜ್ಯೋತಿ/ಕುಟೀರ ಜ್ಯೋತಿ ಫಲಾನುಭವಿಗಳು ತಮಗೆ ವಿಧಿಸಲಾಗುತ್ತಿರುವ ಕಡಿಮೆ ದರವನ್ನು ಪಾವತಿಸಿ, ವಿದ್ಯುತ್ ಸರಬರಾಜು ಕಂಪನಿಗಳೊಂದಿಗೆ ಸಹಕರಿಸಬೇಕಾಗಿರುತ್ತದೆ. ಅಲ್ಲದೇ, ವಿದ್ಯುತ್ ಬಾಕಿಯನ್ನು ಕಂತುಗಳ ಮೂಲಕ ಪಾವತಿಸಲು ಸಹ ಅನುಕೂಲವನ್ನು ಕಲ್ಪಿಸಲಾಗಿರುತ್ತದೆ. ಭಾಗ್ಯಜ್ಯೋತಿ/ಕುಟೀರ ಜ್ಯೋತಿ ಫಲಾನುಭವಿಗಳಿಂದಲೂ ಸಹ ಕನಿಷ್ಠ ಶೇಕಡ 25 ರಷ್ಟು ವಸೂಲಾತಿಯನ್ನು ಮಾಡುವ ದೃಷ್ಟಿಯಿಂದ, ಹೆಚ್ಚಿನ ಬಾಕಿ ಹೊಂದಿರುವ ಭಾಗ್ಯ ಜ್ಯೋತಿ/ಕುಟೀರ ಜ್ಯೋತಿ ಸ್ಥಾವರಗಳು ಕಂತಿನ ಸೌಲಭ್ಯವನ್ನು ಪಡೆದುಕೊಂಡರೂ ಸಹ ಹಣವನ್ನು ಪಾವತಿಸದೇ ಇದ್ದಲ್ಲಿ, ಅನಿವಾರ್ಯ ಕ್ರಮವಾಗಿ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಲಾಗುತ್ತದೆ.

722(1341) : ಶ್ರೀ ಈಶ್ವರಪ್ಪ ಕೆ.ಎಸ್ (ಶಿವಮೊಗ್ಗ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಆರಾಧನಾ ಯೋಜನೆ ಜಾರಿಗೆ ಬರುತ್ತದೆಯೇ;

ಆ) ಒಂದು ವಿಧಾನ ಸಭಾ ಕ್ಷೇತ್ರಕ್ಕೆ ಎಷ್ಟು ಹಣ ಮೀಸಲಿಡಲಾಗುವುದು?

ಶ್ರೀ ಎಂ.ಪಿ. ಪ್ರಕಾಶ್(ಕಂದಾಯ ಸಚಿವರು)

ಅ) ಆರಾಧನಾ ಯೋಜನೆ 1991–1992ನೇ ಸಾಲಿನಿಂದ ಜಾರಿಯಲ್ಲಿದೆ.

ಆ) ಆರಾಧನಾ ಯೋಜನೆಗೆ ಆಯವ್ಯಯದಲ್ಲಿ ಒದಗಿಸುವ ಅನುದಾನವನ್ನು ಪ್ರತಿ ವಿಧಾನ ಸಭಾ ಕ್ಷೇತ್ರಕ್ಕೆ ಸಮನಾಗಿ ಹಂಚಲಾಗುವುದು. 2004–05ನೇ ಸಾಲಿಗೆ ಪ್ರತಿ ವಿಧಾನ ಸಭಾ ಕ್ಷೇತ್ರಕ್ಕೆ ರೂ. 2.82 ಲಕ್ಷಗಳಂತೆ 224 ವಿಧಾನ ಸಭಾ ಕ್ಷೇತ್ರಗಳಿಗೆ ರೂ. 6,31,68,000–00ಗಳನ್ನು ಮಂಜೂರು ಮಾಡಿದೆ.

723(216) : ಶ್ರೀ ಗಂಗಾಧರ್ ನಾಗೇಶ್ ಭಟ್(ಕಾರವಾರ) : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಾರವಾರ ಬಂದರಿನಿಂದ ಯಾವ ಯಾವ ಶ್ರೇಣಿಯ ಕಲ್ಲಿದ್ದಲನ್ನು ಯಾವ ಕಂಟ್ರಾಕ್ಟರ್‌ಗಳಿಂದ ಯಾವ ಯಾವ ದೇಶಗಳಿಗೆ ಕಳುಹಿಸಲಾಗುತ್ತದೆ;

ಆ) ಇದರಿಂದ ಸರ್ಕಾರಕ್ಕೆ ಕಳೆದ ವರ್ಷ ಬಂದ ಆದಾಯವೆಷ್ಟು;

ಇ) ಕಲ್ಲಿದ್ದಲು ಸಂಗ್ರಹಣೆಗಾಗಿ ಕಾರವಾರದ ಸುತ್ತಮುತ್ತಲೂ ಎಷ್ಟು ಸ್ಥಳಗಳನ್ನು ಬಳಸಲಾಗುತ್ತಿದೆ;

103	RAVIKUMAR TRADERS	CHANNA-PATNA	1992-93	ASR	40191256	92094492	132285748
104	RAYADURGA & CO.	BELLARY	1984-85	TSR	4674448	16656699	21331147

1	2	3	4	5	6	7	8
105	REDDY PEERAN SAB.V	CHINTHAMANI	1990-91	ASR	3137884	7596686	10734570
106	S.L.N.TRADERS	GULBARGA	1981-82	TSR	1763692	13065568	14829260
107	SATHISHCHANDRA &CO	UDUPI	1985-86	ASR	0	24910732	24910732
108	SATHISHCHANDRA HEGDE & FT	UDUPI	1990-91	ASR	32544617	73000688	105545305
109	SATHISHCHANDRA HEGDE & FT	UDUPI	1993-94	ASR	7504760	7928450	15433200
110	SATHYANA-RAYANA.S	GULBARGA	1985-86	ASR	2670000	8528343	11198343
111	SHARANAGOUDA B.BIRADAR	SHORAPUR	2001-02	ASR	17986160	7187640	25173800
112	SHIVALINGAPPA.M.P	SHIMOGA	1986-87	TSR	3801000	10935002	14736002
113	SHIVALINGEGOWDA	MANDYA	2001-02	ASR	9503200	4941769	14444969
114	SHIVALINGEGOWDA	MANDYA	2001-02	LOS	22260906	0	22260906
115	SOMASHEKAR.H.V	TARIKERE	2001-02	ASR	6113114	4110312	10223426
116	SOMASHEKAR.H.V	DODDABALLA-PUR	2001-02	ASR	21300859	5301885	26602744

1	2	3	4	5	6	7	8
17	SOMASHEKAR.H.V	NELAMANGALA	2001-02	ASR	10221587	2515030	12736617
118	SOMASHEKAR.H.V	MANVI	2001-02	ASR	8760100	2206633	10966733
119	SOMASHEKAR.H.V	KOPPAL	2001-02	ASR	9352157	2626300	11978457
120	SRINIVAS & CO,	MYSORE	1987-88	ASR	3517914	9563130	13081044
121	SRINIVAS.M.V	GUBBI	2001-02	ASR	8850100	2327697	11177797
122	SRINIVAS.M.V	GUBBI	2001-02	LOS	11123330	0	11123330
123	SRINIVAS.M.V	KADUR	2001-02	LOS	12322878	0	12322878
124	SRINIVAS.M.V	SINDHANUR	2001-02	ASR	6774300	4851188	11625488
125	SRINIVAS.M.V	KADUR	200-02	ASR	51231620	6132211	21363831
126	SUDHAKAR.J	HASSAN	1985-86	TSR	5449430	17475149	22924579
127	SUDHAKAR.B	GADAG	1993-94	ASR	4985000	8273700	13258700
128	THAMMAIH,S.G	RAICHUR	1993-94	ASR	11348672	19686007	31034679
129	THIRUMALA TRADERS	MANDYA	1984-85	ASR	4598300	15693308	20291608
130	THIRUMALA TRADERS	HASSAN	1985-86	ASR	6017250	14356889	20374139
131	VASIKERAPPA.K	SANDUR	2002-03	LOS	17146400	0	17146400
132	VENKATESH GOWDA K.T	HASSAN	1983-84	TSR	2573391	8801887	11375278

1	2	3	4	5	6	7	8
133	VENUGOPAL	UDUPI	1984-85	ASR	8801675	29203209	38004884
134	VIJAY KUMAR.H.R	GULBARGA	1986-87	TSR	4248000	12804051	17052051
135	VIJAYASHRI LIQUORS	MYSORE	1992-93	ASR	3932650	7850628	11783278
136	YELLAMMA ENTERPRISES	MANDYA	1992-93	ASR	10089220	20241511	30330731
	TOTAL				2083316446	2613337738	4696654184

779(1332) ಶ್ರೀ ನಿರ್ಮಲ್ ಸುರಾನ (ಭಾರತೀನಗರ) : ಮಾನ್ಯ ಕಂದಾಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದಲ್ಲಿರುವ ಪೂಜಾ ಕೇಂದ್ರಗಳೆಷ್ಟು; ಅವುಗಳಿಂದ ಉತ್ಪತ್ತಿಯಾಗುವ ವಾರ್ಷಿಕ ಆದಾಯ, ಮುಜರಾಯಿ ದೇವಾಲಯ, ಮಸೀದಿ ಹಾಗೂ ಚರ್ಚುಗಳು ಇತ್ಯಾದಿ(ತಾಲ್ಲೂಕುವಾರು ವಿವರ ನೀಡುವುದು)

ಆ) ಮುಜರಾಯಿ ದೇವಾಲಯಗಳಲ್ಲಿನ ಆದಾಯವನ್ನು ಅಲ್ಪಸಂಖ್ಯಾತೆ ಧಾರ್ಮಿಕ ಚಟುವಟಿಕೆಗೆ ಬಳಸಿರುವ ಔಚಿತ್ಯವೇನು (ದೇವಾಲಯಗಳಿಗಿಂತ ಬಹುಪಟ್ಟು):

ಇ) ಅವ್ಯಾಹತವಾಗಿ ನಡೆದು ಬಂದಿರುವ ಈ ತಾರತಮ್ಯ ಮತ್ತು ಬಹುಸಂಖ್ಯಾತರ ಧಾರ್ಮಿಕ ಭಾವನೆಯ ಅಪಮಾನಕ್ಕೆ ಸರ್ಕಾರ ತಡೆಹಾಕುವುದೇ ?

ಶ್ರೀ ಎಂ.ಪಿ.ಪ್ರಕಾಶ್ (ಕಂದಾಯ ಸಚಿವರು) :

ಅ) ದಿ : 1/05/2003 ರಿಂದ ಜಾರಿಗೆ ಬಂದಿರುವ ಇಲಾಖೆಯ 'ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಕಾಯ್ದೆ 1997' ರ ಪ್ರಕಾರ ಈ ಇಲಾಖೆಯ ಆಡಳಿತ ವ್ಯಾಪ್ತಿಗೆ 34,211 ಅಧಿಸೂಚಿತ ಸಂಸ್ಥೆಗಳು ಒಳಪಡುತ್ತವೆ. ಹಿಂದೂ ಧಾರ್ಮಿಕ ಸಂಸ್ಥೆಗಳಲ್ಲದೆ ಮಸೀದಿ, ಚರ್ಚುಗಳು ಮುಜರಾಯಿ ಇಲಾಖೆಯ ಆಡಳಿತ ವ್ಯಾಪ್ತಿಗೆ ಬರುವುದಿಲ್ಲ. ತಾಲ್ಲೂಕುವಾರು ಅಧಿಸೂಚಿತ ಸಂಸ್ಥೆಗಳ ವಿವರ ಅನುಬಂದ-1 ರಲ್ಲಿ ಲಗತ್ತಿಸಿದೆ.

ಈ ದೇವಾಲಯಗಳಿಂದ ಸರ್ಕಾರಕ್ಕೆ ಯಾವುದೇ ಆದಾಯ ಬರುವುದಿಲ್ಲ.

ಆ) ಮುಜರಾಯಿ ದೇವಾಲಯಗಳಲ್ಲಿನ ಆದಾಯವನ್ನು ದೇವಾಲಯದ ನಿರ್ವಹಣೆಗೆ, ಸಿಬ್ಬಂದಿ ವೆಚ್ಚಕ್ಕೆ ಸಂಬಂಧಿಸಿದ ದೇವಾಲಯದ ಅಭಿವೃದ್ಧಿ ಕಾಮಗಾರಿಗೆ ಬಳಸಲಾಗುತ್ತಿದೆ ಹೊರತು ಅಲ್ಪಸಂಖ್ಯಾತ, ಧಾರ್ಮಿಕ ಮತ್ತು ಇತರೇ ಚಟುವಟಿಕೆಗೆ ಬಳಸಿರುವುದಿಲ್ಲ.

ಇ) ಮೇಲ್ಕಂಡ ಉತ್ತರದ ಹಿನ್ನೆಲೆಯಲ್ಲಿ ಯಾವುದೇ ತಾರತಮ್ಯ ನಡೆದು ಬಂದಿರುವುದಿಲ್ಲ. ಆದ್ದರಿಂದ ಪ್ರಶ್ನೆ ಉದ್ಭವಿಸುವುದಿಲ್ಲ.

ದಿನಾಂಕ: 1-5-2003 ರಿಂದ ಜಾರಿಗೆ ಬಂದ ಏಕರೂಪ ಶಾಸನದ ಪ್ರಕಾರ ರಾಜ್ಯದಲ್ಲಿ ಈ ಇಲಾಖೆಯ ಆಡಳಿತ ವ್ಯಾಪ್ತಿಗೆ ಬರುವ ಅಧಿಸೂಚಿತ ಸಂಸ್ಥೆಗಳ ತಾಲ್ಲೂಕುವಾರು ಸಂಖ್ಯೆ ವಿವರ.

ಕ್ರ. ಸಂ.	ಜಿಲ್ಲೆಯ ಹೆಸರು	ತಾಲ್ಲೂಕು ಹೆಸರು	ಅಧಿಸೂಚಿತ ಸಂಸ್ಥೆಗಳ ಸಂಖ್ಯೆ	ಅಧಿಸೂಚಿತ ಸಂಸ್ಥೆಗಳ ಪಟ್ಟಿಯಿಂದ ಹೊರತು ಪಡಿಸಲಾದ ಸಂಸ್ಥೆಗಳ ಸಂಖ್ಯೆ	ಜಿಲ್ಲಾವಾರು ಸಂಸ್ಥೆಗಳ ಸಂಖ್ಯೆ
1	2	3	4	5	6
1	ಬೆಂಗಳೂರು ನಗರ	1) ಬೆಂಗಳೂರು ನಗರಸಭಾ ವಲಯ	68		
		2) ಬೆಂಗಳೂರು ಉತ್ತರ	152		
		3) ಬೆಂಗಳೂರು ಉತ್ತರ	167		

1	2	3	4	5	6
		ಅಪರ			
		4) ಬೆಂಗಳೂರು ದಕ್ಷಿಣ	193		
		5) ಬೆಂಗಳೂರು ಪೂರ್ವ	145		
		6) ಆನೇಕಲ್	291		1016
2	ಬೆಂಗಳೂರು ಗ್ರಾಮಾಂತರ	1) ಮಾಗಡಿ	268		
		2) ದೊಡ್ಡಬಳ್ಳಾಪುರ	270		
		3) ದೇವನಹಳ್ಳಿ	234		
		4) ಚನ್ನಪಟ್ಟಣ	160		
		5) ರಾಮನಗರ	167		
		6) ಕನಕಪುರ	270		
		7) ಹೊಸಕೋಟೆ	287		
		8) ನೆಲಮಂಗಲ	285		1941
3	ಬಾಗಲಕೋಟೆ	1) ಬಾಗಲಕೋಟೆ	191		
		2) ಬಾದಾಮಿ	171		
		3) ಬೀಳಗಿ	112		
		4) ಜಮಖಂಡಿ	344		
		5) ಮುಧೋಳ್	164		
		6) ಹುನಗುಂದ	185		1167
4	ಬೆಳಗಾವಿ	1) ಖಾನಾಪುರ	485		
		2) ಹುಕ್ಕೇರಿ	426		
		3) ಸವದತ್ತಿ	393		
		4) ಅಥಣಿ	296		
		5) ರಾಮದುರ್ಗ	262		
		6) ರಾಯಭಾಗ	203		
		7) ಬೆಳಗಾವಿ	531		
		8) ಗೋಕಾಕ್	368		
		9) ಬೈಲಹೊಂಗಲ	362		
		10) ಚಿಕ್ಕೋಡಿ	477		3803
5	ಬಳ್ಳಾರಿ	1) ಸಿರಗುಪ್ಪ	211		
		2) ಹೊಸಪೇಟೆ	204		
		3) ಕೂಡ್ಲಿಗಿ	204		
		4) ಹಗರಿ ಬೊಮ್ಮನಹಳ್ಳಿ	133		

1	2	3	4	5	6
		5) ಹೂವಿನ ಹಗಡಲಿ	92		
		6) ಸಂಡೂರು	83		
		7) ಬಳ್ಳಾರಿ	367		1294
6	ಬೀದರ್	1) ಬೀದರ್	35		
		2) ಔರದ್	18		
		3) ಹುಮ್ನಾಬಾದ್	102		
		4) ಬಸವಕಲ್ಯಾಣ	90		
		5) ಭಾಲ್ಕಿ	288		533
7	ಬಿಜಾಪುರ	1) ಬಸವನ ಬಾಗೇವಾಡಿ	118		
		2) ಬಿಜಾಪುರ	201		
		3) ಇಂಡಿ	47		
		4) ಮುದ್ದೇಬಿಹಾಳ್	151		
		5) ಸಿಂಧಗಿ	35		552
8	ಚಾಮರಾಜನಗರ	1) ಚಾಮರಾಜನಗರ	172		
		2) ಯಳಂದೂರು	62		
		3) ಕೊಳ್ಳೇಗಾಲ	141		
		4) ಗುಂಡ್ಲುಪೇಟೆ	39		414
9	ಚಿಕ್ಕಮಗಳೂರು	1) ಚಿಕ್ಕಮಗಳೂರು	432		
		2) ಮೂಡಿಗೆರೆ	71		
		3) ಕೊಪ್ಪ	136		
		4) ಶೃಂಗೇರಿ	91		
		5) ನರಸಿಂಹರಾಜಪುರ	25		
		6) ಕಡೂರು	48		
		7) ತರೀಕೆರೆ	66		869
10	ಚಿತ್ರದುರ್ಗ	1) ಚಿತ್ರದುರ್ಗ	98		
		2) ಚಳ್ಳಕೆರೆ	38		
		3) ಹಿರಿಯೂರು	37		
		4) ಹೊಸದುರ್ಗ	72		
		5) ಹೊಳಲ್ಕೆರೆ	37		
		6) ಮೊಳಕಾಲ್ಮೂರು	23		305
11	ದಾವಣಗೆರೆ	1) ಹರಪನಹಳ್ಳಿ	61		
		2) ಹರಿಹರ	47		
		3) ಹೊನ್ನಾಳಿ	215		

1	2	3	4	5	6
		4) ಚನ್ನಗಿರಿ	163		
		5) ಜಗಳೂರು	59		
		6) ದಾವಣಗೆರೆ	67		612
12	ದಕ್ಷಿಣ ಕನ್ನಡ	1) ಮಂಗಳೂರು	196		
		2) ಬಂಟ್ವಾಳ	84		
		3) ಬೆಳ್ತಂಗಡಿ	68		
		4) ಪುತ್ತೂರು	81		
		5) ಸುಳ್ಯ	52		481
13	ಧಾರವಾಡ	1) ಧಾರವಾಡ	240		
		2) ಹುಬ್ಬಳ್ಳಿ	278		
		3) ಕಲಘಟಗಿ	121		
		4) ನವಲಗುಂದ	161		
		5) ಕುಂದಗೋಳ	138		938
14	ಗದಗ್	1) ಗದಗ್	370		
		2) ರೋಣಾ	385		
		3) ಮುಂಡರಗಿ	81		
		4) ನರಗುಂದ	225		
		5) ಶಿರಹಟ್ಟಿ	321		1382
15	ಗುಲ್ಬರ್ಗಾ	1) ಗುಲ್ಬರ್ಗಾ	312		
		2) ಆಳಂದ	314		
		3) ಯಾದಗಿರಿ	222		
		4) ಸೇಡಂ	94		
		5) ಜೇವರ್ಗಿ	182		
		6) ಸುರಪುರ	680		
		7) ಚಿತ್ತಾಪುರ	280		
		8) ಅಫಜಲ್‌ಪುರ	334		
		9) ಚಿಂಚೋಳಿ	113		
		10) ಷಹಪುರ	307		2838
16	ಹಾಸನ	1) ಅರಕಲಗೂಡು	270		
		2) ಆಲೂರು	117		
		3) ಹೊಳೆ ನರಸೀಪುರ	219		

1	2	3	4	5	6
		4) ಅರಸೀಕೆರೆ	341		
		5) ಸಕಲೇಶಪುರ	28		
		6) ಚನ್ನರಾಯಪಟ್ಟಣ	548		
		7) ಬೇಲೂರು	370		
		8) ಹಾಸನ	550		2443
17	ಹಾವೇರಿ	1) ಹಾವೇರಿ	271		
		2) ಶಿಗ್ಗಾಂವ್	224		
		3) ಸವಣೂರು	20		
		4) ಬ್ಯಾಡಗಿ	134		
		5) ರಾಣೆಬೆನ್ನೂರು	178		
		6) ಹಾನಗಲ್	250		
		7) ಹೀರೆಕೆರೂರು	211		1288
18	ಕೊಡಗು	1) ಮಡಿಕೇರಿ	7		
		2) ವಿರಾಜಪೇಟೆ			
		3) ಸೋಮವಾರಪೇಟೆ			7
19	ಕೋಲಾರ	1) ಬಾಗೇಪಲ್ಲಿ	102		
		2) ಶ್ರೀನಿವಾಸಪುರ	239		
		3) ಗುಡಿಬಂಡೆ	154		
		4) ಮಾಲೂರು	183		
		5) ಮುಳಬಾಗಿಲು	273		
		6) ಗೌರಿಬಿದನೂರು	125		
		7) ಕೋಲಾರ	344		
		8) ಚಿಕ್ಕಬಳ್ಳಾಪುರ	200		
		9) ಬಂಗಾರಪೇಟೆ	281		
		10) ಶಿಡ್ಲಘಟ್ಟ	206		
		11) ಚಿಂತಾಮಣಿ	282		2389
20	ಕೊಪ್ಪಳ	1) ಗಂಗಾವತಿ	116		
		2) ಕೊಪ್ಪಳ	188		
		3) ಕುಷ್ಟಗಿ	222		
		4) ಯಲ್ಬುರ್ಗ	210		736
21	ಮಂಡ್ಯ	1) ಮಂಡ್ಯ	278		
		2) ಶ್ರೀರಂಗಪಟ್ಟಣ	139		

1	2	3	4	5	6
		3) ಕೆ.ಆರ್.ಪೇಟೆ	334		
		4) ಮದ್ದೂರು	280		
		5) ಮಳವಳ್ಳಿ	257		
		6) ಪಾಂಡವಪುರ	200		
		7) ನಾಗಮಂಗಲ	520		2008
22	**ಮೈಸೂರು**	1) ಮೈಸೂರು	333		
		2) ಕೆ.ಆರ್.ನಗರ	197		
		3) ಹುಣಸೂರು	121		
		4) ಹೆಚ್.ಡಿ.ಕೋಟೆ	157		
		5) ಪಿರಿಯಾಪಟ್ಟಣ	169		
		6) ಟಿ.ನರಸೀಪುರ	165		
		7) ನಂಜನಗೂಡು	147		1289
23	**ರಾಯಚೂರು**	1) ರಾಯಚೂರು	115		
		2) ದೇವದುರ್ಗ	348		
		3) ಮಾನ್ವಿ	67		
		4) ಲಿಂಗಸುಗೂರು	365		
		5) ಸಿಂಧನೂರು	392		1287
24	**ಶಿವಮೊಗ್ಗ**	1) ಶಿವಮೊಗ್ಗ	97		
		2) ಭದ್ರಾವತಿ	92		
		3) ತೀರ್ಥಹಳ್ಳಿ	179		
		4) ಸಾಗರ	48		
		5) ಸೊರಬ	95		
		6) ಶಿಕಾರಿಪುರ	39		
		7) ಹೊಸನಗರ	93		643
25	**ತುಮಕೂರು**	1) ತುಮಕೂರು	360		
		2) ಮಧುಗಿರಿ	38		
		3) ಗುಬ್ಬಿ	381		
		4) ಕೊರಟಗೆರೆ	138		
		5) ತುರುವೇಕೆರೆ	415		
		6) ತಿಪಟೂರು	284		
		7) ಸಿರಾ	82		
		8) ಚಿಕ್ಕನಾಯಕನಹಳ್ಳಿ	22ಗ		

1	2	3	4	5	6
		9) ಪಾವಗಡ	88		
		10) ಕುಣಿಗಲ್	453		2462
26	ಉಡುಪಿ	1) ಉಡುಪಿ	476		
		2) ಕುಂದಾಪುರ	252	1	
		3) ಕಾರ್ಕಳ	84		811
27	ಉತ್ತರ ಕನ್ನಡ	1) ಅಂಕೋಲ	38	6	
		2) ಕಾರವಾರ	55	4	
		3) ಯಲ್ಲಾಪುರ	75	7	
		4) ಕುಮಟ	118	11	
		5) ಜೋಯಿಡಾ	66	1	
		6) ಸಿದ್ದಾಪುರ	54	3	
		7) ಸಿರಸಿ	67	3	
		8) ಭಟ್ಕಳ	69	10	
		9) ಹೊನ್ನಾವರ	122	18	
		10) ಹಳಿಯಾಳ	83	3	
		11) ಮುಂಡಗೋಡು	22	–	703
		ಒಟ್ಟು	**34278**	**67**	**34211**

780(328) ಶ್ರೀ ಓಲೇಕಾರ್ ನೆಹರು ಚನ್ನಬಸಪ್ಪ(ಬ್ಯಾಡಗಿ) : ಮಾನ್ಯ ಕಂದಾಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬರಗಾಲ ಪರಿಹಾರ ಕಾಮಗಾರಿಗಳಲ್ಲಿ ಕೆರೆ ಹೂಳೆತ್ತುವ ಕಾಮಗಾರಿಗಳನ್ನು ಮಾತ್ರ ತೆಗೆದುಕೊಳ್ಳಲು ಸೂಚಿಸಿರುವುದು ಸರಿಯೇ ;

ಆ) ಇದಕ್ಕೆ ಕಾರಣವೇನು?

ಇ) ಬರಗಾಲ ಪರಿಹಾರ ಕಾಮಗಾರಿಗಳಲ್ಲಿ ಗ್ರಾಮೀಣ ಸಂಪರ್ಕ ರಸ್ತೆ ಹಾಗೂ ಗ್ರಾಮ ನೈರ್ಮಲ್ಯ ಕಾಮಗಾರಿಗಳನ್ನು ಸೇರಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ?

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು) :

ಅ) ಬರಪರಿಹಾರ ಕಾಮಗಾರಿಗಳನ್ನು ಸಣ್ಣ ನೀರಾವರಿ ಮತ್ತು ಜಿಲ್ಲಾ ಪಂಚಾಯತ್ ಕೆರೆಗಳ ದುರಸ್ತಿ ಮತ್ತು ಪುನಃಶ್ಚೇತನ ಜಲಸಂರಕ್ಷಣೆ ಮತ್ತು ನೀರು ಸಂಗ್ರಹಣೆ ಕಾಮಗಾರಿಗಳಾದ ನಾಲಾ ಬಂದ್, ಜಲರಕ್ಷಣಾ ಕಾರ್ಯಕ್ರಮಗಳಿಗೆ ಆದ್ಯತೆ ನೀಡಲು ಸೂಚನೆಗಳಿರುತ್ತದೆ.

ಆ) 'ಅ' ಉತ್ತರದ ಹಿನ್ನೆಲೆಯಲ್ಲಿ ಉದ್ಭವಿಸುವುದಿಲ್ಲ.

ಇ) 'ಅ' ಉತ್ತರದಲ್ಲಿದ್ದಂತೆ ಕಾಮಗಾರಿಗಳನ್ನು ತೆಗೆದುಕೊಳ್ಳಲು ಅವಕಾಶವಿಲ್ಲದಿದ್ದಲ್ಲಿ ಮಾತ್ರ ರಸ್ತೆ ನಿರ್ಮಾಣ ಕಾಮಗಾರಿಗಳನ್ನು ಸಿ.ಆರ್.ಎಫ್. ಸಮಿತಿಯ ಒಪ್ಪಿಗೆ ಪಡೆದು ತೆಗೆದುಕೊಳ್ಳಲು ಅವಕಾಶವಿರುತ್ತದೆ. ಗ್ರಾಮ ನೈರ್ಮಲ್ಯ ಕಾಮಗಾರಿಗಳನ್ನು ತೆಗೆದುಕೊಳ್ಳಲು ಬರಪರಿಹಾರ ಮಾರ್ಗಸೂಚಿಗಳನ್ವಯ ಅವಕಾಶಗಳಿರುವುದಿಲ್ಲ.

781(331) ಶ್ರೀ ಓಲೇಕಾರ್ ನೆಹರು ಚನ್ನಬಸಪ್ಪ(ಬ್ಯಾಡಗಿ) : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) 2004–05ನೇ ಸಾಲಿಗೆ ಅನ್ವಯವಾಗುವಂತೆ ರೈತರ ವಿದ್ಯುತ್ ಪಂಪ್‌ಸೆಟ್‌ಗಳ ಮೇಲಿನ ಬಾಕಿ ಹಣವನ್ನು ಮನ್ನಾ ಮಾಡುವ ವಿಚಾರ ಸರ್ಕಾರಕ್ಕಿದೆಯೇ;

ಆ) ಸದರಿ ಸಾಲಿಗೆ ಅನ್ವಯವಾಗುವಂತೆ ರೈತರಿಂದ ಬರಬೇಕಾಗಿರುವ ವಿದ್ಯುತ್ ಬಾಕಿ ಹಣದ ಮೊತ್ತ ಎಷ್ಟು :

ಇ) ನೀರಾವರಿ ಸೌಲಭ್ಯವಿಲ್ಲದೇ ಈ ಪಂಪ್‌ಸೆಟ್ ಬಳಕೆ ಮಾಡದೇ ಕನಿಷ್ಠ ದರವನ್ನು ವಿಧಿಸುತ್ತಿರುವುದು ಸಮಂಜಸವೇ ;

ಈ) ಈ ರೀತಿ ಬಳಕೆ ಮಾಡದ ಅವಧಿಗೆ ಕನಿಷ್ಠ ದರವನ್ನು ವಿಧಿಸದಿರಲು ಸರ್ಕಾರದವರು ಕ್ರಮ ಜರುಗಿಸುವರೇ ;

ಉ) ಓವೈಟಿ ಯೋಜನೆಯನ್ನು ರದ್ದುಪಡಿಸಿ ರೂ.15 ಸಾವಿರಗಳನ್ನು ಠೇವಣಿಯಾಗಿ ಪಾವತಿಸುವ ಕ್ರಮವು ರೈತರಿಗೆ ಅಧಿಕ ಹೊರೆಯಾಗುವುದಿಲ್ಲವೇ ;

ಊ) ಹಾಗಿದ್ದಲ್ಲಿ, 15 ಸಾವಿರ ಠೇವಣಿಯ ಬದಲು 5 ಸಾವಿರ ಠೇವಣಿಯನ್ನು ಪಾವತಿಸುವ ಮೂಲಕ ಬಡ ರೈತರಿಗೆ ಅನುಕೂಲವಾಗುವಂತೆ ಕ್ರಮವನ್ನು ಸರ್ಕಾರ ಕೈಗೊಳ್ಳುವುದೇ ?

ಶ್ರೀ ಹೆಚ್.ಡಿ.ರೇವಣ್ಣ (ಲೋಕೋಪಯೋಗಿ ಮತ್ತು ಇಂದನ ಸಚಿವರು) :

ಅ) ಇಂತಹ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

ಆ) ಸದರೀ ಸಾಲಿಗೆ (2004–05) ಅನ್ವಯವಾಗುವಂತೆ ಏಪ್ರಿಲ್ 04ರಿಂದ ಡಿಸೆಂಬರ್ 04ರ ಅಂತ್ಯದವರೆಗೆ ನೀರಾವರಿ ಪಂಪುಸೆಟ್ಟು ಬಳಕೆದಾರರಿಂದ ಬರಬೇಕಾಗಿರುವ ವಿದ್ಯುತ್ ಬಾಕಿ ಮೊತ್ತ 383.7 ಕೋಟಿ ರೂ.ಗಳು. ಇದಲ್ಲದೇ 2003–04ರ ಸಾಲಿನಲ್ಲಿ ಬರಬೇಕಾಗಿದ್ದ ಬಾಕಿಯ ಮೊತ್ತ 395.9 ಕೋಟಿ ರೂ. ಈ ಮೊತ್ತವನ್ನೂ ಪರಿಗಣಿಸಿದಲ್ಲಿ ರೈತರ ನೀರಾವರಿ ಪಂಪುಸೆಟ್ಟುಗಳಿಂದ 31–12–2004ರ ಅಂತ್ಯದಲ್ಲಿದ್ದಂತೆ ಬರಬೇಕಾಗಿದ್ದ ವಿದ್ಯುತ್ ಬಾಕಿಯ ಒಟ್ಟು ಮೊತ್ತ 779.60 ಕೋಟಿ ರೂ.ಗಳು.

ಇ) ವಿದ್ಯುತ್ ಸರಬರಾಜು ಕಂಪನಿಗಳು ಒಬ್ಬ ಬಳಕೆದಾರನಿಗೆ ವಿದ್ಯುಚ್ಛಕ್ತಿ ಒದಗಿಸಲು ಮಾರ್ಗ ವಿಸ್ತರಣೆ ಮುಂತಾದ ಕಾರ್ಯಗಳಿಗೆ ಸಾಮಗ್ರಿಗಳನ್ನು ಖರೀದಿಸಲು ಬಂಡವಾಳ ಹೂಡಿಕೆ ಮಾಡಬೇಕಾಗಿರುತ್ತದೆ ಮತ್ತು ವಿತರಣಾ ವ್ಯವಸ್ಥೆಯ ನಿರ್ವಹಣಾ ಕಾರ್ಯಗಳಿಗೂ ಸಹ ಕರ್ಚು ಮಾಡಬೇಕಾಗುತ್ತದೆ. ಒಬ್ಬ ಗ್ರಾಹಕ ವಿದ್ಯುಚ್ಛಕ್ತಿ ಉಪಯೋಗಿಸಲಿ ಅಥವಾ ಉಪಯೋಗಿಸದೇ ಇದ್ದರೂ ಸಹಾ ಆತನ ವಿದ್ಯುತ್ ಲೈನನ್ನು ನಿರ್ವಹಣೆ ಮಾಡುವುದು ಅನಿವಾರ್ಯವಾಗಿರುತ್ತದೆ. ಆದುದರಿಂದ, ಈ ಸಂಬಂಧ ಹಣ ಖರ್ಚು ಮಾಡಲೇಬೇಕಾಗುತ್ತದೆ. ಇಂತಹ ವೆಚ್ಚದ ಭಾಗಶಃ ಹಣವನ್ನು ಮಾತ್ರ ಕನಿಷ್ಠ ದರದ ರೂಪದಲ್ಲಿ ಕರ್ನಾಟಕ ಹಣವನ್ನು ಮಾತ್ರ ಕನಿಷ್ಠ ದರದ ರೂಪದಲ್ಲಿ, ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗವು ನಿಗದಿಪಡಿಸಿರುವ ಪ್ರಕಾರ ಗ್ರಾಹಕರಿಂದ ವಸೂಲಿ ಮಾಡಲಾಗುತ್ತಿದೆ. ಇದು ರೈತರ ಪಂಪುಸೆಟ್ಟುಗಳಿಗೂ ಅನ್ವಯವಾಗುತ್ತದೆ.

ಉ) ಓ.ವೈ.ಟಿ. ಯೋಜನೆಯನ್ನು ರದ್ದುಪಡಿಸಿರುವುದಿಲ್ಲ. ಈಗಲೂ ಚಾಲ್ತಿಯಲ್ಲಿದೆ. ಈ ಯೋಜನೆಯಡಿ ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಸಂಪರ್ಕ ಪಡೆಯಲು ಭಾವಿ ನೀರಾವರಿ

ಪಂಪುಸೆಟ್ಟು ಬಳಕೆದಾರರು ರೂ.25,000/-ಗಳನ್ನು ಪಾವತಿಸಬೇಕಾಗಿರುತ್ತದೆ. ಇದನ್ನು ತುಂಬಲು ರೈತರಿಗೆ ಕಷ್ಟಕರವಾಗುತ್ತಿದೆಯೆಂದು ಹಲವಾರು ಸಂದರ್ಭಗಳಲ್ಲಿ ಜನ ಪ್ರತಿನಿಧಿಗಳು ಸರ್ಕಾರದ ಗಮನಕ್ಕೆ ತಂದಿರುತ್ತಾರೆ ಈ ಹಿನ್ನೆಲೆಯಲ್ಲಿ 'ಓವೈಟಿ' ಯೋಜನೆಗೆ ಪರ್ಯಾಯವಾಗಿ ಇನ್ನೊಂದು ಹೊಸ ಪ್ರಸ್ತಾವನೆಯು ಈಗ ಸರ್ಕಾರದ ಪರಿಶೀಲನೆಯಲ್ಲಿದೆ.

ಊ) ಮೇಲ್ಕಂಡ ಪ್ರಸ್ತಾವನೆಯ ಬಗ್ಗೆ ತೆಗೆದುಕೊಳ್ಳಲಾಗುವ ತೀರ್ಮಾನದ ಪ್ರಕಾರ ಮುಂದಿನ ಕ್ರಮಗಳನ್ನು ಕೈಗೊಳ್ಳಲಾಗುವುದು.

784(696) ಶ್ರೀ ಪದ್ಮನಾಭ ಕೊಟ್ಟಾರಿ. ಕೆ.(ವಿಟ್ಲ) : ಮಾನ್ಯ ಕಂದಾಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಸರ್ವೆ ಇಲಾಖಾ ಕೆಲಸ ಕಾರ್ಯಗಳು ತಾಲ್ಲೂಕು ಮಟ್ಟದಲ್ಲಿ ತಹಸೀಲ್ದಾರರ ವ್ಯಾಪ್ತಿಯಲ್ಲಿ ಇರುವಂತೆ ಮಾಡಿದಲ್ಲಿ ಜನರಿಗೆ ಉಂಟಾಗುವ ಅನುಕೂಲತೆಗಳ ಬಗ್ಗೆ ಸರ್ಕಾರ ಚಿಂತಿಸಿದೆಯೇ;

ಆ) ತಹಸೀಲ್ದಾರರ ವ್ಯಾಪ್ತಿಯಲ್ಲೇ ಈ ಕಾರ್ಯ ಚಟುವಟಿಕೆಗಳು ಜರುಗಿದರೆ ಜನರಿಗೆ ಬಹಳಷ್ಟು ಅನುಕೂಲತೆಗಳು ಒದಗಿ ಬರುವುದಲ್ಲದೆ, ಸರ್ಕಾರಕ್ಕೂ ಕಾರ್ಯನಿರ್ವಹಣೆಯಲ್ಲಿ ಅನುಕೂಲವಾಗುವುದು ನಿಜವಲ್ಲವೆ;

ಇ) ಹಾಗಿದ್ದಲ್ಲಿ, ಈ ದಿಸೆಯಲ್ಲಿ ಸರ್ಕಾರದ ನಿಲುವುಗಳೇನು ?

ಶ್ರೀ ಎಂ.ಪಿ.ಪ್ರಕಾಶ್ (ಕಂದಾಯ ಸಚಿವರು) :

ಅ) ಹೌದು

ಆ) ಹೌದು

ಇ) ಕರ್ನಾಟಕ ಆಡಳಿತ ಸುಧಾರಣಾ ಆಯೋಗವು ತನ್ನ ಅಂತಿಮ ವರದಿಯಲ್ಲಿ ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆಗೆ ಸಂಬಂಧಿಸಿದಂತೆ ಸಾರ್ವಜನಿಕರಿಗೆ ಒಂದೇ ಸೂರಿನಡಿಯಲ್ಲಿ ಒಬ್ಬರೇ ಅಧಿಕಾರಿಯಿಂದ ಅನುಮೋದಿಸಲ್ಪಟ್ಟ ವಿವಿಧ ಭೂದಾಖಲೆಗಳನ್ನು ಒದಗಿಸುವುದು ಮತ್ತು ಕ್ಷೇತ್ರ ಮಟ್ಟದಲ್ಲಿ ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆಯನ್ನು ಕಂದಾಯ ಇಲಾಖೆಯೊಂದಿಗೆ ಕಾರ್ಯ ವಿಲೀನಗೊಳಿಸಿ ತಾಲ್ಲೂಕು ಮಟ್ಟದಲ್ಲಿ ತಹಸೀಲ್ದಾರರ ಹಾಗೂ ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಉಸ್ತುವಾರಿಯಲ್ಲಿ ತರುವಂತೆ ಶಿಫಾರಸ್ಸು ಮಾಡಿದ್ದು ಅದರಂತೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

786(519) ಶ್ರೀ ಪಾಟೀಲ್ ಬಿ.ಸಿ.(ಹಿರೇಕೆರೂರು) : ಮಾನ್ಯ ಕಂದಾಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) 2004-2005ನೇ ಸಾಲಿನವರೆಗೆ ರಾಷ್ಟ್ರೀಯ ಭದ್ರತಾ ಯೋಜನೆಯಡಿಯಲ್ಲಿ ಹಿರೇಕೆರೂರು ತಾಲ್ಲೂಕಿನಲ್ಲಿ ಬಾಕಿ ಉಳಿದಿರುವ ಅರ್ಜಿಗಳೆಷ್ಟು ಹಾಗೂ ಯಾವ ಸಾಲಿನಿಂದ ಅವು ಬಾಕಿ ಉಳಿದಿವೆ.

ಆ) ಈ ಯೋಜನೆಯಡಿಯಲ್ಲಿ ಸರ್ಕಾರ ಅನುದಾನವನ್ನು ಬಿಡುಗಡೆ ಮಾಡದಿರಲು ಕಾರಣವೇನು.

ಇ) ಯಾವಾಗ ಮತ್ತು ಎಷ್ಟು ಹಣವನ್ನು ಬಿಡುಗಡೆ ಮಾಡಲಾಗುವುದು ?

ಶ್ರೀ ಎಂ.ಪಿ.ಪ್ರಕಾಶ್ (ಕಂದಾಯ ಸಚಿವರು) :

ಅ) 2004-2005ನೇ ಸಾಲಿನವರೆಗೆ ಹಿರೇಕೆರೂರು ತಾಲ್ಲೂಕಿನಲ್ಲಿ 61 ಅರ್ಜಿಗಳು 2001ನೇ ಸಾಲಿನಿಂದ ಬಾಕಿ ಉಳಿದಿವೆ.

ಆ) ಈ ಯೋಜನೆಗೆ ಹಣ ಬಿಡುಗಡೆಗಾಗಿ ಆರ್ಥಿಕ ಇಲಾಖೆಯನ್ನು ಸಂಪರ್ಕಿಸಲಾಗಿದೆ.

ಇ) ಆರ್ಥಿಕ ಇಲಾಖೆಯಿಂದ ಹಣ ಬಿಡುಗಡೆ ಆದನಂತರ ರಾಜ್ಯದ ಎಲ್ಲಾ ಜಿಲ್ಲೆಗಳ ಬೇಡಿಕೆ ಪರಿಗಣಿಸಿ, ಸ್ವೀಕೃತವಾಗುವ ಅನುದಾನದ ಪ್ರಮಾಣ ಗಮನದಲ್ಲಿಟ್ಟುಕೊಂಡು ಅನುದಾನ ಬಿಡುಗಡೆ ಮಾಡಲಾಗುವುದು.

787(521) ಶ್ರೀ ಪಾಟೀಲ್ ಬಿ.ಸಿ(ಹಿರೇಕೆರೂರು) : ಮಾನ್ಯ ಕಂದಾಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಅಬಲೂರು ಗ್ರಾಮದ ಸೋಮೇಶ್ವರ ದೇವಾಲಯಕ್ಕೆ ಸರ್ಕಾರ ನೀಡಿದ ಅನುದಾನವೆಷ್ಟು;

ಆ) ದೇವಾಲಯದ ಕಟ್ಟಡ ಪ್ರಗತಿ ಕುಂಠಿತಗೊಳ್ಳಲು ಕಾರಣವೇನು :

ಇ) ಈ ಬಗ್ಗೆ ತೆಗೆದುಕೊಂಡ ಕ್ರಮವೇನು ?

ಶ್ರೀ ಎಂ.ಪಿ.ಪ್ರಕಾಶ್ (ಕಂದಾಯ ಸಚಿವರು) :

ಅ) ಹಾವೇರಿ ಜಿಲ್ಲೆ ಅಬಲೂರು ಗ್ರಾಮದ ಶ್ರೀ ಸೋಮೇಶ್ವರ ದೇವಾಲಯವು ರಾಜ್ಯ ಪ್ರಾಚ್ಯ ವಸ್ತು ಮತ್ತು ಸಂಗ್ರಹಾಲಯ ಇಲಾಖೆಗೆ ಒಳಪಟ್ಟ ಸಂಸ್ಥೆಯಾಗಿರುತ್ತದೆ. ಈ ದೇವಾಲಯದ ಜೀರ್ಣೋದ್ಧಾರಕ್ಕಾಗಿ ಸರ್ಕಾರದ ಆದೇಶ ಸಂ.ಸಂಕಇ/14/ಸ್ಮಪ್ರನಿ/2000(ಭಾ) ದಿ: 14/02/2001ರಲ್ಲಿ ರೂ. 11.65 ಲಕ್ಷ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಮಂಜೂರಾಗಿದ್ದು, ಈ ಮೊಬಲಗನ್ನು ನಿರ್ದೇಶಕರು ರಾಜ್ಯ ಪ್ರಾಚ್ಯ ವಸ್ತು ಮತ್ತು ಸಂಗ್ರಹಾಲಯ, ಮೈಸೂರು ಇವರಿಗೆ ದಿ: 09/03/2001ರಂದು ಜಿಲ್ಲಾಧಿಕಾರಿಯವರಿಂದ ಕಳುಹಿಸಲಾಗಿದೆ.

ಆ) ಶ್ರೀ ಸೋಮೇಶ್ವರ ದೇವಾಲಯವು ರಾಜ್ಯ ಪ್ರಾಚ್ಯ ವಸ್ತು ಮತ್ತು ಸಂಗ್ರಹಾಲಯ ಇಲಾಖೆಯ ವ್ಯಾಪ್ತಿಗೆ ಬರುವುದರಿಂದ ಕಾಮಗಾರಿಯ ಪ್ರಗತಿ ಕುಂಠಿತಗೊಂಡಿರುವ ಬಗ್ಗೆ ಮುಜರಾಯಿ ಇಲಾಖಾ ವತಿಯಿಂದ ತಿಳಿಸಲು ಸಾಧ್ಯವಾಗುವುದಿಲ್ಲ.

ದೇವಾಲಯದ ಕಟ್ಟಡದ ಪ್ರಗತಿಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವ್ಯಾಪ್ತಿಯಲ್ಲಿರುವ ವಸ್ತು ಮತ್ತು ಸಂಗ್ರಹಾಲಯ ಇಲಾಖೆಯಿಂದ ಪಡೆದುಕೊಳ್ಳಲಾಗುವುದು.

ಇ) ಮೇಲಿನ ಉತ್ತರ ಅನ್ವಯ ಪ್ರಶ್ನೆ ಉದ್ಭವಿಸುವುದಿಲ್ಲ.

788(989) ಶ್ರೀ ಪಾಟೀಲ್ ಬಿ.ಆರ್.(ಆಳಂದ್) : ಮಾನ್ಯ ಕಂದಾಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಅಮರ್ಜಾ ಮಧ್ಯಮ ನೀರಾವರಿ ಯೋಜನೆಯಲ್ಲಿ ಭೂಮಿ ಕಳೆದುಕೊಂಡ ರೈತರ ಬಾಕಿ ಇರುವ ಪರಿಹಾರ ಧನವೆಷ್ಟು;

ಆ) ಎಷ್ಟು ವರ್ಷಗಳಿಂದ ಈ ಹಣ ಪಾವತಿಸಲು ಬಾಕಿ ಇದೆ :

ಇ) ಬಾಕಿ ಇದ್ದ ಹಣವನ್ನು ಸಂದಾಯ ಮಾಡಲು ಎಷ್ಟು ಸಮಯ ಬೇಕಾಗುವುದು?

ಶ್ರೀ ಎಂ.ಪಿ.ಪ್ರಕಾಶ್ (ಕಂದಾಯ ಸಚಿವರು) :

ಅ) ಕೋರ್ಟ್ ಪ್ರಕರಣಗಳಲ್ಲಿ ರೂ. 3,64,11,498

ಐತೀರ್ಪಿಗಾಗಿ ರೂ. 85,64,226

ಒಟ್ಟು ರೂ. **4,49,75,724**

ಆ) 3–4 ವರ್ಷಗಳಿಂದ ಪಾವತಿಗೆ ಬಾಕಿ ಇದೆ.

ಇ) ನೀರಾವರಿ ಇಲಾಖೆಯಿಂದ ಹಣ ಪಡೆದು ಪಾವತಿಸಲು ಕ್ರಮ ಕೈಗೊಳ್ಳಲಾಗುವುದು.

790(1464) ಶ್ರೀ ಪಾಟೀಲ್ ಡಿ.ಆರ್.(ಗದಗ್) : ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದಲ್ಲಿ ಒಂದು ಲಕ್ಷಕ್ಕೂ ಹೆಚ್ಚು, ಜನಸಂಖ್ಯೆ ಹೊಂದಿರುವ ಪಟ್ಟಣಗಳು ಎಷ್ಟು ;

ಆ) ಈ ಎಲ್ಲಾ ಪಟ್ಟಣಗಳಲ್ಲಿ ಪಟ್ಟಣವಾರು ವಾಯುಮಾಲಿನ್ಯದ ಪ್ರಮಾಣ ಎಷ್ಟು ;

ಇ) ಈ ವಾಯುಮಾಲಿನ್ಯ ತಡೆಗಟ್ಟಲು ಸರ್ಕಾರ ಈಗಾಗಲೇ ಕೈಗೊಂಡಿರುವ ಹಾಗೂ ಕೈಗೊಳ್ಳಲು ಉದ್ದೇಶಿಸಿರುವ ಕ್ರಮಗಳಾವುವು ;

ಈ) ಈಗಾಗಲೇ ಸಾಕಷ್ಟು ವಾಯುಮಾಲಿನ್ಯದಿಂದ ಬಳಲುತ್ತಿರುವ ಬೆಂಗಳೂರು ಹಾಗೂ ಇತರ ನಗರ ಪ್ರದೇಶಗಳಲ್ಲಿ ರಾಷ್ಟ್ರದ ರಾಜಧಾನಿಯಾಗಿರುವ ದಿಲ್ಲಿಯಲ್ಲಿ ಕೈಗೊಂಡಿರುವ ಕ್ರಮಗಳನ್ನು ಇಲ್ಲಿ ಕೈಗೊಳ್ಳಲು ಇರುವ ತೊಂದರೆಗಳೇನು; ಈ ತೊಂದರೆಗಳನ್ನು ನಿವಾರಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ :

ಉ) ಇದಕ್ಕಾಗಿ ರೂಪಿಸಲ್ಪಡುವ ಕಾರ್ಯಕ್ರಮಗಳಾವುವು ಹಾಗೂ ಅನುಷ್ಠಾನಕ್ಕೆ ಬೇಕಾಗುವ ಕಾಲಮಿತಿ ಎಷ್ಟು ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು) :

ಅ) 28; (2001ರ ಜನಗಣತಿಯ ಪ್ರಕಾರ)

ಆ) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಬೆಂಗಳೂರು ನಗರದ 6 ಕೇಂದ್ರಗಳಲ್ಲಿ ಮತ್ತು ಮೈಸೂರು ನಗರದ 2 ಕೇಂದ್ರಗಳಲ್ಲಿ ಪರಿವೇಷ್ಟಕ ವಾಯುವಿನ ಗುಣಮಟ್ಟವನ್ನು ರಾಷ್ಟ್ರೀಯ ಪರಿವೇಷ್ಟಕ ವಾಯುವಿನಗುಣ ಮಾನಕಗಳ ಅನುಸಾರ ಮಾಪನ ಮಾಡುತ್ತಿದೆ. ಮಾಪನದ ವಿವರಗಳನ್ನು ಅನುಬಂಧ-I ಮತ್ತು II ರಲ್ಲಿ ಒದಗಿಸಲಾಗಿದೆ.

ಅಲ್ಲದೆ, ರಾಜ್ಯದ 12 ಪಟ್ಟಣಗಳಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಪರಿವೇಷ್ಟಕ ವಾಯುವಿನ ಯಾದೃಚ್ಛಿಕ ಮಾದರಿಗಳನ್ನು (Random Sample)ಮಾಪನ ಮಾಡುತ್ತಿದೆ. ವಿವರಗಳನ್ನು ಅನುಬಂಧ-III ರಲ್ಲಿ ಒದಗಿಸಲಾಗಿದೆ.

ಇ) ಪಟ್ಟಣಗಳಲ್ಲಿ ವಾಯು ಮಾಲಿನ್ಯವು ಪ್ರಮುಖವಾಗಿ ವಾಹನಗಳ ಹೊಗೆಯಿಂದ ಮತ್ತು ಕೈಗಾರಿಕಾ ಚಟುವಟಿಕೆಯಿಂದ ಉಂಟಾಗುತ್ತಿದೆ. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಕೈಗಾರಿಕೆಗಳಲ್ಲಿ ವಾಯು ಮಾಲಿನ್ಯ ನಿಯಂತ್ರಣ ಘಟಕಗಳನ್ನು ಅಳವಡಿಸುವಂತೆ ನಿರ್ದೇಶನ ನೀಡುತ್ತಿದೆ ಮತ್ತು ಸಮ್ಮತಿ ಪತ್ರವನ್ನು ನೀಡುವಾಗ ಉದ್ದಿಮೆಯು ಮಾಲಿನ್ಯ ನಿಯಂತ್ರಣ

ಘಟಕಗಳನ್ನು ಅಳವಡಿಸಿರುವ ಬಗ್ಗೆ ಖಾತ್ರಿ ಮಾಡಿಕೊಳ್ಳಲಾಗುತ್ತದೆ. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ನಿರ್ದೇಶನಗಳನ್ನು ಪಾಲಿಸದ ಕೈಗಾರಿಕೆಗಳ ವಿರುದ್ಧ ವಾಯು ಮಾಲಿನ್ಯ(ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ 1981ರ ಅಡಿಯಲ್ಲಿ ಕಠಿಣ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ರಾಜ್ಯದಲ್ಲಿ ಒಟ್ಟು 390 ತಪಾಸಣಾ ಕೇಂದ್ರಗಳು ವಾಹನಗಳ ವಾಯುಮಾಲಿನ್ಯ ಪ್ರಮಾಣವು ನಿಗದಿತ ಮಟ್ಟದಲ್ಲಿದ್ದಲ್ಲಿ ಇದೆ ಎಂಬ ಪ್ರಮಾಣ ಪತ್ರವನ್ನು ನೀಡುತ್ತಿವೆ.

ವಾಹನಗಳು ಉಗುಳುವ ಹೊಗೆಯಿಂದುಂಟಾಗುವ ವಾಯುಮಾಲಿನ್ಯ ದುಷ್ಪರಿಣಾಮಗಳ ಕುರಿತು ವಿದ್ಯಾರ್ಥಿಗಳಲ್ಲಿ ಹಾಗೂ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಮತ್ತು ಇದನ್ನು ತಡೆಗಟ್ಟಲು ವಹಿಸಬೇಕಾದ ಮುಂಜಾಗರೂಕತೆಯ ಬಗ್ಗೆ ತಿಳುವಳಿಕೆಯನ್ನುಂಟು ಮಾಡುವ ಕಾರ್ಯಕ್ರಮಗಳನ್ನು ಏರ್ಪಡಿಸಲಾಗುತ್ತಿದೆ.

ವಾಹನಗಳಲ್ಲಿ ಪೆಟ್ರೋಲ್ ಬದಲು ಪರ್ಯಾಯ ಇಂಧನವನ್ನಾಗಿ ಎಲ್.ಪಿ.ಜಿ.ಯನ್ನು ಬಳಸಲು ಮತ್ತು ಬ್ಯಾಟರಿಚಾಲಿತ ವಾಹನಗಳ ಬಳಕೆಯನ್ನು ಸರ್ಕಾರವು ಉತ್ತೇಜಿಸುತ್ತಿದೆ. ಇತ್ತೀಚೆಗೆ ಬ್ಯಾಟರಿಚಾಲಿತ ದ್ವಿಚಕ್ರ ವಾಹನಗಳನ್ನು ಬೆಂಗಳೂರಿನಲ್ಲಿ ಬಿಡುಗಡೆ ಮಾಡಲಾಗಿದ್ದು, ಈ ವಾಹನಗಳಿಗೆ ಐದು ವರ್ಷಗಳವರೆಗೆ ರಸ್ತೆ ತೆರಿಗೆ ವಿನಾಯಿತಿ ನೀಡಲಾಗಿದೆ.

ಬೆಂಗಳೂರಿನಲ್ಲಿ ಪ್ರಸ್ತುತ 13 ಎಲ್.ಪಿ.ಜಿ. ರೀ-ಫಿಲ್ಲಿಂಗ್ ಸ್ಟೇಷನ್‌ಗಳು ಕಾರ್ಯನಿರ್ವಹಿಸುತ್ತಿದ್ದು ಇನ್ನೂ ಹೆಚ್ಚಿನ ರೀ-ಫಿಲ್ಲಿಂಗ್ ಸ್ಟೇಷನ್‌ಗಳನ್ನು ಪ್ರಾರಂಭಿಸುವಂತೆ ರಾಜ್ಯ ಮಟ್ಟದ ತೈಲ ಕಂಪೆನಿಗಳ ಸಮನ್ವಯಾಧಿಕಾರಿಯವರನ್ನು ಕೋರಲಾಗಿದೆ.

ಸಾರಿಗೆ ಇಲಾಖೆಯು ವಾಹನಗಳಿಂದುಂಟಾಗುವ ವಾಯುಮಾಲಿನ್ಯ ನಿಯಂತ್ರಣಕ್ಕಾಗಿ ವಿಶೇಷ ತಪಾಸಣೆ ನಡೆಸಿ 1-4-04 ರಿಂದ 31-12-04 ರವರೆಗೆ 2,99,182 ವಾಹನಗಳನ್ನು ತಪಾಸಿಸಿ, 11,810 ಪ್ರಕರಣಗಳನ್ನು ದಾಖಲಿಸಿ ರೂ. 27,61,940/-ಗಳನ್ನು ದಂಡದ ರೂಪದಲ್ಲಿ ವಸೂಲಿ ಮಾಡಲಾಗಿದೆ.

ಬೆಂಗಳೂರು ನಗರದಲ್ಲಿ ಪೆಟ್ರೋಲ್‌ನಿಂದ ದ್ವಿ-ಇಂಧನ ಎಲ್.ಪಿ.ಜಿ. ರೀತಿಗೆ ಆಟೋರಿಕ್ಷಾಗಳನ್ನು ಹಂತ ಹಂತವಾಗಿ ಪರಿವರ್ತಿಸಲು ಕ್ರಿಯಾಯೋಜನೆ ಕಾರ್ಯಗತವಾಗುತ್ತಿದೆ. ಬೆಂಗಳೂರು ನಗರದಲ್ಲಿರುವ 70,229 ಆಟೋರಿಕ್ಷಾಗಳ ಪೈಕಿ 13,730 ಆಟೋರಿಕ್ಷಾಗಳಿಗೆ ದ್ವಿ-ಇಂಧನ ಎಲ್.ಪಿ.ಜಿ.ಕಿಟ್ ಅಳವಡಿಸಲಾಗಿದೆ. 1-4-91ರ ನಂತರ ನೋಂದಣಿಯಾದ ಆಟೋರಿಕ್ಷಾಗಳಿಗೆ ಕಡ್ಡಾಯವಾಗಿ ಎಲ್.ಪಿ.ಜಿ ಕಿಟ್ ಅಳವಡಿಸುವ ಯೋಜನೆಯಿದ್ದು ಅದರಂತೆ ಇನ್ನೂ 56,499 ಆಟೋರಿಕ್ಷಾಗಳು ಜುಲೈ 2006ರ ಅಂತ್ಯಕ್ಕೆ ಪರಿವರ್ತವಾಗುವ ಯೋಜನೆ ಇದೆ.

ಇದರ ಜೊತೆಗೆ ದ್ವಿ-ಇಂಧನ ಎಲ್.ಪಿ.ಜಿ ಹೊಂದಿರುವ ಆಟೋರಿಕ್ಷಾಗಳಿಗೆ ಮಾತ್ರ ಹೊಸ ರಹದಾರಿಯನ್ನು ನೀಡಲಾಗುತ್ತಿದೆ. ಇದುವರೆಗೆ 11,925 ಆಟೋರಿಕ್ಷಾಗಳು ಇನ್-ಬಿಲ್ಟ್ ದ್ವಿ-ಇಂಧನ ಎಲ್.ಪಿ.ಜಿ ಅಳವಡಿಸಿಕೊಂಡು ಬೆಂಗಳೂರು ನಗರದಲ್ಲಿ ಸಂಚರಿಸುತ್ತಿವೆ.

ಈ) ರಾಷ್ಟ್ರದ ರಾಜಧಾನಿಯಾದ ದೆಹಲಿಯಲ್ಲಿ ವಾಯು ಮಾಲಿನ್ಯ ನಿಯಂತ್ರಿಸಲು ವಾಹನಗಳಿಗೆ ಸಿ.ಎನ್.ಜಿ.ಯನ್ನು ಬಳಸಲಾಗುತ್ತಿದೆ. ಆದರೆ ಬೆಂಗಳೂರಿನಲ್ಲಿ ಸಿ.ಎನ್.ಜಿ. ಲಭ್ಯವಿಲ್ಲದಿರುವುದರಿಂದ

ದಿನಾಂಕ:01.04.91ರ ನಂತರ ನೋಂದಣಿಯಾದ ಆಟೋರಿಕ್ಷಾಗಳಿಗೆ ಎಲ್.ಪಿ.ಜಿ. ಅಳವಡಿಸುವಂತೆ ಸಾರಿಗೆ ಇಲಾಖೆಯು ಅಧಿಸೂಚನೆ ಹೊರಡಿಸಿರುತ್ತದೆ.

ಬೆಂಗಳೂರು ನಗರದಲ್ಲಿ ಪೆಟ್ರೋಲ್‌ನಿಂದ ದ್ವಿ-ಇಂಧನ ಎಲ್.ಪಿ.ಜಿ ರೀತಿಗೆ ಆಟೋರಿಕ್ಷಾಗಳನ್ನು ಹಂತ ಹಂತವಾಗಿ ಪರಿವರ್ತಿಸಲು ಕ್ರಿಯಾಯೋಜನೆ ಕಾರ್ಯಗತವಾಗುತ್ತಿದೆ. ಬೆಂಗಳೂರು ನಗರದಲ್ಲಿರುವ 70,229 ಆಟೋರಿಕ್ಷಾಗಳ ಪೈಕಿ 13,730 ಆಟೋರಿಕ್ಷಾಗಳಿಗೆ ದ್ವಿ-ಇಂಧನ ಎಲ್.ಪಿ.ಜಿ.ಕಿಟ್ ಅಳವಡಿಸಲಾಗಿದೆ. 1-4-91ರ ನಂತರ ನೋಂದಣಿಯಾದ ಆಟೋರಿಕ್ಷಾಗಳಿಗೆ ಕಡ್ಡಾಯವಾಗಿ ಎಲ್.ಪಿ.ಜಿ ಕಿಟ್ ಅಳವಡಿಸುವ ಯೋಜನೆಯಿದ್ದು, ಅದರಂತೆ ಇನ್ನೂ 56,499 ಆಟೋರಿಕ್ಷಾಗಳು ಜುಲೈ 2006ರ ಅಂತ್ಯಕ್ಕೆ ಪರಿವರ್ತಿತವಾಗುವ ಯೋಜನೆ ಇದೆ.

ಇದರ ಜೊತೆಗೆ ದ್ವಿ-ಇಂಧನ ಎಲ್.ಪಿ.ಜಿ. ಹೊಂದಿರುವ ಆಟೋರಿಕ್ಷಾಗಳಿಗೆ ಮಾತ್ರ ಹೊಸ ರಹದಾರಿಯನ್ನು ನೀಡಲಾಗುತ್ತಿದೆ. ಇದುವರೆಗೆ 11,925 ಆಟೋರಿಕ್ಷಾಗಳು ಇನ್-ಬಿಲ್ಟ್ ದ್ವಿ-ಇಂಧನ ಎಲ್.ಪಿ.ಜಿ ಅಳವಡಿಸಿಕೊಂಡು ಬೆಂಗಳೂರು ನಗರದಲ್ಲಿ ಸಂಚರಿಸುತ್ತಿವೆ.

ಅನುಬಂಧ-I

ಬೆಂಗಳೂರು : (ಪರಿವೇಷ್ಟಕ ವಾಯುಗುಣ ಮಟ್ಟದ ವಾರ್ಷಿಕ ಸರಾಸರಿ)

ಕ್ರಮ ಸಂಖ್ಯೆ	ಕೇಂದ್ರಗಳು	So_2 Ug/m³	NO_x Ug/m³	SPM Ug/m³	RSPM Ug/m³
1	ಆನಂದರಾವ್ ವೃತ್ತ	7.8	46	195.7	80.9
2	ಆಮ್ಕೋ ಬ್ಯಾಟರಿಸ್, ಮೈಸೂರು ರಸ್ತೆ	6.7	28.4	181.4	78.1
3	ಗ್ರಾಫೈಟ್ ಇಂಡಿಯಾ, ವೈಟ್ ಫೀಲ್ಡ್ ರಸ್ತೆ	16	37.5	139.3	62.7

ಬೆಂಗಳೂರಿನಲ್ಲಿ ಹೊಸದಾಗಿ ಸ್ಥಾಪಿಸಲಾದ 3 ಕೇಂದ್ರಗಳ ಪರಿವೇಷ್ಟಕ ವಾಯುಗುಣ ಮಟ್ಟದ ಮಾಹೆವಾರು ಮಾಹಿತಿ

	ಕೇಂದ್ರಗಳು	So_2 Ug/m³	NO_x Ug/m³	SPM Ug/m³	RSPM Ug/m³
ಸೆಪ್ಟೆಂಬರ್-2004	ಕೆ.ಹೆಚ್.ಬಿ ಕೈಗಾರಿಕಾ ಪ್ರದೇಶ ಯಲಹಂಕ	14	52.8	51	121
	ಪೀಣ್ಯ ಕೈಗಾರಿಕಾ ಪ್ರದೇಶ,ಪೀಣ್ಯ	18.5	34.7	57	124
	ವಿಕ್ಟೋರಿಯಾ ಆಸ್ಪತ್ರೆ, ಕೆ.ಆರ್. ಮಾರುಕಟ್ಟೆ	7.4	49	45	104
	ಕೆ.ಹೆಚ್.ಬಿ.ಕೈಗಾರಿಕಾ ಪ್ರದೇಶ ಯಲಹಂಕ	9.1	71.3	43	86

ಅಕ್ಟೋಬರ್–2004	ಪೀಣ್ಯ ಕೈಗಾರಿಕಾ ಪ್ರದೇಶ, ಪೀಣ್ಯ	8.8	42.4	52	112
	ವಿಕ್ಟೋರಿಯಾ ಆಸ್ಪತ್ರೆ, ಕೆ.ಆರ್. ಮಾರುಕಟ್ಟೆ	8.6	51.4	47	100
	ಕೆ.ಹೆಚ್.ಬಿ.ಕೈಗಾರಿಕಾ ಪ್ರದೇಶ ಯಲಹಂಕ	8	50.4	58	143
ನವೆಂಬರ್–2004	ಪೀಣ್ಯ ಕೈಗಾರಿಕಾ ಪ್ರದೇಶ , ಪೀಣ್ಯ	7	28	82	154
	ವಿಕ್ಟೋರಿಯಾ ಆಸ್ಪತ್ರೆ, ಕೆ.ಆರ್. ಮಾರುಕಟ್ಟೆ	6.7	50.3	64	141
	ಕೆ.ಹೆಚ್.ಬಿ ಕೈಗಾರಿಕಾ ಪ್ರದೇಶ ಯಲಹಂಕ	6.6	47.7	83	189
ಡಿಸೆಂಬರ್–2004	ಪೀಣ್ಯ ಕೈಗಾರಿಕಾ ಪ್ರದೇಶ, ಪೀಣ್ಯ	8	47.1	78	184
	ವಿಕ್ಟೋರಿಯಾ ಆಸ್ಪತ್ರೆ, ಕೆ.ಆರ್. ಮಾರುಕಟ್ಟೆ	7.3	49	72	203

ಅನುಬಂಧ–II

ಮೈಸೂರು : (ಪರಿವೇಷ್ಠಕ ವಾಯುಗುಣ ಮಟ್ಟದ ವಾರ್ಷಿಕ ಸರಾಸರಿ)

ಕ್ರಮ ಸಂಖ್ಯೆ	ಕೇಂದ್ರಗಳು	So_2 Ug/m^3	NO_x Ug/m^3	SPM Ug/m^3	RSPM Ug/m^3
1	ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣ, ಮೈಸೂರು (ವಸತಿ ಗ್ರಾಮೀಣ ಮತ್ತು ಇತರ ಪ್ರದೇಶ)	11	18	96	54
2	ಕ.ರಾ.ಮಾ.ನಿ.ಮಂ ಕಟ್ಟಡ ಕೆ.ಆರ್.ಎಸ್.ರಸ್ತೆ, ಮೆಟಗಳ್ಳಿ (ಕೈಗಾರಿಕಾ ಪ್ರದೇಶ)	11	17	92	52

ಅನುಬಂಧ-III

ರಾಜ್ಯದಲ್ಲಿ ಸ್ಥಾಪಿಸಲಾದ ಇತರೆ 12 ಕೇಂದ್ರಗಳ ಪರಿವೇಷ್ಠಕ ವಾಯುಗುಣಮಟ್ಟ

Regional office	Name of the Location/Station	Type of Area	Duration of Monitoring	No. of days menitored	Air Quality (average values of the air pollutants monitored in Ug/M3				
					RSPM in	SO2 Ug M3	NOX Ug/M3	SPM Ug/M3	CO
1	2	3	4	5	6	7	8	9	10
	Regional office Building	Industrial Area	8 hrs	49	38.72	3.718	6.392	24.93	-
Belgaum	SSI Association, Udyambag	Industrial Area	8 Hrs	33	89:51	4.271	10.06	57.1	-
Tumkur	Regional Office Building	Industrial Area	8 hrs	75	66.027	15.875	39.975	215.7	-
	Rani Chennamma Circle, Hubli	Residential, Rural and other areas	24/8 hr	88	178	14.9	14.8	-	-
Dharwad	Lakkammanahalli Indl Are; Dharwad	Industrial Area	24/8 hr	35	45.4	17.6	13.2	-	-
	Belur Indl. Area, Dharwad	Industrial Area	8 hrs	10	46.8	8.5	6.0	-	-
	Muncipality, Gadag	Residential, Area Rural and other areas	9 hrs	15	61.8	12.9	9.5	-	-
Mandya	Regional Office building,	Residential Area	8 hrs	20	39.5	6.15	15.2	75.25	-
Hassan	B. Katihalli Indl. Area	Industrial Area	8 hrs	39	39.32	11.69	28.73	83.23	-
	Kuvempunagar	Residential Area	8 hrs	9	32.8	37.85	35.56	122	-

1	2	3	4	5	6	7	8	9	10
	N.R. Circle	Residential, Rural and other areas	8 hrs	39	106.51	18.09	37.24	317.94	-
Chitra durga	Vivekandaya Petrol Bunk	Residential, Rural and other areas	8 hrs	21	158	5.102	5.61	149	-
Gulbarga	Gul Development Authorities	Residential, Rural and other areas	24 hrs	42	119.21	-	-	58.17	-
	Janata Bazaar	Residential, Rural and other areas	24 hrs	40	191.12	-	-	94.82	-
	Regional Office Building Bijapur	Residential Area	8 hrs	3	24.25	2.85	1.22	315.05	-
Bijapur	Terrace of Gandhi Chowk police Station, Bijapur,	Residential, Rural and other areas	8 hrs	3	35.04	4.14	2.11	346.41	-
	Regional Office, Bellary	Residential Area	8 hrs	2	58.26	6.76	7.33	184.33	-
Bellary	Muncipality Office, Bellary								
	JVSL, Tomagallu, Bellary Dist	Residential, Rural and other areas	24 hrs	9	58.72	7.94	9.19	108.52	-
	Shivappa Naik Market Building	Residential Rural and other areas	8 hrs	20	88.216	2.326	2.0445	231.75	-

1	2	3	4	5	6	7	8	9	10
Shimoga	Pearlite Liner Ltd	Industrial Area	8 hrs	10	-	1.255	1.044	155.78	-
	Gowrapura	Residential Area	8 hrs	3	-	-		169.68	-
	HPF Guest House, Kumarapattanum, Harihara	Industrial area	8 hrs	21	93.15	2.96	3.52	77.1	-
	HPF intake well, Kumarapattanum, Harihara	Indstrial Area	8 hrs	26	97.174	3.88	4.7	141.2	-
Davan gere	Public Works Department Office, Division-3	Residential, Rurla and other area	8 hrs	61	269.03	5.47	5.72	394.84	-
	Regional Office, KSPCB	Residential area	8 hrs	61	50.90	2.88	2.82	63.82	-
Bidar	Naubad Ind Area R.O. building	Industrial Area	8 hrs	4	156.44	-	-	271.37	

792 (1466) ಶ್ರೀ ಡಿ.ಆರ್. ಪಾಟೀಲ್ (ಗದಗ್): ಲೋಕೋಪಯೋಗಿ ಮತ್ತು ಇಂಧನ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ರಾಜ್ಯದಲ್ಲಿ ಜಿಲ್ಲಾವಾರು ವಿದ್ಯುತ್ ಚಾಲಿತ ನೀರಾವರಿ ಪಂಪುಸೆಟ್ಟುಗಳ ಸಂಖ್ಯೆ ಎಷ್ಟು (ಮಾಹಿತಿ ಒದಗಿಸುವುದು):

ಆ) ರಾಜ್ಯದ ಜಿಲ್ಲಾವಾರು ಗ್ರಾಮೀಣ ಪ್ರದೇಶದ ಜನತೆಗೆ ಕುಡಿಯುವ ನೀರಿನ ಸಲುವಾಗಿ ಉಪಯೋಗಿಸುವ ವಿದ್ಯುತ್ ಪಂಪುಸೆಟ್ಟುಗಳ ಸಂಖ್ಯೆ ಎಷ್ಟು (ಮಾಹಿತಿ ಒದಗಿಸುವುದು):

ಇ) ಗ್ರಾಮೀಣ ಪ್ರದೇಶದ ಪ್ರತಿಯೊಬ್ಬರ ಜೀವನಕ್ಕೆ ಅವಶ್ಯಕವಾಗಿರುವ ಕುಡಿಯುವ ನೀರಿನ ಸರಬರಾಜಿಗಾಗಿ ವಿನಿಯೋಗಿಸುವ ವಿದ್ಯುತ್ ಶಕ್ತಿಯ ದರ ಕೆಲವು ರೈತರು ಉಪಯೋಗಿಸುವ ವಿದ್ಯುತ್ ದರಕ್ಕಿಂತ ಬಹಳಷ್ಟು ಹೆಚ್ಚಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಈ) ಹಾಗಿದ್ದಲ್ಲಿ, ಇದನ್ನು ಸರಿಪಡಿಸಲು ರೈತರಿಗೆ ಪೂರೈಸುವ ದರದಲ್ಲಿಯೇ ಗ್ರಾಮ ಪಂಚಾಯತಿಗಳಿಗೆ ಕುಡಿಯುವ ನೀರು ಪೂರೈಸಲು ಬೇಕಾಗುವ ವಿದ್ಯುತ್ ಶಕ್ತಿಯನ್ನು ಪೂರೈಸಲು ಸರ್ಕಾರ ಕ್ರಮ ಕೈಗೊಳ್ಳುವುದೇ;

ಉ) ಇದಕ್ಕಾಗಿ ಬೇಕಾಗಬಹುದಾದ ಹೆಚ್ಚಿನ ಸಹಾಯ ಧನ ಎಷ್ಟು?

ಶ್ರೀ ಹೆಚ್. ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ದಿನಾಂಕ 31–12–2004ರ ಅಂತ್ಯಕ್ಕೆ ಇರುವಂತೆ ರಾಜ್ಯದಲ್ಲಿರುವ ವಿದ್ಯುತ್ ಚಾಲಿತ ನೀರಾವರಿ ಪಂಪುಸೆಟ್ಟುಗಳ ಒಟ್ಟು ಸಂಖ್ಯೆ 14.23 ಲಕ್ಷ ಇವುಗಳ ಜಿಲ್ಲಾವಾರು ವಿವರಗಳನ್ನು ಅನುಬಂಧ–1 ರಲ್ಲಿ ಒದಗಿಸಿದೆ.

ಆ) ದಿನಾಂಕ 31–12–2004ರ ಅಂತ್ಯಕ್ಕೆ ಇರುವಂತೆ ರಾಜ್ಯದಲ್ಲಿರುವ ಗ್ರಾಮೀಣ ಪ್ರದೇಶದ ಜನತೆಗೆ ಕುಡಿಯುವ ನೀರಿನ ಸಲುವಾಗಿ ಉಪಯೋಗಿಸುವ ವಿದ್ಯುತ್ ಪಂಪುಸೆಟ್ಟು ಸ್ಥಾವರಗಳ ಒಟ್ಟು ಸಂಖ್ಯೆ 54,120 ಇವುಗಳ ಜಿಲ್ಲಾವಾರು ವಿವರಗಳನ್ನು ಅನುಬಂಧ–2ರಲ್ಲಿ ಒದಗಿಸಿದೆ.

ಇ) ಕುಡಿಯುವ ನೀರಿನ ಸ್ಥಾವರಕ್ಕೆ ವಿದ್ಯುತ್ ಜಕಾತಿ ಎಲ್.ಟಿ–6ರ ಪ್ರಕಾರ ಬಿಲ್ಲು ಮಾಡಲಾಗುತ್ತದೆ. ಪ್ರಸ್ತುತ ಇದು ನಿಗದಿತ ಶುಲ್ಕ ಹೆಚ್.ಪಿ. ಒಂದಕ್ಕೆ ರೂ 35/– ಹಾಗೂ ಬಳಕೆದಾರ ಯೂನಿಟ್ಟು ಒಂದಕ್ಕೆ 310 ಪೈಸೆ ಆಗಿರುತ್ತದೆ.

ಜಕಾತಿ ದರ ನಿಷ್ಕರ್ಷೆಯು, ಬಳಕೆದಾರರ ಹಣ ಪಾವತಿಸುವ ಸಾಮರ್ಥ್ಯ ಬಳಕೆಯಾಗುವ ವಿದ್ಯುತ್‌ನ ಪ್ರಮಾಣ, ಉದ್ದೇಶ. ಲಭ್ಯವಿರುವ ಕ್ರಾಸ್ ಸಬ್ಸಿಡಿ ಇತ್ಯಾದಿಗಳನ್ನು ಅವಲಂಬಿಸಿರುತ್ತದೆ. ಇವುಗಳನ್ನೆಲ್ಲವನ್ನು ಸಮಗ್ರವಾಗಿ ಪರಿಶೀಲಿಸಿ, ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗವು ದರವನ್ನು ನಿಗದಿಪಡಿಸಿರುತ್ತದೆ. ಕರ್ನಾಟಕ ವಿದ್ಯುತ್ ದರಗಳನ್ನು ವಿದ್ಯುತ್ ಸರಬರಾಜು ಕಂಪನಿಗಳು ಕುಡಿಯುವ ನೀರು ಸ್ಥಾವರಗಳು ಮತ್ತು ನೀರಾವರಿ ಪಂಪುಸೆಟ್ಟುಗಳಿಗೆ ವಿಧಿಸುತ್ತಿವೆ.

ಈ) ವಿದ್ಯುತ್ ದರಗಳ ನಿಷ್ಕರ್ಷೆಗಳನ್ನು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗವು ಅಮೂಲಾಗ್ರವಾಗಿ ಪರಿಶೀಲಿಸಿದ ನಂತರವೇ ಮಾಡುತ್ತಿದೆ. ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗವು ನಿಗದಿಪಡಿಸುವ ದರಗಳನ್ನು ಅನುಷ್ಠಾನಗೊಳಿಸುವ ಕೆಲಸವನ್ನು ಮಾತ್ರ ವಿದ್ಯುತ್ ಸರಬರಾಜು ಕಂಪನಿಗಳು ಮಾಡುತ್ತಿವೆ.

ಉ) ಇದಕ್ಕಾಗಿ ಬೇಕಾಗಬಹುದಾದ ಹೆಚ್ಚುವರಿ ಸಹಾಯ ಧನ ವಾರ್ಷಿಕ ಸುಮಾರು 148 ಕೋಟಿ ರೂ.ಗಳು.

793 (531) ಶ್ರೀ ಎಸ್. ಎಸ್. ಪಾಟೀಲ್ (ಮುಂಡರಗಿ): ಲೋಕೋಪಯೋಗಿ ಮತ್ತು ಇಂಧನ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಗದಗ ಜಿಲ್ಲೆ ಮುಂಡರಗಿ ತಾಲ್ಲೂಕಿನ ಕೊರ್ಲಹಳ್ಳಿ ಬಳಿ ಸೇತುವೆ ನಿರ್ಮಾಣ ಮಾಡಿದ್ದು, ಅದರಿಂದ ಗದಗ ಮುಂಡರಗಿ-ಹಡಗಲಿ ಮಾರ್ಗವಾಗಿ ಬೆಂಗಳೂರಿಗೆ ಹೋಗಲು ಎಷ್ಟು ಕಿಮೀ ಉಳಿತಾಯ ಆಗುತ್ತದೆ ?

ಆ) ಸದರಿ ಸೇತುವೆ ಆದ ನಂತರ ವಾಹನ ಸಂಚಾರ ಹೆಚ್ಚಾಗಿರುವುದು ನಿಜವೇ?

ಇ) ಹೆದ್ದಾರಿ ಸಂಖ್ಯೆ 63 ಗದಗ ತಾಲ್ಲೂಕು ಅಡವಿಸೋಮಾಪುರದಿಂದ ಮುಂಡರಗಿ ತಾಲ್ಲೂಕು ಹಮ್ಮಿಗಿ ವಿಠಲಾಪುರದವರೆಗೆ ರಸ್ತೆ ಸುಧಾರಿಸಲು ಸಿ.ಆರ್.ಎಫ್. ಅಡಿಯಲ್ಲಿ ಸೇರಿಸಿ ಕಾಮಗಾರಿ ಕೈಗೊಳ್ಳಲಾಗುವುದೇ (ವಿವರ ನೀಡುವುದು)?

ಶ್ರೀ ಹೆಚ್. ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಗದಗ ಜಿಲ್ಲೆ ಮುಂಡರಗಿ ತಾಲ್ಲೂಕಿನ ಕೊರ್ಲಹಳ್ಳಿ ಬಳಿ ಸೇತುವೆ ನಿರ್ಮಾಣ ಮಾಡಿರುವುದರಿಂದ ಗದಗ-ಮುಂಡರಗಿ-ಹಡಗಲಿ-ಇಟಗಿ-ಕೊಟ್ಟೂರ-ಉಜ್ಜಯಿನಿ-ಜಗಳೂರ-ಜೋಗಹಳ್ಳಿ-ಚಿತ್ರದುರ್ಗ ಮುಖಾಂತರ ಬೆಂಗಳೂರಿಗೆ ಹೋಗಲು 45.00 ಕಿಮೀ ಉಳಿತಾಯವಾಗುತ್ತದೆ.

ಆ) ಸದರಿ ಸೇತುವೆ ಆದ ನಂತರ ವಾಹನಗಳ ಸಂಚಾರವು ಹೆಚ್ಚಾಗಿರುವುದು ನಿಜ.

ಇ) ಗದಗ-ಮುಂಡರಗಿ-ಹೆಸರೂರ ರಸ್ತೆ ಕಿಮೀ 7:50 ರಿಂದ 12.20 ರವರೆಗೆ (ಆಯ್ದಭಾಗಗಳಲ್ಲಿ) ಕೇಂದ್ರ ರಸ್ತೆ ನಿಧಿ ಅಡಿಯಲ್ಲಿ ಸುಧಾರಣೆ ಕೆಲಸದ ಟೆಂಡರ್ ರೂ. 41.02 ಲಕ್ಷಗಳಿಗೆ ಅನುಮೋದನೆಯಾಗಿದ್ದು, ಸುಧಾರಣೆ ಕೆಲಸವು ಪ್ರಾರಂಭವಾಗಿದೆ.

794(532) ಶ್ರೀ ಪಾಟೀಲ್ ಎಸ್. ಎಸ್. (ಮುಂಡರಗಿ): ಲೋಕೋಪಯೋಗಿ ಮತ್ತು ಇಂಧನ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಗದಗ ಜಿಲ್ಲಾ ಮುಂಡರಗಿ ಕ್ರೀಡಾಂಗಣಕ್ಕೆ ಶ್ರೀ ಜಗದ್ಗುರು ಅನ್ನದಾನೀಶ್ವರ ಮಹಾಸ್ವಾಮಿಗಳು ನೀಡಿರುವ ಸರ್ವೆ ನಂ.5ರ ಜಮೀನಿನಲ್ಲಿರುವ ವಿದ್ಯುತ್ ಕಂಬಗಳನ್ನು ತೆರವು ಮಾಡಲು ಆದೇಶ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ವಿದ್ಯುತ್ ಕಂಬಗಳನ್ನು ತೆಗೆದಿಲ್ಲದಿರುವುದರಿಂದ ಕ್ರೀಡಾಂಗಣ ಮಾಡಲು ತೊಂದರೆಯಾಗಿರುವುದರಿಂದ ಎಷ್ಟು ದಿನಗಳಲ್ಲಿ ವಿದ್ಯುತ್ ಕಂಬಗಳನ್ನು ಸ್ಥಳಾಂತರಿಸಲಾಗುವುದು?

ಶ್ರೀ ಎಂ.ಪಿ. ಪ್ರಕಾಶ್ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಈ ಕ್ರೀಡಾಂಗಣಕ್ಕೆ ನೀಡಿರುವ ಜಮೀನಿನಲ್ಲಿ 33 ಕೆ.ವಿ. ಸಿಂಗಟಾಲೂರು ವಿದ್ಯುತ್ ಲೈನು ಹಾಗೂ 11 ಕೆ.ವಿ. ಕಲಕೇರಿ ಫೀಡರುಗಳು ಪ್ರತ್ಯೇಕವಾಗಿ ಹಾಯ್ದು ಹೋಗಿರುತ್ತವೆ. ಈ ಎರಡೂ ಮಾರ್ಗಗಳ ಸ್ಥಳಾಂತರಕ್ಕಾಗಿ ಅಂದಾಜು ಪಟ್ಟಿಗಳನ್ನು "ಠೇವಣಿ ವಂತಿಗೆ" ಶೀರ್ಷಿಕೆಯಲ್ಲಿ ತಯಾರಿಸಿದ್ದು, ಅಂದಾಜು ವೆಚ್ಚ ಅನುಕ್ರಮವಾಗಿ ರೂ. 1,75,574/- ಹಾಗೂ ರೂ. 5.964/- ಗಳನ್ನು ಸಂದಾಯ ಮಾಡುವಂತೆ ಜಿಲ್ಲಾ ಯುವಜನ ಸೇವಾ ಮತ್ತು ಕ್ರೀಡಾಧಿಕಾರಿ. ಗದಗರವರಿಗೆ

ದಿನಾಂಕ 25–1–2005 ಮತ್ತು 22–1–2005ರ ಪತ್ರಗಳ ಮೂಲಕ ತಿಳಿಸಲಾಗಿದೆ. ಕಂಬಗಳ ಸ್ಥಳಾಂತರಕ್ಕಾಗಿ ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಗೆ ತಗಲುವ ವೆಚ್ಚವನ್ನು ಭರಿಸಿಕೊಳ್ಳದೆಯೇ ಕಂಬಗಳನ್ನು ಸ್ಥಳಾಂತರಿಸಲು ಯಾವ ಆದೇಶವೂ ಇರುವುದಿಲ್ಲ. ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ ಎಸ್ ಅಂಡ್ ಡಿ ಕೋಡ್ 2000–01ರ ಪ್ರಕಾರ ಸ್ಥಳಾಂತರಕ್ಕೆ ತಗಲುವ ವೆಚ್ಚವನ್ನು ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ ಭರಿಸಬೇಕಾಗಿರುತ್ತದೆ.

ಆ) ಜಿಲ್ಲಾ ಯುವಜನ ಸೇವಾ ಮತ್ತು ಕ್ರೀಡಾಧಿಕಾರಿರವರು ಅಂದಾಜು ವೆಚ್ಚದ ಹಣವನ್ನು ಸಂದಾಯ ಮಾಡಿದ ಕೂಡಲೇ ಈ ಕಂಬಗಳ ಸ್ಥಳಾಂತರಿಸುವ ಕಾರ್ಯವನ್ನು ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ಕೈಗೊಳ್ಳುತ್ತದೆ.

795(534) ಶ್ರೀ ಎಸ್. ಎಸ್. ಪಾಟೀಲ್ (ಮುಂಡರಗಿ): ಕಾರ್ಮಿಕ ಮತ್ತು ಹಜ್ ರಾಜ್ಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಗದಗ ಜಿಲ್ಲೆ ಮುಂಡರಗಿ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗೆ ಕಟ್ಟಡ ಕಟ್ಟಲು ಕೈಗಾರಿಕಾ ವಸಾಹತುವಿನಲ್ಲಿ ಕೈಗಾರಿಕಾ ಇಲಾಖೆಯವರು ಜಾಗ ಮಂಜೂರು ಮಾಡಿದ್ದು ಅದನ್ನು ಇಲಾಖಾ ವಶಕ್ಕೆ ತೆಗೆದುಕೊಂಡಿಲ್ಲದಿರಲು ಕಾರಣವೇನು;

ಆ) ಸದರಿ ಜಾಗ ಇಲಾಖಾ ವಶಕ್ಕೆ ತೆಗೆದುಕೊಂಡು ಎಂದಿನಿಂದ ಕಟ್ಟಡ ಕೆಲಸ ಪ್ರಾರಂಭಿಸಲಾಗುವುದು?

ಶ್ರೀ ತನ್ವೀರ್ ಸೇಠ್ (ಕಾರ್ಮಿಕ ಮತ್ತು ಹಜ್ ರಾಜ್ಯ ಸಚಿವರು) :

ಅ) ಹಣಕಾಸು ಲಭ್ಯವಾದಾಗ ಭೂಮಿಯನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಲಾಗುವುದು.

ಆ) ಭೂಮಿಯನ್ನು ಸ್ವಾಧೀನಕ್ಕೆ ತೆಗೆದುಕೊಂಡ ನಂತರ ಮತ್ತು ಹಣದ ಲಭ್ಯತೆಯನ್ನಾಧರಿಸಿ ಕಟ್ಟಡ ಕೆಲಸ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದು.

796(535) ಶ್ರೀ. ಪಾಟೀಲ್ ಎಸ್. ಎಸ್.(ಮುಂಡರಗಿ): ಲೋಕೋಪಯೋಗಿ ಹಾಗೂ ಇಂಧನ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ರಾಜ್ಯದಲ್ಲಿ ಲೋಕೋಪಯೋಗಿ ಇಲಾಖೆಗೆ ಸೇರಿದ ರಸ್ತೆಗಳ ದುರಸ್ತಿಗಾಗಿ ಪ್ರತಿ ಕಿ.ಲೋ.ಮೀಟರ್‌ಗೆ ಎಷ್ಟು ಹಣ ಒದಗಿಸಲಾಗಿದೆ;

ಆ) ಮುಂಡರಗಿ ಮತದಾರ ಕ್ಷೇತ್ರದಲ್ಲಿ ಲೋಕೋಪಯೋಗಿ ಇಲಾಖೆಗೆ ಸೇರಿದ ರಸ್ತೆಗಳೆಷ್ಟು (ಕಿ.ಲೋ.ಮೀಟರ್‌ವಾರು ವಿವರ ನೀಡುವುದು);

ಇ) ಸದರಿ ರಸ್ತೆಗಳು ಹಾಳಾಗಿದ್ದು ಅವುಗಳನ್ನು ದುರಸ್ತಿ ಮಾಡಲು ಸರ್ಕಾರ ಕ್ರಮ ಕೈಗೊಳ್ಳದಿರಲು ಕಾರಣಗಳೇನು;

ಈ) ಕೂಡಲೇ ಗುಂಡಿಗಳನ್ನು ಮುಚ್ಚಲಾಗುವುದೇ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಹಾಗೂ ಇಂಧನ ಸಚಿವರು) :

ಅ) ಲೋಕೋಪಯೋಗಿ ಇಲಾಖೆಗೆ ಸೇರಿದ ರಸ್ತೆಗಳ ದುರಸ್ತಿಗೆ ಪ್ರತಿ ಕಿ.ಮೀ.ಗೆ ಸರಾಸರಿ ಸುಮಾರು 49,000–00 ರೂ. ಒದಗಿಸಲಾಗಿದೆ.

ಆ) ಮುಂಡರಗಿ ಮತದಾರರ ಕ್ಷೇತ್ರದಲ್ಲಿ ಲೋಕೋಪಯೋಗಿ ಇಲಾಖೆಗೆ ಸೇರಿದ ರಸ್ತೆಯ ಉದ್ದ ಒಟ್ಟು 268.15 ಕಿಮೀ ಇರುತ್ತದೆ. ಇದರಲ್ಲಿ 92.80 ಕಿಮೀ ರಾಜ್ಯ ಹೆದ್ದಾರಿ ಮತ್ತು 175.35 ಕಿಮೀ ಜಿಲ್ಲಾ ಮುಖ್ಯ ರಸ್ತೆ ಇರುತ್ತದೆ.

ಇ) ದುರಸ್ತಿ ಕಾರ್ಯ ಪ್ರಗತಿಯಲ್ಲಿರುತ್ತದೆ. ಕಾಮಗಾರಿಗಳನ್ನು ಟೆಂಡರ್ ಕರೆದು ಪ್ರಾರಂಭಿಸಬೇಕಿದ್ದರಿಂದ ಹಾಗೂ ಈ ವರ್ಷದಲ್ಲಿ ಅತಿಯಾದ ಮಳೆಯಿಂದಾಗಿ ಕಾಮಗಾರಿ ಪ್ರಾರಂಭಿಸುವುದಕ್ಕೆ ತಡೆಯುಂಟಾಗಿತ್ತು.

ಈ) ಲೋಕೋಪಯೋಗಿ ಇಲಾಖೆಗೆ ಸೇರಿದ ಜಿಲ್ಲಾ ಮುಖ್ಯ ರಸ್ತೆಗಳಲ್ಲಿ ಗುಂಡಿಮುಚ್ಚುವ ಕಾರ್ಯ ಪ್ರಗತಿಯಲ್ಲಿದೆ. ಸಾಧ್ಯವಾದಷ್ಟು ಬೇಗ ಗುಂಡಿಮುಚ್ಚುವ ಕೆಲಸವನ್ನು ಪೂರ್ಣಗೊಳಿಸಲಾಗುವುದು ಮತ್ತು ರಾಜ್ಯ ಹೆದ್ದಾರಿಗಳ ಸುಧಾರಣೆಯನ್ನು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದ ಮೂಲಕ ಕೈಗೊಳ್ಳಲಾಗುವುದು.

797(537) ಶ್ರೀ ಪಾಟೀಲ್ ಎಸ್. ಎಸ್. (ಮುಂಡರಗಿ): ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಗದಗ ಜಿಲ್ಲಾ ಬಿಂಕದಕಟ್ಟೆ ಪ್ರಾಣಿ ಸಂಗ್ರಹಾಲಯ ಅಭಿವೃದ್ಧಿಗೆ ರೂ.50.00 ಲಕ್ಷ ಮಂಜೂರಾಗಿದ್ದು, ಅದರಲ್ಲಿ ಇಲ್ಲಿಯವರೆಗೆ ಎಷ್ಟು ಹಣ ಬಿಡುಗಡೆಯಾಗಿದೆ :

ಆ) ಉಳಿದ ಹಣ ಯಾವಾಗ ಬಿಡುಗಡೆ ಮಾಡಲಾಗುವುದು;

ಇ) ಈ ಸಂಗ್ರಹಾಲಯದ ಅಭಿವೃದ್ಧಿಗಾಗಿ ಕೈಗೊಂಡ ಕ್ರಮಗಳೇನು (ವಿವರ ನೀಡುವುದು)?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :

ಅ) ಗದಗ ಜಿಲ್ಲಾ ಬಿಂಕದಕಟ್ಟೆ ಪ್ರಾಣಿ ಸಂಗ್ರಹಾಲಯದ ಅಭಿವೃದ್ಧಿಗೆ ರೂ. 45 ಲಕ್ಷಕ್ಕೆ ಕಾರ್ಯಯೋಜನೆ ಸಲ್ಲಿಸಿದ್ದು ಅದಕ್ಕೆ ಸರ್ಕಾರ ಆದೇಶ ಸಂಖ್ಯೆ: ಅಪಜೀ 164 ಎಫ್‌ಡಬ್ಲ್ಯೂಎಲ್ 99, ದಿನಾಂಕ: 01–10–1999 ರಲ್ಲಿ ಮಂಜೂರಾಗಿದ್ದು, 1999–2000ನೇ ಸಾಲಿಗೆ ರೂ. 25 ಲಕ್ಷ ಅನುದಾನ ಬಿಡುಗಡೆಯಾಗಿರುತ್ತದೆ.

ಆ) ಉಳಿದ ಹಣ ಬಿಡುಗಡೆ ಮಾಡಲು ಮತ್ತು ಹೆಚ್ಚುವರಿ ಅಭಿವೃದ್ಧಿ ಕಾರ್ಯ ಕೈಗೊಳ್ಳುವ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.

ಇ) ಬಿಂಕದಕಟ್ಟೆ ಪ್ರಾಣಿ ಸಂಗ್ರಹಾಲಯಕ್ಕೆ ಬಿಡುಗಡೆಯಾದ ರೂ. 25 ಲಕ್ಷಕ್ಕೆ ಕೈಗೊಂಡ ಅಭಿವೃದ್ಧಿ ಕಾರ್ಯ ಕೆಲಸಗಳ ವಿವರಗಳ ಬಗ್ಗೆ ಅನುಬಂಧ ಲಗತ್ತಿಸಿದೆ.

DEVELOPMENT OF BINKADAKATTI ZOO IN GADAG FOREST DIVISION EXPENDITURE DURING THE YEAR 2000-01

Sl	Particular of Works	Expenditure	Remarks
1.	Increase of compund wall with additional 1 mtr height including painting and patch works to the existing of the Binkadakatti Zoo.	7,39,292.00	

2.	Special repairs to Kinder Garden, paragola and compound wall provided to Kinder Garden including Enemal painting and snowcem painting of show stele work and fixing of tiles.	1,00,246.00
3.	Repair and painting works to the Black buck enclosure including refixing of angle irons provided to enclosure (for land in front of zoo gate) Paragole repairs works	1,36,637.00
4.	Repair to Aviary including painting and repair of water ponds in the Aviary.	59,013.00
5.	Special repairs to Hyena cages	12,267.00
6.	Repairs to Spotted Dear enclosure and Paragola found in the enclosure including painting work	1,56,331.00
7.	Special repairs to Crocodile enclosure including providing ramps for easy movements of the animals within the enclosure	13,954.00
8.	Special repairs to Bear enclosure including plastering and painting and septic tank to be provided.	22,488.00
9.	Special repairs to Neelgai enclosure and Paragol found in the enclosure refixing of angles iron is to be provided	99,850.00
10.	Special repairs to Sambar enclosure and Paragol including refixing of angles iron is to	1,23,962.00

11.	Special repairs to Lion enclosure works Lion, Crocodile enclosures electricity works.	1,27,873.00
12.	Construction of Treatment chamber for Zoo animals.	1,18,013.00
13.	Construction of Postmorten room for Zoo animals	1,02,866.00
14.	Landscaping works including pipeline layout and poly works at new garden area.	92,912.00
15.	Special repair to small Aviary fixing of chain link mesh and including painting works.	32,792.00
16.	Continuous power supply to zoo Binkadakatti amount paid to AEE, Rural Sub-Division, KPTCL, Gadag.	1,38,978.00
17.	Digital painting of Panthar photo and Lion photo 6X4 and 6X4 2 Nos and fixing the boards with angles and errection of Sign Board fixing at Binkadakatti Zoo cross.	44,740.00
18.	Formation of drainage works near main gate of Binkadakatti zoo	14,855.00
19.	Repairs and painting for watch tower	8,308.00
20.	Formation of Watch Tower and painting works to Watch Tower.	6,506.00
21.	Purchase of chain link mesh to Panther's enclosure	2,00,000.00
22.	Purchase of chain link mesh to New Birds enclosure	1,48,117.00
	Total	**25,00,000.00**

798(335) ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ) : ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) 2002–03 ಮತ್ತು 2003–04ನೇ ಸಾಲುಗಳಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಗಡಿಗಳಿಂದ ಕೇರಳ ರಾಜ್ಯಕ್ಕೆ ಕಳ್ಳ ಸಾಗಾಣಿಕೆಯಾದ ಅರಣ್ಯ ಸಂಪತ್ತಿನ ಪ್ರಕರಣಗಳೆಷ್ಟು;

ಆ) ಈ ಕುರಿತು ಹಾಕಲಾದ ದಾವೆಗಳೆಷ್ಟು :

ಇ) ಎಷ್ಟು ಮೌಲ್ಯದ ಮರಗಳನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ;

ಈ) ಇಂಥ ಪ್ರಕರಣಗಳಲ್ಲಿ ಭಾಗಿಗಳಾದ ಎಷ್ಟು ಜನರಿಗೆ ಶಿಕ್ಷೆ ಮತ್ತು ದಂಡ ವಿಧಿಸಲಾಗಿದೆ.

ಉ) ಕಳ್ಳ ಸಾಗಾಣಿಕೆ ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :

ಅ) ಅರಣ್ಯ ಮತ್ತು ಪೊಲೀಸ್ ಇಲಾಖೆಗಳು ಸೇರಿ 2002–03ನೇ ಮತ್ತು 2003–04 ಸಾಲುಗಳಲ್ಲಿ ಅನುಕ್ರಮವಾಗಿ 10 ಮತ್ತು 2 ಕಳ್ಳ ಸಾಗಾಣಿಕೆ ಪ್ರಕರಣಗಳನ್ನು ಪತ್ತೆ ಮಾಡಿರುತ್ತದೆ. ಒಟ್ಟಾರೆ 216 ಕೆ.ಜಿ. ಗಂಧದ ಮರವನ್ನು ಸಾಗಿಸುತ್ತಿದ್ದ ವಾಹನಗಳ ಸಹಿತ ವಶಪಡಿಸಿಕೊಂಡು ಸರ್ಕಾರಕ್ಕೆ ಸ್ವಾಧೀನಪಡಿಸಿಕೊಳ್ಳಲಾಗಿದೆ.

ಆ) 2002–03 ಮತ್ತು 2003–04ನೇ ಸಾಲಿನಲ್ಲಿ ಕ್ರಮವಾಗಿ 10 ಮತ್ತು 2 ಪ್ರಕರಣಗಳಲ್ಲಿ ದಾವೆ ಹೂಡಲಾಗಿದೆ.

ಇ) ಈ 12 ಪ್ರಕರಣಗಳಲ್ಲಿ ಕೆ.ಜಿ. ಒಂದಕ್ಕೆ ರೂ. 465.50 ದರದಂತೆ ರೂ.1.00,678/– ಮೌಲ್ಯದ 216 ಕೆ.ಜಿ. ಶ್ರೀಗಂಧದ ಮರವನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ.

ಈ) ಈ ಪ್ರಕರಣಗಳಲ್ಲಿ ಅಪರಾಧಿಗಳನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿ, ಆರೋಪಪಟ್ಟಿಯನ್ನು ಸಲ್ಲಿಸಿದೆ. ಎಲ್ಲಾ ಪ್ರಕರಣಗಳು ನ್ಯಾಯಾಲಯದಲ್ಲಿ ವಿಚಾರಣೆಗಾಗಿ ಬಾಕಿ ಇದೆ.

ಉ) ಕಳ್ಳ ಸಾಗಾಣಿಕೆ ತಡೆಗಟ್ಟಲು ಇಲಾಖಾ ಸಿಬ್ಬಂದಿಗಳು ಹಾಗೂ ಪೊಲೀಸರಿಂದ ಕಟ್ಟೆಚ್ಚರ ಪಡಿಸಲಾಗುತ್ತಿದೆ. ಬಾತ್ಮೀದಾರರಿಂದ ಮಾಹಿತಿ ಸಂಗ್ರಹಿಸಿಕೊಂಡು ರಾತ್ರಿ ಗಸ್ತನ್ನು ಬಿಗಿಗೊಳಿಸಿ ಜಿಲ್ಲೆಯ ಗಡಿಗಳ ಮೂಲಕ ಹಾದು ಹೋಗುವ ವಾಹನಗಳನ್ನು ತಪಾಸಣೆಗೆ ಒಳಪಡಿಸಿ ಕಳ್ಳ ಸಾಗಾಣಿಕೆ ತಡೆಗಟ್ಟಲು ಕ್ರಮ ಕೈಗೊಳ್ಳಲಾಗುತ್ತಿದೆ.

799(337) ಶ್ರೀ ಪ್ರಭಾಕರ ಬಂಗೇರ. ಕೆ (ಬೆಳ್ತಂಗಡಿ): ಕಾರ್ಮಿಕ ಮತ್ತು ಹಜ್ ರಾಜ್ಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

1. ಬೆಳ್ತಂಗಡಿ ತಾಲೂಕಿನ ಮಾಲಾಡಿಯಲ್ಲಿ ಐ.ಟಿ.ಐ. ಕಟ್ಟಡ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

2. ಬಂದಿದ್ದರೆ, ಕಟ್ಟಡ ಮಂಜೂರಾತಿಗಾಗಿ ತೆಗೆದುಕೊಂಡ ಕ್ರಮಗಳೇನು;

3. ಈ ಕಾಮಗಾರಿಗಳಿಗೆ ತಗಲುವ ಅಂದಾಜು ವೆಚ್ಚ ಎಷ್ಟು;

4. ಕಟ್ಟಡ ಮಂಜೂರಾದಲ್ಲಿ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ತನ್ವೀರ್ ಸೇಠ್ (ಕಾರ್ಮಿಕ ಮತ್ತು ಹಜ್ ರಾಜ್ಯ ಸಚಿವರು) :

1. ಬಂದಿದೆ.

2. ಜಮೀನು ಪಡೆದುಕೊಳ್ಳಲಾಗಿದೆ. ಕಟ್ಟಡದ ನೀಲಿ ನಕ್ಷೆ ಮುಖ್ಯ ವಾಸ್ತು ಶಿಲ್ಪಿಯಿಂದ ಅನುಮೋದಿತವಾಗಿ ಮುಖ್ಯ ಕಾರ್ಯಪಾಲಕ ಅಭಿಯಂತರರಿಗೆ ಅಂದಾಜುಪಟ್ಟಿ ಸಿದ್ಧಪಡಿಸಲು ಕಳುಹಿಸಲಾಗಿದೆ.

3. ಅಂದಾಜು ಪಟ್ಟಿ ಲಭ್ಯವಾದ ನಂತರ ಅಂದಾಜು ವೆಚ್ಚದ ಮಾಹಿತಿ ಲಭ್ಯವಾಗುತ್ತದೆ.

4. ಅಂದಾಜು ಪಟ್ಟಿ ಲಭ್ಯವಾದ ನಂತರ ಕ್ರಿಯಾಯೋಜನೆ ಸಿದ್ಧಪಡಿಸಲಾಗುವುದು.

800(339) ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ): ಕಂದಾಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಸರ್ಕಾರವು ಅಕ್ರಮ-ಸಕ್ರಮ, ಆಶ್ರಯ, ಆರಾಧನ ಭೂನ್ಯಾಯಮಂಡಲಿ ಮುಂತಾದ ಸಮಿತಿಗಳನ್ನು ಈವರೆಗೆ ರಚಿಸದೇ ಇರುವುದರಿಂದ ಫಲಾನುಭವಿಗಳಿಗೆ ಅನಾನುಕೂಲ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಈ ಎಲ್ಲಾ ಸಮಿತಿಗಳನ್ನು ಯಾವಾಗ ರಚಿಸಲಾಗುವುದು?

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು) :

ಅ) ಹೌದು

ಆ) ಪ್ರಸ್ತಾವನೆಗಳು ಸ್ವೀಕೃತವಾಗಿದ್ದು ಕ್ರಮ ತೆಗೆದುಕೊಳ್ಳಲಾಗುತ್ತದೆ.

801(341) ಶ್ರೀ ಪ್ರಭಾಕರ ಬಂಗೇರ. ಕೆ (ಬೆಳ್ತಂಗಡಿ): ಉಪ ಮುಖ್ಯಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಮಲೆನಾಡು ಯೋಜನೆಯ ಅನ್ವಯ ಮಂಜೂರಾದ ಒಟ್ಟು ಕಾಮಗಾರಿಗಳು ಎಷ್ಟು;

ಆ) ಪೂರ್ಣಗೊಂಡ ಹಾಗೂ ಅಪೂರ್ಣಗೊಂಡ ಕಾಮಗಾರಿಗಳೆಷ್ಟು;

ಇ) ಅಪೂರ್ಣಗೊಂಡ ಕಾಮಗಾರಿಗಳಿಗೆ ಯಾವಾಗ ಹಣ ಬಿಡುಗಡೆ ಮಾಡಲಾಗುವುದು;

ಈ) ಮಲೆನಾಡು ಯೋಜನೆಯ ಕಾಮಗಾರಿಗಳಿಗೆ ಒಟ್ಟು ಎಷ್ಟು ಹಣ ಬಾಕಿ ಇದೆ. (ವಿವರ ನೀಡುವುದು)?

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು):

ಅ) ಮಂಡಳಿಯು ಪ್ರಾರಂಭವಾದಾಗಿನಿಂದ ಈವರೆಗೂ 12,567 ಕಾಮಗಾರಿಗಳನ್ನು ಮಂಜೂರು ಮಾಡಲಾಗಿದೆ.

ಆ) ಪೂರ್ಣಗೊಂಡ ಕಾಮಗಾರಿಗಳು : 11727

ಅಪೂರ್ಣಗೊಂಡ ಕಾಮಗಾರಿಗಳು : 840

ಇ) ಈ ಸಾಲಿನಲ್ಲಿ 707 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ.

ಈ) 1419.68 ಲಕ್ಷ ರೂ.ಗಳು ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.

ANNEXURE

DETAILS OF PENDING BILLS UNDER MALNAD AREA DEVELOPMENT BOARD AS ON 30.12.2004

Rs. Lakhs

Distrcit	Amount
Belgaum	211.34
Chamarajanagar	38.86
Chickmagalur	88.09
Davanagere	49.81
Dharwad	48.86
Hassan	86.25
Haveri	36.73
Kodagu	63.99
Mangalore	350.08
Mysore	65.69
Shimoga	85.75
Udupi	83.57
Uttara Kannada	100.66
Total	1419.68

802(343) ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ): ಕಂದಾಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಕಂದಾಯ ಭೂಮಿ ಕಾಯ್ದೆಗೆ ತಿದ್ದುಪಡಿಯನ್ನು ತರುವ ನಿರ್ಧಾರವನ್ನು ಸರ್ಕಾರ ಮಾಡಿದೆಯೇ (ಹಾಗಿದ್ದಲ್ಲಿ, ವಿವರ ನೀಡುವುದು) :

ಆ) ರಾಜ್ಯದಲ್ಲಿರುವ ಭೂರಹಿತ ಬಗರ್ ಹುಕುಂ ಸಾಗುವಳಿದಾರರ ಅಂದಾಜು ಸಂಖ್ಯೆ ಎಷ್ಟು ;

ಇ) ಅವರಿಗೆ ಈ ತಿದ್ದುಪಡಿ ಮಸೂದೆಯಲ್ಲಿ ಯಾವ ರೀತಿ ರಕ್ಷಣೆ ನೀಡಲಾಗುವುದು?

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು) :

ಅ) ಇಲ್ಲ ಉದ್ಭವಿಸುವುದಿಲ್ಲ.

ಆ) ಕರ್ನಾಟಕ ಭೂ ಕಂದಾಯ ಕಾಯಿದೆ 1964ರ ಕಲಂ 94 (ಎ) ರನ್ವಯ ಅನಧಿಕೃತ ಸಾಗುವಳಿಯಲ್ಲಿನ ಭೂರಹಿತರು ಹಾಗೂ ಸಣ್ಣ ಹಿಡುವಳಿದಾರರು ನಮೂನೆ 50ರಲ್ಲಿ ದಿನಾಂಕ : 14-9-1991ರವರೆಗೆ ಅರ್ಜಿ ಸಲ್ಲಿಸುವಂತೆ ಅವಕಾಶ ಕಲ್ಪಿಸಲಾಗಿತ್ತು. ಅದರಂತೆ ನಮೂನೆ 50ರಲ್ಲಿ ಸ್ವೀಕೃತವಾಗಿರುವ ಅರ್ಜಿಗಳ ಸಂಖ್ಯೆ : 10.92 ಲಕ್ಷ. ನಂತರ ಈ ಅವಧಿಯನ್ನು ಕರ್ನಾಟಕ ಭೂ

ಕಂದಾಯ ಕಾಯಿದೆ 1964ರ ಕಲಂ 94(ಬಿ) ರನ್ವಯ ತಿದ್ದುಪಡಿ ಮೂಲಕ ಅರ್ಜಿ ಸಲ್ಲಿಸಲು ದಿ:30–4–99ರವರೆಗೆ ಅವಧಿಯನ್ನು ವಿಸ್ತರಿಸಲಾಗಿದ್ದು, ಅದರಂತೆ ನಮೂನೆ 53ರಲ್ಲಿ ಸ್ವೀಕೃತವಾಗಿರುವ ಅರ್ಜಿಗಳ ಸಂಖ್ಯೆ : 10.94 ಲಕ್ಷ.

ಇ) ಈಗಾಗಲೇ ಭೂ ರಹಿತರು ಮತ್ತು ಸಣ್ಣ ಹಿಡುವಳಿದಾರರು ನಿಗಧಿತ ಅವಧಿಯಲ್ಲಿ ಅರ್ಜಿ ಸಲ್ಲಿಸಿದ್ದಲ್ಲಿ ಅರ್ಜಿ ವಿಲೇವಾರಿಯಾಗದೇ ಬಾಕಿ ಇರುವ ಅರ್ಜಿಗಳ ವಿಲೇವಾರಿಗೆ ಕರ್ನಾಟಕ ಭೂ ಕಂದಾಯ ಕಾಯಿದೆ 1964ರ ಕಲಂ 94(ಬಿ)ಗೆ ತಿದ್ದುಪಡಿ ತರಲಾಗಿದ್ದು, ಅದರಂತೆ ಈ ಅರ್ಜಿಗಳ ವಿಲೇವಾರಿಗೆ ದಿನಾಂಕ : 26–4–2005ರವರೆಗೆ ಕಾಲಾವಕಾಶವನ್ನು ವಿಸ್ತರಿಸಲಾಗಿದೆ. ರಾಜ್ಯದಲ್ಲಿನ ತಾಲ್ಲೂಕು ಮಟ್ಟದಲ್ಲಿ ಬಗರ್ ಹುಕುಂ ಸಾಗುವಳಿ ಸಕ್ರಮೀಕರಣ ಸಮಿತಿಗಳನ್ನು ರಚಿಸಲು ಸರ್ಕಾರವು ಕ್ರಮ ಕೈಗೊಳ್ಳಲಾಗಿದ್ದು, ಸದರಿ ಅವಧಿ ಒಳಗಡೆ ಅರ್ಹರಿಗೆ ಜಮೀನು ಮಂಜೂರಾತಿಸಲು ಕ್ರಮ ಕೈಗೊಳ್ಳಲಾಗುತ್ತಿರುವ ಕಾರಣ ಮತ್ತೆ ತಿದ್ದುಪಡಿ ತರುವ ಅವಶ್ಯಕತೆ ಕಂಡುಬರುವುದಿಲ್ಲ. ಮತ್ತು ರಕ್ಷಣೆ ನೀಡುವ ಪ್ರಶ್ನೆ ಉದ್ಭವಿಸುವುದಿಲ್ಲ.

804(803) ಶ್ರೀ ರಘುಪತಿ ಭಟ್. ಕೆ (ಉಡುಪಿ): ಕಾರ್ಮಿಕ ಮತ್ತು ಹಜ್ ರಾಜ್ಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ರಾಜ್ಯದ ಪತ್ರಕರ್ತರು/ ಪತ್ರಕರ್ತರೇತರರ ವೇತನ ಮಂಡಳಿಯ ಕಾರ್ಯಾನುಷ್ಠಾನದ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿರುತ್ತದೆ;

ಆ) ಮನಿಸಾನ ವೇತನ ಮಂಡಳಿಯ ಶಿಫಾರಸ್ಸಿನನ್ವಯ ಎಷ್ಟು ಪತ್ರಿಕಾ ಮಾಲೀಕರು ಕ್ರಮ ಕೈಗೊಂಡಿರುತ್ತಾರೆ;

ಇ) ಕ್ರಮ ಕೈಗೊಳ್ಳುವುದರ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ;

ಈ) ಕ್ರಮ ಕೈಗೊಂಡವರ ಬಗ್ಗೆ ವೇತನ ಸಮಿತಿ ಶಿಫಾರಸ್ಸಿನನ್ವಯ ಸರ್ಕಾರಕ್ಕೆ ಮಾಹಿತಿ ವರದಿ ನೀಡಲಾಗಿದೆಯೇ; ನೀಡಿದಲ್ಲಿ ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮವೇನು?

ಶ್ರೀ ತನ್ವೀರ್ ಸೇಠ್ (ಕಾರ್ಮಿಕ ಮತ್ತು ಹಜ್ ರಾಜ್ಯ ಸಚಿವರು) :

ಅ) ಕರ್ನಾಟಕ ರಾಜ್ಯದ ಪತ್ರಕರ್ತರ/ಪತ್ರಕರ್ತರೇತರರ ವೇತನ ಮಂಡಳಿಯ ಶಿಫಾರಸ್ಸಿನ ಕಾರ್ಯಾನುಷ್ಠಾನದ ಬಗ್ಗೆ ಸರ್ಕಾರ ದಿನಾಂಕ : 7–4–2003ರಲ್ಲಿ 4 ಸದಸ್ಯರು ಆಡಳಿತ ವರ್ಗದಿಂದ, 2 ಸದಸ್ಯರು ಕಾರ್ಮಿಕ ವರ್ಗದವರಿಂದ ನೇಮಕ ಮಾಡಿದಂತಹ ಒಂದು ತ್ರಿಪಕ್ಷೀಯ ಮಾನಿಟರಿಂಗ್ ಸಮಿತಿಯನ್ನು ರಚಿಸಿರುತ್ತದೆ. ವೇತನ ಮಂಡಳಿಯ ಶಿಫಾರಸ್ಸಿನನ್ವಯ ಆಗಿರುವ ಪ್ರಗತಿಯ ಬಗ್ಗೆ ಪರಿಶೀಲಿಸಲು ಸೂಚಿಸಲಾಗಿದೆ.

ಆ) ಮನಿಸಾನ ವೇತನ ಮಂಡಳಿಯ ಶಿಫಾರಸ್ಸನ್ನು ಕರ್ನಾಟಕ ರಾಜ್ಯದಲ್ಲಿ ಒಟ್ಟು 45 ಪತ್ರಿಕಾ ಸಂಸ್ಥೆಗಳು ಅನುಷ್ಠಾನಗೊಳಿಸಿರುತ್ತವೆ.

ಇ) ಮಂಡಳಿಯ ಶಿಫಾರಸ್ಸನ್ನು ಕಾರ್ಯಗತಗೊಳಿಸುವ ಬಗ್ಗೆ ಇಲಾಖಾ ಅಧಿಕಾರಿಗಳು ಆಗಿಂದಾಗ್ಗೆ ತಪಾಸಣೆ ನಡೆಸಿ ಕ್ರಮ ಜರುಗಿಸಿದ್ದಾರೆ. ಈಗಾಗಲೇ 45 ಸಂಸ್ಥೆಗಳಲ್ಲಿ ವೇತನ ಮಂಡಳಿಯ ಶಿಫಾರಸ್ಸನ್ನು ಜಾರಿಗೊಳಿಸಿವೆ. ಜಾರಿಗೊಳಿಸದೇ ಇರುವ ಸಂಸ್ಥೆಗಳಿಗೆ ಮನಿಸಾನ ವೇತನ ಮಂಡಳಿಯ ಶಿಫಾರಸ್ಸಿನ ಅನುಷ್ಠಾನಗೊಳಿಸದೇ ಇರುವ ಬಗ್ಗೆ ಕಾರಣ ಕೇಳುವ ನೋಟೀಸನ್ನು ಜಾರಿಗೊಳಿಸಲಾಗಿದ್ದು ಮುಂದಿನ ಕ್ರಮ ಜರುಗಿಸಲಾಗುತ್ತಿದೆ.

ಈ) ವೇತನ ಮಂಡಳಿಯ ಶಿಫಾರಸ್ಸಿನ ಅನ್ವಯ ಸರ್ಕಾರಕ್ಕೆ ಮಾಹಿತಿ ವರದಿ ಬಂದಿರುತ್ತದೆ. ಶಿಫಾರಸ್ಸನ್ನು ಅನುಷ್ಠಾನಗೊಳಿಸಿದ ಬಗ್ಗೆ ಮಾಹಿತಿಯನ್ನು ಕೇಂದ್ರ ಸರ್ಕಾರಕ್ಕೆ ತ್ರೈಮಾಸಿಕ ವರದಿಯ ರೂಪದಲ್ಲಿ ನೀಡಲಾಗುತ್ತಿದೆ.

805(804) ಶ್ರೀ ರಘುಪತಿ ಭಟ್ ಕೆ. (ಉಡುಪಿ): ಕಂದಾಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಉಡುಪಿ ತಾಲ್ಲೂಕು ಮಲ್ಪೆ–ಕೊಡವೂರು ಗ್ರಾಮದ ಕೊಳ್ಳ–ಪಡುಕೆರೆ ಪ್ರದೇಶದಲ್ಲಿ 600ರಷ್ಟು ನಿವೇಶನ ರಹಿತ ಬಡ ಮೀನುಗಾರರು ಹಕ್ಕುಪತ್ರವಿಲ್ಲದೆ 40–50 ವರ್ಷಗಳಿಂದ ವಾಸ್ತವ್ಯವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಸದರಿ ನಿವೇಶನಗಳಿಗೆ ಹೊಸ ಸರ್ವೆ ನಂಬರ್ ನೀಡುವ ಪ್ರಸ್ತಾವನೆ ಸರ್ಕಾರಕ್ಕೆ ಬಂದಿದೆಯೇ;

ಇ) ಈ ಬಗ್ಗೆ ಸರ್ಕಾರ ಸೂಕ್ತ ಆದೇಶ ಹೊರಡಿಸಲು ಕ್ರಮ ಕೈಗೊಳ್ಳುವುದೇ?

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು) :

ಅ) ಉಡುಪಿ ತಾಲ್ಲೂಕು ಕಡೂರು ಗ್ರಾಮದ ಮಲ್ಪೆ–ಕೊಳ್ಳ ಹಾಗೂ ಪಡುಕೆರೆ ಪ್ರದೇಶದಲ್ಲಿ ಸರ್ಕಾರದ ಆದೇಶ ಸಂ: ಆರ್‌ಡಿ 12 ಎಲ್‌ಜಿಎ 91 ಬೆಂಗಳೂರು ದಿ:29ನೇ ಸೆಪ್ಟಂಬರ್ 1994ರಂತೆ 345 ಜನರ ಅಕ್ರಮಣವನ್ನು ಸಕ್ರಮೀಕರಿಸಲು ಸರ್ಕಾರ ಅನುಮತಿ ನೀಡಿರುತ್ತದೆ. ಈ ಪ್ರದೇಶವು ಸಮುದ್ರ ಎಂದು ಕಂದಾಯ ದಾಖಲೆಗಳಲ್ಲಿದ್ದು, ಅಕ್ರಮಣದಾರರಿಗೆ ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರ ಕಲಂ 81 ಮತ್ತು 92ನ್ನು ಅನುಸರಿಸಿ ತಾತ್ಕಾಲಿಕ ಹಕ್ಕುಪತ್ರ ನೀಡಲಾಗಿದೆ. ಅದರಲ್ಲಿ ಸರ್ವೆ ನಂಬರ್ ನಮೂದಿಸಿಲ್ಲ. ಬದಲಾಗಿ ಸಮುದ್ರ ಎಂದು ದಾಖಲಿಸಿ ನೀಡಿದೆ. ತದನಂತರ ಈಗ ಸರ್ವೆ ನಂಬರ್ ನೀಡುವ ಬಗ್ಗೆ ಕ್ರಮ ಜರುಗಿಸಲಾಗಿದ್ದು, ಸರ್ಕಾರದ ಹಂತದಲ್ಲಿ ಪ್ರಸ್ತಾವನೆ ವ್ಯವಹರಣೆಯಲ್ಲಿದೆ. ಅತಿಕ್ರಮಣದಾರರು ಸರ್ಕಾರದ ಆದೇಶದಲ್ಲಿ ಹೇಳಿದ ಭೂ ಮೌಲ್ಯ ಹಾಗೂ ಇನ್ನಿತರ ಶುಲ್ಕಗಳನ್ನು ಪಾವತಿಸಬೇಕಾಗಿರುತ್ತದೆ.

ಆ) ಹರಿಯುವ ಯಾವುದೇ ನದಿ ಸಮುದ್ರ ದಡ ತನ್ನ ಪಥವನ್ನು ಬದಲಿಸಿದಾಗ ಹೊಸದಾಗಿ ಉಂಟಾಗುವ ಪ್ರದೇಶವನ್ನು ಕರ್ನಾಟಕ ಭೂ ಕಂದಾಯ ಅಧಿನಿಯಮ ಕಲಂ 81 ಮತ್ತು 92 ರಂತೆ ನೆರೆಮಣ್ಣಿನ ಭೂಮಿ (ಅಲ್ಯೂವಿಲ್ ಲ್ಯಾಂಡ್) ಎಂದು ಪರಿಗಣಿಸುತ್ತಿದ್ದು, ಅದರಂತೆ ಜಿಲ್ಲಾಧಿಕಾರಿಗಳು ಸಲ್ಲಿಸಿದ ಪ್ರಸ್ತಾವನೆ ದಿನಾಂಕ : 16.8.2004ರಂದು ಸರ್ಕಾರಕ್ಕೆ ಬಂದಿದೆ.

ಇ) ಕೊಡವೂರು ಗ್ರಾಮದ ಮಲ್ಪೆ ಪಡುಕೆರೆ ಮತ್ತು ಕೊಳ್ಳ ಪ್ರದೇಶವನ್ನು ಕೊಡವೂರು ಗ್ರಾಮಕ್ಕೆ ಸೇರಿಸುವಾಗ ಮುಂದೆ ನೀಡಬಹುದಾದ ಕೆಲವೊಂದು ಸರ್ವೆ ನಂಬರ್‌ಗಳ ಸೇರ್ಪಡೆಯಾಗುವುದರಿಂದ, ಇದಕ್ಕೆ ಹಾಲಿ ಜಾರಿಯಲ್ಲಿರುವ (ಕೇಂದ್ರ ಚುನಾವಣಾ ಆಯೋಗ) ಡಿಲಿಮಿಟೇಷನ್ ಕ್ಷೇತ್ರ ಪುನರ್ ವಿಂಗಡಣಾ ಆಯೋಗ ವಿಧಿಸಿರುವ ನಿರ್ಬಂಧವು ಅಡ್ಡಿಯಾಗುತ್ತದೆ. ಈ ನಿರ್ಬಂಧವನ್ನು ಸಡಿಲಿಸಿದ ನಂತರ ಕರ್ನಾಟಕ ಭೂ ಕಂದಾಯ ಅಧಿನಿಯಮ 1964 (1964ರ ಕರ್ನಾಟಕ ಅಧಿನಿಯಮ 12)ರ ಕಲಂ 5 ರನ್ವಯ ಕ್ರಮ ಕೈಗೊಳ್ಳುವ ಬಗ್ಗೆ ಪರಿಶೀಲಿಸಲಾಗುವುದು.

806(805) ಶ್ರೀ ರಘುಪತಿ ಭಟ್.ಕೆ (ಉಡುಪಿ) ಲೋಕೋಪಯೋಗಿ ಮತ್ತು ಇಂಧನ ಸಚಿವರು ದಯವಿಟ್ಟು ಈ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಉಡುಪಿ ಜಿಲ್ಲೆಯಲ್ಲಿ ಮಿತಿಗಿಂತ ಹೆಚ್ಚು ಭಾರದ ಅದಿರು ಲಾರಿಗಳ ಓಡಾಟದಿಂದ ಜಿಲ್ಲೆಯ ಪ್ರಮುಖ ಸೇತುವೆಗಳಿಗೆ ಹಾನಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಇತ್ತೀಚೆಗೆ ಸೇತುವೆಗಳ ಭದ್ರತೆಗಾಗಿ 'ವೇ ಬ್ರಿಡ್ಜ್' ನಿರ್ಮಿಸಲು ಸಾರ್ವಜನಿಕರಿಂದ ಹೋರಾಟ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಈ ಸಮಸ್ಯೆಯ ಶಾಶ್ವತ ಪರಿಹಾರಕ್ಕೆ ಸರ್ಕಾರ ಕ್ರಮ ಕೈಗೊಳ್ಳುವುದೇ;

ಈ) ಸೇತುವೆಯ ಭದ್ರತೆಯ ಪೂರಕವಾಗಿ ಒಂದು ಮ್ಯಾಂಗನೀಸ್ ಲಾರಿಯಲ್ಲಿ ಮಿತಿಗೊಳಿಸಲಾದ ಗರಿಷ್ಠ ಪ್ರಮಾಣದ ಮಿತಿ ಎಷ್ಟು;

ಉ) ಈಗಾಗಲೇ ನಾದುರಸ್ಥಿಯಲ್ಲಿರುವ ಬಾರ್ಕೂರು ಸೇತುವೆಯನ್ನು ಇನ್ನೆಷ್ಟು ಸಮಯದಲ್ಲಿ ಪುನರ್ ರಚಿಸಲಾಗುವುದು, ಇದಕ್ಕೆ ಮೀಸಲಾಗಿರಿಸಿದ ಹಣ ಎಷ್ಟು?

ಊ) ಅದಿರು ತುಂಬುವ ಪ್ರವೇಶ ದ್ವಾರದಲ್ಲಿಯೇ 'ವೇ ಬ್ರಿಡ್ಜ್' ನಿರ್ಮಿಸಿ ಅಧಿಕ ಭಾರವನ್ನು ಲಾರಿಗಳಿಗೆ ಹೇರದಂತೆ ತಡೆಯುವ ಯೋಚನೆ ಸರ್ಕಾರಕ್ಕೆ ಇದೆಯೇ?

ಶ್ರೀ ಹೆಚ್. ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಬಂದಿದೆ.

ಆ) ಬಂದಿದೆ.

ಇ) ಉಡುಪಿ ಜಿಲ್ಲೆಯ ಲೋಕೋಪಯೋಗಿ ಇಲಾಖೆಯ ಎಲ್ಲಾ ರಸ್ತೆಗಳಲ್ಲಿ ಅಧಿಕ ಭಾರದ ಅದಿರು ತುಂಬಿದ ಲಾರಿಗಳ ಸಂಚಾರವನ್ನು ನಿಷೇಧಿಸಲಾಗಿದ್ದು, ಶಾಶ್ವತವಾದ ಪರಿಹಾರವನ್ನು ತೆಗೆದುಕೊಳ್ಳಲು ಪರಿಶೀಲಿಸಲಾಗುತ್ತಿದೆ.

ಈ) ಲೋಕೋಪಯೋಗಿ ಇಲಾಖೆಯ ರಸ್ತೆಗಳಲ್ಲಿ, ರಸ್ತೆಗಳ ಹಾಗೂ ಸೇತುವೆಗಳ ಧಾರಣ ಸಾಮರ್ಥ್ಯಕ್ಕನುಗುಣವಾಗಿ 2 ಆಕ್ಸೆಲ್ಡ್ ವಾಹನಗಳಿಗೆ ಗರಿಷ್ಟ 15.2 ಟನ್ ಹಾಗೂ ಎರಡಕ್ಕಿಂತ ಹೆಚ್ಚು ಆಕ್ಸೆಲ್ಡ್ ವಾಹನಗಳಿಗೆ ಗರಿಷ್ಟ 19.00 ಟನ್ ಮತ್ತು ಮೂರು ಆಕ್ಸೆಲ್ ವಾಹನಗಳಿಗೆ 24.00 ಟನ್ ಭಾರ ಮಿತಿ ನಿಗದಿಗೊಳಿಸಲಾಗಿದೆ.

ಉ) ಬಾರ್ಕೂರು ಸೇತುವೆ ದುರಸ್ತಿಗಾಗಿ ಲೆಕ್ಕ ಶೀರ್ಷಿಕೆ 3054 ರಸ್ತೆ ಮತ್ತು ಸೇತುವೆಗಳು (ಯೋಜನೆ) ಯಡಿ ರೂ. 100.00 ಲಕ್ಷ ಅನುದಾನ ಬಿಡುಗಡೆಯಾಗಿದ್ದು, ಟೆಂಡರ್ ಕರೆಯಲಾಗಿದೆ. ಮೆ: ಟಾರ್‌ಸ್ಟೀಲ್ ರೀಸರ್ಚ್ ಫೌಂಡೇಶನ್ ಇನ್ ಇಂಡಿಯಾ, ಬೆಂಗಳೂರು ಅವರು ತಾಂತ್ರಿಕವಾಗಿ ಪರಿಶೀಲಿಸಿ ನೀಡಿದ ವಿನ್ಯಾಸದಂತೆ ತಯಾರಿಸಲಾದ ರೂ. 360.00 ಲಕ್ಷದ ಅಂದಾಜು ಪಟ್ಟಿ ತಯಾರಿಸಲಾಗಿದೆ. ಸದ್ಯದಲ್ಲಿ ಟೆಂಡರ್ ಮೂಲಕ ಕಾಮಗಾರಿಯನ್ನು ಕೈಗೊಳ್ಳಲಾಗುವುದು.

ಊ) 'ವೇ ಬ್ರಿಡ್ಜ್' ನಿರ್ಮಿಸುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

807(806) ಶ್ರೀ ರಘುಪತಿ ಭಟ್. ಕೆ(ಉಡುಪಿ) ಕಂದಾಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಉಡುಪಿ ತಾಲ್ಲೂಕಿನ ಪಹಣಿ ಪತ್ರಿಕೆ "ಕಂಪ್ಯೂಟರ್ ಸಾಫ್ಟ್‌ವೇರ್" ಲೋಪದ ಬಗ್ಗೆ ಸಾರ್ವಜನಿಕರಿಂದ ಆಕ್ಷೇಪಗಳು ವ್ಯಕ್ತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಕೋಟಾ ಮತ್ತು ಕಾಪು ಫಿರ್ಕಾಗಳಲ್ಲಿ ಯಾವಾಗ ಪ್ರತ್ಯೇಕ ಕಂಪ್ಯೂಟರ್ ಕಿಯೋಸ್ಕ್ ಕೇಂದ್ರಗಳನ್ನು ಸ್ಥಾಪಿಸಲಾಗುವುದು;

ಇ) ಉಡುಪಿ ಕಂಪ್ಯೂಟರ್ ಪಹಣಿ ಕೇಂದ್ರದಲ್ಲಿ ತಿದ್ದುಪಡಿಗೆ ಬಾಕಿ ಇರುವ ಅರ್ಜಿ ಪ್ರಕರಣಗಳು ಎಷ್ಟು?

ಶ್ರೀ ಎಂ. ಪಿ. ಪ್ರಕಾಶ್ (ಕಂದಾಯ ಸಚಿವರು) :

ಅ) ಹೌದು, ಕೆಲವು ಪಹಣಿ ಪತ್ರಿಕೆಗಳ ತಿದ್ದುಪಡಿಗಾಗಿ ಸಾರ್ವಜನಿಕರು ಕೋರಿರುತ್ತಾರೆ.

ಆ) ಈ ಯೋಜನೆಯನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವ ಮಾದರಿಯಲ್ಲಿ ಗ್ರಾಮ ಮಟ್ಟಕ್ಕೆ ವಿಕೇಂದ್ರೀಕರಿಸಲಾಗಿದೆ. ಇನ್ನು 2-3 ತಿಂಗಳುಗಳಲ್ಲಿ ತಾಲ್ಲೂಕುಗಳು ರಾಜ್ಯ ಮಟ್ಟದಲ್ಲಿ ಜೋಡಣೆಯಾದ ನಂತರ ರೈತರಿಗೆ ಗ್ರಾಮ ಮಟ್ಟದಲ್ಲಿಯೇ ಭೂ ದಾಖಲೆಗಳನ್ನು ಒದಗಿಸಲಾಗುವುದು.

ಇ) ಒಟ್ಟು 66,681 ಅರ್ಜಿ/ ಪ್ರಕರಣಗಳು ತಿದ್ದುಪಡಿಗೆ ಬಾಕಿ ಇದೆ.

808(807) ಶ್ರೀ ರಘುಪತಿ ಭಟ್. ಕೆ (ಉಡುಪಿ): ಕಂದಾಯ ಸಚಿವರು ದಯವಿಟ್ಟು ಈ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಉಡುಪಿ ಜಿಲ್ಲಾ ಆಡಳಿತ ಕೇಂದ್ರ ಸಂಕೀರ್ಣದ ರಚನೆಯನ್ನು ಎಲ್ಲಿ ಸ್ಥಾಪಿಸಲು ಉದ್ದೇಶಿಸಲಾಗಿದೆ.

ಆ) ಮಣಿಪಾಲ ಎಂಡ್ ಪಾಯಿಂಟ್‌ನಲ್ಲಿ ಜಿಲ್ಲಾ ಕೇಂದ್ರ ಸ್ಥಾಪಿಸಲು ಸರ್ಕಾರದ ನಿಲುವಿನಲ್ಲಿ ಬದಲಾವಣೆ ಆಗಿದೆಯೇ.

ಇ) ಜಿಲ್ಲಾ ಕೇಂದ್ರ ಸಂಕೀರ್ಣ ರಚನೆಗೆ ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ಹಣವೆಷ್ಟು ಈ ಪೈಕಿ ಈಗಾಗಲೇ ಖರ್ಚಾಗಿರುವ ಹಣವೆಷ್ಟು.

ಈ) ಜಿಲ್ಲಾ ಆಡಳಿತ ಸಂಕೀರ್ಣ ಕಟ್ಟಡವನ್ನು ಯಾವಾಗ ಆರಂಭಿಸಲಾಗುವುದು ಮತ್ತು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು):

ಅ) ಮಣಿಪಾಲ ಎಂಡ್ ಪಾಯಿಂಟ್‌ನಲ್ಲಿಯ 31.43 ಎಕರೆ ಜಮೀನನ್ನು ಈ ಉದ್ದೇಶಕ್ಕಾಗಿ ಕಾಯ್ದಿರಿಸಲಾಗಿದೆ.

ಆ) ಇಲ್ಲ

ಇ) 11ನೇ ಹಣಕಾಸು ಯೋಜನೆಯ ಅನುದಾನ ಅಡಿಯಲ್ಲಿ ಈ ಯೋಜನೆಯನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ. ಈವರೆಗೆ ಏನು ಹಣ ಖರ್ಚು ಆಗಿರುವುದಿಲ್ಲ.

ಈ) ಸದ್ಯದಲ್ಲಿಯೇ ನಿರ್ಮಾಣ ಕಾರ್ಯವನ್ನು ಕೈಗೊಳ್ಳಲಾಗುವುದು. ಹಾಗೂ ಆದಷ್ಟು ಬೇಗನೆ ಪೂರ್ಣಗೊಳಿಸಲು ಪ್ರಯತ್ನಿಸಲಾಗುವುದು.

809 (1379) ಶ್ರೀ ರಾಜೇಂದ್ರ ವರ್ಮ (ಹುಲಸೂರು): ಉಪ ಮುಖ್ಯಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) 10ನೇ ಹಣಕಾಸು ಯೋಜನೆಯಲ್ಲಿ ಬೀದರ್ ಜಿಲ್ಲೆಗೆ ಬಿಡುಗಡೆ ಮಾಡಿದ ಹಣವೆಷ್ಟು;

ಆ) ಇದರಲ್ಲಿ, ಹುಲಸೂರು ಕ್ಷೇತ್ರಕ್ಕೆ ಬಿಡುಗಡೆ ಮಾಡಿದ ಹಣವೆಷ್ಟು?

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು) :

ಅ) 10ನೇ ಹಣಕಾಸು ಯೋಜನೆಯೆಂಬ ಯಾವುದೇ ಯೋಜನೆಯು ಇಲ್ಲದೇ ಇರುವುದರಿಂದ, ಬೀದರ್ ಜಿಲ್ಲೆಗೆ ಹಣ ಬಿಡುಗಡೆ ಮಾಡಿದ ಬಗ್ಗೆ ಪ್ರಶ್ನೆ ಉದ್ಭವಿಸುವುದಿಲ್ಲ.

ಆ) ಅನ್ವಯಿಸುವುದಿಲ್ಲ.

810(1380) ಶ್ರೀ ರಾಜೇಂದ್ರ ವರ್ಮ (ಹುಲಸೂರು): ಲೋಕೋಪಯೋಗಿ ಮತ್ತು ಇಂಧನ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಬೀದರ್ ಜಿಲ್ಲೆಗೆ 33 ಕೆ.ವಿ. ಸ್ಟೇಷನ್‌ಗಳನ್ನು ಮಂಜೂರು ಮಾಡಲಾಗಿದೆಯೆ. ಇದರಲ್ಲಿ ಹುಲಸೂರು ಕ್ಷೇತ್ರಕ್ಕೆ ಮಂಜೂರು ಆಗಿರುವುದೆಷ್ಟು;

ಆ) ಮೆಹಕರ, ಕಟಕ – ಚಿಂಚೋಳಿ ಹಾಗೂ ಮುಚಳಂಬಾಗಳಲ್ಲಿ ಇಲ್ಲಿ 33 ಕೆ.ವಿ. ಸ್ಟೇಷನ್‌ಗಳನ್ನು ನಿರ್ಮಾಣಕ್ಕಾಗಿ ಅಡಿಗಲ್ಲು ಇಡಲಾಗಿದೆಯೇ: ಇದುವರೆಗೂ ಕಾಮಗಾರಿ ಪ್ರಾರಂಭಿಸಿರುವುದಿಲ್ಲ. ಇದಕ್ಕೆ ಕಾರಣವೇನು;

ಇ) ಅಲ್ಲದೆ ಘಾಟ ಬೋರಳದಲ್ಲಿ 33 ಕೆ. ವಿ. ಕಾಮಗಾರಿ ಮುಗಿದು 2 ವರ್ಷವಾದರೂ ಉದ್ಘಾಟನೆಯಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದಲ್ಲಿ ಯಾವಾಗ ಉದ್ಘಾಟಿಸಲಾಗುವುದು?

ಶ್ರೀ ಎಚ್. ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಬೀದರ್ ಜಿಲ್ಲೆಗೆ ಒಟ್ಟು 8 (ಎಂಟು) 33 ಕೆ.ವಿ. ಸ್ಟೇಷನ್‌ಗಳನ್ನು ಮಂಜೂರು ಮಾಡಲಾಗಿದೆ. ಇದರಲ್ಲಿ ಹುಲಸೂರು ಕ್ಷೇತ್ರಕ್ಕೆ ಮಂಜೂರಾದ 33 ಕೆ.ವಿ. ಸ್ಟೇಷನ್‌ಗಳ ಸಂಖ್ಯೆ ಮೂರು.

ಆ) ಈ ಸ್ಟೇಷನ್‌ಗಳಿಗೆ ಅಡಿಗಲ್ಲು ಹಾಕಿರುವುದಿಲ್ಲ. ಕಾರಣ, ಟೆಂಡರ್ ಕರೆದಾಗ ಸಂಸ್ಥೆ/ ಏಜೆನ್ಸಿಗಳಿಂದ ನಿರೀಕ್ಷಿತ ಸ್ಪಂದನೆ ಬಂದಿಲ್ಲದಿರುವುದು. ಇತ್ತೀಚೆಗೆ ಮೆಹಕರ್ ಮತ್ತು ಮುಚಳಂಬಾ ಸ್ಟೇಷನ್‌ಗಳ ಕಾಮಗಾರಿಗೆ ಎರಡು ಸಂಸ್ಥೆಗಳು ಮುಂದೆ ಬಂದಿದ್ದು, ಅವುಗಳಿಗೆ ಕಾಂಟ್ರಾಕ್ಟ್ ಅವಾರ್ಡ್ ಮಾಡುವಂತೆ ದಿನಾಂಕ 24–1–2005 ರಂದು ಅಧೀಕ್ಷಕ ಇಂಜಿನಿಯರ್ (ವಿ), ಗುಲ್ಬರ್ಗ ವೃತ್ತರವರಿಗೆ ಪತ್ರ ಮುಖೇನ ತಿಳಿಸಲಾಗಿರುತ್ತದೆ. ಕಾಂಟ್ರಾಕ್ಟ್ ಅವಾರ್ಡ್ ಆದ ನಂತರ, ಅವಾರ್ಡ್‌ನ ನಿಬಂಧನೆಯಂತೆ ಕಾಮಗಾರಿ ಕೈಗೆತ್ತಿಕೊಳ್ಳಲಾಗುವುದು. ಕಟಕ–ಚಿಂಚೋಳಿ ಸ್ಟೇಷನ್‌ಗೆ ಟೆಂಡರ್ ಕರೆಯಲು ಅಧೀಕ್ಷಕ ಇಂಜಿನಿಯರ್ (ವಿ), ಗುಲ್ಬರ್ಗ ವೃತ್ತರವರು ಕ್ರಮ ಜರುಗಿಸುತ್ತಿದ್ದಾರೆ.

ಇ) ಘಾಟ್ ಬೋರಾಳ್‌ದಲ್ಲಿ 33 ಕೆ.ವಿ. ಸ್ಟೇಷನ್ ಕಾಮಗಾರಿ ಪೂರ್ಣಗೊಳಿಸಿ, ದಿನಾಂಕ 5–9–2003 ರಿಂದಲೇ ಸ್ಟೇಷನ್ ಕಾರ್ಯಾರಂಭ ಮಾಡಿರುತ್ತದೆ. ಸುಮಾರು ಒಂದುವರೆ ವರ್ಷದಿಂದ ಈ ಸ್ಟೇಷನ್ ಕಾರ್ಯನಿರ್ವಹಿಸುತ್ತಿರುವುದರಿಂದ, ಉದ್ಘಾಟನೆಯು ಈಗ ಅಗತ್ಯ ಇರುವುದಿಲ್ಲ.

811(1468) ಶ್ರೀ ರಾಜೇಂದ್ರ ವರ್ಮ (ಹುಲಸೂರು): ಕಂದಾಯ ಸಚಿವರು ದಯವಿಟ್ಟು ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಬೀದರ್ ಜಿಲ್ಲೆಯ ಕ್ಷೇತ್ರವಾರು ಹಾಗೂ ತಾಲ್ಲೂಕುವಾರು ಆರಾಧನಾ ಯೋಜನೆಯಡಿಯಲ್ಲಿ ಪ್ರಸಕ್ತ ಸಾಲಿನಲ್ಲಿ ಬಿಡುಗಡೆಯಾದ ಹಣವೆಷ್ಟು ;

ಆ) ಹುಲಸೂರು ಕ್ಷೇತ್ರದಿಂದ ಬಂದ ಅರ್ಜಿಗಳೆಷ್ಟು ; ಅವುಗಳಲ್ಲಿ ಎಷ್ಟು ಇತ್ಯರ್ಥವಾಗಿದೆ; ಹಾಗೂ ಎಷ್ಟು ಬಾಕಿ ಇದೆ; ಇವುಗಳ ವಿಲೇವಾರಿಗೆ ಬೇಕಾಗುವ ಕಾಲಾವಧಿ ಎಷ್ಟು?

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು) :

ಅ) ಆರಾಧನ ಯೋಜನೆಯಡಿ ಅನುದಾನವನ್ನು ವಿಧಾನಸಭಾ ಕ್ಷೇತ್ರವಾರು ಸಮಾನವಾಗಿ ಬಿಡುಗಡೆ ಮಾಡಲಾಗುವುದು. ಪ್ರಸ್ತುತ ಸಾಲಿನಲ್ಲಿ ಬೀದರ್ ಜಿಲ್ಲೆಯಲ್ಲಿನ 6 ವಿಧಾನ ಸಭಾ ಕ್ಷೇತ್ರಗಳಿಗೆ ಪ್ರತಿ ವಿಧಾನ ಸಭಾ ಕ್ಷೇತ್ರಕ್ಕೆ ರೂ. 2,82,000.00ಗಳಂತೆ ಒಟ್ಟು ರೂ. 16,92,000.00ಗಳು ಬಿಡುಗಡೆ ಮಾಡಲಾಗಿದೆ.

ಆ) ಹುಲಸೂರು ಕ್ಷೇತ್ರವು ಭಾಲ್ಕಿ, ಬಸವಕಲ್ಯಾಣ ಮತ್ತು ಹುಮ್ನಾಬಾದ್ ತಾಲ್ಲೂಕುಗಳನ್ನು ಒಳಗೊಂಡಿದ್ದು, 2003–2004ನೇ ಸಾಲಿನಲ್ಲಿ ಒಟ್ಟು 34 ಅರ್ಜಿಗಳು ಸ್ವೀಕೃತವಾಗಿರುತ್ತವೆ. ಆರಾಧನಾ ಸಮಿತಿಯನ್ನು ಕ್ಷೇತ್ರದ ಶಾಸಕರ ಅಧ್ಯಕ್ಷತೆಯಲ್ಲಿ ಪುನರ್ ರಚಿಸಲಾಗುತ್ತಿದ್ದು, ಸಮಿತಿಯ ಮೂಲಕ ಅರ್ಜಿಗಳನ್ನು ವಿಲೇವಾರಿ ಮಾಡಲಾಗುವುದು.

812(1469) ಶ್ರೀ ರಾಜೇಂದ್ರ ವರ್ಮಾ (ಹುಲಸೂರು): ಲೋಕೋಪಯೋಗಿ ಮತ್ತು ಇಂಧನ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಪ್ರಸಕ್ತ ಸರ್ಕಾರ ಬಂದನಂತರ ಬೀದರ್ ಜಿಲ್ಲೆಯಲ್ಲಿ ಲೋಕೋಪಯೋಗಿ ಇಲಾಖೆಯಿಂದ ತಾಲ್ಲೂಕು ಮತ್ತು ವಿಧಾನಸಭಾ ಕ್ಷೇತ್ರವಾರು ಯಾವ ಯಾವ ರಸ್ತೆಗಳ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ;

ಆ) ಹುಲಸೂರು ಮತಕ್ಷೇತ್ರದಲ್ಲಿ ಬರುವ, ಹುಲಸೂರ ಗ್ರಾಮದಿಂದ ಮಹಾರಾಷ್ಟ್ರ ಗಡಿ ಭಾಗದವರೆಗೆ, ಮಾಣಿಕನಗರದಿಂದ ಖೋಡವಾಡಿ, ಹಳ್ಳಿಖಾಡ (ಬಿ) ದುಬಲಗುಂಡಿ ವಯಾ ಮುಗನೂರು, ಕೇಸರ ಜೀವಳಗದಿಂದ ಅಳವಾಯು ರಸ್ತೆಗಳು ಮಂಜೂರಾಗದೆ ಇರಲು ಕಾರಣಗಳೇನು;

ಇ) ಇದನ್ನು ಯಾವಾಗ ಮಂಜೂರು ಮಾಡಲಾಗುವುದು?

ಶ್ರೀ ಹೆಚ್. ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಆ) 1) ಹುಲಸೂರು ಗ್ರಾಮದಿಂದ ಮಹಾರಾಷ್ಟ್ರ ಗಡಿ ಭಾಗದವರೆಗಿನ ರಸ್ತೆಯ ರಾಜ್ಯ ಹೆದ್ದಾರಿ ಸಂಖ್ಯೆ 11 ಆಗಿದ್ದು, ಸರ್ಕಾರದಿಂದ ಅನುದಾನ ಬಿಡುಗಡೆಯಾಗಿರುವುದರಿಂದ ಗುಂಡಿ ತುಂಬುವ ಕೆಲಸ ತೆಗೆದುಕೊಳ್ಳಲಾಗಿದೆ, ಹಾಗೂ ರಸ್ತೆ ಸುಧಾರಣೆಗೆ ರೂ. 20.00 ಲಕ್ಷದ ಮೊತ್ತದ ಕಾಮಗಾರಿಯು ತೆಗೆದುಕೊಳ್ಳಲಾಗಿದೆ.

2) ಮಾಣಿಕನಗರ ಘೋಡವಾಡಿ ರಸ್ತೆಯು ಈ ಹಿಂದೆ ಗ್ರಾಮೀಣ ರಸ್ತೆ ಆಗಿತ್ತು, ಇತ್ತೀಚಿನ ಸರ್ಕಾರಿ ಆದೇಶದಂತೆ ಜಿಲ್ಲಾ ಮುಖ್ಯ ರಸ್ತೆಯಾಗಿ ಮೇಲ್ದರ್ಜೆಗೇರಿಸಲಾಗಿದೆ. ಸದರಿ ರಸ್ತೆಯಲ್ಲಿ ಸುಮಾರು ರೂ. 30.00 ಲಕ್ಷ ರಸ್ತೆ ಸುಧಾರಣೆ ಹಾಗೂ ರೂ. 4.00 ಲಕ್ಷಗಳಲ್ಲಿ ಗುಂಡಿ ಮುಚ್ಚಲು ಕೈಗೆತ್ತಿಕೊಳ್ಳಲಾಗಿದೆ.

3) ಕೇಸರಜಾವಳಗಾದಿಂದ ಅಳವಾಯಿ ರಸ್ತೆಯು ಈ ಹಿಂದೆ ಗ್ರಾಮೀಣ ರಸ್ತೆ ಆಗಿತ್ತು. ಸರ್ಕಾರಿ ಆದೇಶದಂತೆ ಜಿಲ್ಲಾ ಮುಖ್ಯ ರಸ್ತೆಯಾಗಿ ಮೇಲ್ದರ್ಜೆಗೇರಿಸಲಾಗಿದೆ. ಸದರಿ ರಸ್ತೆಯಲ್ಲಿ ಸುಮಾರು ರೂ.35.00 ಲಕ್ಷಗಳ ಮೊತ್ತಕ್ಕೆ ರಸ್ತೆ ಸುಧಾರಣೆ ಹಾಗೂ ರೂ. 3.45 ಲಕ್ಷಗಳ ಮೊತ್ತದ ಗುಂಡಿ ಮುಚ್ಚುವ ಕೆಲಸ ಕೈಗೆತ್ತಿಕೊಳ್ಳಲಾಗಿದೆ.

ಇ) ಸಂಚಾರಕ್ಕೆ ರಸ್ತೆಗಳು ಸುಗಮವಾಗಿರುವಂತೆ ಅವಶ್ಯಕ ದುರಸ್ತಿ ಸುಧಾರಣೆ ಕೆಲಸಗಳನ್ನು ಹಂತ ಹಂತವಾಗಿ ತೆಗೆದುಕೊಳ್ಳಲಾಗುತ್ತಿದೆ.

ಅನುಬಂಧ

ಬೀದರ ಜಿಲ್ಲೆಯಲ್ಲಿ 2004–05ನೇ ಸಾಲಿನಲ್ಲಿ ಕೈಗೆತ್ತಿಕೊಂಡ ಕಾಮಗಾರಿಗಳ ವಿವರಗಳು

ಕ್ರ. ಸಂ.	ತಾಲ್ಲೂಕು	ಲೆಕ್ಕ ಶೀರ್ಷಿಕೆ	ಕಾಮಗಾರಿಯ ಹೆಸರು	ಅಂದಾಜು ಮೊತ್ತ
1	2	3	4	5
1	ಬೀದರ	5054 ನಬಾರ್ಡ್	1) ಚೌಖಂಡಿ ಗುಮಾ ಮಾಳೆಗಾಂವ ರಸ್ತೆ ಕಿಮಿ 3.80 ರಲ್ಲಿ ಸೇತುವೆ ನಿರ್ಮಿಸುವುದು	45.00
2	ಔರಾದ	ಸದರ	1) ಕೌಠಾ (ಬಿ) ಔರಾದ ರಸ್ತೆ ಸುಧಾರಣೆ	70.00
3	ಭಾಲ್ಕಿ	ಸದರ	**ಹುಲಸೂರು ಮತಕ್ಷೇತ್ರ**	
			1) ಬೆಳಕಾಪೂರ ಹಳ್ಳಿಖೇಡ ರಸ್ತೆ ಸುಧಾರಣೆ	20.00
			2) ಮಾರಂಬಿ ಆರ್ ಗೌಡಗಾಂವ್ ರಸ್ತೆ ಸುಧಾರಣೆ	17.00
4	ಬಸವ ಕಲ್ಯಾಣ	ಸದರ	1) ಸಸ್ತಾಪೂರ ಹತ್ಯಾಳ ರಸ್ತೆ ಸುಧಾರಣೆ, ವಾಯಾಘಟಹಿಪ್ಪರ್ಗಾ	170.00
			2) ಚಿಕನಗಾಂವ್ ದೇವಿ ತಾಂಡಾ ವಾಯಾ ಕಲಖೋರಾ ರಸ್ತೆ ಸುಧಾರಣೆ	40.00
			3) ರಾಜೇಶ್ವರ ಲಿಂಗದಳ್ಳ ರಸ್ತೆ ಸುಧಾರಣೆ,	58.00
			4) ಧನ್ನೂರಾ (ಕೆ) ಕ್ರಾಸ್‌ದಿಂದ ಘಾಟಬೋರಾಳ ರಸ್ತೆ ಸುಧಾರಣೆ	95.00

1	2	3	4	5
5	ಹುಮ್ನಾ ಸದರ ಬಾದ		**ಹುಲಸೂರು ಮತಕ್ಷೇತ್ರ**	
			1) ದುಬಲಗುಂಡಿ ಕಬೀರಾಬಾದವಾಡಿ ಕ್ರಾಸ್ ರಸ್ತೆ ಸುಧಾರಣೆ	20.00
			2) ಕುಮಾರ ಚಿಂಚೋಳಿ ಹಂದಿಕೀರಾ ರಸ್ತೆ ಸುಧಾರಣೆ	33.50
			ಹುಮ್ನಾಬಾದ ಮತಕ್ಷೇತ್ರ	
			1) ಹುಮ್ನಾಬಾದ ಬೋರಂಪಲ್ಲಿ ಕಥಲ್ಲಿ ರಸ್ತೆ ಸುಧಾರಣೆ	60.00
1	ಭಾಲ್ಕಿ	ಸಕ್ಕರೆ ಕಾರ್ಖಾನೆ ಗಸ್ತೆ ಅಭಿವೃದ್ಧಿ	1) ಕಣಜಿದಿಂದ ಬ್ಯಾಲಹಳ್ಳಿ ರಸ್ತೆ ಕಿಮಿ 13 ರಿಂದ 17 ವರೆಗೆ ರಸ್ತೆ ಸುಧಾರಣೆ ಹಾಗು ಡಾಂಬರೀಕರಣ	30.00
			2) ಗರ್ಮಾ ತಾಂಡಾ ರಸ್ತೆ ಕಿಮಿ 0 ದಿಂದ 1.20 ವರೆಗೆ ರಸ್ತೆ ಸುಧಾರಣೆ ಹಾಗೂ ಡಾಂಬರೀಕರಣ	12.96
ಈ) 3 ವರ್ಷಗಳ ಅವಧಿಯಲ್ಲಿ ಸದರಿ ರಸ್ತೆಯನ್ನು ನಿರ್ವಹಣೆ ಮಾಡುವ ಯೋಜನೆಯ ವೆಚ್ಚ ರೂ. 100.00 ಲಕ್ಷ ರೂ.ಗಳು.

847(1457): ಶ್ರೀ ಶಿವಾನಂದ ಪಾಟೀಲ್ (ಬಸವನ ಬಾಗೇವಾಡಿ):

ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಸವನ ಬಾಗೇವಾಡಿ ಪಟ್ಟಣ ಮತ್ತು ಇಂಗಳೇಶ್ವರ ಗ್ರಾಮಗಳನ್ನು ಕೂಡಲಸಂಗಮ ಅಭಿವೃದ್ಧಿ ಪ್ರಾಧಿಕಾರದಡಿ ಸೇರಿಸಲಾಗಿದೆಯೇ?

ಆ) ಪ್ರಾಧಿಕಾರದಿಂದ ಬಸವನ ಬಾಗೇವಾಡಿ ಹಾಗೂ ಇಂಗಳೇಶ್ವರ ಗ್ರಾಮಗಳಲ್ಲಿ ಯಾವ ಯಾವ ಅಭಿವೃದ್ಧಿ ಕೆಲಸಗಳನ್ನು ಕೈಗೊಳ್ಳಲಾಗಿದೆ ಮತ್ತು ಯಾವ ಅಭಿವೃದ್ಧಿ ಕೆಲಸಗಳನ್ನು ಸೇರಿಸಿಕೊಳ್ಳಲಾಗುವುದು?

ಇ) ಪ್ರಾಧಿಕಾರದಿಂದ ಇವುಗಳಿಗೆ ಒದಗಿಸಲಾಗಿರುವ ಅನುದಾನ ಎಷ್ಟು?

ಈ) ಯಾವ ನಿರ್ಧಿಷ್ಟ ಕಾಲಮಿತಿ ಹಾಕಿಕೊಂಡು ಪ್ರಾಧಿಕಾರ ಅಭಿವೃದ್ಧಿ ಗೊಳಿಸಲಾಗುವುಧು?

ಶ್ರೀ ಎಂ. ಪಿ. ಪ್ರಕಾಶ್ (ಕಂದಾಯ ಸಚಿವರು) :

ಅ) ಬಸವನಬಾಗೇವಾಡಿ ಪಟ್ಟಣ ಮತ್ತು ಇಂಗಳೇಶ್ವರ ಗ್ರಾಮವನ್ನು ಕೂಡಲಸಂಗಮ ಅಭಿವೃದ್ಧಿ ಮಂಡಳಿಯಡಿಯಲ್ಲಿ ಸೇರಿಸಿರುವುದಿಲ್ಲ. ಆದರೆ ಸರ್ಕಾರಿ ಅಧಿಸೂಚನೆ ಸಂಖ್ಯೆ ಆರ್‌ಡಿ:67:ಆರ್‌ಇಹೆಚ್:2002 ದಿ:9–3–04 ರನ್ವಯ ಬಸವನ ಬಾಗೇವಾಡಿ ಪಟ್ಟಣದಲ್ಲಿರುವ ಶ್ರೀ ಬಸವೇಶ್ವರ ದೇವಾಲಯದ ಸಂಕೀರ್ಣ ಹಾಗೂ ಬಸವ ಸಾಂಸ್ಕೃತಿಕ ಕೇಂದ್ರ ಕಟ್ಟಡ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಂಡು ಜಾಗವನ್ನು ಕೂಡಲಸಂಗಮ ಅಭಿವೃದ್ಧಿ ಮಂಡಳಿಯ ಹೆಚ್ಚುವರಿ ಕ್ಷೇತ್ರ ಎಂದು ಸೇರಿಸಲಾಗಿದ್ದು ಇಂಗಳೇಶ್ವರ ಗ್ರಾಮ ಯಾವುದೇ ಪ್ರದೇಶವನ್ನು ಸೇರಿಸಿರುವುದಿಲ್ಲ.

ಆ) ಬಸವನ ಬಾಗೇವಾಡಿ ಪಟ್ಟಣದಲ್ಲಿ ಕೆಳಕಂಡ ಅಭಿವೃದ್ಧಿ ಕೆಲಸಗಳನ್ನು ಕೈಗೆತ್ತಿಕೊಳ್ಳಲಾಗಿದೆ.

1) ಬಸವ ಸಾಂಸ್ಕೃತಿಕ ಕೇಂದ್ರದ ಕಟ್ಟಡ ನಿರ್ಮಾಣ.

2) ಬಸವೇಶ್ವರ ದೇವಸ್ಥಾನದ ಸಂಕೀರ್ಣದಲ್ಲಿ 63 ಅಂಗಡಿ ಮಳಿಗೆಗಳ ಮತ್ತು ಉಪಹಾರ ಗೃಹಗಳ ನಿರ್ಮಾಣ.

3) ದೇವಸ್ಥಾನದ ಪಕ್ಕದಲ್ಲಿ ಅಂದಾಜು 2.00 ಎಕರೆ ಪ್ರದೇಶದಲ್ಲಿ ಉದ್ಯಾನವನ ನಿರ್ಮಿಸುವ ಕಾಮಗಾರಿ.

ನವ ಸಾಂಸ್ಕೃತಿಕ ಕೇಂದ್ರದಿಂದ ಬಿಜಾಪುರ ಮುದ್ದೇಬಿಹಾಳ ಮುಖ್ಯ ರಸ್ತೆಯವರೆಗೆ ಒಂದು ಸಂಪರ್ಕ ರಸ್ತೆ ನಿರ್ಮಾಣ ಇದರಲ್ಲಿ 51 ಮನೆಗಳ ಹಾಗೂ ಖಾಲಿ ನಿವೇಶನಗಳ ಭೂಸ್ವಾಧೀನ ಹಿಂದೆ ನಿರ್ವಹಿತರಾಗುವ ಮನೆಗಳ ಮಾಲೀಕರಿಗೆ ನಿವೇಶನಗಳನ್ನು ಒದಗಿಸುವುದು ಮತ್ತು ಸಂಪರ್ಕ ರಸ್ತೆ ಕಲ್ಪಿಸಿಕೊಡುವುದು.

ಇ) ಈ ಮೇಲಿನ ಕಾಮಗಾರಿಗಳಿಗಾಗಿ ಅಂದಾಜು ರೂ. 3.00 ಕೋಟಿ ವೆಚ್ಚ ತಗಲುವುದು. ಇದುವರೆಗೆ ಬಿಡುಗಡೆಯಾದ ಅನುದಾನದ ವಿವರಗಳು ಕೆಳಕಂಡಂತಿವೆ.

1)	ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ	ರೂ. 18.00 ಲಕ್ಷ
2)	ಲೋಕಸಭಾ ಸದಸ್ಯರ ವಂತಿಗೆ	ರೂ. 25.00 ಲಕ್ಷ
		ರೂ. 43.00 ಲಕ್ಷ

ಇನ್ನುಳಿದ ಹಣವನ್ನು ಮುಂಬರುವ ವರ್ಷಗಳಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಮಾನ್ಯ ಶಾಸಕರ ನಿಧಿಯಿಂದ ಮಾನ್ಯ ಸಂಸದರ ನಿಧಿಯಿಂದ ಹಾಗೂ ಸಾರ್ವಜನಿಕರಿಂದ ವಂತಿಗೆಯ ರೂಪದಲ್ಲಿ ಪಡೆಯಲಾಗುವುದು.

ಈ) ಮೇಲಿನ ಕಾಮಗಾರಿಗಳನ್ನು ಈಗಾಗಲೇ ಕೈಗೆತ್ತಿಕೊಳ್ಳಲಾಗಿದ್ದು ಕೆಲಸ ಪ್ರಗತಿಯಲ್ಲಿದೆ. ಬಸವ ಸಾಂಸ್ಕೃತಿಕ ಕೇಂದ್ರ ಮತ್ತು ಕಟ್ಟಡದ ನೆಲ ಅಂತಸ್ತು ಪೂರ್ತಿಗೊಂಡಿದೆ. ಉಳಿದ ಕೆಲಸ ಪ್ರಗತಿಯಲ್ಲಿದೆ. ಶ್ರೀ ಬಸವೇಶ್ವರ ದೇವಾಲಯದ ಪಕ್ಕದಲ್ಲಿ ಉದ್ಯಾನವನ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ ಸಂಪನ್ಮೂಲಗಳು ಸಂಗ್ರಹಣೆಯನ್ನಾಧರಿಸಿ ಕಾಮಗಾರಿಗಳಲ್ಲಿ ಪ್ರಗತಿ ಸಾಧಿಸಲಾಗುವುದು. ಇದಕ್ಕೆ ನಿರ್ಧಿಷ್ಟ ಕಾಲಮಿತಿ ಇರುವುದಿಲ್ಲ.

848(1458) ಶ್ರೀ ಶಿವಾನಂದ ಪಾಟೀಲ್ (ಬಸವನ ಬಾಗೇವಾಡಿ): ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮಂಗಳೂರು–ಸೋಲಾಪುರ ರಸ್ತೆಯನ್ನು ರಷ್ಟ್ರೀಯ ಹೆದ್ದಾರಿ–13 ರನ್ನಾಗಿ ಎಂದು ಮಾರ್ಪಡಿಸಲಾಗಿದೆ;

ಆ) ಮೆಲ್ದರ್ಜೆಗೇರಿಸಿದ ಸಮಯದಿಂದ ಇಲ್ಲಿಯವರೆಗೆ ಎಷ್ಟು ಬಾರಿ ರಸ್ತೆಯನ್ನು ದುರಸ್ತಿಗೊಳಿಸಲಾಗಿದೆ;

ಇ) ಈ ರಾಷ್ಟ್ರೀಯ ಹೆದ್ದಾರಿಯ ಭಾಗವಾದ ಚಿತ್ರದುರ್ಗ ಬಿಜಾಪುರ ರಸ್ತೆಯು ಯಾವ ಸ್ಥಿತಿಯಲ್ಲಿದೆ;

ಈ) ಚಿತ್ರದುರ್ಗ ಬಿಜಾಪುರ ರಸ್ತೆಯ ಮೇಲೆ ಹೊಂಡಗಳು ಬಿದ್ದಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಹಾಗಾದರೆ, ಇದನ್ನು ದುರಸ್ತಿಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಹೆಚ್. ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಮಂಗಳೂರು–ಸೋಲಾಪುರ ರಸ್ತೆಯನ್ನು ಎರಡು ಹಂತದಲ್ಲಿ ರಾಷ್ಟ್ರೀಯ ಹೆದ್ದಾರಿಯನ್ನಾಗಿ ಮಾರ್ಪಡಿಸಲಾಗಿದ್ದು ಅವುಗಳ ವಿವರ ಕೆಳಕಂಡಂತಿದೆ.

1) ಸೊಲ್ಲಾಪುರ–ಚಿತ್ರದುರ್ಗ ರಸ್ತೆಯನ್ನು 1960ರಲ್ಲಿ ರಾಷ್ಟ್ರೀಯ ಹೆದ್ದಾರಿಯನ್ನಾಗಿ ಘೋಷಿಸಲಾಗಿದೆ.

2) ಚಿತ್ರದುರ್ಗ-ಮಂಗಳೂರು ರಸ್ತೆಯನ್ನು 1999ರಲ್ಲಿ ರಾಷ್ಟ್ರೀಯ ಹೆದ್ದಾರಿಯನ್ನಾಗಿ ಘೋಷಿಸಿದೆ.

ಆ) ಮೇಲ್ದರ್ಜೆಗೇರಿಸಿದ ಸಮಯದಿಂದ ಇಲ್ಲಿಯವರೆಗೆ ನಿಯತ ಕಾಲಿಕವಾಗಿ ರಸ್ತೆಯನ್ನು ದುರಸ್ತಿಗೊಳಿಸಲಾಗಿದೆ.

ಇ) ಈ ರಸ್ತೆಯು ವಾಹನ ಸಂಚಾರಕ್ಕೆ ಯೋಗ್ಯವಾಗಿರುತ್ತದೆ.

ಈ) ಹೌದು.

ಉ) ಈ ಹೆದ್ದಾರಿಯಲ್ಲಿ ಮಳೆಗಾಲದಲ್ಲಿ ಬಿದ್ದಿರುವ ಗುಂಡಿಗಳನ್ನು ತುಂಬಲಾಗಿದೆ ಹಾಗೂ ಈ ರಸ್ತೆಯ ಮೇಲ್ಮೈಯನ್ನು ಬಲಪಡಿಸುವ: ಸುಧಾರಿಸುವ ದೃಷ್ಟಿಯಿಂದ ಅತಿ ಹೆಚ್ಚು ಹಾಳಾಗಿರುವ ರಸ್ತೆಗಳಿಗೆ ಪಿ.ಆರ್ : ಐಆರ್‌ಕ್ಯೂಪಿ ಅಂದಾಜುಗಳಿಗೆ ಕೇಂದ್ರ ಭೂಸಾರಿಗೆ ಸಚಿವಾಲಯದ ಅನುಮೋದನೆ ಪಡೆಯಲಾಗಿದೆ. ಈ ಕಾಮಗಾರಿಗಳಿಗೆ ಗುತ್ತಿಗೆದಾರರನ್ನು ನಿಯೋಜಿಸಿ ಮಾರ್ಚ್ 2005 ಅಂತ್ಯದೊಳಗೆ ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದು. ಹಾಗೂ ರಸ್ತೆಯನ್ನು ಸಂಚಾರಕ್ಕೆ ಯೋಗ್ಯವಾಗಿಡಲು ಕ್ರಮ ಕೈಗೊಳ್ಳಲಾಗುವುದು.

849(550) ಶ್ರೀ ಶಿವರಾಜ ಸಜ್ಜನರ್ (ಹಾವೇರಿ): ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹಾವೇರಿ ಜಿಲ್ಲೆಯನ್ನು ಪ್ರಸಕ್ತ ವರ್ಷವು ಬರಗಾಲ ಪೀಡಿತ ಪ್ರದೇಶವೆಂದು ಸರ್ಕಾರ ಸಾರಿ ವಿದ್ಯುತ್ ಬಾಕಿ ಉಳಿಸಿಕೊಂಡಿರುವ ರೈತರ ಪಂಪ್‌ಸೆಟ್‌ಗಳ ಸಂಪರ್ಕವನ್ನು ಹೆಸ್ಕಾಂ ಅಧಿಕಾರಿಗಳು ಕಿತ್ತು ಹಾಕುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ:

ಆ) ಹಾಗಿದ್ದರೆ, ಸರ್ಕಾರದ ಕ್ರಮವೇನು?

ಶ್ರೀ ಹೆಚ್. ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಹೌದು, ಬಂದಿದೆ. ಹಾವೇರಿ ಜಿಲ್ಲೆಯ ನೀರಾವರಿ ಪಂಪ್‌ಸೆಟ್ಟುದಾರರಿಂದ 31-12-2004ರ ಅಂತ್ಯದಲ್ಲಿದ್ದಂತೆ ಬರಬೇಕಾಗಿದ್ದ ಬಾಕಿ ರೂ. 16.58 ಕೋಟಿಗಳಾಗಿರುತ್ತದೆ. ಆದುದರಿಂದ ವಿದ್ಯುತ್ ಬಾಕಿ ವಸೂಲಿಗೆ ತೀವ್ರ ಕ್ರಮ ಕೈಗೊಳ್ಳಲಾಗುತ್ತಿದೆ. ಈ ನಿಟ್ಟಿನಲ್ಲಿ ಬಿಲ್ಲು ಪಾವತಿಸದ ರೈತರ ಪಂಪ್‌ಸೆಟ್‌ಗಳ ವಿದ್ಯುತ್ ನಿಲುಗಡೆಗೊಳಿಸುವುದು ಅನಿವಾರ್ಯವಾಗಿದೆ.

ಆ) ಪ್ರತಿ ಯೂನಿಟ್ ವಿದ್ಯುತ್ ಸರಬರಾಜಿಗೆ ತಗಲುವ ವೆಚ್ಚ 3.73 ರೂ.ಗಳು. ಆದರೆ ಪಂಪ್‌ಸೆಟ್ ನವರು ಕೇವಲ 63 ಪೈಸೆಗಳನ್ನು ಒಂದು ಯೂನಿಟ್‌ಗೆ ಪಾವತಿಸುತ್ತಾರೆ. ಈ ಅತಿ ಕಡಿಮೆ ದರವನ್ನಾದರೂ ರೈತರು ತಪ್ಪದೆ ಪಾವತಿಸಬೇಕಾಗಿರುತ್ತದೆ. ವಿದ್ಯುತ್ ಕಂಪನಿಗಳು ಹಣ ಕಾಸಿನ ತೊಂದರೆಯಲ್ಲಿರುತ್ತವೆ. ಗ್ರಾಮಾಂತರ ಪ್ರದೇಶಗಳಿಗೆ ಈ ವರ್ಷ ಹೆಚ್ಚಿನ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ. ಸರ್ಕಾರದ ಸಬ್ಸಿಡಿ ಹಣದ ಬಿಡುಗಡೆ. ವಸೂಲಾತಿ ಸಾಮರ್ಥ್ಯದ ಮೇಲೆ ಅವಲಂಬಿತವಾಗಿರುತ್ತದೆ. ಆದುದರಿಂದ ಆತರು ಸಹಕರಿಸಿ ಅವರ ವಿದ್ಯುತ್ ಬಿಲ್ಲುಗಳನ್ನು ಪಾವತಿಸಿದರೆ, ವಿದ್ಯುತ್ ಕಂಪನಿಗಳು ಗ್ರಾಮಾಂತರ ಪ್ರದೇಶಗಳಿಗೆ ಇದೇ ರೀತಿಯ ಹೆಚ್ಚಿನ ವಿದ್ಯುತ್ ಕೊಡಲು ಸಾಧ್ಯವಾಗುತ್ತದೆ ರೈತರು ಕಂತುಗಳಲ್ಲಿ ಬಾಕಿಯನ್ನು ಪಾವತಿಸಲು ಮುಂದೆ ಬಂದಲ್ಲಿ, ಇದನ್ನು ಸಹಾನುಭೂತಿಯಿಂದ ಪರಿಗಣಿಸಲಾಗುವುದು.

850(551) ಶ್ರೀ ಶಿವರಾಜ ಸಜ್ಜನರ್ (ಹಾವೇರಿ): ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 2003 ಮಾರ್ಚ್‌ವರೆಗೆ ನೀರಾವರಿ ಪಂಪ್‌ಸೆಟ್ ಹೊಂದಿದ ರೈತರು ವಿದ್ಯುತ್ ಕಂಪನಿಗಳಿಗೆ ಪ್ರಾಮಾಣಿಕವಾಗಿ ಬಿಲ್ಲು ಪಾವತಿಸಿದ್ದು ನಿಜವೇ:

ಆ) ಹಾಗಿದ್ದಲ್ಲಿ, ಅಂತಹ ರೈತರಿಗೆ ಸರ್ಕಾರದ ಪ್ರೋತ್ಸಾಹವೇನು:

ಇ) ಹಾಗಿದ್ದಲ್ಲಿ, ಪ್ರಾಮಾಣಿಕವಾಗಿ ಬಿಲ್ಲು ಪಾವತಿಸಿದ ರೈತರಿಗೆ ಮುಂದಿನ ಬಿಲ್ಲುಗಳಲ್ಲಿ ಹೊಂದಾಣಿಕೆ ಮಾಡಿಕೊಳ್ಳುವ ಆಲೋಚನೆ ಸರ್ಕಾರಕ್ಕೆ ಇದೆಯೇ?

ಶ್ರೀ ಹೆಚ್. ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಕೇವಲ ಅಲ್ಪ ಸ್ವಲ್ಪ ನೀರಾವರಿ ಪಂಪುಸೆಟ್ಟು ಬಳಕೆದಾರರು ಮಾತ್ರ ಮಾರ್ಚ್ 2003 ರವರೆಗೆ ವಿದ್ಯುತ್ ಬಿಲ್ಲನ್ನು ಪಾವತಿ ಮಾಡಿರುತ್ತಾರೆ. ಬಹುತೇಕ ನೀರಾವರಿ ಪಂಪುಸೆಟ್ಟು ಬಳಕೆದಾರರು ಮಾರ್ಚ್ 2003ರ ಅಂತ್ಯದವರೆಗಿದ್ದ ವಿದ್ಯುತ್ ಬಾಕಿಯನ್ನು ಸರ್ಕಾರ ಸಂಪೂರ್ಣವಾಗಿ ಮನ್ನಾ ಮಾಡುತ್ತದೆಯೆಂದು ನಿರೀಕ್ಷಿಸಿ, ಪಾವತಿ ಮಾಡಿರಲಿಲ್ಲ.

ಅ) ಸರ್ಕಾರವು ದಿನಾಂಕ 21–2–2004ರ ಆದೇಶದಲ್ಲಿ, ನೀರಾವರಿ ಪಂಪುಸೆಟ್ಟು ಬಳಕೆದಾರರ ದಿನಾಂಕ 31–3–2003ರ ಅಂತ್ಯದವರೆಗಿನ ವಿದ್ಯುತ್ ಬಾಕಿಯನ್ನು ಮನ್ನಾ ಮಾಡಿರುತ್ತದೆ. ಸರ್ಕಾರದ ಈ ಆದೇಶದ ಪ್ರಕಾರ

31–3–2003ರ ಅಂತ್ಯದವರೆಗಿನ ಬಾಕಿಯನ್ನು ಒಂದು ವೇಳೆ 1–4–2003 ಮತ್ತು ತದನಂತರದಲ್ಲಿ ಪಾವತಿ ಮಾಡಿದ್ದಲ್ಲಿ ಅಂತಹ ನೀರಾವರಿ ಪಂಪುಸೆಟ್ಟು ಗ್ರಾಹಕರಿಗೆ ಮಾತ್ರ ಪಾವತಿಸಲಾದ ಹಣವನ್ನು 2003–04 ರ ವಿದ್ಯುತ್ ಬಿಲ್ಲುಗಳಲ್ಲಿ ಹೊಂದಾಣಿಕೆ ಮಾಡಿಕೊಡಲಾಗುತ್ತದೆ.

ಇ) ಸರ್ಕಾರದ ಮುಂದೆ ಇಂತಹ ಪ್ರಸ್ತಾವನೆಗಳು ಇರುವುದಿಲ್ಲ.

851(1595) ಶ್ರೀ ಸಿಂಧೂರ ರಾಜಶೇಖರ (ಶಿಗ್ಗಾಂವ್): ಮಾನ್ಯ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸವಣೂರ ತಾಲ್ಲೂಕಿನ ಚಿಕ್ಕಮರಳೀಹಳ್ಳಿ ಹತ್ತಿರ 270 ಎಕರೆ ಅರಣ್ಯ ಭೂಮಿಯಲ್ಲಿ ಕೆರೆ ಸಹ ಇರುವುದು ಸರ್ಕಾರದ ಗಮನಕ್ಕೆ ಇದೆಯೇ:

ಆ) ಬಂದಿದ್ದಲ್ಲಿ, ಅಭಿವೃದ್ಧಿ ಮಾಡದೇ ಇರಲು ಕಾರಣವೇನು;

ಇ) ಇಷ್ಟು ದೊಡ್ಡ ಪ್ರಮಾಣದ ಅರಣ್ಯ ಜಮೀನನ್ನು ಅಭಿವೃದ್ಧಿ ಪಡಿಸದ ಅಧಿಕಾರಿಗಳ ವಿರುದ್ಧ ಸರ್ಕಾರ ಏನು ಕ್ರಮ ಕೈಗೊಂಡಿದೆ.

ಈ) ಹಾಗಿದ್ದಲ್ಲಿ, ಅಭಿವೃದ್ಧಿ ಮಾಡಲು ಸರ್ಕಾರ ಕೂಡಲೇ ಕ್ರಮ ಕೈಗೊಳ್ಳುವುದೇ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಮಾನ್ಯ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):

ಅ) ಹೌದು

ಆ) ಸದರಿ ಅರಣ್ಯ ಪ್ರದೇಶದಲ್ಲಿ ಜೆ.ಬಿ.ಐ.ಸಿ. ಯೋಜನೆ (ಮಾದರಿ–03) ರಡಿ 1998–99 ನೇ ಸಾಲಿನಲ್ಲಿ (102 ಹೆ.) ಮತ್ತು 1999–00 ನೇ ಸಾಲಿನಲ್ಲಿ (140 ಹೆ.) ನೆಡುತೋಪು ಬೆಳೆಸಿ ಅಭಿವೃದ್ಧಿಪಡಿಸಲಾಗಿರುತ್ತದೆ.

ಇದರಿಂದಾಗಿ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

852(1596) ಶ್ರೀ ಸಿಂಧೂರ ರಾಜಶೇಖರ (ಶಿಗ್ಗಾಂವ್): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 1964 ನೇ ಸಾಲಿನಲ್ಲಿ ಮೋಜಣಿ ಕಾರ್ಯವನ್ನು ಮಾಡಿದ ನಂತರ ಸರ್ಕಾರ ಈ ಕಾರ್ಯವನ್ನು ಮುಂದುವರಿಸದೇ ರಸ್ತೆಗಳ ಹಾಗೂ ಜಮೀನುಗಳ ಹದ್ದು ಬಸ್ತಿಗಳ ತಂಟೆ ತಕರಾರುಗಳ, ವ್ಯಾಜ್ಯಗಳು ಹೆಚ್ಚಾಗಿದ್ದು ಸಾರ್ವಜನಿಕರಿಗೆ ಹಾಗೂ ರೈತರಿಗೆ ಬಿತ್ತುವ:ಸುಗ್ಗಿಯ ಹಂಗಾಮಿನಲ್ಲಿ ಸರ್ಕಾರದ ಯೋಜನೆಗಳಾದ ಸುಜಲಾ ಹಾಗೂ ಜಲಾನಯನ ಯೋಜನೆಗಳಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಆ) ಹಾಗಿದ್ದಲ್ಲಿ, ಜಮೀನುಗಳ ಮೋಜಣಿ ಕಾರ್ಯ ನಡೆಸಿ ಹದ್ದುಬಸ್ತುಗಳನ್ನು ಗುರುತು ಮಾಡಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ:

ಇ) ಹಾಗಿದ್ದಲ್ಲಿ, ಎಷ್ಟು ಕಾಲಾವಕಾಶದಲ್ಲಿ ಸರ್ಕಾರ ಕ್ರಮ ಕೈಗೊಳ್ಳುತ್ತದೆ?

ಶ್ರೀ ಎಂ. ಪಿ. ಪ್ರಕಾಶ್, (ಕಂದಾಯ ಸಚಿವರು) :

ಅ) ಇಲ್ಲ.

ಆ) ಮತು ಇ) ಜಮೀನುಗಳ ಮೋಜಣಿ ಕಾರ್ಯ ನಡೆಸಲು ರಾಜ್ಯದಲ್ಲಿ ಸಮಗ್ರ ಮರುಭೂಮಾಪನ ಕಾರ್ಯ ಕೈಗೊಳ್ಳಲು ಉದ್ದೇಶಿಸಿ, ಮೊದಲು ಈ ಕಾರ್ಯವನ್ನು ಪ್ರಾಯೋಗಿಕವಾಗಿ ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ಅತಗೂರು ಹೋಬಳಿಯಲ್ಲಿ ಪ್ರಾರಂಭಿಸಲಾಗಿದೆ. ಅಲ್ಲದೆ ತಾಲ್ಲೂಕಿನಲ್ಲಿ ರೂ. 900.00 ಲಕ್ಷ ವೆಚ್ಚದಲ್ಲಿ ರಾಜ್ಯದ ಒಂದು ತಾಲ್ಲಕೂಕಿನ್ಲಿ ಮರು ಭೂಮಾಪನ ಕಾರ್ಯ ಕೈಗೊಳ್ಳಲು ಉದ್ದೇಶಿಸಿ ದಿ:25-4-2000 ರಂದು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ.

ನಂತರ ಸರ್ಕಾರದ ಮಟ್ಟದಲ್ಲಿ ಈ ಬಗ್ಗೆ ಹಲವಾರು ಚರ್ಚೆಗಳು:ಚಿಂತನೆಗಳು ನಡೆದು ಆಧುನಿಕ ಉಪಕರಣಗಳನ್ನು ಉಪಯೋಗಿಸಿ ರಾಜ್ಯದಲ್ಲಿನ ಸರ್ಕಾರಿ ಜಮೀನುಗಳನ್ನು ಮಾತ್ರ ಮರುಭೂಮಾಪನ ಮಾಡುವ ಬಗ್ಗೆ ರೂ.190 ಕೋಟಿಗಳ ಯೋಜನಾ ವರದಿಯೊಂದನ್ನು ತಯಾರಿಸಿ ದಿ:21-5-2004 ರಂದು ಕೇಂದ್ರ ಸರ್ಕಾರಕ್ಕೆ ಕಳುಹಿಸಿ ಮಂಜೂರಾತಿ ನೀಡುವಂತೆ ಹಾಗೂ ಕೇಂದ್ರ ಪುರಸ್ಕೃತ ಯೋಜನೆಯಡಿ ಈ ಕಾರ್ಯ ಕೈಗೊಳ್ಳಲು ಶೇ.50 ರಷ್ಟು ಅನುದಾನವನ್ನು ಅಂದರೆ ರೂ. 95.00 ಕೋಟಿ ಬಿಡುಗಡೆ ಮಾಡುವಂತೆ ಕೋರಲಾಗಿದೆ.

ಈಗ ಅತಗೂರು ಹೋಬಳಿಯಲ್ಲಿ ಕೈಗೊಳ್ಳಲಾದ ಮರು ಭೂಮಾಪನದ ಫಲಿತಾಂಶದ ಆಧಾರದ ಮೇಲೆ ಹಾಗೂ ಆರ್ಥಿಕ ಲಭ್ಯತೆಯನ್ನು ಗಮನದಲ್ಲಿಟ್ಟುಕೊಂಡು ಕೇಂದ್ರ ಸರ್ಕಾರದೊಡನೆ ವ್ಯವಹರಿಸಿ, ಈ ಹಿಂದೆ ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದ ಪ್ರಸ್ತಾವನೆಯನ್ನು ಅನುಸರಿಸಿ, ಈಗ ಈ ಯೋಜನೆಗೆ ತಗಲಬಹುದಾದ ಅಂದಾಜು ವೆಚ್ಚವನ್ನೊಳಗೊಂಡ ಪರಿಷ್ಕೃತ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿ ಈ ಮರು ಭೂಮಾಪನ ಕಾರ್ಯವನ್ನು ರಾಜ್ಯಾದ್ಯಂತ ಕೈಗೊಳ್ಳುವ ಬಗ್ಗೆ ಪರಿಶೀಲಿಸಲಾಗುತ್ತದೆ.

853(1597) ಶ್ರೀ ಸಿಂಧೂರ ರಾಜಶೇಖರ (ಶಿಗ್ಗಾಂವ್): ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಶಿಗ್ಗಾಂವ ಮತ ಕ್ಷೇತ್ರದ ಹಿಂದುಳಿದ ಜನಾಂಗ ಪ್ರದೇಶಗಳಾದ ಜೊಂಡಲಗಟ್ಟಿ ಹಾಗೂ ಹಾಳೂರ ತರ್ಲಘಟ್ಟ ಗ್ರಾಮಗಳು ಇಲ್ಲಿಯವರೆಗೆ ವಿದ್ಯುತ್ ಸಂಪರ್ಕದಿಂದ ವಂಚಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಆ) ಸರ್ಕಾರವು ಇಲ್ಲಿಯವರೆಗೆ ಈ ಎರಡು ಗ್ರಾಮಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸದಿರಲು ಕಾರಣವೇನು:

ಇ) ಹಾಗಿದ್ದಲ್ಲಿ, ಇದಕ್ಕೆ ಅಧಿಕಾರಿಗಳ ನಿರ್ಲಕ್ಷ್ಯತನ ಕಾರಣವೇ:

ಈ) ಹಾಗಿದ್ದಲ್ಲಿ, ಸರ್ಕಾರವು ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುತ್ತದೆಯೇ:

ಉ) ಸರ್ಕಾರ ಕೂಡಲೇ ವಿದ್ಯುತ್ ಸಂಪರ್ಕ ಕಲ್ಪಿಸಲಾಗುವುದೇ?

ಶ್ರೀ ಹೆಚ್. ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಶಿಗ್ಗಾಂವ ವಿಧಾನ ಸಭಾ ಕ್ಷೇತ್ರದ ಜೊಂಡಲಗಟ್ಟಿ (ಸಿ.ಸಿ.ನಂ.81) ಗ್ರಾಮಕ್ಕೆ ಸುಮಾರು 25 ವರ್ಷಗಳ ಹಿಂದೆಯೇ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ. ಆದರೆ ಹಳವೂರು–ತರ್ಲಘಟ್ಟ ಒಂದು ಉಪಗ್ರಾಮವಾಗಿದ್ದು, ಇದು ವಿದ್ಯುದೀಕರಣವಾಗಬೇಕಾಗಿರುತ್ತದೆ.

ಆ) ನವೆಂಬರ್–2001 ರಲ್ಲಿ ಹಳವೂರು–ತರ್ಲಘಟ್ಟ ಉಪ ಗ್ರಾಮದ ವಿದ್ಯುದ್ಧೀಕರಣ ಕಾಮಗಾರಿಯನ್ನು ಗುತ್ತಿಗೆ ಪಡೆದುಕೊಂಡಿದ್ದ ಮೆ: ಮೆಕಾನ್ಸ್ ಸಂಸ್ಥೆ, ಬೆಂಗಳೂರು ಅವರು ಕಾಮಗಾರಿಯನ್ನು ಪೂರ್ಣಗೊಳಿಸಲು ವಿಫಲರಾದ ಕಾರಣ ಈ ಉಪಗ್ರಾಮಕ್ಕೆ ವಿದ್ಯುತ್ ಪೂರೈಸಲು ವಿಳಂಬವಾಗಿರುತ್ತದೆ.

ಇ) ಮತು ಈ) ಕಾಮಗಾರಿಗಳ ಗುತ್ತಿಗೆ ಪಡೆದುಕೊಂಡಿದ್ದ ಗುತ್ತಿಗೆದಾರರು ಕೆಲಸ ನಿರ್ವಹಿಸಲು ವಿಫಲರಾದ್ದರಿಂದ ವಿದ್ಯುದ್ಧೀಕರಣ ಕಾಮಗಾರಿ ವಿಳಂಬವಾಗಿರುತ್ತದೆ. ಇದಕ್ಕೆ ಕೆ.ಪಿ.ಟಿ.ಸಿ.ಎಲ್/ ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಯ ಅಧಿಕಾರಿಗಳ ನಿರ್ಲಕ್ಷತನ ಕಾರಣವಾಗಿರುವುದಿಲ್ಲ. ಆದುದರಿಂದ ಅಧಿಕಾರಿಗಳ ವಿರುದ್ದ ಕ್ರಮ ಕೈಗೊಳ್ಳುವ ಅವಶ್ಯಕತೆ ಇರುವುದಿಲ್ಲ.

ಉ) ಆರ್.ಇ.ಸಿ. ಯೋಜನೆಯಲ್ಲಿ ಮಂಜೂರಾಗಿರುವ ವಿದ್ಯುದ್ಧೀಕರಣವನ್ನು ಶೀಘ್ರದಲ್ಲಿ ಪೂರ್ಣಗೊಳಿಸಿ, ಹಳವೂರು–ತರ್ಲಘಟ್ಟ ಉಪಗ್ರಾಮಕ್ಕೆ ವಿದ್ಯುತ್ ಸರಬರಾಜು ವ್ಯವಸ್ಥೆ ಮಾಡಲಾಗುವುದು.

854(1598) ಶ್ರೀ ಸಿಂಧೂರ ರಾಜಶೇಖರ (ಶಿಗ್ಗಾಂವ್): ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಳೆದ ಮೂರು ವರ್ಷದಲ್ಲಿ ಶಿಗ್ಗಾಂವ ಮತ ಕ್ಷೇತ್ರದ ಲೋಕೋಪಯೋಗಿ ಇಲಾಖೆಯ ಎಲ್ಲಾ ರಸ್ತೆಗಳು ದುಸ್ಥಿತಿಯುಲ್ಲಿದ್ದು, ಅತಿಕ್ರಮಣವಾಗಿ ಸಾರ್ವಜನಿಕರ ಸಂಚಾರಕ್ಕೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು;

ಇ) ರಸ್ತೆಗಳ ಅನುದಾನವನ್ನು ಬಿಡುಗಡೆಗೊಳಿಸಿ ಸುವ್ಯವಸ್ಥಿತಗೊಳಿಸುವ ಕ್ರಮವನ್ನು ಶೀಘ್ರದಲ್ಲಿ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಹೆಚ್. ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂದನ ಸಚಿವರು) :

ಅ) ಬಂದಿರುತ್ತದೆ.

ಆ) ಮೊದಲಿನ ರಾಜ್ಯ ಹೆದ್ದಾರಿಗಳಾದ ಕಾರವಾರ ಕೈಗಾ ಇಳಕಲ್ ರಾಜ್ಯ ಹೆದ್ದಾರಿ, ಗಂಗಾಮೂಲ ತಡಸ ರಾಜ್ಯ ಹೆದ್ದಾರಿ ಹಾಗೂ ಕುಮಟಾ ಹುಬ್ಬಳ್ಳಿ ರಾಜ್ಯ ಹೆದ್ದಾರಿಗಳ 3 ವರ್ಷಗಳ ನಿರ್ವಹಣಾ ಗುತ್ತಿಗೆಯನ್ನು ಮೆಃ ಎನ್.ಎಸ್.ನಾಯಕ ಮತ್ತು ಸನ್ಸ್ ಇವರಿಗೆ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ ಬೆಂಗಳೂರು ಇವರ ಮೂಲಕ ಗುತ್ತಿಗೆ ನೀಡಲಾಗಿದ್ದು ಈಗ ಎರಡನೇ ವರ್ಷದ ನಿರ್ವಹಣೆ ಕೆಲಸವು ಮುಕ್ತಾಯ ಹಂತದಲ್ಲಿದೆ.

ಮೇಲ್ದರ್ಜೆಗೇರಿಸಲ್ಪಟ್ಟ ರಾಜ್ಯ ಹೆದ್ದಾರಿಯಾದ ಕಲ್ಲಾಲಾ ಶಿಗ್ಗಾಂವಿ ರಸ್ತೆ (ಶಿಗ್ಗಾಂವಿ ಗುಡಗೇರಿ ರಸ್ತೆ)ಯ ತಗ್ಗು ಗುಂಡಿಗಳನ್ನು ತುಂಬಿ ನಿರ್ವಹಣೆ ಮಾಡಲು 04-05ನೇ ಸಾಲಿನಲ್ಲಿ 3054 ರಸ್ತೆ ಮತ್ತು ಸೇತುವೆಗಳು ಯೋಜನೆ (ಮುಖ್ಯಮಂತ್ರಿಗಳ ಗ್ರಾಮೀಣ ರಸ್ತೆ ಅಭಿವೃದ್ಧಿ) ರೂ.4.65 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು ದುರಸ್ತಿ ಕಾಮಗಾರಿಯನ್ನು ಗುತ್ತಿಗೆ ಪ್ರಕ್ರಿಯೆ ಪೂರ್ಣಗೊಂಡ ನಂತರ ಕೈಗೆತ್ತಿಕೊಳ್ಳಲಾಗುವುದು. ಶಿಗ್ಗಾಂವಿ ಸವಣೂರು ತಾಲ್ಲೂಕಿನ ಎಲ್ಲಾ ಜಿಲ್ಲಾ ಮುಖ್ಯ ರಸ್ತೆಗಳ ಗುಂಡಿ ತುಂಬುವ ಕಾಮಗಾರಿಯನ್ನು ಜನವರಿ 05 ರ ಮೊದಲ ವಾರದಲ್ಲಿಯೇ ಪೂರ್ಣಗೊಳಿಸಲಾಗಿದೆ. ಕಾರವಾರ ಕೈಗಾ ಇಳಕಲ್ ರಾಜ್ಯ ಹೆದ್ದಾರಿ ಹಾಗೂ ಸವಣೂರು ಶಿರಪಾಡ ಜಿಲ್ಲಾ ಮುಖ್ಯ ರಸ್ತೆಗಳಲ್ಲಿ ಆಗಿರುವ ಅಕ್ರಮ ಕಟ್ಟಡಗಳನ್ನು ತೆರವುಗೊಳಿಸುವಂತೆ ಈಗಾಗಲೇ ನೋಟೀಸ್ ನೀಡಲಾಗಿದ್ದು, ಶೀಘ್ರವೇ ಅಕ್ರಮ ಕಟ್ಟಡಗಳನ್ನು ತೆರವುಗೊಳಿಸಲು ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಇ) ಕೈಗೊಳ್ಳಲಾಗುತ್ತಿದೆ.

855(247) ಶ್ರೀ ಸೋಮಣ್ಣ ವಿ. (ಬಿನ್ನಿಪೇಟೆ): ಮಾನ್ಯ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದ ಕ್ರೀಡಾ ಪ್ರಾಧಿಕಾರದಲ್ಲಿ ಒಟ್ಟು ಇರತಕ್ಕ ಸಿಬ್ಬಂದಿ ಹಾಗೂ ಕೆಲಸ ನಿರ್ವಹಿಸುತ್ತಿರುವ ವಿವಿಧ ಕ್ರೀಡೆಗಳ ತರಬೇತುದಾರರ ಸಂಖ್ಯೆ ಎಷ್ಟು?

ಆ) ಈ ಪ್ರಾಧಿಕಾರದಲ್ಲಿನ ಸಿಬ್ಬಮದಿಗೆ ಹಾಗೂ ತರಬೇತಿದಾರರಿಗೆ ಹೆಚ್ಚಿನ ವೇತನ ನೀಡಲು ಕ್ರಮ ಕೈಗೊಳ್ಳದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) 2004-05ರಲ್ಲಿ ಈ ಪ್ರಾಧಿಕಾರಕ್ಕೆ ಸರ್ಕಾರ ನೀಡಿರುವ ಅನುದಾನವೆಷ್ಟು ಹಾಗೂ ಈ ಸಾಲಿನಲ್ಲಿ ಕ್ರೀಡಾ ತರಬೇತಿಯ ಸಾಮಗ್ರಿಗಳ ಖರೀದಿಗೆ ಮೀಸಲಿಟ್ಟಿರುವ ಹಣವೆಷ್ಟು;

ಈ) 2004-05ರಲ್ಲಿ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಕ್ರೀಡಾ ಚಟುವಟಿಕೆಗಳನ್ನು ಪ್ರೋತ್ಸಾಹಿಸಲು ಕೈಗೊಂಡಿರುವ ಹಾಗೂ ಕೈಗೊಳ್ಳಲಿರುವ ಕಾರ್ಯಕ್ರಮಗಳೇನು (ವಿವರ ನೀಡುವುದು)?

ಶ್ರೀ ಜಬ್ಬಾರ್ ಖಾನ್ ಹೊನ್ನಳ್ಳಿ (ಅಲ್ಪಸಂಖ್ಯಾತರ ಕಲ್ಯಾಣ ಮತ್ತು ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು) :

ಅ) ಕರ್ನಾಟಕ ಕ್ರೀಡಾ ಪ್ರಾಧಿಕಾರದಲ್ಲಿ 109 ತರಬೇತಿದಾರರು ಹಾಗೂ 44 ಜನ ಸಿಬ್ಬಂದಿ ಒಟ್ಟು 153 ಜನ ಕಾರ್ಯನಿರ್ವಹಿಸುತ್ತಿದ್ದಾರೆ.

ಆರ್ಚರಿ	–	01	ಜಿಮ್ನಾಸ್ಟಿಕ್ಸ್	–	06
ಅಥ್ಲೆಟಿಕ್ಸ್	–	15	ಹಾಕಿ	–	14
ಬ್ಯಾಡ್ಮಿಂಟನ್	–	01	ಜುಡೋ	–	03
ಬಾಕ್ಸಿಂಗ್	–	03	ಖೋ-ಖೋ	–	06
			ಕಬಡ್ಡಿ	–	05
ಬ್ಯಾಸ್ಕೆಟ್‌ಬಾಲ್	–	10	ಟೆನ್ನಿಸ್	–	01
ಕ್ರಿಕೆಟ್	–	04	ಈಜು	–	04

ಸ್ಕೈಕ್ಲಿಂಗ್	–	06	ವಾಲಿಬಾಲ್	–	17
ಪುಟ್ಬಾಲ್	–	05	ಕುಸ್ತಿ	–	03
ಪೆನ್ಸಿಂಗ್	–	01	ಬೇಸ್ ಬಾಲ್	–	01
ವೈಟ್‌ಲಿಫ್ಟಿಂಗ್	–	03			

ಆ) ತರಬೇತಿದಾರರಿಗೆ ನೀಡಿದ ವೇತನ ಹೆಚ್ಚಳದ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

ಇ) 2004–05 ನೇ ಸಾಲಿನಲ್ಲಿ ಕರ್ನಾಟಕ ಕ್ರೀಡಾ ಪ್ರಾಧಿಕಾರಕ್ಕೆ ಯೋಜನೆ ಶೀರ್ಷಿಕೆ ಅಡಿಯಲ್ಲಿ ಕೇವಲ ರೂ.1.00 ಲಕ್ಷ ಮಾತ್ರ ಹಾಗೂ ಯೋಜನೇತರ ಶೀರ್ಷಿಕೆ ಅಡಿಯಲ್ಲಿ ರೂ.95.00 ಲಕ್ಷಗಳನ್ನು ಆಯವ್ಯಯದಲ್ಲಿ ಒದಗಿಸಲಾಗಿರುತ್ತದೆ. ಯೋಜನಾ ಆಯವ್ಯಯದಲ್ಲಿ ಒದಗಿಸಲಾಗಿರುವ ಅನುದಾನದಿಂದ ಕ್ರೀಡಾ ತರಬೇತಿ ನೀಡಲು ಕ್ರೀಡಾ ಸಾಮಗ್ರಿಗಳ ಖರೀದಿಗೆ ಯಾವುದೇ ಅನುದಾನ ಮೀಸಲಾಗಿಡಲು ಸಾಧ್ಯವಾಗಿಲ್ಲ.

ಈ) 2004–05 ರಲ್ಲಿ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಕ್ರೀಡಾ ಚಟುವಟಿಕೆಗಳನ್ನು ಪ್ರೋತ್ಸಾಹಿಸಲು ದಸರಾ ಕ್ರೀಡಾ ಕೂಟವನ್ನು ತಾಲ್ಲೂಕಿನಿಂದ ರಾಜ್ಯಮಟ್ಟದವರೆಗೆ ನಡೆಸಲಾಗಿದೆ. ಗ್ರಾಮೀಣ ಕ್ರೀಡಾಕೂಟವನ್ನು ತಾಲ್ಲೂಕಿನಿಂದ ರಾಜ್ಯಮಟ್ಟದವರೆಗೆ ನಡೆಸಿ ರಾಷ್ಟ್ರಮಟ್ಟಕ್ಕೆ ತಂಡವನ್ನು ಕಳುಹಿಸಲಾಗಿದೆ. ಮಹಿಳಾ ಕ್ರೀಡಾ ಸ್ಪರ್ಧೆಗೆ ರಾಷ್ಟ್ರಮಟ್ಟಕ್ಕೆ ತಂಡವನ್ನು ಕಳುಹಿಸಲಾಗುತ್ತಿದ್ದು, ಪ್ರಸ್ತುತ ಕ್ರೀಡಾ ಶಾಲೆ ಮತ್ತು ನಿಲಯಗಳಿಗೆ ಆಯ್ಕೆಯನ್ನು ನಡೆಸಲಾಗುತ್ತಿದೆ. ಅಲ್ಲದೆ ಗ್ರಾಮೀಣ ಪ್ರದೇಶದಲ್ಲಿ ಕ್ರೀಡಾ ತರಬೇತಿ ಶಿಬಿರಗಳನ್ನು ನಡೆಸಲಾಗುತ್ತಿದೆ.

858(1250) ಶ್ರೀ ಶ್ರೀನಿವಾಸ್ ಎಂ. (ಮಂಡ್ಯ): ಮಾನ್ಯ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮಂಡ್ಯ ಕ್ರೀಡಾಂಗಣವನ್ನು ಮಂಡ್ಯ ನಗರ ಪೂರ್ಣ ಪ್ರಮಾಣದಲ್ಲಿ ನವೀಕರಿಸಿ ಎಲ್ಲಾ ಸವಲತ್ತುಗಳನ್ನೊಳಗೊಂಡ ಕ್ರೀಡಾಂಗಣವನ್ನಾಗಿ ಮಾರ್ಪಡಿಸುವ ಸಲುವಾಗಿ ಹಳೆಯ ಕ್ರೀಡಾಂಗಣವನ್ನು ನವೀಕರಿಸಲು ಅಂದಾಜು ವೆಚ್ಚದ ಪಟ್ಟಿಯನ್ನು ಲೋಕೋಪಯೋಗಿ ಇಲಾಖೆಗೆ ಕಳುಹಿಸಿಕೊಟ್ಟಿರುವುದು ನಿಜವೇ;

ಆ) ಹಾಗಿದ್ದಲ್ಲಿ, ಇದು ಯಾವ ಹಂತದಲ್ಲಿದೆ;

ಇ) ಈ ಕಾಮಗಾರಿಯ ಕೆಲಸ ಎಂದಿನಿಂದ ಪ್ರಾರಂಭವಾಗುತ್ತದೆ (ಪೂರ್ಣ ವಿವರ ಒದಗಿಸುವುದು)?

ಶ್ರೀ ಜಬ್ಬಾರ್ ಖಾನ್ ಹೊನ್ನಳ್ಳಿ (ಅಲ್ಪಸಂಖ್ಯಾತರ ಕಲ್ಯಾಣ ಮತ್ತು ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು) :

ಅ) ಮಂಡ್ಯ ನಗರದಲ್ಲಿ ಜಿಲ್ಲಾ ಕ್ರೀಡಾಂಗಣವಿದ್ದು ಇದನ್ನು ನವೀಕರಿಸಿ ಎಲ್ಲಾ ಸವಲತ್ತುಗಳನ್ನೊಳಗೊಂಡ ಕ್ರೀಡಾಂಗಣವನ್ನಾಗಿ ಮಾರ್ಪಡಿಸುವ ಪ್ರಸ್ತಾವನೆ ಇರುವುದಿಲ್ಲ. ಆದರೇ, ಈ ಕೆಳಕಂಡ ಕಾಮಗಾರಿಗಳ ಪ್ರಸ್ತಾವನೆ ಇರುತ್ತದೆ.

1. ಪ್ರೇಕ್ಷಕರ ಗ್ಯಾಲರಿಯ ಬಂಡ್ ದುರಸ್ತಿ ಹಾಗೂ ಮೇಲ್ಛಾವಣಿ ನಿರ್ಮಾಣ.
2. ಜಿಲ್ಲಾ ಕ್ರೀಡಾಂಗಣದ ಆವರಣದಲ್ಲಿರುವ ವ್ಯಾಯಾಮಶಾಲೆಯ ಕಟ್ಟಡದ ಕಿಟಕಿ, ಬಾಗಿಲುಗಳ ದುರಸ್ತಿ.

ಈ ಮೇಲಿನ ಕೆಲಸಗಳಿಗೆ ಲೋಕೋಪಯೋಗಿ ಇಲಾಖೆಯಿಂದ ಒಟ್ಟು ಅಂದಾಜು ವೆಚ್ಚದ ಪಟ್ಟಿ ಹಾಗೂ ನೀಲಿ ನಕ್ಷೆ ಬರಬೇಕಾಗಿದೆ.

ಆ) ನೀಲಿ ನಕ್ಷೆ ಹಾಗೂ ಅಂದಾಜು ಪಟ್ಟಿ ಲೋಕೋಪಯೋಗಿ ಇಲಾಖೆಯಿಂದ ಸ್ವೀಕರಿಸುವ ಹಂತದಲ್ಲಿದೆ.

ಇ) ಲೋಕೋಪಯೋಗಿ ಇಲಾಖೆಯಿಂದ ನೀಲಿ ನಕ್ಷೆ ಮತ್ತು ಅಂದಾಜು ಪಟ್ಟಿಯನ್ನು ಜಿಲ್ಲಾ ಕ್ರೀಡಾಂಗಣ ಸಮಿತಿಯು ಸ್ವೀಕರಿಸಿ ಕಾಮಗಾರಿಯನ್ನು ಪ್ರಾರಂಭಿಸಲು ತೀರ್ಮಾನ ಕೈಗೊಂಡು ಆಡಳಿತಾತ್ಮಕ ಮಂಜೂರಾತಿ ದೊರಕಿದ ನಂತರ ಕಾಮಗಾರಿ ಪ್ರಾರಂಭಿಸಲಾಗುವುದು.

859(1251) ಶ್ರೀ ಶ್ರೀನಿವಾಸ್ ಎಂ. (ಮಂಡ್ಯ): ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು-ಮೈಸೂರು ಚತುಷ್ಪಥ ರಸ್ತೆಯ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಯಿತು;

ಆ) ಈ ಕಾಮಗಾರಿಯನ್ನು ಪೂರೈಸಲು ಸರ್ಕಾರ ಕಾಲಮಿತಿಯನ್ನೇನಾದರೂ ವಿಧಿಸಿದೆಯೇ;

ಇ) ಹಾಗಿದ್ದಲ್ಲಿ, ಯಾವಾಗ ಪೂರೈಸಲಾಗುವುದು ಹಾಗೂ ಇದುವರೆಗಿಗೂ ಎಷ್ಟು ಕಿ.ಮೀ. ಕಾಮಗಾರಿಯನ್ನು ಪೂರಯಸಲಾಗಿದೆ. (ವಿವರಗಳನ್ನು ನೀಡುವುದು);

ಈ) ಮಂಡ್ಯ ನಗರದ ಹೃದಯ ಭಾಗದಲ್ಲಿ ಹಾದುಹೋಗುವ ಈ ರಸ್ತೆಗೆ ಹೊಸದಾಗಿ ಕಾಮಗಾರಿಯನ್ನು ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಉ) ಹಾಗಿದ್ದಲ್ಲಿ, ಯಾವಾಗ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು;

ಊ) ಈ ಕಾಮಗಾರಿಯನ್ನು ಪೂರೈಸಲು ಸರ್ಕಾರ ಕಾಲಮಿತಿಯನ್ನೇನಾದರೂ ವಿಧಿಸುವುದೇ;

ಋ) ಹಾಗಿದ್ದಲ್ಲಿ, ಯಾವಾಗ ಕಾಮಗಾರಿಯನ್ನು ಪೂರೈಸಲಾಗುವುದು;

ಎ) ಮಂಡ್ಯ ನಗರದ ಹೃದಯ ಭಾಗದಲ್ಲಿ ಹಾದು ಹೋಗುವ ರಸ್ತೆಯ ಅಕ್ಕಪಕ್ಕದಲ್ಲಿರುವ ಕಟ್ಟಡಗಳನ್ನು ತೆರವುಗೊಳಿಸಲಾಗುವುದೆ;

ಏ) ಹಾಗಿದ್ದಲ್ಲಿ ಅವರುಗಳಿಗೆ ಸರ್ಕಾರ ಪರಿಹಾರ ನೀಡುವುದೆ (ವಿವರಗಳನ್ನು ನೀಡುವುದು)?

ಶ್ರೀ ಹೆಚ್. ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಬೆಂಗಳೂರು-ಮೈಸೂರು ಚತುಷ್ಪಥ ರಸ್ತೆಯ ಬೆಂಗಳೂರಿನಿಂದ-ಮದ್ದೂರುವರೆಗಿನ ಪ್ಯಾಕೇಜ್‌ನ ಕಾಮಗಾರಿಗಳನ್ನು 22-4-2004 ರಂದು ಮತ್ತು ಮದ್ದೂರಿನಿಂದ ಮೈಸೂರುವರೆಗಿನ ಪ್ಯಾಕೇಜ್‌ನ ಕಾಮಗಾರಿಗಳನ್ನು 6-5-2004 ರಂದು ಪ್ರಾರಂಭಿಸಲಾಗಿದೆ.

ಆ) ಈ ಕಾಮಗಾರಿಗಳನ್ನು ಪೂರೈಸಲು ಪ್ರತಿ ಪ್ಯಾಕೇಜ್‌ಗೆ ಪ್ರಾರಂಭವಾದ ದಿನದಿಂದ 24 ತಿಂಗಳುಗಳ ಕಾಲ ಮಿತಿಯನ್ನು ವಿಧಿಸಲಾಗಿದೆ.

ಇ) ಬೆಂಗಳೂರಿನಿಂದ ಮದ್ದೂರುವರೆಗಿನ ಪ್ಯಾಕೇಜ್‌ನ ಕಾಮಗಾರಿಗಳನ್ನು 21-4-2006ರ ಒಳಗಾಗಿ ಮತ್ತು ಮದ್ದೂರಿನಿಂದ-ಮೈಸೂರುವರೆಗಿನ ಪ್ಯಾಕೇಜ್‌ನ ಕಾಮಗಾರಿಗಳನ್ನು 5-5-2006ರ ಒಳಗಾಗಿ ಪೂರೈಸಲಾಗುವುದು. ಇಲ್ಲಿಯವರೆಗೆ ವಿವಿಧ ಹಂತಗಳ ಕಾಮಗಾರಿಗಳ ವಿವರ ಕೆಳಗಿನಂತಿವೆ.

ಬೆಂಗಳೂರಿನಿಂದ ಮದ್ದೂರುವರೆಗಿನ ಪ್ಯಾಕೇಜ್

ಕಾಮಗಾರಿಗಳ ವಿವರ	ಒಟ್ಟು ಉದ್ದ ಕಿ.ಮೀ.ಗಳಲ್ಲಿ	ಇಲ್ಲಿಯವರೆಗಿನ ಪ್ರಗತಿ ಕಿ.ಮೀ.ಗಳಲ್ಲಿ	
		ಎಡಭಾಗ	ಬಲಭಾಗ
1) ರಸ್ತೆಯ ಅಗೆತ	62.50	32.00	26.00
2) ಸಬ್ ಗ್ರೇಡ್	62.60	25.00	19.00
3) ಜಿ.ಎಸ್.ಬಿ.	62.60	24.00	17.00
4) ಡಬ್ಲ್ಯೂ.ಎಂ.ಎಂ.	62.60	26.00	14.00
5) ಬಿ.ಎಂ.	62.60	15.00	6.00

ಮದ್ದೂರಿನಿಂದ ಮೈಸೂರುವರೆಗಿನ ಪ್ಯಾಕೇಜ್

1) ರಸ್ತೆಯ ಅಗೆತ	49.00	32.12	3.06
2) ಜಿ.ಎಸ್.ಬಿ.	49.00	28.22	1.56
3) ಡಬ್ಲ್ಯೂ.ಎಂ.ಎಂ.	49.00	22.56	1.55
4) ಬಿ.ಎಂ.	49.00	20.84	1.55
5) ಡಿ.ಬಿ.ಎಂ.	49.00	19.62	1.55

ಈ) ಮಂಡ್ಯ ನಗರದ ಹೃದಯ ಭಾಗದಲ್ಲಿ ಹಾದು ಹೋಗುವ ರಸ್ತೆಯ ಭಾಗವು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದಿಂದ ತೆಗೆದುಕೊಂಡ ಚತುಷ್ಪಥ ರಸ್ತೆಯ ಈಗಿನ ವ್ಯಾಪ್ತಿಯಲ್ಲಿ ಸೇರಿರುವುದಿಲ್ಲ.

ಉ) ಉದ್ಭವಿಸುವುದಿಲ್ಲ.

ಊ) ಉದ್ಭವಿಸುವುದಿಲ್ಲ.

ಋ) ಉದ್ಭವಿಸುವುದಿಲ್ಲ.

ಎ) ಉದ್ಭವಿಸುವುದಿಲ್ಲ.

ಏ) ಉದ್ಭವಿಸುವುದಿಲ್ಲ.

860(995) ಶ್ರೀ ಶ್ರೀರಾಮರೆಡ್ಡಿ ಜಿ. ವಿ. (ಬಾಗೇಪಲ್ಲಿ): ಮಾನ್ಯ ಪ್ರವಾಸೋದ್ಯಮ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಾಗೇಪಲ್ಲಿ ತಾಲ್ಲೂಕಿನ ಐತಿಹಾಸಿಕ ಸ್ಥಳ ಗುಮ್ಮನಾಯಕನಪಾಳ್ಯವನ್ನು ಪ್ರವಾಸಿ ಕೇಂದ್ರವನ್ನಾಗಿ ಅಭಿವೃದ್ಧಿಪಡಿಸುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ:

ಆ) ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ಏನು ಕ್ರಮ ಕೈಗೊಂಡಿದೆ?

ಶ್ರೀ ಡಿ. ಟಿ. ಜಯಕುಮಾರ್ (ಪ್ರವಾಸೋದ್ಯಮ ಸಚಿವರು) :

ಅ) ಗುಮ್ಮನಾಯಕನಪಾಳ್ಯವನ್ನು ಪ್ರವಾಸಿ ಕೇಂದ್ರವನ್ನಾಗಿ ಅಭಿವೃದ್ಧಿಪಡಿಸುವ ಪ್ರಸ್ತಾಪ ಸರ್ಕಾರದ ಮುಂದಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

862(997) ಶ್ರೀ ಶ್ರೀರಾಮರೆಡ್ಡಿ. ಜಿ.ವಿ. (ಬಾಗೇಪಲ್ಲಿ): ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಅಧಿಕೃತ ಸಾರಾಯಿ ಅಂಗಡಿಗಳಿಗಿಂತ ಅನಧಿಕೃತ ಸಾರಾಯಿ ಅಂಗಡಿಗಳು ಅಧಿಕವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಅನಧಿಕೃತ ಸಾರಾಯಿ ಅಂಗಡಿಗಳನ್ನು ನಿಯಂತ್ರಿಸಲು ಸರ್ಕಾರ ಏನು ಕ್ರಮ ಕೈಗೊಂಡಿದೆ?

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು) :

ಅ) ರಾಜ್ಯದಲ್ಲಿ ಅಧಿಕೃತ ಸಾರಾಯಿ ಅಂಗಡಿಗಳಿಗಿಂತ ಅನಧಿಕೃತ ಸಾರಾಯಿ ಅಂಗಡಿಗಳು ಅಧಿಕವಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. ಆದಾಗ್ಯೂ ಕೆಲವು ಕಡೆಗಳಲ್ಲಿ ಅನಧಿಕೃತ ಸಾರಾಯಿ ಅಂಗಡಿಗಳು ಇರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಅನಧಿಕೃತ ಸಾರಾಯಿ ಅಂಗಡಿಗಳು ಕಂಡುಬಂದ ಕಡೆಗಳಲ್ಲಿ ಮೊಕದ್ದಮೆಗಳನ್ನು ದಾಖಲಿಸಿ ಅವುಗಳನ್ನು ಮುಚ್ಚಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಅವಶ್ಯಕತೆ ಕಂಡುಬಂದ ಕಡೆಗಳಲ್ಲಿ ಗುತ್ತಿಗೆದಾರರಿಂದ ಸನ್ನದು ಫೀ ಪಾವತಿಯಾದ ನಂತರ ಅವುಗಳನ್ನು ಜಿಲ್ಲಾಧಿಕಾರಿಗಳ ಮುಖಾಂತರ ಸಕ್ರಮಗೊಳಿಸಲಾಗುತ್ತಿದೆ.

864(196) ಶ್ರೀ ಸುನೀಲ್ ಕುಮಾರ್ ವಿ. (ಕಾರ್ಕಳ): ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮೈಸೂರು ಜಿಲ್ಲೆಯ ರಾಜೀವ್ ಗಾಂಧಿ ರಾಷ್ಟ್ರೀಯ ಉದ್ಯಾನವನದ ಸ್ಥಳದಲ್ಲಿ ಖಾಸಗಿ ಕಂಪನಿಗೆ ಜಂಗಲ್ ರೆಸಾರ್ಟ್ ಪ್ರಾರಂಭಿಸಲು ಸರ್ಕಾರ ಅನುಮತಿ ನಿಡಿದೆಯೇ;

ಆ) ಯಾವ ಆಧಾರದ ಮೇಲೆ ಈ ಸ್ಥಳ ನೀಡಲಾಗಿದೆ; ಎಷ್ಟು ವರ್ಷದ ಅವಧಿಗೆ ಅನುಮತಿಯನ್ನು ನೀಡಲಾಗಿದೆ; ಇದಕ್ಕಾಗಿ ಅನುಸರಿಸಿದ ಮಾನದಂಡಗಳೇನು;

ಇ) ಇದರಿಂದ ಸರ್ಕಾರಕ್ಕೆ ಬರುವ ವಾರ್ಷಿಕ ಆದಾಯ ಎಷ್ಟು; (ವಿವರ ನೀಡುವುದು);

ಈ) ಇದೇ ಮಾದರಿಯಲ್ಲಿ ಬೇರೆ ಖಾಸಗಿ ಕಂಪನಿಗಳಿಗೂ ರೇಸಾರ್ಟ್ ತೆರೆಯಲು ಸರ್ಕಾರ ಅವಕಾಶ ಕಲ್ಪಿಸಿಕೊಡುವುದೇ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :

ಅ) ಮೈಸೂರು ಜಿಲ್ಲೆ ರಾಜೀವ್ ಗಾಂಧಿ ರಾಷ್ಟ್ರೀಯ ಉದ್ಯಾನವನದೊಳಗೆ ಯಾವುದೇ ಖಾಸಗಿ ಕಂಪನಿಗಳಿಗೆ ರೆಸಾರ್ಟ್ ಪ್ರಾರಂಭಿಸಲು ಸರ್ಕಾರ ಅನುಮತಿ ನೀಡಿರುವುದಿಲ್ಲ. ರಾಜೀವ್ ಗಾಂಧಿ ರಾಷ್ಟ್ರೀಯ ಉದ್ಯಾನವನದ ಹೊರ ವಲಯದಲ್ಲಿ ಈ ಕೆಳಕಂಡ ಸಂಸ್ಥೆಗಳು ರೆಸಾರ್ಟ್ ನಡೆಸುತ್ತಿದ್ದಾರೆ. ಈ ರೆಸಾರ್ಟ್‌ಗಳನ್ನು ಪ್ರಾರಂಭಿಸಲು ಅರಣ್ಯ ಇಲಾಖಾವತಿಯಿಂದ ಯಾವುದೇ ಪೂರ್ವಾನುಮತಿ ನೀಡಿರುವುದಿಲ್ಲ.

1. ಮೆ: ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್ಸ್ ಲಿ., ಬೆಂಗಳೂರು
2. ಮೆ: ಬುಶ್‌ಬೆಟ್ಟ, ಬೆಂಗಳೂರು.
3. ಮೆ: ಜಂಗಲ್ ಇನ್, ಹುಣಸೂರು
4. ಮೆ: ಕಬಿನಿ ಪ್ಲಾನ್‌ಟೇಶನ್ ರೆಸಾರ್ಟ್, ಮೈಸೂರು
5. ಮೆ: ರಾಮ್ ವಾಟರ್ ವುಡ್ಸ್, ಮೈಸೂರು

ಆದರೆ ಈ ರೆಸಾರ್ಟ್‌ಗಳಿಗೆ ಬರುವ ಪ್ರವಾಸಿಗರನ್ನು ರಾಜೀವ್ ಗಾಂಧಿ ರಾಷ್ಟ್ರೀಯ ಉದ್ಯಾನವನದೊಳಗೆ ಅವರ (ಖಾಸಗಿ) ವಾಹನಗಳಲ್ಲಿ ಕೊಂಡೊಯ್ಯಲು ವನ್ಯಜೀವಿ ಸಂರಕ್ಷಣಾ ಕಾಯಿದೆ 1972 (ತಿದ್ದುಪಡಿ 1993) ರ ಸೆಕ್ಷನ್ 28 ಮತ್ತು 33 ರನ್ವಯ ಅನುಮತಿ ನೀಡಲಾಗಿದೆ.

ಆ) ಅನ್ವಯಿಸುವುದಿಲ್ಲ.

ಇ) ಸದರಿ ಖಾಸಗಿ ಸಂಸ್ಥೆಗಳೊಂದಿಗೆ ಮಾಡಿಕೊಂಡಿರುವ ಒಪ್ಪಂದದ ಪ್ರಕಾರ ಸರ್ಕಾರಕ್ಕೆ ಸರಾಸರಿ ರೂ. 15 ಲಕ್ಷ ವಾರ್ಷಿಕ ಆದಾಯವಿರುತ್ತದೆ.

ಈ) ಅನ್ವಯಿಸುವುದಿಲ್ಲ. ಅರಣ್ಯ ಮತ್ತು ವನ್ಯಜೀವಿ ಪ್ರದೇಶಗಳಲ್ಲಿ ಪಾಲಿಸಬೇಕಾಗಿರುವ ನೈಸರ್ಗಿಕ ಪ್ರವಾಸೋದ್ಯಮ ನೀತಿ ಕುರಿತಂತೆ ಸರ್ಕಾರದ ಆದೇಶ ಸಂ: ಅಪಜೀ 60 ಎಫ್‌ಎಪಿ 2003, ದಿನಾಂಕ: 28-08-2004ರ ಪ್ರಕಾರ ಈ ಕೆಳಕಂಡವರಿಗೆ ವನ್ಯಜೀವಿ ಪ್ರದೇಶಗಳಲ್ಲಿ ಪ್ರವಾಸೋದ್ಯಮ ನಡೆಸಲು ಅವಕಾಶ ಕಲ್ಪಿಸಲಾಗಿದೆ. ಮೆ: ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್ಸ್ ಲಿ.,

1. ಯುತ್ ಹಾಸ್ಟೆಲ್ಸ್ ಅಸೋಸಿಯೇಷನ್ ಆಫ್ ಇಂಡಿಯಾ ನಂತಹ ಸಾಹಸ ಗುಂಪುಗಳು.
2. ಇಲಾಖಾ ಸೌಕರ್ಯಗಳು ಲಭ್ಯವಿದ್ದಲ್ಲಿ ನೇರ ಪ್ರವೇಶಕ್ಕೆ ಅವಕಾಶ ಕಲ್ಪಿಸಿದೆ.

866 (1459) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹಿಂದುಳಿದ ಗಡಿ ಪ್ರದೇಶ ಚಾಮರಾಜನಗರದ ಸುತ್ತಮುತ್ತಲಿನ ರಸ್ತೆಗಳು ಹದಗೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ ಯಾವ ಯಾವ ಎಷ್ಟು ಉದ್ದದ ರಸ್ತೆಗಳು ಹದಗೆಟ್ಟಿರುವುದು ಗಮನಕ್ಕೆ ಬಂದಿದೆ;

ಇ) ಸದರಿ ರಸ್ತೆಗಳ ದುರಸ್ತಿಗೆ ಸರ್ಕಾರ ಕ್ರಮಗಳನ್ನು ಕೈಗೊಂಡಿದೆಯೇ;

ಈ) ಕೈಗೊಂಡಿದ್ದಲ್ಲಿ ಎಷ್ಟು ಅಂದಾಜು ವೆಚ್ಚದಲ್ಲಿ ಎಷ್ಟು ಉದ್ದದ ಯಾವ ರಸ್ತೆಗಳನ್ನು ದುರಸ್ತಿಪಡಿಸಲು ಯೋಚಿಸಲಾಗಿದೆ?

ಶ್ರೀ ಹೆಚ್. ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂದನ ಸಚಿವರು) :

ಅ) ಬಂದಿರುತ್ತದೆ.

ಆ) ರಸ್ತೆಗಳ ವಿವರಗಳನ್ನು ಅನುಬಂಧ-ಅ ರಲ್ಲಿ ನೀಡಿದೆ.

ಇ) ವಿವರಗಳನ್ನು ಅನುಬಂಧ ಆ ನಲ್ಲಿ ನೀಡಿದೆ.

ಈ) ವಿವರಗಳನ್ನು ಅನುಬಂಧ ಆ ನಲ್ಲಿ ನೀಡಿದೆ.

ಶ್ರೀ ವಾಟಾಳ್ ನಾಗರಾಜ್, ವಿಧಾನ ಸಭಾ ಸದಸ್ಯರು ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1459ಕ್ಕೆ ಉತ್ತರಗಳು:-

ಅನುಬಂಧ - ಅ

ಸದರಿ ರಸ್ತೆಗಳ ದುರಸ್ತಿಗಾಗಿ ಹಾಗೂ ಅಭಿವೃದ್ಧಿಗಾಗಿ ಕೆಳಕಂಡಂತೆ ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ.

1) ಕೊಳ್ಳೇಗಾಲ-ಹನೂರು ಘಾಟ್ ರಸ್ತೆ: ಈ ರಸ್ತೆಗೆ ಸಂಬಂಧಿಸಿದಂತೆ 3054 ಶೀರ್ಷಿಕೆಯಲ್ಲಿ 1ನೇ ಹಂತದಲ್ಲಿ ಗುಂಡಿಗಳನ್ನು ಮುಚ್ಚಲಾಗಿರುತ್ತದೆ. ಹಾಗೂ ರೂ.13.00 ಲಕ್ಷಗಳ ಅಂದಾಜಿನಲ್ಲಿ ಮೋರಿಗಳ ಕಾಮಗಾರಿಗಳನ್ನು ಕೈಗೊಳ್ಳಲಾಗಿರುತ್ತದೆ. ಹಾಗೂ 60.00 ಲಕ್ಷಗಳ ಅಂದಾಜು ಮೊತ್ತಕ್ಕೆ ರೇಖಾ ಅಂದಾಜನ್ನು ಸರಪಳಿ 83.40 ಕಿಮೀ ಇಂದ 110.40 ಕಿಮೀವರೆಗೆ ಗಡಿನಾಡು ಅಭಿವೃದ್ಧಿ ಕಾರ್ಯಕ್ರಮದಡಿ ರಸ್ತೆಗಳನ್ನು ಅಭಿವೃದ್ಧಿಪಡಿಸುವ ಯೋಜನೆಯು ಸರ್ಕಾರದಲ್ಲೆ ಇದ್ದು, ಈ ಬಗ್ಗೆ ಸರ್ಕಾರದ ಮಟ್ಟದಲ್ಲಿ ನಿರ್ಧರಿಸಬೇಕಾಗಿರುತ್ತದೆ.

2) ಕುಂಬಾರಹುಂಡಿ-ತಾಳವಾಡಿ ರಸ್ತೆ ಅಭಿವೃದ್ಧಿ: ಈ ರಸ್ತೆಯಲ್ಲಿ ಗುಂಡಿಗಳನ್ನು 1 ನೇ ಹಂತದಲ್ಲಿ ಮುಚ್ಚಲಾಗಿರುತ್ತದೆ. ಹಾಗೂ ರೂ. 12.00 ಲಕ್ಷಕ್ಕೆ (ಸ.3.20 ರಿಂದ 4.30 ಕಿಮೀವರೆಗೆ) ಗಡಿನಾಡು ಅಭಿವೃದ್ಧಿ ಕಾರ್ಯಕ್ರಮದಡಿ ಗಡಿನಾಡು ರಸ್ತೆಗಳನ್ನು ಅಭಿವೃದ್ಧಿಪಡಿಸುವ ಯೋಜನೆಯು ಸರ್ಕಾರದಲ್ಲಿ ಇದ್ದು ಈ ಬಗ್ಗೆ ಸರ್ಕಾರದ ಮಟ್ಟದಲ್ಲಿ ನಿರ್ಧರಿಸಬೇಕಾಗಿರುತ್ತದೆ.

3) ಪುಣಜೂರು-ಬೇಡಗುಳಿ ರಸ್ತೆ: ಈ ರಸ್ತೆಗೆ ಸಂಬಂಧಿಸಿದಂತೆ ಗುಂಡಿ ಮುಚ್ಚುವ ಕಾಮಗಾರಿಗಳನ್ನು 1ನೇ ಹಂತದಲ್ಲಿ ಪೂರ್ಣಗೊಳಿಸಲಾಗಿರುತ್ತದೆ. ರೂ.40.00 ಲಕ್ಷಗಳ ಅಂದಾಜನ್ನು ತಯಾರಿಸಿ ಗಡಿನಾಡು ಅಭಿವೃದ್ಧಿ ಕಾರ್ಯಕ್ರಮದಡಿಯಲ್ಲಿ ಈ ರಸ್ತೆಯನ್ನು ಅಭಿವೃದ್ಧಿಪಡಿಸುವ ಯೋಜನೆಯು ಸರ್ಕಾರದಲ್ಲಿದ್ದು ಈ ಬಗ್ಗೆ ಸರ್ಕಾರದ ಮಟ್ಟದಲ್ಲಿ ನಿರ್ಧರಿಸಬೇಕಾಗಿರುತ್ತದೆ.

4) ವೆಂಕಟಯ್ಯ ಛತ್ರ ಕೊಡಿ ಉಗನೆ ಬಿಸಲವಾಡಿ ರಸ್ತೆ: ಈ ರಸ್ತೆಗೆ ಸಂಬಂಧಿಸಿದಂತೆ ಲೆಕ್ಕ ಶೀರ್ಷಿಕೆ 3054 ಯೋಜನೆ ಅಡಿಯಲ್ಲಿ 1.50 ಲಕ್ಷ ಮೊತ್ತದಲ್ಲಿ ಗುಂಡಿ ಮುಚ್ಚುವ ಕಾಮಗಾರಿಯನ್ನು 1ನೇ ಹಂತದಲ್ಲಿ ಪೂರ್ಣಗೊಳಿಸಲಾಗಿರುತ್ತದೆ ಹಾಗೂ ರೂ. 45.00 ಲಕ್ಷಗಳ ಅಂದಾಜು ಮೊತ್ತಕ್ಕೆ ಲೆಕ್ಕ ಶೀರ್ಷಿಕೆ 3054 ಯೋಜನೆಯಡಿಲ್ಲಿ ಟೆಂಡರ್ ಕರೆಯಲಾಗಿದ್ದು ಕಾಮಗಾರಿಯನ್ನು ಪ್ರಾರಂಭಿಸಬೇಕಾಗಿರುತ್ತದೆ. ಹಾಗೂ ರೂ.40.00 ಲಕ್ಷಗಳಿಗೆ ರೇಖಾ ಅಂದಾಜನ್ನು ತಯಾರಿಸಿ (ಸರಪಳಿ 0.00 ರಿಂದ 8.00 ಕಿಮೀ) ಗಡಿನಾಡು ಅಭಿವೃದ್ಧಿ ಕಾರ್ಯಕ್ರಮದಡಿಯಲ್ಲಿ ಈ ರಸ್ತೆಯನ್ನು ಅಭಿವೃದ್ಧಿಪಡಿಸುವ ಯೋಜನೆಯು ಸರ್ಕಾರದಲ್ಲಿದ್ದು, ಈ ಬಗ್ಗೆ ಸರ್ಕಾರದ ಮಟ್ಟದಲ್ಲಿ ನಿರ್ಧರಿಸಬೇಕಾಗಿರುತ್ತದೆ.

5) ಬಂಡೀಪುರ-ಅಂಕಹಳ್ಳಿ ರಸ್ತೆ: ಈ ರಸ್ತೆಗೆ ಸಂಬಂಧಿಸಿದಂತೆ ರೂ. 80.00 ಲಕ್ಷಗಳಿಗೆ ರೇಖಾ ಅಂದಾಜನ್ನು ತಯಾರಿಸಿ (ಸ.8.00 ರಿಂದ 13.50 ಕಿಮೀವರೆಗೆ) ಗಡಿನಾಡು ಅಭಿವೃದ್ಧಿ ಕಾರ್ಯಕ್ರಮದಡಿ ರಸ್ತೆಯನ್ನು ಅಭಿವೃದ್ಧಿಪಡಿಸುವ ಯೋಜನೆಯು ಸರ್ಕಾರದಲ್ಲಿದ್ದು, ಈ ಬಗ್ಗೆ ಸರ್ಕಾರದ ಮಟ್ಟದಲ್ಲಿ ನಿರ್ಧರಿಸಬೇಕಾಗಿರುತ್ತದೆ.

6) ಪಾಲಾರ್ ಹೊಗೇನಕಲ್ ರಸ್ತೆ: ಈ ರಸ್ತೆಗೆ ಸಂಬಂಧಿಸಿದಂತೆ ಕಾಮಗಾರಿಯು ನಬಾರ್ಡ್ 10 ರಲ್ಲಿ ಟೆಂಡರ್ ಕರೆಯಲಾಗಿದ್ದು ಗುತ್ತಿಗೆದಾರರನ್ನು ನಿಗದಿಪಡಿಸುವ ಹಂತದಲ್ಲಿರುತ್ತದೆ. ಹಾಗೂ ಗಡಿನಾಡು ಅಭಿವೃದ್ಧಿ ಕಾರ್ಯಕ್ರಮದಡಿ ರೂ. 25.00 ಲಕ್ಷಗಳ ಅಂದಾಜನ್ನು ತಯಾರಿಸಿ ಈ ರಸ್ತೆಯನ್ನು ಅಭಿವೃದ್ಧಿಪಡಿಸುವ ಯೋಜನೆಯು ಸರ್ಕಾರದಲ್ಲಿದ್ದು, ಈ ಬಗೆಗೆ ಸರ್ಕಾರದ ಮಟ್ಟದಲ್ಲಿ ನಿರ್ಧರಿಸಬೇಕಾಗಿರುತ್ತದೆ.

7) ಕೊಳ್ಳೇಗಾಲ–ಜೆಲ್ಲಿ ಪಾಳ್ಯಂ ರಸ್ತೆ: ಈ ರಸ್ತೆಗೆ ಸಂಬಂಧಿಸಿದಂತೆ 3054 ಶೀರ್ಷಿಕೆಯಡಿ ಮೊದಲನೇ ಹಂತದಲ್ಲಿ ಗುಂಡಿಗಳನ್ನು ಮುಚ್ಚಲಾಗಿರುತ್ತದೆ. ಹಾಗೂ ರೂ. 50.00 ಲಕ್ಷಗಳಿಗೆ ರೇಖಾ ಅಂದಾಜನ್ನು ತಯಾರಿಸಿ ಗಡಿನಾಡು ಅಭಿವೃದ್ಧಿ ಕಾರ್ಯಕ್ರಮದಡಿ ರಸ್ತೆಯನ್ನು ಅಭಿವೃದ್ಧಿಪಡಿಸುವ ಯೋಜನೆಯು ಸರ್ಕಾರದಲ್ಲಿದ್ದು, ಈ ಬಗ್ಗೆ ಸರ್ಕಾರದ ಮಟ್ಟದಲ್ಲಿ ನಿರ್ಧರಿಸಬೇಕಾಗಿರುತ್ತದೆ.

ಶ್ರೀ ವಾಟಾಳ್ ನಾಗರಾಜ್, ವಿಧಾನ ಸಭಾ ಸದಸ್ಯರು ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1459ಕ್ಕೆ ಉತ್ತರಗಳು:–

ಅನುಬಂಧ 'ಆ'

ಕ್ರಮ ಸಂಖ್ಯೆ	ರಸ್ತೆಯ ವಿವರಗಳು	ರಸ್ತೆಯ ಉದ್ದ ಕಿ.ಮೀ.ಗಳಲ್ಲಿ
1)	ಕೊಳ್ಳೇಗಾಲ ಹನೂರು ಘಾಟ್ ರಸ್ತೆ	10.00
2)	ಕುಂಬಾರ ಹುಂಡಿ–ತಾಳವಾಡಿ ರಸ್ತೆ	1.80
3)	ಪುಣಜೂರು–ಬೇಡಗುಳಿ ರಸ್ತೆ	6.00
4)	ವೆಂಕಟಯ್ಯನ ಛತ್ರ ಕೋಡಿ ಉಗನೆ ಬಸಂವಾಡಿ ರಸ್ತೆ	8.00
5)	ಬಂಡಿಪುರ–ಅಂಕಹಳ್ಳಿ ರಸ್ತೆ	10.00
6)	ಟಾರ್ ಹೋಗೇನಕಲ್ ರಸ್ತೆ	10.00
7)	ಕೊಳ್ಳೇಗಾಲ ಜೆಲ್ಲಿಪಾಳ್ಯಂ ರಸ್ತೆ	10.00
	ಒಟ್ಟು	**55.80**

867(1460) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಕಾನೂನು ಮತ್ತು ಸಂಸಧೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಎಷ್ಟು ಕಾರ್ಮಿಕ ನ್ಯಾಯಾಲಯಗಳು ಕಾರ್ಯ ನಿರ್ವಹಿಸುತ್ತಿದೆ:

ಆ) ಸದರಿ ನ್ಯಾಯಾಲಯಗಳಲ್ಲಿ ಇತ್ಯರ್ಥವಾಗದೇ ಬಾಕಿ ಉಳಿದಿರುವ ಮೊಕದ್ದಮೆಗಳ ಸಂಖ್ಯೆ ಎಷ್ಟು:

ಇ) ಸದರಿ ನ್ಯಾಯಾಲಯಗಳಲ್ಲಿ ಖಾಲಿ ಇರುವ ನ್ಯಾಯಾಧೀಶರ ಹುದ್ದೆಗಳ ಸಂಖ್ಯೆ ಎಷ್ಟು:

ಈ) ಖಾಲಿ ಹುದ್ದೆಗಳ ಭರ್ತಿಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಶ್ರೀ ಹೆಚ್. ಕೆ. ಪಾಟೀಲ್ (ಕಾನೂನು ಮತ್ತು ಸಂಸಧೀಯ ವ್ಯವಹಾರಗಳ ಸಚಿವರು) :

ಅ) ರಾಜ್ಯದಲ್ಲಿ 12 ಕಾರ್ಮಿಕ ನ್ಯಾಯಾಲಯಗಳು ಕಾರ್ಯ ನಿರ್ವಹಿಸುತ್ತಿವೆ.

ಆ) ಸದರಿ ನ್ಯಾಯಾಲಯಗಳಲ್ಲಿ ದಿನಾಂಕ: 31–12–2004 ಅಂತ್ಯಕ್ಕೆ ಇತ್ಯರ್ಥವಾಗದೇ ಬಾಕಿ ಉಳಿದಿರುವ ಮೊಕದ್ದಮೆಗಳ ಸಂಖ್ಯೆ: 11782.

ಇ) ಸದರಿ ನ್ಯಾಯಾಲಯಗಳಲ್ಲಿ 5 ಅಧ್ಯಕ್ಷಾಧಿಕಾರಿಗಳ ಹುದ್ದೆಗಳು ಖಾಲಿ ಇವೆ.

ಈ) ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಕರ್ನಾಟಕ ಉಚ್ಚ ನ್ಯಾಯಾಲಯದ ರಿಜಿಸ್ಟ್ರಾರ್ ಜನರಲ್‌ರವರನ್ನು ಕೋರಲಾಗಿದೆ.

868(1461) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಚಾಮರಾಜನಗರವನ್ನು ಎಂದಿನಿಂದ ಹೊಸ ಜಿಲ್ಲೆಯೆಂದು ಘೋಷಿಸಲಾಗಿದೆ.

ಆ) ಹೊಸ ಜಿಲ್ಲೆಯ ನಂತರ ಯಾವ ಅಭಿವೃದ್ಧಿ ಕಾರ್ಯಗಳನ್ನು ಸರ್ಕಾರ ಘೋಷಿಸಿದೆ.

ಇ) ಸದರಿ ಅಭಿವೃದ್ಧಿ ಕಾರ್ಯಗಳು ಈಗ ಯಾವಹಂತದಲ್ಲಿವೆ (ವಿವರಗಳನ್ನು ನೀಡುವುದು)?

ಶ್ರೀ ಎಂ. ಪಿ. ಪ್ರಕಾಶ್ (ಕಂದಾಯ ಸಚಿವರು) :

ಅ) 15–08–1997ರಿಂದ ಹೊಸ ಜಿಲ್ಲೆ ಎಂದು ಘೋಷಿಸಲಾಗಿದೆ.

ಆ) ಕಂದಾಯ ಇಲಾಖೆ ಕಛೇರಿ ಆಧುನೀಕರಣ, ಜಿಲ್ಲಾಧಿಕಾರಿ ಉಪ ವಿಭಾಗಾಧಿಕಾರಿ, ತಹಶೀಲ್ದಾರರುಗಳ ವಸತಿ ಗೃಹಗಳ ನಿರ್ಮಾಣಕ್ಕಾಗಿ ಸರ್ಕಾರವು ಮಂಜೂರಾತಿ ನೀಡಿರುತ್ತದೆ. ಜಿಲ್ಲಾ, ತಾಲ್ಲೂಕು ಹಾಗೂ ಹೋಬಳಿ ಮಟ್ಟದ ಅಧಿಕಾರಿಗಳ/ಸಿಬ್ಬಂದಿಗಳ ವಸತಿ ಗೃಹಗಳನ್ನು ನಿರ್ಮಾಣದ ಬಗ್ಗೆ ಮಂಜೂರಾತಿ ನೀಡಲಾಗಿದೆ. ಇದಲ್ಲದೆ ಜಿಲ್ಲಾ ಕೇಂದ್ರದಲ್ಲಿ 16.60 ಕೋಟಿ ಅಂದಾಜು ವೆಚ್ಚದಲ್ಲಿ ಜಿಲ್ಲಾ ಸಂಕೀರ್ಣ ಕಟ್ಟಡ ನಿರ್ಮಿಸಲಾಗುತ್ತಿದೆ.

ಇ) ಅ) ಜಿಲ್ಲಾಧಿಕಾರಿಗಳ ವಸತಿ ಗೃಹವನ್ನು ಪೂರ್ಣಗೊಳಿಸಲಾಗಿದೆ.

ಆ) ಕಛೇರಿ ಆಧುನೀಕರಣದಲ್ಲಿ ನೀಡಿರುವ ಅನುದಾನದಲ್ಲಿ ಆಧುನೀಕರಣಕ್ಕೆ ಅವಶ್ಯವಾದ ಯಂತ್ರೋಪಕರಣ ಪೀಠೋಪಕರಣ ಮತ್ತು ಕಾನೂನು ಪುಸ್ತಕಗಳನ್ನು ಖರೀದಿಸಲಾಗಿದೆ.

* ಜಿಲ್ಲೆಯ ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ತಹಶೀಲ್ದಾರರು ಮತ್ತು ಉಪ ವಿಭಾಗಾಧಿಕಾರಿಗಳ ಹಾಗೂ ಸಿಬ್ಬಂದಿ ವಸತಿಗೃಹಗಳಿಗಾಗಿ ರೂ. 80.00 ವೆಚ್ಚದಲ್ಲಿ ನಿರ್ಮಿಸುತ್ತಿದ್ದು, ಕಾಮಗಾರಿಗಳನ್ನು ಕರ್ನಾಟಕ ಭೂ ಸೇನಾ ನಿಗಮಕ್ಕೆ ವಹಿಸಿಕೊಡಲಾಗಿದೆ. ನಿರ್ಮಾಣವು ಪೂರ್ಣಗೊಳ್ಳುವ ಹಂತದಲ್ಲಿದೆ.
* ಸರ್ಕಾರವು ಜಿಲ್ಲೆಯ ಜಿಲ್ಲಾ ಕೇಂದ್ರ ತಾಲ್ಲೂಕು ಕೇಂದ್ರ ಹೋಬಳಿ ಕೇಂದ್ರಗಳಲ್ಲಿ ಅಧಿಕಾರಿ/ನೌಕರರಿಗೆ ವಸತಿ ಗೃಹಗಳ ನಿರ್ಮಾಣವನ್ನು ಸುಮಾರು 5.00 ಕೋಟಿ ವೆಚ್ಚದಲ್ಲಿ ನಿರ್ಮಿಸಲು ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ಸಂಸ್ಥೆಗೆ ವಹಿಸಿರುತ್ತದೆ.
* ಚಾಮರಾಜನಗರ ಜಿಲ್ಲಾ ಕೇಂದ್ರದಲ್ಲಿ ಜಿಲ್ಲಾ ಮಟ್ಟದ ಕಛೇರಿಗಳ ಜಿಲ್ಲಾ ಸಂಕೀರ್ಣ ನಿರ್ಮಾಣ ಕಾರ್ಯವನ್ನು ಅಂದಾಜು 16.70 ಕೋಟಿ ರೂ. ವೆಚ್ಚದಲ್ಲಿ ಕೈಗೆತ್ತಿಕೊಂಡು ನಿರ್ಮಾಣ ಕಾರ್ಯವನ್ನು ಕರ್ನಾಟಕ ಗೃಹ ಮಂಡಳಿಗೆ ವಹಿಸಿಕೊಡಲಾಗಿದೆ. ಕಾಮಗಾರಿಯು ಪೂರ್ಣಗೊಳ್ಳುವ ಹಂತದಲ್ಲಿರುತ್ತದೆ.

869(1463) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ಕುದುರೆ ಜೂಜಿನ ಮೈದಾನವನ್ನು ಬೇರೆ ಕಡೆಗೆ ಸ್ಥಳಾಂತರಿಸಲು ಸರ್ಕಾರ ಆಲೋಚಿಸಿದೆಯೇ?

ಆ) ಹಾಗಿದ್ದಲ್ಲಿ, ಸ್ಥಳಾಂತರಿಸುವ ಬಗ್ಗೆ ಸರ್ಕಾರ ಎಷ್ಟು ವರ್ಷಗಳಿಂದ ಯೋಚಿಸುತ್ತಿದೆ?

ಇ) ಪ್ರಸ್ತುತ, ಸ್ಥಳಾಂತರಿಸುವ ವಿಷಯ ಈಗ ಯಾವ ಹಂತದಲ್ಲಿದೆ?

ಈ) ಕುದುರೆ ಜೂಜಿನ ಮೈದಾನದಿಂದ ಸರ್ಕಾರಕ್ಕೆ ಬರುತ್ತಿರುವ ವರಮಾನವೆಷ್ಟು?

ಶ್ರೀ ಸಿದ್ದರಾಮಯ್ಯ (ಉಪಮುಖ್ಯಮಂತ್ರಿಗಳು) :

ಅ) ಹೌದು.

ಆ) 1992ರ ಪೂರ್ವದಿಂದಲೂ ಸರ್ಕಾರ ಈ ಬಗ್ಗೆ ಯೋಚಿಸುತ್ತಿದೆ

ಇ) ಹೊಸ ರೇಸ್ ಕೋರ್ಸ್ ನಿರ್ಮಿಸಲು ಯಲಹಂಕದ ಸಮೀಪ 292 ಎಕರೆಯಷ್ಟು ವಿಸ್ತೀರ್ಣವುಳ್ಳ ಪ್ರದೇಶವನ್ನು ಗುರುತಿಸಲಾಗಿದೆ.

ಈ) ಕುದುರೆ ಜೂಜಿನ ಮೈದಾನದಿಂದ ಬಾಡಿಗೆ ರೂಪದಲ್ಲಿ ಈ ವರ್ಷ ರೂ. 5.00 ಲಕ್ಷಗಳ ವರಮಾನ ಸರ್ಕಾರಕ್ಕೆ ಬಂದಿದೆ

ತೆರಿಗೆ ಸಂಗ್ರಹಣೆ ಈ ಕೆಳಗಿನಂತೆ ಇದೆ:

(ರೂ. ಲಕ್ಷಗಳಲ್ಲಿ)

ತೆರಿಗೆ	2003-04	2004-05 (ಡಿಸೆಂಬರ್ 2004 ರವರೆಗೆ)
ಬೆಟ್ಟಿಂಗ್ ಟ್ಯಾಕ್ಸ್	239.37	117.30
ಟೋಟಲೈಸೇಟರ್ ಟ್ಯಾಕ್ಸ್	924.00	951.15
ಮನರಂಜನಾ ತೆರಿಗೆ	33.88	58.18

870(1373) ಶ್ರೀ ವೆಂಕಟಮುನಿಯಪ್ಪ ಬಿ.ಪಿ. (ಬೇತಮಂಗಲ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೋಲಾರ ಜಿಲ್ಲೆಯಲ್ಲಿ 'ಬರಗಾಲ ಪೀಡಿತ ಪ್ರದೇಶ'ವೆಂದು ಘೋಷಿಸಲಾದ ತಾಲ್ಲೂಕುಗಳು ಎಷ್ಟು;

ಆ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಕೂಲಿ ಕಾರ್ಮಿಕರೇ ಹೆಚ್ಚಾಗಿರುವ ಬಂಗಾರಪೇಟೆ ತಾಲ್ಲೂಕನ್ನು 'ಬರಪೀಡಿತ ಪ್ರದೇಶ' ವೆಂದು ಘೋಷಿಸದಿರುವುದಕ್ಕೆ ಕಾರಣಗಳೇನು;

ಇ) ಬಂಗಾರಪೇಟೆ ತಾಲ್ಲೂಕನ್ನು 'ಬರಪೀಡಿತ ಪ್ರದೇಶ'ವೆಂದು ಎಂದು ಘೋಷಿಸಲಾಗುವುದು?

ಶ್ರೀ ಎಂ. ಪಿ. ಪ್ರಕಾಶ್ (ಕಂದಾಯ ಸಚಿವರು) :

ಅ) ಮೂರು ತಾಲ್ಲೂಕುಗಳು

1) ಬಾಗೇಪಲ್ಲಿ

2) ಚಿಕ್ಕಬಳ್ಳಾಪುರ

3) ಗೌರಿಬಿದನೂರು

ಆ) ಸರ್ಕಾರದ ಮುಂದೆ ಪ್ರಸ್ತಾವನೆ ಇಲ್ಲ.

ಇ) ಉದ್ಭವಿಸುವುದಿಲ್ಲ.

871(1374) ಶ್ರೀ ವೆಂಕಟಮುನಿಯಪ್ಪ ಬಿ.ಪಿ. (ಬೇತಮಂಗಲ): ಮಾನ್ಯ ಪ್ರವಾಸೋದ್ಯಮ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಂಗಾರಪೇಟೆ ತಾಲ್ಲೂಕಿನಲ್ಲಿರುವ ಸುಪ್ರಸಿದ್ಧ ಬಂಗಾರು ತಿರುಪತಿ ಹಾಗೂ ಕೋಟಿಲಿಂಗೇಶ್ವರ – ಕಮ್ಮಸಂದ್ರ ದೇವಸ್ಥಾನಗಳನ್ನು ಸಂದರ್ಶಿಸುವ ಪ್ರವಾಸಿಗರ ಸಂಖ್ಯೆ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಪ್ರವಾಸಿ ಕೇಂದ್ರಗಳನ್ನು ಅಭಿವೃದ್ಧಿಪಡಿಸಲು ಕೈಗೊಂಡಿರುವ ಕ್ರಮವೇನು;

ಇ) ಈ ಕ್ಷೇತ್ರಗಳನ್ನು ಪ್ರವಾಸೋದ್ಯಮ ಇಲಾಖೆ ಗುರುತಿಸಿದೆಯೇ;

ಈ) ಇಲ್ಲದಿದ್ದಲ್ಲಿ ಇದನ್ನು ಗುರುತಿಸುವಂತಹ ಯೋಜನೆಯನ್ನು ಹಮ್ಮಿಕೊಳ್ಳಲಾಗುವುದೇ?

ಶ್ರೀ ಡಿ. ಟಿ. ಜಯಕುಮಾರ್ (ಪ್ರವಾಸೋದ್ಯಮ ಸಚಿವರು) :

ಅ) ಹೌದು.

ಆ) ಕೋಟಿ ಲಿಂಗೇಶ್ವರ ದೇವಾಲಯದ ಬಳಿ ಡಾರ್ಮಿಟರಿ ಸೌಲಭ್ಯವನ್ನು ನಿರ್ಮಿಸಿ ದೇವಸ್ಥಾನದ ಆಡಳಿತಕ್ಕೆ ವಹಿಸಿಕೊಡಲಾಗಿದೆ.

ಇ) ಹೌದು

ಈ) ಉದ್ಭವಿಸುವುದಿಲ್ಲ.

872(1375) ಶ್ರೀ ವೆಂಕಟಮುನಿಯಪ್ಪ ಬಿ.ಪಿ.(ಬೇತಮಂಗಲ): ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೇತಮಂಗಲ ಕ್ಷೇತ್ರದ ರಸ್ತೆಗಳು ಬಹಳಷ್ಟು ಶಿಥಿಲಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಈ ರಸ್ತೆಗಳು ದುರಸ್ತಿಗೊಳಿಸಲು ಕೈಗೊಂಡಿರುವ ಕ್ರಮಗಳೇನು;

ಇ) ಇಲ್ಲದಿದ್ದಲ್ಲಿ, ಯಾವಾಗ ದುರಸ್ಥಿ ಮಾಡಲಾಗುವುದು?

ಶ್ರೀ ಹೆಚ್. ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಬಂದಿರುತ್ತದೆ.

ಆ) ಲಭ್ಯವಿರುವ ಅನುದಾನದಲ್ಲಿ ರಸ್ತೆಗಳ ದುರಸ್ಥಿ ಹಾಗೂ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ.

ಇ) ದುರಸ್ಥಿ ಕಾಮಗಾರಿಗಳನ್ನು ಪ್ರಾರಂಭಿಸಲಾಗಿದೆ.

873(1376) ಶ್ರೀ ವೆಂಕಟಮುನಿಯಪ್ಪ ಬಿ.ಪಿ. (ಬೇತಮಂಗಲ): ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಂಗಾರಪೇಟೆ ತಾಲ್ಲೂಕು ಕಾಮಸಮುದ್ರದಲ್ಲಿ 7–8 ವರ್ಷಗಳ ಹಿಂದೆ ಪ್ರಾರಂಭಿಸಲಾಗಿದ್ದ ವಿದ್ಯುತ್ ಉಪ ಕೇಂದ್ರದ ಕಾಮಗಾರಿ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಕಾಮಗಾರಿಯನ್ನು ಪೂರ್ಣಗೊಳಿಸದೇ ಇರಲು ಕಾರಣಗಳೇನು;

ಇ) ಈ ಕಾಮಗಾರಿ ಪೂರ್ಣಗೊಳಿಸಲು ನಿಗದಿಯಾಗಿದ್ದ ಮೊತ್ತವೆಷ್ಟು, ಈವರೆಗೂ ಖರ್ಚು ಮಾಡಲಾದ ಮೊತ್ತವೆಷ್ಟು (ವಿವರಗಳನ್ನು ಒದಗಿಸುವುದು);

ಈ) ಈ ವಿದ್ಯುತ್ ಉಪ-ಕೇಂದ್ರ ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಹೆಚ್. ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಕಳೆದ 3 ವರ್ಷಗಳಿಂದ ಈ ಕಾಮಗಾರಿ ಮಂದಗತಿಯಲ್ಲಿ ಸಾಗಿರುವ ವಿಷಯ ಗಮನಕ್ಕೆ ಬಂದಿದೆ.

ಆ) ಈ ಸದರಿ ಸಬ್-ಸ್ಟೇಷನ್ನಿನ ನಿರ್ಮಾಣ ಕಾಮಗಾರಿಯನ್ನು ಸಂಪೂರ್ಣ ಗುತ್ತಿಗೆ ಆಧಾರದ ಮೇಲೆ ಮೆ: ಜ್ಯೋತಿ ಸ್ಟ್ರಕ್ಚರ್ಸ್, ಮುಂಬಯಿರವರಿಗೆ ದಿನಾಂಕ 20-4-2001ರಂದು ಕಾರ್ಯಾದೇಶವನ್ನು ನೀಡಿ ವಹಿಸಲಾಗಿತ್ತು. ಈ ಗುತ್ತಿಗೆದಾರರೊಡನೆ ಆದ ಕರಾರಿನ ಪ್ರಕಾರ ಸದರೀ ಗುತ್ತಿಗೆದಾರರು ಕೆಲಸವನ್ನು ವಹಿಸಿದ್ದ ದಿನದಿಂದ ಒಂದು ವರ್ಷದ ಒಳಗೆ ಅಂದರೆ, 20-3-2002 ರ ಅಂತ್ಯಕ್ಕೆ ಕಾಮಗಾರಿಯನ್ನು ಪೂರ್ಣಗೊಳಿಸಬೇಕಾಗಿತ್ತು. ಆದರೆ, ಗುತ್ತಿಗೆದಾರರು ಬಹಳ ಮಂದಗತಿಯಿಂದ ಕೆಲಸ ನಿರ್ವಹಿಸುತ್ತಿರುವುದು ಗಮನಕ್ಕೆ ಬಂದಾಗ ಕ.ವಿ.ಪ್ರ.ನಿ.ನಿ. ಯಿಂದ ಆಗಿಂದಾಗ್ಗೆ ಕೆಲಸವನ್ನು ಶೀಘ್ರಗತಿಯಲ್ಲಿ ಮಾಡಿ ಮುಗಿಸಲು ಹಲವು ಬಾರಿ ನೋಟೀಸ್‌ಗಳನ್ನು ಜಾರಿಗೊಳಿಸಲಾಯಿತು. ಆದರೂ ಸಹ ಸದರೀ ಗುತ್ತಿಗೆದಾರರು ಕಾಮಗಾರಿಯನ್ನು ಪೂರ್ಣಗೊಳಿಸಲಿಲ್ಲ. ಇದು ಈ ಕಾಮಗಾರಿಯನ್ನು ಪೂರ್ಣಗೊಳಿಸುವುದರಲ್ಲಿ ಆದ ವಿಳಂಬಕ್ಕೆ ಮುಖ್ಯ ಕಾರಣ.

ಇ) ಈ ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗದಿಯಾದ ಒಟ್ಟು ಮೊತ್ತ 271.73 ಲಕ್ಷ ರೂ.ಗಳು ಹಾಗೂ ಈವರೆವಿಗೂ ಖರ್ಚು ಮಾಡಲಾದ ಒಟ್ಟು ಮೊತ್ತ 126.93 ಲಕ್ಷ ರೂ.ಗಳು ವಿವರಗಳು ಈ ಕೆಳಕಂಡಂತಿವೆ.

ಕ್ರ. ಸಂ.	ವಿವರ	ಟೆಂಡರ್ ಮೊತ್ತ (ರೂ.ಲಕ್ಷಗಳಲ್ಲಿ)	ಈವರೆವಿಗೂ ಖರ್ಚು ಮಾಡಲಾದ ವೆಚ್ಚ (ರೂ.ಲಕ್ಷಗಳಲ್ಲಿ)
1	ಸ್ಟೇಷನ್ ನಿರ್ಮಾಣಕ್ಕಾಗಿ	180.80	10.77
2	66 ಕೆ.ವಿ. ವಿದ್ಯುತ್ ಪ್ರಸರಣ ಮಾರ್ಗ ನಿರ್ಮಾಣಕ್ಕಾಗಿ	90.92	116.16
	ಒಟ್ಟು ಮೊತ್ತ	**271.73**	**126.93**

ಸದರಿ ಸಬ್-ಸ್ಟೇಷನ್‌ಗೆ ಬೇಕಾಗಿರುವ 13 ಕಿ.ಮೀ. 66 ಕೆ.ವಿ. ವಿದ್ಯುತ್ ಪ್ರಸರಣ ಮಾರ್ಗವನ್ನು ಕೆ.ಜಿ.ಎಫ್. ನಿಂದ ಕಾಮಸಮುದ್ರಕ್ಕೆ ನಿರ್ಮಾಣ ಮಾಡಿ, ಚಾಲನೆಗೊಳಿಸಲಾಗಿರುತ್ತದೆ.

ಈ) ಈ ಕಾಮಗಾರಿಯ ಈ ಹಿಂದಿನ ಗುತ್ತಿಗೆದಾರರಾದ ಮೆ: ಜ್ಯೋತಿ ಸ್ಟ್ರಕ್ಚರ್ಸ್‌ರವರು ಸದರಿ ಕಾಮಗಾರಿಯನ್ನು ಕರಾರಿನ ಪ್ರಕಾರ ಪೂರ್ಣಗೊಳಿಸದಿದ್ದರಿಂದ, ಅವರಿಗೆ ವಹಿಸಲಾದ ಗುತ್ತಿಗೆಯನ್ನು ದಿನಾಂಕ 13-9-2004ರಂದು ರದ್ದುಪಡಿಸಿ, ಬೇರೊಬ್ಬ ಗುತ್ತಿಗೆದಾರರಿಗೆ ಈ ಕಾಮಗಾರಿಯನ್ನು

ಪೂರ್ಣಗೊಳಿಸಲು ಆಂಶಿಕ ಗುತ್ತಿಗೆ (ಪಾರ್ಷಿಯಲ್ 'ಟರ್ನ್ ಕೀ') ಆಧಾರದ ಮೇಲೆ ದಿನಾಂಕ 17–12–2004ರಂದು ವಹಿಸಲಾಗಿದೆ ಹಾಗೂ ಏಪ್ರಿಲ್ 2005ರ ಅಂತ್ಯದ ವೇಳೆಗೆ ಬಾಕಿ ಉಳಿದಿರುವ ಕಾಮಗಾರಿಗಳನ್ನು ಪೂರ್ಣಗೊಳಿಸಲು ತಿಳಿಸಲಾಗಿರುತ್ತದೆ. ಬಾಕಿ ಉಳಿದಿರುವ ಕಾಮಗಾರಿಗಳನ್ನು ಪೂರ್ಣಗೊಳಿಸಿ, ಸದರಿ ವಿದ್ಯುತ್ ಉಪ ಕೇಂದ್ರವನ್ನು ಏಪ್ರಿಲ್ 2005ರ ಅಂತ್ಯದೊಳಗೆ ಚಲನೆಗೊಳಿಸಲು ಎಲ್ಲಾ ಪ್ರಯತ್ನಗಳನ್ನು ಮಾಡಲಾಗುತ್ತಿದೆ.

874(1326): ಶ್ರೀಮತಿ ವಿಜಯಲಕ್ಷ್ಮಮ್ಮ ಬಂಡಿಸಿದ್ದೇಗೌಡ (ಶ್ರೀರಂಗಪಟ್ಟಣ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಶ್ರೀರಂಗಪಟ್ಟಣ ತಾಲ್ಲೂಕು, ಗಂಜಾಂ ಶ್ರೀ ನಿಮಿಷಾಂಬಾ ದೇವಾಲಯದ ಆಡಳಿತ ಸರ್ಕಾರದ ಮುಜರಾಯಿ ಇಲಾಖೆಯ ವಶದಲ್ಲಿದೆಯೇ;

ಆ) ಈ ದೇವಾಲಯಧ ಆಸ್ತಿ ಹಾಗೂ ಆದಾಯದ ವಿವರವೇನು, (ತಿಂಗಳುವಾರು);

ಇ) ಈ ದೇವಾಲಯದ ಆಡಳಿತವನ್ನು ಟ್ರಸ್ಟ್‌ಗೆ ವಹಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ;

ಈ) ಟ್ರಸ್ಟಿಗೆ ವಹಿಸುವ ಉದ್ದೇಶವಿದ್ದರೆ ಕಾರಣಗಳನ್ನು ತಿಳಿಸುವುದು?

ಶ್ರೀ ಎಂ. ಪಿ. ಪ್ರಕಾಶ್ (ಕಂದಾಯ ಸಚಿವರು) :

ಅ) ಹೌದು.

ಆ) ದೇವಾಲಯದ ಆಸ್ತಿ ಹಾಗೂ ಆದಾಯದ ವಿವರಗಳನ್ನು <u>ಅನುಬಂಧ–1ರಲ್ಲಿ</u> ಲಗತ್ತಿಸಲಾಗಿದೆ.

ಇ) ಕಂದಾಯ ಕಾರ್ಯದರ್ಶಿಗಳ ನ್ಯಾಯಾಲಯದಲ್ಲಿ ಪ್ರಕರಣ ವಿಚಾರಣೆ ಹಂತದಲ್ಲಿದೆ. ನ್ಯಾಯಾಲಯದ ತೀರ್ಮಾನದಂತೆ ಕ್ರಮ ತೆಗೆದುಕೊಳ್ಳಲಾಗುವುದು.

ಈ) ಉದ್ಭವಿಸುವುದಿಲ್ಲ.

ಅನುಬಂಧ 1

ಶ್ರೀ ನಿಮಿಷಾಂಬ ದೇವಾಲಯಕ್ಕೆ ಸೇರಿದ ಸ್ಥಿರ ಮತ್ತು ಚರ ಆಸ್ತಿಗಳ ವಿವರ ಹಾಗೂ ಆದಾಯದ ವಿವರ (ತಿಂಗಳವಾರು) ಈ ಕೆಳಗಿನಂತೆ ಇರುತ್ತದೆ.

ಸ್ಥಿರ ಆಸ್ತಿ
1) ಸರ್ವೆ ನಂ.906ರಲ್ಲಿ 027 ಗುಂಟೆ
2) ಸರ್ವೆ ನಂ.907ರಲ್ಲಿ 0.08 ಗುಂಟೆ
3) ನಿವೇಶನ 1–70X165 ಅಡಿ ವಿಸ್ತೀರ್ಣಕ್ಕೆ

ಚರ ಆಸ್ತಿ ಈ ದೇವಾಲಯವನ್ನು ಇಲಾಖೆಯ ವಶಕ್ಕೆ ತೆಗೆದುಕೊಂಡ ಮೇಲೆ ಒಟ್ಟು 5.00 ಕೆ.ಜಿ.ಗೂ ಹೆಚ್ಚು ಚಿನ್ನ, 30.00 ಕೆ.ಜಿ.ಗೂ ಹೆಚ್ಚು ಬೆಳ್ಳಿ ಸಂಗ್ರಹವಾಗಿರುತ್ತದೆ.

I. ಸೇವಾ ಶುಲ್ಕ:_

ಏಪ್ರಿಲ್ 2003	3,00,161–00
ಮೇ 2003	3,95,958–00

ಜೂನ್ 2003	3,14,676–00
ಜುಲೈ 2003	3,26,609–00
ಆಗಸ್ಟ್ 2003	2,90,355–00
ಸೆಪ್ಟೆಂಬರ್ 2003	2,20,918–00
ಅಕ್ಟೋಬರ್ 2003	3,41,835–00
ನವೆಂಬರ್ 2003	3,24,369–00
ಡಿಸೆಂಬರ್ 2003	2,80,481–00
ಜನವರಿ 2004	3,33,452–00
ಫೆಬ್ರವರಿ 2004	3,46,694–00
ಮಾರ್ಚ್ 2004	3,39,643–00
ಒಟ್ಟು	**38,15,151–00**
II. ಗೋಲಕದಿಂದ	12,06,126–00
III. ಬ್ಯಾಂಕಿನ ಬಡ್ಡಿ	14,15,000–00

875(1327) ಶ್ರೀಮತಿ ವಿಜಯಲಕ್ಷ್ಮಮ್ಮ ಬಂಡಿಸಿದ್ದೇಗೌಡ (ಶ್ರೀರಂಗಪಟ್ಟಣ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಶ್ರೀರಂಗಪಟ್ಟಣದಲ್ಲಿ ಮಿನಿ ವಿಧಾನ ಸೌಧ ನಿರ್ಮಾಣ ಮಾಡಲು ಕಳೆದ 10 ವರ್ಷಗಳಿಂದ ಬೇಡಿಕೆ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ.

ಆ) ಮಿನಿ ವಿಧಾನ ಸೌಧ ನಿರ್ಮಾಣ ಮಾಡಲು 2004–05ನೇ ಸಾಲಿನಲ್ಲಿಯೇ ಮೂರನೇ ಒಂದು ಭಾಗ ಅನುದಾನ ಒದಗಿಸಿ ಮಂಜೂರಾತಿ ನೀಡಲು ಸರ್ಕಾರ ಉದ್ದೇಶಿಸಿದೆಯೇ?

ಶ್ರೀ ಎಂ. ಪಿ. ಪ್ರಕಾಶ್ (ಕಂದಾಯ ಸಚಿವರು) :

ಅ) ಬಂದಿದೆ.

ಆ) ಈ ಬಗ್ಗೆ ಅಗತ್ಯ ಸಂಪನ್ಮೂಲಗಳ ವ್ಯವಸ್ಥೆ ಮಾಡುವ ಕುರಿತು ಸರ್ಕಾರವು ಕ್ರಮ ಜರುಗಿಸುತ್ತಿದೆ. ಸಂಪನ್ಮೂಲಗಳ ವ್ಯವಸ್ಥೆ ಆಗುತ್ತಲೇ ಮಿನಿ ವಿಧಾನ ಸೌಧ ನಿರ್ಮಾಣ ಕಾರ್ಯವನ್ನು ಕೈಗೊಳ್ಳಲಾಗುವುದು.

876(1156) ಶ್ರೀ ವಿಶ್ವನಾಥ ಹೆಚ್. ಎಂ. (ಸಕಲೇಶಪುರ): ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸಕಲೇಶಪುರ ಮತ್ತು ಆಲೂರು ತಾಲ್ಲೂಕುಗಳಲ್ಲಿ ಇಲ್ಲಿಯವರೆಗೆ ಕಾಡಾನೆಗಳಿಂದ ಆಗಿರುವ ಮಾನವ, ಸಾಕು ಪ್ರಾಣಿಗಳ ಪ್ರಾಣಹಾನಿಹಾಗೂ ಬೆಳೆ ಹಾನಿಗಳ ಪ್ರಮಾಣವೆಷ್ಟು;

ಆ) ಆನೆಗಳನ್ನು ಸ್ಥಳಾಂತರಿಸುವ ಕಾರ್ಯ ಎಂದಾದರು ನಡೆದಿದೆಯೇ;

ಇ) ಕಾಡಾನೆಗಳ ಹಾವಳಿ ನಿಯಂತ್ರಣಕ್ಕೆ ತೆಗೆದುಕೊಂಡಿರುವ ಶಾಶ್ವತ ಪರಿಹಾರ ಕ್ರಮಗಳೇನು;

ಈ) ಬೆಳೆ ನಷ್ಟಕ್ಕೆ ಹಾಗೂ ಇತರೆ ತೆಂಗು, ಬಾಳೆ, ಅಡಿಕೆ ಮರಗಳ ಮತ್ತು ಕಾಫಿ, ಏಲಕ್ಕಿ ಇತರೆ ಗಿಡಗಳ ನಷ್ಟಕ್ಕೆ ಪರಿಹಾರ ಕೊಡಲು ಇರುವ ಮಾನದಂಡಗಳೇನು; ಅವು ವೈಜ್ಞಾನಿಕವಾಗಿದೆಯೇ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :

ಅ) 2001-02ನೇ ಸಾಲಿನಿಂದ ಈವರೆವಿಗೂ ಆಲೂರು, ಸಕಲೇಶಪುರ ತಾಲ್ಲೂಕುಗಳಲ್ಲಿ ಕಾಡಾನೆಗಳಿಂದ ಆಗಿರುವ ಬೆಳೆಹಾನಿ, ಜೀವಹಾನಿ ಹಾಗೂ ಮಾನವಗಾಯ ಪ್ರಕರಣಗಳ ವಿವರ ಕೆಳಕಂಡಂತಿದೆ.

ವರ್ಷ	ಪಸಲು ಹಾನಿ ಪ್ರಕರಣ/ ನೀಡಲಾದ ಪರಿಹಾರ	ಮಾನವ ಹತ್ಯೆ ಪ್ರಕರಣ/ ನೀಡಲಾದ ಪರಿಹಾರ	ಮಾನವ ಗಾಯ ಪ್ರಕರಣ/ ನೀಡಲಾದ ಪರಿಹಾರ	ಜಾನು ವಾರು ಹತ್ಯೆ ಪ್ರಕರಣ/ ನೀಡಲಾದ ಪರಿಹಾರ	ಒಟ್ಟು ಪ್ರಕರಣ/ ನೀಡಲಾದ ಪರಿಹಾರ
2001-02	92	1	-	-	93]
	ರೂ.55,820	ರೂ.1,00,000			ರೂ.1,55,820
2002-03	199	-	1	-	200
	ರೂ.1,81,325		ರೂ.5,867		ರೂ.1,87,192
2003-04	349	1	3	-	353
	ರೂ.4,09,300	ರೂ.1,00,000	ರೂ.11,500		ರೂ.5,20,800
2004-05	376	2	1	-	379
(12/04)	ರೂ.4,89,950	ರೂ.2,00,000	ರೂ.15,000		ರೂ.7,03,950

2004-05ನೇ ಸಾಲಿನಲ್ಲಿ ಮೇಲೆ ತಿಳಿಸಿರುವ ಪ್ರಕರಣಗಳಿಗೆ ಈಗಾಗಲೇ ಪರಿಹಾರ ಪಾವತಿ ಮಾಡಿದ್ದು ಅನುದಾನ ಕೋರಿ ಮೇಲಾಧಿಕಾರಿಗಳಿಗೆ ಸಲ್ಲಿಸಿರುವ 236 ಪ್ರಕರಣಗಳ ರೂ. 4,01,675/- ಗಳಲ್ಲಿ ರೂ. 2,97,800/- ಗಳ ಅನುದಾನ ಬಂದಿದ್ದು, ಆಲೂರು, ಯಸಳೂರು, ಸಕಲೇಶಪುರ ವಲಯಗಳ 170 ಪ್ರಕರಣಗಳಿಗೆ ಸದರಿ ರೂ. 2,97,800/- ಗಳನ್ನು ಖಜಾನೆಯ ಮೂಲಕ ಡ್ರಾ ಮಾಡಿ ಪಾವತಿಸಲು ಹಂಚಿಕೆ ಮಾಡಿದೆ. ಪ್ರಸ್ತುತ ಪರಿಹಾರ ಮಂಜೂರಾತಿ ಕೋರಿ ಈ ಕಛೇರಿಗೆ 200 ಪ್ರಕರಣಗಳು ಬಂದಿದ್ದು ಸದರಿ ಪ್ರಕರಣಗಳಿಗೆ ಪರಿಹಾರ ಮಂಜೂರು ಮಾಡಿ ಅನುದಾನ ಕೋರಿಕೆ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ನಡೆದಿದೆ,

ಆಲೂರು ವಲಯದ ದೊಡಬೆಟ್ಟ ರಕ್ಷಿತ ಅರಣ್ಯದಲ್ಲಿ ಬೀಡುಬಿಟ್ಟಿದ್ದ ಕಾಡಾನೆಗಳನ್ನು ಹಿಡಿಯಲು ಸಾಕಿದ ಆನೆಗಳನ್ನು ಉಪಯೋಗಿಸಿಕೊಂಡು ನುರಿತ ತಜ್ಞರಿಂದ ಮತ್ತು ಬರುವ ಚುಚ್ಚುಮದ್ದನ್ನು ಬಂದೂಕುಗಳಿಂದ ಹಾರಿಸಿ ಮತ್ತು ಬರಿಸಿ, 12 ಕಾಡಾನೆಗಳನ್ನು ಹಿಡಿದಿದ್ದು ಅವುಗಳಲ್ಲಿ 1 ಕಾಡನೆ ಮೃತಪಟ್ಟು ಉಳಿದ 11 ಕಾಡಾನೆಗಳನ್ನು ನಾಗರಹೊಳೆ ಅಭಯಾರಣ್ಯಕ್ಕೆ ಸಾಗಿಸಲಾಗಿರುತ್ತದೆ.

ಇ) ಹಾಸನ ವೃತ್ತದ ಹಾಸನ ವಿಭಾಗದಲ್ಲಿ ಆನೆಗಳ ಹಾವಳಿಯನ್ನು ತಡೆಗಟ್ಟಲು ಇಲಾಖಾ ಸಿಬ್ಬಂದಿಯವರು ಇಲಾಖಾ ವಾಹನ ಉಪಯೋಗಿಸಿಕೊಂಡು ಸುತ್ತಮುತ್ತಲ ಗ್ರಾಮಸ್ಥರ ಸಹಕಾರದೊಂದಿಗೆ ಸಿಡಿಮದ್ದು ಸಿಡಿಸಿ, ಬಂದೂಕುಗಳು ಹಾಗು ನಿಸ್ತಂತು ಉಪಕರಣಗಳನ್ನು

ಉಪಯೋಗಿಸಿಕೊಂಡು ಮತ್ತು ಆನೆಗಳನ್ನು ಓಡಿಸುವ ತಂಡಗಳ ಕ್ಯಾಂಪ್ ರಚಿಸಿ ತಾತ್ಕಾಲಿಕವಾಗಿ ಅರಣ್ಯ ಪ್ರದೇಶಕ್ಕೆ ಓಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಆಲೂರು ಹಾಗೂ ಸಕಲೇಶಪುರ ತಾಲ್ಲೂಕುಗಳಲ್ಲಿನ ಕಾಡಾನೆ ಹಾವಳಿಯನ್ನು ಶಾಶ್ವತವಾಗಿ ತಡೆಗಟ್ಟಲು ಹಾಗೂ ಆನೆಗಳನ್ನು ಹಿಡಿದು ಬೇರೆ ಕಡೆಗೆ ಸ್ಥಳಾಂತರಿಸಲು ವನ್ಯಜೀವಿ ಸಂರಕ್ಷಣೆ ಕಾಯಿದೆ ಸೆಕ್ಷನ್–12ರ ಪ್ರಕಾರ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿದ್ದು ಈ ಬಗ್ಗೆ ರಾಜ್ಯ ಸರ್ಕಾರವು ಅನುಮತಿ ಪಡೆಯಲು ಕೇಂದ್ರ ಸರ್ಕಾರವನ್ನು ಕೋರಿದ್ದು, ಕೇಂದ್ರ ಸರ್ಕಾರದಿಂದ ಅನುಮತಿ ದೊರೆತನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಈ) ಸರ್ಕಾರದ ಆದೇಶ ಸಂಖ್ಯೆ: ಅಪಜೀ 22 ಎಫ್‌ಡಬ್ಲ್ಯೂಎಲ್ 96, ದಿನಾಂಕ: 12–2–2002 ರಲ್ಲಿ ಬೆಳೆನಷ್ಟಕ್ಕೆ ಹಾಗೂ ಇತರೆ ತೆಂಗು, ಬಾಳೆ, ಅಡಿಕೆ ಮತ್ತು ಕಾಫಿ, ಏಲಕ್ಕಿ ಇತರೆ ಗಿಡಗಳ ನಷ್ಟಕ್ಕೆ ನಿಗದಿ ಪಡಿಸಲಾಗಿರುವ ದರಗಳ ಪ್ರಕಾರ ಪರಿಹಾರವನ್ನು ಮಂಜೂರು ಮಾಡಲಾಗುತ್ತಿದೆ.

878(1323) ಶ್ರೀ ವಿಶ್ವನಾಥ ಹೆಚ್. ಎಂ. (ಸಕಲೇಶಪುರ): ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸಕಲೇಶಪುರ ತಾಲ್ಲೂಕಿನಲ್ಲಿ ಎಷ್ಟು ಜಲ ವಿದ್ಯುತ್ ಯೋಜನೆಗಳಿಗೆ ಮಂಜೂರಾತಿ ದೊರಕಿದೆ.

ಆ) ಅನುಷ್ಠಾನಗೊಂಡಿರುವ ಯೋಜನೆಗಳೆಷ್ಟು..

ಶ್ರೀ ಹೆಚ್. ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಸಕಲೇಶಪುರ ತಾಲ್ಲೂಕಿನಲ್ಲಿ ಒಟ್ಟು 9 ಕಿರುಜಲ ವಿದ್ಯುತ್ ಯೋಜನೆಗಳನ್ನು ಹಂಚಿಕೆ ಮಾಡಲಾಗಿದೆ.

ಆ) 18 ಮೆ.ವ್ಯಾ. ಸಾಮರ್ಥ್ಯದ ಒಂದು ಕಿರುಜಲ ವಿದ್ಯುತ್ ಯೋಜನೆಯು ಅನುಷ್ಠಾನಗೊಂಡಿದೆ.

879(1324) ಶ್ರೀ ವಿಶ್ವನಾಥ ಹೆಚ್. ಎಂ. (ಸಕಲೇಶಪುರ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹೇಮಾವತಿ ಜಲಾಶಯದ ನಿರ್ಮಾಣವಾಗಿ ಎಷ್ಟು ವರ್ಷಗಳಾಗಿವೆ?

ಆ) ಈ ಜಲಾಶಯದ ಹಿನ್ನೀರಿನಿಂದ ಶೀತ ಪೀಡಿತವಾದ ಗ್ರಾಮಗಳೆಷ್ಟು?

ಇ) ಅವುಗಳ ಪುನರ್ವಸತಿ ಮತ್ತು ಸಂತ್ರಸ್ಥರ ಪರಿಹಾರ ಕಾರ್ಯ ಯಾವ ಹಂತದಲ್ಲಿದೆ.

ಈ) ಈ ಬಗ್ಗೆ ಕೈಗೊಂಡ ಕ್ರಮಗಳೇನು?

ಶ್ರೀ ಎಂ. ಪಿ. ಪ್ರಕಾಶ್ (ಕಂದಾಯ ಸಚಿವರು) :

ಅ) 23 ವರ್ಷಗಳಾಗಿವೆ.

ಆ) ಈ ಜಲಾಶಯದ ಹಿನ್ನೀರಿನಿಂದ ಯಾವುದೇ ಗ್ರಾಮಗಳು ಶೀತ ಪೀಡಿತವಾಗಿರುವುದಿಲ್ಲವೆಂದು ಮುಖ್ಯ ಅಭಿಯಂತರರು, ಹೇಮಾವತಿ ಜಲಾಶಯ ಯೋಜನೆ, ಗೊರೂರುರವರು ತಿಳಿಸಿರುತ್ತಾರೆ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

880(1325) ಶ್ರೀ ವಿಶ್ವನಾಥ ಹೆಚ್. ಎಂ. (ಸಕಲೇಶಪುರ): ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹಾಸನ ಜಿಲ್ಲೆ ಅರಣ್ಯ ಇಲಾಖೆಗೆ ಜೆ.ಬಿ.ಐ.ಸಿ. ಯೋಜನೆ ಅಡಿ ಬಂದಿರುವ ಅನುದಾನ ಎಷ್ಟು;

ಆ) ಈ ಯೋಜನೆಯಲ್ಲಿ ಸಕಲೇಶಪುರ ಮತ್ತು ಆಲೂರು ತಾಲ್ಲೂಕುಗಳಿಗೆ ಬಂದಿರುವ ಅನುದಾನ ಎಷ್ಟು?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :

ಅ) ಬಿಡುಗಡೆಯಾದ ಅನುದಾನ ಲಕ್ಷ ರೂ.ಗಳಲ್ಲಿ

ವರ್ಷ	ಪ್ರಾದೇಶಿಕ ವಿಭಾಗ	ಸಾಮಾಜಿಕ ವಿಭಾಗ	ಒಟ್ಟು
1997–2005 (31–12–2004) ರವರೆಗೆ	1229.46	480.43	1709.89

ಆ) ಸಕಲೇಶಪುರ ತಾಲ್ಲೂಕ್ ಜೆಬಿಐಸಿ ಯೋಜನೆಯ ವ್ಯಾಪ್ತಿಗೆ ಒಳಪಡದ ಕಾರಣ ಯಾವುದೇ ಅನುದಾನ ಬಿಡುಗಡೆಯಗಿರುವುದಿಲ್ಲ.

ಆಲೂರು ತಾಲ್ಲೂಕನ್ನು ಸರ್ಕಾರಿ ಆದೇಶ ಸಂಖ್ಯೆ: ಅಪಜೀ 152 ಎಫ್‌ಎಪಿ 99, ದಿನಾಂಕ: 11–10–99 ರಲ್ಲಿ ಜೆಬಿಐಸಿ ಯೋಜನೆಯ ವ್ಯಾಪ್ತಿಗೆ ಸೇರಿಸಿದ ಕಾರಣ ಈ ತಾಲ್ಲೂಕಿಗೆ ಬಿಡುಗಡೆಯಾದ ಅನುದಾನ ಕೆಳಕಂಡಂತಿದೆ.

ವರ್ಷ	ಆಲೂರು ತಾಲ್ಲೂಕು ಪ್ರಾದೇಶಿಕ ವಿಭಾಗ (ರೂ. ಲಕ್ಷಗಳಲ್ಲಿ)	ಷರಾ
1999–2005 (31–12–2004) ರವರೆಗೆ	39.801	ಆಲೂರು ತಾಲ್ಲೂಕಿನಲ್ಲಿ ಸಾಮಾಜಿಕ ಅರಣ್ಯ ವಲಯ ಇರುವುದಿಲ್ಲ.

881(694) ಶ್ರೀ ಯೋಗೀಶ್ ಭಟ್ ಎನ್. (ಮಂಗಳೂರು): ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಈವರೆಗೂ ಕೆ.ಪಿ.ಟಿ.ಸಿ.ಎಲ್. ಗೆ ಬರಬೇಕಾದ ಬಾಕಿ ಮೊತ್ತವೆಷ್ಟು ಹಾಗೂ ಇದರಲ್ಲಿ ಅಸಲು ಮತ್ತು ಬಡ್ಡಿ ಎಷ್ಟು (ವಿವರ ಒದಗಿಸುವುದು);

ಆ) ಕೆ.ಪಿ.ಟಿ.ಸಿ.ಎಲ್. ಸಿಸ್ಟಂ ಸುಧಾರಣೆಗೆ ಕೇಂದ್ರ ಸರ್ಕಾರದ ಯಾವ ಯಾವ ಸಂಸ್ಥೆಯಿಂದ ಎಷ್ಟೆಷ್ಟು ಹಣದ ಸಾಲ ಸೌಲಭ್ಯಗಳನ್ನು ಹಾಗೂ ಅನುದಾನವನ್ನು ಪಡೆಯಲಾಗಿದೆ;

ಇ) ಈ ಹಣವನ್ನು ಯಾವ ಬಾಬ್ತಿಗೆ ಉಪಯೋಗಿಸಲಾಗಿದೆ;

ಈ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ನಿಟ್ಟಿನಲ್ಲಿ ಮಾಡಿದ ಖರ್ಚು ಮತ್ತು ಸಾಧಿಸಿದ ಪ್ರಗತಿಯೇನು?

ಶ್ರೀ. ಹೆಚ್. ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ದಿನಾಂಕ 31-12-2004 ರ ಅಂತ್ಯದಲ್ಲಿದ್ದಂತೆ ರಾಜ್ಯದಲ್ಲಿರುವ ನಾಲ್ಕು ವಿದ್ಯುತ್ ಸರಬರಾಜು ಕಂಪನಿಗಳಿಗೆ ಬರಬೇಕಾಗಿದ್ದ

ಬಾಕಿಯ ಮೊತ್ತ 2413.89 ಕೋಟಿ ರೂ.ಗಳು.

ಇದರಲ್ಲಿ ಅಸಲು 2120.30 ಕೋಟಿ ರೂ.ಗಳು.

ಮತ್ತು ಬಡ್ಡಿ 293.59 ಕೋಟಿ ರೂ.ಗಳು.

ವಿದ್ಯುತ್ ಸರಬರಾಜು ಕಂಪನಿವಾರು ವಿವರಗಳು ಈ ಕೆಳಕಂಡಂತಿವೆ.

(ಕೋಟಿ. ರೂ.ಗಳಲ್ಲಿ)

ಕ್ರ. ಸಂ.	ಕಂಪನಿಯ ಹೆಸರು	ಒಟ್ಟು ಬಾಕಿ ಮೊತ್ತ	ಅಸಲು	ಬಡ್ಡಿ
1	ಬೆಂ.ವಿ.ಸ.ಕಂಪನಿ	1002.97	853.78	149.19
2	ಮಂ.ವಿ.ಸ.ಕಂಪನಿ	473.56	422.38	51.18
3	ಹು.ವಿ.ಸ.ಕಂಪನಿ	500.66	452.36	48.30
4	ಗು.ವಿ.ಸ.ಕಂಪನಿ	436.70	391.78	44.92
	ಒಟ್ಟು	**2413.89**	**2120.30**	**293.59**

ಆ) ಕೆ.ಪಿ.ಟಿ.ಸಿ.ಎಲ್. ಸಿಸ್ಟಂ ಸುಧಾರಣೆಗೆ ಕೇಂದ್ರ ಸರ್ಕಾರದ ಸಂಸ್ಥೆಗಳಿಂದ ದಿನಾಂಕ 31-12-2004 ರವರೆಗೆ ಪಡೆದ ಸಾಲ ಮತ್ತು ಅನುದಾನದ ವಿವರಗಳು ಕೆಳಕಂಡಂತಿದೆ.

(ಕೋಟಿ. ರೂ.ಗಳಲ್ಲಿ)

ಸಂಸ್ಥೆಯ ಹೆಸರು	ಸಾಲ	ಅನುದಾನ	ಒಟ್ಟು
ಕೇಂದ್ರ ಸರ್ಕಾರದ ಇಂಧನ ಇಲಾಖೆ, ತ್ವರಿತ ವಿದ್ಯುತ್ ಅಭಿವೃದ್ದಿ ಮತ್ತು ಸುಧಾರಣಾ ಕಾರ್ಯಕ್ರಮಕ್ಕೆ (ಎಪಿಡಿಆರ್‌ಪಿ)	217.725	217.725	435.450
ಗ್ರಾಮೀಣ ವಿದ್ಯುದ್ಧೀಕರಣ ನಿಗಮ (ಆರ್.ಇ.ಸಿ)			
1. ತ್ವರಿತ ವಿದ್ಯುತ್ ಅಭಿವೃದ್ಧಿ ಮತ್ತು ಸುಧಾರಣಾ ಕಾರ್ಯಕ್ರಮಕ್ಕೆ (ಎಪಿಡಿಆರ್‌ಪಿ)	306.518	–	306.518
2. ಸಿಸ್ಟಂ ಸುಧಾರಣೆಗೆ	583.910	–	583.910
ವಿದ್ಯುತ್ ಹಣಕಾಸು ನಿಗಮ (ಎ.ಎಫ್.ಸಿ) ಸಿಸ್ಟಂ ಸುಧಾರಣೆಗೆ	619.710	–	619.710
ಒಟ್ಟು (ಕೋಟಿ ರೂ.ಗಳಲ್ಲಿ)	**1727.863**	**217.725**	**1945.588**

ಇ) ಈ ಹಣವನ್ನು ಸಿಸ್ಟಂ ಸುಧಾರಣೆಯ ಈ ಕೆಳಕಂಡ ಯೋಜನೆಗಳಿಗೆ ಉಪಯೋಗಿಸಲಾಗಿದೆ.

1) ಹೊಸ ವಿದ್ಯುತ್ ಪ್ರಸರಣಾ ಮಾರ್ಗಗಳ ನಿರ್ಮಾಣ ಮತ್ತು ಹೊಸ ವಿದ್ಯುತ್ ಉಪಕೇಂದ್ರಗಳ ಸ್ಥಾಪನೆ.

2) ತ್ವರಿತ ವಿದ್ಯುತ್ ಅಭಿವೃದ್ಧಿ ಮತ್ತು ಸುಧಾರಣಾ ಕಾರ್ಯಕ್ರಮ (ಎಪಿಡಿಆರ್‌ಪಿ)

ಈ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ನಿಟ್ಟಿನಲ್ಲಿ ಮಾಡಿದ ಖರ್ಚು ಮತ್ತು ಸಾಧಿಸಿದ ಪ್ರಗತಿ ಕೆಳಗಿನಂತಿವೆ.

1) ಪ್ರಸರಣ ಮಾರ್ಗಗಳು ಮತ್ತು ಉಪ-ಕೇಂದ್ರಗಳ ಸ್ಥಾಪನೆಯ ಕೆಲಸಗಳಲ್ಲಿ ಕ.ವಿ.ಪ್ರ.ನಿ.ನಿ. ವತಿಯಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 31-12-2004 ರವರೆಗೆ ಸಾಧಿಸಿದ ಪ್ರಗತಿ.

1) ಪವರ್ ಫೈನಾನ್ಸ್ ಕಾರ್ಪೋರೇಷನ್ನಿನ ಸಾಲಸೌಲಭ್ಯದಿಂದ ಕೈಗೊಂಡ ಯೋಜನೆಗಳು:

		ಮಾಡಲಾದ ವೆಚ್ಚ (ಕೋಟಿ ರೂ.ಗಳಲ್ಲಿ)
ಅ)	ಕೇಮಾರ್‌ನಿಂದ ಗುರುವಾಯನಕೆರೆವರೆಗೆ 220 ಕೆ.ವಿ. ವಿದ್ಯುತ್ ಪ್ರಸರಣಾ ಮಾರ್ಗವನ್ನು ಅಳವಡಿಸುವುದು ಮತ್ತು ಗುರುವಾಯನಕೆರೆಯಲ್ಲಿ 110/33/11 ಕೆ.ವಿ. ವಿದ್ಯುತ್ ಉಪ ಕೇಂದ್ರವನ್ನು ಸ್ಥಾಪಿಸುವುದು.	33.71
ಆ)	ವಿಟ್ಲದಲ್ಲಿರುವ 110 ಕೆ.ವಿ. ವಿದ್ಯುತ್ ಉಪ-ಕೇಂದ್ರದಲ್ಲಿ 10 ಎಂ.ವಿ.ಎ. ಸಾಮರ್ಥ್ಯದ ಎರಡನೇ ಪರಿವರ್ತಕವನ್ನು ಹೆಚ್ಚುವರಿಯಾಗಿ ಸ್ಥಾಪಿಸುವುದು.	0.99
	ಒಟ್ಟು	**34.70**

2) ಗ್ರಾಮೀಣ ವಿದ್ಯುದ್ದೀಕರಣ ನಿಗಮದ ಸಾಲ ಸೌಲಭ್ಯದಿಂದ ಕೈಗೊಂಡ ಯೋಜನೆಗಳು:

		ಮಾಡಲಾದ ವೆಚ್ಚ (ಕೋಟಿ ರೂ.ಗಳಲ್ಲಿ)
ಅ)	ಕಾಟಿಪಳ್ಳ 33/11 ಕೆ.ವಿ. ವಿದ್ಯುತ್ ಉಪ-ಕೇಂದ್ರದಲ್ಲಿ ಒಂದು 5 ಎಂ.ವಿ.ಎ. ಸಾಮರ್ಥ್ಯದ ಪರಿವರ್ತಕವನ್ನು ಹೆಚ್ಚುವರಿಯಾಗಿ ಅಳವಡಿಸುವುದು.	0.39

ಆ)	ಕಾವೂರಿನಿಂದ ತಣ್ಣೀರುಬಾವಿಗೆ 220 ಕೆ.ವಿ. ವಿದ್ಯುತ್ ಪ್ರಸರಣಾ ಮಾರ್ಗದ ನಿರ್ಮಾಣ	1.95
	ಒಟ್ಟು	**12.34**
	ಕ.ವಿ.ಪ್ರ.ನಿ.ನಿ.ಯಿಂದ ಖರ್ಚಾದ ಒಟ್ಟು ಹಣ	47.04

<u>1) ಎ.ಪಿ.ಡಿ.ಆರ್.ಪಿ. ಯೋಜನೆಯಡಿಯಲ್ಲಿ ಮೆಸ್ಕಾಂವತಿಯಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 31-12-2004 ರವರೆಗೆ ಸಾಧಿಸಿರುವ ಪ್ರಗತಿಯ ವಿವರಗಳು:</u>

		ಭೌತಿಕ ಸಾಧನೆ	ಆರ್ಥಿಕ ಪ್ರಗತಿ (ಲಕ್ಷ ರೂ.ಗಳಲ್ಲಿ)
ಅ)	11 ಕೆವಿ ಲಿಂಕ್‌ಲೈನ್‌ಗಳು (ಕಿ.ಮೀ.ಗಳಲ್ಲಿ)	12	21.72
ಆ)	11 ಕೆವಿ ವಾಹಕ ಬದಲಾವಣೆ (ಕಿ.ಮೀ.ಗಳಲ್ಲಿ)	16	20.11
ಇ)	ಹೊಸ ಪರಿವರ್ತಕಗಳು (ಸಂಖ್ಯೆಗಳಲ್ಲಿ)	15	13.5
ಈ)	ಎಲ್.ಟಿ.ವಾಹಕ ಬದಲಾವಣೆ (ಕಿ.ಮೀ.ಗಳಲ್ಲಿ)	247	397.86
ಉ)	ಹೊಸ ಎಲ್.ಟಿ.ಲೈನ್‌ಗಳು (ಕಿ.ಮೀ.ಗಳಲ್ಲಿ)	3	7.887
ಊ)	ಎಲ್.ಟಿ. ಸಿಂಗಲ್ ಫೇಸ್‌ನಿಂದ ಮೂರು ಫೇಸ್ ಪರಿವರ್ತನೆ (ಕಿ.ಮೀ.ಗಳಲ್ಲಿ)	49	78.4
	ಒಟ್ಟು		**539.47**

882(1150) ಶ್ರೀ ಯೋಗೀಶ್ ಭಟ್ ಎನ್. (ಮಂಗಳೂರು): ಮಾನ್ಯ ಅಲ್ಪಸಂಖ್ಯಾತ ಕಲ್ಯಾಣ ಹಾಗೂ ಯುವಜನ ಸೇವಾ ಹಾಗೂ ಕ್ರೀಡಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಗೆ ಒಳಪಟ್ಟ ಯುವಕ ಸಂಘಗಳು ಎಷ್ಟು, ಯುವತಿ ಮಂಡಳಗಳು ಮತ್ತು ಹವ್ಯಾಸಿ ಬಳಗಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ವಿವರ ನೀಡುವುದು);

ಆ) ಸದರಿ ಸಂಘಗಳಲ್ಲಿ ಎಷ್ಟು ಸಂಘಗಳಿಗೆ ಸ್ವಂತ ಕಟ್ಟಡದ ವ್ಯವಸ್ಥೆಯನ್ನು ಒದಗಿಸಿಕೊಡಲಾಗಿದೆಯೇ; ಸದರಿ ಯೋಜನೆ ಯಡಿಯಲ್ಲಿ ಜಿಲ್ಲೆಯ ಎಷ್ಟು ಶಾಲಾ ಕಾಲೇಜುಗಳ ಆಟದ ಮೈದಾನಗಳ ಅಭಿವೃದ್ಧಿಗಾಗಿ ಸರ್ಕಾರ ನೆರವನ್ನು ನೀಡಿದೆ ಮತ್ತು ಅದರ ಮೊತ್ತ ಎಷ್ಟು;

ಇ) ರಾಜ್ಯದಲ್ಲಿ ಎಷ್ಟು ತಾಲ್ಲೂಕುಗಳಲ್ಲಿ ಇಲಾಖೆಯ ಕ್ರೀಡಾಂಗಣಗಳನ್ನು ನಿರ್ಮಿಸಲಾಗಿದೆ; ಬಾಕಿ ಇರುವ ತಾಲ್ಲೂಕುಗಳಲ್ಲಿ ಕ್ರೀಡಾಂಗಣ ನಿರ್ಮಾಣವನ್ನು ಯಾವಾಗ ನಿರ್ಮಿಸಿಕೊಡಲಾಗುವುದು;

ಈ) ರಾಜ್ಯದಲ್ಲಿನ ಸ್ಥಳೀಯ ಆಡಳಿತ ಸಂಸ್ಥೆಗಳು ತಮ್ಮ ಆದಾಯದ ಶೇಕಡ 2 ಆದಾಯದ ಶೇಕಡ 2 ರಷ್ಟು ಹಣವನ್ನು ಕಡ್ಡಾಯವಾಗಿ ಕ್ರೀಡಾ ಚಟುವಟಿಕೆಗಳಿಗೆ ವಿನಿಯೋಗಿಸಲು ಆದೇಶ ನೀಡಲು ಸರ್ಕಾರ ಕ್ರಮ ಕೈಗೊಳ್ಳುವುದೆ?

ಶ್ರೀ ಜಬ್ಬಾರ್ ಖಾನ್ ಹೊನ್ನಳ್ಳಿ (ಅಲ್ಪಸಂಖ್ಯಾತ ಕಲ್ಯಾಣ ಹಾಗೂ ಯುವಜನ ಸೇವಾ ಹಾಗೂ ಕ್ರೀಡಾ ಸಚಿವರು) :

ಅ) ರಾಜ್ಯದಲ್ಲಿ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಗೆ ಒಳಪಟ್ಟ ಯುವಕ ಸಂಘಗಳು 27966, ಯುವತಿ ಮಂಡಳಿಗಳು 4260. ಹವ್ಯಾಸಿ ಸಂಘಗಳು 1556 ಇರುತ್ತವೆ. ಜಿಲ್ಲಾವಾರು ವಿವರಗಳು ಈ ಕೆಳಕಂಡಂತಿದೆ.

ಕ್ರ. ಸಂ.	ಜಿಲ್ಲೆ	ಯುವಕ ಸಂಘಗಳು	ಯುವತಿ ಸಂಘಗಳು	ಹವ್ಯಾಸಿ ಸಂಘಗಳು	ಒಟ್ಟು ಸಂಘಗಳು
1	ಬೆಂಗಳೂರು ನಗರ	841	148	107	1096
2	ಬೆಂಗಳೂರು (ಗ್ರಾ)	270	33	–	303
3	ಕೋಲಾರ	967	141	–	1108
4	ತುಮಕೂರು	1426	163	–	1589
5	ಶಿವಮೊಗ್ಗ	1192	237	–	1429
6	ಚಿತ್ರದುರ್ಗ	779	115	182	1076
7	ದಾವಣಗೆರೆ	952	143	318	1413
8	ಮೈಸೂರು	916	53	96	1065
9	ಮಂಡ್ಯ	1727	268	–	1995
10	ಚಿಕ್ಕಮಗಳೂರು	1151	225	138	1514
11	ಹಾಸನ	491	65	–	556
12	ಮಂಗಳೂರು	699	181	159	1039
13	ಮಡಿಕೇರಿ	426	70	–	496
14	ಚಾಮರಾಜನಗರ	255	15	35	305
15	ಉಡುಪಿ	389	88	126	603
16	ಗುಲ್ಬರ್ಗ	1570	431	31	2032
17	ಕೊಪ್ಪಳ	414	17	28	459
18	ಬೀದರ್	1019	208	23	1250
19	ಬಳ್ಳಾರಿ	295	65	–	360
20	ರಾಯಚೂರು	1266	62	–	1328
21	ಹಾವೇರಿ	1251	405	–	1656
22	ಬಾಗಲಕೋಟೆ	1166	42	–	1208

23	ಬೆಳಗಾಂ	2754	325	–	3079
24	ಧಾರವಾಡ	1200	145	79	1424
25	ಬಿಜಾಪುರ	1577	131	–	1708
26	ಕಾರವಾರ	1822	426	234	2482
27	ಗದಗ	1151	58	–	1209
	ಒಟ್ಟು	**27966**	**4260**	**1556**	**33782**

ಆ) ಸದರಿ ಸಂಘಗಳಲ್ಲಿ ಒಟ್ಟು 662 ಯುವಕ ಸಂಘಗಳಿಗೆ ಸ್ವಂತ ಕಟ್ಟಡಗಳನ್ನು ಒದಗಿಸಿಕೊಡಲಾಗಿದೆ.

ಗ್ರಾಮೀಣ ಪ್ರದೇಶದ 7 ಪ್ರೌಢಶಾಲಾ ಹಾಗೂ ಪದವಿಪೂರ್ವ ಕಾಲೇಜುಗಳಿಗೆ 2004–05ನೇ ಸಾಲಿನಲ್ಲಿ ಕೇಂದ್ರ ಸರ್ಕಾರದ ಅನುದಾನ ರೂ. 4,96,488/– ಮಂಜೂರಾಗಿರುತ್ತದೆ.

ಇ) ರಾಜ್ಯದಲ್ಲಿ 46 ಕೇಂದ್ರಗಳಲ್ಲಿ ಕ್ರೀಡಾಂಗಣಗಳನ್ನು ನಿರ್ಮಿಸಲಾಗಿದೆ.(ಜಿಲ್ಲಾ ಕ್ರೀಡಾಂಗಣ –19, ತಾಲ್ಲೂಕು ಕ್ರೀಡಾಂಗಣ–27).

ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಕ್ರೀಡಾಂಗಣಗಳನ್ನು ಪೂರ್ಣಗೊಳಿಸಲು ಸ್ಥಳೀಯ ಕ್ರೀಡಾಂಗಣ ಸಮಿತಿಗಳು ಸಾರ್ವಜನಿಕ ವಂತಿಕೆ, ಶಾಸಕರ ನಿಧಿ, ಇತ್ಯಾದಿ ಮೂಲಕ ಸಾಕಷ್ಟು ಹಣವನ್ನು ಸಂಗ್ರಹಿಸಬೇಕಾಗಿದೆ. ಕೇಂದ್ರ ಸರ್ಕಾರದ ಹೊಂದಾಣಿಕೆ ಅನುದಾನದ ಯೋಜನೆಯನ್ವಯ ಅನೇಕ ಕ್ರೀಡಾಂಗಣಗಳ ನಿರ್ಮಾಣಕ್ಕೆ ಸಹಾಯವನ್ನು ಪಡೆಯುತ್ತಿದ್ದು, ಜಿಲ್ಲಾ ಪಂಚಾಯತ್ ಆಯವ್ಯಯದಲ್ಲಿ ಕ್ರೀಡೆಗಾಗಿ ಶೇ. 2 ರಷ್ಟು ಹಣವನ್ನು ತಮ್ಮ ಆಯವ್ಯಯದಲ್ಲಿ ಮೀಸಲಿಡಲು ತೀರ್ಮಾನಿಸಲಾಗಿದೆ. ಸ್ಥಳೀಯ ಸಂಪನ್ಮೂಲಗಳಿಂದ ಕ್ರೋಢೀಕರಿಸಿ ತಮ್ಮ ಪಾಲಿನ ಜವಾಬ್ದಾರಿಯನ್ನು ನಿರ್ವಹಿಸಿ ಮಾಹಿತಿಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿದಾಗ ಕೇಂದ್ರ ಸರ್ಕಾರದ ಭಾಗದ ಹಣವನ್ನು ನೀಡಲಾಗುತ್ತಿದೆ. ಈ ಎಲ್ಲಾ ಮೂಲಗಳಿಂದ ಕ್ರೋಢೀಕರಿಸಿದ ಹಣದಿಂದ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಕ್ರೀಡಾಂಗಣಗಳ ನಿರ್ಮಾಣ ಕಾರ್ಯ ಕೈಗೆತ್ತಿಕೊಳ್ಳಲಾಗುತ್ತಿದೆ.

ಈ) ಸ್ಥಳೀಯ ಸಂಸ್ಥೆಗಳು ತಮ್ಮ ಸಂಪನ್ಮೂಲದ ಸ್ವಲ್ಪ ಭಾಗವನ್ನು ಕ್ರೀಡಾ ಚಟುವಟಿಕೆಗೆ ಮೀಸಲಾಗಿಟ್ಟು ಹಣವನ್ನು ಜಿಲ್ಲಾ ಪಂಚಾಯತ್‌ಗೆ ನೀಡಬೇಕೆಂದು ಈಗಾಗಲೇ ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ.

885(1153) ಶ್ರೀ ಯೋಗೀಶ್ ಭಟ್ ಎನ್. (ಮಂಗಳೂರು): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ದೇವಸ್ಥಾನಗಳ ಆದಾಯದ ಹಣವನ್ನು ಸ್ಥಳೀಯ ಪ್ರದೇಶ ಅಭಿವೃದ್ಧಿ ಕಾರ್ಯಗಳಿಗೆ ಬಳಸಲು ಸರ್ಕಾರ ಅನುಮತಿಸಿದೆಯೇ;

ಆ) ಹೆಚ್ಚುವರಿ ಆದಾಯವನ್ನು ದೇವಸ್ಥಾನ ಪ್ರದೇಶದಲ್ಲಿರುವ ರಸ್ತೆ, ಚರಂಡಿ, ನೈರ್ಮಲ್ಯ ವ್ಯವಸ್ಥೆ ಮುಂತಾದ ಅಭಿವೃದ್ಧಿ ಕಾರ್ಯಗಳಿಗೆ ಉಪಯೋಗಿಸಲು ಸರ್ಕಾರ ಮುಂದಾಗುವುದೇ;

ಇ) ದೇವಸ್ಥಾನಗಳ ಜೀರ್ಣೋದ್ಧಾರ ಇತ್ಯಾದಿ ಅಭಿವೃದ್ಧಿ ಕಾರ್ಯಗಳಿಗೆ ಕಳೆದ ಎರಡು ವರ್ಷಗಳಲ್ಲಿ ಸರ್ಕಾರದವರು ಮಂಜೂರು ಮಾಡಿದ ಅನುದಾನದ ಮೊತ್ತ ಮತ್ತು ಬಿಡುಗಡೆ ಮಾಡಿದ ಹಣದ ಮೊತ್ತ ಎಷ್ಟು;

ಈ) ದೇವಸ್ಥಾನಗಳಿಗೆ ಬಿಡುಗಡೆ ಮಾಡುತ್ತಿರುವ ಒಟ್ಟು ಅನುದಾನದ ಮೊತ್ತವನ್ನು ಹೆಚ್ಚು ಮಾಡುವ ಅಗತ್ಯತೆಯನ್ನು ಸರ್ಕಾರ ಮನಗಂಡಿದೆಯೇ;

ಉ) ಹೌದಾದಲ್ಲಿ, ಪ್ರಸಕ್ತ ಸಾಲಿನಲ್ಲಿ ಆ ಕುರಿತು ಕ್ರಮ ಜರುಗಿಸಲಾಗುವುದೇ?

ಶ್ರೀ ಎಂ. ಪಿ. ಪ್ರಕಾಶ್ (ಕಂದಾಯ ಸಚಿವರು) :

ಅ) ಮುಜರಾಯಿ ದೇವಾಲಯಗಳಲ್ಲಿ ಬರುವ ಆದಾಯವನ್ನು ಸ್ಥಳೀಯ ಅಭಿವೃದ್ಧಿ ಕಾರ್ಯಗಳಿಗೆ ಬಳಸಲು ಅವಕಾಶ ಇರುವುದಿಲ್ಲ.

ಆ) ಇಲ್ಲ.

ಇ) ಧಾರ್ಮಿಕ ಸಂಸ್ಥೆಗಳಿಗೆ ಕಳೆದ 2 ವರ್ಷಗಳಲ್ಲಿ ಅಭಿವೃದ್ಧಿ ಕಾರ್ಯಕ್ಕಾಗಿ ಬಿಡುಗಡೆ ಮಾಡಿದ ಅನುದಾನ ವಿವರ ಈ ಕೆಳಕಂಡಂತಿದೆ:–

(ರೂ.ಲಕ್ಷಗಳಲ್ಲಿ)

ವರ್ಷ	ದುರಸ್ತಿ ಜೀರ್ಣೋದ್ಧಾರ	ನವೀಕರಣ	ಆರಾಧನಾ
2002–03	230.00	350.00	460.00
2003.04	110.00	110.00	120.00

ಈ) ಹೌದು.

ಉ) 2005–2006ನೇ ಸಾಲಿನ ಆಯವ್ಯಯದಲ್ಲಿ ಅನುದಾನ ಹೆಚ್ಚಿಸಲು ಆರ್ಥಿಕ ಇಲಾಖೆಗೆ ಕೋರಿಕೆ ಸಲ್ಲಿಸಲಾಗುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೋತ್ತರಗಳು ದಿನಾಂಕ : 1–2–05

887(619) ಶ್ರೀ ಆಲ್ಕೋಡ್ ಹನುಮಂತಪ್ಪ (ದೇವದುರ್ಗ): ಮಾನ್ಯ ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಯಚೂರು ಜಿಲ್ಲೆ, ದೇವದುರ್ಗ ತಾಲ್ಲೂಕಿನ ಗೂಗಲ್ ಬ್ಯಾರೇಜ್ ಕಾಮಗಾರಿ ಯಾವ ವರ್ಷದಿಂದ ಪ್ರಾರಂಭವಾಗಿರುತ್ತದೆ;

ಆ) ಎಷ್ಟು ಮೊತ್ತಕ್ಕೆ ಹಾಗೂ ಯಾವ ವರ್ಷದಲ್ಲಿ ಕಾಮಗಾರಿ ಪೂರ್ಣಗೊಳಿಸಲು ಸರ್ಕಾರ ಮತ್ತು ಗುತ್ತಿಗೆದಾರರ ಮಧ್ಯೆ ಒಪ್ಪಂದವಾಗಿತ್ತು;

ಇ) ಬ್ಯಾರೇಜ್ ಕಾಮಗಾರಿ ಪೂರ್ಣಗೊಂಡಿದೆಯೇ;

ಈ) ಇಲ್ಲದಿದ್ದಲ್ಲಿ, ಕಾರಣವೇನು;

ಉ) ಇದಕ್ಕೆ ಗುತ್ತಿಗೆ ನೀಡಿದ ಹಣಕ್ಕಿಂತಲೂ ಹೆಚ್ಚುವರಿಯಾಗಿ ಹಣವನ್ನು ಗುತ್ತಿಗೆದಾರರಿಗೆ ನೀಡಿರುವುದು ನಿಜವೇ;

ಊ) ಹಾಗಿದ್ದಲ್ಲಿ, ಎಷ್ಟು ಹಣ ಹೆಚ್ಚುವರಿಯಾಗಿ ನೀಡಲಾಗಿದೆ;

ಋ) ಬ್ಯಾರೇಜ್ ಕಾಮಗಾರಿ ಮಂದಗತಿಯಲ್ಲಿ ನಡೆದಿರುವುದು ನಿಜವೇ;

ೠ) ಹಾಗಿದ್ದಲ್ಲಿ; ಇದನ್ನು ತೀವ್ರಗೊಳಿಸುವ ಪ್ರಯತ್ನ ಸರ್ಕಾರ ಮಾಡುತ್ತಿದೆಯೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು) :

ಅ) ಗೂಗಲ್ ಬ್ಯಾರೇಜ್ ಕಾಮಗಾರಿ ನವೆಂಬರ್ 2002ರಲ್ಲಿ ಪ್ರಾರಂಭವಾಗಿರುತ್ತದೆ.

ಆ) ಸದರಿ ಕಾಮಗಾರಿಯನ್ನು ರೂ. 2121.11 ಲಕ್ಷ ಗುತ್ತಿಗೆ ಮೊತ್ತಕ್ಕೆ, ನವೆಂಬರ್ 2003ರಲ್ಲಿ ಪೂರ್ಣಗೊಳಿಸಲು ಗುತ್ತಿಗೆದಾರರೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿತ್ತು.

ಇ) ಇನ್ನು ಪೂರ್ಣಗೊಂಡಿರುವುದಿಲ್ಲ.

ಈ) 1. ನದಿಯಲ್ಲಿ ಎರಡು ಬಾರಿ ಅಕಾಲಿಕ ಪ್ರವಾಹ ಬಂದಿರುವುದರಿಂದ.

2. ಕಾಮಗಾರಿ ಅಡಿಯ ಕೆಲವು ಅವಶ್ಯಕ ಐಟಂಗಳು ಮೂಲ ಅಂದಾಜಿನಲ್ಲಿ ಇಲ್ಲದಿರುವುದರಿಂದ ಅದಕ್ಕೆ ಅನುಮೋದನೆಯೊಂದಿಗೆ ಕೈಗೊಳ್ಳಬೇಕಾಗಿರುವುದರಿಂದ,

3. ಬ್ಯಾರೇಜ್ ಹತ್ತಿರ ಉದ್ದೇಶಿಸಲಾಗಿರುವ ಮಿನಿ ಹೈಡಲ್ ಯೋಜನೆ ಕುರಿತು ತಾಂತ್ರಿಕ ನಿರ್ಧಾರಗಳು ಕೈಕೊಳ್ಳಬೇಕಾಗಿರುವುದರಿಂದ, ಹಾಗೂ ಮುಂತಾದವುಗಳು.

ಉ) ಇಲ್ಲ,

ಊ) ಉದ್ಭವಿಸುವುದಿಲ್ಲ.

ಋ) ನಿಜ,

ೠ) ಕಾಮಗಾರಿಯನ್ನು ಶೀಘ್ರವಾಗಿ ಪೂರ್ಣಗೊಳಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

888(623) ಶ್ರೀ ಆಲ್ಕೋಡ್ ಹನುಮಂತಪ್ಪ (ದೇವದುರ್ಗ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಯಚೂರು ಜಿಲ್ಲೆಯ ಲಿಂಗಸಗೂರು ಮತ್ತು ದೇವದುರ್ಗ ತಾಲ್ಲೂಕಿನಲ್ಲಿ ಬಂಗಾರದ ಗಣಿಗಳು ಪ್ರಾರಂಭಿಸಿರುವುದು ನಿಜವೇ;

ಆ) ಹಾಗಿದ್ದಲ್ಲಿ ಗಣಿಯಲ್ಲಿ ಕೆಲಸ ನಿರ್ವಹಿಸುತ್ತಿರುವ ನೌಕರರ ಸಂಖ್ಯೆ ಎಷ್ಟು (ದರ್ಜೆವಾರು ವಿವರ ನೀಡುವುದು);

ಇ) ಹಾಗಿದ್ದಲ್ಲಿ, ಮೀಸಲಾತಿ ನಿಯಮವನ್ನು ಅಳವಡಿಸಲಾಗಿದೆಯೇ (ವಿವರವಾದ ದರ್ಜೆವಾರು ಮಾಹಿತಿ ನೀಡುವುದು);

ಈ) ಸದರಿ ಗಣಿಯಲ್ಲಿ ವಿ.ಆರ್.ಎಸ್. ಪಡೆದ ನೌಕರರ ಸಂಖ್ಯೆ ಎಷ್ಟು;

ಉ) ವಿ.ಆರ್.ಎಸ್. ಪಡೆದವರು ಪುನಃ ನೌಕರಿಗೆ ಹಟ್ಟಿ ಮತ್ತು ಊಟಿ ಗಣಿಗಳಲ್ಲಿ ಉದ್ಯೋಗ ಪಡೆದ ನೌಕರರ ಸಂಖ್ಯೆ ಎಷ್ಟು (ದರ್ಜೆವಾರು ಮಾಹಿತಿ ನೀಡುವುದು);

ಊ) ಅಂತಹ ನೌಕರರು ಪುನಃ ನೌಕರಿಗೆ ಸೇರಿಕೊಳ್ಳಲು ಕಾನೂನಿನಲ್ಲಿ ಅವಕಾಶವಿದೆಯೇ ಹಾಗೂ ಇದ್ದರೆ ಯಾವ ನಿಯಮದಲ್ಲಿ ಇರುತ್ತದೆ;

ಋ) ಕಳೆದ ಮೂರು ವರ್ಷಗಳಿಂದ ಹಟ್ಟಿ ಮತ್ತು ಊಟಿ ಚಿನ್ನದ ಗಣಿಯಲ್ಲಿ ಸ್ಥಳೀಯರಿಗೆ ಉದ್ಯೋಗ ನೀಡುವುದಾಗಿ ಸರ್ಕಾರ ತಿಳಿಸಿರುವುದು ನಿಜವೇ;

ಎ) ಹಾಗಿದ್ದಲ್ಲಿ, ಯಾವ ಯಾವ ತಾಲ್ಲೂಕಿನಲ್ಲಿ ಎಷ್ಟು ಜನರನ್ನು ಉದ್ಯೋಗಕ್ಕೆ ನೇಮಕ ಮಾಡಿಕೊಳ್ಳಲಾಗಿದೆ;

ಏ) ಹೂಟಿ ಚಿನ್ನದ ಗಣಿ ಗುತ್ತಿಗೆದಾರರಿಗೆ ದರಪಟ್ಟಿಗಿಂತ (ಡಿಎಸ್‌ಆರ್) ಹೆಚ್ಚುವರಿಯಾಗಿ ಪರ್‌ಕ್ಯೂಬಿಕ್ ಮೀಟರ್ ಹೆಚ್ಚು ಹಣಕ್ಕೆ ಗುತ್ತಿಗೆ ನೀಡಿರುವುದು ನಿಜವೇ;

ಐ) ಹಾಗಿದ್ದಲ್ಲಿ, ಅಂತಹ ಭ್ರಷ್ಟ ಅಧಿಕಾರಿಗಳ ವಿರುದ್ಧ ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) :

ಅ) ಹೌದು.

ಆ) ದಿನಾಂಕ 31.12.2004ರಂದು ಇದ್ದಂತೆ ನೌಕರರ/ಅಧಿಕಾರಿಗಳ ಸಂಖ್ಯೆಯು ಈ ಕೆಳಗಿನಂತಿರುತ್ತದೆ:-

ಹಟ್ಟಿ ಚಿನ್ನದ ಘಟಕ	3723
ಊಟಿ/ಹೀರಾ-ಬುದ್ದಿನ್ನಿ ಚಿನ್ನದ ಘಟಕ	307
ಒಟ್ಟು	**4030**

ದರ್ಜೆವಾರು ವಿವರಗಳನ್ನು <u>ಅನುಬಂಧ-ಅ</u> ನಲ್ಲಿ ನೀಡಲಾಗಿದೆ.

ಇ) ಕರ್ನಾಟಕ ಸರ್ಕಾರದ ನಿಯಮದನ್ವಯ ಪ.ಜಾ:ಪ.ಪಂ.ಗಳವರಿಗೆ ಮೀಸಲಾತಿ ನಿಯಮವನ್ನು ಅಳವಡಿಸಲಾಗಿದೆ.

ದರ್ಜೆವಾರು ವಿವರ <u>ಅನುಬಂಧ-ಅ</u> ನಲ್ಲಿ ನೀಡಲಾಗಿದೆ.

ಈ) ಹಟ್ಟಿ ಚಿನ್ನದ ಗಣಿಯಲ್ಲಿ ವಿ.ಆರ್.ಎಸ್.ಪಡೆದ ನೌಕರರ ಸಂಖ್ಯೆ 1071.

ಉ) ಹಟ್ಟಿ ಮತ್ತು ಊಟಿ/ಹೀರಾ-ಬುದ್ದಿನ್ನಿ ಚಿನ್ನದ ಘಟಕಗಳಲ್ಲಿ ವಿ.ಆರ್.ಎಸ್. ಪಡೆದವರಿಗೆ ಪುನಃ ನೌಕರಿ ನೀಡಲಾಗಿಲ್ಲ.

ಊಟಿ/ಹೀರಾ-ಬುದ್ದಿನ್ನಿ ಚಿನ್ನದ ಘಟಕದ ನೌಕರಿಗೆ ಸ್ವಯಂ ನಿವೃತ್ತಿ ಪಡೆದ ನುರಿತ ನೌಕರರಿಂದ ಬ್ಲಾಸ್ಟರ್ ಮತ್ತು ಟಿಂಬರಿಂಗ್ ಕೆಲಸಕ್ಕೆ ತರಬೇತಿ ನೀಡಲು 9 ಸ್ವಯಂ ನಿವೃತ್ತಿ ಯೋಜನೆ ಅಡಿಯಲ್ಲಿ ನಿವೃತ್ತಿ ಹೊಂದಿದ ನೌಕರರನ್ನು ಗುತ್ತಿಗೆ ಆಧಾರದ ಮೇಲೆ ನಿರ್ದಿಷ್ಟ ಅವಧಿಗೆ ತೆಗೆದುಕೊಳ್ಳಲಾಗಿದೆ. ಅವಧಿಯ ನಂತರ ಗುತ್ತಿಗೆಯಿಂದ ಬಿಡುಗಡೆ ಮಾಡಲಾಗುತ್ತದೆ.

ಊ) ಸ್ವಯಂ ನಿವೃತ್ತಿ ಯೋಜನೆ, 2001ರ ನಿಯಮಗಳನ್ವಯ ನಿವೃತ್ತಿ ಹೊಂದಿದ ನೌಕರರ ಸ್ಥಾನಗಳನ್ನು (ಹಣಕಾಸಿನ ಸೌಲಭ್ಯ ಪಡದವರ) ರದ್ದುಗೊಳಿಸಲಾಗಿದ್ದು ಈ ಹುದ್ದೆಗಳ ಭರ್ತಿಗೆ ಸದರಿ ನಿಯಮಗಳಡಿಯಲ್ಲಿ ಅವಕಾಶವಿರುವುದಿಲ್ಲ.

ಋ) ಡಾ. ಸರೋಜಿನಿ ಮಹಿಷಿ ವರದಿಯನ್ವಯ ಸ್ಥಳೀಯರಿಗೆ ಉದ್ಯೋಗದಲ್ಲಿ ಆದ್ಯತೆ ನೀಡಲಾಗುತ್ತಿದೆ.

ಎ) ಕಳೆದ 3 ವರ್ಷಗಳಲ್ಲಿ ನೇಮಕ ಮಾಡಿದ ತಾಲ್ಲೂಕುವಾರು ವಿವರಗಳನ್ನು <u>ಅನುಬಂಧ-ಇ</u> ನಲ್ಲಿ ನೀಡಲಾಗಿದೆ.

ಏ) ಇಲ್ಲ.

ಐ) ಉದ್ಭವಿಸುವುದಿಲ್ಲ.

ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತ

ಅನುಬಂಧ-ಅ

ಹಟ್ಟಿ ಚಿನ್ನದ ಘಟಕ		ಊಟಿ ಹೀರಾ-ಬುದ್ದಿನ್ನಿ ಚಿನ್ನದ ಘಟಕ	
ದರ್ಜೆ	ಸಂಖ್ಯೆ	ದರ್ಜೆ	ಸಂಖ್ಯೆ
ಅಧಿಕಾರಿಗಳು	124		
G-1	22	A-1	4
G-2	65	A-2	10
G-3	148	A-3	16
G-4	101	A-4	16
G-5	208	A-5	53
G-6	168	A-6	20
G-7	529	A-7	7
G-8	801	A-8	181
G-9	421		
G-10	14		
G-11	320		
G-12	802		
Total	**3723**	**Total**	**307**

ಅನುಬಂಧ - ಆ

ದರ್ಜೆವಾರು ವಿವರ

ದರ್ಜೆ	ಒಟ್ಟು ನೌಕರರ ಸಂಖ್ಯೆ	ಪ.ಜಾ.	ಪ.ಪಂ.
ಅಧಿಕಾರಿಗಳು	124	21	6
G-1	22	2	2
G-2	65	14	2
G-3	148	22	4
G-4	101	21	1
G-5	208	43	13
G-6	168	41	12
G-7	529	152	33

G-8	801	199	66
G-9	421	157	26
G-10	14	1	3
G-11	320	73	62
G-12	802	234	127
Total	**3723**	**980**	**357**
	ಊಟಿ ಹೀರಾ-ಬುದ್ದಿನ್ನಿ ಚಿನ್ನದ ಘಟಕ		
A-1	4	-	1
A-2	10	1	3
A-3	16	-	2
A-4	16	2	1
A-5	53	2	4
A-6	20	3	4
A-7	7	-	-
A-8	181	13	95
Total	**307**	**21**	**110**

ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತ

ಅನುಬಂಧ-ಇ

ರಾಯಚೂರು ಜಿಲ್ಲೆ:		**727**
ಲಿಂಗಸಗೂರು	517	
ಮಾನ್ವಿ	54	
ಸಿಂಧನೂರು	5	
ದೇವದುರ್ಗ	127	
ರಾಯಚೂರು	24	
ಕೊಪ್ಪಳ ಜಿಲ್ಲೆ:		**04**
ಕೊಪ್ಪಳ	2	
ಯಲಬುರ್ಗ	1	
ಕುಷ್ಠಗಿ	1	
ಗುಲ್ಬರ್ಗಾ ಜಿಲ್ಲೆ:		**37**
ಸುರಪುರ	32	
ಗುಲ್ಬರ್ಗಾ	1	
ಚಿತಾಪುರ	1	
ಶಹಾಪುರ	1	

ಜೇವರ್ಗಿ	1	
ಸೇಡಂ	1	
ಬಾಗಲಕೋಟೆ ಜಿಲ್ಲೆ:		**39**
ಬಾಗಲಕೋಟೆ	11	
ಮುಧೋಳ	1	
ಬೀಳಗಿ	2	
ಜಮಖಂಡಿ	2	
ಹುನಗುಂದ	20	
ಬಾದಾಮಿ	[illegible]	
ಬಿಜಾಪುರ ಜಿಲ್ಲೆ:	**13**	
ಬಿ. ಬಾಗೇವಾಡಿ	3	
ಮುದ್ದೇಬಿಹಾಳ	4	
ಇಂಡಿ	2	
ಸಿಂದಗಿ	4	
ಬೆಳಗಾವಿ ಜಿಲ್ಲೆ:	**ರಾಮದುರ್ಗ ತಾ:**	**01**
ಬೆಂಗಳೂರು ಜಿಲ್ಲೆ	**ಬೆಂಗಳೂರು ತಾ:**	**01**
ಗದಗ ಜಿಲ್ಲೆ :		**06**
ಗದಗ	03	
ರೋಣ	03	
ಬಳ್ಳಾರಿ ಜಿಲ್ಲೆ:		**05**
ಬಳ್ಳಾರಿ	01	
ಹೊಸಪೇಟೆ	01	
ಸಿರಗುಪ್ಪಾ	01	
ಸಂಡೂರು	01	
ಕೂಡ್ಲಿಗಿ	01	
ಧಾರವಾಡ ಜಿಲ್ಲೆ:	**ಹುಬ್ಬಳ್ಳಿ ತಾ:**	**01**
ಬೀದರ್ ಜಿಲ್ಲೆ:	**ಬೀದರ್ ತಾ:**	**01**
ಶಿವಮೊಗ್ಗ ಜಿಲ್ಲೆ:		**02**
ಭದ್ರಾವತಿ	01	
ಸೊರಬ	01	
ಹಾವೇರಿ ಜಿಲ್ಲೆ:	**ಹಾವೇರಿ ತಾ:**	**02**
ಕೋಲಾರ ಜಿಲ್ಲೆ:	**ಕೋಲಾರ ತಾ:**	**02**
ಒಟ್ಟು		**841**

841 ನೇಮಕಾತಿಗಳಲ್ಲಿ, ಸ್ವಯಂ ನಿವೃತ್ತಿ ಯೋಜನೆಯಲ್ಲಿ ಹಣಕಾಸಿನ ಸೌಲಭ್ಯಕ್ಕೆ ಬದಲಾಗಿ ಮಕ್ಕಳಿಗೆ ಕೆಲಸ ನೀಡಿರುವುದು 440, ಅನುಕಂಪದ ಆಧಾರದ ಮೇಲೆ 173 ನೌಕರರು, ಭದ್ರತಾ ವಿಭಾಗಕ್ಕೆ (ಮಾಜಿ ಸೈನಿಕರು) 52 ನೌಕರರು, 12 ಪೂರ್ಣಗೊಂಡ ನೌಕರರ ಪುನರ್ ನೇಮಕ, 70 ಭೂಮಿ ಕಳೆದುಕೊಂಡವರಿಗೆ ಮತ್ತು ಸ್ಥಳೀಯರಿಗೆ, 94 ನೇರ ನೇಮಕಾತಿಗೊಂಡ ನೌಕರರು.

890(1522 ಡಾ|| ಅನ್ನದಾನಿ ಕೆ. (ಮಳವಳ್ಳಿ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ಮಹಾನಗರದಲ್ಲಿ ಹೆಚ್ಚುತ್ತಿರುವ ಅಪರಾಧಗಳ ಪ್ರಮಾಣವನ್ನು ನಿಯಂತ್ರಿಸುವಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು;

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) :

ಅ) ಅಪರಾಧಗಳನ್ನು ತಡೆಗಟ್ಟಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.

1. ಹಗಲು ರಾತ್ರಿ ಗಸ್ತು ವ್ಯವಸ್ಥೆಯನ್ನು ಠಾಣಾ ವ್ಯಾಪ್ತಿಯಲ್ಲಿ ಬಿಗಿಗೊಳಿಸಲಾಗಿದೆ.
2. ಚೇತಾ ಮತ್ತು ಹೊಯ್ಸಳ ವಾಹನಗಳ ಗಸ್ತು ವ್ಯವಸ್ಥೆ ಹಗಲು ಮತ್ತು ರಾತ್ರಿ ಮಾಡಲಾಗುತ್ತಿದೆ.
3. ಅಪರಾಧಗಳನ್ನು ಎಸಗುವ ಎಂ.ಓ. ಕ್ರಿಮಿನಲ್‌ಗಳ ಪತ್ತೆ ಹಚ್ಚಿ ಪ್ರಶ್ನಿಸಿ ಕ್ರಮ ಕೈಗೊಳ್ಳಲಾಗುತ್ತಿದೆ.
4. ನಾಕಾಬಂದಿ ಕಾರ್ಯಕ್ರಮ ನಡೆಸುತ್ತಿದ್ದು ಅಪರಾಧಿಗಳನ್ನು ಪತ್ತೆ ಹಚ್ಚಲಾಗುತ್ತಿದೆ.
5. ಹಿರಿಯ ನಾಗರೀಕರನ್ನು ಗುರುತಿಸಿ ಅವರ ಮನೆಗಳ ಬಳಿ ವಿಶೇಷ ಗಸ್ತು ವ್ಯವಸ್ಥೆ ಮಾಡಲಾಗಿದ್ದು ಈ ಬೀಟ್ ವ್ಯವಸ್ಥೆ ಹಾಕಲಾಗಿದೆ.
6. ರೌಡಿ ಚಟುವಟಿಕೆಗಳ ಮೇಲೆ ಸದಾ ನಿಗಾವಹಿಸಿ ಅವರಿಂದ ಯಾವುದೇ ಅಪರಾಧಗಳು ಕಾನೂನು ಬಾಹಿರ ಚಟುವಟಿಕೆಗಳು ನಡೆಯದಂತೆ ಮುನ್ನೆಚ್ಚರಿಕೆ ವಹಿಸಲಾಗಿದೆ.
7. ಪೊಲೀಸ್ ಇನ್ಸ್‌ಪೆಕ್ಟರ್, ಎಸಿಪಿ. ಹಾಗೂ ಡಿಸಿಪಿ ರವರುಗಳಿಗೆ ಪ್ರತಿರಾತ್ರಿ ಸರದಿ ಮೇರೆಗೆ ರಾತ್ರಿಗಸ್ತು ನಡೆಯುತ್ತಿದೆ.

892(154) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ತೀರ್ಥಹಳ್ಳಿ ಪಟ್ಟಣದ ಹೊರ ವಲಯದಲ್ಲಿ ಅಕ್ರಮವಾಗಿ ಕಲ್ಲು ಬಂಡೆಯ ಗಣಿಗಾರಿಕೆ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಬಗ್ಗೆ ಇಲಾಖಾ ಮುಖ್ಯಸ್ಥರ ಗಮನಕ್ಕೆ ತಂದಿದ್ದರೂ, ನಿರ್ದೇಶಕರಿಗೆ ಪತ್ರ ಬರೆದಿದ್ದರೂ, ಕೂಡ ಕಟ್ಟು ನಿಟ್ಟಿನ ಕ್ರಮ ಕೈಗೊಳ್ಳದೆ ಇನ್ನೂ ಮುಂದುವರಿಸಿರುವುದಕ್ಕೆ ಕಾರಣಗಳೇನು;

ಇ) ಈ ಪ್ರದೇಶದಲ್ಲಿ ಕಂದಾಯ ಇಲಾಖೆ ಹಾಗೂ ಭೂವಿಜ್ಞಾನ ಇಲಾಖೆ ಜೊತೆಗೂಡಿ ಜಂಟಿ ಸರ್ವೆ ಕಾರ್ಯ ನಡೆಸಲು ಆದೇಶವಾಗಿದೆಯೇ; ಮಾಡದಿದ್ದಲ್ಲಿ, ಯಾವಾಗ ಮಾಡಲಾಗುವುದು; ಇನ್ನೂ ಸರ್ವೆ ಕಾರ್ಯ ನಡೆಸದಿರಲು ಕಾರಣಗಳೇನು;

ಈ) ಸರ್ಕಾರ ಈ ಪ್ರಕರಣಗಳಲ್ಲಿ ಒತ್ತಡಕ್ಕೆ ಮಣಿದು ಕ್ರಮ ಕೈಗೊಳ್ಳಲು ಹಿಂಜರಿಯುತ್ತಿದೆಯೇ; ಗಣಿಗಾರಿಕೆ ನಡೆಸಲು ಅನುಮತಿ ನೀಡುವಂತೆ ನಿರ್ದೇಶಕರಿಗೆ ಯಾರಾದರೂ ಪತ್ರ ಬರೆದಿದ್ದಾರೆಯೇ (ವಿವರ ನೀಡುವುದು);

ಉ) ಸರ್ಕಾರ ಈ ಪ್ರಕರಣದಲ್ಲಿ ತಕ್ಷಣ ಕಟ್ಟು ನಿಟ್ಟಿನ ಕ್ರಮ ಕೈಗೊಳ್ಳುವುದೇ?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) :

ಅ) ಬಂದಿದೆ.

ಆ) ತೀರ್ಥಹಳ್ಳಿ ಪಟ್ಟಣದ ಹೊರ ವಲಯದ ಕುರುವಳ್ಳಿ ಹಾಗೂ ಬಲ್ಲಾಪುರ ಗ್ರಾಮದಲ್ಲಿನ ಅಕ್ರಮ ಗಣಿಗಾರಿಕೆಗಳನ್ನು ತಡೆಗಟ್ಟಲು ಕ್ರಮ ಕೈಗೊಂಡಿದ್ದು, ಆಪಾದಿತರಿಂದ ರೂ. 16,500-00 ದಂಡ ವಸೂಲಿ ಮಾಡಲಾಗಿದೆ. ಅನಂತರ ಸದರಿ ಪ್ರದೇಶದಲ್ಲಿ 12 ಜನರಿಗೆ ಒಟ್ಟು 29.20 ಪ್ರದೇಶದಲ್ಲಿ ಗುತ್ತಿಗೆ ನೀಡಲಾಗಿದೆ. ಉಳಿದ ಪ್ರದೇಶಕ್ಕೆ ಸಹ ಮೂವರಿಂದ ಅರ್ಜಿ ಪಡೆದಿದ್ದು ಅದು ಪರಿಶೀಲನೆ ಹಂತದಲ್ಲಿದೆ.

ಇ) ಹೌದು, ಜಂಟಿ ಸಮೀಕ್ಷಾ ಕಾರ್ಯ ಕೈಗೊಳ್ಳಲು ಸರ್ವೆ ಇಲಾಖೆಯ ಸಹಯೋಗದೊಂದಿಗೆ ಕ್ರಮ ವಹಿಸಲಾಗುವುದು.

ಈ) ಮೇಲಿನಂತೆ ಕ್ರಮ ವಹಿಸಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಉ) ಸಂಬಂಧಪಟ್ಟ ಅಧಿಕಾರಿಗಳಿಗೆ ಈಗಾಗಲೇ ಆದೇಶಿಸಿದೆ.

894(1084) ಶ್ರೀ ಅಪ್ಪಾಸಾಹೇಬ್ (ಅಪ್ಪು) ಮಲ್ಲಪ್ಪ ಪಟ್ಟಣ ಶೆಟ್ಟಿ (ಬಿಜಾಪುರ): ಮಾನ್ಯ ಪೌರಾಡಳಿತ ಹಾಗೂ ಕೆಯುಐಡಿಎಫ್‌ಸಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಸ್ಥಳೀಯ ಸಂಸ್ಥೆಗಳಲ್ಲಿ ಸ್ವಯಂ ಘೋಷಿತ ಆಸ್ತಿ ತೆರಿಗೆ ಪದ್ಧತಿಯನ್ನು ಜಾರಿಗೆ ತರಲಾಗಿದೆಯೇ; ಹಾಗಿದ್ದಲ್ಲಿ, ಯಾವಾಗಿನಿಂದ ಜಾರಿಗೆ ತರಲಾಗಿದೆ;

ಆ) ಈ ಪದ್ಧತಿಗೆ ಸಾರ್ವಜನಿಕರಿಂದ ವಿರೋಧ ವ್ಯಕ್ತವಾಗಿದೆಯೇ;

ಇ) ಹಾಗಿದ್ದಲ್ಲಿ, ಈ ಪದ್ಧತಿಯಲ್ಲಿನ ನ್ಯೂನ್ಯತೆಗಳನ್ನು ಸರಿಪಡಿಸಿ ಸರಳೀಕರಣಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಎಸ್. ಆರ್. ಮೋರೆ (ಪೌರಾಡಳಿತ ಹಾಗೂ ಕೆಯುಐಡಿಎಫ್‌ಸಿ ಸಚಿವರು):

ಅ) ಹೌದು, 2002-2003 ಸಾಲಿನಿಂದ.

ಆ) ಬಹುತೇಕ ಸಾರ್ವಜನಿಕರು ಈ ಪದ್ಧತಿಯಂತೆ ತೆರಿಗೆ ಪಾವತಿ ಮಾಡುತ್ತಿದ್ದಾರೆ. ಕೆಲವು ತೆರಿಗೆದಾರರಿಂದ ಮಾತ್ರ ವಿರೋಧ ವ್ಯಕ್ತವಾಗಿರುತ್ತದೆ.

ಇ) ಈ ಪದ್ಧತಿಯನ್ನು ಇನ್ನಷ್ಟು ಸುಲಭಗೊಳಿಸಲು ಹಾಗೂ ಜನಪ್ರಿಯಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

896(1721) ಶ್ರೀ ಅಪ್ಪಸಾಹೇಬ್ (ಅಪ್ಪು) ಮಲ್ಲಪ್ಪ ಪಟ್ಟಣಶೆಟ್ಟಿ(ಬಿಜಾಪುರ) : ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮುಳುವಾಡ ಏತ ನೀರಾವರಿಗಾಗಿ 'ಎ' ಮತ್ತು 'ಬಿ' ಯೋಜನೆಯಡಿ ಸರ್ಕಾರ ಕೈಗೊಂಡ ಕಾಮಗಾರಿಗಳು ಯಾವುವು ;

ಆ) ಈ ಕಾಮಗಾರಿಗಳಿಗೆ ಬಿಡುಗಡೆಯಾದ ವೆಚ್ಚ ಮಾಡಿರುವ ಹಣ ಎಷ್ಟು ;

ಇ) ಈ ಕಾಮಗಾರಿಗಳು ಈಗ ಯಾವ ಹಂತದಲ್ಲಿವೆ;

ಈ) ಈ ಕಾಮಗಾರಿಗಳನ್ನು ಯಾವಾಗ ಪೂರ್ಣಗೊಳಿಸಲಾಗುವುದು;

ಉ) ಸದರಿ ಕಾಮಗಾರಿಗಳ ಗುತ್ತಿಗೆದಾರರು ಯಾರು ಯಾರು ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು) :

ಅ) ಮುಳವಾಡ ಏತ ನೀರಾವರಿ ಸ್ಕೀಂ 'ಎ' ಅಡಿ ನಿಗಧಿತ ಕಾಮಗಾರಿಗಳನ್ನು ಮಾತ್ರ ಕೈಗೆತ್ತಿಕೊಳ್ಳಲಾಗಿದೆ. ಸದರಿ ಯೋಜನೆಯಿಂದ 30,850 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಅವಶ್ಯವಿರುವ ಹೆಡ್ ವರ್ಕ್ಸ್ ಹಾಗೂ ಕಾಲುವೆ ಜಾಲದ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿರುತ್ತದೆ. ಸ್ಕೀಂ 'ಬಿ' ಅಡಿಯ ಯೋಜನೆ ಕಾಮಗಾರಿಗಳನ್ನು ಕೈಗೆತ್ತಿಕೊಂಡಿರುವುದಿಲ್ಲ;

ಆ) ಮುಳವಾಡ ಏತ ನೀರಾವರಿ ಸ್ಕೀಂ 'ಎ' ಕಾಮಗಾರಿಗಳ ಅಂದಾಜು ವೆಚ್ಚ ರೂ. 271.00 ಕೋಟಿ ಹಾಗೂ ಡಿಸೆಂಬರ್ 2004 ಅಂತ್ಯಕ್ಕೆ ವೆಚ್ಚ ಮಾಡಲಾದ ಹಣ ರೂ. 152.00 ಕೋಟಿ.

ಇ) ಯೋಜನೆಯ ಮೊದಲನೇ ಮುಖ್ಯ ಸ್ಥಾವರ ಹಾಗೂ ಲೀಡ್ ಆಫ್ ಕೆನಾಲ್ ಕಾಮಗಾರಿ ಪೂರ್ಣಗೊಂಡಿರುತ್ತವೆ. ಎರಡನೇ ಮುಖ್ಯ ಸ್ಥಾವರದ ಪಂಪ್ ಅಳವಡಿಕೆ ಕಾಮಗಾರಿಗಳು ಪ್ರಗತಿಯಲ್ಲಿವೆ. ಯೋಜನೆಯ 17.50 ಕಿ.ಮೀ. ಉದ್ದದ ಪೂರ್ವ ಕಾಲುವೆ ಪೂರ್ಣಗೊಂಡಿದ್ದು, ಅದರಡಿಯ 6 ವಿತರಣಾ ಕಾಲುವೆಗಳ ಪೈಕಿ 5 ಮುಕ್ತಾಯದ ಹಂತದಲ್ಲಿವೆ. 78 ಕಿ.ಮೀ. ಉದ್ದದ ಪಶ್ಚಿಮ ಕಾಲುವೆ ಮತ್ತು ಅದರಡಿಯ ವಿತರಣಾ ಕಾಲುವೆ 1 ರಿಂದ 11ರವರೆಗೆ ಕಾಮಗಾರಿಗಳು ವಿವಿಧ ಹಂತದಲ್ಲಿ ಪ್ರಗತಿಯಲ್ಲಿವೆ. ವಿತರಣಾ ಕಾಲುವೆ 12 ರಿಂದ 42 ರವರೆಗೆ ಕಾಮಗಾರಿಗಳಿಗಾಗಿ ಅಂದಾಜು ಪತ್ರಿಕೆ ತಯಾರಿಸಲಾಗಿದ್ದು, ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಕ್ರಮ ಜರುಗಿಸಲಾಗುತ್ತಿದೆ.

ಈ) ಯೋಜನೆಯ ಎಲ್ಲಾ ಕಾಮಗಾರಿಗಳನ್ನು ಮಾರ್ಚ್ 2006ರ ಅಂತ್ಯಕ್ಕೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ಉ) ಯೋಜನೆಯ ಕಾಮಗಾರಿಗಳನ್ನು ನಿರ್ವಹಿಸುತ್ತಿರುವ ಗುತ್ತಿಗೆದಾರರ ಹೆಸರುಗಳ ಪಟ್ಟಿಯನ್ನು ಲಗತ್ತಿಸಲಾಗಿದೆ.

898(1541) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಂಗಳೂರು ದೊಡ್ಡ ಬೊಮ್ಮಸಂದ್ರ, ನಂಜಪ್ಪ ಸರ್ಕಲ್ ಹಾಗೂ ವಿದ್ಯಾರಣ್ಯಪುರಕ್ಕೆ ಹೋಗುವ ಬೆಂಗಳೂರಿನ ಮಹಾನಗರ ಸಾರಿಗೆ ಸಂಸ್ಥೆಯ ಸಾಯಂಕಾಲ ಬಸ್ಸುಗಳ ಅಭಾವ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಈ ಪ್ರದೇಶದ ಪ್ರಯಾಣಿಕರಿಗೆ ಆಗುತ್ತಿರುವ ಅನಾನುಕೂಲ ತಪ್ಪಿಸಲು ಬಸ್ಸುಗಳ ಸಂಖ್ಯೆ ಹೆಚ್ಚಿಸಲು ಸರ್ಕಾರ ಸೂಕ್ತ ಕ್ರಮ ಕೈಗೊಳ್ಳುವುದೇ ?

ಇ) ಪ್ರತಿದಿನ ಬೆಳಗ್ಗೆ ವಿದ್ಯಾರಣ್ಯಪುರದಿಂದ ವಿಧಾನಸೌಧಕ್ಕೆ ಇನ್ನೊಂದು ಬಸ್ ಸೇವೆಯನ್ನು ಒದಗಿಸಲಾಗುವುದೇ ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಇಂಧನ ಸಚಿವರು) :

ಅ) ಹೌದು.

ಆ) ಹೌದು.

ಇ) ಹೌದು.

899(1542) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಪೌರಾಡಳಿತ ಹಾಗೂ ಕೆಯುಐಡಿಎಫ್‌ಸಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸ್ವಯಂ ಘೋಷಿತ ಆಸ್ತಿ ತೆರಿಗೆ ಪದ್ಧತಿ ಜಾರಿಗೆ ಬಂದ ಮೇಲೆ ಆದಾಯ ಜಾಸ್ತಿ ಆಗಿದೆಯೇ ;

ಆ) ಹಾಗಿದ್ದಲ್ಲಿ, ಜಾಸ್ತಿ ಆದಾಯ ಎಷ್ಟು (ಪಟ್ಟಣ ವ್ಯಾಪ್ತಿಯಲ್ಲಿರುವ ಸ್ಥಳೀಯ ಸಂಸ್ಥೆಗಳ ವಿವರ ನೀಡುವುದು);

ಇ) ಅಕ್ಟ್ರಾಯ್ ಸುಂಕ ರದ್ದಾದನಂತರ ಇದಕ್ಕೆ ಪರ್ಯಾಯವಾಗಿ ಸ್ಥಳೀಯ ಸಂಸ್ಥೆಗಳಿಗೆ ನೀಡಲಾಗುತ್ತಿದ್ದ ಅನುದಾನವನ್ನು ಈಗ ನೀಡಲಾಗುತ್ತಿದೆಯೇ; ನೀಡಲಾಗುತ್ತಿದ್ದರೆ, ಇದರ ಮೊತ್ತ ಎಷ್ಟು ;

ಈ) ಅಕ್ಟ್ರಾಯ್ ರದ್ದಾದ ನಂತರ ಇದಕ್ಕೆ ಪರ್ಯಾಯವಾಗಿ ಮಾರಾಟ ತೆರಿಗೆಯ ಮೇಲೆ ಸರ್‌ಚಾರ್ಜ್ ವಿಧಿಸಿ ಆ ಮೂಲಕ ವಸೂಲು ಮಾಡುತ್ತಿರುವ ಮೊತ್ತ ಎಷ್ಟು ; ಇದರಲ್ಲಿ ಸ್ಥಳೀಯ ಸಂಸ್ಥೆಗಳಿಗೆ ನೀಡುತ್ತಿರುವ ಪಾಲು ಎಷ್ಟು ;

ಉ) ಒಂದು ವೇಳೆ ಪರ್ಯಾಯ ಅನುದಾನ ನೀಡುತ್ತಿಲ್ಲವಾದಲ್ಲಿ ಈ ಹಣವನ್ನು ಯಾವ ಬಾಬ್ತಿಗೆ ವಿನಿಯೋಗಿರಸಲಾಗುತ್ತಿದೆ ?

ಶ್ರೀ ಎಸ್.ಆರ್. ಮೋರೆ (ಪೌರಾಡಳಿತ ಹಾಗೂ ಕೆಯುಐಡಿಎಫ್‌ಸಿ ಸಚಿವರು) :

ಅ) ಹೌದು

ಆ) ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಶೇ.50 ರಿಂದ 100 ರಷ್ಟು ಆದಾಯ ಹೆಚ್ಚುವರಿಯಾಗಿದೆ.

ಇ) ಹೌದು, 2004-05ರಲ್ಲಿ ರೂ. 797.06 ಕೋಟಿಗಳಷ್ಟು .

ಈ) ಮಾರಾಟ ತೆರಿಗೆ ಮೇಲೆ ಅಕ್ಟ್ರಾಯ್ ಪರ್ಯಾಯವಾಗಿ ಸರ್ ಚಾರ್ಜ್ ವಿಧಿಸುವ ವಿಷಯ ನಗರಾಭಿವೃದ್ಧಿ ಇಲಾಖೆಯ ವ್ಯಾಪ್ತಿಗೆ ಬರುವುದಿಲ್ಲ. ಸರ್ಕಾರವು ರಾಜ್ಯ ಹಣಕಾಸು ಆಯೋಗದ ಶಿಫಾರಸ್ಸಿನಂತೆ ಒಟ್ಟಾರೆ ರಾಜ್ಯದ, ಆದಾಯದಲ್ಲಿ (NLGOR) ಶೇಕಡ 5.4 ರಷ್ಟು ನಗರ ಸ್ಥಳೀಯ ಸಂಸ್ಥೆಗಳಿಗೆ ಬಿಡುಗಡೆ ಮಾಡಲಾಗುತ್ತಿದೆ.

ಉ) ಉದ್ಭವಿಸುವುದಿಲ್ಲ.

900(1477) ಶ್ರೀ ಅಶೋಕ ಗುರಪ್ಪ ಶಾಬಾದಿ(ಸಿಂಧಗಿ) : ಮಾನ್ಯ ಜಲಸಂಪನ್ಮೂಲ ಹಾಗೂ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸಿಂಧಗಿ ತಾಲ್ಲೂಕಿನ ಚಿಮ್ಮಲಗಿ ಏತ ನೀರಾವರಿ ಯೋಜನೆಗೆ ಸರ್ಕಾರ ಮೀಸಲಿಟ್ಟ ಅನುದಾನವೆಷ್ಟು :

ಆ) ಸದರಿ ಯೋಜನೆಯು ಈಗ ಯಾವ ಹಂತದಲ್ಲಿದೆ ;

ಇ) ಸಿಂಧಗಿ ತಾಲ್ಲೂಕಿನ ಎಷ್ಟು ಹೆಕ್ಟೇರ್ ಪ್ರದೇಶವನ್ನು ಈ ಯೋಜನೆಯು ವ್ಯಾಪ್ತಿಗೊಳಪಡಿಸಲಾಗಿದೆ (ಗ್ರಾಮಾವಾರು ವಿವರ ನೀಡುವುದು) ;

ಈ) ಸದರಿ ಯೋಜನೆಯ ಕಾಮಗಾರಿಯನ್ನು ತ್ವರಿತಗತಿಯಲ್ಲಿ ಪೂರೈಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು) :

ಅ) ಚಿಮ್ಮಲಗಿ ಏತ ನೀರಾವರಿ ಯೋಜನೆಯು ಸ್ಕೀಂ–'ಬಿ' ಅಡಿಯಲ್ಲಿ ಪ್ರಸ್ತಾವನೆ ಇದ್ದು, ಸಧ್ಯ ಈ ಯೋಜನೆಯ ಕಾಮಗಾರಿಗಳಿಗೆ ಯಾವುದೇ ಅನುದಾನ ಮೀಸಲಾಗಿಟ್ಟಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಮೇಲಿನಂತೆ.

901(1478) ಶ್ರೀ ಅಶೋಕ ಗುರಪ್ಪ ಶಾಬಾದಿ(ಸಿಂಧಗಿ) : ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಇಂಡಿ ಏತ ನೀರಾವರಿ ಯೋಜನೆ ಕಾಮಗಾರಿಯನ್ನು ಪೂರೈಸಲು ಸರ್ಕಾರವು ನಿಗಧಿಗೊಳಿಸಿರುವ ಕಾಲಮಿತಿಯೇನು ;

ಆ) ಈ ಕಾಮಗಾರಿಯು ಅತ್ಯಂತ ಮಂದಗತಿಯಲ್ಲಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಇ) ಸದರಿ ಯೋಜನೆಯ ವ್ಯಾಪ್ತಿಗೆ ಒಳಪಟ್ಟ ರೈತರಿಗೆ ನೀರು ಒದಗಿಸಲು ಯೋಜನೆ ರೂಪಿಸುವುದು ಯಾವಾಗ ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು) :

ಅ) ಸದರಿ ಯೋಜನೆಯುನ್ನು ಮಾರ್ಚ್ 2006 ರೊಳಗೆ ಪೂರ್ಣಗೊಳಿಸಲು ಯೋಜಿಸಲಾಗಿದೆ.

ಆ) ಯೋಜನೆಯ ಜಾಕ್‌ವೆಲ್, ಮುಖ್ಯ ಕಾಲುವೆ, ವಿತರಣಾ ಕಾಲುವೆ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. ವಿತರಣಾ ಕಾಲುವೆ ಜಾಲದ ಉಳಿದ ಕಾಮಗಾರಿಗಳಿಗಾಗಿ ಅಂದಾಜು ಪತ್ರಿಕೆಗಳು ತಯಾರಿಸಲಾಗಿದ್ದು, ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ಸದರಿ ಯೋಜನೆ ವ್ಯಾಪ್ತಿಗೆ ಬರುವ 41,900 ಹೆ. ಪ್ರದೇಶಕ್ಕೆ ಮಾರ್ಚ್ 2006 ರೊಳಗೆ ನೀರಾವರಿ ಸೌಲಭ್ಯ ಕಲ್ಪಿಸಲು ಉದ್ದೇಶಿಸಲಾಗಿದೆ.

903(172) ಶ್ರೀ ಆರ್. ಅಶೋಕ್ (ಉತ್ತರಹಳ್ಳಿ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಂಗಳೂರು ಸುತ್ತಮುತ್ತಲಿನ ಏಳು ನಗರಸಭೆಯ ವ್ಯಾಪ್ತಿಯ ಕಾವೇರಿ ನೀರಿನ ಸರಬರಾಜು ಕಾಮಗಾರಿಗಳ ಸಂದರ್ಭದಲ್ಲಿ ಟೆಂಡರ್ ಕರೆದಿರುವುದು ನಿಜವೆ .

ಆ) ಹಾಗಿದ್ದಲಿ ಕಾಮಗಾರಿಗಳು ಪ್ರಾರಂಭವಾಗದಿರಲು ಕಾರಣವೇನು ?

ಇ) ಈ ಯೋಜನೆಗೆ ತಗಲುವ ವೆಚ್ಚ ಎಷ್ಟು ?

ಈ) ಯಾವಾಗ ಈ ಕಾಮಗಾರಿಗಳನ್ನು ಪ್ರಾರಂಭ ಮಾಡಲಾಗುವುದು ?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಯವರು) :

ಅ) ಹೌದು.

ಆ) ಕಾಮಗಾರಿಗಳ ಬಗ್ಗೆ ಟೆಂಡರ್‌ಗಳನ್ನು ಕರೆಯಲಾಗಿದ್ದು, ಈ ಟೆಂಡರ್‌ಗಳ ಸ್ವೀಕೃತಿಯ ಕೊನೆಯ ದಿನಾಂಕ : 14–2–2005 ಆಗಿರುತ್ತದೆ.

ಇ) ಈ ಯೋಜನೆಯ ಅಂದಾಜು ವೆಚ್ಚ ರೂ. 340.55 ಕೋಟಿಗಳು.

ಈ) ಕಾಮಗಾರಿಗಳನ್ನು ಮಾರ್ಚ್, ಏಪ್ರಿಲ್, 2005 ಅವಧಿಯೊಳಗೆ ಪ್ರಾರಂಭ ಮಾಡಲು ಉದ್ದೇಶಿಸಲಾಗಿದೆ.

906(178) ಶ್ರೀ ಅಶೋಕ್ ಆರ್.(ಉತ್ತರಹಳ್ಳಿ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಂಗಳೂರು ನಾಗರಭಾವಿಯಲ್ಲಿರುವ ವಿನಾಯಕ ಸೊಸೈಟಿ ಬಡಾವಣೆಗೆ ನಕ್ಷೆಯನ್ನು ಎರಡು ಬಾರಿ ಮಂಜೂರು ಮಾಡಲಾಗಿದೆಯೇ ;

ಆ) ನಕ್ಷೆ ಮಂಜೂರಾತಿಯಿಂದ ನಾಗರೀಕ ಸೌಕರ್ಯಕ್ಕಾಗಿರುವ (ಸಿವಿಕ್ಸ್ ಅಮಿನೀಟಸ್) ಜಾಗವನ್ನು ಬಡಾವಣೆಗಳಾಗಿ ನಿರ್ಮಾಣ ಮಾಡಿರುವಂತದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಇ) ಈ ಅಕ್ರಮವನ್ನು ಸರಿಪಡಿಸಲು ಕೈಗೊಂಡ ಕಾನೂನು ಕ್ರಮವೇನು ?

ಶ್ರೀ ಧರ್ಮಸಿಂಗ್(ಮುಖ್ಯಮಂತ್ರಿಗಳು) :

ಅ) ಹೌದು.

ಆ) ಬಂದಿದೆ.

ಇ) ಡಬ್ಲ್ಯೂ.ಪಿ.ಸಂಖ್ಯೆ : 31575/2003 ಮಾನ್ಯ ಉಚ್ಚ ನ್ಯಾಯಾಲಯದ ಮುಂದೆ ಬಾಕಿ ಇರುತ್ತದೆ. ನ್ಯಾಯಾಲಯದ ಮಧ್ಯಂತರ ತೀರ್ಪಿನ ಅನ್ವಯ 2003ರಲ್ಲಿ ಅನುಮತಿಸಲಾಗಿದ್ದು, ಮಾರ್ಪಡಿತ ಬಡಾವಣೆ ನಕ್ಷೆಯನ್ನು ರದ್ದುಪಡಿಸಲಾಗಿರುತ್ತದೆ. 1992ರಲ್ಲಿ ಅನುಮೋದಿಸಿರುವ ಬಡಾವಣೆ ನಕ್ಷೆಯಲ್ಲಿ ಸಿ.ಎ. ಮತ್ತು ಉದ್ಯಾನವನಕ್ಕೆ ಮೀಸಲಾಗಿಟ್ಟಿರುವ ಪ್ರದೇಶಗಳಲ್ಲಿ ಯಾವುದೇ ಕಟ್ಟಡಗಳಿಗೆ ಅನುಮತಿ ನೀಡಬಾರದೆಂದು ಶ್ರೀ ರಾಜರಾಜೇಶ್ವರಿ ನಗರಸಭೆಗೆ ತಿಳಿಸಲಾಗಿರುತ್ತದೆ. 1992ರಲ್ಲಿ ಅನುಮೋದಿಸಿರುವ ಬಡಾವಣೆ ನಕ್ಷೆಯನ್ನು ಉಲ್ಲಂಘಿಸಿರುವ ಹಿನ್ನೆಲೆಯಲ್ಲಿ ಸಂಘದ ವಿರುದ್ಧ ಕ್ರಮ ಜರುಗಿಸಲಾಗಿದೆ.

907(1176) ಶ್ರೀ ಬಾದರ್ಲಿ ಹಂಪನಗೌಡ (ಸಿಂಧನೂರು) : ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಭದ್ರಾ ಅಣೆಕಟ್ಟು ವ್ಯಾಪ್ತಿಯಲ್ಲಿ ಖಾಸಗಿಯವರಿಂದ ವಿದ್ಯುತ್ ಉತ್ಪಾದನೆ ಮಾಡಲು ಅನುಮತಿ ನೀಡಲಾಗಿದೆಯೇ ನೀಡಿದ್ದರೆ ಯಾವ ಖಾಸಗಿ ಕಂಪನಿಗೆ ಅನುಮತಿ ನೀಡಲಾಗಿದೆ ;

ಆ) ಈ ವಿದ್ಯುತ್ ಉದ್ಪಾದನೆ ಯೋಜನೆಯಿಂದ ಪರಿಸರಕ್ಕೆ ಹಾಗೂ ಅಣೆಕಟ್ಟೆಗೆ ಹಾನಿಯಾಗುವ ಬಗ್ಗೆ ಅಂದಾಜು ಮಾಡಲಾಗಿದೆಯೇ ;

ಇ) ಹಾಗಿದ್ದಲ್ಲಿ, ಇದರ ನಿವಾರಣೆಗೆ ಕೈಗೊಂಡ ಮುಂಜಾಗ್ರತಾ ಕ್ರಮಗಳೇನು ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು) :

ಅ) ಭದ್ರಾ ಜಲಾಶಯದ ವ್ಯಾಪ್ತಿಯಲ್ಲಿ ಖಾಸಗಿ ಕಂಪನಿಯಾದ ಮೆ: ಅರುಣ್ ಇಂಜಿನಿಯರಿಂಗ್ ಪ್ರಾಜೆಕ್ಟ್ ಪ್ರೈ.ಲಿಮಿಟೆಡ್, ಬೆಂಗಳೂರು ಇವರಿಗೆ ವಿದ್ಯುತ್ ಉತ್ಪಾದನೆ ಮಾಡಲು ಅನುಮತಿ ನೀಡಲಾಗಿದೆ.

ಆ) ಸದರಿ ಸಂಸ್ಥೆಯವರಿಗೆ ಪರಿಸರ ಇಲಾಖೆಯಿಂದ ನಿರಾಕ್ಷೇಪಣ ಪತ್ರ ಪಡೆಯಲು ಇಂಧನ ಇಲಾಖೆಯು ಸೂಚಿಸಿದೆ.

ಈ ಯೋಜನೆಯನ್ನು ಭದ್ರಾ ಜಲಾಶಯದ ಎಡಭಾಗದಲ್ಲಿನ ಸ್ಯಾಡಲ್ ನಂ.1ರ ಬಲಭಾಗದ ತುದಿಯಲ್ಲಿ ನಿರ್ಮಿಸಲು ಉದ್ದೇಶಿಸಿದ್ದು ಈ ಕೆಲಸವನ್ನು ಸ್ಯಾಡಲ್ ಹಾಗೂ ಅಣೆಕಟ್ಟಿನ ಕಟ್ಟಡಗಳಿಗೆ ಯಾವುದೇ ಹಾನಿಯಾಗದಂತೆ ಮಾಡಲು ಜಲ ಸಂಪನ್ಮೂಲ ಇಲಾಖೆಯು ಷರತ್ತು ವಿಧಿಸಿದೆ.

908(1392) ಶ್ರೀ ಬಾಲಕೃಷ್ಣ ಹೆಚ್.ಸಿ. (ಮಾಗಡಿ) ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮಾಗಡಿ ತಾಲ್ಲೂಕಿಗೆ ಹೇಮಾವತಿ ನೀರನ್ನು ತರುವ ಯೋಜನೆಯು ಯಾವ ಹಂತದಲ್ಲಿದೆ, ಇದರ ಬಗ್ಗೆ ಸಂಪೂರ್ಣ ಮಾಹಿತಿ ನೀಡುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು) :

ಅ) ಹೇಮಾವತಿ ಯೋಜನೆಯ ಎಡದಂಡೆ ನಾಲೆಯ ತುಮಕೂರು ಶಾಖಾ ಕಾಲುವೆಯ 190ನೇ ಕಿ.ಮೀ.ನಲ್ಲಿ 0.60 ಟಿ.ಎಂ.ಸಿ. ನೀರನ್ನು ಏತ ನೀರಾವರಿ ಮೂಲಕ ಮಾಗಡಿ ತಾಲ್ಲೂಕು ಹಾಗೂ ಸುತ್ತಮುತ್ತಲಿನ ಕೆರೆಗಳಿಗೆ ನೀರೊದಗಿಸಲು ಶ್ರೀರಂಗ ಏತ ನೀರಾವರಿ ಯೋಜನೆಗೆ ಅಂದಾಜು ಮೊತ್ತ ರೂ. 96 ಕೋಟಿಗಳಿಗೆ ತಯಾರಿಸಲಾಗಿದ್ದು ಅನುಮೋದನೆ ನೀಡುವ ಪ್ರಸ್ತಾವನೆ ಸರ್ಕಾರದ ಮಟ್ಟದಲ್ಲಿ ಪರಿಶೀಲನೆಯಲ್ಲಿದೆ.

909(1187) ಶ್ರೀ ಭರಮಗೌಡ (ರಾಜು) ಆಲಗೌಡ ಕಾಗೆ (ಕಾಗವಾಡ) : ಮಾನ್ಯ ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಳಗಾವಿ ಜಿಲ್ಲೆ, ಅಥಣಿ ತಾಲ್ಲೂಕಿನ ಹಿಪ್ಪರಗಿ ಅಣೆಕಟ್ಟಿನಲ್ಲಿ ನೀರು ನಿಲ್ಲಿಸಲಾಗಿದೆಯೇ ;

ಇ) ನೀರು ನಿಲ್ಲಿಸಿದ್ದಲ್ಲಿ, ಮುಳುಗಡೆ ಪ್ರದೇಶದ ಜನರಿಗೆ ಪರಿಹಾರ ಧನವನ್ನು ನೀಡಿರುವುದೆಷ್ಟು, ಉಳಿದ ಪರಿಹಾರ ಹಣವನ್ನು ಯಾವಾಗ ನೀಡಲಾಗುವುದು ;

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು) :

ಅ) ಹಿಪ್ಪರಗಿ ಅಣೆಕಟ್ಟಿನಲ್ಲಿ 2004–05ನೇ ಸಾಲಿನಲ್ಲಿ ನೀರನ್ನು ನಿಲ್ಲಿಸಲಾಗಿದೆ.

ಆ) ಹಿಪ್ಪರಗಿ ಅಣೆಕಟ್ಟಿನ ಹಿನ್ನೀರಿನಿಂದ ಈವರೆಗೆ ಮುಳುಗಡೆಯಾದ ಜಮೀನು 1002 ಎಕರೆ 32 ಗುಂಟೆಗಳಿಗೆ ಇದುವರೆಗೆ ರೂ.1384 ಲಕ್ಷ ಪರಿಹಾರ ಧನವನ್ನು ವಿತರಿಸಲಾಗಿದೆ. ಬಾಕಿ ಮುಳುಗಡೆ ಕ್ಷೇತ್ರ 3096 ಎಕರೆ 35 ಗುಂಟೆಗೆ ಪರಿಹಾರ ಧನದ ಅಂದಾಜು ಮೊತ್ತ ರೂ.4590 ಲಕ್ಷಗಳಾಗುತ್ತಿದ್ದು. ಐತೀರ್ಪುಗಳು ಬಂದ ನಂತರ ವಿತರಿಸಲಾಗುವುದು.

911(1639) ಶ್ರೀ ಬಸವರಾಜು ಎ.ಎನ್.(ಅರಸೀಕೆರೆ) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಂಗಳೂರು ಜಲಮಂಡಳಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಒಟ್ಟು ಉಪ ವಿಭಾಗಗಳಾವುವು? ಅವುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು ? ಅವರಿಗೆ ಪಂಚಿಂಗ್ ವ್ಯವಸ್ಥೆ ಜಾರಿಗೊಳಿಸಲಾಗಿದೆಯೇ ;

ಆ) ಕುಂದುಕೊರತೆಗಳನ್ನು ನಿವಾರಿಸಿಕೊಳ್ಳಲು ಉಪ ವಿಭಾಗೀಯ ಕಛೇರಿಗಳಲ್ಲಿ ನೌಕರರು ಸಾರ್ವಜನಿಕರಿಗೆ ಲಭ್ಯವಾಗುವಂತೆ ಪ್ರಧಾನ ಕಛೇರಿಯಲ್ಲಿ ಅಳವಡಿಸಿರುವಂತೆ ಎಲ್ಲಾ ಉಪ ವಿಭಾಗೀಯ ಕಛೇರಿಗಳಲ್ಲಿ ಥಂಬ್-ಪಂಚಿಂಗ್ ವ್ಯವಸ್ಥೆಯನ್ನು ಜಾರಿಗೊಳಿಸಲಾಗುವುದೆ? ಹಾಗಿದ್ದಲ್ಲಿ ಎಂದಿನಿಂದ ಜಾರಿಗೊಳಿಸಲಾಗುವುದು ;

ಇ) ನಗರದ ಹೊರವಲಯದಲ್ಲಿ ವಾಸಿಸುವ ಮಂಡಲಿಯ ಗ್ರಾಹಕರಿಗೆ ಅನುಕೂಲವಾಗುವಂತೆ ಹೊಸ ಉಪವಿಭಾಗೀಯ ಕಛೇರಿಗಳನ್ನು ತೆರೆಯಲು ಸರ್ಕಾರ ಉದ್ದೇಶಿಸಿದೆಯೇ ? ಹಾಗಿದ್ದಲ್ಲಿ ಪ್ರಸ್ತುತ ವರ್ಷ ತೆರೆಯಲಾಗುವ ಹೊಸ ಕಛೇರಿಗಳಾವುವು ಎಂದಿನಿಂದ ಪ್ರಾರಂಭಿಸಲಾಗುವುದು ?

ಶ್ರೀ ಧರ್ಮಸಿಂಗ್(ಮುಖ್ಯಮಂತ್ರಿಗಳು) :

ಅ) ಬೆಂಗಳೂರು ಜಲಮಂಡಲಿಯಲ್ಲಿ ಪ್ರಧಾನ ಕಛೇರಿಯನ್ನೊಳಗೊಂಡಂತೆ 24 ವಿಭಾಗೀಯ ಕಛೇರಿಗಳು ಮತ್ತು 49 ಉಪ ವಿಭಾಗೀಯ ಕಛೇರಿಗಳು ಕಾರ್ಯನಿರ್ವಹಿಸುತ್ತಿವೆ. ಮಂಡಲಿಯಲ್ಲಿ ಒಟ್ಟು 2653 ಸಿಬ್ಬಂದಿಗಳು ಕಾರ್ಯ ನಿರ್ವಹಿಸುತ್ತಿದ್ದಾರೆ. ಕಾವೇರಿ ಭವನದಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರಧಾನ ಕಛೇರಿ ಮತ್ತು ಇತರೇ ಕಛೇರಿಗಳ 260 ಸಿಬ್ಬಂದಿಗಳಿಗೆ ಮಾತ್ರ ಸ್ಮಾರ್ಟ್ ಕಾರ್ಡ್ ಪಂಚಿಂಗ್ ವ್ಯವಸ್ಥೆ ಜಾರಿಯಲ್ಲಿದೆ.

ಆ) ಮಂಡಲಿಯ ಪರಿಶೀಲನೆಯಲ್ಲಿದೆ.

ಇ) ಹೌದು. ಯಲಹಂಕ ಉಪನಗರದಲ್ಲಿ ಒಂದು ಉಪ ವಿಭಾಗೀಯ ಕಛೇರಿಯನ್ನು ತೆರೆಯುವ ಯೋಜನೆ ಇರುತ್ತದೆ. ಇದನ್ನು ವರ್ಷಾಂತ್ಯದ ವೇಳೆಗೆ ಪ್ರಾರಂಭಿಸುವ ಉದ್ದೇಶವಿದೆ.

914(1016) ಶ್ರೀ ಚಂದ್ರಶೇಖರ ಪಾಟೀಲ್ ರೇವೂರ,(ಗುಲ್ಬರ್ಗಾ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಗುಲ್ಬರ್ಗಾ ನಗರಾಭಿವೃದ್ಧಿ ಪ್ರಾಧಿಕಾರ ಅಸ್ತಿತ್ವಕ್ಕೆ ಬಂದಾಗಿನಿಂದ ಎಷ್ಟು ಹೊಸ ಬಡಾವಣೆಗಳನ್ನು ನಿರ್ಮಿಸಲಾಗಿದೆ (ಬಡಾವಣೆ ಹೆಸರು ನಿವೇಶನಗಳ ಸಂಖ್ಯೆಯ ಸಹಿತ ವಿವರ ನೀಡುವುದು);

ಆ) ಹೊಸದಾಗಿ ನಿರ್ಮಿಸಿದ ಎಲ್ಲಾ ಬಡಾವಣೆಗಳಲ್ಲಿ ಸಂಪೂರ್ಣ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆಯೇ (ಒದಗಿಸಿದ್ದರ ಬಡಾವಣೆವಾರು ಸೌಕರ್ಯಗಳ ವಿವರ ನೀಡುವುದು) ;

ಇ) ಗುಲ್ಬರ್ಗಾ ನಗರಾಭಿವೃದ್ಧಿ ಪ್ರಾಧಿಕಾರದಿಂದ ಈಗ ಹೊಸ ಬಡಾವಣೆ ನಿರ್ಮಿಸಲು ಕೈಗೆತ್ತಿಕೊಂಡಿರುವ ಬಡಾವಣೆಗಳು ಯಾವುವು (ಯೋಜನೆಗಳ ಅಂದಾಜು ವೆಚ್ಚ ಮುಂತಾದ ವಿವರ ನೀಡುವುದು)?

ಶ್ರೀ ಧರ್ಮಸಿಂಗ್(ಮುಖ್ಯಮಂತ್ರಿಗಳು) :

ಅ) ಗುಲ್ಬರ್ಗಾ ನಗರಾಭಿವೃದ್ಧಿ ಪ್ರಾಧಿಕಾರ ಅಸ್ತಿತ್ವಕ್ಕೆ ಬಂದಾಗಿನಿಂದ ಹತ್ತು ಹೊಸ ಬಡಾವಣೆಗಳನ್ನು ನಿರ್ಮಿಸಲಾಗಿದೆ.

ವಿವರಗಳು :-

1. ಬಡೇಪೂರ ಹಂತ-1ರಲ್ಲಿ - 1770 ನಿವೇಶನಗಳು
2. ರಾಜಾಪುರ-ಬಡೇಪೂರ-899 ನಿವೇಶನಗಳು
3. ಶೇಖರೋಜಾ ಹಂತ-2-1142 ನಿವೇಶನಗಳು
4. ಧರಿಯಾಪೂರ-ಕೊಟನೂರ - 2738 ನಿವೇಶನಗಳು
5. ಬಡೇಪೂರ ಹಂತ-2-286 ನಿವೇಶನಗಳು
6. ಮಹಾತ್ಮ ಗಾಂಧಿ ಲಾರಿ ತಂಗುದಾಣ-391 ನಿವೇಶನಗಳು
7. ಎಸ್.ವಿ.ಹಂತ - 1 -100 ನಿವೇಶನಗಳು
8. ಫಿಲ್ಟರ್ ಬೆಡ್ ಹಂತ-4-207 ನಿವೇಶನಗಳು
9. ಕೋಟನೂರ-ಡಿ-556 ನಿವೇಶನಗಳು
10. ಪಟೇಲ(ವಾಣಿಜ್ಯ) ಹಂತ-1-35 ನಿವೇಶನಗಳು

ಆ) ಪ್ರಾಧಿಕಾರವು ನಿರ್ಮಿಸಲಾದ 10 ಹೊಸ ಬಡಾವಣೆಗಳಲ್ಲಿ ಮೂಲಭೂತ ಸೌಕರ್ಯಗಳಾದ ಮೇಟಲ್ ರಸ್ತೆ, ಡಾಂಬರೀಕರಣ ನಿರ್ಮಾಣ, ನೀರು ಸರಬರಾಜು, ವಿದ್ಯುದೀಕರಣ ಸೌಲಭ್ಯಗಳನ್ನು ಈ ಕೆಳಕಂಡಂತೆ ಒದಗಿಸಲಾಗಿದೆ.

1. ಬಡೋಪೂರ ಹಂತ-1, ರಾಜಾಪೂರ-ಬಡೇಪೂರ (ಸೆಕ್ಟರ್-ಎ, ಬಿ), ಮಹಾತ್ಮ ಗಾಂಧಿ ಲಾರಿ ತಂಗುದಾಣ ರಲ್ಲಿ ಬಡಾವಣೆಗಳು.

2. ಬಡೇಪೂರ ಹಂತ-2, ಸರ್ಧಾರ ವಲ್ಲಭಬಾಯಿ ಪಟೇಲ ಹಂತ-1 (ವಸತಿ ಹಾಗೂ ವಾಣಿಜ್ಯ) ಫಿಲ್ಟರ್ ಬೆಡ್ ಹಂತ-4, ಧರಿಯಾಪೂರ-ಕೋಟನೂರು(ಸೆಕ್ಟರ್-1 ಮತ್ತು 2) ರಾಜಾಪೂರ ಬಡೇಪೂರ (ಸೆಕ್ಟರ್-ಬಿ)ಗಳಿಗೆ ಶೇ.60 ರಿಂದ ಶೇ.75.

3. ಕೋಟನೂರ-ಡಿ, ಶೇಖರೋಜಾ ಹಂತ-2 ಧರಿಯಾಪೂರ-ಕೋಟನೂರು (ಸೆಕ್ಟರ್-3,4) ಗಳಿಗೆ ಶೇ.20 ರಿಂದ ಶೇ.45 ಸೌಕರ್ಯಗಳನ್ನು ಒದಗಿಸಲಾಗಿದೆ.

ಧರಿಯಾಪೂರ-ಕೋಟನೂರು, ಕೋಟನೂರ-ಡಿ, ರಾಜಾ ಪೂರ-ಬಡೇಪೂರ (ಸೆಕ್ಟರ್-ಬಿ) ಬಡಾವಣೆಗಳಲ್ಲಿ ನೀರು ಸರಬರಾಜು ವಿದ್ಯುತ್ತೀಕರಣಗಳಿಗೆ ಸಂಬಂಧಪಟ್ಟ ಇಲಾಖೆಗಳಿಂದ ಅಂದಾಜು ಪಟ್ಟಿಯನ್ನು ನಿರೀಕ್ಷಿಸಲಾಗಿದೆ. ಅಂದಾಜು ಪಟ್ಟಿ ಬಂದ ನಂತರ ಕ್ರಮ ತೆಗೆದುಕೊಳ್ಳಲಾಗುವುದು.

ಇ) ಎಂ.ಎಸ್.ಕೆ.ಮಿಲ್‌ನ ವಸತಿ ಮತ್ತು ವಾಣಿಜ್ಯ ಬಡಾವಣೆ 105 ಎಕರೆ ವಿಸ್ತೀರ್ಣ ಜಮೀನಿನಲ್ಲಿ ರೂ.4163 ಲಕ್ಷಗಳ ಅಂದಾಜು ವೆಚ್ಚದಲ್ಲಿ ಒಟ್ಟು 1019 ವಿವಿಧ ಅಳತೆಯ ನಿವೇಶನಗಳನ್ನು ರಚಿಸಲು ಉದ್ದೇಶಿಸಲಾಗಿದೆ.

914(1447) ಶ್ರೀ ಹಾಲಪ್ಪ ಹೆಚ್. (ಹೊಸನಗರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ತಾಲ್ಲೂಕಿನ ಕುಂಸಿಯಲ್ಲಿರುವ ಹಾರ್ನಳ್ಳಿ ಮ್ಯಾಂಗ್ನೆಸ್ ಗಣಿಗಾರಿಕೆಯನ್ನು ಮುಚ್ಚಲು ಕಾರಣವೇನು ;

ಆ) ಇದನ್ನು ಪುನಃ ಪ್ರಾರಂಭಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ ;

ಇ) ಪುನಃ ಪ್ರಾರಂಭಿಸಲು ಇರುವ ತೊಂದರೆಗಳೇನು?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು):

ಅ) ಶಿವಮೊಗ್ಗ ತಾಲ್ಲೂಕಿನ ಕುಂಸಿಯಲ್ಲಿರುವ ಹಾರ್ನಳ್ಳಿ ಮ್ಯಾಂಗನೀಸ್ ಗಣಿ ಇರುವ ಪ್ರದೇಶವು ಅರಣ್ಯ ಪ್ರದೇಶವಾಗಿರುತ್ತದೆ. ಅರಣ್ಯ ಇಲಾಖೆಯವರು ಸುಪ್ರೀಂ ಕೋರ್ಟ್ ಆದೇಶದನ್ವಯ ಸದರಿ ಪ್ರದೇಶವನ್ನು ಅಭಯಾರಣ್ಯ ಪ್ರದೇಶವನ್ನಾಗಿ ಮಾಡಿ, ಗಣಿಗಾರಿಕೆಯನ್ನು ಮುಂದುವರಿಸಲು ನಿರಾಕ್ಷೇಪಣಾ ಪತ್ರ ನೀಡದಿರುವುದರಿಂದ, ಗಣಿಗಾರಿಕೆಗೆ ಅನುಮತಿ ನೀಡಿರುವುದಿಲ್ಲ.

ಆ) ಅರಣ್ಯ ಇಲಾಖೆಯು ಅರಣ್ಯ ಸಂರಕ್ಷಣಾ ಕಾಯ್ದೆ, 1980ರ ಪ್ರಕಾರ ಅನುಮತಿ ನೀಡಿದಲ್ಲಿ ಗಣಿಗಾರಿಕೆಯನ್ನು ಪುನಃ ಪ್ರಾರಂಭಿಸಬಹುದು.

ಇ) ಅರಣ್ಯ ಇಲಾಖೆಯು ನಿರಾಕ್ಷೇಪಣಾ ಪತ್ರ, ನೀಡುವವರೆಗೆ ಗಣಿಗಾರಿಕೆಯನ್ನು ಪ್ರಾರಂಭಿಸಲು ಸಾಧ್ಯವಾಗದು.

915(1017) ಶ್ರೀ ಚಂದ್ರಶೇಖರ್ ಪಾಟೀಲ್ ರೇವೂರ(ಗುಲ್ಬರ್ಗಾ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಗುಲ್ಬರ್ಗಾ ನಗರಕ್ಕೆ ಕುಡಿಯುವ ನೀರನ್ನು ಪೂರೈಸುವ ಭೀಮಾ ಬ್ಯಾರೇಜ್‌ನಿಂದ ಬರುವ ಮುಖ್ಯ ಪೈಪ್ ಲೈನ್ ಒಡೆದು ನೀರು ಸೋರಿಕೆಯಿಂದ ಕುಡಿಯುವ ನೀರಿನ ವ್ಯವಸ್ಥೆಯಲ್ಲಿ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಬಂದಿದ್ದರೆ, ಪೈಪ್ ಲೈನ್ ಸರಿಪಡಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ ಮತ್ತು ಎಷ್ಟು ಹಣ ಬಿಡುಗಡೆಯಾಗಿದೆ;

ಇ) ಕುಡಿಯುವ ನೀರು ಪೂರೈಕೆಗೆ ನೀರೆತ್ತುವ ಯಂತ್ರ ಕೆಟ್ಟು ಹೋಗಿ ಕುಡಿಯುವ ನೀರಿಗೆ ತುಂಬಾ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಈ) ಬಂದಿದ್ದರೆ, ಯಾವ ಕ್ರಮ ಕೈಗೊಳ್ಳಲಾಗಿದೆ;

ಉ) ವಿದ್ಯುತ್ ಪೂರೈಕೆ ಸರಿಯಾಗಿ ಆಗದೇ ಇರುವುದರಿಂದ ಜನರೇಟರ್ ವ್ಯವಸ್ಥೆ ಮಾಡುವ ವಿಚಾರ ಸರ್ಕಾರದ ಮುಂದಿದೆಯೇ;

ಊ) ಬಂದಿದ್ದರೆ, ಜನರೇಟರ್ ಯಾವಾಗ ಅಳವಡಿಸಲಾಗುವುದು ?

ಶ್ರೀ ಧರ್ಮಸಿಂಗ್(ಮುಖ್ಯಮಂತ್ರಿಗಳು) :

ಅ) ಬಂದಿದೆ

ಆ) ದೊಡ್ಡ ಪ್ರಮಾಣದ ಕೊಳವೆ ಮಾರ್ಗ ಸೋರುವಿಕೆ/ಒಡೆದು ಹೋಗುವುದು, ಇವುಗಳನ್ನು ತಕ್ಷಣದಲ್ಲೇ ಸರಿಪಡಿಸಲಾಗುತ್ತಿದೆ. ಮತ್ತು ಸಣ್ಣ ಪ್ರಮಾಣದ ಕೊಳವೆ ಮಾರ್ಗ ಸೋರುವಿಕೆಯನ್ನು ಮಹಾನಗರಪಾಲಿಕೆಯಿಂದ ಹಣ ಸ್ವೀಕೃತಿಯಾದ ನಂತರ ದುರಸ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ. ಗುಲ್ಬರ್ಗಾ ಮಹಾನಗರಪಾಲಿಕೆಯು ಸಗಟು ನೀರು ಸರಬರಾಜು ನಿರ್ವಹಣೆಗಾಗಿ ವೆಚ್ಚವನ್ನು ಸರಿಯಾಗಿ ಭರಿಸುತ್ತಿರುವುದಿಲ್ಲ. ಪ್ರತಿ ತಿಂಗಳು ಕನಿಷ್ಠ ರೂ.5.00 ಲಕ್ಷಗಳ ಮೊತ್ತವನ್ನು ಬಿಡುಗಡೆ ಮಾಡಲು ಕೋರಲಾಗಿದೆ. ಆದರೆ ಮಹಾನಗರಪಾಲಿಕೆ ಪ್ರತಿ ತಿಂಗಳು ಸುಮಾರು ರೂ. 3.00 ಲಕ್ಷ

ಮೊತ್ತವನ್ನು ಬಿಡುಗಡೆ ಮಾಡುತ್ತಿರುವುದರಿಂದ ಎಷ್ಟು ಸಾಧ್ಯವೋ ಅಷ್ಟು ದುರಸ್ತಿ ಕಾರ್ಯ ಕೈಗೊಳ್ಳಲಾಗುತ್ತಿದೆ.

ಇ) ಬಂದಿದೆ.

ಈ) ಕೆಟ್ಟು ಹೋಗಿರುವ ನೀರೆತ್ತುವ ಯಂತ್ರವನ್ನು ದುರಸ್ತಿಗೊಳಿಸಲು ಈಗಾಗಲೇ ರೂ. 8.28 ಲಕ್ಷ ಮೊತ್ತದ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದೆ ಮತ್ತು ಮಹಾನಗರಪಾಲಿಕೆ, ಗುಲ್ಬರ್ಗಾ ಇವರಿಂದ ಹಣ ಬಿಡುಗಡೆಯಾದ ನಂತರ ದುರಸ್ತಿ ಕಾರ್ಯವನ್ನು ಕೈಗೊಳ್ಳಲಾಗುವುದು ಅದಲ್ಲದೆ ಜಲ ಮಂಡಳಿಯ ಧಾರವಾಡ ವಿಭಾಗದಲ್ಲಿ ಲಭ್ಯವಿರುವ ಹೆಚ್ಚುವರಿ ನೀರೆತ್ತುವ ಯಂತ್ರವನ್ನು ಗುಲ್ಬರ್ಗಾಕ್ಕೆ ಸ್ಥಳಾಂತರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಉ) ಗುಲ್ಬರ್ಗಾ ನಗರಕ್ಕೆ ನೀರು ಪೂರೈಸಲು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯಿಂದ ಸರಡಗಿ ಮೂಲ ಸ್ಥಾವರಕ್ಕೆ ವಿದ್ಯುತ್ ಒದಗಿಸಲು ಪ್ರತ್ಯೇಕವಾದ ಫೀಡರ್, ಲೈನ್ ಒದಗಿಸಿರುವುದರಿಂದ ಜನರೇಟರ್ ಅಳವಡಿಸುವ ಅವಶ್ಯಕತೆ ಇರುವುದಿಲ್ಲ.

ಊ) ಉದ್ಭವಿಸುವುದಿಲ್ಲ.

916(1018) ಶ್ರೀ ಚಂದ್ರಶೇಖರ ಪಾಟೀಲ್ ರೇವೂರ, (ಗುಲ್ಬರ್ಗಾ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) 1987ರ ನಂತರ ಗುಲ್ಬರ್ಗಾ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಗುತ್ತಿಗೆ ಹಾಗೂ ದಿನಗೂಲಿ ಆದಾರದ ಮೇಲೆ ನೇಮಕ ಮಾಡಿಕೊಂಡಿರುವ ನೌಕರರ ಸಂಖ್ಯೆ ಎಷ್ಟು ;

ಆ) 1987ರ ಸರ್ವೋಚ್ಛ ನ್ಯಾಯಾಲಯದ ಆದೇಶ ಉಲ್ಲಂಘಿಸಿ ನೇಮಕ ಮಾಡಿಕೊಂಡಿರುವುದು ನಿಜವೇ ;

ಇ) ಇಲ್ಲಿಯತನಕ ಗುತ್ತಿಗೆ ಹಾಗೂ ದಿನಗೂಲಿ ಆಧಾರದ ಮೇಲೆ ನೇಮಕಾತಿ ಮಾಡಿಕೊಂಡಿರುವ ನೌಕರರ ಸಂಖ್ಯೆ ಎಷ್ಟು (ಹುದ್ದೆ ಸಹಿತ ವಿವರ ನೀಡುವುದು) ;

ಶ್ರೀ ಎನ್.ಧರ್ಮಸಿಂಗ್(ಮುಖ್ಯಮಂತ್ರಿಗಳು) :

ಅ) ಒಟ್ಟು 9 ಜನ

ಆ) ಇಲ್ಲ. ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ ಕಾಯ್ದೆ, 1987ರ ಕಲಂ–52 ರಲ್ಲಿ ಪ್ರಾಧಿಕಾರಗಳಿಗೆ ನೀಡಿರುವ ಅದಿಕಾರದನ್ವಯ ನೇಮಕಾತಿ ಮಾಡಿಕೊಳ್ಳಲಾಗಿದೆ.

ಇ) ಪ್ರಾಧಿಕಾರದಲ್ಲಿ ಗುತ್ತಿಗೆ ಹಾಗೂ ದಿನಗೂಲಿ ಆಧಾರದ ಮೇಲೆ 9 ಸಂಖ್ಯೆ ನೌಕರರನ್ನು ನೇಮಕ ಮಾಡಿಕೊಳ್ಳಲಾಗಿದೆ.

1. ಕಾರ್ಯದರ್ಶಿ– 1 – ಗುತ್ತಿಗೆ
2. ಶೀಘ್ರಲಿಪಿಗಾರ– 1 – ಗುತ್ತಿಗೆ
3. ಬೆರಳಚ್ಚುಗಾರ– 1 – ಗುತ್ತಿಗೆ
4. ಸಿಪಾಯಿ– 1 – ಗುತ್ತಿಗೆ
5. ಅಕ್ಷರಸ್ಥ ಸಹಾಯಕ – 2
6. ವಾಹನ ಚಾಲಕ – 2 ದಿನಗೂಲಿ ನೌಕರರು
7. ಮಾಲಿ – 1

918(1040) ಶ್ರೀ ಚಿಕ್ಕನಗೌಡರ ಸಿದ್ದನಗೌಡ ಈಶ್ವರಗೌಡ (ಕಲಘಟಗಿ) : ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಧಾರವಾಡ ಜಿಲ್ಲೆಯಲ್ಲಿ ಸಾರಿಗೆ ಸಂಸ್ಥೆ ಘಟಕ (ಡಿಪೋ) ಸಂಖ್ಯೆ ಎಷ್ಟು ಹಾಗೂ ಯಾವ ಯಾವ ತಾಲ್ಲೂಕು ಕೇಂದ್ರಗಳಲ್ಲಿ ಸದರಿ ಘಟಕಗಳಿವೆ ;

ಆ) ಕಲಘಟಗಿಗೂ ಸಹ ಡಿಪೋ ಸ್ಥಾಪಿಸುವ ವಿಚಾರ ಸರ್ಕಾರಕ್ಕಿದೆಯೇ ;

ಇ) ಯಾವಾಗ ಮಂಜೂರಾತಿ ನೀಡಲಾಗುವುದು:

ಈ) ಇದಕ್ಕಾಗಿ ಜಾಗ ಗುರುತಿಸಲಾಗಿದೆಯೇ:

ಉ) ಕಲಘಟಗಿ ಬಸ್ ಡಿಪೋ ಬೇಕೆಂಬ ಬೇಡಿಕೆ ಬಹಳ ದಿನಗಳಿಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಊ) ಬಂದಿದ್ದಲ್ಲಿ ಯಾವ ಕ್ರಮ ಕೈಗೊಳ್ಳಲಾಗುತ್ತದೆ:

ಋ) ಸದರಿ ತಾಲ್ಲೂಕಿನಲ್ಲಿ ಬಸ್ಸುಗಳ ಕೊರತೆ ಇರುವುದರಿಂದ ಹೊಸ ಬಸ್ ಮಾರ್ಗಗಳನ್ನು ಹಾಗೂ ಹಾಲಿ ಇರುವ ಮಾರ್ಗಗಳಲ್ಲಿ ಹೆಚ್ಚುವರಿ ಬಸ್‌ಗಳನ್ನು ಒದಗಿಸಲಾಗುವುದೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು) :

ಅ) 05(ಐದು)
ಹುಬ್ಬಳ್ಳಿ – 04(ನಾಲ್ಕು)
ಧಾರವಾಡ – 01 (ಒಂದು)

ಆ) ಹೌದು

ಇ) ಭೂಸ್ವಾಧೀನದ ನಂತರ.

ಈ) ಹೌದು

ಉ) ಹೌದು

ಊ) ಭೂಸ್ವಾದೀನ ಪ್ರಕ್ರಿಯೆಗೆ ಕ್ರಮ ತೆಗೆದುಕೊಳ್ಳಲಾಗುವುದು.

ಋ) ಹೌದು

919(1274) ಶ್ರೀ ದೇಸಾಯಿ ಶಿವಪುತ್ರಪ್ಪ ಮಡಿವಾಳಪ್ಪ (ಹೂವಿನ ಹಿಪ್ಪರಗಿ) : ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆಲಮಟ್ಟಿ ಅಣೆಕಟ್ಟಿನಿಂದ ಬಿಜಾಪುರ ಜಿಲ್ಲೆಗೆ ಎಷ್ಟು ಎಕರೆ ಜಮೀನಿಗೆ ನೀರನ್ನು ಒದಗಿಸಬೇಕಾಗಿದೆ ;

ಆ) ಅದರಲ್ಲಿ, ಎಷ್ಟು ಎಕರೆ ಜಮೀನಿಗೆ ಈಗಾಗಲೇ ನೀರು ಒದಗಿಸಲಾಗಿದೆ.

ಇ) ಬಾಕಿ ಪ್ರದೇಶಕ್ಕೆ ನೀರನ್ನು ಬಿಡುಗಡೆ ಮಾಡಲು ಸರ್ಕಾರವು ಯಾವ ಕ್ರಮವನ್ನು ಕೈಗೊಂಡಿದೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು) :

ಅ) 4,39,459 ಎಕರೆ (1,77,919 ಹೆಕ್ಟೇರ್)

ಆ) 2,06,245 ಎಕರೆ (83,500 ಹೆಕ್ಟೇರ್)

ಇ) ಉಳಿದ ಕಾಮಗಾರಿಗಳನ್ನು ಮಾರ್ಚ್ 2006ರೊಳಗೆ ಪೂರ್ಣಗೊಳಿಸಲು ಟೆಂಡರ್ ಪ್ರಕ್ರಿಯೆ ಹಾಗೂ ಕಾಮಗಾರಿಗಳ ಪ್ರಗತಿ ವಿವಿಧ ಹಂತದಲ್ಲಿವೆ.

920(1275) ಶ್ರೀ ದೇಸಾಯಿ ಶಿವಪುತ್ರಪ್ಪ ಮಡಿವಾಳಪ್ಪ : ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಆಲಮಟ್ಟಿ ಜಲಾಶಯದಿಂದ ಬಿಜಾಪುರ ಜಿಲ್ಲೆಯ ಕೆರೆಗಳಿಗೆ ನೀರು ತುಂಬುವ ವಿಚಾರ ಸರ್ಕಾರದ ಮುಂದಿದೆಯೇ ;

ಆ) ಇಲ್ಲದಿದ್ದಲ್ಲಿ, ಕೆರೆಗಳಿಗೆ ನೀರು ತುಂಬಲು ಸರ್ಕಾರ ಕ್ರಮ ಕೈಗೊಳ್ಳುವುದೇ ?

ಶ್ರೀ ಮಲ್ಲಿಕಾರ್ಜುನ ಖರ್ಗೆ(ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು) :

ಅ) ಕೆರೆಗಳಿಗೆ ನೀರು ತುಂಬಿಸುವ ಕುರಿತು ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಯಾವುದೇ ಅವಕಾಶ ಇರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

924(1355) ಶ್ರೀ ಕೆ.ಎಸ್.ಈಶ್ವರಪ್ಪ(ಶಿವಮೊಗ್ಗ) : ಮಾನ್ಯ ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ಸಂಸ್ಥೆಯ ಶಿವಮೊಗ್ಗ ನಗರವನ್ನು ಅಭಿವೃದ್ಧಿ ಕಾರ್ಯಕ್ರಮಗಳಡಿಯಲ್ಲಿ ಸೇರ್ಪಡೆಯಾಗಿದೆಯೇ ;

ಆ) ಹಾಗಿದ್ದಲ್ಲಿ, ಎಷ್ಟು ಹಣ ಒದಗಿಸಲಾಗುವುದು ?

ಇ) ಯಾವಾಗ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು ?

ಶ್ರೀ ಎಸ್.ಆರ್.ಮೋರೆ (ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ ಸಚಿವರು) :

ಅ) ಶಿವಮೊಗ್ಗ ನಗರವನ್ನು ಕರ್ನಾಟಕ ಪೌರ ಸಂಸ್ಥೆಗಳ ಸುಧಾರಣಾ ಯೋಜನೆ (ಕೆ.ಎಮ್.ಆರ್.ಪಿ.ಯಡಿಯಲ್ಲಿ ಸೇರಿಸಲಾಗಿದೆ.

ಆ) ಸಾಲ ಅನುದಾನವನ್ನು ಶಿವಮೊಗ್ಗ, ನಗರಸಭೆಯ ಸಾಲ ಮರುಪಾವತಿಯ ಸಾಮರ್ಥ್ಯವನ್ನು ಅನುಸರಿಸಿ ನೀಡಲಾಗುತ್ತದೆ.

ಇ) ಯೋಜನೆಯು ಇನ್ನೂ ನಿಷ್ಕರ್ಷಣೆಯ ಮಟ್ಟದಲ್ಲಿದೆ.

925(1356) ಶ್ರೀ ಕೆ.ಎಸ್. ಈಶ್ವರಪ್ಪ(ಶಿವಮೊಗ್ಗ) : ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದ ನ್ಯಾಯಾಲಯಗಳಲ್ಲಿ ಇತ್ಯರ್ಥವಾಗದೇ ಇರುವ ಮೊಕದ್ದಮೆಗಳು ಎಷ್ಟು (ವರ್ಷಾವಾರು ಮಾಹಿತಿ ನೀಡುವುದು)

ಆ) ಈ ಮೊಕದ್ದಮೆಗಳನ್ನು ಇತ್ಯರ್ಥಪಡಿಸುವಲ್ಲಿ ಸರ್ಕಾರವು ಕೈಗೊಂಡಿರುವ ಕ್ರಮವೇನು?

ಶ್ರೀ ಹೆಚ್.ಕೆ. ಪಾಟೀಲ್(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):

1) ದಿನಾಂಕ 1-1-2003ರ ಅಂತ್ಯಕ್ಕೆ ಇತ್ಯರ್ಥವಾಗದೆ ಉಳಿದಿರುವ ಸಿವಿಲ್ ಮತ್ತು ಕ್ರಿಮಿನಲ್ ಮೊಕದ್ದಮೆಗಳ ಸಂಖ್ಯೆ : 1010420

2) ದಿನಾಂಕ 31-12-2003 ರ ಅಂತ್ಯಕ್ಕೆ ಇತ್ಯರ್ಥವಾಗದೆ ಉಳಿದಿರುವ ಸಿವಿಲ್ ಮತ್ತು ಕ್ರಿಮಿನಲ್ ಮೊಕದ್ದಮೆಗಳ ಸಂಖ್ಯೆ : 1037779

3) ದಿನಾಂಕ 31-12-2004ರ ಅಂತ್ಯಕ್ಕೆ ಇತ್ಯರ್ಥವಾಗದೆ ಉಳಿದಿರುವ ಸಿವಿಲ್ ಮತ್ತು ಕ್ರಿಮಿನಲ್ ಮೊಕದ್ದಮೆಗಳ ಸಂಖ್ಯೆ : 1094351

ಆ) ಹಾಲಿ ಕಾರ್ಯನಿರ್ವಹಿಸುತ್ತಿರುವ ನ್ಯಾಯಾಲಯಗಳ ಜೊತೆಗೆ ಇತ್ಯರ್ಥವಾಗದೆ ಉಳಿದಿರುವ ಮೊಕದ್ದಮೆಗಳ ಶೀಘ್ರ ವಿಲೇವಾರಿಗಾಗಿ ರಾಜ್ಯದಲ್ಲಿ ಒಟ್ಟು 93 ಶೀಘ್ರಗತಿ ನ್ಯಾಯಾಲಯಗಳನ್ನು ಸ್ಥಾಪಿಸಲಾಗಿದೆ.

926(1357) ಶ್ರೀ ಕೆ.ಎಸ್. ಈಶ್ವರಪ್ಪ(ಶಿವಮೊಗ್ಗ) : ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಭದ್ರಾ ಎಡದಂಡೆ ನಾಲೆಯಲ್ಲಿ ಅನಧಿಕೃತ ಪಂಪ್‌ಸೆಟ್ ಬಳಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ಈ ರೀತಿ ಎಷ್ಟು ಅನಧಿಕೃತ ಪಂಪ್‌ಸೆಟ್‌ಗಳಿವೆ (ವಿವರ ಒದಗಿಸುವುದು):

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರವು ಕೈಗೊಂಡಿರುವ ಕ್ರಮವೇನು ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು):

ಅ) ಬಂದಿದೆ. ಭದ್ರಾ ಎಡದಂಡೆ ನಾಲೆಯಲ್ಲಿ ಒಟ್ಟು 509 ಅನಧಿಕೃತ ವಿದ್ಯುತ್ ಚಾಲಿತ ಪಂಪ್‌ಸೆಟ್‌ಗಳಿವೆ. ಇದರಲ್ಲಿ ಭದ್ರಾವತಿ ತಾಲ್ಲೂಕಿನಲ್ಲಿ 358 ಪಂಪ್‌ಸೆಟ್ ಮತ್ತು ಶಿವಮೊಗ್ಗ ತಾಲ್ಲೂಕಿನಲ್ಲಿ 151 ಪಂಪ್‌ಸೆಟ್ ಇವೆ.

ಆ) ಈ ಬಗ್ಗೆ ಅನಧಿಕೃತ ಪಂಪ್‌ಗಳನ್ನು ತೆಗೆಸಲು ಕಂದಾಯ ಇಲಾಖೆ, ಕೆ.ಪಿ.ಟಿ.ಸಿ.ಎಲ್. ಮತ್ತು ಪೊಲೀಸ್ ರಕ್ಷಣೆಯೊಂದಿಗೆ ಈಗಾಗಲೇ 327 ಪಂಪ್‌ಸೆಟ್‌ಗಳನ್ನು ತೆಗೆಸಲಾಗಿದ್ದು ಇದರಲ್ಲಿ 151 ಕ್ಕೆ ಪೊಲೀಸ್ ಇಲಾಖೆಯಲ್ಲಿ ಕೇಸನ್ನು ದಾಖಲು ಮಾಡಲಾಗಿರುತ್ತದೆ. ಇನ್ನು ಬಾಕಿ ಇರುವ ಅನಧಿಕೃತ ಪಂಪುಗಳನ್ನು ಇಲಾಖೆಯಿಂದ ಇತರೆ ಇಲಾಖೆಗಳ ಸಹಾಯದೊಂದಿಗೆ ತೆಗೆಸುವ ಕಾರ್ಯವನ್ನು ಮುಂದುವರೆಸಲಾಗಿದೆ.

928(1359) ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಪೌರಾಡಳಿತ ಹಾಗೂ ಕೆಯುಐಡಿ ಎಫ್‌ಸಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಸ್ವಯಂ ಘೋಷಿತ ಆಸ್ತಿ ತೆರಿಗೆ ಅವೈಜ್ಞಾನಿಕವಾದ ಬಗ್ಗೆ ತಿದ್ದುಪಡಿಗೆ ಏನು ಕ್ರಮ ಕೈಗೊಳ್ಳಲಾಗಿದೆ;

ಆ) ಈ ಅವೈಜ್ಞಾನಿಕ ಆಸ್ತಿ ತೆರಿಗೆ ಸಂಬಂಧವಾಗಿ ತೆರಿಗೆ ಪಾವತಿಸುವಲ್ಲಿ ತೆರಿಗೆದಾರರು ಹಿಂಜರಿಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಇ) ಹಾಗಿದ್ದಲ್ಲಿ, ರಾಜ್ಯದಲ್ಲಿ ನಗರಸಭೆಯವಾರು ಎಷ್ಟು ತೆರಿಗೆ ಬಾಕಿ ಇರುತ್ತದೆ;

ಈ) ಈ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಳ್ಳುತ್ತದೆ ?

ಶ್ರೀ ಎಸ್.ಆರ್.ಮೋರೆ (ಪೌರಾಡಳಿತ ಹಾಗೂ ಕೆಯುಐಡಿಎಫ್‌ಸಿ ಸಚಿವರು) :

ಅ) ಸ್ವಯಂ ಘೋಷಿತ ಆಸ್ತಿ ತೆರಿಗೆ ವೈಜ್ಞಾನಿಕ ಹಾಗೂ ಸರಳವಾದದ್ದು. ಈ ಪದ್ಧತಿಯನ್ನು ಮತ್ತಷ್ಟು ಸುಲಭಗೊಳಿಸುವ ಸಲುವಾಗಿ ತಿದ್ದುಪಡಿಯನ್ನು ತರಲು ಕ್ರಮ ಕೈಗೊಳ್ಳಲಾಗುತ್ತಿದೆ.

ಆ) ಸ್ವಯಂ ಘೋಷಿತ ಆಸ್ತಿ ತೆರಿಗೆ ಪದ್ಧತಿಯು ಅವೈಜ್ಞಾನಿಕವಾಗಿರುವುದಿಲ್ಲ. ಇದನ್ನು ಪಾಲಿಸಿ ಬಹುತೇಕ ಸಾರ್ವಜನಿಕರು ತೆರಿಗೆಯನ್ನು ಪಾವತಿಸಿರುತ್ತಾರೆ. ಕೆಲವು ನಗರ ಸ್ಥಳೀಯ ಸಂಸ್ಥೆಯಲ್ಲಿ ಮಾತ್ರ ತೆರಿಗೆದಾರರು ತೆರಿಗೆಯನ್ನು ಪಾವತಿ ಮಾಡಿರುವುದಿಲ್ಲ.

ಇ) ಸುಮಾರು 40 ರಿಂದ 50 ರಷ್ಟು

ಈ) ತೆರಿಗೆ ಬಾಕಿಯನ್ನು ದಂಡರಹಿತವಾಗಿ ಪಾವತಿ ಮಾಡಲು ಕಾಲಾವಕಾಶವನ್ನು ದಿ:28-02-2005 ರವರೆಗೂ ವಿಸ್ತರಿಸಲಾಗಿದೆ.

929(217) ಶ್ರೀ ಗಂಗಾಧರ್ ನಾಗೇಶ್ ಭಟ್(ಕಾರವಾರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಆಭರಣ ಕಳುವು ಪ್ರಕರಣಗಳು ಹೆಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಇಂತಹ ಕಳುವಿನ ಹೆಚ್ಚಿನ ಪ್ರಕರಣಗಳಲ್ಲಿ ಪೊಲೀಸರು ಮುಗ್ಧ ಆಭರಣ ತಯಾರಕರನ್ನು ಸಹ ಆರೋಪಿತರನ್ನಾಗಿ ಮಾಡಿ ಠಾಣೆಗೆ ಎಳೆದು ತಂದು ಹಿಂಸಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಇ) ಮುಗ್ಧ ಆಭರಣ ತಯಾರಕರ ಮೇಲೆ ಸುಳ್ಳು ಕೇಸು ಹಾಕದಿರಲು ಹಾಗೂ ಠಾಣೆಗೆ ತಂದು ಹಿಂಸಿಸದಿರಲು ಸರಕಾರ ಯಾವ ಕ್ರಮವನ್ನು ಕೈಗೊಳ್ಳಲಿದೆ ;

ಶ್ರೀ ಧರ್ಮಸಿಂಗ್(ಮುಖ್ಯಮಂತ್ರಿಗಳು) :

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಆಭರಣ ಕಳುವು ಅಥವಾ ಸುಲಿಗೆ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದ್ದು 2002ರಲ್ಲಿ 36 ಪ್ರಕರಣಗಳು, 2003ರಲ್ಲಿ 22 ಪ್ರಕರಣಗಳು, 2004ರಲ್ಲಿ 43 ಪ್ರಕರಣಗಳು ದಾಖಲಾಗಿರುತ್ತದೆ.

ಆ) ಮುಗ್ಧ ಆಭರಣ ತಯಾರಕರನ್ನು ಆರೋಪಿತರನ್ನಾಗಿ ಮಾಡಿ ಠಾಣೆಗ ಎಳೆದು ತಂದು ಹಿಂಸಿಸಿದ ಬಗ್ಗೆ ವರದಿಯಾಗಿರುವುದಿಲ್ಲ. ಕಳುವಿನ ಪ್ರಕರಣದಲ್ಲಿ ಆರೋಪಿತರಾದ ಸುಬ್ರಾಯ ಗಣಪತಿ ಶೇಟ್ ಮತ್ತು ಉದಯ್ ಇವರನ್ನು ಠಾಣೆಗೆ ಕರೆಯಿಸಿ ವಿಚಾರಣೆಯನ್ನು ಮಾಡಲಾಗಿದೆ. ಈ ಬಗ್ಗೆ ದಾಖಲಾದ ಪ್ರಕರಣಗಳ ವಿವರ ಈ ಕೆಳಕಂಡಂತಿದೆ.

ಕ್ರ. ಸಂ.	ಪೊ.ಠಾಣೆ	ಮೊ.ಸಂ. ಮತ್ತು ಕಲಂ	ಆರೋಪಿತನ ಹೆಸರು	ತನಿಖಾ ಹಂತ
1	ಹೊನ್ನಾವರ ಪೊಲೀಸ್	255/04, ಕಲಂ 392 ಐಪಿಸಿ	ಸುಬ್ರಾಯ ಗಣಪತಿ ಶೇಟ್	ಯು.ಐ
2	ಕಾರವಾರ ಟೌನ್	102/04, ಕಲಂ 392 ಐಪಿಸಿ	ಸುಬ್ರಾಯ ಗಣಪತಿ ಶೇಟ್	ಯು.ಐ
3	ಕಾರವಾರ ಟೌನ್	106/04, ಕಲಂ 392 ಐಪಿಸಿ	ಸುಬ್ರಾಯ ಗಣಪತಿ ಶೇಟ್	ಯು.ಐ

4	ಕ...ವಾರ ಟೌನ್	136/04, ಕಲಂ 392 ಐಪಿಸಿ	ಸುಬ್ರಾಯ ಗಣಪತಿ ಶೇಟ್	ಯು.ಐ
5	ಅಂಕೋಲ	193/04 ಕಲಂ 392, 511 ಐಪಿಸಿ	ಉದಯ್	ಪಿ.ಟಿ

ಆಭರಣ ತಯಾರಕರಾದ ದಿವಾಕರ್ ಕಾಲು ರೇವಣಕರ್‌ರವರನ್ನು ಸಿದ್ದಾಪುರ ಪೋಲೀಸ್ ಠಾಣೆ ಮೊ.ಸಂ. 8/04; 457,380 ಐಪಿಸಿ ಪ್ರಕರಣಕ್ಕೆ ಸಂಬಂದಿಸಿದಂತೆ ಕರೆಯಿಸಿ ಪ್ರಶ್ನಿಸಲಾಗಿ ಈತನು ಮುಗ್ಧನಾಗಿರುತ್ತಾನೆ.

ಇ) ಮುಗ್ದ ಆಭರಣ ತಯಾರಕರನ್ನು ಆರೋಪಿತರನ್ನಾಗಿ ಮಾಡಿ ಠಾಣೆಗೆ ಎಳೆದು ತಂದು ಹಿಂಸಿಸಿದ ಪ್ರಕರಣಗಳು ಇದುವರೆವಿಗೂ ವರದಿಯಾಗಿರುವುದಿಲ್ಲ. ಇಂತಹ ಪ್ರಕರಣಗಳು ವರದಿಯಾದಲ್ಲಿ ಕೆಎಸ್‌ಪಿ(ಡಿ.ಪಿ) ರೂಲ್ಸ್ ರನ್ವಯ ಕ್ರಮ ಕೈಗೊಳ್ಳಲಾಗುವುದು.

930(844) ಶ್ರೀ ಗೊಪಾಲ ಪೂಜಾರಿ ಕೆ.(ಬೈಂದೂರು) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೈಂದೂರು ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಮೀನುಗಾರಿಕಾ ರಸ್ತೆಗಳೆಷ್ಟು?

ಆ) ಅತಿವೃಷ್ಠಿಯಿಂದ ಈ ರಸ್ತೆಗಳು ತೀರಾ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಇವುಗಳ ದುರಸ್ತಿ ಬಗ್ಗೆ ಏನು ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಧರ್ಮಸಿಂಗ್(ಮುಖ್ಯಮಂತ್ರಿಗಳು) :

ಅ) ಬೈಂದೂರು ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ 20 ಮೀನುಗಾರಿಕಾ ರಸ್ತೆಗಳು ಇರುತ್ತವೆ. ಅಲ್ಲದೆ, ನಬಾರ್ಡ್ ಯೋಜನೆಯಡಿ 7 ಮೀನುಗಾರಿಕಾ ರಸ್ತೆಗಳನ್ನು ನಿರ್ಮಿಸಲಾಗಿದೆ.

ಆ) ಹೌದು.

ಮಳೆಗಾಲದಲ್ಲಿ ರಸ್ತೆಗಳು ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಇ) ಅನುದಾನದ ಕೊರತೆಯಿಂದಾಗಿ ರಸ್ತೆಗಳನ್ನು ದುರಸ್ತಿ ಮಾಡಲು ಸಾಧ್ಯವಾಗಿರುವುದಿಲ್ಲ. ಮೀನುಗಾರಿಕೆ ಕೊಂಡಿ ರಸ್ತೆಗಳ ದುರಸ್ತಿಗಾಗಿ ಹೆಚ್ಚುವರಿ ಅನುದಾನದ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

931(1499) ಶ್ರೀ ಕೆ. ಗೋಪಾಲ ಪೂಜಾರಿ(ಬೈಂದೂರು) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿರುವ ಪಂಪಿಂಗ್ ಸ್ಟೇಷನ್‌ಗಳೆಷ್ಟು, (ವಿವರ ನೀಡುವುದು)

ಆ) ಜಲ ಮಂಡಳಿ ವ್ಯಾಪ್ತಿಯ ಬೆಂಗಳೂರು ನಗರದಲ್ಲಿ ಎಷ್ಟು ಪಂಪಿಂಗ್ ಸ್ಟೇಷನ್‌ಗಳಿವೆ.

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) :

ಅ) ಕ.ನ.ನೀ.ಸ: ಮತ್ತು ಒ.ಚ. ಮಂಡಲಿ ವ್ಯಾಪ್ತಿಗೆ ಬರುವ 208 ಪಟ್ಟಣಗಳಲ್ಲಿ ಒಟ್ಟು 345 ಪಂಪಿಂಗ್ ಸ್ಟೇಷನ್‌ಗಳು ಇರುತ್ತವೆ.

ಆ) ಬೆಂಗಳೂರು ನಗರವು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ವ್ಯಾಪ್ತಿಗೆ ಒಳಪಟ್ಟಿರುವುದಿಲ್ಲ. ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವ್ಯಾಪ್ತಿಯಲ್ಲಿ 162 ಪಂಪಿಂಗ್ ಸ್ಟೇಷನ್‌ಗಳಿವೆ.

932(1038) ಶ್ರೀ ಗೋಪಾಲಕೃಷ್ಣ ಬೇಳೂರು ಬಿ.ಕೆ. (ಸಾಗರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಶಿವಮೊಗ್ಗ ಜಿಲ್ಲೆ ಸಾಗರ ಸಮೀಪದ ಇತಿಹಾಸ ಪ್ರಸಿದ್ಧ ಕೆಳದಿಯ ಅಭಿವೃದ್ಧಿಗಾಗಿ ಸರ್ಕಾರ ಕೈಗೊಂಡ ಕ್ರಮಗಳೇನು :

ಆ) ಕೆಳದಿಯ ಚೆನ್ನಮ್ಮನ ಪುತ್ಥಳಿ ನಿರ್ಮಾಣದ ಯೋಜನೆಯನ್ನು ಸರ್ಕಾರ ಹಾಕಿಕೊಂಡಿದೆಯೇ ;

ಇ) ಹಾಗಿದ್ದಲ್ಲಿ, ಇದಕ್ಕಾಗಿ ನಿಗದಿಪಡಿಸಿರುವ ಹಣ ಎಷ್ಟು; ಹಾಗೂ ಈ ಪುತ್ಥಳಿಯನ್ನು (ಪ್ರತಿಮೆ) ಎಲ್ಲಿ ಸ್ಥಾಪಿಸಲಾಗುತ್ತದೆ;

ಈ) ಪುತ್ಥಳಿ ನಿರ್ಮಾಣದ ಕೆಲಸ ಸಾಗಿದೆಯೇ; ಹಾಗೂ ಅದು ಈಗ ಯಾವ ಹಂತದಲ್ಲಿದೆ.

ಉ) ಯಾವಾಗ ಮುಗಿಸಲಾಗುವುದು;

ಊ) ಪ್ರತಿಮೆಗಾಗಿ ಖರ್ಚು ಮಾಡಿರುವ ಹಣ ಎಷ್ಟು ;

ಋ) ಕೆಳದಿಯ ಸರ್ವಾಂಗೀಣ ಅಭಿವೃದ್ಧಿಗೆ ಸರ್ಕಾರ ಕೈಗೊಂಡ ಯೋಜನೆಗಳೇನು; (ವಿವರ ಒದಗಿಸಿರಿ)?

ಶ್ರೀ ಧರ್ಮಸಿಂಗ್(ಮುಖ್ಯಮಂತ್ರಿಗಳು) :

ಅ) ಕೆಳದಿಯಲ್ಲಿರುವ ರಾಮೇಶ್ವರ ದೇವಸ್ಥಾನವನ್ನು ಮಾತ್ರ ರಾಷ್ಟ್ರೀಯ ಸಂರಕ್ಷಿತ ಸ್ಮಾರಕವೆಂದು ಘೋಷಿಸಿದ್ದು ಈ ಸ್ಮಾರಕವನ್ನು ಭಾರತೀಯ ಪುರಾತತ್ವ ಸರ್ವೇಕ್ಷಣೆ ಇಲಾಖೆ ಬೆಂಗಳೂರು ವೃತ್ತ ಇವರು ನಿರ್ವಹಿಸುತ್ತಿರುತ್ತಾರೆ. ಕಳೆದ ಮೂರು ವರ್ಷಗಳಲ್ಲಿ ಮೇಲಿನ ಸ್ಮಾರಕಕ್ಕೆ ಈ ಕೆಳಕಾಣಿಸಿದ ಸಂರಕ್ಷಣಾ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.

1. ಲಭ್ಯವಿರುವ ಹಾಗೂ ಹೊಸ ಮರದ ಭಾಗಗಳನ್ನು ಜೋಡಿಸಿ ಪೂರ್ವಭಾಗದಲ್ಲಿನ ಪ್ರಾಕಾರದ ಹಾನಿಗೊಂಡು ಬೀಳುತ್ತಿರುವ ಹೆಂಚು ಮೇಲ್ಛಾವಣಿಯನ್ನು ದುರಸ್ತಿಗೊಳಿಸಲಾಗಿದೆ.

2. ಪೂರ್ವಭಾಗದ ಪ್ರಾಕಾರದ ಪ್ರವೇಶದ ಬಾಗಿಲನ್ನು ಹೊಸ ಜೋಡಣೆಗಳಿಂದ ದುರಸ್ತಿಗೊಳಿಸಲಾಗಿದೆ.

3. ಮರದ ಛಾವಣಿ ಮತ್ತು ಇತರೆ ಮರದ ಭಾಗಗಳಿಗೆ ಮರಸಂರಕ್ಷಿತ ಎಣ್ಣೆಯಿಂದ ಲೇಪನ ಮಾಡಲಾಗಿದೆ.

4. ಪೂರ್ವಭಾಗದ ತೆರೆದ ನ್ಯಾಯಪ್ರಾಂಗಣದ ಮೇಲ್ಭಾಗದಲ್ಲಿರುವ ಹುಲ್ಲನ್ನು ತೆಗೆಯುವುದಿಲ್ಲದೆ ಅದನ್ನು ಸಿಂಗರಿಸಲಾಗಿದೆ.

5. ಪಶ್ಚಿಮ ಭಾಗದ ತೆರೆದ ನ್ಯಾಯಪ್ರಾಂಗಣದಲ್ಲಿ ಅಂದಾಜು 1300 ಚದರ ಮೀಟರ್ ಪ್ರದೇಶದಲ್ಲಿ ಹುಲ್ಲುಹಾಸಿಗೆಯನ್ನು ಒದಗಿಸಲಾಗಿದೆ .

6. ಪ್ರೇಕ್ಷಕರಿಗೆ ಕುಡಿಯುವ ನೀರಿನ ಸರಬರಾಜು ಹಾಗೂ ಹುಲ್ಲು ಹಾಸಿಗೆಯ ನಿರ್ವಹಣೆಗಾಗಿ ತೆರೆದ ಬಾವಿಯನ್ನು ತೋಡಲಾಗಿದೆ.

ಕಳೆದ ಮೂರು ವರ್ಷಗಳಲ್ಲಿ ಮೇಲೆ ವಿವರಿಸಿದ ಕಾಮಗಾರಿಗಳಿಗೆ ಒಟ್ಟು 7.89 ಲಕ್ಷರೂಪಾಯಿಗಳನ್ನು (ಸಾಮಾನ್ಯ ನಿರ್ವಹಣೆ ಹೊರತುಪಡಿಸಿ) ಖರ್ಚು ಮಾಡಲಾಗಿದೆ.

ಆ) ಹೌದು

ಇ) ನಿಗದಿಪಡಿಸಿದ ಹಣ ರೂ.9.05 ಲಕ್ಷಗಳು ಈ ಪುತ್ಥಳಿಯನ್ನು ಕೆಳದಿಯ ಸರ್ಕಲ್ ಹತ್ತಿರವಿರುವ ಪಂಚಾಯತಿ ಕಾರ್ಯಾಲಯದ ಎದುರು ಭಾಗದಲ್ಲಿ ಸ್ಥಾಪಿಸಲು ಯೋಜಿಸಲಾಗಿದೆ.

ಈ) ಪುತ್ಥಳಿ ನಿರ್ಮಾಣದ ಸ್ಥಳದ ಸುತ್ತ 60 ಮೀಟರ್ ಉದ್ದ 30 ಮೀಟರ್ ಅಗಲ ಗೋಡೆ ಕಾಮಗಾರಿ ಪ್ರಗತಿಯಲ್ಲಿದೆ.

ಉ) 2005ರ ಜೂನ್ ಅಂತ್ಯದ ವೇಳೆಗೆ ಮುಗಿಸುವ ಅಂದಾಜಿದೆ.

ಊ) ಪ್ರತಿಮೆಗಾಗಿ ರೂ.5.00 ಲಕ್ಷ ವೆಚ್ಚವಾಗುವ ಸಾಧ್ಯತೆ ಇರುತ್ತದೆ.

ಋ) ಪ್ರಶ್ನೆಗೆ 'ಅ' ರಲ್ಲಿ ಉತ್ತರಿಸಿದಂತೆ.

934(1029)ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ(ಕುಂದಾಪುರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕುಂದಾಪುರ ತಾಲ್ಲೂಕು ಅಸೋಡು ಜಾತ್ರೆಯ ಸಮಯದಲ್ಲಿ ಸೂಜಿ ಚುಚ್ಚಿದ ಪ್ರಕರಣದಲ್ಲಿ ಅಮಾಯಕರ ಮೇಲೆ ಉದ್ದೇಶ ಪೂರ್ವಕವಾಗಿ ಸುಳ್ಳು ಮೊಕದ್ದಮೆಗಳನ್ನು ದಾಖಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಎಷ್ಟು ಜನರ ಮೇಲೆ ಕೇಸು ದಾಖಲು ಮಾಡಲಾಗಿದೆ;

ಇ) ಎಷ್ಟು ಜನರನ್ನು ಬಂದಿಸಲಾಗಿದೆ;

ಈ) ಅಮಾಯಕರ ಮೇಲೆ ಹಾಕಿದ ಕೇಸನ್ನು ಸರ್ಕಾರ ಹಿಂದಕ್ಕೆ ಪಡೆಯಲು ತೀರ್ಮಾನಿಸಿದೆಯೇ;

ಉ) ಸದರಿ ಪ್ರಕರಣ ವಿಚಾರಣೆ ಯಾವ ಹಂತದಲ್ಲಿದೆ?

ಶ್ರೀ ಧರ್ಮಸಿಂಗ್(ಮುಖ್ಯಮಂತ್ರಿಗಳು) :

ಅ) ಈ ಘಟನೆಗೆ ಸಂಬಂಧಿಸಿದಂತೆ ತಪ್ಪಿತಸ್ಥರ ವಿರುದ್ಧ ಮಾತ್ರ ಪ್ರಕರಣಗಳು ದಾಖಲಾಗಿದ್ದು, ಅಮಾಯಕರ ಮೇಲೆ ಉದ್ದೇಶ ಪೂರ್ವಕವಾಗಿ ಯಾವುದೇ ಸುಳ್ಳು ಮೊಕದ್ದಮೆಗಳನ್ನು ದಾಖಲಿಸಿರುವುದಿಲ್ಲ.

ಆ) ಈ ಸಂಬಂಧದಲ್ಲಿ 147 ಜನರ ವಿರುದ್ಧ ಪ್ರಕರಣಗಳು ದಾಖಲಾಗಿವೆ.

ಇ) ಇದುವರೆಗೂ 22 ಜನರನ್ನು ಮಾತ್ರ ಬಂದಿಸಲಾಗಿದೆ.

ಈ) ಉಪ ಪ್ರಶ್ನೆ 'ಅ' ಭಾಗದ ಉತ್ತರದಿಂದ ಉದ್ಭವಿಸುವುದಿಲ್ಲ.

ಉ) ಈ ಘಟನೆಗೆ ಸಂಬಂಧಿಸಿದಂತೆ ಒಟ್ಟು 82 ಪ್ರಕರಣಗಳು ದಾಖಲಾಗಿದ್ದು, ಅವುಗಳಲ್ಲಿ 2 ಪ್ರಕರಣಗಳು ದಾಖಲಾಗಿದ್ದು, ಅವುಗಳಲ್ಲಿ 2 ಪ್ರಕರಣಗಳು ನ್ಯಾಯಾಲಯದಲ್ಲಿ ಖುಲಾಸೆ ಗೊಂಡಿರುತ್ತವೆ. ಉಳಿದ 80 ಪ್ರಕರಣಗಳು ನ್ಯಾಯಾಲಯದಲ್ಲಿ ಸಾಕ್ಷಿಗಳ ವಿಚಾರಣೆ ಹಂತದಲ್ಲಿರುತ್ತವೆ.

936(1031) ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ(ಕುಂದಾಪುರ) : ಮಾನ್ಯ ಮುಖ್ಯ ಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮತ್ಸ್ಯಾಶ್ರಯ ಯೋಜನೆಯಲ್ಲಿ ಮನೆ ಮಂಜೂರಾತಿ ಕೋರಿ ಉಡುಪಿ ಜಿಲ್ಲೆಯಿಂದ ಎಷ್ಟು ಅರ್ಜಿಗಳು ಬಂದಿವೆ (ಕ್ಷೇತ್ರವಾರು ವಿವರ ನೀಡುವುದು) ;

ಆ) ಹಲವಾರು ವರ್ಷಗಳಿಂದ ಮನೆ ಮಂಜೂರಾತಿ ಕೋರಿ ನಿರೀಕ್ಷೆಯಲ್ಲಿರುವ ಮೀನುಗಾರರಿಗೆ ಈ ವರ್ಷದಲ್ಲಿ ಮನೆ ಮಂಜೂರು ಮಾಡಲಾಗುವುದೇ :

ಇ) ಮೀನುಗಾರರಿಗೆ ಮನೆಗಳನ್ನು ನಿರ್ಮಿಸಲು ನೀಡುವ ಈಗಿನ ಮೊತ್ತ 30,000–00 ರಿಂದ 50,000–00 ಕ್ಕೆ ಹೆಚ್ಚಿಸಲಾಗುವುದೇ ?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) :

ಅ) ಮತ್ಸ್ಯಾಶ್ರಯ ಯೋಜನೆಯಲ್ಲಿ ಮನೆ ಮಂಜೂರಾತಿ ಕೋರಿ ಉಡುಪಿ ಜಿಲ್ಲೆಯಿಂದ 3668 ಅರ್ಜಿಗಳು ಬಂದಿರುತ್ತವೆ. ಕ್ಷೇತ್ರವಾರು ವಿವರಗಳು ಕೆಳಗಿನಂತಿರುತ್ತದೆ.

1	ಕಾಪು	302 ಅರ್ಜಿಗಳು
2	ಉಡುಪಿ	379 ಅರ್ಜಿಗಳು
3	ಬ್ರಹ್ಮಾವರ	990 ಅರ್ಜಿಗಳು
4	ಕುಂದಾಪುರ	908 ಅರ್ಜಿಗಳು
5	ಬೈಂದೂರು	1009 ಅರ್ಜಿಗಳು
6	ಕಾರ್ಕಳ	80 ಅರ್ಜಿಗಳು

ಆ) ಪ್ರಸಕ್ತ ಸಾಲಿನಲ್ಲಿ ಹೊಸದಾಗಿ ಯಾವುದೇ ಮನೆಗಳನ್ನು ಮಂಜೂರು ಮಾಡುವ ಯೋಜನೆ ಇರುವುದಿಲ್ಲ. ಆದರೆ ಮತ್ಸ್ಯಾಶ್ರಯ ಎರಡನೇ ಹಂತದ ಯೋಜನೆಯಲ್ಲಿ 2001–02, 2002–03 ಮತ್ತು 2003–04ನೇ ಸಾಲಿನಲ್ಲಿ ಒಟ್ಟು 523 ಮನೆಗಳನ್ನು ಉಡುಪಿ ಜಿಲ್ಲೆಗೆ ಮಂಜೂರು ಮಾಡಲಾಗಿದೆ.

ಇ) ಮನೆ ನಿರ್ಮಾಣ ಮೊತ್ತವನ್ನು ಹೆಚ್ಚಿಸುವ ಪ್ರಸ್ತಾವನೆ ಇರುವುದಿಲ್ಲ.

937(1032) ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ) : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಪ್ರತಿ ವರ್ಷ ಸಮುದ್ರ ಕೊರೆತ ಉಂಟಾಗಿ, ಸಮುದ್ರ ತೀರದಲ್ಲಿ ವಾಸಿಸುವ ಮೀನುಗಾರರ ಹಾಗೂ ಇತರೆ ವರ್ಗದವರ ಮನೆ ಆಸ್ತಿಪಾಸ್ತಿ ಮೀನುಗಾರಿಕಾ ರಸ್ತೆಗಳಿಗೆ ಅಪಾರ ಹಾನಿ ಸಂಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಬಂದಲ್ಲಿ ಸಮುದ್ರ ಕೊರೆತ ತಡೆಗಟ್ಟಲು ಶಾಶ್ವತ ಯೋಜನೆ ರೂಪಿಸಿದೆಯೇ?

ಇ) ರೂಪಿಸಿದಲ್ಲಿ ಯಾವ ಹಂತದಲ್ಲಿದೆ?

ಈ) ಕಾಮಗಾರಿಗಳನ್ನು ಯಾವಾಗ ಕೈಗೊಳ್ಳಲಾಗುವುದು?

ಉ) ಉಡುಪಿ ಜಿಲ್ಲೆಯ ಕರಾವಳಿ ಪ್ರದೇಶದಲ್ಲಿ ಸಮುದ್ರ ತಡೆಗೋಡೆ ನಿರ್ಮಿಸಲು ಉದ್ದೇಶಿಸಿದ ಪ್ರದೇಶಗಳು ಯಾವುವು (ವಿಧಾನ ಸಭಾವಾರು ವಿವರ ಒದಗಿಸುವುದು) ?

ಊ) ಹಲವಾರು ಕಾರಣಗಳಿಂದ ಯೋಜನೆಗಳು ವಿಳಂಬವಾಗಿ ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟಾಗುತ್ತಿರುವುದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸುವುದೇ ?

ಶ್ರೀ ಹೆಚ್.ಡಿ. ರೇವಣ್ಣ(ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಹೌದು

ಆ) ಹೌದು

ಇ) 1. ಕೇಂದ್ರ ಪುರಸ್ಕೃತ ಯೋಜನೆಯಡಿ ರೂ. 3.21 ಕೋಟಿ ಅಂದಾಜು ವೆಚ್ಚದಲ್ಲಿ ಕುಂದಾಪುರ ಪಡುವರಿ ಬಳಿ ಶೀಘ್ರದಲ್ಲಿಯೇ ಶಾಶ್ವತ ಸಮುದ್ರ ತಡೆಗೋಡೆ ನಿರ್ಮಿಸುವ ಕಾಮಗಾರಿ ಕೈಗೆತ್ತಿಕೊಳ್ಳಲಾಗುತ್ತಿದೆ.

2. ರೂ. 135.95 ಕೋಟಿ ಅಂದಾಜು ವೆಚ್ಚದಲ್ಲಿ ಕರಾವಳಿಯ ಸುಮಾರು 48.875 ಕಿ.ಮೀ. ಉದ್ದಕ್ಕೂ ಶಾಶ್ವತ ತಡೆಗೋಡೆ ನಿರ್ಮಿಸುವ ಯೋಜನೆಯು ಕೇಂದ್ರ ಸರ್ಕಾರದ ಪರಿಶೀಲನೆ ಹಂತದಲ್ಲಿದೆ.

ಈ) ಕೇಂದ್ರ ಸರ್ಕಾರದ ಅನುಮತಿ ದೊರಕಿದ ನಂತರ ಸಂಪನ್ಮೂಲದ ಲಭ್ಯತೆಯ ಮೇಲೆ ಹಂತ ಹಂತವಾಗಿ ಕೈಗೆತ್ತಿಕೊಳ್ಳಲಾಗುವುದು.

ಉ) ಉಡುಪಿ ಜಿಲ್ಲೆಯಲ್ಲಿ ರಾಷ್ಟ್ರೀಯ ಕರಾವಳಿ ಸಂರಕ್ಷಣಾ ಯೋಜನೆ (National Coastal Protection Project) ಹಾಗೂ ಇತರೆ ಯೋಜನೆಯಡಿ ಕೈಗೊಳ್ಳಲು ಉದ್ದೇಶಿಸಿರುವ ಶಾಶ್ವತ ತಡೆಗೋಡೆ ಕಾಮಗಾರಿಗಳ ವಿವರ :

1. ಕಾಪು ಕ್ಷೇತ್ರದ ಹೆಜಮಾಡಿ, ಕಡಿಪಟ್ನ, ತೆಂಕ ಎರ್ಮಾಳ, ಬಡ ಎರ್ಮಾಳ, ಉಚ್ಚಿಲ, ಮೂಳೂರು, ಪೊಲಿಪು ಪಡು ಉಳಿಯರಗೋಳಿ ಪಡುಕೆರೆ

2. ಉಡುಪಿ ಕ್ಷೇತ್ರದ ಉಳಿಯರಗೋಳಿ ಪಡುಕೆರೆ

3. ಬ್ರಹ್ಮಾವರ ಕ್ಷೇತ್ರದ ಹೊಡೆ ಕೆಮ್ಮಣ್ಣು, ಕೋಡಿ ಬೆಂಗ್ರೆ, ಹೊಸ ಬೆಂಗ್ರೆ ಕೋಡಿ ಕನ್ಯಾವ, ಪರಂಪಳ್ಳಿ ಪಡುಕೆರೆ, ಕೊಟಪಟ್ಟು, ಮಣೂರು ಪಡುಕೆರೆ

4. ಕುಂದಾಪುರ ಕ್ಷೇತ್ರದ ಬಿಜಾಡಿ, ಕಸಬಾ ಕೋಡಿ

5. ಬೈಂದೂರು ಕ್ಷೇತ್ರದ ಮರವಂತೆ, ನಾವುಂದಾ ಆದ್ರಗೋಳಿ, ಹೊಸ ಹಿತ್ಲು, ಗಂಗೆ ಬೈಲು, ಉಪುಂದ ಅಮ್ಮನವರ ತೊಟ್ಟಿಲು, ಆಳ್ವೆಕೋಡಿ ಕಳಿಹಿತ್ಲು ಮತ್ತು ಪಡುವರಿ.

ಊ) ಹೌದು.

943(1281) ಶ್ರೀ ಜಗದೀಶ್ ಶೆಟ್ಟರ್(ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಜಿಲ್ಲಾ ಕೇಂದ್ರ ಸ್ಥಾನದಿಂದ 20 ಕಿ.ಮೀ.ವರೆಗೆ ಖಾಸಗೀ ಬಸ್‌ನವರಿಗೆ ಬಸ್ ಓಡಿಸಲು ಅವಕಾಶ ನೀಡುವ ಅಧಿಸೂಚನೆಯನ್ನು ಸರ್ಕಾರ ಹೊರಡಿಸಿದೆಯೇ ?

ಆ) ಈ ಅಧಿಸೂಚನೆಯಿಂದ ಸರ್ಕಾರಿ ಸಾರಿಗೆ ಸಂಸ್ಥೆಗೆ ನಷ್ಟವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಬಂದಿದ್ದಲ್ಲಿ, ಅಧಿಸೂಚನೆ ರದ್ದುಗೊಳಿಸಲು ಸರ್ಕಾರ ನಿರ್ಧರಿಸಿದೆಯೇ ?

ಈ) ಹುಬ್ಬಳ್ಳಿ– ಧಾರವಾಡ ಮಹಾನಗರದಲ್ಲಿ ಬೇಂದ್ರೆ ನಗರ ಸಾರಿಗೆ ಸಂಸ್ಥೆಗೆ ಕೊಟ್ಟಿರುವ ಪರವಾನಿಗೆ ವಾಪಸ್ಸು ಪಡೆಯಲು ಸರ್ಕಾರ ನಿರ್ಧರಿಸಿದೆಯೇ; ಯಾವಾಗ ವಾಪಸ್ಸು ಪಡೆಯಲಾಗುವುದು ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು) :

ಅ) ಹೌದು.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ಈ) ನಿರ್ಧರಿಸಿಲ್ಲ.

946(1521) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ.(ಬ್ರಹ್ಮಾವರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಉಡುಪಿ ತಾಲ್ಲೂಕಿನ ಕೋಡಿಬೆಂಗ್ರಿಯಲ್ಲಿ ಬ್ರೇಕ್ ವಾಟರ್ ನಿರ್ಮಿಸಲು ಮೀನುಗಾರರಿಂದ ಹಾಗೂ ಗ್ರಾಮಸ್ಥರಿಂದ ಬಹು ದಿನಗಳಿಂದ ಬೇಡಿಕೆ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬ್ರೇಕ್ ವಾಟರ್ ನಿರ್ಮಿಸಲು ಸರ್ಕಾರವು ಕೈಗೊಂಡ ಕ್ರಮವೇನು ;

ಇ) ಇದರ ನಿರ್ಮಾಣಕ್ಕೆ ತಗಲುವ ವೆಚ್ಚವೆಷ್ಟು;

ಈ) ಇದಕ್ಕಾಗಿ ಮೀಸಲಿಟ್ಟ ಅನುದಾನವೆಷ್ಟು (ವಿವರ ನೀಡುವುದು)?

ಶ್ರೀ ಧರ್ಮಸಿಂಗ್(ಮುಖ್ಯಮಂತ್ರಿಗಳು) :

ಅ) ಉಡುಪಿ ತಾಲ್ಲೂಕಿನ ಕೋಡಿಬೆಂಗ್ರಿಯಲ್ಲಿ ಬ್ರೇಕ್ ವಾಟರ್ ನಿರ್ಮಿಸಲು ಮೀನುಗಾರರಿಂದ ಹಾಗೂ ಗ್ರಾಮಸ್ಥರಿಂದ ಸದ್ಯ ಯಾವುದೇ ಅಧಿಕೃತವಾದ ಬೇಡಿಕೆ ಇರುವುದಿಲ್ಲ.

ಆ) ಅನ್ವಯಿಸುವುದಿಲ್ಲ

ಇ) ಅನ್ವಯಿಸುವುದಿಲ್ಲ

ಈ) ಈ ಬಗ್ಗೆ ಯಾವುದೇ ಅನುದಾನವನ್ನು ಪ್ರಸಕ್ತ ಸಾಲಿನಲ್ಲಿ ನಿಗದಿಪಡಿಸಿರುವುದಿಲ್ಲ.

947(1613) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. (ಬ್ರಹ್ಮಾವರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಉಡುಪಿ ತಾಲ್ಲೂಕಿನ ಕೋಡಿ ಕನ್ಯಾನದಲ್ಲಿ ಟಿ–ಜಟ್ಟಿ ನಿರ್ಮಿಸಲು ಸರ್ಕಾರವು ಕೈಗೊಂಡ ಕ್ರಮವೇನು ;

ಆ) ಇದರ ನಿರ್ಮಾಣಕ್ಕಾಗಿ ತಗಲುವ ವೆಚ್ಚ ಹಾಗೂ ಮೀಸಲಿಟ್ಟ ಅನುದಾನವೆಷ್ಟು;

ಇ) ಸದರಿ ನಿರ್ಮಾಣವನ್ನು ಯಾವಾಗ ಕೈಗೊಳ್ಳಲಾಗುವುದು ಮತ್ತು ಪೂರ್ಣಗೊಳಿಸಲು ಹಾಕಿಕೊಂಡಿರುವ ಕಾಲಾವಧಿ ನಿಗದಿಪಡಿಸಲಾಗುವುದೇ ?

ಶ್ರೀ ಧರ್ಮಸಿಂಗ್(ಮುಖ್ಯಮಂತ್ರಿಗಳು) :

ಅ) ಉಡುಪಿ ತಾಲ್ಲೂಕಿನ ಕೋಡಿ-ಕನ್ಯಾನದಲ್ಲಿ ಟಿ-ಜೆಟ್ಟಿ ನಿರ್ಮಾಣದ ಅಗತ್ಯತೆಯ ಬಗ್ಗೆ ಪೂರ್ವಭಾವಿ ಮಾಹಿತಿಗಳನ್ನು ಸ್ಥಳೀಯ ಪ್ರಾಧಿಕಾರಗಳಿಂದ ಸಂಗ್ರಹಿಸಲಾಗುತ್ತಿದೆ.

ಆ) ಮೇಲಿನ ಕಾರಣದಿಂದಾಗಿ, ಉದ್ಭವಿಸುವುದಿಲ್ಲ.

ಇ) ಮೇಲಿನ ಕಾರಣದಿಂದಾಗಿ, ಉದ್ಭವಿಸುವುದಿಲ್ಲ.

949(1531) ಶ್ರೀ ಜೀವರಾಜ್ ಡಿ.ಎನ್. (ಶೃಂಗೇರಿ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಒಳನಾಡು ಮೀನುಗಾರರಿಗೆ ಸರ್ಕಾರ ವಾಸಿಸಲು ಮನೆ ಕಟ್ಟಿಕೊಡುತ್ತಿದೆಯೇ; ಹೌದಾದಲ್ಲಿ, ಕಳೆದ ಹಾಗೂ ಪ್ರಸ್ತುತ ಸಾಲಿನಲ್ಲಿ ಕಟ್ಟಿದ ಮನೆಗಳ ಸಂಖ್ಯೆ ಎಷ್ಟು (ಚಿಕ್ಕಮಗಳೂರು ಜಿಲ್ಲೆಯ ತಾಲ್ಲೂಕುವಾರು ವಿವರ ನೀಡುವುದು) ;

ಆ) ಭದ್ರಾ ಹಿನ್ನೀರಿನಲ್ಲಿ ಇರುವ ಮೀನುಗಾರರ ಸಂಖ್ಯೆ ಎಷ್ಟು ;

ಇ) ಭದ್ರಾ ಹಿನ್ನೀರಿನಲ್ಲಿ ಎಷ್ಟು ಲಕ್ಷ ಮೀನು ಮರಿಗಳನ್ನು ಬಿಡಲಾಗಿದೆ?

ಶ್ರೀ ಧರ್ಮಸಿಂಗ್(ಮುಖ್ಯಮಂತ್ರಿಗಳು) :

ಅ) ಹೌದು. ಚಿಕ್ಕಮಗಳೂರು ಜಿಲ್ಲೆಯ ಈ ಕೆಳಕಂಡ ತಾಲ್ಲೂಕುಗಳಿಗೆ ಮತ್ಸ್ಯಾಶ್ರಯ ಮನೆಗಳು ಮಂಜೂರಾಗಿದ್ದು, ಮನೆಗಳ ನಿರ್ಮಾಣ ಕಾರ್ಯವನ್ನು ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ(ನಿ) ಇವರಿಗೆ ವಹಿಸಲಾಗಿದೆ.

ತಾಲ್ಲೂಕು	ಹಿಂದಿನ ಸಾಲು	ಪ್ರಸಕ್ತ ಸಾಲು
ಕಡೂರು	20	–
ತರೀಕೆರೆ	10	–

ಈ 30 ಮನೆಗಳ ಪೈಕಿ ಈವರೆಗೆ 21 ಫಲಾನುಭವಿಗಳನ್ನು ಅನುಮೋದಿಸಿದ್ದು ಒಂದು ಮನೆಯನ್ನು ನಿರ್ಮಿಸಲಾಗಿದೆ.

ಆ) ಭದ್ರಾ ಹಿನ್ನೀರಿನಲ್ಲಿ ಅಂದಾಜು 230 ಸಕ್ರಿಯ ಮೀನುಗಾರರಿರುತ್ತಾರೆ.

ಇ) 2001–02ನೇ ಸಾಲಿನಿಂದ ಇಲ್ಲಿಯವರೆಗೆ ಭದ್ರಾ ಹಿನ್ನೀರಿನಲ್ಲಿ 11.47 ಲಕ್ಷ ಮೀನುಮರಿಗಳನ್ನು ಬಿಡಲಾಗಿದೆ.

950(1532) ಶ್ರೀ ಜೀವರಾಜ್ ಡಿ.ಎನ್.(ಶೃಂಗೇರಿ) : ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಶೃಂಗೇರಿ, ಕೊಪ್ಪ ಹಾಗೂ ನರಸಿಂಹರಾಜಪುರ ತಾಲ್ಲೂಕುಗಳಲ್ಲಿ ಪ್ರಸಕ್ತ ಸಾಲಿನಲ್ಲಿ ಮರಳು ಹರಾಜು ನಡೆಸಲಾಗಿದೆಯೇ; ನಡೆಸಲಾಗದಿದ್ದಲ್ಲಿ ಕಾರಣಗಳೇನು ;

ಆ) ಈ ಮೂರು ತಾಲ್ಲೂಕುಗಳಲ್ಲಿ ಅಧಿಕೃತವಾಗಿ ಮರಳು ಗುತ್ತಿಗೆ ನೀಡಲು/ನೀಡುತ್ತಿರುವ ಸ್ಥಳಗಳು ಯಾವುವು;

ಇ) ಈ ತಾಲ್ಲೂಕುಗಳಲ್ಲಿ ಯಂತ್ರ ಉಪಯೋಗಿಸಿ ಮರಳನ್ನು ತೆಗೆಯಲು ಅನುಮತಿ ನೀಡಲಾಗಿದೆಯೇ ;

ಈ) ನೀಡಲಾಗಿದ್ದಲ್ಲಿ, ಯಾವ ಯಂತ್ರವನ್ನು ಉಪಯೋಗಿಸಲು ಅನುಮತಿ ನೀಡಲಾಗಿದೆ;

ಉ) ಈ ತಾಲ್ಲೂಕುಗಳಲ್ಲಿ ನೀರಿನಿಂದ ಸಕ್ಷನ್(Suction) ಯಂತ್ರಗಳ ಮೂಲಕ ಮರಳು ತೆಗೆಯುತ್ತಿರುವುದು ಸರ್ಕಾರ ಗಮನಕ್ಕೆ ಬಂದಿದೆಯೇ ;

ಊ) ಬಂದಿದ್ದಲ್ಲಿ, ಸರ್ಕಾರ ಇದನ್ನು ನಿಲ್ಲಿಸಲು ತೆಗೆದುಕೊಂಡ ಕ್ರಮಗಳೇನು?

ಶ್ರೀ ಧರ್ಮಸಿಂಗ್(ಮುಖ್ಯ ಮಂತ್ರಿಗಳು) :

ಅ) ಶೃಂಗೇರಿ ಮತ್ತು ಕೊಪ್ಪ ತಾಲ್ಲೂಕುಗಳಲ್ಲಿ ಮಾತ್ರ ಪ್ರಸಕ್ತ ಸಾಲಿನಲ್ಲಿ ಮರಳು ಹರಾಜು ಪ್ರಕ್ರಿಯೆ ನಡೆಸಲಾಗಿದೆ. ಆದರೆ ನರಸಿಂಹರಾಜಪುರ ತಾಲ್ಲೂಕಿನಲ್ಲಿ ನೀರಿನ ಆಳ ಹೆಚ್ಚಿರುವುದರಿಂದ ಈ ಸಾಲಿನಲ್ಲಿ ಹರಾಜು ಪ್ರಕ್ರಿಯೆ ಮಾಡಲಾಗಿಲ್ಲ.

ಆ) (1) ಮರಳು ಹರಾಜು ಪ್ರಕಟಣೆ ಹೊರಡಿಸಿ ಹರಾಜು ಮಾಡಲಾದ ಮರಳು ಗುತ್ತಿಗೆಗಳು

ಶೃಂಗೇರಿ ತಾಲ್ಲೂಕು		ಕೊಪ್ಪ ತಾಲ್ಲೂಕು	
ಸ್ಥಳ	ಕ್ಷೇತ್ರ	ಸ್ಥಳ	ಕ್ಷೇತ್ರ
ಶೃಂಗೇರಿ	300	ನರಸೀಪುರ	100
ಹಾಲಂದೂರು ಮಸಿಗೆ	200	ನರಸೀಪುರ	200
ಅಡ್ಡಗದ್ದೆ I	100	ತಮ್ಮಡಗಳ್ಳಿ I	100
ಅಡ್ಡಗದ್ದೆ I	200	ತಮ್ಮಡಗಳ್ಳಿ II	300
		ತಮ್ಮಡಗಳ್ಳಿ III	200
		ಭುವನ ಕೋಟೆ	100
		ಹರಿಹರಪುರ I	300
		ಹರಿಹರಪುರ	300
		ಅದ್ದಡ	200
		ಬೊಮ್ಮಲಾಪುರ	200
		ಹರಿಹರಪುರ III	200

ಇ) ಇಲ್ಲ

ಈ) ಯಾವುದೇ ಯಂತ್ರ ಉಪಯೋಗಿಸಿ ಮರಳು ತೆಗೆಯಲು ಅನುಮತಿ ನೀಡಿಲ್ಲ.

ಉ) ಬಂದಿದೆ

ಊ) ಯಂತ್ರ ಉಪಯೋಗಿಸಿ ಮರಳು ಎತ್ತುವ ಗುತ್ತಿಗೆದಾರರಿಗೆ ನೋಟೀಸು ಜಾರಿ ಮಾಡಿದ್ದು, ಈ ರೀತಿಯಾಗಿ ಯಂತ್ರಗಳನ್ನು ಉಪಯೋಗಿಸಿ ಮರಳು ತೆಗೆಯುವುದನ್ನು ನಿಲ್ಲಿಸಲಾಗಿದೆ.

952(1534) ಶ್ರೀ ಜೀವರಾಜ್ ಡಿ.ಎನ್.(ಶೃಂಗೇರಿ) : ಮಾನ್ಯ ಮುಖ್ಯ ಮಂತ್ರಿಯವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಯುವ ಡಾಟ್ ಕಾಂ ಯೋಜನೆ ಜಾರಿಯಲ್ಲಿದೆಯೇ;

ಆ) ಈ ಯೋಜನೆಯಡಿ ಪ್ರಾರಂಭದಿಂದ ಈ ತನಕ ತರಬೇತಿ ನೀಡಲಾಗಿದೆ (ವರ್ಷವಾರು, ತಾಲ್ಲೂಕುವಾರು, ಲಿಂಗವಾರು, ಪರಿಶಿಷ್ಟ ಜಾತಿ, ಪಂಗಡ, ಇತರೆ ಜಾತಿವಾರು ಮಾಹಿತಿ ನೀಡುವುದು;)

ಇ) ಈ ಯೋಜನೆಯಲ್ಲಿ ಭಾಗಿಯಾಗಿರುವ ಖಾಸಗಿ ಸಂಸ್ಥೆಗಳು ಯಾವುವು; ಈ ಸಂಸ್ಥೆಗಳನ್ನು ಯಾವ ಸೇವೆಗಳನ್ನು ಪಡೆಯಲು ಯಾವಾಗ ಭಾಗಿಯಾದವು;

ಈ) ಇವುಗಳನ್ನು ಯಾವ ಮಾನದಂಡ ಅನುಸರಿಸಿ ಆಯ್ಕೆ ಮಾಡಲಾಗಿದೆ ;

ಉ) ಇವುಗಳಿಗೆ ಸಂದಾಯವಾದ ಹಣವೆಷ್ಟು (ಸಂಘವಾರು ವಿವರ ನೀಡುವುದು)

ಶ್ರೀ ಧರ್ಮಸಿಂಗ್(ಮುಖ್ಯ ಮಂತ್ರಿಯವರು) :

ಅ) ಹೌದು

ಆ) ಡಿಸೆಂಬರ್ 2004ರ ಅಂತ್ಯದ ವರೆಗೆ 140395 ಅಭ್ಯರ್ಥಿಗಳು ಈ ಯೋಜನೆಯಡಿ ತರಬೇತಿ ಪಡೆದಿರುತ್ತಾರೆ. ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

ಇ) ಖಾಸಗಿ ಸಂಸ್ಥೆಗಳು :

(1) ಮೆ: ಎನ್‌ಐಐಟಿ ಲಿಮಿಟೆಡ್,

(2) ಮೆ: ಅಪ್ಟೆಕ್ ಲಿಮಿಟೆಡ್,

(3) ಮೆ: ಎಸ್‌ಎಸ್‌ಐ ಲಿಮಿಟೆಡ್

ಈ ಯೋಜನೆಯ ಪ್ರಾರಂಭದಿಂದಲೂ ಮೇಲಿನ ಸಂಸ್ಥೆಗಳು ತಮಗೆ ಹಂಚಿಕೆಯಾಗಿರುವ ಯುವ ಡಾಟ್ ಕಾಂ ಕೇಂದ್ರಗಳಲ್ಲಿ ತರಬೇತಿಯನ್ನು ನೀಡುತ್ತಿವೆ.

ಈ) ಸಂಸ್ಥೆಗಳು ನೀಡುವ ತರಬೇತಿ ಪಠ್ಯ ಕ್ರಮಕ್ಕೆ ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಲಭಿಸುವ ಮಾನ್ಯತೆ, ತರಬೇತಿ ವಿಧಾನ ಅವುಗಳ ಸಾಮರ್ಥ್ಯತೆ ಮತ್ತು ತರಬೇತಿ ನೀಡಲು ನೈಪುಣ್ಯತೆಯನ್ನಾಧರಿಸಿ ಅಯ್ಕೆ ಮಾಡಲಾಗಿದೆ.

ಉ) ವಿವರಗಳು ಈ ಕೆಳಕಂಡಂತಿವೆ

ರೂ.(ಲಕ್ಷಗಳಲ್ಲಿ)

ವರ್ಷ	ಮೆ: ಎನ್‌ಐಐಟಿ	ಮೆ: ಆಪ್ಟೆಕ್	ಮೆ: ಎಸ್‌ಎಸ್‌ಐ
2002-03	16.46	13.09	2.23
2003-04	12.34	15.49	13.15
2004-05	5.48	11.12	9.57
ಒಟ್ಟು	**34.28**	**39.7**	**24.95**

ANNEXURE

Year Wise, Taluk Wise, Gender Wise, SC/ST, Others

Centres	2000-01				2001-02				2002-03				2003-04 (till December)			
	SC/ST	PHY	WOH	OTH	SC/ST	PHY	WOH	OTH	SC/ST	PHY	WOH	OTH	SC/ST	PHY	WOH	OTH
Aland	0	0	20	24	0	0	35	24	0	0	13	16	0	0	14	17
Ankola	12	0	14	24	8	0	25	34	6	0	32	30	0	0	14	16
Arabhavi	0	0	8	18	0	0	62	274	0	0	19	101	12	0	30	21
Aurad	0	0	0	0	0	0	0	0	0	0	7	58	24	0	59	76
Bannur	12	0	45	56	14	0	74	85	34	0	22	53	12	0	40	68
Bantwal	0	0	0	0	3	20	56	28	0	1	92	84	0	0	63	64
Belur	0	0	0	0	0	0	24	46	16	11	22	32	45	0	44	72
Berur	0	0	0	0	0	0	0	0	32	0	21	16	0	0	0	0
Bathmangala	0	0	0	0	11	0	16	23	0	1	18	28	12	2	89	114
Bhatkal(Pilot)	19	13	1	40	7	1	25	44	24	0	66	88	84	0	79	124
Bidar-Pilot	0	39	0	121	0	0	32	78	7	0	20	146	16	0	63	69
Bilagi	24	5	56	68	42	0	56	64	28	0	32	75	44	0	58	62
Bollali	0	0	0	0	0	0	45	52	0	14	24	0	0	0	0	0
Binnypet	0	0	0	0	0	0	13	15	0	0	12	16	12	0	14	16
Chamaraj	0	0	0	5	0	0	2	2	0	1	49	25	13	1	231	132
Chamundeshwari	0	0	0	0	2	0	82	35	12	0	99	98	22	2	38	55
Chennagiri	0	0	2	4	0	2	83	55	0	2	47	53	24	4	56	64
Chicholi	0	0	0	0	12	2	24	26	14	2	24	12	0	0	14	34
Chickpet	0	0	0	0	0	0	56	78	0	0	45	67	0	0	45	87
Chintamani	0	0	34	45	0	0	45	79	0	1	44	59	68	0	124	142
Chittapur	0	0	12	24	12	0	10	23	12	0	13	15	0	0	16	11
Deodurga	0	0	0	0	70	0	31	32	0	0	40	27	0	14	44	74
Devanahalli	0	0	0	0	0	30	45	0	0	35	30	0	0	0	0	0
Dharwad Rural	0	0	12	16	0	0	23	45	0	0	34	45	0	0	0	0
Doddaballapur	0	0	0	0	0	0	40	46	0	0	50	46	0	0	36	50
Gadag	12	4	45	64	14	6	38	63	14	2	50	116	32	0	65	86

Gouribidanur	0	0	25	30	0	0	45	62	0	0	75	89	0	0	75	31
gundlupet	0	0	0	0	13	0	21	70	0	0	45	52	0	0	96	100
Gurmitkal	0	0	0	0	13	0	21	60	0	0	18	24	0	0	27	28
Hangal	0	0	0	0	5	1	46	63	28	3	35	26	32	0	45	67
Hanur	0	0	0	0	0	0	16	25	0	0	38	33	0	0	35	40
HDKOTE	0	0	0	0	73	0	58	78	24	0	12	32	44	0	23	36
Honnavar	0	0	0	4	4	0	59	61	0	1	46	50	0	0	30	57
Hoskote	0	0	0	0	0	0	0	0	0	0	54	62	0	0	70	80
Hubli(Pilot)	24	6	177	268	12	7	97	240	12	2	84	265	15	5	225	312
Hukkeri	0	0	0	0	0	0	55	42	0	0	50	43	0	0	47	50
Hulsoor	0	0	0	0	0	0	0	0	0	0	31	30	0	1	17	33
Hunusur	0	0	0	0	0	0	0	0	112	3	64	75	56	0	65	86
Huvina hipperagi	0	0	0	0	7	2	11	25	12	2	41	65	24	0	45	97
Jewargi	0	0	0	0	2	2	3	44	0	0	47	45	32	0	40	54
Kagwad	0	0	0	0	0	0	30	72	0	0	51	46	24	0	32	60
Kalagatgi	0	0	0	0	0	0	12	14	0	0	12	23	2	0	14	13
Kalamala	0	0	0	0	0	0	0	0	0	0	7	45	0	0	51	122
Kamalapur	0	0	0	0	0	0	24	67	0	0	36	53	32	2	45	56
Kanakagiri	0	0	0	0	45	0	64	78	32	2	67	95	23	0	56	96
Kanakapura	0	0	12	32	0	0	23	34	12	0	14	23	14	0	14	42
KGF	0	0	0	0	0	0	19	38	0	0	31	44	62	2	65	86
Khanapur	0	0	0	0	0	0	5	22	0	0	39	98	0	0	48	34
Kolar	0	0	0	0	0	0	15	22	0	0	26	23	14	0	45	56
Koratagere	0	0	0	0	8	0	28	52	7	0	28	38	76	0	78	91
Kumta	0	1	11	29	0	0	10	13	2	0	83	64	14	0	23	28
Kundapur	0	0	0	0	4	0	79	69	0	0	38	40	32	0	65	88
Kustagi	0	0	0	0	0	0	38	51	0	0	61	44	0	0	42	82
Magadi	0	0	0	0	0	0	25	18	32	0	25	30	34	0	27	43
Malavalli	0	0	7	8	0	0	20	41	0	0	27	50	12	0	51	65
Malleshwaram	0	0	0	0	3	1	76	43	0	0	64	59	0	0	0	0
Malur	0	0	0	0	0	0	24	26	0	14	52	0	14	0	16	18
Mandya(Pilot)	1	0	31	95	3	0	30	44	6	0	52	80	3	0	21	26

Mangalore	0	0	0	0	0	0	15	14	0	0	79	124	0	0	40	39
Manvi	0	0	0	0	1	0	5	20	0	0	48	96	0	1	64	130
Mercara	0	0	3	0	6	0	26	28	25	0	66	97	0	0	0	0
Mulubagilu	0	0	0	0	24	0	32	44	14	0	26	34	56	0	14	48
Mundgod	0	0	0	0	0	0	45	23	0	0	34	23	0	0	36	21
N.R.Pura	0	0	0	12	0	0	45	54	14	0	45	32	12	0	26	35
Nanjangud	0	0	0	0	151	0	176	105	59	0	35	42	0	0	0	0
Navalgund	0	0	0	0	3	0	17	23	2	1	47	82	6	2	55	51
Nelamangala	0	0	9	5	0	0	42	10	0	0	31	29	45	4	54	67
Pandavapura	0	0	0	0	0	0	0	0	16	2	66	54	41	0	32	43
parasagad	0	0	0	0	0	24	0	36	47	12	0	45	34	0	143	224
Pavagad	0	0	0	0	0	0	0	0	39	13	11	36	10	0	225	286
Periyapatna	0	0	0	0	0	0	49	22	0	0	48	52	14	0	46	85
Rajajinagar	0	0	0	0	0	0	12	32	14	0	32	45	0	0	34	23
Ranibennur	0	0	0	0	4	0	34	46	0	1	277	301	163	0	292	315
Sadalaga	0	0	0	0	0	0	0	16	0	0	42	97	0	0	38	52
Sandur	0	0	0	0	0	0	20	24	13	2	169	177	0	0	110	140
Savanur	0	0	0	0	0	0	28	49	0	0	40	46	0	0	50	15
Shahabad	0	0	0	0	12	0	23	24	14	0	32	24	4	0	23	14
Shantinagar	0	0	0	0	0	0	71	31	1	1	172	118	0	0	0	0
Shivajinagar	0	0	0	0	11	0	39	19	7	0	57	78	23	0	45	67
Shorapur	0	0	0	0	0	0	23	34	0	0	34	23	0	0	35	23
Siddapur	0	0	0	0	1	0	23	28	1	0	26	23	0	0	23	16
Sindagi	0	0	0	0	0	14	0	34	23	14	0	45	56	0	42	66
Sira	0	0	0	0	12	0	24	34	15	0	34	46	14	0	45	65
Sirsi	0	0	0	0	24	0	32	44	12	0	34	45	25	0	34	43
Sorab	0	0	0	0	12	0	32	42	14	0	34	42	12	0	42	24
Sringeri	0	0	0	0	0	0	34	45	0	0	23	24	0	0	40	64
Srinivaspur	0	0	0	0	24	0	34	45	14	0	24	42	12	0	24	43
Srirangapatna	0	0	0	0	0	0	0	0	4	1	21	39	130	0	7	113
Sulya	0	0	0	0	39	0	75	31	114	0	62	44	0	0	52	72
Udupi	0	0	0	0	0	0	16	15	0	0	45	54	0	0	45	56

Varthur	0	0	0	0	0	0	16	14	0	0	14	25	0	0	23	25
Yelburga	0	0	0	0	0	0	65	27	14	0	45	56	14	0	24	46
Alur	20	15	0	40	10	25	0	50	30	50	0	115	50	75	0	200
Bagalkot	20	28	0	38	83	158	0	255	10	97	0	94	32	153	0	167
Baindur	5	15	0	20	12	95	0	75	5	105	0	72	18	98	0	90
Basavanabegewadi	18	117	0	201	142	459	0	647	63	139	0	262	121	56	0	111
Basavanagudi	0	12	0	14	8	47	0	40	43	384	7	267	38	432	4	166
Bhalki	4	27	0	113		142	0	204	50	76	0	120	241	125	0	171
Chamrajnagar	0	28	0	13	40	49	1	76	72	122	0	72	43	169	1	105
Channarayapatna	0	0	0	0	0	247	0	239	0	66	0	66	0	89	0	139
Chitradurga(Pilot)	2	6	0	14	18	64	0	83	65	47	0	61	55	65	0	84
Davangere	2	6	0	31	7	124	0	217	2	73	0	171	24	74	5	234
Gulbarga	10	15	0	35	25	105	0	180	30	130	0	180	55	140	0	205
Guledgud	27	20	2	98	82	170	0	269	51	20	1	38	81	148	0	93
Hadagalli	0	0	0	0	15	80	0	148	312	54	0	66	15	47	1	56
Haveri	15	25	3	87	10	82	5	143	18	108	3	152	12	89	6	166
Holehonnur	10	25	0	30	8	25	0	40	12	30	0	51	10	30	0	50
Hirebagewadi	0	0	0		14	67		197	0	100	0	377	0	95	0	426
Hubli Rural	2	11	0	22	3	11	0	43	3	23	0	65	2	32	0	74
Jaimahal	0	0	0	0	8	59	0	74	80	98	0	102	100	53	0	89
Kadur	2	67		125	2	116		157	6	82	0	105	71	58	0	59
Karkala	15	25	0	30	30	65	0	70	36	85	1	70	56	75	1	70
Kaup	0	9	0	34	1	24	0	76		29	0	87	6	21	0	33
Kudligi	10	25	0	30	29	200	0	375	113	68	0	43	5	50	1	60
Molakalmuru	0	0	0	0	13	9	0	43	62	15	0	128	86	13	0	68
Mundargi	7	30	3	57	11	94	1	109	2	33	0	42	60	85	1	97
Raichur	0	0	0	0	10	165		360	8	2	0	85	20	54	0	130
SAGAR	0	0	0	0	0		0		7	125	0	99	16	139	2	126
Shiggoan	37	17	0	43	11	38	0	56	26	35	0	62	0	30	0	68
SHIRIGUPPA	5	25	0	45	15	40	0	60	30	75	0	125	25	60	0	75
Tarikere	2	23	1	46	3	104	0	109	15	71	0	39	183	141	1	61
Tikota	15	30	3	25	40	102	3	250	35	107	4	248	20	40	5	44

Ullal	0	28	0	37	0	176	0	343		122	0	228	26	120	0	161
Afzalpur	0	0	0	0	1	1	45	135	0	1	9.6	187	19	2	124	312
Badami	4	1	56	78	2	0	67	125	2	0	76	167	2	0	57	145
Barathinagar	4	0	51	37	4	17	244	303	3	0	256	128	15	0	117	129
Channapatna	0	0	0	0	0	0	57	115	1	0	56	49	4	2	53	110
Belgaum(Pilot)	4	3	120	221	5	2	199	300	1	0	38	170	4	0	82	173
Bellary	2	2	102	156	3	2	124	186	2	0	125	200	1	0	105	212
Belthangady	0	0	51	114	0	0	63	101	44	0	55	79	20	0	64	118
Bijapur	2	1	85	134	2	0	75	146	1	0	56	158	3	1	134	212
Dharwad(Pilot)	2	1	112	150	2	2	221	234	2	1	52	210	2	1	87	184
Gangavati	0	0	0	0	80	35	70	55	115	22	91	80	36	16	42	64
Gubbi	2	0	15	45	4	1	90	100	5	1	42	90	6	1	113	154
Harapanahalli	5	1	25	73	7	1	52	112	5	1	78	157	4	0	65	176
Hassan	3	0	27	56	2	0	34	46	2	0	56	43	1	0	23	35
Hirekerur	0	0	0	0	19	2	65	140	161	0	70	54	35	0	52	53
Hospet	1	0	24	56	2	0	45	94	2	0	65	98	1	0	42	75
Hulliyar	3	1	26	65	2	0	37	84	4	1	46	90	2	0	37	86
Humnabad	3	1	28	43	2	0	35	56	2	0	54	78	2	0	64	98
Hungund	7	1	10	78	19	4	236	362	67	1	246	440	26	1	115	304
Kollegal	2	1	34	65	2	0	47	89	1	0	56	125	2	0	76	134
KR Nagar	4	1	56	87	3	0	76	156	2	0	87	156	2	0	76	187
Lingsugar	5	0	21	52	3	0	25	30	20	2	35	40	1	0	15	25
Mysore Banni-mantap	2	0	35	56	2	0	76	143	1	0	67	156	2	1	67	145
Ramdurg	6	1	20	77	2	1	45	34	97	4	76	131	3	0	19	34
Sakleshpur	0	1	15	23	0	0	28	43	3	0	33	161	22	0	12	43
Sedam	3	1	17	43	2	0	25	35	2	0	35	45	2	0	46	64
Shimoga	0	0	0	0	1	0	168	69	8		133	123	25	0	118	87
Sidhalghatta	2	1	23	45	4	0	35	67	1	0	26	87	1	0	18	45
Sindhanur	4	0	21	34	2	0	31	65	1	0	32	75	2	0	17	64
Surathkal	0	0	0	0	12	1	199	422	11	0	126	113	7	0	85	94
T.Narasipur	3	2	22	54	5	2	35	76	4	1	54	87	2	1	65	145

Turuvekere	5	1	19	26	14	2	65	85	21	1	102	150	6	0	120	150
Uchagaon	1	0	20	51	1	0	98	123	4	0	75	110	4	0	74	71
Virajpet	0	0	0	0	0	0	0	0	3	0	65	100	4	0	85	174
Vittal	1	0	22	57	2	0	65	146	3	1	125	175	3	1	136	225
Nagamangala	0	0	0	0	0	0	0	0	91	0	45	135	92	0	32	108
Anekal	65	0	41	68	21	0	61	79	39	0	27	38	130	0	35	58
Arakalgud	0	0	0	0	0	0	0	0	0	0	0	0	227	1	82	80
Arasikere	14	0	20	30	24	0	95	105	25	0	40	80	33	0	50	80
Athani	12	0	22	34	52	0	28	146	56	1	41	75	5	1	52	90
Bailhongal	16	1	76	102	12	3	76	112	20	1	44	137	2	1	57	109
Bhadravathi	100	0	23	63	0	0	73	166	0	0	78	101	0	1	155	185
Brahmavar	0	0	0	0	8	0	35	37	26	0	70	130	25	0	43	47
Byadgi	12	0	20	65	3	0	12	13	88	0	52	74	45	0	120	140
Challakere	3	0	18	11	131	0	109	129	257	0	108	94	476	0	111	233
Chamarajapet (Bangalore)	45	0	160	150	71	0	370	430	173	0	425	475	105	0	415	385
Chikballapur	6	0	34	27	22	0	130	191	32	0	34	35	21	0	53	50
Chikmagalur	0	0	0	0	211	0	414	486	311	0	362	349	98	0	260	350
Chikodi	0	0	0	0	92	1	6	154	42	0	29	54	15	0	40	98
Gokak	0	0	27	38	41	0	236	477	27	0	114	236	0	0	65	163
Harihara	0	0	0	0	137	0	194	351	118	0	270	330	95	0	140	150
Holalkere	36	0	165	141	55	0	120	130	71	0	140	160	85	0	90	110
Holenarasipura	0	0	0	0	42	2	207	266	79	0	159	287	138	0	136	49
Hosadurga	28	1	154	191	314	4	281	308	202	0	244	217	116	0	197	175
Huliyurdurga-Kunigal	0	0	0	0	7	0	126	106	5	0	112	107	105	0	137	100
Indi	23	0	58	62	71	0	65	135	82	0	210	230	95	0	230	250
Jamkhandi	0	0	16	25	57	0	95	105	26	0	50	70	60	0	85	95
K.R.Pet	0	0	0	0	71	0	325	375	61	0	170	220	26	0	127	181
Karwar	0	0	0	0	3	0	34	57	0	0	92	6	0	0	5	0
Kirugaval	0	0	0	0	183	0	279	310	214	0	231	485	87	0	149	221
Koppal	0	0	0	0	0	0	0	0	3	0	15	25	19	0	60	70

Kottur	7	0	25	38	49	0	62	84	33	0	57	64	56	0	81	87
Krishnaraja (Mysore)	62	0	240	280	117	0	490	570	101	0	425	475	78	0	470	450
Kunigal	0	0	0	0	9	0	93	185	54	0	74	167	38	0	128	180
Maddur	0	0	23	63	13	2	140	263	53	0	152	127	34	0	112	177
Madhugiri	15	0	20	25	60	0	35	55	80	0	25	55	75	0	20	60
Moodbidri	11	0	61	46	43	0	206	110	12	0	50	76	43	0	109	52
Muddebihal	0	0	0	0	80	0	157	304	147	5	213	368	139	3	205	316
Mudigere	0	0	0	0	23	0	40	60	36	0	55	55	33	0	86	104
Naragund	4	1	16	40	118	2	257	246	29	1	103	250	13	0	360	342
Nippani	15	0	10	30	26	0	120	180	16	0	130	170	29	0	95	105
Puttur	0	0	0	0	43	0	140	180	46	0	140	160	57	0	98	112
Raibgh	9	0	30	50	42	0	120	150	33	0	65	135	36	0	73	97
Ramanagaram	0	0	0	0	51	0	325	375	62	0	320	400	18	0	60	90
Ron	55	0	147	248	95	0	233	633	169	0	171	395	137	0	179	344
Sankeshwar	5	0	8	15	93	0	107	267	17	0	37	112	138	0	45	130
Somwarpet	0	0	0	0	0	0	250	342	0	0	415	200	0	0	415	279
Thirthahalli	2	0	8	14	5	0	94	106	1	0	44	34	48	0	30	39
Tiptur	0	0	23	55	23	0	130	170	20	0	73	77	342	0	78	92
Uttarhalli (Bangalore)	2	0	4	4	25	0	50	25	47	0	32	17	110	0	133	103
Yadgir	27	0	68	76	37	0	96	105	29	0	87	114	89	0	436	444
Yelahanka	0	0	26	35	13	0	139	143	14	3	119	116	9	0	109	163

955(186) ಶ್ರೀ ಕಟ್ಟಾ ಸುಬ್ರಮಣ್ಯನಾಯ್ಡು (ಶಿವಾಜಿನಗರ) : ಮಾನ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಸಣ್ಣ ಉಳಿತಾಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರಿನಲ್ಲಿ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದ ಹತ್ತಿರ ವಿಜ್ಞಾನ ನಗರ ಹಾಗೂ ಬಾಹ್ಯಾಕಾಶ ಮ್ಯೂಜಿಯಂ ನಿರ್ಮಿಸಲು ಸರ್ಕಾರ ಜಮೀನು ಮಂಜೂರು ಮಾಡಿ ಎಲ್ಲಾ ಪ್ರಕ್ರಿಯೆ ಪ್ರಾರಂಭಿಸಿರುವುದು ನಿಜವಲ್ಲವೇ :

ಆ) ಸದರಿ ಕೆಲಸಕ್ಕಾಗಿ ಸರ್ಕಾರ ಮೀಸಲಾಗಿಟ್ಟ ಹಣ ಎಷ್ಟು ಹಾಗೂ ಇಲಿಯವರೆಗೆ ಖರ್ಚು ಮಾಡಿದ ಹಣವೆಷ್ಟು :

ಇ) ಈ ಉದ್ದೇಶಿತ ಬೆಂಗಳೂರು ವಿಜ್ಞಾನ ನಗರದ ಅಂದಾಜು ವೆಚ್ಚವೆಷ್ಟು ಹಾಗೂ ಕೇಂದ್ರ ರಾಜ್ಯ ಹಾಗೂ ಖಾಸಗಿ ಬಂಡವಾಳದ ಶೇಕಡಾ ಪ್ರಮಾಣವೆಷ್ಟು :

ಈ) ಸದರಿ ಉದ್ದೇಶಿತ ವಿಜ್ಞಾನ ನಗರ ನಿರ್ಮಾಣಕ್ಕಾಗಿ ಕೇಂದ್ರ ಸರ್ಕಾರ ಹಣಕಾಸಿನ ನೆರವು ನೀಡಲು ಸಿದ್ಧವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಹಾಗಿದ್ದಲ್ಲಿ ಈ ವಿಜ್ಞಾನ ನಗರ ನಿರ್ಮಾಣಕ್ಕಾಗಿ ಸರ್ಕಾರ ಕೈಗೊಂಡಿರುವ ಹಾಗೂ ಕೈಗೊಳ್ಳಲಿರುವ ಕಾರ್ಯಕ್ರಮಗಳೇನು;

ಊ) ಹಣಕಾಸಿನ ನೆರವಿಗಾಗಿ ಸರ್ಕಾರ ಕೇಂದ್ರಕ್ಕೆ ಪ್ರಸ್ತಾವನೆ ಸಲ್ಲಿಸಿದೆಯೇ ಹೇಗೆ; ಅಥವಾ ಇದಕ್ಕಾಗಿ ಪ್ರತ್ಯೇಕ ಸೊಸೈಟಿ ರಚಿಸಲಾಗಿದೆಯೇ ?

ಶ್ರೀ ಬಸವರಾಜ್.ಎಸ್. ಹೊರಟ್ಟಿ(ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಸಣ್ಣ ಉಳಿತಾಯ ಸಚಿವರು) ;

ಅ) ಸರ್ಕಾರವು 2002ರಲ್ಲಿ ಬನ್ನೇರುಘಟ್ಟ ಹತ್ತಿರ ಜಮೀನು ಮಂಜೂರು ಮಾಡಿದ್ದರೂ ಈ ಜಾಗದಲ್ಲಿ ಸಿಆರ್‌ಪಿಎಫ್(ಕೇಂದ್ರ ಮೀಸಲು ಪಡೆ) ನವರು ಅವರ ಕೇಂದ್ರವನ್ನು ಸ್ಥಾಪಿಸಿದ ಕಾರಣ ಆ ಜಮೀನನ್ನು ಭೌತಿಕವಾಗಿ ಈ ಇಲಾಖೆಗೆ ಸ್ವಾಧೀನತೆ ನೀಡಲಾಗಿಲ್ಲವಾದ್ದರಿಂದ ಪ್ರಕ್ರಿಯೆ ಪ್ರಾರಂಭಿಸಿರುವುದಿಲ್ಲ.

ಆ) 2002-03ರಲ್ಲಿ 15.00 ಲಕ್ಷ ರೂ.ಗಳು. 2003-04ರಲ್ಲಿ 10,00 ಲಕ್ಷ ರೂ.ಗಳು ಮೀಸಲಿರಿಸಲಾಗಿತ್ತು ಮತ್ತು 2004-05ರಲ್ಲಿ 5.00 ಲಕ್ಷರೂ.ಗಳು ಮೀಸಲಿರಿಸಲಾಗಿದೆ. ಆದರೆ ಯಾವುದೇ ಹಣ ಖರ್ಚು ಮಾಡಿರುವುದಿಲ್ಲ.

ಇ) ಅಂದಾಜು ವೆಚ್ಚ 70.00 ಕೋಟಿ ರೂಗಳು ಮತ್ತು ಶೇಕಡ 13 ರಷ್ಟು ಕೇಂದ್ರ ಸರ್ಕಾರದಿಂದ ಶೇಕಡ13 ರಷ್ಟು ರಾಜ್ಯ ಸರ್ಕಾರದಿಂದ, ಇನ್ನುಳಿದ ಶೇಕಡ 74 ರಷ್ಟು ಖಾಸಗಿ ಸಹಭಾಗಿತ್ವದಿಂದ ಹಣ ಸಂಗ್ರಹಿಸಲಾಗುವುದು.

ಈ) ಹೌದು

ಉ) ಇಲಾಖೆಯು ಈಗಾಗಲೇ ಹೆಸರುಘಟ್ಟ ಹತ್ತಿರ ಜಮೀನನ್ನು ಗುರುತಿಸಿದೆ. ಈ ಜಮೀನು ಕರ್ನಾಟಕ ಚಲನಚಿತ್ರ ಅಭಿವೃದ್ಧಿ ನಿಗಮಕ್ಕೆ ಸೇರಿರುವುದರಿಂದ ವಾರ್ತ, ಪ್ರವಾಸೋದ್ಯಮ ಮತ್ತು ಯುವಜನ ಸೇವಾ ಇಲಾಖೆಗೆ 100 ಎಕರೆ ಜಮೀನನ್ನು ವರ್ಗಾಯಿಸುವಂತೆ ಕೋರಿ ಪ್ರಸ್ತಾವನೆಯನ್ನು ಕಳುಹಿಸಲಾಗಿದೆ. ಜಮೀನಿನ ಸ್ವಾಧೀನತೆ ಪಡೆದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಊ) ಹೌದು ಸೊಸೈಟಿಯನ್ನು ಇನ್ನೂ ರಚಿಸಿರುವುದಿಲ್ಲ.

958(1185) ಶ್ರೀ ಕಿರಣ್ ಕುಮಾರ್ ಕೆ.ಎಸ್(ಕಳ್ಳಂಬೆಳ್ಳ) : ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ತುಮಕೂರು ಜಿಲ್ಲೆ ಗುಬ್ಬಿ ತಾಲ್ಲೂಕು ಹಾಗಲವಾಡಿ ಹೋಬಳಿಯ ಹಾಗೂ ಸುತ್ತಮುತ್ತಲಿನ ಗ್ರಾಮಗಳಿಗೆ ಕುಡಿಯುವ ನೀರಿಗಾಗಿ ಹೇಮಾವತಿ ಏತ ನೀರಾವರಿ ಯೋಜನೆ ಮೂಲಕ ಅನುಷ್ಠಾನಗೊಳಿಸಲು ಸರ್ಕಾರ ಯೋಜನೆ ರೂಪಿಸಿದೆಯೇ;

ಆ) ಹಾಗಿದ್ದಲ್ಲಿ ಯಾವಾಗ ರೂಪಿಸಲಾಗಿದೆ;

ಇ) ಇದಕ್ಕೆ ನಿಗಧಿ ಪಡಿಸಿರುವ ಹಣವೆಷ್ಟು ;

ಈ) ಕಾಮಗಾರಿ ಯಾವ ಹಂತದಲ್ಲಿದೆ;

ಉ) ಈ ಯೋಜನೆಯನ್ನು ಕಾವೇರಿ ನೀರಾವರಿ ನಿಗಮದ ವ್ಯಾಪ್ತಿಗೆ ವಹಿಸಿರುವುದು ನಿಜವೇ;

ಊ) ಯಾವಾಗ ಕಾಮಗಾರಿ ಹಮ್ಮಿ ಕೊಳ್ಳಲಾಗುವುದು ಯೋಜನಾ ವ್ಯಾಪ್ತಿ ಯೋಜನಾ ಗಾತ್ರ ಇತ್ಯಾದಿ ವಿವರಗಳನ್ನು ಒದಗಿಸುವುದು;

ಋ) ಈ ನಿಟ್ಟಿನಲ್ಲಿ ಕಾವೇರಿ ನೀರಾವರಿ ನಿಗಮವು ಕೈಗೊಂಡಿರುವ ಕ್ರಮಗಳೇನು ಹಾಗೂ ವಿಳಂಬಕ್ಕೆ ಕಾರಣಗಳೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು):

ಅ) ರೂಪಿಸಿದೆ

ಆ) ಸರ್ಕಾರಿ ಆದೇಶ ಸಂಖ್ಯೆ:ಜಸಂಇ 186 ಎನ್‌ಹೆಚ್‌ಪಿ 2000 ದಿ:8–10–03 ರಂದು ನೀರು ಒದಗಿಸುವ ಪ್ರಸ್ತಾವನೆಗೆ ಅನುಮೋದನೆ ನೀಡಲಾಗಿದೆ.

ಇ,ಈ,ಉ,ಊ) ನಾಲೆಯಿಂದ ನೀರನ್ನು ಕುಡಿಯುವ ಸಲುವಾಗಿ ನಿಗಮದಿಂದ ಅನುಮತಿ ನೀಡಿದ್ದು ಸಂಬಂಧಿಸಿದ ಕಾಮಗಾರಿಗಳ ನಿರ್ವಹಣೆ ಜಿಲ್ಲಾ ಪಂಚಾಯತ್ ತುಮಕೂರು ಇವರ ವ್ಯಾಪ್ತಿಗೆ ಬರುವುದರಿಂದ ಸದರಿ ಕಾಮಗಾರಿಗಳ ಬಗ್ಗೆ ಕ್ರಮ ಕೈಗೊಳ್ಳಲು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತ್ ರಾಜ್ ಇಲಾಖೆರವರಿಗೆಕೋರಲಾಗಿದೆ.

ಋ) ರೇಖಾ ಅಂದಾಜು ರೂ.28 ಕೋಟಿಗಳಿಗೆ ತಯಾರಿಸಿ ವಿವರವಾದ ಅಂದಾಜು ಪತ್ರಿಕೆ ತಯಾರಿಕೆ ಹಂತದಲ್ಲಿದೆ ಎಂದು ಜಿಲ್ಲಾ ಪಂಚಾಯಿತ್, ತುಮಕೂರುರವರು ವರದಿ ಮಾಡಿರುತ್ತಾರೆ.

962(800)ಶ್ರೀ ಕೃಷ್ಣಾ ಪಾಲೇಮಾರ್ (ಸುರತ್ಕಲ್) : ಮಾನ್ಯ ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ನಿತ್ಯ ನಿರಂತರ ನೀರು ಸರವರಾಜಿನ ಯೋಜನೆಯನ್ನು ಉತ್ತರ ಕನ್ನಡದ ನಗರಗಳಿಗೆ ಅನುಷ್ಠಾನಗೊಳಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಕರ್ನಾಟಕ ನಗರ ಮೂಲ ಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮವು ಈ ಕಾರ್ಯಕ್ರಮವನ್ನು ಯಾವ ಸಂಸ್ಥೆಗಳ ಮೂಲಕ ಜಾರಿಗೆ ತರಲು ಕ್ರಿಯಾ ಯೋಜನೆಗಳನ್ನು ರೂಪಿಸಿದೆ ;

ಇ) ರೂಪಿಸಿದ್ದಲ್ಲಿ ವಿವರಗಳೇನು :

ಈ) ಉತ್ತರ ಕನ್ನಡ ಭಾಗದ ಯಾವ ನಗರಗಳಿಗೆ ಪ್ರಥಮ ಹಂತದಲ್ಲಿ ಈ ಯೋಜನೆಯನ್ನು ಅನ್ವಯಿಸಲು ಕ್ರಮ ಜರುಗಿಸಲಾಗುವುದು?

ಶ್ರೀ ಎಸ್.ಆರ್.ಮೋರೆ (ಮಾನ್ಯ ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ ಸಚಿವರು):

ಅ) ನಿತ್ಯ ನಿರಂತರ ನೀರು ಸರಬರಾಜು ಯೋಜನೆಯ ಪ್ರಸ್ತಾವನೆಯು ಉತ್ತರ ಕನ್ನಡ ಜಿಲ್ಲೆಯಲ್ಲಿ ಇರುವುದಿಲ್ಲ. ಹುಬ್ಬಳ್ಳಿ-ಧಾರವಾಡ, ಗುಲ್ಬರ್ಗಾ ಹಾಗೂ ಬೆಳಗಾವಿ ನಗರಗಳ ಆಯ್ದ ಭಾಗದಲ್ಲಿ (ಪ್ರದರ್ಶನ ವಲಯ) ಮಾತ್ರ ನಿರಂತರ ನೀರು ಸರಬರಾಜು ಯೋಜನೆಯನ್ನು ವಿಶ್ವಬ್ಯಾಂಕ್ ನೆರವಿನೊಂದಿಗೆ ಅನುಷ್ಠಾನಗೊಳಿಸಲು ಪ್ರಸ್ತಾಪಿಸಿಲಾಗಿದೆ.

ಆ) ವಿಶ್ವಬ್ಯಾಂಕ್ ನೆರವಿನೊಂದಿಗೆ ಅನುಷ್ಠಾನಗೊಳಿಸುವ ನಿತ್ಯ ನಿರಂತರ ನೀರು ಸರಬರಾಜು ಯೋಜನೆಯನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಮತ್ತು ಸಂಬಂದಪಟ್ಟ ನಗರ ಪಾಲಿಕೆ ಮುಖಾಂತರ ಯೋಜನೆ ಜಾರಿಗೆ ತರಲು ಉದ್ದೇಶಿಸಲಾಗಿದೆ.

ಇ) ಈ ಕಾರ್ಯಕ್ರಮದಡಿ ನಗರಗಳಿಗೆ ಸಗಟು ನೀರು ಸರಬರಾಜು ಸುಧಾರಣೆ ಕಾಮಗಾರಿಗಳನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಮುಖಾಂತರ ಹಾಗೂ ಆಯ್ದ ಭಾಗದಲ್ಲಿ (ಪ್ರದರ್ಶನ ವಲಯ) ನಿತ್ಯ ನಿರಂತರ ನೀರು ಸರಬರಾಜು ಯೋಜನೆ ಕಾಮಗಾರಿಗಳನ್ನು ಕರ್ನಾಟಕ ನಗರ ಮೂಲ ಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ಸಂಸ್ಥೆಯಿಂದ ಕೈಗೊಳ್ಳಲು ಕ್ರಮ ಯೋಜಿಸಿ ರೂಪಿಸಲಾಗಿದೆ.

ಈ) ಪ್ರಥಮ ಹಂತದಲ್ಲಿ ಉತ್ತರ ಕನ್ನಡ ಭಾಗದ ನಗರಗಳಲ್ಲಿ ನಿತ್ಯ ನಿರಂತರ ನೀರು ಸರಬರಾಜು ಯೋಜನೆಯನ್ನು ಅನುಷ್ಟಾನಗೊಳಿಸುತ್ತಿಲ್ಲ. ಅದರೆ ಎ ಡಿ ಬಿ ನೆರವಿನ ಕುಡ್ ಸೆಂಪ್ ಯೋಜನೆಯಲ್ಲಿ ಉತ್ತರ ಕನ್ನಡ ಜಿಲ್ಲೆಯ ಕಾರವಾರ, ಅಂಕೋಲ, ಭಟ್ಕಳ, ದಾಂಡೇಲಿ ಮತ್ತು ಸಿರ್ಸಿ ನಗರಗಳ ಹಾಲಿ ಇರುವ ನೀರು ಸರಬರಾಜು ವ್ಯವಸ್ಥೆಯ ನವೀಕರಣ ಮತ್ತು ಅಭಿವೃದ್ಧಿ ಕಾಮಗಾರಿಗಳು ಜಾರಿಯಲ್ಲಿರುತ್ತದೆ.

964(802) ಶ್ರೀ ಕೃಷ್ಣ ಪಾಲೇಮಾರ್ ಜೆ(ಸುರತ್ಕಲ್) : ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ವೃತ್ತಿರಂಗಭೂಮಿ ಪುನಶ್ಚೇತನಕ್ಕಾಗಿ ಸರಕಾರ ಕಾರ್ಯಕ್ರಮಗಳನ್ನೇನಾದರೂ ಹಮ್ಮಿಕೊಂಡಿದೆಯೇ;

ಆ) ಹೌದಾದಲ್ಲಿ, ವಿವರಗಳೇನು;

ಇ) ತಾಲ್ಲೂಕು ಮತ್ತು ಜಿಲ್ಲಾ ಕೇಂದ್ರಗಳಲ್ಲಿ ನಾಟಕ ಪ್ರದರ್ಶನಕ್ಕೆ ಅನುಮತಿ ನೀಡುವಲ್ಲಿ ಜಿಲ್ಲಾಡಳಿತ ಅನುಸರಿಸುವ ನಿಯಮಗಳೇನು;

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) :

ಅ) ಹೌದು

ಆ) ವೃತ್ತಿ ರಂಗ ಭೂಮಿ ಪುನಶ್ಚೇತನಕ್ಕಾಗಿ ಇಲಾಖೆಯು ಕಾಯಕಲ್ಪ ಯೋಜನೆಯಡಿ

1) ಕಂಪನಿಗಳಿಗೆ ಅವುಗಳ ವೇಶಭೂಷಣರಂಗಪರಿಕರಕ್ಕೆ ನೆರವು ನೀಡುವ ಹಿನ್ನೆಲೆಯಲ್ಲಿ ಧನ ಸಹಾಯ ನೀಡುತ್ತಿದೆ.

2) ರಂಗ ಭೂಮಿಕಲಾವಿಧರನ್ನು ಒಂದೆಡೆ ಸೇರಿಸಿ ಪರಸ್ಪರ ಸಂವಾದಿಸುವ ಹಾಗೂ ಕಲಾಪ್ರದರ್ಶನ ಏರ್ಪಡಿಸುವ ಉದ್ದೇಶದಿಂದ ರಂಗಸುಗ್ಗಿ ಯೋಜನೆಯಡಿ ಪೌರಾಣಿಕ ನಾಟಕಗಳಿಗೆ ಧನ ಸಹಾಯ ನೆರವು ನೀಡಲಾಗುತ್ತಿದೆ.

3) ಪ್ರಾಯೋಜಿತ ಕಾರ್ಯಕ್ರಮದ ಯೋಜನೆಯಡಿ ನಾಟಕ ಪ್ರದರ್ಶನಗಳಿಗೆ ಪ್ರಯೋಜನೆ ನೀಡಲಾಗುತ್ತಿದೆ.

4) ಜೊತೆಗೆ ಇಲಾಖೆಯ ಆಡಳಿತಕ್ಕೊಳಪಟ್ಟ ಕರ್ನಾಟಕ ನಾಟಕ ಆಕಾಡೆಮಿಯು ವೃತ್ತಿ ರಂಗಭೂಮಿಗೆ ಸಂಬಂಧಿಸಿದಂತೆ ಕಾರ್ಯಚಟುವಟಿಕೆಗಳನ್ನು ನಡೆಸುತ್ತಾ ಬಂದಿದೆ.

ಇ) ಸರ್ಕಾರವು ಏಕ ಗವಾಕ್ಷಿ ಪದ್ಧತಿಯಡಿ ವೃತ್ತಿ ರಂಗಭೂಮಿ ಕಂಪನಿಗಳ ಪ್ರದರ್ಶನಕ್ಕೆ ಪರವಾನಗಿ ನೀಡಲು, ಸರ್ಕಾರಿ ಆದೇಶ ಸಂ.ಹೆಚ್.ಡಿ.103.ಸಿಎನ್‌ಪಿ 97 ದಿನಾಂಕ 17.11.99 ಆದೇಶಿಸಲಾಗಿದೆ.

1) ಅಂದರೆ ಜಿಲ್ಲಾ ಕೇಂದ್ರದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಗರಪಾಲಿಕೆ ವ್ಯಾಪ್ತಿಯಲ್ಲಿ ಪೋಲೀಸ್ ಆಯುಕ್ತರ ಅಧ್ಯಕ್ಷತೆಯಲ್ಲಿ ಉಪವಿಭಾಗ ಕೇಂದ್ರ ವ್ಯಾಪ್ತಿಯಲ್ಲಿ ಉಪವಿಭಾಗಾಧಿಕಾರಿಗಳಲ್ಲಿ ಅಧ್ಯಕ್ಷತೆಯಲ್ಲಿ ತಾಲ್ಲೂಕು ಮಟ್ಟದಲ್ಲಿ ತಹಶೀಲ್ದಾರರ ಅಧ್ಯಕ್ಷತೆಯಲ್ಲಿ ಸಂಬಂಧಪಟ್ಟ ಆಯಾಯ ಇಲಾಖೆಗಳ ಪ್ರತಿನಿಧಿಗಳನ್ನು ಸದಸ್ಯರನ್ನಾಗಿ ನೇಮಿಸಿ ಸಮಿತಿಯನ್ನು ರಚಿಸಲಾಗಿದೆ.

2) ಈ ಸಮಿತಿಗಳ ಅಧ್ಯಕ್ಷರು ಲೈಸೆನ್ಸಿಂಗ್ ಅಂಡ್ ಕಂಟ್ರೋಲಿಂಗ್ ಪ್ಲೇಸಸ್ ಆಫ್ ಪಬ್ಲಿಕ್ ಅಮ್ಯೂಸ್‌ಮೆಂಟ್ ಆದೇಶದನ್ವಯ ನಾಟಕ ಪ್ರದರ್ಶನಕಾರರು ಅರ್ಜಿ ಸಲ್ಲಿಸಿದ ದಿನಾಂಕದಿಂದ 15 ದಿನಗಳ ಕಾಲಾವಧಿಯೊಳಗೆ ಸಂಬಂಧಪಟ್ಟ ಇಲಾಖೆಗಳಿಂದ ಅಭಿಪ್ರಾಯ ಪಡೆದು ತದನಂತರ 10 ದಿನಗಳಲ್ಲಿ ಏಕಗವಾಕ್ಷಿ ಸಭೆ ಕರೆದು ಪರವಾನಗಿ ನೀಡುತ್ತಾರೆ.

ಈ) ಉದ್ಭವಿಸುವುದಿಲ್ಲ.

ಉ) ವೃತ್ತಿ ರಂಗಭೂಮಿ ಕಂಪನಿಗಳನ್ನು ಪ್ರೋತ್ಸಾಹಿಸಲು ಸರ್ಕಾರವು ಕಾಯಕಲ್ಪ ಯೋಜನೆಯನ್ನು ರೂಪಿಸಿ ಸಕಾರಾತ್ಮಕವಾಗಿ ಸ್ಪಂದಿಸುತ್ತಿದೆ.

965(1354) ಶ್ರೀ ಕೃಷ್ಣಮೂರ್ತಿ ಕೆ.ಎಂ.(ಕಡೂರು) : ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಚಿಕ್ಕಮಗಳೂರು ಜಿಲ್ಲೆಯ ಕಡೂರು ಮತ್ತು ತರೀಕೆರೆ ತಾಲ್ಲೂಕುಗಳ ವ್ಯಾಪ್ತಿಯಲ್ಲಿ ಗಣಿಗಾರಿಕೆಗೆ (ಅದಿರು, ಕಬ್ಬಿಣ,ಮ್ಯಾಂಗನೀಸ್) ಅನುಮತಿ ನೀಡಿರುವ ಪ್ರದೇಶಗಳೆಷ್ಟು (ಪ್ರದೇಶ, ವ್ಯಕ್ತಿ ಹಾಗೂ ಕಂಪನಿಯು ವಿವರ ನೀಡುವುದು);

ಆ) ಹಾಗಿದ್ದಲ್ಲಿ, ಅನುಮತಿ ನೀಡುವ ಮೊದಲು ಅರಣ್ಯ ಮತ್ತು ಪರಿಸರ ಇಲಾಖೆಗಳ ನಿರಾಕ್ಷೇಪಣೆಗಳನ್ನು ಪಡೆದುಕೊಳ್ಳಲಾಗಿದೆಯೇ;

ಇ) ಕಡೂರು ತಾಲ್ಲೂಕು ಬೀರೂರು ಹೋಬಳಿ ಹೋಗ ರೇಖಾನುಗಿರಿಯಲ್ಲಿ ಗಣಿಗಾರಿಕೆಗೆ ಅನುಮತಿ ನೀಡುರುವ ಜಮೀನೆಷ್ಟು ?

ಶ್ರೀ ಧರ್ಮಸಿಂಗ್ (ಮುಖ್ಯ ಮಂತ್ರಿಗಳು) :

ಅ) ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲ್ಲೂಕು ವ್ಯಾಪ್ತಿಯಲ್ಲಿ ಮೆ:ವಿ.ಐ.ಎಸ್.ಎಲ್. ಸಂಸ್ಥೆಯವರಿಗೆ ದಿನಾಂಕ: 01.04.1963ರಂದು 20 ವರ್ಷಗಳ ಅವಧಿಗೆ 738.55 ಹೆಕ್ಟೇರ್ ಪ್ರದೇಶದಲ್ಲಿ ಕಬ್ಬಿಣದ ಅದಿರು ಮತ್ತು ಯಲ್ಲೊ ಓಕರ್ ಖನಿಜಗಳಿಗಾಗಿ ಗಣಿಗಾರಿಕಾ ಪರವಾನಗಿಯನ್ನು ನೀಡಲಾಗಿದೆ. 1981ರಲ್ಲಿ ಮೆ: ವಿ.ಐ.ಎಸ್.ಎಲ್. ಸಂಸ್ಥೆಯವರು ಗಣಿ ಗುತ್ತಿಗೆಯನ್ನು ನವೀಕರಿಸಲು

ಅರ್ಜಿ ಸಲ್ಲಿಸಿದ್ದರು. ಸದರಿ ಅರ್ಜಿಯನ್ನು ಒಂದು ವರ್ಷದೊಳಗಾಗಿ ಪರಿಗಣಿಸದ್ದರಿಂದ ಆಗಿದ್ದ ಎಂ.ಸಿ.ಆರ್. ನಿಯಮ 24(3)ರಂತೆ ತಿರಸ್ಕೃತಗೊಂಡಿತು. ಆಗಿದ್ದ ಎಂ.ಸಿ.ಆರ್. 1960ರ ನಿಯಮ 24(3)ರ ಪ್ರಕಾರ ಸಲ್ಲಿಸಿದ್ದ ಯಾವುದೇ ಅರ್ಜಿಯನ್ನು 12 ತಿಂಗಳ ಒಳಗಾಗಿ ವಿಲೇ ಮಾಡದಿದ್ದಲ್ಲಿ ಸದರಿ ಅರ್ಜಿಯು ಡೀಮ್ಡ್ ರಿಜೆಕ್ಷನ್ (deemed rejected) ಆಗುತ್ತಿತ್ತು. ಈ ನಿಯಮವನ್ನು ದಿನಾಂದ 19–10–89 ರಂದು ಕೈಬಿಡಲಾಗಿದೆ. ನಂತರ ಸದರಿ ಸಂಸ್ಥೆಯು ಭಾರತ ಸರ್ಕಾರಕ್ಕೆ ಪರಿಷ್ಕರಣ ಅರ್ಜಿಯನ್ನು ಸಲ್ಲಿಸಿತ್ತು. ಭಾರತ ಸರ್ಕಾರವು ಮೆ:ಪಿ.ಐ.ಎಸ್.ಎಲ್. ಸಂಸ್ಥೆಯು ಸಲ್ಲಿಸಿದ ಪರಿಷ್ಕರಣ ಅರ್ಜಿಯನ್ನು ಊರ್ಜಿತಗೊಳಿಸಿದೆ. ಸದರಿ ಸಂಸ್ಥೆಯವರೆ ಮನವಿಯ ಅನ್ವಯ ಕಂದಾಯ ವ್ಯಾಪ್ತಿಗೆ ಬರುವ 42.70 ಹೆಕ್ಟೇರ್ ಪ್ರದೇಶಕ್ಕೆ ಸಂಬಂಧಿಸಿದ ವಿಮೋಚನಾ ಪತ್ರಗಳನ್ನು ಪಡೆದ ನಂತರ ನಿಯುಮಾನುಸಾರ 42.70 ಹೆಕ್ಟೇರ್ ಪ್ರದೇಶಕ್ಕೆ ದಿನಾಂಕ. 01–03–2004ರ ಅದಿಸೂಚನೆ ಸಂಖ್ಯೆ: ಸಿಐ/5 ಎಂಎಂಎಂ. 2002ರಲ್ಲಿ 01–04–1983ರಿಂದ ಜಾರಿಗೆ ಬರುವಂತೆ 20 ವರ್ಷಗಳ ಅವಧಿಗೆ ಗಣಿ ಗುತ್ತಿಗೆಯನ್ನು ನವೀಕರಿಸಲಾಗಿದೆ. ಉಳಿದ ಪ್ರದೇಶವು ಕಾಯ್ದಿರಿಸಿದ ಅರಣ್ಯ ವ್ಯಾಪ್ತಿಗೆ ಬರುವುದರಿಂದ ಪರಿಗಣಿಸಿರುವುದಿಲ್ಲ.

ಮೆ:ವಿ.ಐ.ಎಸ್.ಎಲ್.ಸಂಸ್ಥೆಗೆ 1963ರಲ್ಲಿ ಗಣಿ ಗುತ್ತಿಗೆ ನೀಡಿರುವುದರಿಂದ ಹಾಗೂ ಆ ಸಮಯದಲ್ಲಿ ಅರಣ್ಯ ಸಂರಕ್ಷಣಾ ಕಾಯ್ದೆ ಜಾರಿಯಲ್ಲಿ ಇಲ್ಲದ್ದರಿಂದ, ಅರಣ್ಯ ಇಲಾಖೆಯಿಂದ ನಿರಾಕ್ಷೇಪಣಾ ಪತ್ರಗಳನ್ನು ಪಡೆದುಕೊಳ್ಳುವ ಪ್ರಮೇಯ ಉದ್ಭವಿಸುವುದಿಲ್ಲ.

ಇ) ಈವರೆವಿಗು ಈ ಪ್ರದೇಶದಲ್ಲಿ ಗಣಿ ಗುತ್ತಿಗೆ ಮಂಜೂರು ಮಾಡಿರುವುದಿಲ್ಲ.

968(1491) ಶ್ರೀ ಕ್ಯಾತ್‌ಸಂದ್ರ ಎನ್.ರಾಜಣ್ಣ(ಬೆಳ್ಳಾವಿ) : ಮಾನ್ಯ ಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಮಿನಿಸ್ಟ್ರಿ ಆಫ್ ಕಮ್ಯೂನಿಕೇಶನ್ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದವರು ರಚಿಸಿರುವ ಸಹಕಾರ ನಗರ ಬಡಾವಣೆಯಲ್ಲಿ ಉದ್ಯಾನವನ ಮತ್ತು ಶಾಪಿಂಗ್ ಕಾಂಪ್ಲೆಕ್ಸ್‌ಗಾಗಿ (ಸಿ.ಎ.) ಮೀಸಲಿಟ್ಟ ಸ್ಥಳವನ್ನು ನಿವೇಶನ ರಚಿಸಿ ಮಾರಾಟ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿರುವುದೇ;

ಆ) ಹಾಗಿದ್ದಲ್ಲಿ, ಈ ಸ್ಥಳದಲ್ಲಿ ನಿವೇಶನಗಳನ್ನು ರಚಿಸಿ ಮಾರಾಟ ಮಾಡಿರುವುದೆ(ವಿವರೆ ಒದಗಿಸುವುದು) :

ಇ) ಈ ಬಗ್ಗೆ ಸರ್ಕಾರವು ಕೈಗೊಂಡಿರುವ ಕ್ರಮಗಳೇನು(ವಿವರ ನೀಡುವುದು)?

ಶ್ರೀ ಧರ್ಮಸಿಂಗ್(ಮುಖ್ಯ ಮಂತ್ರಿಗಳು) :

ಅ) ಹೌದು

ಆ) ಉದ್ಯಾನವನ:ಬಯಲು ಜಾಗ 11

ಸಿ.ಎ. 55

ಖಿಲ್ಲಾ ಜಾಗ 04

ಒಟ್ಟು ನಿವೇಶನಗಳು 70

ಇ) ಹಾಲಿ ಸ್ಥಳದಲ್ಲಿ ನಿರ್ಮಿಸಿರುವಂತೆ ಮಾರ್ಪಡಿತ ಬಡಾವಣೆ ನಕ್ಷೆ ಅನುಮೋದಿಸಿಕೊಡುವಂತೆ ಸಂಘದವರು ಕೋರಿದ್ದು, ಉದ್ದೇಶಿತ ಮಾರ್ಪಡಿತ ಬಡಾವಣೆ ನಕ್ಷೆಯು ವಲಯ ನಿಯಮಾವಳಿಗೆ ಅನುಗುಣವಾಗಿ ಇಲ್ಲದ ಕಾರಣ ಹಾಗೂ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣ ಇರುವುದರಿಂದ, ಉದ್ದೇಶಿತ ಮಾರ್ಪಾಡಿತ ಬಡಾವಣೆ ನಕ್ಷೆಯನ್ನು ಅನುಮೋದಿಸುರುವುದಿಲ್ಲ.

969(1272) ಶ್ರೀ ಲಾಲಾಜಿ ಆರ್.ಮೆಂಡನ್(ಕಾಪು) : ಮಾನ್ಯ ಮುಖ್ಯ ಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಸುನಾಮಿ ಅಲೆಗಳ ತೀವ್ರತೆಗೆ ಒಳಗಾದ ಮೀನುಗಾರರು ಸಂಕಷ್ಟದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಸುನಾಮಿಯಿಂದ ಮೀನುಗಳು ವಿಷಪೂರಿತವಾಗಿದೆ ಎಂದು ಜನರು ಮೀನು ಖರೀದಿಸದಿರುವುದರಿಂದ ಮೀನು ಮಾರಾಟಗಾರರು ನಷ್ಟ ಅನುಭವಿಸುತ್ತಿರುವುದು ನಿಜವಲ್ಲವೇ;

ಇ) ಹಾಗಿದ್ದಲ್ಲಿ. ಇದರ ಪರಿಹಾರ ಕಾರ್ಯವೇನು ;

ಈ) ಸುನಾಮಿ ಅಲೆಗಳಿಂದ ಕಡಲ ತಡಿಯಲ್ಲಿ ಸಂಭವಿಸಿದ ನಷ್ಟದ ಅಂದಾಜು ಮಾಡಿ ಪರಿಹಾರ ಕಾಮಗಾರಿ ನಡೆಸಲು ಸರ್ಕಾರ ತೆಗೆದುಕೊಂಡ ಕ್ರಮವೇನು;

ಉ) ಸುನಾಮಿ ಪರಿಹಾರ ಕಾರ್ಯ ನಡೆಸಲು ಉಡುಪಿ, ಮಂಗಳೂರು ಮತ್ತು ಕಾರವಾರ ಜಿಲ್ಲೆಗಳಿಗೆ ನಿಗದಿಪಡಿಸಿದ ವಿಶೇಷ ಪ್ಯಾಕೇಜ್ ಹಾಗೂ ನಿಗದಿಪಡಿಸಿದ ಮೊಬಲಗು ಎಷ್ಟು ?

ಶ್ರೀ ಧರ್ಮಸಿಂಗ್(ಮುಖ್ಯ ಮಂತ್ರಿಗಳು):

ಅ) ಸುನಾಮಿ ಅಲೆಗಳ ತೀವ್ರತೆಗೆ ಒಳಗಾದ ಮೀನುಗಾರರ ದೋಣಿಗಳು ಅಪಘಾತಕ್ಕೀಡಾಗಿ ದೋಣಿಗಳಿಗೆ ನಷ್ಟ ಸಂಭವಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಸುನಾಮಿಯಿಂದ ಮೀನುಗಳು ವಿಷಪೂರಿತವಾಗಿವೆ ಎಂಬುದು ಸತ್ಯಕ್ಕೆ ದೂರವಾದ ಸಂಗತಿ ತಪ್ಪು ಕಲ್ಪನೆಯಿಂದ ಮತ್ತು ಸುಳ್ಳು ಸುದ್ದಿಯಿಂದ ಜನರು ಮೀನು ಖರೀದಿಸಲು ಹಿಂಜರಿದುದರಿಂದ ಕೆಲವು ದಿನಗಳ ಮಟ್ಟಿಗೆ ಮೀನು ಮಾರಾಟಗಾರರು ನಷ್ಟ ಅನುಭವಿಸಿದ್ದು ನಿಜ.

ಇ) ಈ ಬಗ್ಗೆ ಮೀನುಗಾರಿಕೆ ಇಲಾಖೆಯಿಂದ ಹಾಗೂ ಮೀನುಗಾರಿಕೆ ಕಾಲೇಜು, ಮಂಗಳೂರುರವರ ವತಿಯಿಂದ ದಿನಪತ್ರಿಕೆಗಳಲ್ಲಿ ಹಾಗೂ ಟಿ.ವಿ. ಚಾನಲ್‌ಗಳ ಮೂಲಕ ಜನರಿಗೆ ಸುನಾಮಿ ಅಲೆಗಳಿಂದ ಯಾವುದೇ ಮೀನುಗಳು ವಿಷಪೂರಿತವಾಗಿಲ್ಲವೆಂದು ಮತ್ತು ಮೀನನ್ನು ತಿನ್ನಲು ಯಾವುದೇ ತೊಂದರೆ ಇಲ್ಲವೆಂದು ಸ್ಪಷ್ಟೀಕರಣ ನೀಡಿ ಪ್ರಚಾರ ನೀಡಲಾಗಿದೆ. ಈಗ ಸಮಸ್ಯೆ ಪರಿಹರವಾಗಿದೆ ಮತ್ತು ಜನರು ಎಂದಿನಂತೆ ಮೀನು ಖರೀದಿಸುತ್ತಿರುವರು.

ಈ) ಸುನಾಮಿ ಅಲೆಗಳಿಂದ ಕಡಲ ತೀರದಲ್ಲಿ ಸಂಭವಿಸಿದ ನಷ್ಟದ ಅಂದಾಜು ಮಾಡಿ ಪರಿಹಾರವಾಗಿ ಹಾನಿಗೊಳಗಾದ ಬೋಟುಗಳಿಗೆ ಪ್ರಕೃತಿ ವಿಕೋಪ ಪರಿಹಾರ ನಿಧಿಯಿಂದ ಈ

ಕೆಳಕಂಡಂತೆ ಪರಿಹಾರ ನೀಡಲು ಸರ್ಕಾರ ಆದೇಶಿಸಿದೆ.

(ಅ) ಒಂದು ಲಕ್ಷಕ್ಕಿಂತ ಹೆಚ್ಚಿನ ನಷ್ಟವಾದಲ್ಲಿ – ರೂ.50 ಸಾವಿರದವರೆಗೆ ಪಾವತಿಸತಕ್ಕದ್ದು.

(ಆ) ಒಂದು ಲಕ್ಷಕ್ಕಿಂತ ಕಡಿಮೆ ನಷ್ಟವಾದಲ್ಲಿ – ನಷ್ಟದ ಶೇಕಡಾ 50 ರಷ್ಟು ಭಾಗ ಪಾವತಿಸತಕ್ಕದ್ದು.

ಉ) ಉಡುಪಿ, ಮಂಗಳುರು ಹಾಗೂ ಕಾರವಾರ ಜಿಲ್ಲೆಗಳಲ್ಲಿ ಸುನಾಮಿ ಅಲೆಗಳಿಂದ ಉಂಟಾದ ನಷ್ಟದ ಪರಿಹಾರಕ್ಕಾಗಿ ಸರ್ಕಾರವು ಯಾವುದೇ ವಿಶೇಷ ಪ್ಯಾಕೇಜನ್ನು ಘೋಷಿಸಿರುವುದಿಲ್ಲ.

970(1273) ಶ್ರೀ ಮಾಧುಸ್ವಾಮಿ ಜೆ.ಸಿ. (ಚಿಕ್ಕನಾಯಕನ ಹಳ್ಳಿ) : ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ತಿಪಟೂರು ತಾಲ್ಲೂಕಿನ ಕೆ.ಬಿ.ಕ್ರಾಸ್‌ನಲ್ಲಿ ಒಂದು ಪೊಲೀಸ್ ಠಾಣೆ ತೆರೆಯಲು ಸರ್ಕಾರಿ ಆದೇಶವಾದದ್ದು ನಿಜವೇ?

ಆ) ಹಾಗಿದ್ದಲ್ಲಿ, ಅದು ಈವರೆವಿಗೂ ತೆರೆಯದಿರಲು ಕಾರಣವೇನು?

ಇ) ಕೆ.ಬಿ.ಕ್ರಾಸ್ ಬಹಳ ಪ್ರಮುಖವಾದ ಕೇಂದ್ರವಾಗಿದ್ದು, ಅಲ್ಲಿ ಜನ ಸಂಚಾರ ಬಹಳವಿದ್ದು, ಅಪಘಾತಗಳಾಗುತ್ತಿರುವುದು ಹಾಗೂ ಅಲ್ಲಿ ಸುಮಾರು ದರೋಡೆಯಾಗುತ್ತಿರುವುದು ಸರ್ಕಾರಕ್ಕೆ ಗೊತ್ತಿದೆಯೇ?

ಈ) ಹಾಗಿದ್ದಲ್ಲಿ, ಅಲ್ಲಿ ಒಂದು ಪೊಲೀಸ್ ಠಾಣೆ ಆರಂಭಿಸಲು ಅಥವಾ ತಿಪಟೂರು ಗ್ರಾಮಾಂತರ ಠಾಣೆಯನ್ನು ಅಲ್ಲಿಗೆ ವರ್ಗಾಯಿಸಲು ಸರ್ಕಾರಕ್ಕೆ ಇರುವ ತೊಂದರೆಯೇನು?

ಶ್ರೀ ಧರ್ಮಸಿಂಗ್(ಮುಖ್ಯ ಮಂತ್ರಿಗಳು) :

ಅ) ತಿಪಟೂರು ಗ್ರಾಮಾಂತರ ಪೊಲೀಸ್ ಠಾಣೆಯನ್ನು ಕಿಬ್ಬನಹಳ್ಳಿಗೆ ವರ್ಗಾಯಿಸಲು ಸರ್ಕಾರ ಆದೇಶ ನೀಡಿತ್ತು. ಆದರೆ ತಿಪಟೂರಿನ ಕಾನೂನು ಮತ್ತು ಸುವ್ಯವಸ್ಥೆಯ ದೃಷ್ಟಿಯಿಂದ ತಿಪಟೂರಿನಲ್ಲಿಯೇ ಪೊಲೀಸ್ ಠಾಣೆಯನ್ನು ಮುಂದುವರಿಸಲು ಸರ್ಕಾರ ಸೂಚನೆ ನೀಡಿದೆ.

ಆ) ತಿಪಟೂರಿನ ಗ್ರಾಮಸ್ಥರ ಪ್ರತಿಭಟನೆ, ತಿಪಟೂರಿನ ಕಾನೂನು ಮತ್ತು ಸುವ್ಯವಸ್ಥೆಯ ಕಾರಣ ಮತ್ತು ಕೆ.ಬಿ.ಕ್ರಾಸ್‌ನಲ್ಲಿ ಈಗಾಗಲೇ ಒಂದು ಪೊಲೀಸ್ ಹೊರ ಠಾಣೆ ಇರುವ ಪ್ರಯುಕ್ತ ತಿಪಟೂರು ಪೊಲೀಸ್ ಠಾಣೆಯನ್ನು ಕೆ.ಬಿ.ಕ್ರಾಸ್‌ಗೆ ವರ್ಗಾಯಿಸಿಲ್ಲ.

ಇ) ಗೊತ್ತಿದೆ.

ಈ) ತಿಪಟೂರಿನ ಗ್ರಾಮಾಂತರ ಪ್ರದೇಶದ ಕಾನೂನು ಮತ್ತು ಸುವ್ಯವಸ್ಥೆಯ ಬಗ್ಗೆಯೂ ಸರ್ಕಾರ ಗಮನಿಸಬೇಕಾಗಿದ್ದು, ಅಲ್ಲದೇ, ಕೆ.ಬಿ.ಕ್ರಾಸ್‌ನ ಕಾನೂನು ಸುವ್ಯವಸ್ಥೆಗಾಗಿ ಒಂದು ಪೊಲೀಸ್ ಹೊರ ಠಾಣೆ ಮತ್ತು ಅಗತ್ಯ ಸಿಬ್ಬಂದಿಯನ್ನು ಒದಗಿಸಲಾಗಿದೆ. ಆದುದರಿಂದ ತಿಪಟೂರು ಗ್ರಾಮಾಂತರ ಪೊಲೀಸ್ ಠಾಣೆಯನ್ನು ವರ್ಗಾಯಿಸುವ ಅಗತ್ಯತೆ ಕಂಡುಬರುವುದಿಲ್ಲ.

971(1405) ಮಾನ್ಯ ಮಹಾಗುಂಡಪ್ಪ ಕಲ್ಲಪ್ಪ ಪಟ್ಟಣಶೆಟ್ಟಿ(ಬಾದಾಮಿ) : ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನಳಿಗೆ ಉತ್ತರಿಸುವರೆ ?

ಅ) ಅಧಿಕ ಭಾರದ ವಾಹನಗಳ ಸಂಚಾರದಿಂದ ರಸ್ತೆಗಳು/ ಕೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿರುವುದೇ?

ಆ) ಬಂದಿದ್ದರೆ, ಅಂಥಹ ವಾಹನಗಳ ಮಾಲೀಕರ ವಿರುದ್ಧ ಕೈಗೊಂಡ ಕ್ರಮಗಳೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು) :

ಅ) ಹೌದು

ಆ) ಅಧಿಕ ಭಾರ ಕೊಂಡೊಯ್ಯುವ ಸರಕು ಸಾಗಾಣಿಕೆ ವಾಹನಗಳ ಮಾಲೀಕರ ಮೇಲೆ ಕಾನೂನು ರೀತಿ ಕ್ರಮ ಜರುಗಿಸುವಂತೆ ಸಂಬಂಧಿಸಿದ ಎಲ್ಲಾ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ/ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆಯನ್ನು ನೀಡಲಾಗಿದೆ. ವಾಹನಗಳನ್ನು ತಪಾಸಣೆ ಮಾಡುವ ಕ್ರಮ ಕೈಗೊಂಡಿದ್ದು, ಏಪ್ರಿಲ್ 2004ರಿಂದ ಡಿಸೆಂಬರ್ 2004ರವರೆಗೆ 41,904 ವಾಹನಗಳ ಮೇಲೆ ಕೇಸ್ ದಾಖಲಿಸಲಾಗಿದೆ.

974(1348) ಶ್ರೀ ಮಾಮನಿ ವಿಶ್ವನಾಥ ಕರಬಸಪ್ಪ (ಪರಸಗಡ) : ಮಾನ್ಯ ಮುಖ್ಯ ಮಂತ್ರಿಯವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಹುಬ್ಬಳ್ಳಿ–ಧಾರವಾಡ ನಗರಕ್ಕೆ ಮಲಪ್ರಭಾ ಯೋಜನೆಯ ಜಲಾಶಯದಿಂದ ಕುಡಿಯುವ ನೀರಿಗಾಗಿ ಶುದ್ಧೀಕರಣ ಘಟಕವನ್ನು 1983ರಲ್ಲಿ ಸ್ಥಾಪಿಸಿರುವ ಯೋಜನೆಯು ಸ್ಥಗಿತಗೊಂಡಿರುವುದು ನಿಜವೇ?

ಆ) ಹಾಗಿದ್ದಲ್ಲಿ, ಈ ಯೋಜನೆಯು ಅಮ್ಮಿನಭಾವಿಗೆ ಹಸ್ತಾಂತರಗೊಂಡಿದ್ದರಿಂದ ಸವದತ್ತಿಯಲ್ಲಿ ಈ ಯೋಜನೆಯು ನಿರುಪಯುಕ್ತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಬಂದಿದ್ದಲ್ಲಿ, ನಿರುಪಯುಕ್ತ ಘಟಕಗಳನ್ನು ಪುರಸಭ, ಸವದತ್ತಿ ಅಥವಾ ಜಿಲ್ಲಾ ಪಂಚಾಯತ್, ಬೆಳಗಾಂ ಇವರಿಗೆ ಹಸ್ತಾಂತರಗೊಳಿಸಲು ಹಾಗೂ ಯೋಜನೆಯ ಸದುಪಯೋಗ ಪಡೆಸಲು ಕೈಗೊಳ್ಳುವ ಕ್ರಮವೇನು?

ಶ್ರೀ ಧರ್ಮಸಿಂಗ್(ಮುಖ್ಯ ಮಂತ್ರಿಗಳು) :

ಅ) ಹೌದು

ಆ) ಬಂದಿರುತ್ತದೆ.

ಇ) ಈ ದಿಸೆಯಲ್ಲಿ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳ ಜೊತೆಯಲ್ಲಿ ಚರ್ಚೆ ನಡೆಸಿ ತೀರ್ಮಾನ ಕೈಗೊಳ್ಳಲಾಗುತ್ತದೆ.

975(1349) ಶ್ರೀ ಮಾಮನಿ ವಿಶ್ವನಾಥ ಕರಬಸಪ್ಪ(ಪರಸಗಡ) : ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಸವದತ್ತಿ ತಾಲ್ಲೂಕಿನ ಸತ್ತಿಗೇರಿ ಗ್ರಾಮಕ್ಕೆ ಬಸ್ ನಿಲ್ದಾಣದ ಕೆಲಸವನ್ನು ಪ್ರಾರಂಭಿಸಲು ವಿಳಂಬವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಕೆಲಸ ಪ್ರಾರಂಭಿಸಲು ಸರ್ಕಾರವು ಕೈಗೊಳ್ಳುವ ಕ್ರಮವೇನು;

ಇ) ಸವದತ್ತಿ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣದಲ್ಲಿ ಹಗೂ ಮುನವಳ್ಳಿ ಯರಗಟ್ಟಿ ಬಸ್ ನಿಲ್ದಾಣದಲ್ಲಿ ಮೂಲ ಭೂತ ಸೌಕರ್ಯಗಳು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರವು ಕೈಗೊಳ್ಳುವ ಕ್ರಮವೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು) :

ಅ) ಹೌದು.

ಆ) ಬಸ್ ಶೆಲ್ಟರ್‌ಗಳನ್ನು ನಿರ್ಮಿಸಲು ಕ್ರಮ ಕೈಗೊಳ್ಳಲಾಗುವುದು.

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

976(1559) ಶ್ರೀ ಮಾಮನಿ ವಿಶ್ವನಾಥ ಕರಬಸಪ್ಪ(ಪರಸಗಡ) : ಮಾನ್ಯ ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಕಳಸಾ-ಬಂಡೂರಿ ನದಿಗಳನ್ನು ಮಲಪ್ರಭಾಗೆ ಜೋಡಣೆ ಮಾಡುವ ಯೋಜನೆ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದಲ್ಲಿ, ಸರ್ಕಾರದ ಕ್ರಮಗಳೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು) :

ಅ) ಬಂದಿದೆ.

ಆ) ರಾಜ್ಯದ ಪ್ರಯತ್ನಗಳಂತೆ ಹುಬ್ಬಳ್ಳಿ-ಧಾರವಾಡ ಅವಳಿ ನಗರಗಳ ಕುಡಿಯುವ ನೀರಿನ ಕೊರತೆಯನ್ನು ನೀಗಿಸಲು ಕೇಂದ್ರ ಸರ್ಕಾರವು ದಿನಾಂಕ : 30.4.2002 ರಂದು ಮಹದಾಯಿ ಕಣಿವೆಯಿಂದ 7.56 ಟಿಎಂಸಿ ನೀರನ್ನು ಮಲಪ್ರಭಾ ನದಿಗೆ ವರ್ಗಾಯಿಸಲು ಕೆಲವು ಷರತ್ತುಗಳೊಂದಿಗೆ ತಾತ್ವಿಕ ಅನುಮೋದನೆಯನ್ನು ನೀಡಿತ್ತು. ಗೋವಾ ರಾಜ್ಯದ ಪ್ರತಿಭಟನೆಯ ಕಾರಣ ದಿನಾಂಕ:19.9.2002ರಂದು ಈ ಅನುಮೋದನೆಯನ್ನು ಕೇಂದ್ರ ಸರ್ಕಾರವು ತಡೆಹಿಡಿದಿರುತ್ತದೆ.

ಗೋವಾ ರಾಜ್ಯವು ಮಹಾದಾಯಿ ನದಿ ವಿವಾದ ಮಂಡಳಿಯ ರಚನೆ ಕುರಿತು ಕೇಂದ್ರ ಸರ್ಕಾರಕ್ಕೆ ಮಾಡಿದ್ದ ಮನವಿಯ ಬಗ್ಗೆ ಮತ್ತು ಅಂತರ ರಾಜ್ಯ ವಿಷಯಗಳಂತೆ ಸಂಬಂಧಿಸಿದ ರಾಜ್ಯಗಳೊಂದಿಗೆ ಚರ್ಚಿಸಿ ನಿರ್ಧಾರಕ್ಕೆ ಬರಲು ದಿನಾಂಕ:20.12.02ರಂದು ಕೇಂದ್ರ ಸರ್ಕಾರದ ಮಾನ್ಯ ಜಲ ಸಂಪನ್ಮೂಲ ಸಚಿವರು ನವದೆಹಲಿಯಲ್ಲಿ ಸಭೆಯನ್ನು ಜರುಗಿಸಿರುತ್ತಾರೆ. ಈ ಸಭೆಯಲ್ಲಿ ಮಹಾದಾಯಿ ಕಣಿವೆಯಲ್ಲಿ ದೊರಕುವ ಒಟ್ಟು ನೀರಿನ ಪ್ರಮಾಣದ ಬಗ್ಗೆ ಕೇಂದ್ರ ಜಲ ಆಯೋಗದಿಂದ ಯೀಲ್ಡ್ ಸೀರೀಸ್ ಅಧ್ಯಯನವನ್ನು (Yield Series Studies) ಮಾರ್ಚ್ 2003 ರೊಳಗೆ ಪೂರ್ಣಗೊಳಿಸಲು ತೀರ್ಮಾನಿಸಲಾಗಿರುತ್ತದೆ. ಅದರಂತೆ ರಾಜ್ಯ ಸರ್ಕಾರದ ಅಧಿಕಾರಿಗಳು ನವದೆಹಲಿಯ ಕೇಂದ್ರ ಜಲ ಆಯೋಗ ಕಚೇರಿಗೆ ಹೋಗಿ ಸದರಿ ಅಧ್ಯಯನದಲ್ಲಿ ಭಾಗವಹಿಸಿ ಬಂದಿರುತ್ತಾರೆ. ಅಧ್ಯಯನ ಕಾರ್ಯವು ಪೂರ್ಣಗೊಂಡಿರುವುದಾಗಿ ತಿಳಿದು ಬಂದಿದ್ದು ಮುಂದಿನ ನಿರ್ದೇಶನವನ್ನು ಕೇಂದ್ರ ಸರ್ಕಾರದಿಂದ ನಿರೀಕ್ಷಿಸಲಾಗಿದೆ.

ಅಕ್ಟೋಬರ್ ..೦೦2ರಿಂದ ನವೆಂಬರ್ 2004ರವರೆಗೆ ಮಾನ್ಯ ಮುಖ್ಯಮಂತ್ರಿಗಳು, ಜಲ ಸಂಪನ್ಮೂಲ ಸಚಿವರು ಮತ್ತು ಜಲ ಸಂಪನ್ಮೂಲ ಇಲಾಖೆಯ ಕಾರ್ಯದರ್ಶಿಗಳಿಂದ ಕೇಂದ್ರ ಸರ್ಕಾರಕ್ಕೆ ಪತ್ರಗಳನ್ನು ಬರೆದು ದಿನಾಂಕ : 19.9.02ರ ತಡೆ ಆದೇಶವನ್ನು ಹಿಂತೆಗೆದುಕೊಳ್ಳುವಂತೆ ಆಗ್ರಹ ಪಡಿಸಲಾಗಿದೆ. ಗೋವಾ, ಕರ್ನಾಟಕ ಮತ್ತು ಮಹಾರಾಷ್ಟ್ರ ರಾಜ್ಯಗಳ ಮುಖ್ಯ ಕಾರ್ಯದರ್ಶಿಗಳೊಂದಿಗೆ ಚರ್ಚಿಸಿ ತೀರ್ಮಾನಕ್ಕೆ ಬರಲು ದಿ:3-01-05 ರಂದು ನವದೆಹಲಿಯಲ್ಲಿ ಕರೆಯಲಾಗಿದ್ದ ಸಭೆಯನ್ನು ಕಾರಣಾಂತರಗಳಿಂದ ದಿ:15-02-05ಕ್ಕೆ ಮುಂದೊಡಲಾಗಿರುತ್ತದೆ.

977(1560) ಶ್ರೀ ಮಾಮನಿ ವಿಶ್ವನಾಥ ಕರಬಸಪ್ಪ (ಪರಸಗಡ) : ಮಾನ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮತ್ತು ಸಣ್ಣ ಉಳಿತಾಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ವಿಜ್ಞಾನ ಕೇಂದ್ರವನ್ನು ಸೌದತ್ತಿಯಲ್ಲಿ ಪ್ರಾರಂಭಿಸುವ ಉದ್ದೇಶ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ತೆಗೆದುಕೊಂಡ ಕ್ರಮವೇನು?

ಶ್ರೀ ಬಸವರಾಜ. ಎಸ್.ಹೊರಟ್ಟಿ (ವಿಜ್ಞಾನ ,ತಂತ್ರಜ್ಞಾನ ಮತ್ತು ಸಣ್ಣ ಉಳಿತಾಯ ಸಚಿವರು):

ಅ) ಅಂತಹ ಪ್ರಸ್ತಾವನೆ ಇರುವುದಿಲ್ಲ

ಆ) ಉದ್ಭವಿಸುವುದಿಲ್ಲ.

978(1361) ಶ್ರೀ ಮಾರಿಹಾಳ ಸುರೇಶ್ ಶಿವರುದ್ರಪ್ಪ (ಕಿತ್ತೂರು) : ಮಾನ್ಯ ಮುಖ್ಯಮಂತ್ರಿಯವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಐತಿಹಾಸಿಕ ಪರಂಪರೆಯ ಕೇಂದ್ರಗಳೆಂದು ಗುರುತಿಸಿರುವ ಸ್ಥಳಗಳಾವುದು;

ಆ) ಗುರುತಿಸಿರುವ ಪೈಕಿ ಪರಂಪರೆಯ ಕೇಂದ್ರಗಳಿಂದ ಕೈ ಬಿಟ್ಟಿರುವ ಸ್ಥಳಗಳಾವುವು ಹಾಗೂ ಅದಕ್ಕೆ ಕಾರಣಗಳೇನು;

ಇ) ಸದರಿ ಪಟ್ಟಿಯಲ್ಲಿ ಶ್ರೀರಂಗಪಟ್ಟಣ, ಬೀದರ್, ಬಿಜಾಪುರ, ಗುಲ್ಬರ್ಗ ಹಾಗೂ ಕಿತ್ತೂರು ಐತಿಹಾಸಿಕ ಸ್ಥಳಗಳು ಸೇರಲ್ಪಟ್ಟಿವೆಯೇ (ಹಾಗಿದ್ದಲ್ಲಿ ವಿವರ ನೀಡುವುದು)

ಈ) ಸೇರದಿದ್ದಲ್ಲಿ, ಈ ಎಲ್ಲಾ ಕೇಂದ್ರಗಳನ್ನು ವಿಶ್ವ ಪರಂಪರೆ ಕೇಂದ್ರಗಳೆಂದು ಘೋಷಿಸಲಾಗಿದೆಯೇ;

ಉ) ಹಾಗಿದ್ದಲ್ಲಿ ಇವುಗಳ ಸಂರಕ್ಷಣೆ ಹಗೂ ಅಭಿವೃದ್ಧಿಗೆ ಸರ್ಕಾರವು ಕೈಗೊಂಡಿರುವ ಕ್ರಮವೇನು ಹಾಗೂ ನೀಡಿರುವ ಹಣವೆಷ್ಟು?

ಶ್ರೀ ಧರ್ಮಸಿಂಗ್(ಮುಖ್ಯ ಮಂತ್ರಿಗಳು) :

ಅ) ಮೈಸೂರು, ಶ್ರೀರಂಗಪಟ್ಟಣ, ಬಿಜಾಪುರ, ಗುಲ್ಬರ್ಗಾ, ಬೀದರ್ ಮತ್ತು ಕಿತ್ತೂರನ್ನು ಪಾರಂಪರಿಕ ಪ್ರದೇಶಗಳೆಂದು ಗುರುತಿಸಲಾಗಿದೆ.

ಆ) ಗುರುತಿಸಲಾಗಿರುವ ಮೇಲ್ಕಂಡ ಸ್ಥಳಗಳ ಪೈಕಿ ಯಾವುದನ್ನೂ ಕೈಬಿಟ್ಟಿರುವುದಿಲ್ಲ.

ಇ) ಹೌದು

ಈ) ಉದ್ಭವಿಸುವುದಿಲ್ಲ.

ಉ) ಮೇಲ್ಕಂಡ ಸ್ಥಳಗಳ ಸಂರಕ್ಷಣೆ ಹಾಗೂ ಅಭಿವೃದ್ಧಿ ಕಾರ್ಯಗಳಿಗಾಗಿ ಪರಂಪರಾ ಆಯುಕ್ತರ ಹುದ್ದೆಯನ್ನು ಸೃಜಿಸಲಾಗಿದೆ.

ಮೈಸೂರು-ಶ್ರೀರಂಗಪಟ್ಟಣ ಪಾರಂಪರಿಕ ಪ್ರದೇಶಗಳ ಅಭಿವೃದ್ಧಿ ಮತ್ತು ಸಂರಕ್ಷಣೆಗಾಗಿ ತಜ್ಞರ ಸಮಿತಿ ರಚನೆಯಾಗಿರುತ್ತದೆ.

2004-05ನೇ ಸಾಲಿಗೆ ರೂ. 135.00 ಲಕ್ಷ ಅನುದಾನ ನಿಗದಿಗೊಳಿಸಿದೆ.

979(1362) ಶ್ರೀ ಮಾರಿಹಾಳ ಸುರೇಶ್ ಶಿವರುದ್ರಪ್ಪ(ಕಿತ್ತೂರು) : ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬೆಳಗಾಂ ಜಿಲ್ಲಾ, ಚೆನ್ನಮ್ಮನ ಕಿತ್ತೂರಿನಲ್ಲಿ ಕರ್ನಾಟಕ ವಾಯುವ್ಯ ರಸ್ತೆ, ಸಾರಿಗೆ ಸಂಸ್ಥೆ ಡಿಪೋ ಸ್ಥಾಪಿಸುವ ವಿಚಾರ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಕಾಮಗಾರಿ ಪ್ರಾರಂಭಿಸುವುದು ಯವಾಗ ಹಾಗೂ ಇದಕ್ಕಾಗಿ ಸರ್ಕಾರವು ನಿಗದಿಪಡಿಸಿರುವ ಹಣ ಎಷ್ಟು?

ಶ್ರೀ ಮಲ್ಲಿಕಾರ್ಜುನ ಖರ್ಗೆ(ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು):

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

986(1553) ಶ್ರೀ ಎನ್.ಎಲ್.ನರೇಂದ್ರಬಾಬು (ರಾಜಾಜಿನಗರ) : ಮಾನ್ಯ ಮುಖ್ಯ ಮಂತ್ರಿಯವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬೆಂಗಳೂರು ರಾಜಾಜಿನಗರ ಪ್ರವೇಶ ದ್ವಾರದ ಬಳಿ ಗ್ರೇಡ್ ಸೆಪರೇಟರ್ ನಿರ್ಮಾಣದ ಕಾಮಗಾರಿಗೆ ಇಲ್ಲಿಯವರೆಗೆ ಬಿಡುಗಡೆಯಾದ ಮೊತ್ತವೆಷ್ಟು; ಹಾಗೂ ಆಗಿರುವ ಕಾಮಗಾರಿ ಕೆಲಸವೆಷ್ಟು;

ಆ) ಇದರ ಅಂದಾಜು ವೆಚ್ಚವನ್ನು ಪರಿಷ್ಕೃತ ಗೊಳಿಸಲಾಗಿದೆಯೇ; ಹಾಗಿಲ್ಲದಿದ್ದಲ್ಲಿ, ಪರಿಷ್ಕರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ(ವಿವರ ಒದಗಿಸುವುದು) ;

ಇ) ಈ ಕಾಮಗಾರಿ ಗುತ್ತಿಗೆದಾರರು ಕಡಿಮೆ ಸಂಖ್ಯೆಯಲ್ಲಿ ಕೆಲಸಗಾರರನ್ನು ನೇಮಿಸಿ ಕೊಂಡು ಕಾಮಗಾರಿ ಕೆಲಸ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ತ್ವರಿತಗತೀಯುಲ್ಲಿ ಕಮಗಾರಿಯನ್ನು ಪೂರ್ಣಗೊಳಿಸಲಾಗುವುದೇ ;

ಈ) ಈ ಕಾಮಗಾರಿಯ ಮೂಲ ಗುತ್ತಿಗೆದಾರರು ಉಪ ಗುತ್ತಿಗೆದಾರರಿಗೆ ಕಾಮಗಾರಿ ಕೆಲಸ ವಹಿಸಿರುವುದು ನಿಯಮ ಬಾಹಿರವಲ್ಲವೇ; ಹಾಗಿದ್ದಲ್ಲಿ, ಇದು ಗುತ್ತಿಗೆ ಷರತ್ತುಗಳನ್ನು ಉಲ್ಲಂಘಿಸಿದಂತೆ ಆಗುವುದಿಲ್ಲವೇ; ಇದರ ಬಗ್ಗೆ ಕ್ರಮ ಜರುಗಿಸಲಾಗಿದೆಯೇ?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಯವರು) :

ಅ) ರೂ.10.40 ಕೋಟಿಗಳು.

ಶೇ.57 ರಷ್ಟು ಕೆಲಸ ಪೂರ್ಣಗೊಂಡಿರುತ್ತದೆ.

ಆ) ಇಲ್ಲ.

ಇ) ಹೌದು ಬಂದಿದೆ. ಈ ಕಾಮಗಾರಿಯನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗಿದೆ.

ಈ) ಈ ಕಾಮಗಾರಿಯನ್ನು ಮೂಲ ಗುತ್ತಿಗೆದಾರರೇ ನಿರ್ವಹಿಸುತ್ತರುವುದರಿಂದ ಉಪಗುತ್ತಿಗೆ ನೀಡಿದ್ದಾರೆಂದು ವಿಷಯವು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

987(1554) ಶ್ರೀ ಎನ್.ಎಲ್.ನರೇಂದ್ರಬಾಬು (ರಾಜಾಜಿನಗರ) : ಮಾನ್ಯ ಮುಖ್ಯಮಂತ್ರಿಯವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬೆಂಗಳೂರು ಪಶ್ಚಿಮ ಕಾರ್ಡ್ ರಸ್ತೆಯ ಗ್ರೇಡ್ ಸಪರೇಟರ್ ಕಾಮಗಾರಿ ಕೆಲಸಗಳಿಗೆ ಇಲ್ಲಿಯವರೆಗೆ ಬಿಡುಗಡೆಯಾಗಿರುವ ಮೊತ್ತ ವೆಷ್ಟು ಮತ್ತು ಆಗಿರುವ ಕೆಲಸ ಎಷ್ಟು;

ಆ) ಕಾಮಗಾರಿ ಕೆಲಸ ವಿಳಂಬವಾಗುತ್ತಿರುವುದರಿಂದ ಜನಗಳಿಗೆ ಸಂಚಾರ ವ್ಯತ್ಯಯ ಉಂಟಾಗಿ ಅಪಘಾತಗಳು ಸಂಭವಿಸಿ ಸಾವು ನೋವುಗಳು ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಸತ್ತವರಿಗೆ ಮತ್ತು ಗಾಯ ಗೊಂಡವರಿಗೆ ಏನಾದರೂ ಪರಿಹಾರ ನೀಡಲಾಗಿದೆಯೇ;

ಇ) ಪರಿಹಾರ ನೀಡಲಾದ ಮೊತ್ತವೆಷ್ಟು?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) :

ಅ) ಬೆಂಗಳೂರು ಪಶ್ಚಿಮ ಕಾರ್ಡ್ ರಸ್ತೆಯ ಗ್ರೇಡ್ ಸಪರೇಟರ್ ಕಾಮಗಾರಿ ಕೆಲಸಗಳಿಗೆ ದಿನಾಂಕ 15.1.2005 ರವರೆಗೆ ಬಿಡುಗಡೆಯಾಗಿರುವ ಮೊತ್ತ ರೂ.4.60 ಕೋಟಿಗಳು ಮತ್ತು ಶೇ.35 ರಷ್ಟು ಕೆಲಸ ಆಗಿರುತ್ತದೆ.

ಆ) ಕಾಮಗಾರಿಯು ನಿಗದಿಪಡಿಸಿರುವ ಪ್ರಕಾರ ನಡೆಯುತ್ತಿದೆ ಹಾಗೂ ಬದಲಿ ಸಂಚಾರ ವ್ಯವಸ್ಥೆ ಮಾಡಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

990(836) ಶ್ರೀ ನಿರ್ಮಲ್ ಸುರಾನ. (ಭಾರತೀನಗರ) : ಮಾನ್ಯ ಮುಖ್ಯಮಂತ್ರಿಯವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್–86, ಬಾಣಸವಾಡಿ ಮುಖ್ಯರಸ್ತೆಯಲ್ಲಿ ನಿರ್ಮಾಣ ಹಂತದಲ್ಲಿರುವ ಫ್ಲೈಓವರ್ ಕಾಮಗಾರಿಯ ಒಟ್ಟು ಅಂದಾಜು ಮೊತ್ತವೆಷ್ಟು;

ಆ) ಇದುವರೆವಿಗೂ ಗುತ್ತಿಗೆದಾರರಿಗೆ ಪಾವತಿಸಿರುವ ಹಣ ಎಷ್ಟು :

ಇ) ಸದರಿ ಕಮಗಾರಿಯನ್ನು ಪೂರ್ಣಗೊಳಿಸಲು ನಿಗದಿಪಡಿಸಿದ್ದ (As per Tender conditions) ಕಾಲಮಿತಿ ಏನು;

ಈ) ಗುರತ್ತಿಗೆದಾರರು ನಿಗದಿತ ಅವಧಿಯಲ್ಲಿ ಕಾಮಗಾರಿ ಪೂರ್ಣಗೊಳಿಸದಿದ್ದರೆ ದಂಡನಾ ಕ್ರಮಗಳೇನು;

ಉ) ಕಾಮಗಾರಿ ವಿಳಂಬಕ್ಕೆ ಕಾರಣಗಳೇನು;

ಊ) ಸದರಿ ಕಾಮಗಾರಿಯು ಸಾರ್ವಜನಿಕ ಉಪಯೋಗಕ್ಕೆ ಯಾವ ದಿನಾಂಕದಿಂದ ಸಿದ್ಧಗೊಳ್ಳುತ್ತದೆ?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಯವರು) :

ಅ) ರೂ.800 ಲಕ್ಷಗಳು

ಆ) ರೂ.335 ಲಕ್ಷಗಳು

ಇ) ಸದರಿ ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗದಿ ಪಡಿಸಿದ್ದ ಕಾಲಮಿತಿ ದಿನಾಂಕ. 27.10.2004.

ಈ) ರೈಲ್ವೆ ಇಲಾಖೆಯು ಕೆಲಸ ನಿರ್ವಹಿಸುತ್ತಿರವುದರಿಂದ ನೈರುತ್ಯ ರೈಲ್ವೆ ಇಲಾಖೆ ಟೆಂಡರ್ ನಿಯಮಾನುಸಾರ ಕ್ರಮ ಕೈಗೊಳ್ಳುತ್ತದೆ.

ಉ) ಕಾಮಗಾರಿ ನಡೆಯುವ ಸ್ಥಳದಲ್ಲಿ ಇರುವ ನೀರಿನ ಕೊಳವೆ, ಒಳಚರಂಡಿ ವ್ಯವಸ್ಥೆ, ಓ.ಎಫ್.ಸಿ. ಕೇಬಲ್, ಬೆಸ್ಕಾಂನ ಕೇಬಲ್, ಪಿ ಅಂಡ್ ಟಿ ಕೇಬಲ್‌ಗಳನ್ನು ಸ್ಥಳಾಂತರಿಸಬೇಕಾದ್ದರಿಂದ ಹಾಗೂ ವಾಹನಗಳಿಗೆ ಬದಲಿ ಸಂಚಾರ ವ್ಯವಸ್ಥೆ ಮಾಡಿರುವುದರಿಂದ ವಿಳಂಬವಾಗಿರುತ್ತದೆ.

ಊ) ದಿನಾಂಕ 10.2.2005ರಂದು ಆರ್.ಓ.ಬಿ ಯನ್ನು ಸಾರ್ವಜನಿಕ ವಾಹನ ಸಂಚಾರಕ್ಕೆ ಪ್ರಾಯೋಗಿಕವಾಗಿ ಬಿಟ್ಟು ಕೊಡಲು ಯೋಜಿಸಲಾಗಿದೆ.

992(838) ಶ್ರೀ ನಿರ್ಮಲ್ ಸುರಾನ (ಭಾರತೀನಗರ) : ಮಾನ್ಯ ಮಂತ್ರಿಯವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ನಿರ್ಮಲ ಶೌಚಾಲಯಗಳಲ್ಲಿ ಫಲಾನುಭವಿಗಳಿಂದ ಶುಲ್ಕ ವಸೂಲಿ ಮಾಡುತ್ತಿರುವ ಹಿನ್ನೆಲೆಯಲ್ಲಿ ಹಾಗೂ ಸಮೂಹ ಸೌಲಭ್ಯದ ದೃಷ್ಟಿಯಿಂದ ಶೌಚಾಲಯಗಳ ನಿರ್ವಹಣಾ ವೆಚ್ಚವನ್ನು ಮಹನಗರ ಪಾಲಿಕೆಯೇ ಭರಿಸಬಹುದೆ;

ಆ) ಮಹಾನಗರ ಪಾಲಿಕೆ ನಿರ್ವಹಣಾ ವೆಚ್ಚವನ್ನು ಭರಿಸುವಲ್ಲಿ ಇರುವ ಅಡಚಣೆಗಳೇನು ;

ಇ) ನಿರ್ವಹಣಾ ವೆಚ್ಚ ಭರಿಸುವಲ್ಲಿ ಉದ್ಭವಿಸುವ ಅಡಚಣೆಗಳ ನಿವಾರಣೆಗೆ ಪಾಲಿಕೆ ನಿರ್ದಿಷ್ಟ ಕ್ರಮಗಳನ್ನು ರೂಪಿಸಿದೆಯೇ;

ಈ) ರೂಪಿಸಿದ್ದರೆ ಅಂತಹ ಕ್ರಮಗಳ ಸಂಕ್ಷಿಪ್ತ ವಿವರಗಳೇನು;

ಉ) ಅದಕ್ಕೆ ಸಕಾರಣಗಳೇನು;

ಶ್ರೀ ಧರ್ಮಸಿಂಗ್(ಮುಖ್ಯಮಂತ್ರಿಗಳು) :

ಅ) ' ನಿರ್ಮಲ ಬೆಂಗಳೂರು' ಯೋಜನೆಯಡಿ ನಿರ್ಮಿಸಿರುವ ಶೌಚಾಲಯಗಳನ್ನು ಬಿಎಟಿಎಫ್ ಸಹಯೋಗದೊಂದಿಗೆ ರೂಪು ರೇಷೆಗೊಂಡಿದ್ದು, ಇನ್‌ಫೋಸಿಸ್ ಫೌಂಡೇಷನ್ ವತಿಯಿಂದ 'ಪಾವತಿಸಿ-ಉಪಯೋಗಿಸಿ' ಆಧಾರದ ಮೇಲೆ ಬಹುಕಾಲ ನಿರಂತರವಾಗಿ ನಿರ್ವಹಿಸಲು ನಿರ್ಮಿಸಲ್ಪಟ್ಟಿರುತ್ತವೆ. ಪ್ರಸ್ತುತ ಅಂತಹ 108 ಶೌಚಾಲಯಗಳು ಯೋಜನೆಯ ಹಂತದಲ್ಲಿರುತ್ತವೆ. ಸದರಿ ಶೌಚಾಲಯಗಳನ್ನು ಖಾಸಗಿ ಸಂಸ್ಥೆಯು ನಿರ್ವಹಿಸುತ್ತಿದ್ದು, ಪಾಲಿಕೆಯಿಂದ ನಿರ್ವಹಣಾ ವೆಚ್ಚವನ್ನು ಭರಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಉ) ಉದ್ಭವಿಸುವುದಿಲ್ಲ.

993(839) ಶ್ರೀ ನಿರ್ಮಲ್ ಸುರಾನ, (ಭಾರತೀನಗರ) : ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ವಿವಿಧ ಸಂಘ ಸಂಸ್ಥೆಗಳಿಗೆ ವಿಶೇಷ ಆರ್ಥಿಕ ಅನುದಾನ ನೀಡಲು ಅಳವಡಿಸಿಕೊಂಡಿರುವ ಮಾನದಂಡ ಮತ್ತು ಮಾರ್ಗಸೂಚಿಗಳೇನು;

ಆ) 2003-04 ಮತ್ತು 2004-05ನೇ ಸಾಲಿನಲ್ಲಿ ಆರ್ಥಿಕ ಅನುದಾನ ಪಡೆದು ಕೊಂಡಿರುವ ವಿವಿಧ ಸಂಘ ಸಂಸ್ಥೆಗಳು ಯಾವುವು ಮತ್ತು ಬಿಡುಗಡೆಯಾದ ಹಣ ಎಷ್ಟು;

ಇ) ಆರ್ಥಿಕ ಅನುದಾನ ಬಿಡುಗಡೆಯಾದ ನಂತರ ಮಹಾನಗರ ಪಾಲಿಕೆ ಮಾರ್ಗಸೂಚಿ/ ಮಾನದಂಡದನ್ವಯ ಹಣದ ಬಳಕೆ ಮತ್ತು ಕಾಲಕಾಲಕ್ಕೆ ಪರಿವೀಕ್ಷಣೆ ನಡೆಸಿದೆಯೇ;

ಈ) ಪರಿವೀಕ್ಷಣೆ ನಡೆದಿದ್ದರೆ, ಹಣದ ಬಳಕೆ ಅಥವಾ ದುರುಪಯೋಗದ ಪ್ರಕರಣಗಳಾವುವು; ಪ್ರಕರಣಗಳಲ್ಲಿ ಪಾಲಿಕೆ ತೆಗೆದುಕೊಂಡಿರುವ ಕ್ರಮಗಳೇನು;

ಉ) ಅನುದಾನ ದೊರಕಿಸಿಕೊಂಡಿರುವ ಸಂಘ, ಸಂಸ್ಥೆಗಳ ಹೊಣೆಗಾರಿಕೆ ಅಥವಾ ಜವಾಬ್ದಾರಿಗಳೇನು (ವಿವರ ನೀಡುವುದು) ?

ಶ್ರೀ ಧರ್ಮಸಿಂಗ್(ಮುಖ್ಯ ಮಂತ್ರಿಯವರು) :

ಅ) ಅನುಬಂಧ-1 ರಲ್ಲಿ ನೀಡಲಾಗಿದೆ.

ಆ) ವಿವರಗಳನ್ನು ಅನುಬಂಧ-2 ರಲ್ಲಿ ನೀಡಲಾಗಿದೆ.

ಇ) 2004-05ನೇ ಸಾಲಿನಿಂದ ಮಾರ್ಗಸೂಚಿಗಳನ್ನು ಪಾಲಿಕೆ ಅಳವಡಿಸಿಕೊಂಡಿದ್ದು ಅದರ ಅನ್ವಯ ಪರಿವೀಕ್ಷಣೆ ಮಾಡಲು ಕ್ರಮ ವಹಿಸಲಾಗುವುದು.

ಈ) ಪರಿವೀಕ್ಷಣೆ ನಂತರ ದುರುಪಯೋಗವಾಗಿದ್ದಲ್ಲಿ ಆಯಾ ಸಂಸ್ಥೆಯಿಂದ ಹಣ ವಸೂಲಿ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು.

ಉ) ಪಾಲಿಕೆಯಿಂದ ಅನುದಾನವನ್ನು ಪಡೆದ ಸಂಸ್ಥೆಯು ಸದರಿ ಅನುದಾನವನ್ನು ನಿಗದಿತ ಉದ್ದೇಶಗಳಿಗೆ ಸಕ್ರಮವಾಗಿ ಬಳಸಿರುವ ಬಗ್ಗೆ ಲೆಕ್ಕ ಪತ್ರ ಹಾಗೂ ಪ್ರಮಾಣ ಪತ್ರಗಳನ್ನು ಒದಗಿಸಲು ಬದ್ಧರಾಗಿರತಕ್ಕದ್ದು.

ಬೆಂಗಳೂರು ಮಹಾನಗರ ಪಾಲಿಕೆ

ಅನುಬಂಧ-I

ಸಂಖ್ಯೆ : ಎಸಿ(ಎ)ಸಿಆರ್ 1991/03-04

ಆಯುಕ್ತರ ಕಛೇರಿ
ನಗರಪಾಲಿಕೆ ಕಛೇರಿಗಳು
ದಿನಾಂಕ : 18.3.2004

ಕಛೇರಿ ಆದೇಶ

ವಿಷಯ : ನಗರದ ವಿವಿಧ ಸಂಘ ಸಂಸ್ಥೆಗಳಿಗೆ ಗ್ರಾಂಟ್-ಇನ್-ಏಡ್ ಹಣವನ್ನು ಬಿಡುಗಡೆ ಮಾಡುವಲ್ಲಿ ಮಾರ್ಗಸೂಚಿಗಳನ್ನು ಪಾಲಿಕೆಯಲ್ಲಿ ಅಳವಡಿಸಿಕೊಂಡಿರುವ ಬಗ್ಗೆ .

ಉಲ್ಲೇಖ : 1. ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆಸಭೆ ಮುಂದೆ ಮಂಡಿಸಲಾದ ಕ್ರಮಸಂಖ್ಯೆಯ ಟಿಪ್ಪಣಿ ದಿನಾಂಕ : 25.11.2003.

2. ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ: 29.12.2003ರ ಸಭೆಯಲ್ಲಿ ವಿಷಯ ಸಂಖ್ಯೆ: 123/03.04ರ ನಡವಳಿಕೆಗಳು

3. ಪಾಲಿಕೆ ಸಭೆಯ ದಿನಾಂಕ: 04.02.2004ರ ಸಭೆಯಲ್ಲಿ ವಿಷಯದ ಸಂಖ್ಯೆ:47(205)ರ ನಡವಳಿಕೆಗಳು.

ಬೆಂಗಳೂರು ಮಹಾನಗರ ಪಾಲಿಕೆಯ ವತಿಯಿಂದ ನಗರದ ವಿವಿಧ ಸಂಘ ಸಂಸ್ಥೆಗಳಿಗೆ (ಗ್ರಾಂಟ್–ಇನ್–ಏಡ್) ಹಣವನ್ನು ಬಿಡುಗಡೆ ಮಾಡುವಾಗ ಕರ್ನಾಟಕ ಸರ್ಕಾರದ ನಗರಾಬಿವೃದ್ಧಿ ಇಲಾಖೆಯ ಪತ್ರದ ಸಂಖ್ಯೆ: ನೆಅಇ 108 ಎಂಎನ್‌ಯು 2003 ದಿನಾಂಕ 27.5.2003ರ ಪತ್ರದಲ್ಲಿ ಪ್ರತಿ ಪ್ರಕರಣಕ್ಕೆ ಸಂಬಂಧಿಸಿದಂತೆ ಸರ್ಕಾರದಿಂದ ಅನುಮೋದನೆಯನ್ನು ಪಡೆದ ನಂತರವೇ ಪಾವತಿಸಲು ಹಾಗೂ ಪ್ರತಿ ವರ್ಷ ಒಂದೇ ಸಂಸ್ಥೆಗೆ ಈ ಅನುದಾನ ನೀಡದಂತೆ ಆದೇಶಿಸಿರುತ್ತದೆ. ಸರ್ಕಾರದ ಪತ್ರದ ಸಂಖ್ಯೆ:ನಅಇ 108 ಎಂಎನ್‌ಯು 2003 ದಿನಾಂಕ 01.08.2003ರಲ್ಲಿ ಬೆಂಗಳೂರು ಮಹಾನಗರ ಪಾಲಿಕೆಯ ವತಿಯಿಂದ ವಿವಿಧ ಸಂಘ ಸಂಸ್ಥೆಗಳಿಗೆ ವಾರ್ಷಿಕ ಹಾಗೂ ಮಾಸಿಕ ಅನುದಾನ ನೀಡುವ ಬಗ್ಗೆ ಯಾವುದೇ ನಿರ್ದಿಷ್ಟವಾದ ಮಾರ್ಗಸೂಚಿಗಳನ್ನು ರಚಿಸಿರುವುದಿಲ್ಲವಾದ ಕಾರಣ ಸಂಘ–ಸಂಸ್ಥೆಗಳಿಗೆ ಸಹಾಯಾನುದಾನ ಬಿಡುಗಡೆ ಮಾಡುವುದಕ್ಕೆ ಸಂಬಂಧಿಸಿದಂತೆ ಸೂಕ್ತ ಮಾರ್ಗಸೂಚಿಗಳನ್ನು ರಚಿಸಿಕೊಂಡು ವಿವಿಧ ಸಂಘ–ಸಂಸ್ಥೆಗಳಿಗೆ ಪಾಲಿಕೆಯ ಹಂತರದಲ್ಲಿಯೇ ಈ ಬಾಬ್ತಿಗೆ ಅನುಮೋದಿತ ಆಯವ್ಯಯ್ಯದ ಮಿತಿಯಲ್ಲಿ ಅನುದಾನವನ್ನು ಮಂಜೂರು ಮಾಡಲು ಸೂಚನೆ ನೀಡಿರುತ್ತದೆ.

ಈ ಹಿನ್ನೆಲೆಯಲ್ಲಿ ನಗರದ ಯಾವುದೇ, ಸಂಘ–ಸಂಸ್ಥೆಗಳಿಗೆ ವಾರ್ಷಿಕ ಹಾಗೂ ಮಾಸಿಕ ಅನುದಾನವನ್ನು ಬಿಡುಗಡೆ ಮಾಡುವಾಗ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಅನುಸರಿಸಬೇಕಾದ ಮಾರ್ಗಸೂಚಿಗಳನ್ನು ತಯಾರಿಸಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆಯ ನಿರ್ಣಯಕ್ಕಾಗಿ ಉಲ್ಲೇಖ(1)ರಂತೆ ಟಿಪಣಿಯನ್ನು ಮಂಡಿಸಿದ್ದು, ಸದರಿ ಟಿಪ್ಪಣಿಯನ್ನು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆಗಳಲ್ಲಿ "ಈಗಾಗಲೇ ಸಹಾಯ ಧನ ಕೋರಿರುವ ಸಂಘ ಸಂಸ್ಥೆಗಳಿಗೆ ಅನುದಾನವನ್ನು ನೀಡುವುದು ಹಾಗೂ ಟಿಪ್ಪಣಿಯಲ್ಲಿ ಮಂಡಿಸಿರುವ ಮಾರ್ಗಸೂಚಿಗಳನ್ನು 2004–05ನೇ ಸಾಲಿನಿಂದ ಕಡ್ಡಾಯವಾಗಿ ಪಾಲಿಸುವುದು" ಎಂಬುದಾಗಿ ನಿರ್ಣಯವನ್ನು ಕೈಗೊಳ್ಳಲಾಗಿರುತ್ತದೆ. ಇದರಂತೆ ಸಂಘ ಸಂಸ್ಥೆಗಳಿಗೆ ಸಹಾಯ ಧನ ಬಿಡುಗಡೆ ಮಾಡಲು ನಗರಪಾಲಿಕೆಯಲ್ಲಿ ಈ ಕೆಳಕಂಡ ಮಾರ್ಗ ಸೂಚಿಗಳನ್ನು ಅಳವಡಿಸಿಕೊಳ್ಳಲಾಗಿದೆ.

1. ಅನುದಾನಕ್ಕಾಗಿ ಅರ್ಜಿ ಸಲ್ಲಿಸುವ ಯಾವುದೇ ಒಂದು ಸಂಘ/ಸಂಸ್ಥೆಯು ನೊಂದಾಯಿತ ಸಂಸ್ಥೆಯಾಗಿರಬೇಕು ಹಾಗೂ ಸದರಿ ಸಾಲಿನ ಅಥವಾ ಹಿಂದಿನ ಲೆಕ್ಕ ಪರಿಶೋಧನಾ ವರದಿ ಸಲ್ಲಿಸಬೇಕು.

2. ಕನಿಷ್ಠಪಕ್ಷ ಹಿಂದಿನ ಮೂರು ವರ್ಷಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು/ಸಭೆ ಸಮಾರಂಭಗಳು/ಸಾರ್ವಜನಿಕ ಸೇವೆ ಇತ್ಯಾದಿ ನಡೆಸಿರುವ ಬಗ್ಗೆ ದಾಖಲೆ ಸಲ್ಲಿಸಬೇಕು.

3. ಸದರಿ ಸಂಸ್ಥೆಯ ಇರುವಿಕೆಯ ಬಗಗೆ ಸಹಾಯಕ ಕಂದಾಯ ಅಧಿಕಾರಿ ಅಥವಾ ಆರೋಗ್ಯ ವೈದ್ಯಾಧಿಕಾರಿಗಳ ವತಿಯಿಂದ ಸ್ಥಳೀಯ ಮಹಜರ್ ಮಾಡಿ ವರದಿಯನ್ನು ಸಲ್ಲಿಸತಕ್ಕದ್ದು.

4. ಸದರಿ ಸಂಸ್ಥೆಯು ಈಗಾಗಲೇ ಪಾಲಿಕೆಯ ವತಿಯಿಂದಾಗಲೀ ಅಥವಾ ಮಹಾಪೌರರ ನಿಧಿಯಿಂದಾಗಲೀ ಅನುದಾನ ಪಡೆದಿದ್ದ ಪಕ್ಷದಲ್ಲಿ ಯಾವ ಸಾಲಿನಲ್ಲಿ ಪಡೆದಿತ್ತೆಂಬ ಬಗ್ಗೆ ಮಾಹಿತಿ ಪಡೆಯತಕ್ಕದ್ದು.

5. ಸಂಘ ಸಂಸ್ಥಗಳು ಕೋರಿರುವಂತಹ ಕಾರ್ಯಕ್ರಮಗಳಿಗೆ ತಗಲುವ ವೆಚ್ಚದ ಬಗ್ಗೆ ಅಂದಾಜು ಸಲ್ಲಿಸುವುದು.

6. ಸಂಸ್ಥೆಯು ಸಭೆ ಸಮಾರಂಭವನ್ನು ಸೂಚಿತ ದಿನದಂದು ಏರ್ಪಡಿಸಿದ್ದ ಬಗ್ಗೆ ವರದಿ.

7. ಅನುದಾನವನ್ನು ಐದು ವರ್ಷಗಳಿಗೊಮ್ಮೆ ಒಂದು ಸಂಘ/ಸಂಸ್ಥೆಗೆ ಅನುದಾನ ನೀಡಲಾಗುವುದು.

8. ಅನುದಾನ ಕೋರುವ ಸಂಘ/ಸಂಸ್ಥೆಗಳ ಕಾರ್ಯಚಟುವಟಿಕೆಗಳು ಸಾರ್ವಜನಿಕ ಹಿತಾಶಕ್ತಿಯಿಂದ ಕೂಡಿರಬೇಕು. ಜಾತ್ಯಾತೀತವಾದ ಧರ್ಮಾತೀತವಾದ ಹಾಗೂ ರಾಹಕೀಯೇತರ ಕಾರ್ಯಕ್ರಮ ಮಾಡಿರಬೇಕು.

9. ಮೇಲಿನಂತೆ ಅರ್ಹತೆಗಳಿರುವ ಸಂಘ/ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ.10 ಸಾವಿರ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ 5 ಸಾವಿರಗಳಿಂದ 10 ಸಾವಿರ ರೂ. ವೃದ್ಧಾಶ್ರಮ ಅನಾಥಾಶ್ರಮ ಇತ್ಯಾದಿಗಳಿಗೆ 10 ಸಾವಿರದಿಂದ 25 ಸಾವಿರ ರೂ. ಅಧ್ಯಯನ್ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂ.ಗಳ ಅನುದಾನಕ್ಕೆ ಸೀಮಿತಗೊಳಿಸಿದೆ.

10. ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಗೆ / ಆಸ್ಪತ್ರೆಗಳಿಗೆ ಹಾಗೂ ಕ್ರೀಡಾ ಸಂಸ್ಥೆಗಳಿಗೆ ಗರಿಷ್ಠ ಅನುದಾನದ ಮಿತಿ ಅನ್ವಯಿಸುವುದಿಲ್ಲ.

11. ಸಮಿತಿಯಿಂದ ಅನುದಾನವನ್ನು ಪಡೆದ ಸಂಸ್ಥೆಯು ಸದರಿ ಅನುದಾನವನ್ನು ನಿಗಧಿತ ಉದ್ದೇಶಗಳಿಗೆ ಸಕ್ರಮವಾಗಿ ಬಳಸಿರುವ ಬಗ್ಗೆ ನಿರ್ದಿಷ್ಟ ನಮೂನೆಯಲ್ಲಿ ಲೆಕ್ಕಪತ್ರ ಹಾಗೂ ಪ್ರಮಾಣಪತ್ರಗಳನ್ನು ಒದಗಿಸಲು ಬದ್ಧರಾಗಿರತಕ್ಕದ್ದು.

12. ಸಮಿತಿಯಿಂದ ಅನುದಾನವನ್ನು ನೀಡುವುದು ಒಂದು ವಿವೇಚನಾತ್ಮಕ ಸಹಾಯವಾಗಿದ್ದು. ಇದ್ದರಿಂದ ಯಾವುದೇ ಸಂಸ್ತೆಯ ಅಂತಹ ಅನುದಾನ ಪಡೆಯುವ ಹಕ್ಕನ್ನು ಸೃಷ್ಟಿಸಿದಂತಾಗುವುದಿಲ್ಲ. ಯಾವುದೇ ಸಂದರ್ಭದಲ್ಲಿ ಪಾಲಿಕೆಯಿಂದ ನೀಡಲಾದ ಅನುದಾನವನ್ನು ತಡೆಹಿಡಿಯುವ ಅಥವಾ ನಿರ್ದೀಷ್ಟ ಉಪಯೋಗಗಳಿಗೆ ಅನುದಾನವನ್ನು ಸಕಾಲದಲ್ಲಿ ಕ್ರಮಬದ್ಧವಾಗಿ ಉಪಯೋಗಿಸದಿರುವ ಸಂದರ್ಭದಲ್ಲಿ ಅಂತಹ ಅನುದಾನವನ್ನು ಪಾಲಿಕೆಯ ಹಿಂದಕ್ಕೆ ಪಡೆಯಬಹುದಾಗಿರುತ್ತದೆ.

13. ಅನುದಾನ ಕೋರುವ ಸಂಘ/ಸಂಸ್ಥೆಯು ಏಕಮಾತ್ರ ಸದಸ್ಯರನ್ನೊಳಗೊಂಡ ಸಂಸ್ಥೆಯಾಗಿರಬಾರದು.

14. ಪಾಲಿಕೆಯಿಂದ ಅನುದಾನ ಬಿಡುಗಡೆ ಮಾಡುವ ಮುನ್ನ ಒಂದು ಸಮಿತಿಯನ್ನು ರಚಿಸಿ, ಸಮಿತಿಯ ನಿರ್ಣಯದಂತೆ ಬಿಡುಗಡೆ ಮಾಡಬಹುದಾಗಿದೆ.

ಅನುಬಂಧ-2ಬಿ

2004-05ನೇ ಸಾಲಿನಲ್ಲಿ ವಿವಿಧ ಸಂಸ್ಥೆಗಳಿಗೆ ವಾರ್ಷಿಕ ಅನುದಾನ ಬಿಡುಗಡೆ ಮಾಡಿದ ಅನುದಾನ

ಕ್ರಮ ಸಂಖ್ಯೆ	ಸಂಸ್ಥೆಯ ಹೆಸರು	ವಾರ್ಷಿಕ ಅನುದಾನ 2004-05	ಬಿಡುಗಡೆ ಮಾಡಿದ ಅನುದಾನ 2004-05
1	ಸಾರ್ವಜನಿಕ ಕಾರ್ಯಗಳಿಗೆ ಗೋಖಲೆ ಸಂಸ್ಥೆ, ಬಸವನಗುಡಿ	10000.00	10000.00
2	ಉದಯಬಾನು ಕಲಾಸಂಘ, ಕೆ.ಜಿ.ನಗರ	200000.00	200000.00

3	ಕಟ್ಟಿಬಳಗ (ರಿ) ಸಂಸ್ಥೆ,ಎನ್.ಆರ್.ಕಾಲೋನಿ	40000.00	40000.00
4	ಕ್ರಾಂತಿವೀರ ಸಂಗೊಳ್ಳಿರಾಯಣ್ಣ ಸಾಂಸ್ಕೃತಿಕ ಕಾರ್ಯ-ಕ್ರಮಗಳು, ವಿಜಯನಗರ	25000.00	25000.00
5	ಶ್ರೀ ಪರಮಹಂಸ ಸನ್ಯಾಸ ಆಶ್ರಮ, ಸಾರ್ವಜನಿಕ ಸೇವೆ, ಗೋವಿಂದರಾಜನಗರ	25000.00	25000.00
6	ನಟಸಂಗಮ ವೈದ್ಯಕೀಯ ಶಿಬಿರ ಮತ್ತು ಸಮಾಜ-ಸೇವಾ ಟ್ರಸ್ಟ್, ಮಾಗಡಿ ರಸ್ತೆ ಸಾರ್ವಜನಿಕ ಸೇವೆ	25000.00	25000.00
7	ಸಂಗೊಳ್ಳಿರಾಯಣ್ಣ ಕನ್ನಡ ಯುವಕ ಸಮಿತಿ, ಬನಶಂಕರಿ 2ನೇ ಹಂತ, ಬೆಂಗಳೂರು-70	35000.00	35000.00
8	ಗೋಪಾಲಕರ ಸಂಘ, ಶೇಷಾದ್ರಿಪುರಂ ಬೆಂಗಳೂರು-20	100000.00	100000.00
9	ಶ್ರೀ ಪುಲಕೇಶಿ ಕನ್ನಡ ಯುವಕರ ಸಂಘ, ರಾಜಾಜಿನಗರ	15000.00	15000.00
10	ರಾಮಮೂರ್ತಿ ಕನ್ನಡ ಬಳಗ, ಗಾಂಧಿನಗರ, ಬೆಂಗಳೂರು.	10000.00	10000.00
11	ಸರ್ವಜ್ಞ ಮಿತ್ರಮಂಡಳಿ, ಶ್ರೀರಾಮಪುರ	10000.00	10000.00
12	ಆದರ್ಶ ಸುಗಮ ಸಂಗೀರ ಅಕಾಡೆಮಿ, ಬೆಂಗಳೂರು	25000.00	25000.00
13	ರಾಜೀವ್‌ಗಾಂಧಿ ಸ್ಮಾರಕ ಸಂಸ್ಥೆ, ಶೇಷಾದ್ರಿಪುರಂ	150000.00	150000.00
14	ಜಯನಗರ ಸಾಮಾಜಸೇವಾ ಸಮಿತಿಯಿಂದ ಬಡಮಕ್ಕಳಿಗೆ ಉಚಿತ ವಿದ್ಯಾಭ್ಯಾಸಕ್ಕಾಗಿ	100000.00	100000.00
15	ನೇತಾಜಿ ಯುವಕರ ಸಂಘ ಮತ್ತಿಕೆರೆ	25000.00	25000.00
16	ವಾರ್ಡ್-62, ಕನ್ನಡ ಯುವಕ ಸಂಘ, ಆಡುಗೋಡಿ	25000.00	25000.00
17	ಶ್ರೀನಿವಾಸನಗರ, ವಾರ್ಡ್ ನಾಗರೀಕರ ವೇದಿಕೆ	25000.00	25000.00
18	ಕನಕ ಎಜುಕೇಶನ್ ಸೊಸೈಟಿ, ಕುಮಾರಸ್ವಾಮಿ ಬಡಾವಣೆ	75000.00	75000.00
19	ರಾಜಾಜಿನಗರ ಸಾಂಸ್ಕೃತಿಕ ಸಂಘ	25000.00	25000.00
20	ವರ್ಲ್ಡ್ ಪೀಸ್ ಮ್ಯಾನ್ ಟ್ರಸ್ಟ್ ಶ್ರೀ ಮದನ್‌ಗೋಪಾಲ್ ಸ್ವಾಮೀಜಿ	10000.00	10000.00
21	ಇಡಗುಂಜಿ ಸಾಂಸ್ಕೃತಿಕ ಸಂಘ, 6ನೇ ಬಡಾವಣೆ ರಾಜಾಜಿನಗರ	10000.00	10000.00
22	ಮಹಾತ್ಮಾಗಾಂಧಿ ಕಲ್ಚರಲ್ ಅಸೋಷಿಯೇಷನ್, ರಾಜಾಜಿನಗರ	10000.00	10000.00
23	ಬಸವವೇದಿಕ(ರಿ) ಮಾಡವನಗರ.	25000.00	25000.00
24	ಕನ್ನಡ ಅನುಷ್ಠಾನ ಮಂಡಳಿ	25000.00	25000.00
	ಒಟ್ಟು	**1025000.00**	**1025000.00**

2004-05ನೇ ಸಾಲಿನಲ್ಲಿ ವಿವಿಧ ಸಂಸ್ಥೆಗಳಿಗೆ ನೀಡುತ್ತಿರುವ ಸಹಾಯಧನದ ವಿವರಣೆ ಪಟ್ಟಿ

ಕ್ರಮ ಸಂಖ್ಯೆ	ಸಂಸ್ಥೆಯ ಹೆಸರು	ವಾರ್ಷಿಕ ಅನುದಾನ 2004-05	ಬಿಡುಗಡೆ ಮಾಡಿದ ಅನುದಾನ 2004-05
1	ಡಾ: ಎಂ. ಶಿವಣ್ಣ, ಮಸ್ಸಾಜಿಸ್ಟ್ ಆರ್.ಟಿ.ರಸ್ತೆ	3000.00	750.00
2	ಕಶ್ಯಪ್ ಆಯುರ್ವೇದಧ ಚಿಕಿತ್ಸಾಲಯ, ರಾಜಾಜಿನಗರ	3000.00	1750.00
3	ಬಿ.ಕೆ. ಮರಿಯಪ್ಪ ಧರ್ಮ ಸಂಸ್ಥೆ, ಚಾಮರಾಜಪೇಟೆ	100000.00	100000.00
4	ಬೆಂಗಳೂರು ಮಹಾನಗರ ಪಾಲಿಕೆ ಬಡಾವಣೆ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಸ್ಥೆ ಚಂದ್ರಾಬಡಾವಣೆ	40000.00	40000.00
	ಒಟ್ಟು	**146000**	**142500**

ಅನುಬಂಧ-2ಎ

2003-04ನೇ ಸಾಲಿನಲ್ಲಿ ವಿವಿಧ ಸಂಸ್ಥೆಗಳಿಗೆ ನೀಡಿರುವ ಅನದಾನದ ವಿವರ (ವಾರ್ಷಿಕ)

ಕ್ರಮ ಸಂಖ್ಯೆ	ಸಂಸ್ಥೆಯ ಹೆಸರು	ಬಿಡುಗಡೆ ಮಾಡಿದ ಅನುದಾನ 2003-04
1	ಇಂಡಿಯನ್ ರೆಡ್‌ಕ್ರಾಸ್ ಸೊಸೈಟಿ	100000.00
2	ಸೇಂಟ್ ಜಾನ್ಸ್‌ಂಬುಲೆನ್ಸ್ ಅಸೋಸಿಯೇಷನ್	20000.00
3	ಅಕ್ಕಮಹಾದೇವಿ ಸೇವಾಸಮಾಜ, ಅಕ್ಕಿಪೇಟೆ, ಬೆಂಗಳೂರು	20000.00
4	ಉದಯಭಾನು ಕಲಾಸಂಘ, ಕೆ.ಜಿ.ನಗರ	100000.00
5	ಅಂಗವಿಕಲರ ಸಂಘದ ತರಬೇತಿ ಕೇಂದ್ರ, ಹುಣ್ಣೂರು ರಸ್ತೆ ಲಿಂಗರಾಜಪುರ	10000.00
6	ಕರ್ನಾಟಕ ಮಕ್ಕಳಕೂಟ, ಬೆಂಗಳೂರು	40000.00
7	ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪ ರಸ್ತೆ, ಬೆಂಗಳೂರು	25000.00
8	ಬ್ಯಾಹ್ಮಿಣಿ ಕಲ್ಯಾಣ ಟ್ರಸ್ಟ್ (ರಿ)	10000.00
9	ನವಜೀವನನಿಲಯ ಗಾಂಧಿ ಸಾಹಿತ್ಯ ಸಂಘ	10000.00
10	ಬಸಶಂಕರಿ ಸಂಸ್ಕೃತಿ ಸಂಘ, 1ನೇ ಹಂತ, ಬನಶಂಕರಿ, ಬೆಂಗಳೂರು	10000.00
11	ಕರ್ನಾಟಕ ಬ್ಯಾಸ್ಕೆಟ್ ಬಾಲ್ ಅಸೋಸಿಯೇಷನ್	100000.00
12	ಲಾಲ್ ಬಹದ್ದೂರ್ ಪರ್ವತಾರೋಹಣ ಮಹಾ ವಿದ್ಯಾಲಯ	50000.00

13	ನ್ಯಾಷನಲ್ ಎಜುಕೇಷನ್ ಸೊಸೈಟಿ ಆಫ್ ಕರ್ನಾಟಕ(ರಿ) ವಿಜ್ಞಾನ ಕೇಂದ್ರಕ್ಕಾಗಿ ಬಸವನಗುಡಿ ಬೆಂಗಳೂರು-04	150000.00
14	ಕರ್ನಾಟಕ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ(ರಿ) ಬೆಂಗಳೂರು ಉತ್ತರ ಜಿಲ್ಲೆ	50000.00
15	ಶ್ರೀ ರಾಮಚಂದ್ರ ಮಿಷನ್, ಬಿ.ಎಸ್.ಕೆ. 2ನೇ ಹಂತ, ಬೆಂಗಳೂರು	150000.00
16	ಶ್ರೀ ಸಿದ್ಧಾರೂಢ ಮಿಷನ್, ಕೋರಮಂಗಲ ಸಾಮಾಜಿಕ ಸೇವೆ	25000.00
17	ಕ್ರಾಂತಿವೀರ ಸಂಗೊಳ್ಳಿರಾಯಣ್ಣ ಸಾಂಸ್ಕೃತಿಕ ಕಾರ್ಯಕ್ರಮಗಳು ವಿಜಯನಗರ	25000.00
18	ಶ್ರೀ ಪರಮಹಂಸ ಸನ್ಯಾಸ ಆಶ್ರಮ ಸಾರ್ವಜನಿಕ ಸೇವೆ, ಗೋವಿಂದರಾಜನಗರ	25000.00
19	ನೊಳಂಬ ವೀರಶೈವರ ಸಂಘ, ಬಸವೇಶ್ವರನಗರ ವಿದ್ಯಾರ್ಥಿಗಳ ಉಚಿತ ನಿಲಯ ನಡೆ	25000.00
20	ಸಾರ್ವಜನಿಕ ಸೇವೆ	25000.00
21	ಕಬೀರ ಟ್ರಸ್ಟ್ ನಂದಿದುರ್ಗ ರಸ್ತೆ, ಬೆಂಗಳೂರು	50000.00
22	ಸಂಗೊಳ್ಳಿರಾಯಣ್ಣ ಕನ್ನಡ ಯುವಕ ಸಮಿತಿ, ಬನಶಂಕರಿ, 2ನೇ ಹಂತ, ಬೆಂಗಳೂರು-70	25000.00
23	ಗೋಪಾಲಕರ ಸಂಘ, ಶೇಷಾದ್ರಿಪುರ, ಬೆಂ-20	75000.00
24	ಕರ್ನಾಟಕ ಒಲಂಪಿಕ್ ಅಸೋಷಿಯೇಷನ್ ಬೆಂಗಳೂರು-01	100000.00
25	ಶ್ರೀ ಪುಲಕೇಶಿ ಕನ್ನಡ ಯುವಕರ ಸಂಘ, ರಾಜಾಜಿನಗರ	15000.00
26	ರಾಜಾಜಿನಗರ ಕನ್ನಡ ಯುವಕರ ಸಂಘ, ಬೆಂಗಳೂರು-10	15000.00
27	ಆದರ್ಶ ಸುಗಮ ಸಂಗೀತ ಅಕಾಡೆಮಿ, ಬೆಂಗಳೂರು	25000.00
28	ರಾಜ ರಾಜೇಶ್ವರಿ ಮಹಿಳಾ ಸಮಾಜ, ಪ್ರಕಾಶನಗರ, ಬೆಂಗಳೂರು	45000.00
29	ರಂಗಾಭರಣ ಕಲಾಕೇಂದ್ರ (ರಿ) ಆರ್.ಟಿ.ನಗರ	10000.00
30	ವಿವೇಕಾನಂದ ಸಂಸ್ಥೆ, ಐ.ಟಿ.ಐ. ಬಡಾವಣೆ	100000.00
31	ಆಸಕ್ತಿ ಪೋಷಕರ ಸಭಾ, ವಿವಿ.ಪುರಂ, ಬೆಂಗಳೂರು	17000.00
	ಒಟ್ಟು	**1447000.00**

2003-04ನೇ ಸಾಲಿನಲ್ಲಿ ವಿವಿಧ ಸಂಸ್ಥೆಗಳಿಗೆ ನೀಡಿರುವ ಅನುದಾನ ವಿವರ(ಮಾಸಿಕ)

ಕ್ರಮ ಸಂಖ್ಯೆ	ಸಂಸ್ಥೆಯ ಹೆಸರು	ಬಿಡುಗಡೆ ಮಾಡಿದ ಅನುದಾನ 2003-04
1	ಡಾ : ಶಿವಣ್ಣ ಮಸ್ಸಾಜಿಸ್ಟ್, ಆರ್.ಟಿ.ರಸ್ತೆ, ಬೆಂಗಳೂರು	3000.00
2	ಕಶ್ಯಪ ಆಯುರ್ವೇದ ಚಿಕಿತ್ಸಾಲಯ, ರಾಜಾಜಿನಗರ, ಬೆಂಗಳೂರು	3000.00

3	ಬಿ.ಕೆ. ಮರಿಯಪ್ಪ ಧರ್ಮಸಂಸ್ಥೆ	100000.00
4	ಗೋಕುಲ ಸಂಸ್ಥೆ(ರಿ) ವಿದ್ಯಾಪೀಠ ವೃತ್ತ	50000.00
5	ಬಿ.ಎಂ.ಪಿ ಲೇಔಟ್ಸ್ ಬೆಂಗಳೂರು ಮಹಾನಗರ ಪಾಲಿಕೆ ಬಡಾವಣೆ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಸ್ಥೆ, ಚಂದ್ರಾ-ಬಡಾವಣೆ, ಬೆಂಗಳೂರು	40000.00
6	ಬಿ.ಎಂ.ಸಿ. ಸ್ಮಾರಕ ಪ್ರತಿಷ್ಠಾನ	10000.00
	ಒಟ್ಟು	**206000.00**

2003-04ನೇ ಸಾಲಿನಲ್ಲಿ ಒಮ್ಮೆ ನೀಡುವ ಅನುದಾನ

ಕ್ರಮ ಸಂಖ್ಯೆ	ಸಂಸ್ಥೆಯ ಹೆಸರು	ವಾರ್ಷಿಕ ಅನುದಾನ 2003-04	ಬಿಡುಗಡೆ ಮಾಡಿದ ಅನುದಾನ 2003-04
1	ಬಸವ ವೇದಿಕೆ ರಿಜಿಸ್ಟರ್, ಮಾಧವನಗರ	100000.00	100000.00
2	ಸಿಂಹ ಬೆಂಗಳೂರು(ಕಾರ್ಪೋರೇಷನ್ ಡೈರೆಕ್ಟರಿ)	25000.00	25000.00
	ಒಟ್ಟು	**125000**	**125000**

2003-04ನೇ ಸಾಲಿನಲ್ಲಿ ವಿವಿಧ ಆರೋಗ್ಯ ಸಂಸ್ಥೆಗಳಿಗೆ ಕೊಡಬೇಕಾದ ಅನುದಾನ

ಕ್ರಮ ಸಂಖ್ಯೆ	ಸಂಸ್ಥೆಯ ಹೆಸರು	ವಾರ್ಷಿಕ ಅನುದಾನ 2003-04	ಬಿಡುಗಡೆ ಮಾಡಿದ ಅನುದಾನ 2003-04
1	ಸಂಜಯಗಾಂಧಿ ಅಪಘಾತ ಮತ್ತು ಪುನರ್ ವಸತಿ ಕೇಂದ್ರ	750000.00	750000.00

994(1088) ಶ್ರೀ ನಿರ್ಮಲ್ ಸುರಾನಾ. (ಭಾರತೀನಗರ) : ಮಾನ್ಯ ಮುಖ್ಯ ಮಂತ್ರಿಯವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) 2003-2004 ಮತ್ತು 2004-2005ರ ಸಾಲಿನ ಬೆಂಗಳೂರು ಮಹಾನಗರ ಪಾಲಿಕೆಯ ಆಯವ್ಯಯದಲ್ಲಿ ಹೃದ್ರೋಗ ತಡೆಗಟ್ಟುವ ಕಾರ್ಯಕ್ರಮದಡಿ ತಲಾ 1 ಕೋಟಿ ರೂಪಾಯಿಗಳನ್ನು ಕಾಯ್ದಿಡಲು ನಿರ್ಣಯ ಮಾಡಿದೆಯೇ;

ಆ) ಹಾಗಿದ್ದಲ್ಲಿ, ಅದನ್ನು ಅನುಷ್ಠಾನಗೊಳಿಸಲಾಗಿದೆಯೆ ಮತ್ತು ಅನುಷ್ಠಾನಗೊಳಿಸದಿದ್ದರೆ ಕಾರಣಗಳೇನು;

ಇ) ಅನುಷ್ಠಾನಗೊಂಡಿದ್ದರೆ, ಈ ಯೋಜನೆಯಡಿ ಪ್ರಯೋಜನ ಪಡೆದು ಕೊಂಡಿರುವ ಫಲಾನುಭವಿಗಳು ಯಾರು ಯಾರು (2003-04 ಮತ್ತು 2004-05ನೇ ವರ್ಷಕ್ಕೆ ಸೀಮಿತವಾಗಿ ಪೂರ್ಣ ವಿವರಗಳನ್ನು ನೀಡಿ);

ಈ) ಈ ಕಾರ್ಯಕ್ರಮವನ್ನು ಜಾರಿಗೊಳಿಸುವ ವಿಧಿ ವಿಧಾನಗಳೇನು;

ಉ) ರೋಗ ತಪಾಸಣೆಯಿಂದ ಹಿಡಿದು ರೋಗ ನಿಯಂತ್ರಣದವರೆವಿಗೆ ಬೇಕಿರುವ ಅಗತ್ಯ ಸೌಲಭ್ಯ ವ್ಯವಸ್ಥೆ ಬಗ್ಗೆ ಮಹಾನಗರ ಪಾಲಿಕೆ ತೆಗೆದುಕೊಂಡಿರುವ ಕ್ರಮಗಳೇನು;

ಶ್ರೀ ಧರ್ಮಸಿಂಗ್(ಮುಖ್ಯ ಮಂತ್ರಿಗಳು) :

ಅ) ಹೌದು, 2004–05ನೇ ಸಾಲಿಗೆ ಮಾತ್ರ ರೂ.1.00 ಕೋಟಿ ಮೊತ್ತವನ್ನು ಕಾಯ್ದಿರಿಸಲಾಗಿದೆ.

ಆ) ಅನುಷ್ಟಾನಗೊಳಿಸಲಾಗಿದೆ.

ಇ) ಮೊದಲನೆ ಹಂತದಲ್ಲಿ ಬೆಂಗಳೂರು ಮಹಾನಗರ ಪಾಲಿಕೆಯ ಪೌರ ಕಾರ್ಮಿಕರನ್ನು ಆರೋಗ್ಯ ತಪಾಸಣೆಗೆ ಹಂತ ಹಂತವಾಗಿ ನಿಯೋಜಿಸಲಾಗುತ್ತಿದೆ. 2003–04ನೇ ಸಾಲಿನಲ್ಲಿ 1416 ಪೌರ ಕಾರ್ಮಿಕರು ಮತ್ತು 2004–05 ರಲ್ಲಿ(ದಿನಾಂಕ 31.12.2004 ರವರೆಗೆ) 2560 ಪೌರ ಕಾರ್ಮಿಕರು ಈ ಪ್ರಯೋಜನ ಪಡೆದುಕೊಂಡಿರುತ್ತಾರೆ.

ಈ) ಬೆಂಗಳೂರು ಮಹಾನಗರ ಪಾಲಿಕೆಯ ಶಾಂತಿನಗರ ಹೆರಿಗೆ ಆಸ್ಪತ್ರೆಯಲ್ಲಿ ಹೃದಯ ರೋಗಿಗಳಿಗೆ ಸಂಬಂಧಿಸಿದಂತೆ ಚಿಕಿತ್ಸಾ ಘಟಕವನ್ನು ಸ್ಥಾಪಿಸಲಾಗಿದೆ. ಪೌರ ಕಾರ್ಮಿಕರುಗಳ ರಕ್ತವನ್ನು ಹಾಗೂ ರಕ್ತದೊತ್ತಡವನ್ನು ಪರೀಕ್ಷೆ ಮಾಡಲಾಗುತ್ತದೆ. ಸಕ್ಕರೆ ಕಾಯಿಲೆ ಇದ್ದವರಿಗೆ ಔಷಧೋಪಚಾರವನ್ನು ನೀಡಲಾಗುತ್ತದೆ, ರಕ್ತದೊತ್ತಡ ಹೆಚ್ಚಿಗೆ ಇದ್ದವರಿಗೆ ಹೃದಯ ತಜ್ಞರಿಂದ ತಪಾಸಣೆ ಮಾಡಿಸಿ, ಔಷಧೋಪಚಾರ ನೀಡಲಾಗುತ್ತಿದೆ. ಹೃದಯ ರೋಗಕ್ಕೆ ಸಂಬಂಧಿಸಿದಂತೆ ಹೆಚ್ಚಿನ ತಪಾಸಣೆಗಳು ಬೇಕಾಗಿದ್ದಲ್ಲಿ, ಅಂತಹ ಪೌರ ಕಾರ್ಮಿಕರುಗಳನ್ನು ಜಯದೇವ ಹೃದ್ರೋಗ ಸಂಸ್ಥೆಗೆ ಹೆಚ್ಚಿನ ತಪಾಸಣೆ ಮಾಡಿಸಿ ಔಷಧೋಪಚಾರ ನೀಡಲಾಗುತ್ತಿದೆ. ಹೃದಯ ರೋಗಕ್ಕೆ ಸಂಬಂಧಿಸಿದಂತೆ ಹೆಚ್ಚಿನ ತಪಾಸಣೆಗಳು ಬೇಕಾಗಿದ್ದಲ್ಲಿ, ಅಂತಹ ಪೌರ ಕಾರ್ಮಿಕರುಗಳನ್ನು ಜಯದೇವ ಹೃದ್ರೋಗ ಸಂಸ್ಥೆಗೆ ಹೆಚ್ಚಿನ ತಪಾಸಣೆಗೆ ಹಾಗೂ ಔಷಧೋಪಚಾರಕ್ಕಾಗಿ ಕಳುಹಿಸಲಾಗುತ್ತದೆ. ಹೆಚ್ಚಿನ ತಪಾಸಣೆಯ ಔಷಧೋಪಚಾರ ಹಾಗೂ ಪರೀಕ್ಷೆಯ ವೆಚ್ಚವನ್ನು ಮಹಾನಗರ ಪಾಲಿಕೆಯಿಂದ ಭರಿಸಲಾಗುತ್ತದೆ. ಸದರಿ ರೋಗಿಗಳನ್ನು ಅನುಸರಣೆ (Follow-up) ಮಾಡಲಾಗುತ್ತದೆ.

ಉ) ವಾರಕ್ಕೆ ನಾಲ್ಕು ಬಾರಿ ತಪಾಸಣಾ ಶಿಬಿರಗಳನ್ನು ನಡೆಸಲಾಗುತ್ತಿದೆ. ಕಾರ್ಮಿಕರ ಕೆಲಸದ ಸ್ಥಳದಿಂದ ತಪಾಸಣಾ ಕೇಂದ್ರಕ್ಕೆ ಬರಲು ಮತ್ತು ಹಿಂತಿರುಗಲು ವಾಹನ ಸೌಲಭ್ಯವನ್ನು ಏರ್ಪಡಿಸಲಾಗಿದೆ. ಹಾಗೂ ಊಟದ ವ್ಯವಸ್ಥೆಯನ್ನು ಮಾಡಲಾಗಿದೆ. ಹೆಚ್ಚಿನ ತಪಾಸಣೆ ಹಾಗೂ ಔಷಧೋಪಚಾರಕ್ಕಾಗಿ ಜಯದೇವ ಹೃದ್ರೋಗ ಸಂಸ್ಥೆಗೆ ಹೋಗಿ ಬರಲು ಸಹ ವಾಹನದ ವ್ಯವಸ್ಥೆ ಮಾಡಲಾಗಿದೆ.

995(353) ಶ್ರೀ ಓಲೇಕಾರ್ ನೆಹರು ಚನ್ನಬಸಪ್ಪ(ಬ್ಯಾಡಗಿ) : ಮಾನ್ಯ ಮುಖ್ಯ ಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬ್ಯಾಡಗಿ ತಾಲ್ಲೂಕಿನಲ್ಲಿ ಒಳನಾಡು ಮೀನುಗಾರಿಕೆಗಾಗಿ ಗುರುತಿಸಲಾದ ಕೆರೆಗಳು ಯಾವುವು(ವಿವರ ನೀಡುವುದು);

ಆ) ಈ ತಾಲ್ಲೂಕಿನ ಅಂಗರಗಟ್ಟಿಕೆರೆ, ಕಾಗಿನೆಲೆಕೆರೆ, ಅಸುಂಡಿಕೆರೆಗಳಲ್ಲಿ ಮೀನುಗಾರಿಕಾ ವ್ಯವಸಾಯಕ್ಕೆ ಪ್ರೋತ್ಸಾಹಿಸುವ ಕುರಿತು ಸರ್ಕಾರ ಕ್ರಮ ಕೈಗೊಳ್ಳುವುದೇ;

ಇ) ಒಳನಾಡು ಮೀನುಗಾರರಿಗೆ ಸರ್ಕಾರದವರು ಒದಗಿಸಿಕೊಡುವ ಸೌಲಭ್ಯಗಳು ಏನು (ವಿವರ ನೀಡುವುದು) ?

ಶ್ರೀ ಧರ್ಮಸಿಂಗ್(ಮುಖ್ಯ ಮಂತ್ರಿಗಳು):

ಅ) ಬ್ಯಾಡಗಿ ತಾಲ್ಲೂಕಿನಲ್ಲಿ ಈ ಕೆಳಗಿನ ಕೆರೆಗಳನ್ನು ಒಳನಾಡು ಮೀನುಗಾರಿಕೆಗಾಗಿ ಉಪಯುಕ್ತ ಕೆರೆಗಳೆಂದು ಗುರುತಿಸಲಾಗಿದೆ.

1. ಕೆರೆವಡಿಕೆರೆ 2. ಶಿಡೆನೂರ ಕೆರೆ 3. ಬುಡವನಹಳ್ಳಿ ಕೆರೆ 4. ಚಿಕ್ಕಬಾಸೂರ ಕೆರೆ 5. ಚಿಕ್ಕಹಳ್ಳಿಕೆರೆ 6. ಚಿಕ್ಕಣಜಿಕೆರೆ 7. ಹಿರೇಹಳ್ಳಿಕೆರೆ 8. ಕಾಗಿನಲ್ಲಿ ಕೆರೆ 9. ಕುಮ್ಮಾರ ಕೆರೆ 10. ತಡಸ ಕೆರೆ 11. ಕೆಂಗೊಂಡ ಕೆರೆ 12. ಅಂಗಾರಗಟ್ಟಿ ಕೆರೆ 13. ತಡಸ ಕೆರೆ(ದೊಡ್ಡ) 14. ಅಸುಂಡಿ ಕೆರೆ.

ಆ) ಹಿಂಗಾರಗಟ್ಟಿಕೆರೆಗೆ ಸಾಕಷ್ಟು ನೀರು ಬಾರದ ಕಾರಣ ಕೆರೆಯನ್ನು ಗುತ್ತಿಗೆಗೆ ಪಡೆಯಲು ಯರೂ ಮುಂದೆ ಬಂದಿರುವುದಿಲ್ಲ.

ಕಾಗಿನೆಲ್ಲಿ ಕೆರೆಯನ್ನು ಕಾಳಿದಾಸ ಮೀನುಗಾರರ ಸಹಕಾರ ಸಂಘ, ಕಾಗಿನಲ್ಲಿ ಇವರಿಗೆ ಗುತ್ತಿಗೆಗೆ ನೀಡಿದ್ದು ಸದರಿ ಸಂಘದವರು ಮೀನುಮರಿ ಬಿತ್ತನೆ ಮಾಡಿ ಮೀನು ಕೃಷಿ ಕೈಗೊಂಡಿರುತ್ತಾರೆ.

ಅಸುಂಡಿಕೆರೆಯನ್ನು ಗ್ರಾಮ ಪಂಚಾಯಿತಿ ಅಸುಂಡಿ ಇವರಿಗೆ ಗುತ್ತಿಗೆಗೆ ನೀಡಿದ್ದು ಗುತ್ತಿಗೆದಾರರು ಕೆರೆಗೆ ಮೀನು ಮರಿ ಬಿತ್ತನೆ ಮಾಡಿ ಮೀನು ಕೃಷಿ ಕೈಗೊಂಡಿರುತ್ತಾರೆ.

ಇ) 40 ಹೆಕ್ಟೇರ್‌ಗಳಿಂದ ಹೆಚ್ಚಿಗೆ ಅಚ್ಚುಕಟ್ಟುವುಳ್ಳ ಸರ್ಕಾರಿ ಸ್ವಾಮ್ಯದ ಎಲ್ಲಾ ಒಳನಾಡು ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ಇಲಾಖಾ ಗುತ್ತಿಗೆ ನಿಯಮಾವಳಿಗಳ ಪ್ರಕಾರ ಆದ್ಯತೆ ಮೇಲೆ ಸಂಘ/ಸಂಸ್ಥೆಗಳಿಗೆ ಗುತ್ತಿಗೆಗೆ ನೀಡಲಾಗುವುದು. ಎಲ್ಲೆಲ್ಲಿ ಕೆರೆಗಳ ಮೀನು ಪಾಶುವಾರು ಹಕ್ಕನ್ನು ಗುತ್ತಿಗೆಯ ಮೇಲೆ ಪಡೆಯಲು ಅರ್ಹ ಸಂಘ/ಸಂಸ್ಥೆಗಳು ಮುಂದೆ ಬರುವುದಿಲ್ಲವೋ, ಅಂತಹ ಕೆರೆಗಳನ್ನು ಟೆಂಡರ್/ಹರಾಜು ಮೂಲಕ ಸಾರ್ವಜನಿಕವಾಗಿ ವಿಲೇ ಮಾಡಲಾಗುವುದು. ಕೆರೆಗಳ ಗುತ್ತಿಗೆ/ಟೆಂಡರ್‌ದಾರರ ವೆಚ್ಚದಲ್ಲಿ ಗುತ್ತಿಗೆಗೆ ಪಡೆದ ಕೆರೆಗಳಿಗೆ ಇಲಾಖೆಯ ಮೀನು ಮರಿ ಉತ್ಪಾದನಾ/ಪಾಲನಾ ಕೇಂದ್ರಗಳಿಂದ ಉತ್ತಮ ತಳಿಯ ಮೀನು ಮರಿಗಳನ್ನು ಸರಬರಾಜು ಮಾಡಲಾಗುವುದು.

ಸರ್ಕಾರದಿಂದ ಒಳನಾಡು ಮೀನುಗಾರರಿಗೆ ಈ ಕೆಳಕಂಡ ಸೌಲಭ್ಯಗಳನ್ನು ನೀಡಲಾಗುತ್ತಿದೆ.

1. ಒಂದು ಎಕರೆ ಸ್ವಂತ ಜಮೀನಿನಲ್ಲಿ ಮೀನು ಕೊಳಗಳನ್ನು ನಿರ್ಮಾಣ ಮಾಡಿ ಮೀನುಗಾರಿಕೆಯನ್ನು ತೆಗೆಗುಕೊಳ್ಳಲು ವ್ಯಕ್ತಿಗಳಿಗೆ ರೂ.10,000–00ಗಳ ಸಹಾಯ ಧನವನ್ನು ಮಂಜೂರು ಮಾಡಲಾಗುವುದು.

2. ರಾಜ್ಯದಲ್ಲಿರುವ ಅಚ್ಚುಕಟ್ಟು ಪ್ರಾಧಿಕಾರದ ಜೌಗು ಮತ್ತು ಚೌಳು ಪ್ರದೇಶಗಳಲ್ಲಿನ ಒಂದು ಎಕರೆ ಪ್ರದೇಶದಲ್ಲಿ ಮೀನು ಕೊಳ ನಿರ್ಮಿಸಲು ಒಟ್ಟು ಘಟಕ ವೆಚ್ಚ ರೂ. 1.25 ಲಕ್ಷಗಳ ಬಂಡವಾಳದ ಮೇಲೆ ಶೇ.25ರಷ್ಟು ಗರಿಷ್ಟ ರೂ.30,000–00ಗಳ ಸಹಾಯಧನ ನೀಡಲಾಗುವುದು.

3. ಮೀನುಗಾರರು ಮೀನನ್ನು ತಾಜಾ ಹಾಗೂ ಆರೋಗ್ಯಕರ ಸ್ಥಿತಿಯಲ್ಲಿ ಮಾರಾಟ ಮಾಡಲು ಅನುಕೂಲವಾಗುವಂತೆ ಶಾಖ ನಿರೋಧಕ ಪೆಟ್ಟಿಗೆ ಮತ್ತು ಸೈಕಲ್ಲುಗಳನ್ನು ಖರೀದಿಸುವ ಘಟಕ ವೆಚ್ಚ ಒಟ್ಟು ರೂ.2500ಗಳ ಮೇಲೆ ಪ್ರತಿಶತ 50 ರಂತೆ ಗರಿಷ್ಟ ರೂ.1250ರ ಸಹಾಯಧನವನ್ನು ನೀಡಲಾಗುವುದು.

4. ಇಳಿದಾಣ ಕೇಂದ್ರಗಳಿಂದ ತಾಜಾ ಮೀನನ್ನು ಆರೋಗ್ಯಕರ ರೀತಿಯಲ್ಲಿ ಮಾರಾಟ ಸ್ಥಳಗಳಿಗೆ ತ್ವರಿತ ಸಾಗಾಣಿಕೆಗಾಗಿ ಮೀನುಗಾರರಿಗೆ ವಾಹನವನ್ನು ಖರೀದಿಸಲು ಆರ್ಥಿಕ ನೆರವನ್ನು ನೀಡುವ ಉದ್ದೇಶದಿಂದ "ಮತ್ಸ್ಯವಾಹಿನಿ" ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ. ಈ ಯೋಜನೆಯಲ್ಲಿ ತ್ರಿಚಕ್ರ ಟೆಂಪೋರಿಕ್ಷಾವನ್ನು ಖರೀದಿಸಲು ರೂ. 25.000ಗಳ ಸಹಾಯಧನವನ್ನು ಮೂರು ಅಥವಾ ನಾಲ್ಕು ಫಲಾನುಭವಿಗಳ ಒಂದು ಗುಂಪಿಗೆ ನೀಡಲಾಗುವುದು.

5. ಮೀನುಗಾರರ ಸಹಕಾರ ಸಂಘಗಳ ಸದಸ್ಯರಿಗೆ ಮೀನುಗಾರಿಕೆ ಉಪಕರಣಗಳನ್ನು ಖರೀದಿಸಲು ಸಾಲ ಮತ್ತು ಸಹಾಯಧನವನ್ನು 2:1ರ ಅನುಪಾತದಲ್ಲಿ ನೀಡಲಾಗುತ್ತದೆ ಮತ್ತು ಆರ್ಥಿಕ ಸಂಸ್ಥೆಗಳಿಂದ ಸಾಲ ಪಡೆದುಕೊಳ್ಳಲು ಒಳನಾಡು ಮೀನುಗಾರರಿಗೆ ಸಹಾಯಧನವನ್ನು ನೀಡಲಾಗುತ್ತದೆ. (ಗರಿಷ್ಠ) ತಲಾ 3000–00 ಮತ್ತು ಮೀನುಗಾರರ ಗುಂಪಿಗೆ ರೂ 5000–00.

6. "ಮತ್ಸಾಶ್ರಯ" ಯೋಜನೆಯಡಿ ನಿರ್ವಸತಿ ಮೀನುಗಾರರಿಗೆ ಉಚಿತವಾಗಿ ವಸತಿ ಸೌಲಭ್ಯ ಕಲ್ಪಿಸಲಾಗಿದೆ. ಈ ಯೋಜನೆ ಅಡಿ ಪ್ರತಿ ಫಲಾನುಭವಿಗೆ ರೂ. 30,000 ಮೀರದಂತೆ ಮನೆಯನ್ನು ಶೇ.100ರಷ್ಟು ನೆರವಿನೊಂದಿಗೆ ನಿರ್ಮಾಣ ಮಾಡಿ ಕೊಡಲಾಗುವುದು.

999(1400) ಶ್ರೀ ಪದ್ಮನಾಭ ಕೊಟ್ಟಾರಿ.ಕೆ(ವಿಟ್ಲ) : ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬೆಂಗಳೂರು ನಗರಾಭಿವೃದ್ಧಿ ಪ್ರಾಧಿಕಾರವು ಪ್ರಾರಂಭವಾದಾಗಿನಿಂದ ಈವರೆಗೆ ಎಷ್ಟು ಬಡಾವಣೆಗಳನ್ನು ರಚಿಸಿ ಎಷ್ಟು ಜನರಿಗೆ ನಿವೇಶನವನ್ನು ಹಂಚಿದೆ, ಇದಕ್ಕಾಗಿ ಸ್ವಾಧೀನ ಪಡಿಸಿಕೊಂಡ ಭೂಮಿಯ ವಿಸ್ತೀರ್ಣ ಎಷ್ಟು ;

ಆ) ನೂತವವಾಗಿ ರಚಿಸಲು ಉದ್ದೇಶಿಸಿರುವ ಬಡಾವಣೆಗಳ ವಿವರಗಳೇನು;

ಇ) ನವಮಂಗಳೂರು ಪ್ರದೇಶದಲ್ಲಿ ನಿರ್ಮಿಸಲು ಉದ್ದೇಶಿಸಿರುವ ಟ್ರಕ್ ಟರ್ಮಿನಲ್ ಯೋಜನೆ ಯಾವ ಹಂತದಲ್ಲಿ ಇದೆ?

ಶ್ರೀ ಧರ್ಮಸಿಂಗ್(ಮುಖ್ಯ ಮಂತ್ರಿಗಳು) :

ಅ) ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರವು ಪ್ರಾರಂಭವಾದಾಗಿನಿಂದ ಈವರೆಗೆ 11 ವಸತಿ ಬಡಾವಣೆಗಳನ್ನು ನಿರ್ಮಿಸಲಾಗಿದೆ. ಒಟ್ಟು 887 ನಿವೇಶನಗಳನ್ನು ಹಂಚಲಾಗಿದೆ. ಇದಕ್ಕಾಗಿ ಒಟ್ಟು 71.72 ಎಕ್ರೆ ಜಮೀನುಗಳನ್ನು ಭೂ ಸ್ವಾಧೀನಡಿಸಿಕೊಳ್ಳಲಾಗಿದೆ.

ಆ) 1. ಮಂಗಳೂರು ತಾಲ್ಲೂಕು ಕುಡುಪು ಗ್ರಾಮದ ಸ.ನಂ.19/1 ಮತ್ತು ಇತರ ಸ.ನಂ.ಗಳಲ್ಲಿ 36–37 ಎಕ್ರೆ ಜಮೀನನ್ನು ಈಗಾಗಲೇ ಭೂ ಸ್ವಾಧೀನಗೊಳಿಸಲಾಗಿದೆ.

2. ಪದವು ಗ್ರಾಮದ ಸ.ನಂ.70/6ಎ ಮತ್ತು ಇತರ ಸ.ಸಂ.ಗಳಲ್ಲಿ ಒಟ್ಟು 14–49 1/2 ಎಕ್ರೆ ಜಮೀನನ್ನು ಭೂ ಸ್ವಾಧಿನಗೊಳಿಸಲಾಗಿದೆ.

ಇ) ಈ ಯೋಜನೆಗೆ ಸರ್ಕಾರ ಈಗಾಗಲೇ ಅನುಮೋದನೆ ನೀಡಿದೆ. ಸರ್ಕಾರ ವಿಧಿಸಿರುವಷರತ್ತಿಗನುಸಾರವಾಗಿ ಫಲಾನುಭವಿಗಳು ಶೇ.50 ರಷ್ಟುಹಣವನ್ನು ಮುಂಗಡವಾಗಿ ಪಾವತಿಸಬೇಕಾಗಿದ್ದು ಈ ಮೊಬಲಗನ್ನು ಠೇವಣಿಯಿಟ್ಟು ಕೂಡಲೇ ಯೋಜನೆಯನ್ನು ಪ್ರಾರಂಭಿಸಲಾಗುವುದು.

1000(1407) ಶ್ರೀ ಪದ್ಮನಾಭ ಕೊಟ್ಟಾರಿ.ಕೆ(ವಿಟ್ಲ) : ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ವಿಟ್ಲ ಪಟ್ಟಣ ಪ್ರದೇಶದಲ್ಲಿ ಜನ ಸಂಚಾರಕ್ಕೆ ಉಪಯೋಗಿಸುವ ಬಸ್ಸುಗಳ ಸಂಖ್ಯೆಜಾಸ್ತಿ ಇದ್ದು ವ್ಯವಸ್ಥಿತವಾದ ಬಸ್ ನಿಲ್ದಾಣ ಇಲ್ಲದೇ ಇರುವುದನ್ನು ಸರಕಾರ ಗಂಭೀರವಾಗಿ ಪರಿಗಣಿಸಿಲ್ಲವೇ, ಪರಿಗಣಿಸಿದ್ದಲ್ಲಿ, ಆ ಕುರಿತು ಜರುಗಿಸಿದ ಕ್ರಮಗಳೇನು;

ಆ) ವ್ಯವಸ್ಥಿತ ಬಸ್ ನಿಲ್ದಾಣವನ್ನು ತ್ವರಿತವಾಗಿ ನಿರ್ಮಿಸಿಕೊಡಲು ಸಕಾಲಿಕ ಕ್ರಮವನ್ನು ಸರಕಾರ ಜರುಗಿಸುವುದೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು):

ಅ) ಪರಿಗಣಿಸಿದೆ.

ಬಸ್ ನಿಲ್ದಾಣ ನಿರ್ಮಿಸಲುಯೋಜನೆಯನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ 2005–06ನೇ ಸಾಲಿನ ಆಯವ್ಯಯದಲ್ಲಿ ಅಳವಡಿಸಲಾಗಿದೆ.

ಆ) ಹೌದು.

1003(2486) ಶ್ರೀ ಪಾಟೀಲ್ ಡಿ.ಆರ್(ಗದಗ್) : ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಅನಿಲ, ಪೆಟ್ರೋಲ್ ಹಾಗೂ ಡಿಸೇಲ್ ಬಳಸುವ ವಾಹನಗಳ ಸಂಖ್ಯೆಎಷ್ಟು?(ಪ್ರತ್ಯೇಕವಾಗಿ ಜಿಲ್ಲಾವಾರು ಮಾಹಿತಿ ನೀಡುವುದು)

ಆ) ಕಳೆದ ಮೂರು ವರ್ಷಗಳಲ್ಲಿ ಹೊಸದಾಗಿ ರಸ್ತೆಗೆ ಬಂದ ವಿವಿಧ ವಾಹನಗಳ ಸಂಖ್ಯೆ ಎಷ್ಟು; ಅವು ರಾಜ್ಯದ ಬೊಕ್ಕಸಕ್ಕೆ ನೀಡಿದ ತೆರಿಗೆ ಎಷ್ಟು (ಜಿಲ್ಲಾವಾರು ವಿವರ ನೀಡುವುದು)?

ಇ) ಸೈಕಲ್ ಹೊರತುಪಡಿಸಿ ರಾಜ್ಯದಲ್ಲಿರುವ ದ್ವಿಚಕ್ರ ವಾಹನಗಳು ಹಾಗೂ ತ್ರಿಚಕ್ರ ವಾಹನಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ಮಾಹಿತಿ ನೀಡುವುದು)

ಈ) ಒಂದು ಪೆಟ್ರೋಲ್ ಬಳಕೆಯ ವಾಹನದಿಂದ ವಾಯುಮಾಲಿನ್ಯ ಕಾರಣವಾಗುವ ಪ್ರಮಾಣವೆಷ್ಟು ?

ಉ) ವಾಯುಮಾಲಿನ್ಯ ಕಡಿಮೆ ಮಾಡಲು ಸಾರಿಗೆ ಇಲಾಖೆಯು ಕೈಗೊಂಡಿರುವ ಕ್ರಮಗಳೇನು?

ಊ) ರಾಜ್ಯದಲ್ಲಿರುವ ಸರ್ಕಾರಿ ಒಡೆತನದ ಹಾಗೂ ನಿಗಮ ಮಂಡಳಿಗಳ ವಾಹನಗಳ ಸಂಖ್ಯೆ ಎಷ್ಟು ?

ಋ) ವಾಹನಕ್ಕೆ ಅಧಿಕ ವರ್ಷಗಳಾದಂತೆ ಅದರಿಂದ ಯಾವ ಪ್ರಮಾಣದಲ್ಲಿ ವಾಯುಮಾಲಿನ್ಯ ಹೆಚ್ಚಳವಾಗುವ ಪ್ರಮಾಣವೆಷ್ಟು?

ೠ) ವಾಯುಮಾಲಿನ್ಯ ತಡೆಗಟ್ಟಲು ಹಳೇ ವಾಹನಗಳ ಬಳಕೆಯನ್ನು ನಿಲ್ಲಿಸಲು ಸರ್ಕಾರವು ಕ್ರಮ ಕೈಗೊಳುವುದೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು):

ಅ) ಎಲ್.ಪಿ.ಜಿ ಬಳಸುವ ವಾಹನಗಳು – 14,406

ಪೆಟ್ರೋಲ್ ಬಳಸುವ ವಾಹನಗಳು – 40,80,388

ಡಿಸೇಲ್ ಬಳಸುವ ವಾಹನಗಳು – 11,94,917

ಒಟ್ಟು – 52,89,711

ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-1 ರಲ್ಲಿ ನೀಡಿದೆ.

ಆ) ವಾಹನಗಳು – 11,50,483

ತೆರಿಗೆ ರೂ.714.89 ಕೋಟಿ

ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-2ರಲ್ಲಿ ನೀಡಿದೆ.

ಇ) ದ್ವಿಚಕ್ರ ವಾಹನಗಳು – 38,93,788

ತ್ರಿಚಕ್ರ ವಾಹನಗಳು – 2,01,006

ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-3ರಲ್ಲಿ ನೀಡಿದೆ.

ಈ) ಈ ಕೆಳಗೆ ಕೋಷ್ಟಕದಲ್ಲಿ ಹೇಳಿದ ಪ್ರಮಾಣವನ್ನು ಮೀರಿದ ಪ್ರಮಾಣವು ವಾಯುಮಾಲಿನ್ಯಕ್ಕೆ ಕಾರಣವಾಗುತ್ತದೆ.

ಪೆಟ್ರೋಲ್/ ಎಲ್.ಪಿ.ಜಿ. ಚಾಲಿತ ವಾಹನಗಳು

ವಾಹನ ಮಾದರಿ	CO%	HC in ppm
2&3 Wheelers (2/4-stroke) (Vehicles manufactured on and before 31.3.2000)	4.5	9000
2 & 3 Wheelers(2-stroke) (Vehicles manufactured after 31.3.2000)	3.5	6000
2 & 3 Wheelers(4-stroke) (Vehicles manufactured after 31.3.2000)	3.5	4500
Bharat Stage-II compliant 4-wheeler	0.5	750
4-Wheelers other than Bharat stage-II complaint	3.0	1500

ಉ) ವಾಯುಮಾಲಿನ್ಯ ದುಷ್ಪರಿಣಾಮಗಳ ಬಗ್ಗೆ ಜಾಗೃತಿ ಮೂಡಿಸುವುದು; ವಾಹನಗಳ ತಪಾಸಣೆ ಕೈಗೊಂಡು ವಾಯು ಮಾಲಿನ್ಯದ ಪ್ರಮಾಣವನ್ನು ತಿಳಿದು ಕ್ರಮ ಕೈಗೊಳ್ಳುವುದು; ಪೆಟ್ರೋಲ್ ಬದಲು ಪರ್ಯಾಯ ಇಂಧನವನ್ನಾಗಿ ಎಲ್.ಪಿ.ಜಿಯನ್ನು ಬಳಸಲು ಹಾಗೂ ಬ್ಯಾಟರಿ ಚಾಲಿತ ವಾಹನಗಳ ಬಳಕೆಯನ್ನು ಉತ್ತೇಜಿಸುವುದು; ವಾಯುಮಾಲಿನ್ಯ ಉಂಟು ಮಾಡುವ ವಾಹನಗಳನ್ನು ಗುರುತಿಸಿ ಪ್ರಕರಣ ದಾಖಲಿಸಿ ದಂಡ ಹಾಕುವುದು; ದ್ವಿಇಂಧನ ಎಲ್.ಪಿ.ಜಿ. ಹೊಂದಿರುವ ಆಟೋ ರಿಕ್ಷಾಗಳಿಗೆ ಮಾತ್ರ ಹೊಸ ರಹದಾರಿಯನ್ನು ನೀಡುವುದು ಇತ್ಯಾದಿ.

ಊ) ಸರ್ಕಾರಿ ವಾಹನಗಳು – 22,020

ನಿಗಮ ಮತ್ತು ಮಂಡಳಿಗಳ ವಾಹನಗಳು – 14,190

ಋ) ನಿರ್ಧರಿಸಿಲ್ಲ.

ೠ) ಹೌದು.

ಅನುಬಂಧ–1

ಕರ್ನಾಟಕ ರಾಜ್ಯದಲ್ಲಿ ನೋಂದಣಿಯಾಗಿ ಬಳಕೆಯಲ್ಲಿರುವ ಜಿಲ್ಲಾವಾರು ವಾಹನಗಳ ತಃಖ್ತೆ

ಕ್ರ. ಸಂ.	ಜಿಲ್ಲೆಯ ಹೆಸರು	ಎಲ್.ಪಿ.ಜಿ.	ಪೆಟ್ರೋಲ್	ಡೀಸೆಲ್	ಒಟ್ಟು ವಾಹನಗಳು
1	ಬೆಂಗಳೂರು(ನಗರ)	14368	1581320	517746	2113434
2	ಬೆಂಗಳೂರು(ಗ್ರಾಮಾಂತರ)		65648	20174	85822
3	ಕೋಲಾರ		108762	290639	139401
4	ತುಮಕೂರು		131435	29810	161245
5	ಚಿತ್ರದುರ್ಗ		53665	15192	68857
6	ಶಿವಮೊಗ್ಗ	18	134712	36342	171072
7	ಉಡುಪಿ		75584	24273	99857
8	ಚಿಕ್ಕಮಗಳೂರು		53304	27193	80497
9	ದಕ್ಷಿಣ ಕನ್ನಡ		203560	23583	227163
10	ದಾವಣಗೆರೆ		113596	34538	148134
11	ಬೆಳಗಾವಿ	17	263947	81706	345670
12	ಬಿಜಾಪುರ		62062	25715	87777
13	ಧಾರವಾಡ		145842	30113	175955
14	ಉತ್ತರ ಕನ್ನಡ		92388	16524	108912
15	ಗದಗ್		32735	16475	49210
16	ಹಾವೇರಿ		50605	19367	69972
17	ಬಾಗಲಕೋಟೆ		64751	26189	90940

18	ಬಳ್ಳಾರಿ		112934	31432	144366
19	ಬೀದರ್		45242	15021	60263
20	ರಾಯಚೂರು		56167	19383	75550
21	ಗುಲ್ಬರ್ಗ		109265	33407	142672
22	ಕೊಪ್ಪಳ		34924	12181	47105
23	ಮೈಸೂರು	3	274364	49609	323976
24	ಕೊಡಗು		34327	18203	52530
25	ಮಂಡ್ಯ		67531	14387	81918
26	ಹಾಸನ		85526	20523	106049
27	ಚಾಮರಾಜನಗರ		25082	6282	31364
	ಒಟ್ಟು	**14406**	**4080388**	**1194917**	**5289711**

ಅನುಭಂದ-3

ಕರ್ನಾಟಕ ರಾಜ್ಯದಲ್ಲಿ ಬೈಸಿಕಲ್ ಹೊರತುಪಡಿಸಿ ನೋಂದಣಿಯಾಗಿ ಬಳಕೆಯಲ್ಲಿರುವ ದ್ವಿಚಕ್ರ ತ್ರಿಚಕ್ರ ವಾಹನಗಳ ಜಿಲ್ಲಾವಾರು ತಃಖ್ತೆ

ಕ್ರ. ಸಂ.	ಜಿಲ್ಲೆಯ ಹೆಸರು	ದ್ವಿ-ಚಕ್ರವಾಹನಗಳು	ಆಟೋರಿಕ್ಷಾಗಳು
1	ಬೆಂಗಳೂರು(ನಗರ)	1521085	74603
2	ಬೆಂಗಳೂರು(ಗ್ರಾಮಾಂತರ)	60122	5526
3	ಕೋಲಾರ	105067	4695
4	ತುಮಕೂರು	124559	6876
5	ಚಿತ್ರದುರ್ಗ	50087	3578
6	ಶಿವಮೊಗ್ಗ	129828	4902
7	ಉಡುಪಿ	68666	6918
8	ಚಿಕ್ಕಮಗಳೂರು	50342	3052
9	ದಕ್ಷಿಣ ಕನ್ನಡ	183891	19689
10	ದಾವಣಗೆರೆ	108396	5200
11	ಬೆಳಗಾವಿ	256684	7280
12	ಬಿಜಾಪುರ	59328	2734
13	ಧಾರವಾಡ	136466	9376
14	ಉತ್ತರ ಕನ್ನಡ	88257	4131
15	ಗದಗ್	32348	387

16	ಹಾವೇರಿ	48648	1957
17	ಬಾಗಲಕೋಟೆ	63745	1006
18	ಬಳ್ಳಾರಿ	109986	2948
19	ಬೀದರ್	42854	2388
20	ರಾಯಚೂರು	54927	1240
21	ಗುಲ್ಬರ್ಗ	102413	6852
22	ಕೊಪ್ಪಳ	34432	492
23	ಮೈಸೂರು	260798	13569
24	ಕೊಡಗು	31332	2995
25	ಮಂಡ್ಯ	64777	2754
26	ಹಾಸನ	80504	5022
27	ಚಾಮರಾಜನಗರ	24246	836
	ಒಟ್ಟು	**3893788**	**201006**

ಅನುಬಂಧ-2

ಕರ್ನಾಟಕ ರಾಜ್ಯದಲ್ಲಿ 2002, 2003 ಮತ್ತು 2004 ರಲ್ಲಿ ನೋಂದಣಿಯಾದ ಜಿಲ್ಲಾವಾರು ವಾಹನಗಳ ಸಂಖ್ಯೆ ಮತ್ತು ವಸೂಲಿಯಾದ ತೆರಿಗೆ ಮೊತ್ತದ ವಿವರಗಳನ್ನು ತೋರಿಸುವ ತಃಖ್ತೆ

ಕ್ರ. ಸಂ.	ಜಿಲ್ಲೆಯ ಹೆಸರು	ಮಲ್ಟಿ ಅಕ್ಸಲ್ ವಾಹನ	ಮಧ್ಯಮ ಮತ್ತು ಭಾರಿ ವಾಹನ	ಎಲ್.ಜಿ.ಪಿ			ಮಜಲು ವಾಹನ	ದ್ವಿ-ಚಕ್ರ ವಾಹನಗಳು		ಕಾರುಗಳು	ಮ್ಯಾಕ್ಸಿ ಕ್ಯಾಬ್	ಇತರೆ	ಒಟ್ಟು	ವಸೂಲಿ ಮಾಡಿದ ತೆರಿಗೆ (ರೂ.ಕೋಟಿಗಳಲ್ಲಿ)
				ತ್ರಿಚಕ್ರ	4-ಚಕ್ರ	ಒಟ್ಟು		75CC ಮೇಲ್ಪಟ್ಟು	75CC ಒಳಗೆ					
1	ಬೆಂಗಳೂರು(ನಗರ)	3432	3830	4808	4150	16220	5612	308300	59622	106853	7430	7954	511991	423.87
2	ಬೆಂಗಳೂರು (ಗ್ರಾಮಾಂತರ)	505	861	995	700	3061	480	62864	12700	17429	1272	1442	99248	3.65
3	ತುಮಕೂರು	144	227	645	120	1136	115	26310	7812	1041	309	390	37113	12.21
4	ಕೋಲಾರ	105	199	223	543	1070	80	20712	3300	658	104	760	26684	3.82
5	ಮೈಸೂರು	67	362	1420	470	2319	58	53280	1168	4320	126	606	61877	24.21
6	ಚಾಮರಾಜನಗರ	4	18	270	57	349	48	4995	1202	68	12	45	6719	2.85
7	ಮಂಡ್ಯ	14	189	817	113	1133	15	12489	386	595	33	19	14670	5.19
8	ಮಡಿಕೇರಿ	54	233	144	114	545	13	1957	285	524	108	14	3446	7.42
9	ಹಾಸನ	0	514	829	105	1448	197	10573	4327	836	86	30	17497	6.77
10	ಶಿವಮೊಗ್ಗ	0	222	525	419	1166	45	16669	3680	1658	66	105	23389	7.88
11	ಚಿತ್ರದುರ್ಗ	0	242	716	204	1162	53	12134	3	571	106	178	14207	8.54
12	ದಾವಣಗೆರೆ	0	275	610	65	950	47	20416	14	824	30	76	22357	9.39
13	ಚಿಕ್ಕಮಗಳೂರು	0	231	641	271	1143	36	10509	39	484	110	108	12429	2.76
14	ಮಂಗಳೂರು	370	808	330	640	2148	1502	32588	4008	6074	163	30	46513	35.32
15	ಉಡುಪಿ	0	723	412	362	1502	423	13672	18	2722	159	43	18539	17.05
16	ಬೆಳಗಾವಿ	109	539	823	645	2116	179	37754	39	3592	251	402	44333	41.48

17	ಧಾರವಾಡ	523	520	612	284	1939	240	27382	26	3240	272	42	33141	25.78
18	ಗದಗ್	103	147	222	58	530	82	4510	1210	256	45	15	6648	2.29
19	ಹಾವೇರಿ	0	151	207	0	358	10	11842	552	333	25	17	13137	5.31
20	ಬಿಜಾಪುರ	133	248	1230	166	1777	30	13742	66	720	28	63	16426	3
21	ಬಾಗಲಕೋಟೆ	65	163	892	60	1180	26	15274	5	608	155	21	17269	9.46
22	ಕಾರವಾರ	0	89	166	143	398	51	2746	1072	669	70	16	5022	11.96
23	ಗುಲ್ಬರ್ಗ	107	66	982	682	1837	97	19785	115	842	227	759	23662	8.54
24	ಬಳ್ಳಾರಿ	588	629	856	188	2261	72	22665	6503	1820	429	548	34298	18.44
25	ರಾಯಚೂರು	261	136	622	26	1045	106	11494	3171	606	158	127	16707	8.53
26	ಕೊಪ್ಪಳ	0	125	351	92	568	161	7878	2105	352	222	40	11326	3.81
27	ಬೀದರ್	39	86	362	24	511	211	9642	882	503	58	28	11835	5.36
	ಒಟ್ಟು	6623	11838	20710	10701	49872	9989	792182	114310	158198	12054	10878	1150483	714.89

1004(1487) ಶ್ರೀ ಪಾಟೀಲ್ ಡಿ.ಆರ್(ಗದಗ್) : ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಕಳೆದ ಮೂರು ವರ್ಷಗಳಲ್ಲಿ ರಾಜ್ಯ ಸರ್ಕಾರ ನೀಡಿರುವ ಪ್ರಶಸ್ತಿಗಳ ಸಂಖ್ಯೆ ಎಷ್ಟು;

ಆ) ನೀಡಿದ್ದಲ್ಲಿ ಕಂದಾಯ ವಿಭಾಗವಾರು ವಿತರಣೆಯಾಗಿರುವುದು ಹೇಗೆ :

ಇ) ಹಾಗೂ ಇದರಲ್ಲಿ ಪ್ರದೇಶವಾರು ತಾರತಮ್ಯವಾಗಿರುವುದೇ;

ಈ) ಹಾಗಿದ್ದಲ್ಲಿ, ತಾರತಮ್ಯ ನಿಲ್ಲಿಸಲು ಸರ್ಕಾರದ ಕ್ರಮಗಳೇನು;

ಉ) ರಾಜ್ಯದಲ್ಲಿ ಹೊಸ ಸರಕಾರ ಬಂದ ಮೇಲೆ ನೀಡಿರುವ ಪ್ರಶಸ್ತಿಗಳಲ್ಲಿ ಸಹ ತಾರತಮ್ಯವು ಮುಂದುವರೆದಿದೆಯೇ (ವಿಭಾಗವಾರು ವಿವರ ನೀಡುವುದು)?

ಶ್ರೀ ಧರ್ಮಸಿಂಗ್(ಮುಖ್ಯ ಮಂತ್ರಿಗಳು) :

ಅ) ರಾಜ್ಯೋತ್ಸವ ಪ್ರಶಸ್ತಿ – 228

ಆ) ವಿಶೇಷ ಪ್ರಶಸ್ತಿ – 33

ಆ) ವಿಶೇಷ ಪ್ರಶಸ್ತಿಗಳನ್ನು ಆಯ್ಕೆ ಸಮಿತಿಗಳು ಆಯ್ಕೆ ಮಾಡುತ್ತೇವೆ ಹಾಗೂ ರಾಜ್ಯೋತ್ಸವ ಪ್ರಶಸ್ತಿಯನ್ನು ಸಲಹಾ ಸಮಿತಿಯು ಶಿಫಾರಸ್ಸು ಮಾಡಿದಂತೆ ನೀಡುವ ಪದ್ಧತಿ ಅನುಸರಿಸಲಾಗುತ್ತದೆ. ಕಂದಾಯ ವಿಭಾಗವಾರುವಿನಂತೆ ಪ್ರಶಸ್ತಿಗಳನ್ನು ನೀಡುವ ವ್ಯವಸ್ಥೆ ಇರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಉ) ಮೇಲೆ ಹೇಳಿದ ಕಾರಣಗಳಿಂದ ಅಂತಹ ಪ್ರಸಂಗ ಬರುವುದಿಲ್ಲ.

1005(792) ಶ್ರೀ ಪಾಟೀಲ್ ಎಸ್.ಎಸ್.(ಮುಂಡರಗಿ) ಮಾನ್ಯ ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಗದಗ ಜಿಲ್ಲೆ ಮುಂಡರಗಿ ಪಟ್ಟಣಕ್ಕೆ ಐ.ಡಿ.ಎಸ್.ಎಂ.ಟಿ ಯೋಜನೆಯಂತೆ ರೂ.1.00 ಕೋಟಿಗಳಲ್ಲಿ ರೂ.50.00ಲಕ್ಷಗಳು ಮಂಜೂರು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಉಳಿದ ರೂ.50.00 ಲಕ್ಷಗಳನ್ನು ಮಂಜೂರು ಮಾಡಲು ಕ್ರಮಗಳೇನು?

ಶ್ರೀ ಎಸ್.ಆರ್.ಮೋರೆ (ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ ಸಚಿವರು) :

ಅ) ಮುಂಡರಗಿ ಪಟ್ಟಣಕ್ಕೆ ಐ.ಡಿ.ಎಸ್.ಎಂ.ಟಿ ಯೋಜನೆಯಡಿ ರೂ.51.28 ಲಕ್ಷಗಳ ಯೋಜನಾ ವರದಿ ಕೇಂದ್ರ ಸರ್ಕಾರದಿಂದ ಮಂಜೂರಾಗಿರುತ್ತದೆ. ರೂ.48.72 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕಛೇರಿ ಕಟ್ಟಡವನ್ನು ನಿರ್ಮಾಣ ಮಾಡುವ ಪ್ರಸ್ತಾವನೆಯನ್ನು ಮಾರ್ಗಸೂಚಿಯನ್ವಯ ಅಸಾಧ್ಯವಾದುದರಿಂದ ಮಂಜೂರಾತಿ ನೀಡಿರುವುದಿಲ್ಲ.

ಆ) ಉಳಿದ ರೂ.48.72 ಲಕ್ಷ ಮಂಜೂರಾತಿಗಾಗಿ ಮುಂಡರಗಿ ಸ್ಥಳೀಯ ಸಂಸ್ಥೆಯು ಬೇರೆ ಕಾಮಗಾರಿಗೆ ಬದಲಾವಣೆ ಮಾಡಿ ಪರಿಸ್ಕೃತ ಪ್ರಸ್ತಾವನೆ ಕಳುಹಿಸಬೇಕಾಗಿರುತ್ತದೆ.

1008(795) ಶ್ರೀ ಎಸ್.ಎಸ್.ಪಾಟೀಲ್(ಮುಂಡರಗಿ) : ಮಾನ್ಯ ಮುಖ್ಯ ಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಗದಗ ಜಿಲ್ಲೆ ಮುಂಡರಗಿ ಹಾಗೂ ಮುಳಗುಂದ ಪಟ್ಟಣಗಳಲ್ಲಿ ಪೊಲೀಸ್ ವಸತಿ ಗೃಹಗಳ ಕೊರತೆ ಇದೆಯೆ?

ಆ) ಎಷ್ಟು ವಸತಿ ಗೃಹಗಳ ಕೊರತೆ ಇದೆ?

ಇ) ಹಾಗಿದ್ದಲ್ಲಿ, ಅವುಗಳನ್ನು ಕಟ್ಟಿಸಲು ಕೈಗೊಳ್ಳುವ ಕ್ರಮಗಳೇನು?

ಈ) ಹಾಗೂ ಯಾವಾಗ ಕೈಗೊಳ್ಳಲಾಗುವುದು ?

ಶ್ರೀ ಧರ್ಮಸಿಂಗ್(ಮುಖ್ಯ ಮಂತ್ರಿಗಳು) :

ಅ) ಇದೆ

ಆ) ಮುಂಡರಗಿಯಲ್ಲಿ 12 ಮತ್ತು ಮುಳಗುಂದದಲ್ಲಿ 23 ಪೊಲೀಸ್ ವಸತಿ ಗೃಹಗಳ ಕೊರತೆ ಇದೆ.

ಇ) 2 ಎಸ್.ಐ. ವಸತಿ ಗೃಹಗಳ ನಿರ್ಮಾಣಕ್ಕೆ ಅನುಮೋದನೆ ನೀಡಿದ್ದು, ಜನವರಿ 2006 ರೊಳಗೆ ಕಾಮಗಾರಿ ಸಂಪೂರ್ಣಗೊಳ್ಳುವ ಸಾಧ್ಯತೆ ಇದೆ. ಉಳಿದ ಸಿಬ್ಬಂದಿವರ್ಗದವರಿಗೆ ತ್ವರಿತ ವಸತಿಯೋಜನೆ-2ರಡಿಯಲ್ಲಿ ಹಣಕಾಸು ಸಂಸ್ಥೆಯವರಿಂದ ಸಾಲ ಪಡೆದು ಕರ್ನಾಟಕ ರಾಜ್ಯ ಪೊಲೀಸ್ ವಸತಿ ನಿರ್ಮಾಣ ನಿಗಮ ನಿಯಮಿತ ರವರ ವತಿಯಿಂದ ವಸತಿ ಗೃಹಗಳನ್ನು ನಿರ್ಮಿಸಲು ಯೋಜಿಸಿದ್ದು, ಆದ್ಯತೆಗೆ ಅನುಗುಣವಾಗಿ ಕ್ರಮ ಕೈಗೊಳ್ಳಲಾಗುವುದು.

ಈ) ಸಂಪನ್ಮೂಲಗಳ ಆಧಾರದ ಮೇಲೆ ಮುಂಬರುವ ಆರ್ಥಿಕ ವರ್ಷಗಳಲ್ಲಿ ಕ್ರಮ ಕೈಗೊಳ್ಳಲಾಗುವುದು.

1010(1086) ಶ್ರೀ ಪ್ರಭಾಕರ ಬಂಗೇರ(ಬೆಳ್ತಂಗಡಿ) : ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) 2002-03ನೇ ಹಾಗೂ 2003-04ನೇ ಸಾಲಿನಲ್ಲಿ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಚಾಲ್ತಿಗೊಳಿಸಿದ ಒಟ್ಟು ಯೋಜನೆಗಳು ಎಷ್ಟು(ಅವುಗಳು ಯಾವುವು) ;

ಆ) ಸದರಿ ಯೋಜನೆಗಳಿಗಾಗಿ ನಿಗಧಿಪಡಿಸಿದ ಒಟ್ಟು ಅಂದಾಜು ಮೊತ್ತ ಎಷ್ಟು ಹಾಗೂ ಅವುಗಳಿಗೆ ನಿಗಧಿಪಡಿಸಲಾದ ಮೊತ್ತ ವೆಷ್ಟು;

ಇ) 2004-05ನೇ ಸಾಲಿನಲ್ಲಿ ಹಮ್ಮಿಕೊಂಡ ಯೋಜನೆಗಳು ಎಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು) ?

ಶ್ರೀ ಧರ್ಮಸಿಂಗ್(ಮುಖ್ಯ ಮಂತ್ರಿಗಳು) :

ಅ) ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು 2002-03 ಹಾಗೂ 2003-04ನೇ ಸಾಲಿನಲ್ಲಿ ಒಟ್ಟು ಕ್ರಮವಾಗಿ 26 ಹಾಗೂ 30 ಯೋಜನೆಗಳನ್ನು ಚಾಲ್ತಿಗೊಳಿಸಿದೆ. ವಿವರಗಳನ್ನು ಅನುಬಂಧ ಎಲ್ಲಿ ನೀಡಲಾಗಿದೆ.

ಆ) 2002–03ನೇ ಸಾಲಿನ ಯೋಜನೆಗಳ ಅಂದಾಜು ಮೊತ್ತ ರೂ. 196.26 ಕೋಟಿ ಹಾಗೂ 2003–04ನೇ ಸಾಲಿನ ಯೋಜನೆಗಳ ಅಂದಾಜು ಮೊತ್ತ ರೂ.253.19 ಕೋಟಿಗಳು.

ಇ) ಸದರಿ 2004–05ನೇ ಸಾಲಿನಲ್ಲಿ ಒಟ್ಟು 63 ಯೋಜನೆಗಳಿವೆ (ಜಿಲ್ಲಾವಾರು ವಿವರ ಲಗತ್ತಿಸಲಾಗಿದೆ.)

ಅನುಬಂಧ–ಎ

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

2002–03 ಹಾಗೂ 2003–04ನೇ ಸಾಲಿನಲ್ಲಿ ಚಾಲ್ತಿಗೊಳಿಸಿದ ಯೋಜನೆಗಳು

ಕ್ರಮ ಸಂಖ್ಯೆ	ಪಟ್ಟಣದ ಹೆಸರು	ವರ್ಷ	ಅಂದಾಜು ಮೊತ್ತ ರೂ.ಲಕ್ಷಗಳಲ್ಲಿ	ಮಂಡಳಿ ಆಯವ್ಯಯ 2002–03 ರೂ. ಲಕ್ಷಗಳಲ್ಲಿ
	ಕೊಳವೆ ನೀರು ಸರಬರಾಜು ಯೋಜನೆ	2002–03		
1	ಬ್ಯಾಡಗಿ		619.00	132.85
2	ಸದಲಗ		62.50	9.38
3	ಬೀಳಗಿ		625.00	160.14
4	ಸಂಡೂರು		592.23	130.61
5	ಬಾಗೇಪಲ್ಲಿ		159.00	112.92
6	ಸಿ.ಎನ್.ಹಳ್ಳಿ		595.98	236.58
7	ಬದಾಮಿ		340.00	149.10
8	ನವಲಗುಂದ		62.30	38.87
	ನಗರ ನೀರು ಸರಬರಾಜು ಯೋಜನೆ	2002–03		
9	ಕುಡಚಿ		310.00	141.57
10	ಇಂಡಿ		120.60	50.38
11	ಮುದ್ದೆಬಿಹಾಳ		110.16	70.06
12	ಬಸವನ ಬಾಗೇವಾಡಿ		1500.00	561.13
13	ಬಸವಕಲ್ಯಾಣ		1250.00	382.75
14	ರಾಯಚೂರು		3350.00	675.72
15	ಶಿಡ್ಲಘಟ್ಟ		375.00	217.30
16	ಕೆ.ಆರ್.ನಗರ		466.18	241.95
17	ಚಿಕ್ಕಮಗಳೂರು		2500.00	551.09
18	ಮುಳಬಾಗಲು		335.03	211.00
19	ಗುಂಡ್ಲುಪೇಟೆ		1573.00	199.06

20	ಮಡಿಕೇರಿ	475.00	130.16
21	ಕಂಪ್ಲಿ	262.90	152.76
22	ಮಳವಳ್ಳಿ	752.00	96.29
23	ಹರಿಹರ	598.54	240.82
24	ಅಣ್ಣಿಗೆರೆ	652.09	322.16
25	ರಾಮದುರ್ಗ	160.00	53.91
26	ಗುಲ್ಬರ್ಗಾ ಒಳಚರಂಡಿ ಯೋಜನೆ	1780.00	86.34
	ಒಟ್ಟು	**19626.51**	**5354.90**

ಕ್ರಮ ಸಂಖ್ಯೆ	ಪಟ್ಟಣದ ಹೆಸರು	ವರ್ಷ	ಅಂದಾಜು ಮೊತ್ತ ರೂ.ಲಕ್ಷಗಳಲ್ಲಿ	ಮಂಡಳಿ ಆಯವ್ಯಯ 2003-04 ರೂ. ಲಕ್ಷಗಳಲ್ಲಿ
I	ಕೊಳವೆ ನೀರು ಸರಬರಾಜು ಯೋಜನೆ	2003-04		
1	ಮೊಳಕಾಲ್ಮೂರು		290.00	220.00
2	ಕೊಪ್ಪ		110.00	90.00
3	ಪಿರಿಯಾಪಟ್ಟಣ		575.00	25.00
4	ದೇವದುರ್ಗ		289.50	110.00
5	ಹೆಚ್.ಡಿ.ಕೋಟೆ		380.88	97.00
6	ಗುಬ್ಬಿ		377.62	160.00
7	ಕಲಘಟಗಿ		438.10	175.00
8	ಗುರುಮಿಟಕಲ್		166.10	120.00
9	ವಿರಾಜಪೇಟೆ		355.00	70.00
10	ರಾಯ್‌ಭಾಗ್		127.54	90.00
11	ಟಿ.ನರಸೀಪುರ		289.54	178.00
II	ನಗರ ನೀರು ಸರಬರಾಜು ಯೋಜನೆ			
12	ತಾಳಿಕೋಟೆ		1108.00	55.73
13	ಹಾವೇರಿ		1321	440.00
14	ಆಳಂದ		154.00	29.43
15	ಗಜೇಂದ್ರ ಘಡ		69.14	47.00
16	ಗದಗ ಬೆಟಗೇರಿ		1116.00	500.00

17	ಮೂಡಿಗೆರೆ	400.00	26.33
18	ಮದ್ದೂರು	2379.00	790.00
19	ಮಾನ್ವಿ	96.37	70.00
20	ತರಿಕೆರೆ	400.00	75.00
21	ಆನೇಕಲ್	333.84	196.00
22	ಶಿರಾ	1135.28	550.00
23	ದಾವಣಗೆರೆ	4009.00	1100.00
24	ಬಳ್ಳಾರಿ	4639.00	1500.00
25	ಲಕ್ಷ್ಮೇಶ್ವರ	1519.61	820.00
26	ಭದ್ರಾವತಿ	587.25	160.00
27	ಕೊಪ್ಪಳ್	393.43	223.00
28	ಲಿಂಗಸುಗೂರು	1609.79	290.00
II ಒಳಚರಂಡಿ ಯೋಜನೆ			
29	ಹೊಳೆನರಸೀಪುರ	275.00	199.00
30	ಶಿಡ್ಲಘಟ್ಟ	374.81	25.00
	ಒಟ್ಟು	**25319.80**	**8431.49**

ಅನುಬಂಧ–ಬಿ

2004–05ನೇ ಸಾಲಿನಲ್ಲಿ ಹಮ್ಮಿಕೊಂಡ ಯೋಜನೆಗಳ ವಿವರ

ಕ್ರಮ ಸಂ	ಒಟ್ಟು ಯೋಜನೆಗಳು	ಅಂದಾಜು ಮೊತ್ತ (ರೂ.ಲಕ್ಷಗಳು)
	ಬೆಂಗಳೂರು (ಗ್ರಾ) ಜಿಲ್ಲೆ	
1	ಕನಕಪುರ (ಒಳಚರಂಡಿ ಯೋಜನೆ)	1219.27
2	ದೊಡ್ಡಬಳ್ಳಾಪುರ	2249.86
	ಬೆಳಗಾಂ ಜಿಲ್ಲೆ	
3	ಅಥಣಿ	444.84
4	ಗೋಕಾಕ	645.39

	ಬಾಗಲಕೋಟೆ ಜಿಲ್ಲೆ	
5	ತೇರದಾಳ	432.38
6	ಜಮಖಂಡಿ	1184.93
7	ಮುಧೋಳ	1299.36
8	ಮಹಾಲಿಂಗಪುರ	1144.76
9	ಇಳಕಲ್	69.00
10	ಇಳಕಲ್(ಒಳಚರಂಡಿ ಯೋಜನೆ)	43.06
11	ಹುನಗುಂದ	42.03
12	ಬದಾಮಿ(ಒಳಚರಂಡಿ ಯೋಜನೆ)	521.31
	ಬಳ್ಳಾರಿ ಜಿಲ್ಲೆ	
13	ಕಂಪ್ಲಿ	243.29
14	ತೆಕ್ಕಲಕೋಟೆ	59.05
15	ಹಚ್.ಬಿ.ಹಳ್ಳಿ ಕೊಟ್ಟೂರು ಕೂಡ್ಲಿಗಿ	3591.52
16	ಬಳ್ಳಾರಿ(ಒಳಚರಂಡಿ ಯೋಜನೆ)	5753.55
	ಬಿಜಾಪುರ ಜಿಲ್ಲೆ	
17	ಸಿಂದಗಿ	77.38
	ಬೀದರ್ ಜಿಲ್ಲೆ	
18	ಭಾಲ್ಕಿ	603.02
19	ಔರಾದ್	258.15
20	ಹುಮ್ನಾಬಾದ್ ಚಿಟಗುಪ್ಪ	1904.00
	ಚಿತ್ರದುರ್ಗ ಜಿಲ್ಲೆ	
21	ಹೊಸದುರ್ಗ	615.16
22	ಚಿತ್ರದುರ್ಗ	6370.83
	ದಾವಣಗೆರೆ ಜಿಲ್ಲೆ	
23	ಹರಪನಹಳ್ಳಿ	1529.82

	ಕೋಲಾರ ಜಿಲ್ಲೆ	
24	ಗುಡಿಬಂಡೆ	606.84
25	ಪರಗೋಡು ಬ್ಯಾರೇಜ್	966.18
26	ಬಾಗೇಪಲ್ಲಿ	705.85
27	ಕೋಲಾರ (ಒಳಚರಂಡಿ ಯೋಜನೆ)	780.00
28	ಶ್ರೀನಿವಾಸಪುರ(ಒಳಚರಂಡಿ ಯೋಜನೆ)	475.93
29	ಚಿಂತಾಮಣಿ(ಒಳಚರಂಡಿ ಯೂಜನೆ)	194.01
	ಶಿವಮೊಗ್ಗ ಜಿಲ್ಲೆ	
30	ಸಾಗರ	519.98
31	ಸೊರಬ	462.21
32	ಭದ್ರಾವತಿ	600.00
	ತುಮಕೂರು ಜಿಲ್ಲೆ	
33	ಪಾವಗಡ	1290.41
34	ಮಧುಗಿರಿ	1794.15
	ಚಾಮರಾಜನಗರ ಜಿಲ್ಲೆ	
35	ಕೊಳ್ಳೆಗಾಲ	919.12
	ದಕ್ಷಿಣ ಕನ್ನಡ ಜಿಲ್ಲೆ	
36	ಮುಲ್ಕಿ	412.36
37	ಕಾರ್ಕಳ	90.00
38	ಸುಳ್ಯ(ಒಳಚರಂಡಿ ಯೋಜನೆ)	287.07
39	ಬಂಟ್ವಾಳ(ಒಳಚರಂಡಿ ಯೋಜನೆ)	1227.00
	ಮಂಡ್ಯ ಜಿಲ್ಲೆ	
40	ಕೆ.ಆರ್. ಪೇಟೆ	466.35
41	ಪಾಂಡವಪುರ	476.51
42	ಮದ್ದೂರು ಶಿವಪುರ(ಒಳಚರಂಡಿ ಯೋಜನೆ)	663.22
43	ಮಂಡ್ಯ (ಒಳಚರಂಡಿ ಯೋಜನೆ)	1429.69
	ಗುಲ್ಬರ್ಗ ಜಿಲ್ಲೆ	
44	ಗುಲ್ಬರ್ಗ	5797.86

45	ಗುಲ್ಬರ್ಗ (ಒಳಚರಂಡಿ ಯೊಜನೆ)	1662.53
46	ಜೇವರ್ಗಿ	370.00
	ರಾಯಚೂರು ಜಿಲ್ಲೆ	
47	ಮುದಗಲ್	802.08
	ಕೋಪ್ಪಳ ಜಿಲ್ಲೆ	
48	ಯಲಬುರ್ಗ	188.92
49	ಗಂಗಾವತಿ(ಒಳಚರಂಡಿ ಯೋಜನೆ)	1702.27
50	ಗಂಗಾವತಿ	107.45
	ಧಾರವಾಡ ಜಿಲ್ಲೆ	
51	ಹುಬ್ಬಳ್ಳಿ ಧಾರವಾಡ	6384.00
52	ನವಲಗುಂದ	1019.66
	ಗದಗ ಜಿಲ್ಲೆ	
53	ರೋಣ	728.18
54	ಗದಗ ಬೆಟಗೇರಿ(ಒಳಚರಂಡಿ ಯೋಜನೆ)	1114.66
55	ನರಗುಂದ(ಒಳಚರಂಡಿ ಯೊಜನೆ)	720.00
	ಹಾವೇರಿ ಜಿಲ್ಲೆ	
56	ಹಾನಗಲ್	573.74
	ಉತ್ತರ ಕನ್ನಡ ಜಿಲ್ಲೆ	
57	ಯಲ್ಲಾಪುರ	1310.86
58	ಹಳಿಯಾಳ (ಒಳಚರಂಡಿ ಯೋಜನೆ)	601.35
	ಮೈಸೂರು ಜಿಲ್ಲೆ	
59	ಬನ್ನೂರು (ಒಳಚರಂಡಿ ಯೋಜನೆ)	523.26
	ಹಾಸನ ಜಿಲ್ಲೆ	
60	ಹಾಸನ (ಒಳಚರಂಡಿ ಯೋಜನೆ)	1224.30
61	ಅರಸಿಕೆರೆ (ಒಳಚರಂಡಿ ಯೋಜನೆ)	56.87
62	ಚೆನ್ನರಾಯಪಟ್ಟಣ (ಒಳಚರಂಡಿ ಯೋಜನೆ)	916.00
63	ಬೇಲೂರು (ಒಳಚರಂಡಿ ಯೋಜನೆ)	270.00
	ಒಟ್ಟು ಮೊತ್ತ	**70742.83**

1011(1401) ಶ್ರೀ ಪ್ರಭಾಕರ ಬಂಗೇರ.ಕೆ(ಬೆಳ್ತಂಗಡಿ) : ಮಾನ್ಯ ಪೌರಾಡಳಿತ ಹಾಗೂ ಕೆಯುಐಡಿಎಫ್‌ಸಿ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ನಗರಾಭಿವೃದ್ಧಿ ಇಲಾಖೆ ವ್ಯಾಪ್ತಿಯಲ್ಲಿ ರಾಜ್ಯದಲ್ಲಿ ಎಷ್ಟು ಸ್ಥಳೀಯ ಸಂಸ್ಥೆಗಳಲ್ಲಿ ನಿರ್ಮಲ ನಗರ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆಯೇ;

ಆ) ಈ ಯೋಜನೆಯು ವಿವರಗಳೇನು; ಈ ಯೋಜನೆಯು ಚಟುವಟಿಕೆಗಳನ್ನು ಅನುಷ್ಠಾನಗೊಳಿಸಲಾದ ವಿವರಗಳೇನು;

ಇ) ನಗರ ಪ್ರದೇಶದ ಬಡ ಜನರಿಗಾಗಿ ಶೌಚಾಲಯ ನಿರ್ಮಾಣ ಕಾರ್ಯಕ್ರಮದ ಪ್ರಗತಿಯ ವಿವರಗಳೇನು?

ಶ್ರೀ ಎಸ್.ಆರ್.ಮೋರೆ (ಪೌರಾಡಳಿತ ಹಾಗೂ ಕೆಯುಐಡಿಎಫ್‌ಸಿ ಸಚಿವರು) :

ಅ) ನಿರ್ಮಲ ನಗರ ಯೋಜನೆಯನ್ನು ರಾಜ್ಯದ ಆಯ್ದ ಸ್ಥಳೀಯ ಸಂಸ್ಥೆಗಳಲ್ಲಿ ಅನುಷ್ಠಾನ ಗೊಳಿಸಲಾಗುತ್ತಿದೆ.

ಆ) ಈ ಯೋಜನೆಯಡಿಯಲ್ಲಿ ಸ್ಥಳೀಯ ಸಂಸ್ಥೆಗಳ ಮೂಲಭೂತ ಅಭಿವೃದ್ಧಿ, ಲೆಕ್ಕ ಪತ್ರ ಸುಧಾರಣೆಗಳಿಗೆ ಸಂಬಂಧಿಸಿದಂತೆ, ಈ ಕೆಳಕಂಡ ಪ್ರಮುಖ ಚಟುವಟಿಕೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

1. 57 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಭೌಗೋಳಿಕ ಮಾಹಿತಿ ಪದ್ಧತಿಯ(GIS)ಅನುಸಾರ ಗಣಿಕೀಕರಣ.
2. 43 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಲೆಕ್ಕ ಪತ್ರಗಳ ಕುರಿತಂತೆ ನಿಧಿ ಆಧಾರಿತ ಲೆಕ್ಕ ಪದ್ಧತಿ (FBAS).
3. 32 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಸಾರ್ವಜನಿಕ ಶೌಚಾಲಯ.
4. 43 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಘನತ್ಯಾಜ್ಯ ವಸ್ತುಗಳ ವಿಲೇವಾರಿ ಮತ್ತು ಸಂಸ್ಕರಣೆ.
5. 52 ನಗರ ಸ್ಥಳೀಯ ಸಂಸ್ಥೆಗಳಲ್ಲಿ ನಗರ ಸ್ತ್ರೀ ಶಕ್ತಿ ಯೋಜನೆ.
6. 57 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಮಳೆ ಕೊಯ್ಲು.

ಇ) ಆಯ್ದ 29 ಪಟ್ಟಣಗಳಲ್ಲಿ 100 ಸಾರ್ವಜನಿಕ ಶೌಚಾಲಯಗಳನ್ನು ಕರ್ನಾಟಕ ಭೂ ಸೇನಾ ನಿಗಮದ ಮೂಲಕ ನಿರ್ವಹಿಸಿಲಾಗುತ್ತಿದ್ದು, ಬಹುತೇಕ ಮುಕ್ತಾಯಗೊಳ್ಳುವ ಹಂತದಲ್ಲಿರುತ್ತದೆ.

1013(1403)ಶ್ರೀ ಪ್ರಭಾಕರ ಬಂಗೇರ.ಕೆ. (ಬೆಳ್ತಂಗಡಿ) : ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದಲ್ಲಿ ಇಲ್ಲಿಯತನಕ ಕಲಾವಿದ ವರ್ಗಗಳವರಿಗೆ ನೀಡುತ್ತಿರುವ ಮಾಸಾಶನದ ಫಲಾನುಭವಿಗಳ ಸಂಖ್ಯೆ ಎಷ್ಟು;

ಆ) ಇನ್ನೂ ಎಷ್ಟು ಜನರಿಗೆ ಮಾಸಾಶನ ನೀಡಲು ಸರ್ಕಾರ ಕಾರ್ಯಕ್ರಮ ರೂಪಿಸಿದೆ;

ಇ) ವಯೋಮಿತಿಯನ್ನು ಗಣನೆಗೆ ತೆಗೆದುಕೊಂಡು, ಅರ್ಜಿ ಸಲ್ಲಿಸಿ ಕಾಯುತ್ತಿರುವ ಕಲಾವಿದರಿಗೆ ತುರ್ತು ಆದ್ಯತೆಯನ್ನು ನೀಡಿ ಮಾಸಾಶನ ಮಂಜೂರು ಮಾಡಲು ಸರ್ಕಾರ ಕ್ರಮ ಜರುಗಿಸುವುದೇ?

ಶ್ರೀ ಧರ್ಮಸಿಂಗ್(ಮುಖ್ಯ ಮಂತ್ರಿಗಳು) :

ಅ) ಫಲಾನುಭವಿಗಳ ಸಂಖ್ಯೆ 11,415

ಆ) ರಾಜ್ಯದಲ್ಲಿರುವ ಒಟ್ಟು ಕಲಾವಿದರ ಸಂಖ್ಯೆಯನ್ನು ಊಹೆಯ ಮೇಲೆ ನಿರ್ಧರಿಸಲಾಗುವುದಿಲ್ಲ. ಆದಾಗ್ಯೂ ಆಸಕ್ತ ಸಾಹಿತಿ ಕಲಾವಿದರುಗಳಿಂದ ಬರುವ ಅರ್ಜಿಗಳನ್ನು ತಜ್ಞರ ಆಯ್ಕೆ ಸಮಿತಿ ಮುಂದೆ ಪರಿಶೀಲನೆಗೆ ಮಂಡಿಸಲಾಗುವುದು. ತದನಂತರ ಅರ್ಹ ಫಲಾನುಭವಿಗಳ ಸಂಖ್ಯೆಯನ್ನು ನಿರ್ಧರಿಸಲಾಗುವುದು.

ಇ) ಪರಿಗಣಿಸಲಾಗುತ್ತಿದೆ.

1014(1404) ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ) : ಮಾನ್ಯ ಉಪ ಮುಖ್ಯ ಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) 2002-03-04ನೇ ಸಾಲಿಗೆ ಶಾಸಕರ ಪ್ರದೇಶ ಅಭಿವೃದ್ಧಿ ನಿಧಿಗೆ ಮಂಜೂರಾದ ಹಣ ಎಷ್ಟು;

ಆ) ಬಿಡುಗಡೆ ಆಗಿರುವ ಮೊತ್ತ ಎಷ್ಟು;

ಇ) 2002-03-04ನೇ ಸಾಲಿಗೆ ಬೆಳ್ತಂಗಡಿ ಕ್ಷೇತ್ರದಲ್ಲಿ ಆಡಳಿತಾತ್ಮಕ ಮಂಜೂರಾತಿಯಾಗಿದ್ದು ಅದಕ್ಕೆ ಹಣ ಬಿಡುಗಡೆ ಆಗದಿರುವ ಕಾಮಗಾರಿಗಳ ವಿವರಗಳನ್ನು ಒದಗಿಸುವುದು;

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯ ಮಂತ್ರಿಗಳು):

ಅ) 120 ಕೋಟಿ ರೂ.ಗಳು

ಆ) 31.10 ಕೋಟಿ ರೂ.ಗಳು

ಇ) ಅನುಬಂಧದಲ್ಲಿ ನೀಡಲಾಗಿದೆ.

ANNEXURE

Sl.No.	NAME OF WORK	EST.COST
	2002-03-04	1.75
01	Construction of Devaragundi Bridge at Machina Village(continuation work)	
02	Construction of Bridge at Uliya Kanchinadka Ilanthila Road(continuation work)	1.75
03	Impts.to Madanthyaru Temple Road	1.50
04	Construction of Retaining wall to bridge near Odil temple	0.50
05	Construction of bridge at olabailu at Nyayatharpu Village	1.50

06	Construction of punjalakatte Amrutha Mahothsava building at DKZP Hr.Pry.School	1.75
07	Improvements to Sonadoor Malady Gardady Road	1.75
08	Improvements to Ninnikallu Kandkur at Laila Village.	1.50
09	Improvements to Bannangala at Barya Village	1.75
10	Improvements to kudradka Paledhu Road	1.50
11	Construction of retaining wall at Balanja Panchalingeswara temple road	0.50
12	Construction of room at Mavinakatte Perady DKZP Hr.Pry.School	1.00
13	Construction of hall near Mahalingeswara temple at Venoor village	2.00
14	Construction of bridge link road to Kuntalpalke perla Baipadi at Bandaru village (continuation work)	1.00
15	Improvements to Montethadka Pandamthaje at Shibaje village	1.50
16	Construction of foot bridge at Arkije at Badagakarandur village	0.50
17	Construction of foot bridge at kalmanja at Badagakarandur village	0.50
18	Construction of one class room at Guruvanakatte Govt.high school	1.00
19	Burriyal ground at Guruvayankakere	1.00
20	Improvements to Boloor SC colony at Karimanilu Village	1.25
21	Improvements at Melaanthabettu Guruvayana kere Basadi Road	1.00

22	Construction of compound wall at Balanja DKZP higher Pry.School	0.50
23	Improvements at Bangerakatte Raktheswari padavu road at Paranki village	0.50
24	Construction of foot bridge at konda Shala at Savya village	0.50
25	Improvements to Honatta Ninnikallu Road at pilya village.	1.00

1015(438) ಶ್ರೀ ಪ್ರಕಾಶ್ ಖಂಡ್ರೆ (ಭಾಲ್ಕಿ) : ಮಾನ್ಯ ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬೀದರ್ ಜಿಲ್ಲೆಯ ಭಾಲ್ಕಿ ಪಟ್ಟಣದಲ್ಲಿ ಐ.ಡಿ.ಎಸ್.ಎಂ.ಟಿ. ಯೋಜನೆಯಡಿಯಲ್ಲಿ 2 ಕೋಟಿ ಹಣ ಮಂಜೂರಾಗಿದ್ದು, ಇಲ್ಲಿಯವರೆಗೆ ಎಷ್ಟು ಕಾಮಗಾರಿಗಳನ್ನು ಮಾಡಲಾಗಿದೆ?

ಆ) ಯಾವ ಯಾವ ಕಾಮಗಾರಿಗಳನ್ನು ಇನ್ನೂ ಪೂರ್ತಿ ಮಾಡಬೇಕಾಗಿದೆ?

ಇ) ಬಾಕಿ ಇರುವ ಕಾಮಗಾರಿಗಳನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಎಸ್.ಆರ್.ಮೋರೆ (ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ ಸಚಿವರು):

ಅ) ಐ.ಡಿ.ಎಸ್.ಎಂ.ಟಿ ಯೋಜನೆಯಡಿ ಭಾಲ್ಕಿ ಪಟ್ಟಣಕ್ಕೆ ರೂ.194.25 ಲಕ್ಷಗಳ ಯೋಜನಾವರದಿ ಮಂಜೂರಾಗಿದ್ದು ಪ್ರಥಮವಾಗಿ ಈ ಕೆಳಕಂಡ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.

1. ಬೀದಿ ದೀಪಗಳು
2. ಪೊಲೀಸ್ ಸ್ಟೇಷನ್ ರಸ್ತೆಯಿಂದ ಬೀರದೇವರ ದೇವಸ್ಥಾನದವರೆಗೆ ರಸ್ತೆ ಕಾಮಗಾರಿ
3. ಪೋರ್ಟ್ ರಸ್ತೆಯಿಂದ ಮೊಮ್ಮಗೊಂಡೇಶ್ವರ ಸರ್ಕಲ್‌ವರೆಗಿನ ರಸ್ತೆ ಕಾಮಗಾರಿ.

ಆ) ಮಂಜೂರಾದ ಕಾಮಗಾರಿಗಳಲ್ಲಿ ಈ ಕೆಳಕಂಡ 3 ಕಾಮಗಾರಿಗಳನ್ನು ಪೂರ್ಣಗೊಳಿಸಬೇಕಾಗಿರುತ್ತದೆ.

1. ಪುರಸಭಾ ಆವರಣದಲ್ಲಿ ವಾಣಿಜ್ಯ ಸಂಕೀರ್ಣ ನಿರ್ಮಾಣ,
2. ಹಣ್ಣು ಮತ್ತು ತರಕಾರಿ ಮಾರುಕಟ್ಟೆ
3. ಹಣ್ಣು ಮತ್ತು ತರಕಾರಿ ಶೀತಲ ಸಂರಕ್ಷಣಾ ಘಟಕ

ಇ) ಐ.ಡಿ.ಎಸ್.ಎಂ.ಟಿ ಮಾರ್ಗಸೂಚಿಯಡಿ ವಿಧಿಸಿರುವ ಕಾಲಮಿತಿಯೊಳಗೆ ಈ ಕಾಮಗಾರಿಗಳನ್ನು ಪೂರ್ಣ ಗೊಳಿಸಲಾಗುವುದು.

1016(845) ಶ್ರೀ ಪ್ರಕಾಶ್ ಖಂಡ್ರೆ (ಬಾಲ್ಕಿ) : ಮಾನ್ಯ ಪೌರಾಡಳಿತ ಮತ್ತು ಕೆಯುಐಡಿಎಫ್‌ಸಿ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬೀದರ್ ಜಿಲ್ಲೆಯ ಭಾಲ್ಕಿ ಪುರಸಭೆಯಲ್ಲಿ 11ನೇ ಆರ್ಥಿಕ Finance ಯೋಜನೆಯಡಿಯಲ್ಲಿ ಯಾವ ಯಾವ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆ.

ಆ) ಕಾಮಗಾರಿ ವೆಚ್ಚವೆಷ್ಟು (ಕಾಮಗಾರಿಯ ವಾರು ವಿವರ ನೀಡುವುದು) :

ಇ) ಈ ಕಾಮಗಾರಿಗಳು ಯಾವ ಹಂತದಲ್ಲಿವೆ ;

ಈ) ಯಾವಾಗ ಪೂರ್ಣಗೊಳಿಸಲಾಗುವುದು;

ಉ) ಭಾಲ್ಕಿ ಪುರಸಭೆಯಲ್ಲಿ 25 ಲಕ್ಷ ರೂಪಾಯಿಗಳ ಅವ್ಯವಹಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಊ) ಬಂದಿದ್ದರೆ ಆ ಬಗ್ಗೆ ಏನು ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಎಸ್.ಆರ್.ಮೋರೆ (ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ. ಸಚಿವರು) :

ಅ) ಯಾವುದೇ ಕಾಮಗಾರಿಗಳನ್ನು ಇದುವರೆವಿಗೂ ತೆಗೆದುಕೊಳ್ಳಲಾಗಿರುವುದಿಲ್ಲ. 11ನೇ ಹಣಕಾಸಿನ ಯೋಜನೆಯಡಿಯಲ್ಲಿ ಕಾಮಗಾರಿಗಳ ಕ್ರಿಯಾ ಯೋಜನೆ ತಯಾರಿಸಿ ಪುರಸಭೆಯ ಅನುಮೋದನೆಗೆ ಮಂಡಿಸಲಾಗಿದೆ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಉ) ಹೌದು.

ಭಾಲ್ಕಿ ಪುರಸಭೆಯಲ್ಲಿ 25.00 ಲಕ್ಷ ರೂಗಳ ಅವ್ಯವಹಾರ ನಡೆದಿರುತ್ತದೆ ಎಂಬುದಾಗಿ ಆರೋಪಗಳನ್ನು ಪೌರಾಡಳಿತ ನಿರ್ದೇಶನಾಲಯದಲ್ಲಿ ಸ್ವೀಕರಿಸಲಾಗಿರುತ್ತದೆ.

ಊ) ಸದರಿ ಆರೋಪಗಳ ಕುರಿತು ಅಗತ್ಯ ತನಿಖೆ ನಡೆಸಲು ಪೌರಾಡಳಿತ ನಿರ್ದೇಶನಾಲಯ ಅಧಿಕಾರಿಗಳ ತಂಡವನ್ನು ಸೆಪ್ಟೆಂಬರ್ 2004ರ ಮಾಹೆಯಲ್ಲಿ ಭಾಲ್ಕಿ ಪುರಸಭೆ ನಿಯೋಜಿಸಿ ತನಿಖೆ ಪೂರ್ಣ ಗೊಳಿಸಲಾಗಿರುತ್ತದೆ. ತನಿಖಾ ತಂಡವು ಇತ್ತೀಚೆಗೆ ತನಿಖಾ ವರದಿ ಸಲ್ಲಿಸಿರುವುದನ್ನು ನಿರ್ದೇಶನಾಲಯದ ಪರಿಗಣನೆಯಲ್ಲಿದ್ದು ತಪ್ಪಿತಸ್ಥರ ವಿರುದ್ಧ ಅಗತ್ಯ ಶಿಸ್ತಿನ ಕ್ರಮ ಪ್ರಾರಂಭಿಸಲಾಗುತ್ತದೆ.

1018(1034) ಶ್ರೀ ಎಸ್.ರಘು. (ಶಾಂತಿನಗರ) : ಮಾನ್ಯ ಮುಖ್ಯ ಮಂತ್ರಿಯವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬೆಂಗಳೂರಿನಲ್ಲಿ ಪಾದಚಾರಿ ಮೇಲು ಸೇತುವೆಗಳನ್ನು ನಿರ್ಮಿಸಲು ನಿರ್ಧರಿಸಲಾಗಿದೆಯೇ;

ಆ) ಪಾದಚಾರಿ ಮೇಲು ಸೇತುವೆಗಳನ್ನು ನಿರ್ಮಿಸುತ್ತಿರುವ ಉದ್ದೇಶವೇನು;

ಇ) ಸದರಿ ಸೇತುವೆ ನಿರ್ಮಾಣಕ್ಕೆ ಸರ್ಕಾರ ಒಪ್ಪಿಗೆ ನೀಡಿದೆಯೇ;

ಈ) ಎಷ್ಟು ಪಾದಚಾರಿ ಮೇಲು ಸೇತುವೆಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ ಹಾಗೂ ಇದಕ್ಕೆ ತಗಲುವ ಅಂದಾಜು ವೆಚ್ಚ ಎಷ್ಟು;

ಶ್ರೀ ಧರ್ಮಸಿಂಗ್(ಮುಖ್ಯ ಮಂತ್ರಿಗಳು):

ಅ) ಹೌದು

ಆ) ಪಾದಚಾರಿಗಳು ರಸ್ತೆಗಳನ್ನು ಸುಗಮವಾಗಿ ದಾಟಲು ಪಾದಚಾರಿಮೇಲು ಸೇತುವೆಗಳನ್ನು ನಿರ್ಮಿಸಲಾಗುತ್ತಿದೆ. ಪಾದಚಾರಿ ಮೇಲು ಸೇತುವೆಗಳ ನಿರ್ಮಾಣಕ್ಕೆ ಸಂಬಂಧಿಸಿದಂತೆ ಬೆಂಗಳೂರುಮಹಾನಗರ ಪಾಲಿಕೆಯು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿದಿದ್ದು, ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

ಇ) ಆರಕ್ಷಕ ಇಲಾಖೆಯಿಂದ 105ಪಾದಚಾರಿ ಮೇಲು ಸೇತುವೆಗಳನ್ನು ನಿರ್ಮಿಸಲು, ಕೋರಿಕೆ ಬಂದಿದೆ. ಇವುಗಳಲ್ಲಿ ಅತಿ ಅವಶ್ಯಕವಾಗಿ ಬೇಕಾಗಿರುವ 37 ಪಾದಚಾರಿ ಮೇಲು ಸೇತುವೆಗಳನ್ನು ನಿರ್ಮಾಣ, ಚಾಲನೆ ಮತ್ತು ವರ್ಗಾವಣೆ(ಬಿ.ಓ.ಟಿ) ಆಧಾರದಲ್ಲಿ ನಿರ್ಮಿಸಲು ನಿರ್ಧರಿಸಲಾಗಿದೆ. ಇವುಗಳ ಪೈಕಿ 7 ಪಾದಚಾರಿ ಮೇಲು ಸೇತುವೆಗಳನ್ನು ಪೈಲಟ್ ಆಧಾರದಲ್ಲಿ ನಿರ್ಮಿಸಲು ಮತ್ತು ಉಳಿದ 30 ಪಾದಚಾರಿ ಮೇಲು ಸೇತುವೆಗಳನ್ನು ನಿರ್ಮಿಸಲು ಟೆಂಡರ್ ಕರೆಯುವ ಮೂಲಕ ಕ್ರಮ ವಹಿಸಲಾಗುವುದು. ಈ ಕಾಮಗಾರಿಗಳಿಗೆ ತಗಲುವ ವೆಚ್ಚವನ್ನು ಬಿ.ಓ.ಟಿ.ದಾರರೇ ಭರಿಸಲಿರುವರು. ಪ್ರತಿಯೊಂದು ಪಾದಚಾರಿ ಮೇಲು ಸೇತುವೆ ನಿರ್ಮಾಣಕ್ಕೆ ಸ್ಥಳಕ್ಕೆ ಅನುಗುಣವಾಗಿ ಸುಮಾರು 50 ರಿಂದ 60 ಲಕ್ಷ ರೂ. ವೆಚ್ಚವಾಗುವುದು.

1019(1035) ಶ್ರೀ ಎಸ್.ರಘು. (ಶಾಂತಿನಗರ) : ಮಾನ್ಯ ಮುಖ್ಯ ಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬೆಂಗಳೂರು ಮಹಾನಗರ ಪಾಲಿಕೆ ನಾಗರೀಕ ಸೇವಾ ಕೇಂದ್ರಗಳನ್ನು ಆರಂಭಿಸಿದೆಯೇ(ಸ್ಥಳಗಳ ವಿವರ ನೀಡುವುದು):

ಆ) ಸದರಿ ನಾಗರೀಕ ಸೇವಾ ಕೇಂದ್ರಗಳ ಸ್ಥಾಪನೆ ಉದ್ದೇಶವೇನು ಹಾಗೂ ಆ ಉದ್ದೇಶ ಈಡೇರಿದೆಯೇ;

ಇ) ನಾರಗೀಕ ಸೇವಾ ಕೇಂದ್ರಗಳು ನಿರೀಕ್ಷಿತ ಮಟ್ಟದಲ್ಲಿ ಯಶಸ್ವಿಯಾಗದಿರಲು ಕಾರಣವೇನು;

ಈ) ಸದರಿ ಕೇಂದ್ರಗಳನ್ನು ಯಶಸ್ವಿಯಾಗುವಂತೆ ಮಾಡಲು ಕೈಗೊಂಡಿರುವ ಕ್ರಮಗಳೇನು;

ಶ್ರೀ ಧರ್ಮಸಿಂಗ್(ಮುಖ್ಯ ಮಂತ್ರಿಗಳು):

ಅ) ಬೆಂಗಳೂರು ಮಹಾನಗರ ಪಾಲಿಕೆ ನಾಗರೀಕ ಸೇವಾ ಕೇಂದ್ರಗಳನ್ನು ಆರಂಭಿಸಿದೆ. ಅವುಗಳ ಸ್ಥಳದ ವಿವರ ಈ ಕೆಳಕಂಡಂತಿದೆ:

1. ಬೆಂಗಳೂರು ಮಹಾನಗರ ಪಾಲಿಕೆ ಮುಖ್ಯ ಕಛೇರಿ
2. ಪಬ್ಲಿಕ್ ಯುಟಿಲಿಟಿ ಬಿಲ್ಡಿಂಗ್, (ಪೂರ್ವ ವಲಯ)
3. ಉಪ ಆಯುಕ್ತರು (ಪಶ್ಚಿಮ)ರವರ ಕಛೇರಿ, ಅಂಚೆಗೆ ರಸ್ತೆ, ಮಲ್ಲೇಶ್ವರಂ
4. ಉಪ ಆಯುಕ್ತರು (ದಕ್ಷಿಣ) ರವರ ಕಛೇರಿ, 2ನೇ ಬ್ಲಾಕ್, ಜಯನಗರ

ಆ) ನಾಗರೀಕ ಸೇವಾ ಕೇಂದ್ರಗಳ ಉದ್ದೇಶಗಳು :

1. ಬೆಂಗಳೂರು ನಾಗರೀಕರಿಗೆ ಉತ್ತಮ ಸೇವೆ ನೀಡುವುದು.

2. ನಾಗರೀಕರು ಸದರಿ ಕೇಂದ್ರಗಳಲ್ಲಿ ಯಾವುದೆ ವಾಡಿಕೆಗೆ ಸಂಬಂಧಿಸಿದಂತೆ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ.

a) ಜನನ ಮತ್ತು ಮರಣ ಪ್ರಮಾಣ ಪತ್ರ

b) ಆಸ್ತಿ ತೆರಿಗೆ ಪಾವತಿ

c) ಖಾತಾ ನೊಂದಾವಣೆ/ ವರ್ಗಾವಣೆ/ ವಿಭಜನೆ / ಒಂದುಗೂಡಿಸುವಿಕೆ / ಖಾತಾ ಪ್ರಮಾಣ ಪತ್ರ / ಖಾತಾ ಎಕ್ಸ್‌ಟ್ರಾಕ್ಟ್ ಇತ್ಯಾದಿ

d) ರಸ್ತೆ ಅಗೆಯಲು ಅನುಮತಿ

e) ಕಟ್ಟಡ ನಕ್ಷೆ ಮಂಜೂರಾತಿ

f) ಸಾರ್ವಜನಿಕ ಮಂಜೂರಾತಿ

g) ಮಾಹಿತಿ ಪುಸ್ತಕ, ಅರ್ಜಿ ನಮೂನೆಗಳು ನಾಗರೀಕರು ಮೇಲೆ ಹೇಳಿದ ಸೌಲಭ್ಯಗಳನ್ನು ಬಳಸಿಕೊಂಡು ಪ್ರಯೋಜನವನ್ನು ಪಡೆದಿದ್ದು, ನಾಗರೀಕ ಸೇವಾ ಕೇಂದ್ರಗಳ ಸ್ಥಪನೆ ಉದ್ದೇಶ ಈಡೇರಿದೆ.

ಇ) ಪ್ರಶ್ನೆ –(ಆ) ಗೆ ನೀಡಿರುವ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಈ) ಬೆಂಗಳೂರು ಮಹಾನಗರ ಪಾಲಿಕೆ ನಾಗರೀಕರ ಅನುಕೂಲಕ್ಕಾಗಿ ಸ್ಥಾಪಿಸಿರುವ 4 ನಾಗರೀಕ ಸೇವಾ ಕೇಂದ್ರಗಳಲ್ಲಿ ಇಲ್ಲಿಯವರೆವಿಗೆ 95,998 ಸಂಖ್ಯೆಯ ದಾಖಲೆಗಳನ್ನು ನಾಗರೀಕರು ಪಡೆದುಕೊಂಡಿರುತ್ತಾರೆ.

1020(1555) ಶ್ರೀ ರಘುಪತಿ ಭಟ್ .ಕೆ (ಉಡುಪಿ) : ಮಾನ್ಯ ಮುಖ್ಯ ಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದಲ್ಲಿ ಮತ್ಸ್ಯಾಶ್ರಯ ಯೋಜನೆಯಡಿಯಲ್ಲಿ ಉಚಿತ ಸಹಾಯಧನ ಸೌಲಭ್ಯಕ್ಕಾಗಿಬಡ ಮೀನುಗಾರರು ಅರ್ಜಿ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ನಂದಿದೆಯೇ;

ಆ) ಬಂದಲ್ಲಿ ಅರ್ಜಿಗಳ ಸಂಖ್ಯೆ ಎಷ್ಟು; ಫಲಾನುಭವಿಗಳೆಷ್ಟು (ಕ್ಷೇತ್ರವಾರು ವಿವರ ಒದಗಿಸುವುದು) :

ಇ) ಈ ಯೋಜನೆ ಅಡಿಯಲ್ಲಿ ಉಚಿತ ಧನ ಸಹಾಯ ನೀಡುವಾಗ RTCಯನ್ನು ಕೇಳುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಈ ಸೌಲಭ್ಯವನ್ನು RTC ಇಲ್ಲದ ಬಡ ಮೀನುಗಾರರಿಗೂ ವಿಸ್ತರಿಸಲು ಕ್ರಮ ಕೈಗೊಳ್ಳಲಾಗುವುದೆ?

ಶ್ರೀ ಧರ್ಮಸಿಂಗ್(ಮುಖ್ಯ ಮಂತ್ರಿಗಳು) :

ಅ) ಹೌದು

ಆ) ಮತ್ಸ್ಯಾಶ್ರಯ ಯೋಜನೆಯಡಿ 452 ಪ್ರಸ್ತಾವನೆಗಳ ಮೂಲಕ ಒಟ್ಟು 30,518 ಅರ್ಜಿಗಳು ಅಪೇಕ್ಷಿತ ಫಲಾನುಭವಿಗಳಿಂದ ಬಂದಿವೆ. ಈ ಯೋಜನೆಯಡಿ ಬಂದಿರುವ ತಾಲ್ಲೂಕುವಾರು/ ಕ್ಷೇತ್ರವಾರು ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ಹೌದು. ಈ ಯೋಜನೆಯ ಪ್ರಕಾರ ಫಲಾನುಭವಿಯು ಸ್ವಂತ ನಿವೇಶನ ಹೊಂದಿದ್ದಲ್ಲಿ ಮಾತ್ರ ಮನೆ ನಿರ್ಮಾಣಕ್ಕೆ ಉಚಿತ ಸಹಾಯಧನ ಪಡೆಯಲು ಅರ್ಹನಾಗಿರುತ್ತಾನೆ. ಆದುದರಿಂದ ನಿವೇಶನವನ್ನು ಹೊಂದಿರುವ ದಾಖಲಾತಿಗಳನ್ನು ಪಡೆದ ಅರ್ಜಿದಾರರನ್ನು ಮಾತ್ರ ಈ ಯೋಜನೆಯಲ್ಲಿ ಪರಿಗಣಿಸಲಾಗುವುದು.

ಅನುಬಂಧ

ಮತ್ಸ್ಯಾಶ್ರಯ ಯೋಜನೆಯಡಿಯಲ್ಲಿ ಬಂದಿರುವ ತಾಲ್ಲೂಕುವಾರು/ ಕ್ಷೇತ್ರವಾರು ಅರ್ಜಿದಾರರ ವಿವರಗಳು

ಕ್ರ. ಸಂ	ತಾಲ್ಲೂಕುವಾರು / ಕ್ಷೇತ್ರವಾರು	ಅರ್ಜಿಗಳ ಸಂಖ್ಯೆ
	ಬಾಗಲಕೋಟೆ ಜಿಲ್ಲೆ	
1	ಬಾದಮಿ	50
2	ಬಾಗಲಕೋಟೆ	50

3	ಹುನಗುಂದ	50
4	ಭೀಳಗಿ	50
5	ಜಮಖಂಡಿ	50
		200
	ಬೆಂಗಳೂರು ನಗರ ಜಿಲ್ಲೆ	
1	ಬೆಂಗಳೂರು ದಕ್ಷಿಣ	191
2	ಆನೇಕಲ್	148
3	ಬೆಂಗಳೂರು ಉತ್ತರ	50
		389
	ಬೆಂಗಳೂರು ಗ್ರಾಮಾಂತರ ಜಿಲ್ಲೆ	
1	ಚನ್ನಪಟ್ಟಣ	240
2	ಸಾತನೂರು ಕ್ಷೇತ್ರ	335
3	ಮಾಗಡಿ	300
		875
	ಬೆಳಗಾವಿ ಜಿಲ್ಲೆ	
1	ಚಿಕ್ಕೋಡಿ	407
2	ಹುಕ್ಕೇರಿ	10
3	ಸೌದತ್ತಿ	131
4	ಗೋಕಾಕ್	128
5	ರಾಯಭಾಗ	100
		776
	ಬಳ್ಳಾರಿ ಜಿಲ್ಲೆ	
1	ಸಿರುಗುಪ್ಪ	229
2	ಹೊಸಪೇಟೆ	115
3	ಹಗರಿಬೊಮ್ಮನಹಳ್ಳಿ	140
4	ಹಡಗಲಿ	220
5	ಕೂಡ್ಲಿಗಿ	155
6	ಸಂಡೂರು	100
		959
	ಬೀದರ್ ಜಿಲ್ಲೆ	
1	ಬಸವಕಲ್ಯಾಣ	30
2	ಔರದ್	20
3	ಬಾಲ್ಕಿ	50
4	ಬೀದರ್	10
		110

	ಬಿಜಾಪುರ ಜಿಲ್ಲೆ	
1	ಸಿಂಧಗಿ	42
2	ಮುದ್ದೇಬಿಹಾಳ	173
3	ಬಿಜಾಪುರ	33
4	ಇಂಡಿ	313
5	ಬಸವನಬಾಗೆವಾಡಿ	87
		534
	ಚಾಮರಾಜನಗರ ಜಿಲ್ಲೆ	
1	ಗುಂಡ್ಲುಪೇಟೆ	250
2	ಚಾಮರಾಜನಗರ	120
3	ಕೊಳ್ಳೆಗಾಲ	477
4	ಯಳಂದೂರು	965
5	ಸಂತೆಮಾರಹಳ್ಳಿ ಕ್ಷೇತ್ರ	24
		1836
	ಚಿಕ್ಕಮಗಳೂರು ಜಿಲ್ಲೆ	
1	ಕಡೂರು	77
2	ಎನ್.ಆರ್.ಪುರ	54
3	ತರೀಕೆರೆ	5
		136
	ಚಿತ್ರದುರ್ಗ ಜಿಲ್ಲೆ	
1	ಹಿರಿಯೂರು	60
2	ಹೊಸದುರ್ಗ	87
3	ಚಳ್ಳಕೆರೆ	106
4	ಚಿತ್ರದುರ್ಗ	100
5	ಮೊಳಕಾಲ್ಮೂರು	109
		462
	ದಾವಣಗೆರೆ ಜಿಲ್ಲೆ	
1	ಚನ್ನಗಿರಿ	1101
2	ಹೊನ್ನಾಳಿ	140
3	ಹರಿಹರ	175
4	ದಾವಣಗೆರೆ	7
5	ಜಗಳೂರು	75
		1498

ಧಾರವಾಡ ಜಿಲ್ಲೆ

1	ಧಾರವಾಡ	28
		28

ಗದಗ ಜಿಲ್ಲೆ

1	ಶಿರಹಟ್ಟಿ	551
2	ಗದಗ	146
3	ಮುಂಡರಗಿ	255
4	ರೋಣ	186
5	ನರಗುಂದ	3
		1141

ಗುಲ್ಬರ್ಗ ಜಿಲ್ಲೆ

1	ಜೇವರ್ಗಿ	50
2	ಅಫಜಲ್‌ಪುರ	10
3	ಶಹಪುರ	282
4	ಯಾದಗಿರಿ	272
5	ಗುಲ್ಬರ್ಗ	29
6	ಅಳಂದ	278
7	ಚಿತ್ತಾಪುರ	41
		962

ಹಾಸನ ಜಿಲ್ಲೆ

1	ಅರಸೀಕೆರೆ	70
2	ಹಾಸನ	120
3	ಬೇಲೂರು	107
4	ಚನ್ನರಾಯಪಟ್ಟಣ	300
5	ಅರಕಲಗೂಡು	300
6	ಹೊಳೆನರಸೀಪುರ	413
7	ಸಕಲೇಶಪುರ	89
		1399

ಹಾವೇರಿ ಜಿಲ್ಲೆ

1	ರಾಣಿಬೆನ್ನೂರು	23
2	ಹಾವೇರಿ	117
3	ಹಾನಗಲ್	298
4	ಹಿರೆಕೆರೂರು	36
		474

	ಕೋಲಾರ ಜಿಲ್ಲೆ	
1	ಮುಳಬಾಗಿಲು	152
2	ಗೌರಿಬಿದನೂರು	80
3	ಬಂಗಾರಪೇಟೆ	295
4	ಶಿಡ್ಲಘಟ್ಟ	130
5	ಬಾಗೇಪಲ್ಲಿ	125
6	ಚಿಕ್ಕಬಳ್ಳಾಪುರ	300
7	ಚಿಂತಾಮಣಿ	15
8	ಶ್ರೀನಿವಾಸಪುರ	52
9	ಕೋಲಾರ	51
10	ಮಾಲೂರು	60
11	ಗುಡಿಬಂಡೆ	40
		1300
	ಕೊಪ್ಪಳ ಜಿಲ್ಲೆ	
1	ಗಂಗಾವತಿ	240
2	ಕೊಪ್ಪಳ	4871
3	ಕುಷ್ಟಗಿ	50
		5161
	ಮಂಡ್ಯ ಜಿಲ್ಲೆ	
1	ಮಂಡ್ಯ	225
2	ಕೆ.ಆರ್.ಪೇಟೆ	100
3	ಪಾಂಡವಪುರ	65
4	ಮದ್ದೂರು	600
5	ಮಳವಳ್ಳಿ	719
6	ಶ್ರೀರಂಗಪಟ್ಟಣ	504
7	ನಾಗಮಂಗಲ	236
		2449
	ಮೈಸೂರು ಜಿಲ್ಲೆ	
1	ಹೆಚ್.ಡಿ.ಕೋಟೆ	284
2	ಹುಣಸೂರು	852
3	ಟಿ.ನರಸೀಪುರ	1080
4	ನಂಜನಗೂಡು	447

5	ಪಿರಿಯಾಪಟ್ಟಣ	100
6	ಮೈಸೂರು	369
7	ಕೆ.ಆರ್.ನಗರ	179
		3311
	ರಾಯಚೂರು ಜಿಲ್ಲೆ	
1	ರಾಯಚೂರು	340
2	ಲಿಂಗಸಗೂರು	105
		445
	ಶಿವಮೊಗ್ಗ ಜಿಲ್ಲೆ	
1	ಶಿವಮೊಗ್ಗ	213
2	ಸಾಗರ	20
3	ಸೊರಬ	34
4	ಶಿಕಾರಿಪುರ	265
5	ಭದ್ರಾವತಿ	100
6	ಹೊಸನಗರ	12
		644
	ತುಮಕೂರು ಜಿಲ್ಲೆ	
1	ತುಮಕೂರು	100
2	ತಿಪಟೂರು	85
3	ಚಿಕ್ಕನಾಯಕನಹಳ್ಳಿ	94
4	ಕೊರಟಗೆರೆ	116
5	ತುರುವೆಕೆರೆ	184
6	ಗುಬ್ಬಿ	45
7	ಸಿರಾ	25
8	ಮಧುಗಿರಿ	8
		657
	ಉತ್ತರ ಕನ್ನಡ ಜಿಲ್ಲೆ	
1	ಕುಮಟ	831
2	ಹೊನ್ನಾವರ	401
3	ಭಟ್ಕಳ್	286
4	ಮುಂಡಗೋಡು	32

5	ಸಿರ್ಸಿ	48
6	ಹಳಿಯಾಳ	97
7	ಕಾರವಾರ	805
8	ಅಂಕೋಲ	294
		2794
	ಉಡುಪಿ ಜಿಲ್ಲೆ	
1	ಉಡುಪಿ	413
2	ಕುಂದಾಪುರ	688
3	ಬೈಂದೂರು	536
4	ಕಾರ್ಕಳ	200
		1837
	ದಕ್ಷಿಣ ಕನ್ನಡ ಜಿಲ್ಲೆ	
1	ಮಂಗಳೂರು	141
		141
	ಒಟ್ಟು	**30518**

1021(1556) ಶ್ರೀ ರಘುಪತಿ ಭಟ್.ಕೆ.(ಉಡುಪಿ).: ಮಾನ್ಯ ಮುಖ್ಯ ಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದ ಕರಾವಳಿ ತೀರದ ಮೀನುಗಾರರಿಗೆ ಸಾಂಪ್ರದಾಯಿಕ ದೋಣಿಗಳಿಂದ ಮೀನುಗಾರಿಕೆ ಮಾಡಲು ಮಳೆಗಾಲದಲ್ಲಿ ಅವಕಾಶ ಕಲ್ಪಿಸಲಾಗಿದೆಯೇ;

ಆ) 25(ಹೆಚ್‌ಪಿ) ಅಶ್ವ ಶಕ್ತಿಗಿಂತ ಕಡಿಮೆ ಇಂಜಿನ್ ಅಳವಡಿಸಿದ ನಾಡದೋಣಿಗಳಿಗೆ ಮೀನುಗಾರಿಕೆ ನಡೆಸಲು ಸರ್ಕಾರ ಅವಕಾಶ ಕಲ್ಪಿಸುವುದೇ;

ಇ) ನಾಡದೋಣಿ ಮೀನುಗಾರರು ಬಹಳ ಹಿಂದಿನಿಂದಲೂ ಸಾಂಪ್ರದಾಯಿಕ ದೋಣಿಯಿಂದ ಮೀನುಗಾರಿಕೆ ಮಾಡುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಬಂದಿದ್ದಲ್ಲಿ, ಸರ್ಕಾರವು ಕೈಗೊಂಡ ಕ್ರಮವೇನು?

ಶ್ರೀ ಧರ್ಮಸಿಂಗ್ (ಮುಖ್ಯ ಮಂತ್ರಿಗಳು) :

ಅ) ಹೌದು. ಸಾಂಪ್ರದಾಯಿಕ ದೋಣಿಗಳಿಂದ ಮಳೆಗಾಲದಲ್ಲಿ ಮೀನುಗಾರಿಕೆ ಮಾಡಲು ಯಾವುದೇ ನಿಷೇಧವಿರುವುದಿಲ್ಲ.

ಆ) ಈ ವಿಚಾರವು ಪರಿಶೀಲನೆಯಲ್ಲಿದೆ.

ಇ) ಹೌದು

ನಾಡದೋಣಿಗಳಿಂದ ಮೀನುಗಾರರು ಮೀನುಗಾರಿಕೆ ಮಾಡುತ್ತಾ ಬಂದಿದ್ದಾರೆ.

ಈ) ರಾಜ್ಯದ ಕರಾವಳಿ ತೀರದ ಮೀನುಗಾರರಿಗೆ ಸಾಂಪ್ರದಾಯಿಕ ದೋಣಿಗಳಿಂದ ಮೀನುಗಾರಿಕೆ ಮಾಡಲು ಮಳೆಗಾಲದಲ್ಲಿ ಯಾವುದೇ ನಿಷೇಧವನ್ನು ಹೇರಿರುವುದಿಲ್ಲ. ಆದುದರಿಂದ, ಸಾಂಪ್ರದಾಯಿಕ ಮೀನುಗಾರರು ಮಳೆಗಾಲದ ಅವಧಿಯಲ್ಲಿ ಮೀನುಗಾರಿಕೆ ಮಾಡಲು ಯಾವುದೇ ತೊಂದರೆಗಳು ಇರುವುದಿಲ್ಲ ಆದರೆ ಯಾಂತ್ರೀಕೃತ ದೋಣಿಗಳಿಂದ ಮಳೆಗಾಲದ ನಿಷೇಧಿತ ಅವಧಿಯಲ್ಲಿ ಮೀನುಗಾರಿಕೆ ಮಾಡುವುದನ್ನು ನಿಷೇಧಿಸಲಾಗಿದೆ.

1027(155) ಶ್ರೀ ಸಿ.ಟಿ.ರವಿ (ಚಿಕ್ಕಮಗಳೂರು) ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಏತನೀರಾವರಿ ಯೋಜನೆಗಳಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಸ್ಪಷ್ಟ ನೀತಿಯನ್ನು ರೂಪಿಸಿದೆಯೇ;

ಆ) ರಾಜ್ಯದಲ್ಲಿ ಈವರೆಗೂ ರೂಪಿಸಿರುವ ಏತ ನೀರಾವರಿ ಯೋಜನೆಗಳ್ಯಾವುವು;

ಇ) ಇವುಗಳ ನಿರ್ವಹಣೆ ಜವಾಬ್ದಾರಿ ಯಾರದು ಹಾಗೂ ವಿದ್ಯುತ್ ಬಿಲ್ಲಿನ ಶುಲ್ಕ ಪಾವತಿಯಾಗದೆ, ಇರುವುದು ನಿಜವೇ;

ಈ) ಹಾಗಿದ್ದಲ್ಲಿ ಕಾರಣಗಳೇನು;

ಉ) ಇದರಿಂದ ಸ್ಥಗಿತಗೊಂಡಿರುವ ಕಾಮಗಾರಿಗಳೆಷ್ಟು :

ಊ) ಏತ ನೀರಾವರಿ ನೀತಿಯನ್ನು ರಚಿಸಲು ಮುಂದಾಗುವುದೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು) :

ಅ) ಪರಿಶೀಲನೆಯಲ್ಲಿದೆ.

ಆ) ರಾಜ್ಯದಲ್ಲಿ ಇದುವರೆವಿಗೂ ಭಾರಿ ಮತ್ತು ಮಧ್ಯಮ ನೀರಾವರಿ ಅಡಿಯಲ್ಲಿ 142 ಹಾಗೂ ಸಣ್ಣ ನೀರಾವರಿ ಇಲಾಖೆ ಅಡಿಯಲ್ಲಿ 462 ಏತ ನೀರಾವರಿ ಯೋಜನೆಗಳನ್ನು ರೂಪಿಸಲಾಗಿದೆ.

ಇ,ಈ) ಇವುಗಳ ನಿರ್ವಹಣೆ ಬೃಹತ್ ನೀರಾವರಿ ಮತ್ತು ಸಣ್ಣ ನೀರಾವರಿ ಇಲಾಖೆಗಳು ವಹಿಸಿ ಕೊಂಡಿವೆ. ಏತ ನೀರಾವರಿ ಯೋಜನೆಗಳಲ್ಲಿ ಸ್ಥಗಿತ ಅವಧಿಗೆ ವಿದ್ಯುತ್ ಶುಲ್ಕವಿಧಿಸುತ್ತಿರುವುದರಿಂದ ಹಲವು ಯೋಜನೆಗಳಲ್ಲಿ ಶುಲ್ಕದ ಪಾವತಿ ಆಗಿರುವುದಿಲ್ಲ.

ಉ) ಭಾರಿ ಮತ್ತು ಮಧ್ಯಮ ನೀರಾವರಿ ಅಡಿಯಲ್ಲಿ 10 ಹಾಗೂ ಸಣ್ಣ ನೀರಾವರಿ ಇಲಾಖೆಯಡಿಯಲ್ಲಿ 282 ಯೋಜನೆಗಳು ವಿವಿಧ ಕಾರಣಗಳಿಂದ ಸ್ಥಗಿತಗೊಂಡಿರುತ್ತದೆ.

ಊ) ರಾಜ್ಯದಲ್ಲಿರುವ ಏತ ನೀರಾವರಿ ಯೋಜನೆಗಳ ಬಗ್ಗೆ ಸಮಗ್ರ ನೀತಿ ನಿರೂಪಣೆ ರಚನೆಯ ಬಗ್ಗೆ ಪ್ರಸ್ತಾವನೆ ಸರ್ಕಾರದ ಮಟ್ಟದಲ್ಲಿ ಪರಿಶೀಲನೆಯಲ್ಲಿದೆ.

1030(1535) ಶ್ರೀ ಸಿ.ಟಿ.ರವಿ (ಚಿಕ್ಕಮಗಳೂರು) : ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಚಿಕ್ಕಮಗಳೂರು ಜಿಲ್ಲೆ ತರೀಕೆರೆ ತಾಲ್ಲೂಕು ಹೊಗರೆಖಾನ್ ಪ್ರದೇಶದಲ್ಲಿ ಗಣಿಗಾರಿಕೆಗೆ ನಡೆಸಲು ಸರ್ಕಾರ ಅನುಮತಿ ನೀಡಿದೆಯೇ;

ಆ) ಹಾಗಿದ್ದಲ್ಲಿ ಎಷ್ಟು ಎಕರೆ ಪ್ರದೇಶದಲ್ಲಿ ಗಣಿಗಾರಿಕೆಗೆ ಅನುಮತಿ ನೀಡಲಾಗಿದೆ;

ಇ) ಅನುಮತಿ ನೀಡಿರುವುದು ಯಾರಿಗೆ;

ಈ) ಗಣಿಗಾರಿಕೆಗೆ ಅನುಮತಿ ನೀಡಿರುವುದರಿಂದ ಸರ್ಕಾರಕ್ಕೆ ಬರುತ್ತಿರುವ ಆದಾಯ ಎಷ್ಟು?

ಶ್ರೀ ಧರ್ಮಸಿಂಗ್ (ಮಾನ್ಯ ಮುಖ್ಯಮಂತ್ರಿಗಳು) :

ಅ) ನೀಡಿರುವುದಿಲ್ಲ.

ಆ) ಈವರೆವಿಗೂ ಅನುಮತಿ ನೀಡಿರುವುದಿಲ್ಲ.

ಇ) ಅನ್ವಯಿಸುವುದಿಲ್ಲ.

ಈ) ಅನ್ವಯಿಸುವುದಿಲ್ಲ.

1034(1183) ರೇವುನಾಯಕ್ ಬೆಳಮಗಿ (ಕಮಲಾಪುರ) : ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಕಮಲಾಪುರದಲ್ಲಿ ಬೆಣ್ಣೆತೋರಾ ಯೋಜನೆಯಲ್ಲಿ ಮುಳುಗಡೆಯಾದ ಕಮಲಾಪುರ ಮತಕ್ಷೇತ್ರದ ಗ್ರಾಮಗಳಾದ ನಾಗೂರ, ಹಳಕಂಚಿ, ಅಂಕಲಗಿ, ಕುರಿಕೋಟಾ ಶಿರಗಾಪುರ್, ಯಕ್ಕಂಚಿ, ತೊಂಡಕಲ್,ಕಡಬೂರು ಗ್ರಾಮಗಳ ನಿರಾಶ್ರಿತರಿಗೆ ಪರಿಹಾರ ಕೊಡಲಾಗಿದೆಯೆ;

ಆ) ಪರಿಹಾರ ಕೊಡದೆ ಬಾಕಿ ಇರುವ ಕುಟುಂಬಗಳು ಎಷ್ಟು (ಗ್ರಾಮವಾರು ಮಾಹಿತಿ ನೀಡುವುದು);

ಇ) ಯಾವಾಗ ನೀಡಲಾಗುವುದು;

ಈ) ಸದರಿ ಗ್ರಾಮದ ನಿರ್ವಸಿತರಿಗೆ ಆಶ್ರಯ, ಅಂಬೇಡ್ಕರ್ ಇನ್ನಿತರ ಯೋಜನೆಯಲ್ಲಿ ಮನೆ ಕಟ್ಟಿಸಿ ಕೊಡುವುದಾಗಿ ಭರವಸೆ ಕೊಟ್ಟಿರುವುದು ನಿಜವಲ್ಲವೆ;

ಉ) ಹಾಗಿದ್ದಲ್ಲಿ, ಇಲ್ಲಿಯವರೆಗೆ ಮನೆ ಕೊಡದೇ ಇರುವುದಕ್ಕೆ ಕಾರಣಗಳೇನು;

ಊ) ಯಾವಾಗ ಮನೆ ಕೊಡಲಾಗುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು) :

ಅ) ಕಮಲಾಪುರ ಮತಕ್ಷೇತ್ರಕ್ಕೆ ಒಳಪಟ್ಟಿರುವ ಬೆಣ್ಣೆತೋರಾ ಯೋಜನೆಯ ಮುಳುಗಡೆಯಲ್ಲಿ ಬರುವ 8 ಗ್ರಾಮಗಳಿಗೆ ಪರಿಹಾರಧನ ಭಾಗಶಃ ಪಾವತಿಸಿದೆ.

ಆ) ಪರಿಹಾರ ಕೊಡದೇ ಇರುವ ಕುಟುಂಬಗಳ ವಿವರ ಈ ಕೆಳಗೆ ನೀಡಿದೆ.

ಗ್ರಾಮ	ಸಂಖ್ಯೆ
ನಾಗೂರ	270
ಕುರಿಕೋಟಾ	261
ಯಕ್ಕಂಚಿ	9
ತೊಂಡಕಲ್	1

ಇ) ಭೂಸ್ವಾಧೀನ ಮತ್ತು ಕಟ್ಟಡಗಳ ಸ್ವಾಧೀನ ಪ್ರಕ್ರಿಯೆ ಪ್ರಗತಿಯಲ್ಲಿದ್ದು ತೀರ್ಪಿನ ನಂತರ ಪರಿಹಾರ ನೀಡಲಾಗುವುದು.

ಈ) ಈ ಪ್ರಶ್ನೆಯಲ್ಲಿ ಹೇಳಿರುವ ಕಾರ್ಯಕ್ರಮಗಳು ಈ ಇಲಾಖೆಗೆ ಸಂಬಂಧಿಸಿರುವುದಿಲ್ಲ.

ಉ) ಉದ್ಭವಿಸುವುದಿಲ್ಲ.

ಊ) ಉದ್ಭವಿಸುವುದಿಲ್ಲ.

1036(1026) ಶ್ರೀಮತಿ ಶಕುಂತಲಾ ಟಿ.ಶೆಟ್ಟಿ (ಪುತ್ತೂರು) : ಮಾನ್ಯ ಕಂದಾಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದಲ್ಲಿ ಈ ಸಾಲಿನ (2004.05ನೇ) ವಿವಿಧ ಸಮಿತಿಗಳಾದ ಆಶ್ರಯ, ಆರಾಧನಾ, ಅಕ್ರಮ–ಸಕ್ರಮ, ಭೂ ನ್ಯಾಯಮಂಡಳಿಸಮಿತಿಗಳನ್ನು ರಚಿಸಿ ಅನುಷ್ಠಾನ ಗೊಳಿಸಿದೆಯೇ :

ಆ) ಇವುಗಳಿಗೆ ಸದಸ್ಯರನ್ನು ನೇಮಕಗೊಳಿಸಲಾಗಿದೆಯೇ ;

ಇ) ಇದುವರೆಗೆ ಸಮಿತಿಗಳನ್ನು ರಚನೆಮಾಡದಿದ್ದಲ್ಲಿ ಕಾರಣಗಳೇನು ಹಾಗೂ ಯಾವಾಗ ರಚಿಸಲಾಗುವುದು;

ಈ) ಸದರಿ ಸಮಿತಿಗಳಿಗೆ ನೇಮಕ ಮಾಡುವ ಸದಸ್ಯರಿಗೆ ಕನಿಷ್ಟ ಅರ್ಹತೆ ಮಾನದಂಡಗಳನ್ನು ನಿಗಧಿಪಡಿಸಲಾಗಿದೆಯೇ ; ಇಲ್ಲವಾದಲ್ಲಿ ಕಾರಣಗಳೇನು ?

ಶ್ರೀ ಎಂ.ಪಿ.ಪ್ರಕಾಶ್(ಕಂದಾಯ ಸಚಿವರು) :

ಅ) ಕರ್ನಾಟಕ ಭೂ ಸುಧಾರಣೆ ಕಾಯ್ದೆ 1961ರ ಕಲಂ 48ರ ಪ್ರಕಾರ ಈಗಾಗಲೇ ರಾಜ್ಯದ ಪ್ರತಿ ತಾಲ್ಲೂಕಿನಲ್ಲಿ ಭೂ ನ್ಯಾಯ ಮಂಡಳಿಗಳನ್ನು ರಚಿಸಿ ಅನುಷ್ಠಾನಗೊಳಿಸಲಾಗಿದೆ. ಈ ಭೂ ನ್ಯಾಯ ಮಂಡಳಿಗಳಿಗೆ ಉಪ ವಿಭಾಗಾಧಿಕಾರಿಗಳು ಅಧ್ಯಕ್ಷರಾಗಿದ್ದು ಇವರೊಂದಿಗೆ ನಾಲ್ಕು ಜನ ಅಧಿಕಾರೇತರ ಸದಸ್ಯರಿರುತ್ತಾರೆ. ಪ್ರಸ್ತುತ 2004.05ನೇ ಸಾಲಿಗೆ ಹಾಲಿ ಅಧಿಕಾರೇತರ ಸದಸ್ಯರ ಬದಲಿಗೆ ಹೊಸ ಅಧಿಕಾರೇತರ ಸದಸ್ಯರನ್ನು ನಾಮ ನಿರ್ದೇಶನ ಮಾಡುವ ಬಗ್ಗೆ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.

ವಸತಿ ಇಲಾಖೆಯ ಸುತ್ತೋಲೆ ಸಂಖ್ಯೆ ವ.ಇ.74 ಹೆಚ್.ಎ.ವೈ04 ದಿನಾಂಕ 20.11.04 ರಂತೆ ವಸತಿ ಇಲಾಖೆಯ ಪಂಚಾಯತ್‌ರಾಜ್ ಸಂಸ್ಥೆಗಳ ಮೂಲಕ ವಸತಿ ಕಾರ್ಯಕ್ರಮಗಳ ಅನುಷ್ಠಾನದ ಬಗ್ಗೆ ಮಾರ್ಗಸೂಚಿಗಳನ್ನು ಹೊರಡಿಸಿದ್ದು ಇದರನ್ವಯ ಆಶ್ರಯ ಯೋಜನೆ ಹಾಗೂ ಇತರ ಫಲಾನುಭವಿಗಳ ಆಧಾರಿತ ಯೋಜನೆಯ ಆಯ್ಕೆಯನ್ನು ಗ್ರಾಮಪಂಚಾಯ್ತಿಗಳು ಗ್ರಾಮಸಭೆಗಳ ಮೂಲಕ ಮಾಡಬೇಕಾಗುತ್ತದೆ. ಆದಕಾರಣ ಕಾನೂನು ಬದ್ಧವಾಗಿ ಆಶ್ರಯ ಸಮಿತಿಗಳನ್ನು ಪುನರ್ ರಚಿಸುವ ಅಗತ್ಯವಿರುವುದಿಲ್ಲ.

ಆರಾಧನಾ ಸಮಿತಿಗೆ ವಿಧಾನಸಭಾ ಕ್ಷೇತ್ರವಾರು ಅನುದಾನ ಒದಗಿಸಲಾಗುತ್ತದೆ. ಈ ಸಮಿತಿಗೆ ಸ್ಥಳೀಯ ಶಾಸಕರು ಅಧ್ಯಕ್ಷರಾಗಿರುತ್ತಾರೆ. ಹೊಸ ಸರ್ಕಾರ ಅಸ್ಥಿತ್ವಕ್ಕೆ ಬಂದ ನಂತರ ಆರಾಧನಾ ಸಮಿತಿಗಳನ್ನು ಪುನರ್ ರಚಿಸಲು ಪ್ರಸ್ತಾವನೆಗಳನ್ನು ಪಡೆಯಲಾಗುತ್ತಿದೆ. ಈಗಾಗಲೇ ಪ್ರಸ್ತಾವನೆಗಳು ಬಂದಿದ್ದು, ಇನ್ನೂ ಕೆಲವು ಸಮಿತಿಗಳ ಪುನರ್ರಚನೆ ಕುರಿತು ಪ್ರಸ್ತಾವನೆಗಳು ಬಂದಿದ್ದು, ಇನ್ನೂ ಕೆಲವು ಸಮಿತಿಗಳ ಪುನರ್ ರಚನೆ ಕುರಿತು ಪ್ರಸ್ತಾವನೆಗಳು ಜಿಲ್ಲಾಧಿಕಾರಿಗಳಿಂದ ಬರಬೇಕಾಗಿದೆ. ಆರಾಧನಾ ಸಮಿತಿಗಳನ್ನು ಪುನರ್ ರಚಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಅಕ್ರಮ ಸಾಗುವಳಿ ಸಕ್ರಮಿಕರಣ ಕೋರಿ ನಮೂನೆ 50 ಮತ್ತು 53ರ ಅರ್ಜಿಗಳು ರಾಜ್ಯಾದ್ಯಂತ ಬಾಕಿ ಇರುವುದರಿಂದ ಅವುಗಳನ್ನು ತಾಲ್ಲೂಕು ಮಟ್ಟದ ಬಗರ್ ಹುಕ್ಕುಂ ಸಮಿತಿಯಲ್ಲಿ ಮಂಡಿಸಿ ಇತ್ಯರ್ಥಪಡಿಸಲು ಅನುವಾಗಲು ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 94ಬಿ ಗೆ ತಿದ್ದುಪಡಿ ತಂದು ದಿನಾಂಕ : 26.4.2005ರ ಅವಧಿಗೆ ಗಡುವನ್ನು ವಿಸ್ತರಿಸಲಾಗಿದೆ. ಲೋಕಸಭೆ

ಮತ್ತು ವಿಧಾನಸಭೆ ಸರ್ಜಿತಗೊಂಡ ಚುನಾವಣಾ ಪ್ರಕ್ರಿಯೆ ಪ್ರಾರಂಭವಾದ ಕಾರಣ ಸದರಿ ತಾಲ್ಲೂಕು ಮಟ್ಟದಲ್ಲಿ ಬಗರ್ ಹುಕುಂ ಸಾಗುವಳಿ ಸಕ್ರಮೀಕರಣ ಮಿತಿಯ ಕಾರ್ಯ ಸ್ಥಗಿತಗೊಳಿಸಲಾಗಿತ್ತು. ಹೊಸ ಸರ್ಕಾರ ಅಸ್ಥಿತ್ವಕ್ಕೆ ಬಂದ ನಂತರ ಸರ್ಕಾರದ ಅಧಿಸೂಚನೆ ಸಂಖ್ಯೆ : ಆರ್‌ಡಿ 36 ಎಲ್‌ಜಿಪಿ 2004ರ ದಿ:3.9.2004ರ ರಾಜ್ಯದಲ್ಲಿನ ಈ ಹಿಂದೆ ತಾಲ್ಲೂಕು ಮಟ್ಟದಲ್ಲಿನ ಎಲ್ಲಾ ಬಗರ್ ಹುಕುಂ ಸಾಗುವಳಿ ಸಮಿತಿಗಳನ್ನು ಪುನರ್ ರಚಿಸಿ ಹೊರಡಿಸಿದ ಎಲ್ಲಾ ಅಧಿಸೂಚನೆಗಳನ್ನು ಹಿಂತೆಗೆದು ಆದೇಶಿಸುತ್ತಾ, ಬಗರ್ ಹುಕುಂ ಸಮಿತಿಗಳನ್ನು ರಚಿಸಲು ಹೊಸ ಪ್ರಸ್ತಾವನೆ ಸಲ್ಲಿಸುವಂತೆ ಎಲ್ಲಾ ಜಿಲ್ಲಾಧಿಕಾರಿಗಳಿಂದ ಪ್ರಸ್ತಾವನೆಗಳು ಬಂದಿದ್ದು ಅವು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಅ) ಭಾಗದಲ್ಲಿ ಉತ್ತರಿಸಲಾಗಿದೆ.

ಇ) ಚುನಾವಣೆಗಳನ್ನು ಘೋಷಿಸಿದ್ದರಿಂದ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿದ್ದ ಕಾರಣ ಹಿಂದೆ ರಚಿಸಲಾಗಿದ್ದ ಅಕ್ರಮ–ಸಕ್ರಮ ಹಾಗೂ ಆರಾಧನಾ ಸಮಿತಿಗಳನ್ನು ಸ್ಥಗಿತಗೊಳಿಸಲಾಗಿತ್ತ ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ ಅಕ್ರಮ–ಸಕ್ರಮ ಹಾಗೂ ಆರಾಧನಾ ಸಮಿತಿಗಳನ್ನು ರಚನೆಮಾಡುವ ಸಂಭಂಧ ಜಿಲ್ಲಾಧಿಕಾರಿಗಳಿಂದ ಪ್ರಸ್ತಾವನೆ ಪಡೆಯಲು ಕ್ರಮ ಮೈಗೊಳ್ಳಲಾಗಿದೆ. ಕೆಲವು ಪ್ರಸ್ತಾವನೆಗಳು ಈಗಾಗಲೇ ಬಂದಿದ್ದು ಇನ್ನೂ ಕೆಲವು ಪ್ರಸ್ತಾವನೆಗಳು ಬರಬೇಕಾಗಿದೆ. ಶೀಘ್ರವಾಗಿ ರಚಿಸಲಾಗುವುದು.

ಈ) ಆರಾಧನಾ ಸಮಿತಿಗಳನ್ನು ಪ್ರತಿಯೊಂದು ವಿಧಾನ ಸಭಾ ಕ್ಷೇತ್ರಕ್ಕೆ ಒಂದರಂತೆ ರಚಿಸಲಾಗಿರುತ್ತದೆ. ಕ್ಷೇತ್ರದ ಶಾಸಕರು ಅಧ್ಯಕ್ಷರಾಗಿರುತ್ತಾರೆ. ಅಧ್ಯಕ್ಷರನ್ನು ಸೇರಿಸಿ ಸಮಿತಿಯಲ್ಲಿ 8 ಜನರು ಇರುತ್ತಾರೆ. ಅಧಿಕಾರೇತರ 4 ಸದಸ್ಯರು ಹಾಗೂ 4 ಜನ ಅಧಿಕಾರಿಗಳು ಇರುತ್ತಾರೆ. ಅಧಿಕಾರೇತರ ಸದಸ್ಯರಲ್ಲಿ ಮಹಿಳೆ, ಪರಿಶಿಷ್ಟಜಾತಿ: ಪರಿಶಿಷ್ಟ ಪಂಗಡ ಮತ್ತು ಸಾಮಾನ್ಯ ವರ್ಗದವರು ತಲಾ ಒಬ್ಬರು ಸದಸ್ಯರಿರುತ್ತಾರೆ.

ಅಕ್ರಮ ಸಕ್ರಮ ಸಮಿತಿಯಲ್ಲಿ ಕರ್ನಾಟಕ ಭೂ ಕಂದಾಯ ನಿಯಮಾವಳಿ 1966ರ ನಿಯಮ 108ಇ ರನ್ವಯ ತಾಲ್ಲೂಕಿನ ಬಹುಭಾಗ ಪ್ರತಿನಿಧಿಸುವ ಚುನಾಯಿತ ವಿಧಾನ ಸಭೆ ಸದಸ್ಯರನ್ನು ಅಧ್ಯಕ್ಷರನ್ನಾಗಿ ತಾಲ್ಲೂಕಿನ ತಹಸೀಲ್ದಾರರನ್ನು ಸಮಿತಿಯ ಕಾರ್ಯದರ್ಶಿಯಾಗಿ ಇತರೆ 3 ಅಧಿಕಾರೇರತರ ಸದಸ್ಯರಲ್ಲಿ ಒಬ್ಬರು ಸಾಮಾನ್ಯ ವರ್ಗ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಒಬ್ಬರು ಮಹಿಳಾ ಸದಸ್ಯರಿರುತ್ತಾರೆ. ತಾಲ್ಲೂಕಿನಲ್ಲಿ ಅರ್ಜಿಗಳು ಹೆಚ್ಚಾಗಿದ್ದಲ್ಲಿ ನಿಯಮಾವಳಿ 108ಇ ರನ್ವಯ ಹೆಚ್ಚುವರಿ ಸಮಿತಿಯನ್ನು ಉಪ ವಿಭಾಗಾಧಿಕಾರಿಯನ್ನು ಅಧ್ಯಕ್ಷರನ್ನಾಗಿ ಸಂಬಂಧಿಸಿದ ತಹಸೀಲ್ದಾರರನ್ನು ಕಾರ್ಯದರ್ಶಿಯನ್ನಾಗಿ ಒಬ್ಬರು ಮಹಿಳಾ, ಒಬ್ಬರು ಪರಿಶಿಷ್ಟಜಾತಿ, ಪರಿಶಿಷ್ಟ ಪಂಗಡ ಸದಸ್ಯರಾಗಿ ಒಬ್ಬರು ಸಾಮಾನ್ಯ ಸದಸ್ಯರನ್ನೊಳಗೊಂಡಂತೆ ತಚಿಸಲಾಗುತ್ತಿದೆ.

1042(1025) ಶ್ರೀ ಸಂಗಮೇಶ್ವರ ಬಿ.ಕೆ(ಭದ್ರಾವತಿ) : ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಭದ್ರಾಜಲಾಶಯ ಮತ್ತು ಗೊಂದಿ ಡ್ಯಾಂಗಳಲ್ಲಿ ಹೂಳು ತುಂಬಿರುವುದರಿಂದ ಜಲಾಶಯದ ಡ್ಯಾಂನ ನೀರು ಸಂಗ್ರಹಣಾ ಸಾಮರ್ಥ್ಯ ಕುಂಠಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ. ಈ ಬಗ್ಗೆ ಸರ್ಕಾರಕ್ಕೆ ವರದಿ ಸಲ್ಲಿಸಲಾಗಿದೆಯೇ;

ಆ) ಹೂಳೆತ್ತಲು ಪ್ರಸಕ್ತರ ಅಥವಾ ಹಿಂದಿನ ಸಾಲುಗಳಲ್ಲಿನ ಆಯವ್ಯಯದಲ್ಲಿ ಹಣವನ್ನು ಕಾದಿರಿಸಲಾಗಿದೆಯೇ:

ಇ) ಭದ್ರಾ ಎಡದಂಡೆ ನಾಲಾ, ಮುಖ್ಯ ನಾಲಾ ಮತ್ತು ಉಪನಾಲೆಗಳ ತೂಬು ಆಧುನೀಕರಣ ದುರಸ್ತಿಗಾಗಿ 2001–2002, 2002–2003, 2003–2004 ರಲ್ಲಿ ಮಾಡಲಾದ ವೆಚ್ಚವೆಷ್ಟು:

ಈ) ಈ ರೀತಿ ದುರಸ್ತಿ ಪಡಿಸಿದ ನಾಲೆಯ ಉದ್ದ ಎಷ್ಟು ?

ಶ್ರೀ ಮಲ್ಲಿಕಾರ್ಜುನ ಖರ್ಗೆ(ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು) :

ಅ) ಭದ್ರಾ ಜಲಾಶಯದ ನೀರು ಸಂಗ್ರಹಣಾ ಸಾಮರ್ಥ್ಯ ಕಡಿಮೆ ಆಗುವ ಕುರಿತು ಕರ್ನಾಟಕ ಇಂಜಿನಿಯರಿಂಗ್ ಸಂಶೋಧನಾ ಸಂಸ್ಥೆ ಕೃಷ್ಣರಾಜಸಾಗರ ಇವರು ಸರ್ವೆ ಮಾಡಿದ್ದು ಸದರಿ ವರದಿಯಂತೆ ಹೊಳು ತುಂಬುವ ಪ್ರಮಾಣವು ಬಹಳ ಕಡಿಮೆ ಇರುತ್ತದೆ. ಈ ಬಗ್ಗೆ ಸರ್ಕಾರಕ್ಕೆ ವರದಿ ಬಂದಿದೆ. ಗೊಂದಿ ಡ್ಯಾಂ ಅಣೆಕಟ್ಟು ಆಗಿರುವುದರಿಂದ ಯಾವುದೇ ಸಂಗ್ರಹಣಾ ಸಾಮರ್ಥ್ಯವಿರುವುದಿಲ್ಲ.

ಆ) ನಿರ್ದಿಷ್ಟವಾಗಿ ಹಣವನ್ನು ಕಾಯ್ದಿರಿಸಿರುವುದಿಲ್ಲ.

ಇ) 2001–02,2002–03 ಹಾಗೂ 2003–04 ರ ಸಾಲಿನಲ್ಲಿ ಭದ್ರಾ ಆಧುನೀಕರಣ ಅಡಿಯಲ್ಲಿ ಭದ್ರಾ ಎಡದಂಡೆ ನಾಲಾ, ಮುಖ್ಯನಾಲಾ ಮತ್ತು ಉಪನಾಲೆಗಳ ತೂಬು ಆಧುನೀಕರಣ : ದುರಸ್ತಿಗಾಗಿ ಯಾವುದೇ ಹಣವನ್ನು ವೆಚ್ಚ ಮಾಡಿರುವುದಿಲ್ಲ.

ಆದಾಗ್ಯೂ ಪ್ರತಿ ವರ್ಷ ನಾಲಾ ನಿರ್ವಹಣಾ ಅನುದಾನದಲ್ಲಿ ಅವಶ್ಯಕನಿರ್ವಹಣಾ ಕಾಮಗಾರಿಗಳನ್ನು ನಿರ್ವಹಿಸಲಾಗುತ್ತಿದೆ.

ಈ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

1043(1276) ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ (ಚಾಮರಾಜ) : ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಮೈಸೂರು ನಗರ ಪಾಲಿಕೆಯ ವಾಣಿ ವಿಲಾಸ ನೀರು ಸರಬರಾಜು ಕಾರ್ಯಾಲಯದಲ್ಲಿ ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಗುತ್ತಿಗೆ ಕಾರ್ಮಿಕರು ಯಾರ್ಯಾರು;

ಆ) ಈ ಪೈಕಿ ಜಲಮಂಡಳಿಯಿಂದ ಹಸ್ತಾಂತರಗೊಂಡ ಮಂದಿ ಯಾರ್ಯಾರು:(ಹುದ್ದೆವಾರು ವಿವರ ನೀಡುವುದು);

ಇ) ಮೈಸೂರು ನಗರದ ಸಮರ್ಪಕ ನೀರು ಸರಬರಾಜು ನಿರ್ವಹಣೆಗೆ ಅಗತ್ಯವಿರುವ ಸಿಬ್ಬಂದಿ ಎಷ್ಟು; ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿ ಎಷ್ಟು ;

ಈ) ಮೈಸೂರು ನಗರ ಪಾಲಿಕೆ ವಾಣಿವಿಲಾಸ ನೀರು ಸರಬರಾಜು ಕಾರ್ಯಾಲಯದಲ್ಲಿ ಹಾಲಿ ಗುತ್ತಿಗೆ ಕಾರ್ಮಿಕರಿಗೆ ಯಾವ ರೀತಿ ವೇತನ ಪಾವತಿಸಲಾಗುತ್ತಿದೆ ಹಾಗೂ ಜಲ ಮಂಡಳಿಯ ಅಧಿಕಾರ ಅವಧಿಯಲ್ಲಿ ಯಾವ ರೀತಿ ವೇತನ ಪಾವತಿಸಲಾಗುತ್ತಿತ್ತು;

ಉ) ವಾಣಿ ವಿಲಾಸ ನೀರು ಸರಬರಾಜು ಕಾರ್ಯಾಲಯದಲ್ಲಿ ಹಾಲಿ ಇರುವ ಗುತ್ತಿಗೆ ಕಾರ್ಮಿಕರು ನಿರಂತರವಾಗಿ ಎಷ್ಟು ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿದ್ದಾರೆ; ಸದರಿಯವರಿಗೆ ಗುತ್ತಿಗೆದಾರರಿಂದ ವೇತನ, ಪಿ.ಎಫ್. ಮೊತ್ತದ ಹಂಚಿಕೆಯಲ್ಲಿ ವಂಚನೆ ಯಾಗುತ್ತಿರುವುದು ಸರ್ಕಾರದ ಅರಿವಿಗೆ ಬಂದಿದೆಯೇ ;

ಊ) ಹಾಗಿದ್ದಲ್ಲಿ, ಗುತ್ತಿಗೆದಾರರ ವಿರುದ್ಧ ಯಾವ ರೀತಿ ಕ್ರಮ ಕೈಗೊಳ್ಳಲಾಗಿದೆ;

ಋ) ವಾಣಿ ವಿಲಾಸ ನೀರು ಸರಬರಾಜು ಕಾರ್ಯಾಲಯದಲ್ಲಿ ನೀರು ಸರಬರಾಜು ನಿರ್ವಹಣೆಗಾಗಿ ಗುತ್ತಿಗೆ ಕಾರ್ಮಿಕರನ್ನು ನಿಯೋಜಿಸಲು ಪ್ರಧಾನ ಉದ್ಯೋಗದಾತರಾದ ನಗರ ಪಾಲಿಕೆಯು ಕಾರ್ಮಿಕ ಇಲಾಖೆಯಲ್ಲಿ ನೊಂದಣಿ ಮಾಡಿಸಿದೆಯೇ ;

ೠ) ಹಾಲಿ ಗುತ್ತಿಗೆದಾರರು ಸದರಿ ಉದ್ದೇಶಕ್ಕಾಗಿ ಕಾನೂನುಬದ್ಧವಾಗಿ ಕಾರ್ಮಿಕ ಇಲಾಖೆಯಿಂದ ಲೈಸನ್ಸ್ ಪಡೆದಿದ್ದಾರೆಯೇ ;

ಎ) ಇಲ್ಲದಿದ್ದಲ್ಲಿ, ಕಾರ್ಮಿಕ ನಿಯಮಗಳನುಸಾರ ಕ್ರಿಮಿನಲ್ ಅಪರಾಧ ವಲ್ಲವೆ?

ಶ್ರೀ ಧರ್ಮಸಿಂಗ್(ಮುಖ್ಯ ಮಂತ್ರಿಗಳು):

ಅ) ಮೈಸೂರು ನಗರದಲ್ಲಿ ನೀರು ಸರಬರಾಜು ನಿರ್ವಹಣೆ ಗುತ್ತಿಗೆದಾರರಿಂದ 268 ಮಂದಿಯನ್ನು ಪಡೆದು ಕೆಲಸ ನಿರ್ವಹಿಸಲಾಗುತ್ತಿದೆ.

ಆ) 179 ಮಂದಿ ಕೆಲಸ ವನಿರ್ವಹಿಸುತ್ತಿದ್ದರು.

ಇ) ಮೈಸೂರು ನಗರದ ನೀರು ಸರಬರಾಜಿಗೆ ಅಗತ್ಯವಿರುವ ಸಿಬ್ಬಂದಿ 697 ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿ

ಖಾಯಂ ನೌಕರರು	–	360
ಗುತ್ತಿಗೆದಾರರ ವತಿಯಿಂದ	–	268
ಒಟ್ಟು	–	**628**

ಈ) ಟೆಂಡರ್ ಕರೆದು ಗುತ್ತಿಗದಾರರನ್ನು ನೇಮಿಸಲಾಗಿದೆ. ನಗರ ಪಾಲಿಕೆ ಗುತ್ತಿಗೆದಾರರಿಗೆ ಹಣ ಪಾವತಿ ಮಾಡಿ ಗುತ್ತಿಗೆದಾರರು ನೌಕರರಿಗೆ ಹಣ ಪಾವತಿ ಮಾಡುತ್ತಿದ್ದಾರೆ. ಜಲಮಂಡಳಿಯ ಅವಧಿಯಲ್ಲಿ ಹಣ ಸಂದ ರಸೀತಿ (ಹ್ಯಾಂಡ್ ರಸಿಟ್) ಆಧಾರದಲ್ಲಿ ವೇತನ ಪಾವತಿಸಲಾಗುತ್ತಿತ್ತು.

ಉ) ಹೌದು. 20002ನೇ ಸಾಲಿನಿಂದ ಗುತ್ತಿಗೆದಾರರ ಮೂಲಕ ಕಾರ್ಯನಿರ್ವಹಿಸುತ್ತಿದ್ದಾರೆ.

ಊ) ಪಿ.ಎಫ್. ಮೊತ್ತದ ಪಾವತಿ ವಿಚಾರವಾಗಿ ಸಹಾಯಕ ಆಯುಕ್ತರು, ಕಾರ್ಮಿಕ ಭವಿಷ್ಯ ನಿಧಿ ಇಲಾಖೆ, ಮೈಸೂರು ಇವರು ಪ್ರಕರಣ ಸಂ. ಕೆ.ಎನ್/ಪಿ.ಎಫ್. 36266/2004 ಮತ್ತು ಸಂ.ಕೆ.ಎನ್/ಪಿ.ಎಫ್/36252/2004 ವಿಚಾರಣೆ ನಡೆಸುತ್ತಿದ್ದಾರೆ. ಇಲ್ಲಿ ಆಗುವ ತೀರ್ಮಾನದಂತೆ ಕ್ರಮ ಕೂಗೊಳ್ಳಲಾಗುವುದು.

ಋ) ನೋಂದಣಿ ದೃಢೀಕರಣ ಪತ್ರವನ್ನು ಪಡೆಯಲಾಗಿರುತ್ತದೆ.

ೠ,ಎ) ಹಾಲಿ ಗುತ್ತಿಗೆದಾರರು ಲೈಸನ್ಸ್‌ನ್ನು ಪಡೆದಿದ್ದು, ಅದನ್ನು ಸಹಾಯಕ ಕಾರ್ಮಿಕ ಆಯುಕ್ತರು 12/2004ರಲ್ಲಿ ರದ್ದುಪಡಿಸಿದ್ದರು. ಇದನ್ನು ಪ್ರಶ್ನಿಸಿ ಗುತ್ತಿಗೆದಾರರು ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿರುತ್ತಾರೆ.

1044(1277) ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ (ಚಾಮರಾಜ) : ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಮೈಸೂರು ನಗರದ ಕುವೆಂಪು ನಗರದಲ್ಲಿರುವ ಉದಯರವಿ ರಸ್ತೆಯಿಂದ ಸಿಲ್ಕ್ ಫ್ಯಾಕ್ಟರಿ ವೃತ್ತದವರೆಗೆ ಸಂಪರ್ಕ ಕಲ್ಪಿಸಲು ರೈಲ್ವೆ ಅಂಡರ್ ಬ್ರಿಡ್ಜ್ ಯೋಜನೆಯ ವೆಚ್ಚಕ್ಕಾಗಿ ಮೈಸೂರು ನಗರ ಪಾಲಿಕೆ ಎಷ್ಟು ಹಣವನ್ನು ರೈಲ್ವೆ ಇಲಾಖೆಗೆ ಪಾವತಿಸಿದೆ;

ಆ) ಈ ಯೋಜನೆಯ ಒಟ್ಟು ವೆಚ್ಚ ಎಷ್ಟು;

ಇ) ಈ ಯೋಜನೆಯನ್ನು ಯಾವಾಗ ಪ್ರಾರಂಭಿಸಿ ಎಷ್ಟು ಅವಧಿಯಲ್ಲಿ ಪೂರ್ಣ ಗೊಳಿಸಲು ಯೋಜಿಸಲಾಗಿದೆ?

ಶ್ರೀ ಧರ್ಮಸಿಂಗ್(ಮುಖ್ಯ ಮಂತ್ರಿಗಳು) :

ಅ) ಇಲ್ಲ

ಆ) ರೂ.200.00 ಲಕ್ಷಗಳು

ಇ) ರೈಲ್ವೆಗೆ ಕೆಳ ಸೇತುವೆಯ ಅಂದಾಜು ಮೊತ್ತವಾದ ರೂ.120.00 ಲಕ್ಷಗಳನ್ನು ಪಾವತಿಸಿದ ದಿನಾಂಕದಿಂದ ಸುಮಾರು 9 ತಿಂಗಳುಗಳಲ್ಲಿ ಕೆಲಸವನ್ನು ಪೂರ್ಣ ಗೊಳಿಸಲಾಗುವುದು.

1045(1278) ಶ್ರೀ ಶಂಕರಲಿಂಗೇಗೌಡ (ಚಾಮರಾಜ) : ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಹೊಂಗಳ್ಳಿ ಜಲಶುದ್ಧೀಕರಣಗಾರಕ್ಕೆ ಕಾವೇರಿ ನದಿ ಪಾತ್ರದಿಂದ ನೀರು ಸರಬರಾಜು ಮಾಡುವ ಯೋಜನೆಯು ಯಾವ ಹಂತದಲ್ಲಿದೆ;

ಆ) ಈ ಯೋಜನೆಯನ್ನು ಪ್ರಾರಂಭ ಮಾಡಿ ಎಂದು ಪೂರ್ಣಗೊಳಿಸಬೇಕಾಗಿತ್ತು.

ಇ) ಈ ಯೋಜನೆಯ ಒಟ್ಟು ಅಂದಾಜು ವೆಚ್ಚ ಎಷ್ಟು ;

ಈ) ಈ ಯೋಜನೆಯಿಂದ ಎಷ್ಟು ನೀರು ತರಬಹುದು; ಇದರ ಉಪಯೋಗವನ್ನು ಯಾವ ಯಾವ ಬಡಾವಣೆಯ ನಾಗರೀಕರು ಪಡೆಯಬಹುದಾಗಿದೆ?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) :

ಅ) ಮೈಸೂರು ನಗರಕ್ಕೆ ಕಾವೇರಿ ನದಿ ದಂಡೆಯಿಂದ ನೀರು ಸರಬರಾಜಯ ಮಾಡಲು ರೂ.885.00 ಲಕ್ಷಗಳ ಯೋಜನೆಯನ್ನು ರೂಪಿಸಲಾಗಿದ್ದು, ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿರುವುದರಿಂದ ಉದ್ಭವಿಸುವುದಿಲ್ಲ.

ಇ) ರೂ. 885.00 ಲಕ್ಷಗಳು.

ಈ) ಸದರಿ ಯೋಜನೆಯಿಂದ 9ಎಂ.ಜಿ.ಡಿ. ನೀರನ್ನು ಹೊಂಗಳ್ಳ ಜಲಶುದ್ಧೀಕರಣ ಘಟಕಕ್ಕೆ ಪಂಪು ಮಾಡಲಾಗುವುದು. ಈ ನೀರನ್ನು 2.5ಲಕ್ಷ ಜನತೆಗೆ ಉಪಯೋಗಿಸಬಹುದಾಗಿದೆ ಮತ್ತು ಮೈಸೂರು ನಗರದ ಪಶ್ಚಿಮ ಮತ್ತು ದಕ್ಷಿಣ ಭಾಗದ ಬಡಾವಣೆಗಳಿಗೆ ಸರಬರಾಜು ಮಾಡಬಹುದು.

1046(1279) ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ (ಚಾಮರಾಜ) : ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಮೈಸೂರು ನಗರದ ಕೆ.ಆರ್.ವೃತ್ತದ ಬಳಿ ಚಿಕ್ಕ ಗಡಿಯಾರದಿಂದ ಮಕ್ಕಾಜಿ ಚೌಕದವರೆಗೆ ನಿರ್ಮಿಸಲು ಉದ್ದೇಶಿಸಿರುವ ಸೂಪರ್ ಪ್ಯಾಸೇಜಸ್‌ನ ಯೋಜನಾ ವಿವರಗಳೇನು ? ಅದು ಯಾವ ಹಂತದಲ್ಲಿದೆ?

ಆ) ಈ ಯೋಜನೆಯ ಅಂದಾಜು ವೆಚ್ಚ ಎಷ್ಟು?

ಇ) ಈ ಯೋಜನೆಯನ್ನು ಯಾವಾಗ ಪ್ರಾರಂಭಿಸಲಾಗುವುದು; ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಧರ್ಮಸಿಂಗ್(ಮುಖ್ಯ ಮಂತ್ರಿಗಳು) :

ಅ) ಕೆ.ಆರ್ ವೃತ್ತದಲ್ಲಿ 4 ಜಾಗದಲ್ಲಿ ರಸ್ತೆ ಪಾದಾಚಾರಿಗಳಿಗೆ ಸಬ್‌ವೇ ನಿರ್ಮಾಣಕ್ಕೆ ನಿರ್ಧರಿಸಲಾಗಿದೆ. ಸದರಿಕಾಮಗಾರಿಗೆ ಸೂಕ್ತ ಯೋಜನಾ ವರದಿ ತಯಾರಿಸಿ ಕೊಡಲು ಕನ್ಸಲ್ಟೆಂಟ ರವರುಗಳಿಂದ ಟೆಂಡರ್ ಕರೆಯಲಾಗಿದ್ದು, ಸರಿಯಾದ ತಾಂತ್ರಿಕ ಬಿಡ್ ನೀಡದೆ ಇದ್ದುದರಿಂದ ಈ ಟೆಂಡರ್‌ಗಳನ್ನು ತಿರಸ್ಕರಿಸಲಾಗಿದೆ. ಈಗ ಹೊಸದಾಗಿ ಟೆಂಡರ್ ಕರೆಯುವ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ.

ಆ) ಟೆಂಡರ್ ಕರೆದು ಕಾರ್ಯ ಸಾಧು ವರದಿ ನೀಡಿದ ನಂತರ ಅಂದಾಜನ್ನು ತಯಾರಿಸಲಾಗುವುದು.

ಇ) ಕಾರ್ಯ ಸಾಧು ವರದಿ ತಯಾರಾದ ಮೇಲೆ ಈ ಬಗ್ಗೆ ನಿರ್ಧರಿಸಲಾಗುವುದು.

1048(233) ಶ್ರೀ ಶಶಿಕಾಂತ್ ಅಕ್ಕಪ್ಪ ನಾಯಕ್ (ಹುಕ್ಕೇರಿ) : ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಹುಕ್ಕೇರಿ ಮತಕ್ಷೇತ್ರದಲ್ಲಿ ಬಸ್ ಸಂಚಾರ ಸಮರ್ಪಕವಾಗಿ ಇಲ್ಲದೇ ಸಾರ್ವಜನಿಕರು ಖಾಸಗಿ ವಾಹನಗಳಲ್ಲಿ ಮಿತಿಮೀರಿದ ಸಂಖ್ಯೆಯಲ್ಲಿ ಪ್ರಯಾಣಿಕರನ್ನು ತುಂಬುತ್ತಿರುವುದರಿಂದ ಅದನ್ನು ತಡೆಗಟ್ಟಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಆ) ಈ ಭಾಗದಲ್ಲಿ ಖಾಸಗಿ ವಾಹನಗಳ ಸಂಚಾರ ತಡೆಗಟ್ಟಲು ಸರ್ಕಾರ ಹಾಕಿ ಕೊಂಡಿರುವ ಕಾರ್ಯಕ್ರಮಗಳೇನು?

ಇ) ಸಾರಿಗೆ ಸಂಸ್ಥೆಯು ವಾಹನಗಳ ಕಾರ್ಯಚರಣೆಗೆ ಯಾವ ಕ್ರಮಗಳನ್ನು ಕೈಗೊಳ್ಳಲಾಗುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ(ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು) :

ಅ) ಖಾಸಗಿ ವಾಹನಗಳ ತಪಾಸಣೆ ನಡೆಸಿ ಮಿತಿಮೀರಿದ ಸಂಖ್ಯೆಯಲ್ಲಿ ಪ್ರಯಾಣಿಕರನ್ನು ತುಂಬಿರುವ ವಾಹನಗಳ ವಿರುದ್ಧ ಕಾನೂನಿನ್ವಯ ಪ್ರಕರಣ ದಾಖಲಿಸಲಾಗಿದೆ.

ಆ) ತಪಾಸಣೆ ಕ್ರಮ ಕೈಗೊಳ್ಳಲಾಗುವುದು.

ಇ) ಗೋಕಾಕ್ ಸಂಕೇಶ್ವರ ಮತ್ತು ಚಿಕ್ಕೋಡಿ ಘಟಕಗಳಿಂದ ಈಗಾಗಲೇ ಆಚರಣೆ ಮಾಡುತ್ತಿರುವ 360 ಸುತ್ತುವಳಿಗಳ ಜೊತೆಗೆ ಹೆಚ್ಚುವರಿಯಾಗಿ 20 ಸುತ್ತುವಳಿಗಳನ್ನು ಕಾರ್ಯಾಚರಣೆಗೊಳಿಸಲಾಗುವುದು.

1049(241) ಶ್ರೀ ಶಶಿಕಾಂತ್ ಅಕ್ಕಪ್ಪ ನಾಯಕ್ (ಹುಕ್ಕೇರಿ) : ಮಾನ್ಯ ಮುಖ್ಯ ಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಕರ್ನಾಟಕ-ಮಹಾರಾಷ್ಟ್ರ ನಡುವಿನ ಗಡಿ ಸಮಸ್ಯೆ ಇತ್ಯರ್ಥಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಆ) ಇದಕ್ಕಾಗಿ ನೇಮಕಗೊಂಡಿರುವ ದಾತಾರ್ ಸಮಿತಿಗೆ ಹೆಚ್ಚಿನ ಅಧಿಕಾರ ಹಾಗೂ ಸೌಲಭ್ಯದ ಕೊರತೆ ಇರುವುದು ನಿಜವೇ?

ಇ) ಮಹಾರಾಷ್ಟ್ರ ಸರ್ಕಾರವು ಈ ವಿಚಾರದಲ್ಲಿ ಸುಪ್ರೀಂ ಕೋರ್ಟ್‌ಗೆ ಹೋಗಿದ್ದು, ಅದಕ್ಕೆ ಸಂಬಂಧಿಸಿದಂತೆ ಸಮರ್ಥ ಉತ್ತರವನ್ನು (ಹಲ ವಿಚಾರಗಳೊಂದಿಗೆ) ರಾಜ್ಯ ಸರ್ಕಾರ ಮಂಡಿಸಿದೆಯೇ ?

ಈ) ಸದರಿ ವಿಷಯವನ್ನು ಸುಪ್ರೀಂ ಕೋರ್ಟ್ ವಿಚಾರಣೆಗೆ ಅಂಗೀಕರಿಸಿದಲ್ಲಿ ಸರ್ಕಾರದ ನಿಲುವು ಮತ್ತು ಕಾರ್ಯತಂತ್ರಗಳೇನು?

ಉ) ಗಡಿ ಸಮಸ್ಯೆ ನಿವಾರಣೆಯನ್ನು ಸಮರ್ಥವಾಗಿ ನಿರ್ವಹಿಸಲು ಅನುಸರಿಸುವ ಕ್ರಮಗಳ ಬಗ್ಗೆ ಸರ್ಕಾರಕ್ಕೆ ಅವಶ್ಯಕ ಮಾಹಿತಿ ಲಭ್ಯವಿದೆಯೇ (ವಿವರ ನೀಡುವುದು) ?

ಶ್ರೀ ಧರ್ಮಸಿಂಗ್(ಮುಖ್ಯಮಂತ್ರಿಗಳು) :

ಅ) ಮಹಾರಾಷ್ಟ್ರ ಸರ್ಕಾರವು ಈ ವಿಷಯದಲ್ಲಿ ಸರ್ವೋಚ್ಚ ನ್ಯಾಯಾಲಯದಲ್ಲಿ ಒಂದು ದಾವೆಯನ್ನು ಹೂಡಿರುತ್ತದೆ. ಈ ಸಂಬಂಧ ಸುಧೀರ್ಘವಾದ ಆಕ್ಷೇಪಣಾ ಪತ್ರವನ್ನು ರಾಜ್ಯ ಸರ್ಕಾರ ನ್ಯಾಯಾಲಯದಲ್ಲಿ ದಾಖಲೆ ಮಾಡಿರುತ್ತದೆ ಹಾಗೂ ಶ್ರೀ ಹೆಚ್.ಬಿ.ದಾತಾರ್, ಹಿರಿಯ ನ್ಯಾಯವಾದಿಗಳು ಇವರ ಅಧ್ಯಕ್ಷತೆಯಲ್ಲಿ ಒಂದು ವಿಶೇಷ ಕಾನೂನು ಸಲಹಾ ಸಮಿತಿಯನ್ನು ರಚಿಸಿರುವುದಲ್ಲದೆ ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಒಂದು ಉನ್ನತ ಮಟ್ಟದ ಸಮಿತಿಯನ್ನು ರಚನೆ ಮಾಡಲಾಗಿದೆ. ಇದಲ್ಲದೆ, ಸಚಿವ ಸಂಪುಟದ ಉಪ ಸಮಿತಿಯನ್ನು ರಚಿಸಲಾಗಿದೆ.

ಆ) ಇಲ್ಲ

ಇ) ಹೌದು

ಈ) ಮಹಾರಾಷ್ಟ್ರ ಸರ್ಕಾರವು ಸಲ್ಲಿಸಿರುವ ದಾವೆಯನ್ನು ತಳ್ಳಿಹಾಕುವಂತೆ ಮತ್ತು ಮಹಾಜನ್ ಆಯೋಗದ ವರದಿಯನ್ನು ಅನುಷ್ಠಾನಕ್ಕೆ ತರುವಂತೆ ಸರ್ವೋಚ್ಚ ನ್ಯಾಯಾಲಯದ ಮುಂದೆ ವಾದ ಮಂಡಿಸಲಾಗುವುದು.

ಉ) ರಾಜ್ಯದ ಪರವಾಗಿ ವಾದಿಸಲು ಹಿರಿಯ ನ್ಯಾಯವಾದಿಗಳನ್ನು ನೇಮಿಸಲಾಗಿದೆ. ಅಗತ್ಯವಿರುವ ಮಾಹಿತಿಯನ್ನು ವಿಶೇಷ ಕಾನೂನು ಸಲಹಾ ಸಮಿತಿಯು ಸಂಗ್ರಹಿಸಿ, ಕ್ರೋಢೀಕರಿಸಿ ಒದಗಿಸುತ್ತಿದೆ.

1051(1480) ಶ್ರೀ ಶಿವಾನಂದ ಪಾಟೀಲ್(ಬಸವನ ಬಾಗೇವಾಡಿ) : ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಸಣ್ಣ ನೀರಾವರಿ ಇಲಾಖೆಯಿಂದ ರೈತರಿಗೆ ಭೂ ಪರಿಹಾರಕ್ಕಾಗಿ ನೀಡಬೇಕಾದ ಬಾಕಿ ಹಣ ಎಷ್ಟು;

ಆ) ರೈತರಿಗೆ ಭೂ ಪರಿಹಾರವನ್ನು ನೀಡದೇ ಇರುವುದಕ್ಕೆ ಕಾರಣಗಳೇನು;

ಇ) ಇಲಾಖೆಯಲ್ಲಿ ಇಂತಹ ಎಷ್ಟು ಪ್ರಕರಣಗಳು ಬಾಕಿ ಇವೆ;

ಈ) ಸದರಿ ಪರಿಹಾರದ ಬಾಕಿ ಹಣವನ್ನು ನೀಡಲು ಸರ್ಕಾರವು ಕೈಗೊಂಡಿರುವ ಕ್ರಮವೇನು;

ಉ) ಭೂ ಪರಿಹಾರದ ಬಾಕಿ ಹಣವನ್ನು ರೈತರಿಗೆ ನೀಡಲು ಸರ್ಕಾರವು ನಿರ್ದಿಷ್ಟ ಕಾಲಮಿತಿಯನ್ನೇನಾದರೂ ನಿಗದಿಪಡಿಸಿರುವುದೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ(ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು) :

ಅ) 1. ಬಿಜಾಪುರ ರೂ. 3,92,10,954

2. ಬಾಗಲಕೋಟೆ ರೂ. 1,28,67,465

ಒಟ್ಟು ರೂ. 5,20,78,419 ಗಳ ಬಾಕಿ ಭೂ ಪರಿಹಾರ ಧನ ಪಾವತಿಸಬೇಕಾಗಿದೆ.

ಆ) ಅನುದಾನದ ಕೊರತೆಯಿಂದ ಭೂ ಪರಿಹಾರ ಧನ ಪಾವತಿಸಲು ಸಾಧ್ಯವಾಗಿಲ್ಲ.

ಇ) 468 ಪ್ರಕರಣಗಳು.

ಈ) ಬಾಕಿ ಇರುವ ಪ್ರಕರಣಗಳ ಬಗ್ಗೆ ವಿವರಗಳನ್ನು ಸಂಬಂಧಪಟ್ಟ ಜಿಲ್ಲೆಗಳಿಂದ ಪಡೆದು ಅದಕ್ಕೆ ಬೇಕಾಗುವ ಅನುದಾನ ಪಡೆಯಲು ಪ್ರಯತ್ನಿಸಲಾಗುತ್ತದೆ.

ಉ) ಇಲ್ಲ.

1484 ಶ್ರೀ ಶಿವಾನಂದ ಪಾಟೀಲ್ (ಬಸವನ ಬಾಗೇವಾಡಿ) : ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದಲ್ಲಿ ಆಸಿಡ್ ಎರಚುವ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ರಾಜ್ಯದಲ್ಲಿ ಇಂತಹ ಎಷ್ಟು ಪ್ರಕರಣಗಳು ದಾಖಲಾಗಿವೆ(ವಿವರ ನೀಡುವುದು);

ಇ) ಎಷ್ಟು ಪ್ರಕರಣಗಳಲ್ಲಿ ತಪ್ಪಿತಸ್ಥರ ಮೇಲೆ ಸರ್ಕಾರವು ಕಾನೂನು ಕ್ರಮ ಕೈಗೊಂಡಿದೆ;

ಈ) ಆಸಿಡ್ ಧಾಳಿಗೆ ತುತ್ತಾಗಿರುವ ಅಮಾಯಕರಿಗೆ ಸರ್ಕಾರದಿಂದ ಪರಿಹಾರ ಕಲ್ಪಿಸಲಾಗಿದೆಯೇ;

ಉ) ಈ ರೀತಿಯ ಪ್ರಕರಣಗಳು ರಾಜ್ಯದಲ್ಲಿ ಮರುಕಳಿಸದಂತೆ ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

ಶ್ರೀ ಧರ್ಮಸಿಂಗ್(ಮುಖ್ಯ ಮಂತ್ರಿಗಳು) :

ಅ) ಹೌದು

ಆ) ಕಳೆದ 3 ವರ್ಷದಲ್ಲಿ 48 ಪ್ರಕರಣಗಳು ದಾಖಲಾಗಿವೆ. ವಿವರ ಈ ಕೆಳಕಂಡಂತಿದೆ.

2002	2003	2004
16	17	15

ಇ) 2002ರಲ್ಲಿ ದಾಖಲಾದ 16 ಪ್ರಕರಣಗಳಲ್ಲಿ 10 ಪ್ರಕರಣಗಳು ನ್ಯಾಯಾಲಯದ ವಿಚಾರಣೆಯಲ್ಲಿದ್ದು, 4 ಪ್ರಕರಣಗಳು ಖುಲಾಸೆಯಾಗಿರುತ್ತವೆ. 1 ಪ್ರಕರಣ ಪತ್ತೆಯಾಗಿರುವುದಿಲ್ಲ ಮತ್ತು ಒಂದು ಪ್ರಕರಣದಲ್ಲಿ ಆರೋಪಿ ಮೃತನಾಗಿರುವುದರಿಂದ ಅಬೇಟೆಡ್ ಚಾರ್ಜ್ ಶೀಟ್ ಸಲ್ಲಿಸಿದೆ.

2003ರಲ್ಲಿ ದಾಖಲಾದ 17 ಪ್ರಕರಣದಲ್ಲಿ 11 ಪ್ರಕರಣಗಳು ನ್ಯಾಯಲಾಯದ ವಿಚಾರಣೆಯಲ್ಲಿದ್ದು, 1 ಪ್ರಕರಣ ಖುಲಾಸೆಯಾಗಿದ್ದು, 2 ಪ್ರಕರಣದಲ್ಲಿ ಶಿಕ್ಷೆಯಾಗಿದ್ದು 3 ಪ್ರಕರಣಗಳು ಪತ್ತೆಯಗಿರುವುದಿಲ್ಲ.

2004ರಲ್ಲಿ ದಾಖಲಾದ 15 ಪ್ರಕರಣಗಳಲ್ಲಿ, 6 ಪ್ರಕರಣಗಳು ನ್ಯಾಯಾಲಯದ ವಿಚಾರಣೆಯಲ್ಲಿದ್ದು, 1 ಪ್ರಕರಣ ಖುಲಾಸೆಯಾಗಿದ್ದು ಹಾಗೂ 6 ಪ್ರಕರಣ ತನಿಖೆಯಲ್ಲಿರುತ್ತವೆ ಮತ್ತು 2 ಪ್ರಕರಣ ಪತ್ತೆಯಾಗಿರುವುದಿಲ್ಲ.

2003ರಲ್ಲಿ ದಾಖಲಾದ 2 ಪ್ರಕರಣಗಳಲ್ಲಿ ಶಿಕ್ಷೆಯಾಗಿದ್ದು ವಿವರ ಈ ಕೆಳಕಂಡಂತಿದೆ.

ತುಮಕೂರು ಜಿಲ್ಲೆ

1) ತಿಪಟೂರು ಗ್ರಾಮಾಂತರ ಠಾಣೆ ಮೊ ಸಂ. 89/03, ಕಲಂ 307 ಐಪಿಸಿ ಆರೋಪಿಗೆ ನ್ಯಾಯಾಲಯವು 10 ವರ್ಷ ಸಜೆ ಮತ್ತು 10,000/– ದಂಡ, ಕಟ್ಟಲು ತಪ್ಪಿದಲ್ಲಿ ಒಂದು ವರ್ಷ ಸಾದಾ ಶಿಕ್ಷೆ ವಿಧಿಸಿದೆ.

ಮೈಸೂರು ಜಿಲ್ಲೆ

2) ನಂಜನಗೂಡು ಪಟ್ಟಣ ಠಾಣೆ ಮೊ.ಸಂ. 66/03 ಕಲಂ 324, 498(ಎ) ಐಪಿಸಿ ರಡಿಯಲ್ಲಿ ಆರೋಪಿಗೆ ಎಸಿಜೆ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ನಂಜನಗೂಡು ಇವರು ಸಿಸಿ ನಂ. 863/03ರಲ್ಲಿ ದಿನಾಂಕ 19–8–2004ರಂದು 2 ವರ್ಷ ಸಾದಾ ಸಜೆ ಮತ್ತು 3,000/– ದಂಡ, ದಂಡ ಕಟ್ಟಲು ತಪ್ಪಿದಲ್ಲಿ 6 ತಿಂಗಳು ಸಾದಾ ಶಿಕ್ಷೆ ವಿಧಿಸಿದೆ.

ಈ) ಇಲ್ಲ.

ಉ) ಮಹಿಳೆಯರ ಮೇಲೆ ಆಸಿಡ್ ಎರಚುವ ಪ್ರಕರಣಗಳಿಗೆ ಸಂಬಂಧಿಸಿದಂತೆ ಹಾಗೂ ಇಂತಹ ಪ್ರಕರಣಗಳನ್ನು ತಡೆಗಟ್ಟಲು ಆರೋಪಿತರ ವಿರುದ್ಧ ತೀವ್ರತರವಾದ ಶಿಕ್ಷೆ ವಿಧಿಸುವ ಕುರಿತು ಡಿಜಿ & ಐಜಿಪಿ, ಬೆಂಗಳೂರು ರವರಿಂದ ದಿನಾಂಕ 8–12–2003ರಲ್ಲಿ ಎಲ್ಲಾ ಘಟಕಾಧಿಕಾರಿಗಳಿಗೆ ವಿವರವಾದ ಸೂಚನೆಗಳನ್ನು ನೀಡಿ ಸುತ್ತೋಲೆ ಹೊರಡಿಸಲಾಗಿದೆ. ಈ ಸುತ್ತೋಲೆಯ ಮುಖ್ಯಾಂಶಗಳು ಈ ಕೆಳಗಿನಂತಿವೆ.

1) ಇಂತಹ ಪ್ರಕರಣಗಳನ್ನು ಪೋಲೀಸ್ ಮಾನ್ಯುಯಲ್ ಆದೇಶ ಸಂಖ್ಯೆ:1585(5)ರ ಅನ್ವಯ ವಿಶೇಷ ಗಂಭೀರ ಪ್ರಕರಣಗಳೆಂದು ಪರಿಗಣಿಸಿ, ಇತರೆ ಗಂಭೀರ ಪ್ರಕರಣಗಳಲ್ಲಿ ತೆಗೆದುಕೊಳ್ಳುವ ಕ್ರಮದ ರೀತಿಯಲ್ಲಿ ಇಂತಹ ಪ್ರಕರಣಗಳಲ್ಲಿ ಕ್ರಮಗಳನ್ನು ಜರುಗಿಸಬೇಕು.

2) ಈ ಪ್ರಕರಣಗಳ ತನಿಖೆಯನ್ನು ಪೊಲೀಸ್ ಇನ್ಸ್‌ಪೆಕ್ಟರ್ ದರ್ಜೆಗೆ ಕಡಿಮೆ ಇಲ್ಲದ ದರ್ಜೆಯ ಅಧಿಕಾರಿಗಳಿಂದ ನಡೆಸಬೇಕು.

3) ಈ ಪ್ರಕರಣಗಳನ್ನು ದಾಖಲಿಸಿಕೊಳ್ಳುವಾಗ ಭಾರತ ದಂಡ ಸಂಹಿತೆಯ ಕಲಂ 320 (ತೀವ್ರಗಾಯ, ತುಲನಾತ್ಮಕ ವಿವರಣೆ) ಕಲಂ 326(ಮಾರಕ ಆಯುಧದಿಂದ ಗಂಭೀರ ಸ್ವರೂಪದ ಗಾಯ–ನಶಿಸುವ ಪದಾರ್ಥ ಸೇವನೆಯಿಂದ, ಆಘ್ರಾಹಿಸುವಿಕೆಯಿಂದ ವ್ಯಕ್ತಿಯ ದೇಹಕ್ಕೆ ಹಾನಿಕಾರವಾದ ಪದಾರ್ಥ ಸೇರಿದಂತೆ) ಕಲಂ 307 (ಕೊಲೆಯತ್ನ) ಗಳನ್ನು ಅಳವಡಿಸಿಕೊಳ್ಳುವುದನ್ನು ಎಚ್ಚರಿಕೆಯಿಂದ ಪರಿಗಣಿಸುವುದು.

4) ಅಪರಾಧಕ್ಕೆ ಬಳಸಿದ ವಸ್ತುಗಳನ್ನು ಅಂದರೆ ಬಳಸಿದ ಆ್ಯಸಿಡ್, ಆ್ಯಸಿಡ್ ಎರಚಲು ಉಪಯೋಗಿಸಿದ ಪಾತ್ರೆ ಅದನ್ನು ಸಂಗ್ರಹಿಸಲು ಉಪಯೋಗಿಸಿದ ಸೀಸೆ, ಆ್ಯಸಿಡ್‌ಯುಕ್ತ ಮಣ್ಣುಗಳನ್ನು ವಶಪಡಿಸಿಕೊಂಡು, ತಕ್ಷಣವೇ ರಾಸಾಯನಿಕ ಪರೀಕ್ಷೆಗೆ ಕಳುಹಿಸುವುದು.

5) ನೊಂದ ವ್ಯಕ್ತಿಯನ್ನು ತಕ್ಷಣವೇ ಹತ್ತಿರದ ಆಸ್ಪತ್ರೆಗೆ ಸೇರಿಸಿ ಪ್ರಥಮ ಚಿಕಿತ್ಸೆಯನ್ನು ಒದಗಿಸುವುದು ಆ ಮಹಿಳೆಯ ಬಟ್ಟೆಯನ್ನು ಸಂಗ್ರಹಿಸಿ ರಾಸಾಯನಿಕ ಪರೀಕ್ಷೆಗೆ ಕಳುಹಿಸುವುದು.

6) ಅಪರಾಧಿಯನ್ನು ಕೂಡಲೇ ಬಂಧಿಸಿ ವಿಚಾರಣೆ ನಡೆಸಬೇಕು ಮತ್ತು ಆ್ಯಸಿಡ್‌ನ್ನು ಪಡೆದ ಮೂಲವನ್ನು ತಿಳಿಯಬೇಕು.

7) ಅಪರಾದಕ್ಕೆ ಕಾರಣವನ್ನು ಕಂಡುಹಿಡಿಯುವುದು.

8) ನೊಂದ ವ್ಯಕ್ತಿಯನ್ನು ಅನುಕಂಪದಿಂದ ನಡೆಸಿಕೊಳ್ಳಬೇಕು, ನೊಂದ ವ್ಯಕ್ತಿಗೆ ಅಥವಾ ಅದರ ಕುಟುಂಬದವರಿಗೆ ಉಂಟಾದ ಹಾನಿಯ ಕುರಿತು ನ್ಯಾಯಾಲಯದಲ್ಲಿ ಪರಿಹಾರ ಕೋರುವಂತೆ ತಿಳುವಳಿಕೆ ನೀಡಬೇಕು ಹಾಗೂ ಪರಿಹಾರ ಪಡೆಯಲು ಎಲ್ಲಾ ವಿಧವಾದ ಸಹಕಾರವನ್ನು ನೀಡತಕ್ಕದ್ದು.

9) ಸಾಮಾನ್ಯವಾಗಿ ಭಗ್ನ ಪ್ರೇಮ. ಏಕಮುಖಪ್ರೇಮ ಮುಂತಾದ ವಿಷಯಗಳಲ್ಲಿ ಬೆದರಿಕೆ ಹಾಕಿದ ಪ್ರಕರಣಗಳು ಠಾಣೆಗಳಲ್ಲಿ ವರದಿಯಾದಾಗ, ಈ ದೂರುಗಳನ್ನು ಠಾಣೆಗಳಲ್ಲಿ ಸಾಮಾನ್ಯ ದೂರುಗಳೆಂದು ಪರಿಗಣಿಸಿ ವಿಚಾರಣೆ ನಡೆಸಿ ಸೂಕ್ತ ಕ್ರಮ ತೆಗೆದುಕೊಳ್ಳುವುದಿಲ್ಲ.

ಆದ್ದರಿಂದ ಇಂತಹ ದೂರುಗಳು ಬಂದಾಗ ಠಾಣಾ ಪ್ರಭಾರ ಅಧಿಕಾರಿಯು ಅಸಂಜ್ಞೇಯ ಪ್ರಕರಣವನ್ನು ದಾಖಲಿಸಿ, ಅವಶ್ಯಕತೆ ಕಂಡುಬಂದಲ್ಲಿ ನ್ಯಾಯಾಲಯದಿಂದ ಅನುಮತಿ ಪಡೆದು, ಕಾನೂನಿನನ್ವಯ ಕ್ರಮ ಕೈಗೊಳ್ಳಬೇಕು. ಪೊಲೀಸರು ಪ್ರಾರಂಭಿಕ ಹಂತದಲ್ಲಿಯೇ ಸೂಕ್ತ ಕ್ರಮ ತೆಗೆದುಕೊಂಡರೆ ಇಂತಹ ಪ್ರಕರಣಗಳನ್ನು ತಡೆಯಬಹುದು ಮತ್ತು ಒಬ್ಬ ಮಹಿಳೆ ವಿರೂಪಗೊಂಡು, ಜೀವನ ಪರ್ಯಂತ ಯಾತನ ಅನುಭವಿಸುವುದರಿಂದ ಪಾರು ಮಾಡಬಹುದು.

1054(788) ಶ್ರೀ ಶಿವರಾಜ ಸಜ್ಜನರ್(ಹಾವೇರಿ) : ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಹಾವೇರಿ ಜಿಲ್ಲೆಯ ಹಾನಗಲ್ ತಾಲ್ಲೂಕಿನ ಬಸಾಪುರ ಏತ ನೀರಾವರಿಯೋಜನೆ ಯಾವ ಹಂತದಲ್ಲಿದೆ;

ಆ) ಯಾವಾಗ ಪೂರ್ಣಗೊಳಿಸಲಾಗುವುದು;

ಇ) ಯಾವ ವರ್ಷದಲ್ಲಿ ಈ ಯೋಜನೆ ಪ್ರಾರಂಭವಾಗಿರುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ(ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು):

ಅ) ಈ ಯೋಜನೆಯು ಎರಡು ಹಂತಗಳಲ್ಲಿ ಇರುತ್ತದೆ.

ಮೊದಲನೆ ಹಂತದ ಡೆಲಿವರಿ ಛೇಂಬರ್ ಹಾಗೂ ಡೈವರ್ಷನ್ ಗೋಡೆಗಳ ಕೆಲಸಗಳು ಮುಗಿದಿವೆ. ಜಾಕ್‌ವೆಲ್ ಕಂ ಪಂಪ್‌ಹೌಸ್ ಕಾಮಗಾರಿ ಮುಗಿಯುವ ಹಂತದಲ್ಲಿದೆ. ರೈಸಿಂಗ್‌ಮೇನ್ ಕಾಮಗಾರಿಯು ಪೈಪುಗಳ ಸರಬರಾಜು ಹಾಗೂ ಅಳವಡಿಕೆ ಕೆಲಸ ಪ್ರಗತಿಯಲ್ಲಿದೆ. ಸರಪಳಿ 0.56 ಕಿ.ಮೀ.ನಿಂದ 1.87 ಕಿ.ಮೀ.ಗಳ ನಡುವೆ ಬರುವ ಅಕ್ವಡಕ್ಟ್ ಕಾಮಗಾರಿ ಪ್ರಗತಿಯಲ್ಲಿದೆ.

ಮೊದಲನೇ ಹಾಗೂ ಎರಡನೇ ಹಂತದಲ್ಲಿ ಬರುವ ಮುಖ್ಯ ಕಾಲುವೆ, ವಿತರಣಾ ಕಾಲುವೆ ಇತ್ಯಾದಿಗಳ ಸರ್ವೆಕಾರ್ಯ, ಅಂದಾಜು ಪಟ್ಟಿ ಹಾಗೂ ವಿನ್ಯಾಸಗಳ ತಯಾರಿಕೆಯು ಪ್ರಗತಿಯಲ್ಲಿವೆ.

ಆ) ಬಿಜಾಪುರ ಏತ ನೀರಾವರಿ ಯೋಜನೆಯನ್ನು 2006ರ ಮಾರ್ಚ್ ಅಂತ್ಯಕ್ಕೆ ಪೂರ್ಣಗೊಳಿಸಲು ಯೋಜಿಸಲಾಗಿದೆ.

ಇ) ಬಿಜಾಪುರ ಏತ ನೀರಾವರಿ ಯೋಜನೆಯನ್ನು 1992-93ರ ಸಾಲಿನಲ್ಲಿ ಪ್ರಾರಂಭಿಸದಲಾಗಿದೆ.

1056(1525) ಶ್ರೀ ಸಿಂಧೂರ ರಾಜಶೇಖರ(ಶಿಗ್ಗಾಂವ್) : ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಸವಣೂರು ತಾಲ್ಲೂಕಿನ ಹಿರೇಮರಳೀಹಳ್ಳಿ ವರದಾ ಬ್ಯಾರೇಜ್ ಬಾಂಧಾರ ಶಿಥಿಲಗೊಂಡು ಸೋರುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ, ಬಾಂಧಾರ ಸೋರುವಿಕೆಯ ಕಾಮಗಾರಿಯನ್ನು ಕೈಗೊಳ್ಳದಿರುವುದಕ್ಕೆ ಕಾರಣವೇನು;

ಇ) ಯಾವಾಗ ದುರಸ್ತಿ ಕಾಮಗಾರಿಯನ್ನು ತೀವ್ರಗತಿಯಲ್ಲಿ ಪ್ರಾರಂಭಿಸಲಾಗುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು):

ಅ) ಬಂದಿದೆ.

ಆ) ಸೋರುವುದನ್ನು ತಡೆಗಟ್ಟಲು ಮತ್ತು ದುರಸ್ತಿ ಮಾಡಲು ಈಗಾಗಲೇ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದೆ. ಕೆಲಸ ಪ್ರಗತಿಯಲ್ಲಿದ್ದು, ಇದುವರೆಗೆ 14,08,312 ರೂಗಳನ್ನು ವೆಚ್ಚ ಮಾಡಲಾಗಿದೆ.

ಇ) ಸಧ್ಯಕ್ಕೆ ಬ್ಯಾರೇಜಿನಲ್ಲಿ ನೀರು ಇರುವುದರಿಂದ ಬ್ಯಾರೇಜಿನಲ್ಲಿ ನೀರು ಕಡಿಮೆಯಾದ ನಂತರ ಪುನಃ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

1057(1526) ಶ್ರೀ ಸಿಂಧೂರ ರಾಜಶೇಖರ(ಶಿಗ್ಗಾಂವ್) : ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ವರದಾ ನದಿಯಿಂದ ನಾಗನೂರು ಕೆರೆ ಮೂಲಕವಾಗಿ ಬಂಕಾಪುರ ಶಿಗ್ಗಾಂವ್-ಸವಣೂರು ಶಾಶ್ವತ ಕುಡಿಯುವ ನೀರಿನ ಯೋಜನೆ ಕಾರ್ಯ ಕಳೆದ 5 ವರ್ಷಗಳಿಂದ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ ಕುಡಿಯುವ ನೀರಿನ ಬವಣೆ ಹಾಹಾಕಾರವಾಗಿದ್ದು ಈ ಹಿಂದೆ ಕುಡಿಯುವ ನೀರಿಗಾಗಿ ಸವಣೂರು ಗಲಭೆಕಯಾಗಿದ್ದರೂ ಸರ್ಕಾರ ಗಮನ ಹರಿಸದೇ ಇರಲು ಕಾರಣವೇನು;

ಇ) ಹಾಗಿದ್ದಲ್ಲಿ, ಈ ಕಾಮಗಾರಿಯನ್ನು ಯಾವಾಗ ಸಂಪೂರ್ಣಗೊಳಿಸಲಾಗುವುದು?

ಶ್ರೀ ಧರ್ಮಸಿಂಗ್(ಮುಖ್ಯ ಮಂತ್ರಿಗಳು) :

ಅ) ಬಂದಿದೆ.

ಆ)1. ಶಿಗ್ಗಾಂವ, ಸವಣೂರು ಹಾಗೂ ಬಂಕಾಪುರ ಪಟ್ಟಣಗಳಿಗೆ ವರದಾ ನದಿಯನ್ನು ಮೂಲವಾಗಿಟ್ಟುಕೊಂಡು ಯೋಜನೆಯನ್ನು ರೂಪಿಸಲಾಗಿತ್ತು.

2. ಬಂಕಾಪುರ ಹತ್ತಿರ ಇಂಪೌಂಡಿಂಗ್ ರಿಸರ್‌ವಾಯಿರ್ ನಿರ್ಮಿಸಲು ಉದ್ದೇಶಿಸಲಾಗಿತ್ತು. ಆದರೆ ರಿಸರ್ವಾಯಿರ್ ನಿರ್ಮಿಸಲು ಬೇಕಾದ ಜಮೀನು ಸಿಗದಿದ್ದರಿಂದ ನಾಗನೂರು ಕೆರೆಯನ್ನು ಅಭಿವೃದ್ಧಿ ಪಡಿಸಿಕೊಂಡು ಇಂಪೌಂಡಿಂಗ್ ರಿಸರ್‌ವಾಯಿರ್ ಆಗಿ ಉಪಯೋಗಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿತ್ತು.

3. ಈ ಯೋಜನೆಯಲ್ಲಿ ಬಂಕಾಪುರ ವಂತಿಗೆಯಾದ 474.64 ಲಕ್ಷರೂಗಳನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ನೀಡಲು ಒಪ್ಪಲಿಲ್ಲವಾದ್ದರಿಂದ ಬಂಕಾಪುರ ಪಟ್ಟಣವನ್ನು ಕೈಬಿಡಲಾಯಿತು.

4. ನಾಗನೂರು ಕೆರೆಯಲ್ಲಿ ನೀರಿನ ಪ್ರಮಾಣ ಕಡಿಮೆ ಇರುವುದರಿಂದ ಶಿಗ್ಗಾಂವ ಪಟ್ಟಣದ ನಾಗರೀಕರು ತಮಗೆ ಹಾಗೂ ತಮ್ಮ ಜಾನುವಾರುಗಳಿಗೆ ತೊಂದರೆ ಉಂಟಾಗುವುದರಿಂದ ಪ್ರತಿಭಟಿಸಿರುತ್ತಾರೆ ನಾಗನೂರು ಕೆರೆಗೆ ಸಾಕಷ್ಟು ನೀರು ಬಂದರೆ ಶಿಗ್ಗಾಂವ ಮತ್ತು ಸವಣೂರು ಪಟ್ಟಣಗಳಿಗೆ ನೀರು ಸರಬರಾಜು ಮಾಡಬಹುದು.

5. ಈ ತೊಂದರೆಯನ್ನು ನಿವಾರಿಸಲು ವರದಾ ನದಿಯನ್ನು ಮೂಲವಾಗಿಟ್ಟುಕೊಂಡು ಒಂದು ಸಮಗ್ರ ಯೋಜನೆಯುನ್ನು 25.54 ಕೋಟಿ ರೂ.ಅಂದಾಜಿನಲ್ಲಿ ರೂಪಿಸಿದ್ದು ಪರಿಶೀಲನೆಯಲ್ಲಿದೆ.

ಇ) ನಾಗನೂರು ಕೆರೆಯನ್ನು ಮೂಲವಾಗಿಟ್ಟುಕೊಂಡಿರುವ ಯೋಜನೆಯನ್ನು ಫೆಬ್ರವರಿ 2005 ರೊಳಗೆ ಪೂರ್ಣಗೊಳಿಸಲಾಗುವುದು.

1058(1527) ಶ್ರೀ ಸಿಂಧೂರ ರಾಜಶೇಖರ್(ಶಿಗ್ಗಾಂವ್) : ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಸವಣೂರು ತಾಲ್ಲೂಕಿನ ಮೋತಿ ತಲಾಬ ಏತ ನೀರಾವರಿ ಕಾಮಗಾರಿ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ :

ಆ) ಹಾಗಿದ್ದಲ್ಲಿ, ಕಾಮಗಾರಿ ಸ್ಥಗಿತಗೊಳ್ಳಲು ಕಾರಣವೇನು;

ಇ) ಗುತ್ತಿಗೆದಾರರಿಗೆ ಕೊಟ್ಟಿರುವ ಕಾಲಾವಕಾಶ ಎಷ್ಟು;

ಈ) ಸರ್ಕಾರ ಈ ಕಾಮಗಾರಿಯನ್ನು ಜೂನ 15, 2005ರ ಒಳಗೆ ಸಂಪೂರ್ಣಗೊಳಿಸಿ ರೈತರಿಗೆ ಅನುಕೂಲ ಮಾಡಿಕೊಡುವುದೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ(ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು) :

ಅ) ಕಾಮಗಾರಿ ಪ್ರಗತಿಯಲ್ಲಿದೆ.

ಆ) ಉದ್ಭವಿಸುವುದಿಲ್ಲ.

ಇ) ಸೆಪ್ಟೆಂಬರ್ 2005ರವರೆಗೆ ಕಾಲಾವಕಾಶ ನೀಡಲಾಗಿದೆ.

ಈ) ಗುತ್ತಿಗೆ ಕರಾರಿನಂತೆ ಕಾಮಗಾರಿಯನ್ನು ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

1059(1528) ಶ್ರೀ ಸಿಂಧೂರ ರಾಜಶೇಖರ(ಶಿಗ್ಗಾಂವ) : ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಸವಣೂರು ಸಾರಿಗೆ ಘಟಕದ ಸ್ಥಳದ ವಿವಾದದ ಬಗ್ಗೆ ಉಚ್ಚ ನ್ಯಾಯಾಲಯದಲ್ಲಿ ಸಾರ್ವಜನಿಕ ಹಿತಾಶಕ್ತಿ ಮೊಕದ್ದಮೆ ದಾಖಲಿಸಿದ್ದು, ಅದು ಸಂಸ್ಥೆಯ ಪರವಾಗಿ ತೀರ್ಪು ನಿರ್ಣಯ ವಾಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಸಾರಿಗೆ ಘಟಕ ಅಪೂರ್ಣವಾಗಿರುವುದರಿಂದ ಹಳೆಯ ಬಸ್‌ಗಳ ದುರಸ್ತಿ ಹಾಗೂ ಡೀಸಲ್ ಹಾಕಿಸಲಿಕ್ಕೆ 60 ಕಿ.ಮೀ., ಹಾವೇರಿಗೆ ಹೋಗಿಬರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿಲ್ಲವೆ;

ಇ) ಈ ಸಾರಿಗೆ ಘಟಕವನ್ನು ಪೂರ್ಣ ಪ್ರಮಾಣದ ಸುವ್ಯವಸ್ಥಿತವಾಗಿ ಸಂಪೂರ್ಣ ಗೊಳಿಸಲು ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ(ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು) :

ಅ) ಇಲ್ಲ

ಆ) ಇಲ್ಲ

ಇ) ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯು ಹಾವೇರಿ ಸಿವಿಲ್ ನ್ಯಾಯಾಲಯದಲ್ಲಿ ಹೂಡಿರುವ ಮೂಲ ದಾವೆ ಸಂಖ್ಯೆ . 6/99 ವಿಲೇವಾರಿಯಾದ ಕೂಡಲೇ ಘಟಕವನ್ನು ಪೂರ್ಣಗೊಳಿಸಲಾಗುವುದು.

1062(264) ಶ್ರೀ ವಿ.ಸೋಮಣ್ಣ(ಬಿನ್ನಿಪೇಟೆ) : ಮಾನ್ಯ ಮುಖ್ಯ ಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಹುಬ್ಬಳ್ಳಿಯಲ್ಲಿರುವ ನೈರುತ್ಯ ರೈಲ್ವೆ ವಲಯದ ಕಛೇರಿ ಹುದ್ದೆಗಳ ನೇಮಕಾತಿಯಲ್ಲಿ ಕನ್ನಡಿಗರಿಗೆ ಹೆಚ್ಚಿನ ಅವಕಾಶ ನೀಡದೇ ಇರುವುದರ ಬಗ್ಗೆ ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಿದೆಯೇ;

ಆ) ಸಲ್ಲಿಸಿದ್ದಲ್ಲಿ, ಯಾವಾಗ ಸಲ್ಲಿಸಲಾಯಿತು ಹಾಗೂ ಈ ಬಗ್ಗೆ ಕೇಂದ್ರ ಸರ್ಕಾರ ಕೈಗೊಂಡ ಕ್ರಮಗಳೇನು;

ಇ) ಇಲ್ಲದಿದ್ದಲ್ಲಿ ಕೂಡಲೇ ಕೇಂದ್ರ ಸರ್ಕಾರದ ಗಮನಕ್ಕೆ ಕನ್ನಡಿಗರಿಗೆ ಉದ್ಯೋಗಾವಕಾಶ ದೊರಕದೇ ಇರುವ ಬಗ್ಗೆ ಮನವಿ ಸಲ್ಲಿಸಲು ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ;

ಶ್ರೀ ಧರ್ಮಸಿಂಗ್(ಮುಖ್ಯ ಮಂತ್ರಿಗಳು) :

ಅ) ದಕ್ಷಿಣ ಪಶ್ಚಿಮ ರೈಲ್ವೆ ವಲಯದ ನೇಮಕಾತಿಗಳಲ್ಲಿ ಸಿ ಮತ್ತು ಡಿ ವರ್ಗದ ಹುದ್ದೆಗಳಿಗೆ ಶೇಕಡ 100 ರಷ್ಟು ಮತ್ತು ಉನ್ನತ ಹುದ್ದೆಗಳಿಗೆ ಶೇಕಡ 85 ರಷ್ಟು ಸ್ಥಳೀಯರನ್ನೇ ನೇಮಕಗೊಳಿಸುವಂತೆ ಕೋರಿ ಮಾನ್ಯ ಕೇಂದ್ರ ಸರ್ಕಾರದ ರೈಲ್ವೆ ಮಂತ್ರಿಗಳಿಗೆ ಕರ್ನಾಟಕ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳು ಪತ್ರ ಬರೆದಿರುತ್ತಾರೆ.

ಆ) ದಿನಾಂಕ 11.8.2003ರಲ್ಲಿ ಮನವಿ ಸಲ್ಲಿಸಲಾಗಿದೆ. ಈ ಪತ್ರದ ಬಗ್ಗೆ ಕೇಂದ್ರ ಸರ್ಕಾರವು ಕ್ರಮ ಕೈಗೊಂಡಿರುವ ಬಗ್ಗೆ ಈವರೆಗೂ ಮಾಹಿತಿಯು ಸರ್ಕಾರಕ್ಕೆ ಬಂದಿರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಆದಾಗ್ಯೂ ಕೇಂದ್ರ ಸರ್ಕಾರಕ್ಕೆ ಪುನಃ ಒತ್ತಾಯಿಸಲಾಗುವುದು.

1063(275) ಶ್ರೀ ವಿ.ಸೋಮಣ್ಣ (ಬಿನ್ನಿಪೇಟೆ).: ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬೆಂಗಳೂರು ಮಹಾನಗರದಲ್ಲಿ ಪ್ರತಿ ದಿನ ಸಂಗ್ರಹಿಸುತ್ತಿರುವ ಸರಾಸರಿ ಕಸದ ಪ್ರಮಾಣವೆಷ್ಟು;

ಆ) ಈ ಕಸವನ್ನು ವಿಲೇವಾರಿ ಮಾಡಲು ಬೆಂಗಳೂರು ಮಹಾನಗರ ಪಾಲಿಕೆ ಕೈಗೊಂಡ ಕ್ರಮಗಳೇನು?

ಶ್ರೀ ಧರ್ಮಸಿಂಗ್ (ಮುಖ್ಯ ಮಂತ್ರಿಗಳು)

ಅ) ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿರುವ 100 ವಾರ್ಡ್‌ಗಳ ವಿವಿಧ ಪ್ರದೇಶಗಳಲ್ಲಿ ಪ್ರತಿ ದಿನ ಸುಮಾರು 2000 ಟನ್‌ಗಳಷ್ಟು ತ್ಯಾಜ್ಯ ವಸ್ತುಗಳು ಸಂಗ್ರಹವಾಗುತ್ತಿವೆ .

ಆ) ಭಾರತ ಸರ್ಕಾರದ ಪರಿಸರ ಇಲಾಖೆಯು ರೂಪಿಸಿರುವ ಎಂಎಸ್‌ಡಬ್ಲ್ಯೂ ನಿಯಮಗಳು 2000 ದಂತೆ ಮಾನ್ಯ ಸರ್ವೋಚ್ಛ ನ್ಯಾಯಾಲಯದ ಆದೇಶದಂತೆ ತ್ಯಾಜ್ಯ ವಸ್ತುಗಳ ನಿರ್ವಹಣೆಯನ್ನು ಮಾಡಬೇಕಾಗಿರುತ್ತದೆ. ಅದರಂತೆ, ಕೆಳಕಂಡ ಕ್ರಮ ಕೈಗೊಳ್ಳಲಾಗುತ್ತಿದೆ.

1. ಪಾಲಿಕೆಯು ಖಾಸಗಿ ಸಹಭಾಗಿತ್ವದೊಂದಿಗೆ ತ್ಯಾಜ್ಯ ವಸ್ತುಗಳ ವಿಲೇವಾರಿಗಾಗಿ 1000 ಟನ್‌ಗಳಷ್ಟು ವಿಲೇವಾರಿಯನ್ನು ಪ್ರತಿದಿನ ನಿರ್ವಹಿಸಲು ಮೆ:ರಾಂಕಿ ಲಿ., ಹೈದರಾಬಾದ್ ಸಂಸ್ಥೆಯೊಂದಿಗೆ ಸ್ಯಾನಿಟರಿ ಲ್ಯಾಂಡ್ ಫಿಲ್ ಸ್ಥಾಪಿಸಲು ಹಾಗೂ ಪ್ರತಿ ಟನ್ನಿಗೆ 198 ರೂಗಳ ಟಿಪ್ಪಿಂಗ್ ಫೀಯನ್ನು ಅಂತಿಮವಾಗಿ ನೆಲದಲ್ಲಿ ಹೂಳಬಹುದಾದ ತ್ಯಾಜ್ಯ ವಸ್ತುಗಳಿಗೆ ಪಾವತಿಸಲು ಒಪ್ಪಂದವಾಗಿದ್ದು, ತ್ಯಾಜ್ಯ ವಸ್ತುಗಳ ವೈಜ್ಞಾನಿಕ ಸಂಸ್ಕರಣೆ ಹಾಗೂ ತಿರಸ್ಕರಿಸಲ್ಪಡುವ ತ್ಯಾಜ್ಯ ವಸ್ತುಗಳನ್ನು ಹೂಳುವ ಪ್ರಕ್ರಿಯೆಯು 2005ರ ಡಿಸೆಂಬರ್ ಅಂತ್ಯದೊಳಗಾಗಿ ಪ್ರಾರಂಭವಾಗಲಿದೆ.

2. ಪಾಲಿಕೆಯು ಪ್ರಸ್ತುತ 350 ಟನ್‌ಗಳಷ್ಟು ಕರ್ನಾಟಕ ಕಾಂಪೋಸ್ಟ್ ಡೆವಲಪ್‌ಮೆಂಟ್ ಕಾರ್ಪೊರೇಷನ್, ಬೊಮ್ಮನಹಳ್ಳಿ ಇಲ್ಲಿಗೆ ಸಾಗಿಸಲಾಗುತ್ತಿದ್ದು, ಕಾಂಪೋಸ್ಟ್ ಹಾಗೂ ವರ್ಮಿ (ಎರೆಹುಳು ಗೊಬ್ಬರ) ಕಾಂಪೋಸ್ಟ್ ಅನ್ನು ಪ್ರತಿ ದಿನ ಸಂಸ್ಕರಣೆಯ ನಂತರ ಉತ್ಪಾದಿಸಲಾಗುತ್ತಿದೆ.

3. ಪಾಲಿಕೆಯ ಪ್ರತಿ ದಿನ 1000 ಟನ್‌ಗಳಷ್ಟು ಪ್ರಮಾಣದ ತ್ಯಾಜ್ಯ ವಸ್ತುಗಳನ್ನು ಬಳಸಿ ತ್ಯಾಜ್ಯ ವಸ್ತುಗಳಿಂದ ಹರಳುಗಳನ್ನು ಉತ್ಪಾದಿಸಿ ವಿದ್ಯುತ್ ತಯಾರಿಸುವ ಪ್ರಸ್ತಾವನೆಯನ್ನು ಖಾಸಗಿ ಸಹಭಾಗಿತ್ವದೊಂದಿಗೆ 'ಬಿಒಟಿ' (ನಿರ್ಮಾಣ-ನಿರ್ವಹಣೆ-ಹಸ್ತಾಂತರ) ಆಧಾರದ ಮೇಲೆ ನಿರ್ವಹಿಸಲು ಪಾಲಿಕೆಯ ನಿರ್ಣಯವಾಗಿದ್ದು. ಪ್ರಸ್ತಾವನೆಯು ಒಪ್ಪಂದದ ಹಂತದಲ್ಲಿರುತ್ತದೆ. ಇದಕ್ಕಾಗಿ 170 ಎಕರೆಗಳ ಪ್ರದೇಶವನ್ನು ಬೆಂಗಳೂರು ಪೂರ್ವ ತಾಲ್ಲೂಕಿನಲ್ಲಿ ಗುರುತಿಸಲಾಗಿದೆ.

4. ನಗರದ ಜನಸಂಖ್ಯೆ ದಿನೇ ದಿನೇ ಬೆಳೆಯುತ್ತಿರುವ ಅಂಶವನ್ನು ಗಮನದಲ್ಲಿಟ್ಟುಕೊಂಡು ದೂರಗಾಮಿ ದೃಷ್ಟಿಯಿಂದ ನಗರದ ಹೊರ ವಲಯದ ವಿವಿಧ ಪ್ರದೇಶಗಳಲ್ಲಿ ಜಾಗವನ್ನು ಗುರುತಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಹಾಗೂ ವೈಜ್ಞಾನಿಕ ವಿಲೇವಾರಿಗಾಗಿ ವಿವಿಧ ಕ್ರಮಗಳನ್ನು ಅಳವಡಿಸಲಾಗುತ್ತಿದೆ.

1066(1423) ಶ್ರೀ ವಿ.ಸೋಮಣ್ಣ (ಬಿನ್ನಿಪೇಟೆ) : ಮಾನ್ಯ ಮುಖ್ಯ ಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬೆಂಗಳೂರು ಪಶ್ಚಿಮ ಕಾರ್ಡ್ ರಸ್ತೆಯ ಗ್ರೇಡ್ ಸಪರೇಟರ್ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಯಿತು;

ಆ) ಇದರ ಅಂದಾಜು ವೆಚ್ಚವೆಷ್ಟು ;

ಇ) ಈ ಕಾಮಗಾರಿ ಯಾವಾಗ ಪೂರ್ಣ ಗೊಳ್ಳಬೇಕಾಗಿತ್ತು, ಯಾವಾಗ ಪೂರ್ಣಗೊಳಿಸಲಾಗುವುದು;

ಈ) ಇದಕ್ಕಾಗಿ ಇಲ್ಲಿಯವರೆಗೆ ಖರ್ಚು ಮಾಡಿದ ಹಣವೆಷ್ಟು;

ಉ) ಈ ಕಾಮಗಾರಿಯನ್ನು ಯಾರಿಗೆ ನೀಡಲಾಗಿದೆ.

ಊ) ಈ ಕಾಮಗಾರಿಯ ಇತ್ತೀಚಿನ ಪ್ರಗತಿಯ ವಿವರಗಳನ್ನು ನೀಡುವುದು;

ಶ್ರೀ ಧರ್ಮಸಿಂಗ್(ಮುಖ್ಯ ಮಂತ್ರಿಗಳು) :

ಅ) ಬೆಂಗಳೂರು ಪಶ್ಚಿಮ ಕಾರ್ಡ್ ರಸ್ತೆಯ ಗ್ರೇಡ್ ಸಪರೇಟರ್ ಕಾಮಗಾರಿಯನ್ನು ಫೆಬ್ರವರಿ 2004ರಲ್ಲಿ ಪ್ರಾರಂಭಿಸಲಾಯಿತು.

ಆ) ರೂ. 15.00 ಕೋಟಿಗಳು.

ಇ) ಆಗಸ್ಟ್ 2005.

ಈ) ರೂ.4.60 ಕೋಟಿಗಳು.

ಉ) ಈ ಕಾಮಗಾರಿಯನ್ನು 'ಮೆ : ಈಸ್ಟ್ ಕೋಸ್ಟ್ ಕನ್ಸಟ್ರಕ್ಷನ್ಸ್ ಅಂಡ್ ಇಂಡಸ್ಟ್ರೀಸ್ ಲಿಮಿಟೆಡ್ ರವರಿಗೆ ನೀಡಲಾಗಿದೆ.

ಊ) ನೀರಿನ ಮತ್ತು ಒಳಚರಂಡಿ ಕೊಳವೆ ವಿದ್ಯುತ್ ಟೆಲಿಫೋನ್ ಕೇಬಲ್ ಸ್ಥಳಾಂತರಿಸುವ ಹಾಗೂ ಮರಗಳನ್ನು ಕತ್ತರಿಸುವ ಕೆಲಸಗಳನ್ನು ಪೂರ್ಣಗೊಳಿಸಲಾಗಿರುತ್ತದೆ. ಯಶವಂತಪುರ ಕಡೆಯ ರ್‍ಯಾಂಪಿನ ಮಣ್ಣು ಕೆಲಸ ಮುಗಿಸಿ 217 ಮೀ ಉದ್ದದ ಕಾಂಕ್ರೀಟ್ ಗೋಡೆಯ ಕೆಲಸ ಮುಗಿದಿರುತ್ತದೆ. ಹಾಗೂ ಮಧ್ಯದ ಬಾಕ್ಸ್ ಸ್ಥಳದಲ್ಲಿ ಮಣ್ಣು ಕೆಲಸ ಪ್ರಗತಿಯಲ್ಲಿದೆ ಒಟ್ಟಾರೆ ಶೇ. 35 ರಷ್ಟು ಕೆಲಸ ಮುಗಿದಿದೆ.

1068(1019) ಶ್ರೀ ಜಿ.ವಿ ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಮುಖ್ಯ ಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಕೋಲಾರ ಜಿಲ್ಲೆ ಗೌರಿಬಿದನೂರು ನಗರಗೆರೆ ಹೋಬಳಿಯ ಕೇಂದ್ರಸ್ಥಾನದಲ್ಲಿ ಪೊಲೀಸ್ ಠಾಣೆ ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಆ) ಇದ್ದಲ್ಲಿ ಸರ್ಕಾರದ ಕ್ರಮಗಳೇನು?

ಶ್ರೀ ಧರ್ಮಸಿಂಗ್(ಮುಖ್ಯ ಮಂತ್ರಿಗಳು) :

ಅ) ಪ್ರಸ್ತುತ ಈ ಅವಶ್ಯಕತೆ ಕಂಡುಬಂದಿಲ್ಲ.

ಆ) ಉದ್ಭವಿಸುವುದಿಲ್ಲ.

1037(1393) ಶ್ರೀಮತಿ ಸುನಿತ ವೀರಪ್ಪಗೌಡ ಜೆ.(ಬನ್ನೂರು) : ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬನ್ನೂರು ಪಟ್ಟಣದಲ್ಲಿ ಕೆ.ಎಸ್.ಆರ್.ಟಿ.ಸಿ.ಬಸ್ ನಿಲ್ದಾಣವಿಲ್ಲದೆ ಸಾರ್ವಜನಿಕರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದರೆ, ಇದನ್ನು ಯಾವಾಗ ಕಾರ್ಯಗತಗೊಳಿಸಲಾಗುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ(ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು) :

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

1073(1394) ಶ್ರೀಮತಿ ಸುನೀತ ವೀರಪ್ಪಗೌಡ ಜೆ.(ಬನ್ನೂರು) : ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಮುಡುಕುತೊರೆ ಏತ ನೀರಾವರಿ ಯೋಜನೆ ನಿಂತು ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಇದನ್ನು ಪುನರಾರಂಭಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ಮತ್ತು ಯಾವಾಗ ಕ್ರಮ ಕೈಗೊಳ್ಳುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ(ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು) :

ಅ) ಬಂದಿದೆ.

ಆ) ಈ ಯೋಜನೆಯು ವಿದ್ಯುತ್ ವೋಲ್ಟೇಜ್ ಲಭ್ಯವಾಗದ ಕಾರಣ ಸ್ಥಗಿತಗೊಂಡಿದೆ. ಈ ಬಗ್ಗೆ ಮೆಸ್ಕಾಂ ಅಧಿಕಾರಿಗಳನ್ನು ಸಂಪರ್ಕಿಸಲಾಗಿದೆ; ತಲಕಾಡು ಬಳಿ ಸಬ್‌ಸ್ಟೇಷನ್ ಆದ ನಂತರ ಅಗತ್ಯವಿರುವ ವೋಲ್ಟೇಜ್ ಲಭ್ಯವಾಗಲಿದ್ದು ,ವೋಲ್ಟೇಜ್ ದೊರೆತ ಕೂಡಲೇ ಯೋಜನೆಯನ್ನು ಪುನರಾರಂಭಿಸಾಲಾಗುವುದು.

1075(1395) ಶ್ರೀಮತಿ ಸುನಿತಾ ವೀರಪ್ಪಗೌಡ ಜೆ.(ಬನ್ನೂರು) : ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ನಂಜಾಪುರ ಏತ ನೀರಾವರಿ ಕಾಮಗಾರಿ ಮಂದಗತಿಯಲ್ಲಿ ಸಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದರೆ, ಕಾಮಗಾರಿಯನ್ನು ತ್ವರಿತ ಗೊಳಿಸಲು ಕೈಗೊಂಡ ಕ್ರಮಗಳೇನು?

ಇ) ಇದನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ(ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು) :

ಅ) ನಂಜಾಪುರ ಏತ ನೀರಾವರಿ ಕಾಮಗಾರಿಯಲ್ಲಿ ಕೆಲವು ತಾಂತ್ರಿಕ ಅಡಚಣೆ ಹಗೂ ನಿರ್ವಹಿಸುವ ಸಮಯದಲ್ಲಿ ಉಂಟಾದ ಅಡಚಣೆಗಳಿಂದಾಗಿ ಸದರಿ ಕಾಮಗಾರಿ ಪ್ರಗತಿ ಕುಂಠಿತ ಗೊಂಡಿರುತ್ತದೆ.

ಆ) ಕಾಮಗಾರಿಯನ್ನು ನಿರ್ವಹಿಸುವ ಸಮಯದಲ್ಲಿ ಉಂಟಾದ ಅಡಚಣೆಗಳನ್ನು ನಿವಾರಿಸಿ ಶೇ.60 ಭಾಗ ಕಾಮಗಾರಿ ಪೂರ್ಣ ಗೊಳಿಸಲಾಗಿದೆ. ಏರು ಕೊಳವೆ ಮಾರ್ಗವು ಬನ್ನೂರು– ಮಳವಳ್ಳಿ ರಸ್ತೆಯು ಹಾಯ್ದು ಹೋಗುವುದರಿಂದ ಪಟ್ಟಣದ ವ್ಯಾಪ್ತಿಯಲ್ಲಿ ಪದೇ ಪದೇ ದುರಸ್ತಿಯನ್ನು ತಪ್ಪಿಸಲು ಭಾರತೀಯ ವಿಜ್ಞಾನ ಸಂಸ್ಥೆ, ಬೆಂಗಳೂರು ಇವರ ಸಲಹೆ ಪಡೆದು PVC ಪೈಪುಗಳ ಬದಲು ಗಬ್ಬಿಣದ ಪೈಪುಗಳನ್ನು ಅಳವಡಿಸಿ ಕಾಮಗಾರಿಯನ್ನು ಪೂರ್ಣಗೊಳಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ಇ) ಈ ಯೋಜನೆಯನ್ನು ಜೂನ್ 2005 ಕ್ಕೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

1076(1396) ಶ್ರೀಮತಿ ಸುನಿತ ವೀರಪ್ಪಗೌಡ .ಕೆ (ಬನ್ನೂರು) : ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬನ್ನೂರು ಕ್ಷೇತ್ರದ ಹಲವಾರು ಗ್ರಾಮಗಳಿಗೆ ಬಸ್ಸಿನ ಸೌಕರ್ಯ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಎಲ್ಲಾ ಗ್ರಾಮಗಳಿಗೆ ಬಸ್ಸಿನ ಸೌಲಭ್ಯ ಕಲ್ಪಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ(ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು) :

ಅ) ಇಲ್ಲ.

ಆ) ಬದ್ಭವಿಸುವುದಿಲ್ಲ.

1077(1057) ಶ್ರೀ ಉದಾಸಿ ಸಿ.ಎಂ(ಹಾನಗಲ್) : ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ತುಂಗಾ ಮೇಲ್ದಂಡೆ ಯೋಜನೆ ಪ್ರಾರಂಭವಾಗಲು ಕಾಲಮಿತಿ ಗೊತ್ತುಪಡಿಸಲಾಗಿದೆಯೇ;

ಆ) ಈ ಯೋಜನೆಯ ಅಂದಾಜು ಮೊತ್ತವೆಷ್ಟು;

ಇ) ಈ ವರೆಗೆ ವೆಚ್ಚವಾದ ಮೊತ್ತವೆಷ್ಟು;

ಶ್ರೀ ಮಲ್ಲಿಕಾರ್ಜುನ ಖರ್ಗೆ(ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು) :

ಅ) ತುಂಗಾ ಮೇಲ್ದಂಡೆ ಯೋಜನೆಯ ನಿರ್ಮಾಣ ಕಾರ್ಯವು ಪ್ರಗತಿಯಲ್ಲಿದ್ದು, 2007ರ ಅಂತ್ಯಕ್ಕೆ ಪೂರ್ಣಗೊಳಿಸಲು ಉದ್ದೇಶಿಸಿದೆ.

ಆ) 1999–2000 ದರಗಳಂತೆ ಪರಿಷ್ಕೃತ ಅಂದಾಜು ಮೊತ್ತ ರೂ.1052.33 ಕೋಟಿಗಳು.

ಇ) ಯೋಜನೆ ಪ್ರಾರಂಭವಾದಾಗಿನಿಂದ, ಡಿಸೆಂಬರ್ 2004ರ ಅಂತ್ಯದವರೆಗೆ ಆಗಿರುವ ವೆಚ್ಚ ರೂ.435.00 ಕೋಟಿಗಳು.

1079(1090) ಶ್ರೀ ಉದಾಸಿ ಸಿ.ಎಂ(ಹಾನಗಲ್) : ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಹಾವೇರಿ ಜಿಲ್ಲೆಯ ಹಾನಗಲ್ ತಾಲ್ಲೂಕಿನ ತಿಳವಳ್ಳಿ ಮತ್ತು ಮಕರವಳ್ಳಿ ಗ್ರಾಮದ ಏತ ನೀರಾವರಿ ಯೋಜನೆಯ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಯಾವಾಗ ಕೆಲಸ ಪ್ರಾರಂಭ ಮಾಡಲಾಗುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ(ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು) :

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

1080(1140) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬಳ್ಳಾರಿ ಜಿಲ್ಲೆಯ ಯಾವ ಯಾವ ಸ್ಥಳಗಳಲ್ಲಿ ಕಬ್ಬಿಣದ ಅದಿರನ್ನು ತೆಗೆಯಲಾಗುತ್ತಿದೆ;

ಆ) ಸದರಿ ಪ್ರದೇಶಗಳಲ್ಲಿ ಎಷ್ಟು ಮಂದಿ ಹಾಗೂ ಯಾರು ಯಾರಿಗೆ ಎಷ್ಟು ಪ್ರದೇಶದಲ್ಲಿ ಅದಿರನ್ನು ತೆಗೆಯಲು ಪರವಾನಗಿ ನೀಡಲಾಗಿದೆ;

ಇ) ಇದರಿಂದಾಗಿ ರಾಜ್ಯ ಸರ್ಕಾರಕ್ಕೆ ಬರುತ್ತಿರುವ ಆದಾಯದ ಮೊತ್ತವೆಷ್ಟು?

ಶ್ರೀ ಧರ್ಮಸಿಂಗ್(ಮುಖ್ಯ ಮಂತ್ರಿಗಳು) :

ಅ) ಕಬ್ಬಿಣದ ಅದಿರಿನ ಗಣಿ ಗುತ್ತಿಗೆ ಮಂಜೂರಾದ ನಂತರ ಬಳ್ಳಾರಿ ಜಿಲ್ಲೆಯಲ್ಲಿ ಕಬ್ಬಿಣದ ಅದಿರನ್ನು ತೆಗೆಯುತ್ತಿರುವ ಸ್ಥಳಗಳ ವಿವರಗಳನ್ನು ಅನುಬಂಧ -1ರಲ್ಲಿ ನೀಡಲಾಗಿದೆ.

ಆ) ವಿವರಗಳನ್ನು ಅನುಬಂಧ-1 ರಲ್ಲಿ ತಿಳಿಸಲಾಗಿದೆ.

ಇ) ಇದರಿಂದಾಗಿ ರಾಜ್ಯ ಸರ್ಕಾರಕ್ಕೆ ಬರುತ್ತಿರುವ ಆದಾಯ ಈ ಕೆಳಕಂಡಂತಿದೆ :

2003-04 ರಲ್ಲಿ ರೂ. 42,29,61,789.00

2004-05 ರಲ್ಲಿ ರೂ. 48,73,89,172.00
(22.01.2005 ರವರೆಗೆ)

ಬಳ್ಳಾರಿ ಜಿಲ್ಲೆಯಲ್ಲಿನ ಕಬ್ಬಿಣದ ಅದಿರಿನ ಗಣಿಗುತ್ತಿಗೆಗಳು

ಅನುಬಂಧ-1

ಕ್ರ. ಸಂ.	ಗುತ್ತಿಗೆದಾರರ ಹೆಸರು	ಗಣಿ ಗುತ್ತಿಗೆ ಸಂಖ್ಯೆ	ಖನಿಜದ ಹೆಸರು	ಗ್ರಾಮ	ತಾಲ್ಲೂಕು	ವಿಸ್ತೀರ್ಣ (ಹೆಕ್ಟೇರ್‌ನಲ್ಲಿ)
1	ಎಂ.ಎಸ್.ಪಿ.ಎಲ್ ಲಿಮಿಟೆಡ್	1801	ಕಬ್ಬಿಣದ ಅದಿರು	ವ್ಯಾಸನ ಕೆರೆ	ಹೊಸಪೇಟೆ	347.22
2	ಆರ್.ಪಂಪಾಪತಿ	1806	ಕಬ್ಬಿಣದ ಅದಿರು	ಜಿ.ಎನ್.ಹಳ್ಳಿ	ಹೊಸಪೇಟೆ	182.45
3	ಅಲ್ಲಂ ಬಸವರಾಜು	1893	ಕಬ್ಬಿಣದ ಅದಿರು	ಜಿ.ಎನ್.ಹಳ್ಳಿ	ಹೊಸಪೇಟೆ	56.75
4	ಕಾರಿಗನೂರು ಮಿನರಲ್ ಎಂ.ಐ	1799 2075	ಕಬ್ಬಿಣದ ಅದಿರು	ಕಾರಿಗನೂರು	ಹೊಸಪೇಟೆ	199.10
5	ಆರ್.ಬಿ.ಎಸ್.ಎಸ್.ಎನ್.ದಾಸ್	2021	ಕಬ್ಬಿಣದ ಅದಿರು	ಸಂಕಲಪುರಂ	ಹೊಸಪೇಟೆ	76.08
6	ಆರ್.ಬಿ.ಎಸ್.ಎಸ್.ಎನ್ ದಾಸ್	2022	ಕಬ್ಬಿಣದ ಅದಿರು	ಸಂಕಲಪುರಂ	ಹೊಸಪೇಟೆ	31.87
7	ಶ್ರೀನಿವಾಸ ಮಿನರಲ್ಸ್	1933	ಕಬ್ಬಿಣದ ಅದಿರು	ಸಂಕಲಪುರಂ	ಹೊಸಪೇಟೆ	6.66
8	ಕೆ.ಎಸ್.ಅಶ್ವಥ ನಾರಾಯಣ ಸಿಂಗ್	1985	ಕಬ್ಬಿಣದ ಅದಿರು	ಸಂಕಲಪುರಂ	ಹೊಸಪೇಟೆ	3.64
9	ಎಂ.ಎಂ.ಎಲ್	1659	ಕಬ್ಬಿಣದ ಅದಿರು	ಜಿ.ಎನ್.ಹಳ್ಳಿ	ಹೊಸಪೇಟೆ	51.71
10	ಎಂ.ಎಂ.ಎಲ್	1710	ಕಬ್ಬಿಣದ ಅದಿರು	ಜಿ.ಎನ್.ಹಳ್ಳಿ	ಹೊಸಪೇಟೆ	98.95
11	ಜೆ.ಜಿ.ಬ್ರದರ್ಸ್	1028	ಕಬ್ಬಿಣದ ಅದಿರು	ಕ್ವಾಟೆಗುಡ್ಡ	ಹೊಸಪೇಟೆ	63.13
12	ಬಿ.ಆರ್.ಯೋಗೇಂದ್ರನಾಥ್ ಸಿಂಗ್	2186	ಕಬ್ಬಿಣದ ಅದಿರು	ಕಾಕುಬಾಳ್	ಹೊಸಪೇಟೆ	13.00
13	ರಾಜಾಪುರ ಮೈನ್ಸ್	2190	ಕಬ್ಬಿಣದ ಅದಿರು	ರಾಜಾಪುರ	ಹೊಸಪೇಟೆ	93.89
14	ಲಕ್ಷ್ಮಿನಾರಾಯಣ ಮೈನಿಂಗ್ ಕಂಪನಿ	1876	ಕಬ್ಬಿಣದ ಅದಿರು	ಕರಡಿಕೊಳ್ಳ	ಸಂಡೂರು	175.63
15	ಟ್ರೆಡೇಂಟ್ ಮಿನರಲ್	2315	ಕಬ್ಬಿಣದ ಅದಿರು	ವೆಂಕಟಗಿರಿ	ಸಂಡೂರು	32.27

16	ಮಿನರಲ್ ಸಿಂಡಿಕೇಟ್	2320	ಕಬ್ಬಿಣದ ಅದಿರು	ಎನ್ಇಬಿ ರೇಂಜ್	ಸಂಡೂರು	2.12
17	ಹೊತ್ತೂರು ಟ್ರೇಡರ್ಸ್	2313	ಕಬ್ಬಿಣದ ಅದಿರು	ಮಲ್ಲಗೊಲ್ಲ	ಸಂಡೂರು	21.11
18	ಎಸ್.ವಿ.ಶ್ರೀನಿವಾಸಲು	1634	ಕಬ್ಬಿಣದ ಅದಿರು	ಜೈಸಿಂಗಪುರ್	ಸಂಡೂರು	149.73
19	ಬಾಲಾಜಿ ಮೈನ್ಸ್	131	ಕಬ್ಬಿಣದ ಅದಿರು	ಜೈಸಿಂಗಪುರ	ಸಂಡೂರು	22.66
20	ಮುನೀರ್ ಎಂಟರ್‌ಪ್ರೈಸಸ್	2339	ಕಬ್ಬಿಣದ ಅದಿರು	ಎನ್ಇಬಿ ರೇಂಜ್	ಸಂಡೂರು	36.42
21	ಜೀನತ್ ಟ್ರಾನ್ಸ್‌ಪೋರ್ಟ್ ಕಂಪನಿ	2121 2239	ಕಬ್ಬಿಣದ ಅದಿರು	ರಾಮ್ ಘಡ್	ಸಂಡೂರು	44.28
22	ಜೀನತ್ ಟ್ರಾನ್ಸ್‌ಪೋರ್ಟ್ ಕಂಪನಿ	2120 2309	ಕಬ್ಬಿಣದ ಅದಿರು	ರಾಮ್ ಘಡ್	ಸಂಡೂರು	36.42
23	ಆರ್.ಎಂ.ಎಂ.ಪಿ.ಎಲ್ (ಡಾಲ್ಮಿಯ)	2010	ಕಬ್ಬಿಣದ ಅದಿರು	ಜೆ.ಕೊಳ್ಳ	ಸಂಡೂರು	331.44
24	ಆರ್.ಎಂ.ಎಂ.ಪಿ.ಎಲ್ (ಸಚ್ಚಿದಾನಂದ ಮೈನ್)	1894 2451	ಕಬ್ಬಿಣದ ಅದಿರು	ವೆಂಕಟಗಿರಿ	ಸಂಡೂರು	24.28
25	ಕೆ.ಎಂ.ಪಾರ್ವತಮ್ಮ	1625	ಕಬ್ಬಿಣದ ಅದಿರು	ರಾಜಾಪುರ	ಸಂಡೂರು	121.41
26	ಕೆ.ಎಂ.ಪಾರ್ವತಮ್ಮ	2056	ಕಬ್ಬಿಣದ ಅದಿರು	ಉಬ್ಬಲಗುಂಡಿ	ಸಂಡೂರು	80.94
27	ಟಿ.ಎಂ.ಎಲ್ ಲಿಮಿಟೆಡ್	2365	ಕಬ್ಬಿಣದ ಅದಿರು	ತಾರಾನಗರ	ಸಂಡೂರು	125.58
28	ಟಿ.ಎಂ.ಎಲ್ ಲಿಮಿಟೆಡ್	2366	ಕಬ್ಬಿಣದ ಅದಿರು	ತಾರಾನಗರ	ಸಂಡೂರು	33.97
29	ವಿಯಾಮ್(ಪ್ರೈ) ಲಿಮಿಟೆಡ್	988	ಕಬ್ಬಿಣದ ಅದಿರು	ಎನ್ಇಬಿ ರೇಂಜ್	ಸಂಡೂರು	20.23
30	ಅಂಬಿಕ ಘೋರ್ಪಡೆ	2354	ಕಬ್ಬಿಣದ ಅದಿರು	ಕಮ್ಮತ್ತೂರು	ಸಂಡೂರು	4.95
31	ಗೋಗ್ಗ ಗುರು ಶಾಂತಯ್ಯ	2093	ಕಬ್ಬಿಣದ ಅದಿರು	ಎನ್ಇಬಿ ರೇಂಜ್	ಸಂಡೂರು	42.90

32	ಗೋಗ್ಗ ಗುರು ಶಾಂತಯ್ಯ	1874	ಕಬ್ಬಿಣದ ಅದಿರು	ಎನ್‌ಇಬಿ ಬ್ಲಾಕ್	ಸಂಡೂರು	18.21
33	ಎಸ್.ಬಿ.ಮಿನರಲ್ಸ್	1301	ಕಬ್ಬಿಣದ ಅದಿರು	ಎನ್‌ಇಬಿ ರೇಂಜ್	ಸಂಡೂರು	44.52
34	ಹೆಚ್.ಆರ್.ಗವಿಯಪ್ಪ	2247	ಕಬ್ಬಿಣದ ಅದಿರು	ನವಲಟ್ಟಿ	ಸಂಡೂರು	32.00
35	ಡೆಕನ್ ಮೈನಿಂಗ್ ಸಿಂಡಿಕೇಟ್	2080/A	ಕಬ್ಬಿಣದ ಅದಿರು	ಕಮ್ಮತೆರವು	ಸಂಡೂರು	20.23
36	ಭಾರತ್. ಮೈನ್ಸ್	2245	ಕಬ್ಬಿಣದ ಅದಿರು	ನಂದೀ ಹಳ್ಳಿ	ಸಂಡೂರು	26.20
37	ಶಾಂತ ಪ್ರಿಯಾ ಮಿನರಲ್ಸ್	2119	ಕಬ್ಬಿಣದ ಅದಿರು	ಆರ್.ಎಂ.ಬ್ಲಾಕ್	ಸಂಡೂರು	80.94
38	ಆಸೋಸಿಯೆಟೆಡ್ ಮೈನಿಂಗ್	625	ಕಬ್ಬಿಣದ ಅದಿರು	ಬಿ.ಎಂ.ಬ್ಲಾಕ್	ಸಂಡೂರು	16.19
39	ಟ್ರೈಡೆಂಟ್ ಮೈನಿಂಗ್	1732	ಕಬ್ಬಿಣದ ಅದಿರು	ಆರ್.ಎಂ.ದುರ್ಗ	ಸಂಡೂರು	5.26
40	ನಾರಾಯಣ್ ಮೈನ್ಸ್	1602 2396	ಕಬ್ಬಿಣದ ಅದಿರು	ಎ.ಎಂ.ಪಾಂಡ್ರ	ಸಂಡೂರು	109.27
41	ಎನ್.ಎಂ.ಡಿ.ಸಿ.ಲಿ.,	839 2396	ಕಬ್ಬಿಣದ ಅದಿರು	ದೋಣಿ ಮಲೈ	ಸಂಡೂರು	2013.35
42	ಎನ್.ಎಂ.ಡಿ.ಸಿ.ಲಿ.,	1111	ಕಬ್ಬಿಣದ ಅದಿರು	ಕುಮಾರ ಸ್ವಾಮಿ ರೇಂಜ್	ಸಂಡೂರು	647.50
43	ಎನ್.ಮಂಜೂರ್ ಆಹ್ಮದ್	1324	ಕಬ್ಬಿಣದ ಅದಿರು	ಎನ್‌ಇಬಿ ರೇಂಜ್	ಸಂಡೂರು	15.97
44	ವಿ.ಎಸ್.ಲ್ಯಾಡ್ ಅಂಡ್ ಸನ್ಸ್	2290	ಕಬ್ಬಿಣದ ಅದಿರು	ಎಸ್.ಜೆ.ಹಾರುವು	ಸಂಡೂರು	105.06

45	ಎಂ.ಎಂ.ಎಲ್	1754	ಕಬ್ಬಿಣದ ಅದಿರು	ಎಸ್.ಬಿ.ಹಳ್ಳಿ	ಸಂಡೂರು	168.02
46	ಎಸ್.ಬಿ.ಮಿನರಲ್ಸ್	1114/23 93	ಕಬ್ಬಿಣದ ಅದಿರು	ರಾಮಘಡ	ಸಂಡೂರು	40.47
47	ಆಶಾ ಟ್ರಾನ್ಸ್ ಪೋರ್ಟ್	1948	ಕಬ್ಬಿಣದ ಅದಿರು	ಜೈಸಿಂಗ್ ಪುರ	ಸಂಡೂರು	121.41
48	ಎ.ಎಂ.ಮಿನರಲ್ಸ್	2278	ಕಬ್ಬಿಣದ ಅದಿರು	ಆರ್.ಎಂ.ಬ್ಲಾಕ್	ಸಂಡೂರು	2.02
49	ಎಂ.ಎಂ.ಎಲ್	2002	ಕಬ್ಬಿಣದ ಅದಿರು	ತಿಮ್ಮಪ್ಪನಗುಡಿ	ಸಂಡೂರು	621.59
50	ಪಿ.ಬಾಲಸುಬ್ಬ ಶೆಟ್ಟಿ	1898 2006	ಕಬ್ಬಿಣದ ಅದಿರು	ಕರಡಿ ಕೊಳ್ಳ	ಸಂಡೂರು	44.11
51	ಎಸ್.ಎಂ.ಐ.ಓರ್ ಲಿಮಿಟೆಡ್	1179	ಕಬ್ಬಿಣದ ಅದಿರು	ದೇವರಿಗೆ	ಸಂಡೂರು	7511.04
52	ಹೆಚ್.ಜಿ ರಂಗನ ಗೌಡ	2148	ಕಬ್ಬಿಣದ ಅದಿರು	ಯಶವಂತ ನಗರ	ಸಂಡೂರು	60.70
53	ಜೆ.ಎಂ.ವೃಷಭೇಂದ್ರಯ್ಯ	2173	ಕಬ್ಬಿಣದ ಅದಿರು	ಸಿದ್ದಾಪುರ	ಸಂಡೂರು	3.36
54	ಪಿ.ಅಬೂಬ್‌ಕರ್	2183	ಕಬ್ಬಿಣದ ಅದಿರು	ಸಿದ್ದಾಪುರ	ಸಂಡೂರು	14.00
55	ವೀರಭದ್ರಪ್ಪ ಸಂಗಪ್ಪ ಅಂಡ್ ಕಂಪನಿ	2160	ಕಬ್ಬಿಣದ ಅದಿರು	ಆರ್.ಎಂ.ಬಿ. ರೇಂಜ್	ಸಂಡೂರು	18.62
56	ಕುಮಾರ ಸ್ವಾಮಿ ಮಿನರಲ್ ಎಕ್ಸ್ ಪೋರ್ಟ್	2141	ಕಬ್ಬಿಣದ ಅದಿರು	ಯಶವಂತ ನಗರ	ಸಂಡೂರು	82.55
57	ವೀರಭದ್ರಪ್ಪ ಸಂಗಪ್ಪ ಐಸಿಎಸ್	2296	ಕಬ್ಬಿಣದ ಅದಿರು	ರಾಮನ ದುರ್ಗ	ಸಂಡೂರು	51.00
58	ಚೌಗಲೆ ಅಂಡ್ ಕಂಪನಿ	1190	ಕಬ್ಬಿಣದ ಅದಿರು	ಬಾವಿಹಳ್ಳಿ	ಸಂಡೂರು	459.73

59	ಎಂ.ಎಂ.ಎಲ್	995	ಕಬ್ಬಿಣದ ಅದಿರು	ಉಬ್ಬಲ ಗುಂಡಿ	ಸಂಡೂರು	80.94
60	ಅಶ್ವತ್ಥನಾರಾಯಣ ಸಿಂಗ್	626	ಕಬ್ಬಿಣದ ಅದಿರು	ಜೈ ಸಿಂಗ್ ಪುರ್	ಸಂಡೂರು	129.49
61	ಹೆಚ್.ಪಿ. ಮಂಜುನಾಥ್	699	ಕಬ್ಬಿಣದ ಅದಿರು	ಜೆ.ಎನ್.ಹಳ್ಳಿ	ಸಂಡೂರು	3.04
62	ಚಾರುಚಂದ್ರ	2102	ಕಬ್ಬಿಣದ ಅದಿರು	ಕಲ್ಲ ಹಳ್ಳಿ	ಸಂಡೂರು	137.59
63	ಆಲಂ ಪ್ರಶಾಂತ್	2352	ಕಬ್ಬಿಣದ ಅದಿರು	ಹರಗಿನ ದೋಣಿ	ಬಳ್ಳಾರಿ	69.60
64	ಸುಗಲಮ್ಮ ಗುಡ್ಡ ಮೈನಿಂಗ್ ಕಂಪನಿ	1083	ಕಬ್ಬಿಣದ ಅದಿರು	ಬೆಳಗಲ್	ಬಳ್ಳಾರಿ	10.11
65	ಬಳ್ಳಾರಿ ಮೈನಿಂಗ್ ಕಂಪನಿ	1586	ಕಬ್ಬಿಣದ ಅದಿರು	ಹಲಕುಂಡಿ	ಬಳ್ಳಾರಿ	15.79
66	ವಿ.ವೆಂಕಟೇಶಲು	2368	ಕಬ್ಬಿಣದ ಅದಿರು	ಜಾನಿಕುಂಟ	ಬಳ್ಳಾರಿ	56.13
67	ಗವಿ ಸಿದ್ದೇಶ್ವರ ಎಂಟರ್ ಪ್ರೈಸಸ್	80	ಕಬ್ಬಿಣದ ಅದಿರು	ಬೆಳಗಲ್	ಬಳ್ಳಾರಿ	5.66
68	ವಿಭೂತಿ ಗುಡ್ಡ ಮೈನ್ಸ್ ಪ್ರೈವೇಟ್.ಲಿ.	1193	ಕಬ್ಬಿಣದ ಅದಿರು	ಬೆಳಗಲ್	ಬಳ್ಳಾರಿ	112.56
69	ಮೆ.ಟಿಪಿ ಬ್ರೈಟ್ಸ ಅಂಡ್ ಅಸ್ ಬ್ಯಾರ್ಟಟಿಸ್ ಪೆಯಿಂಟ್ಸ್ ಲಿ.	2086	ಕಬ್ಬಿಣದ ಅದಿರು	ಹರಗಿನ ದೋಣಿ	ಬಳ್ಳಾರಿ	191.45
70	ಮಿನರಲ್ ಮೈನರ್ಸ್ ಅಂಡ್ ಟ್ರೇಡರ್ಸ್	2185	ಕಬ್ಬಿಣದ ಅದಿರು	ಜಾನಿಕುಂಟ	ಬಳ್ಳಾರಿ	46.13
71	ಆಲಂ ಪ್ರಶಾಮತ್	2289	ಕಬ್ಬಿಣದ ಅದಿರು	ಸಂಜೀವ ರಾಯನ ಕೋಟೆ	ಬಳ್ಳಾರಿ	42.9

1081(1495) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಕಬಿನಿ ಹಾಗೂ ಕಪಿಲಾ ಜಲಾಶಯಗಳ ಎರಡನೇ ಹಂತದ ಕಾಮಗಾರಿಯ ಶಂಕುಸ್ಥಾಪನೆ ಕೆಲಸವನ್ನು ಮಾಡಲಾಗಿರುವುದೇ ?

ಆ) ಮಾಡಿದ್ದಲ್ಲಿ, ಯಾವಾಗ ಮಾಡಲಾಗಿದೆ ಹಾಗೂ ಆ ಸಮಯದಲ್ಲಿ ಸದರಿಯೋಜನೆಗಳಿಗೆ ತಯಾರಿಸಲಾಗಿದ್ದ ಅಂದಾಜು ವೆಚ್ಚದ ಮೊತ್ತವೆಷ್ಟು(ವಿವರ ನೀಡುವುದು) ?

ಇ) ಸದರಿ ಯೋಜನೆಗೆ ಕಾಮಗಾರಿ ಕೆಲಸಗಳನ್ನು ಮಾಡಲಾಗುತ್ತಿರುವುದೇ ? ಇಲ್ಲದಿದ್ದಲ್ಲಿ ಇದಕ್ಕಿರುವ ಅಡ್ಡಿ ಆತಂಕಗಳೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ(ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು) :

ಅ) ಹೌದು , ಕಬಿನಿ ಎರಡನೇ ಹಂತದ ಕಾಮಗಾರಿಯ ಶಂಕುಸ್ಥಾಪನೆ ಮಾಡಲಾಗಿದೆ.

ಆ) ಎರಡನೇ ಹಂತದ ಕಾಮಗಾರಿಯ ಶಂಕುಸ್ಥಾಪನೆಯನ್ನು 1987 ರಲ್ಲಿ ಮಾಡಲಾಗಿದೆ. ಆ ಸಮಯದಲ್ಲಿ ಸದರಿ ಯೋಜನೆಗಳಿಗೆ ತಯಾರಿಸಲಾಗಿದ್ದ ಅಂದಾಜು ವೆಚ್ಚ ರೂ.250.00 ಕೋಟಿಗಳು.

ಇ) ಸದರಿ ಯೋಜನೆಯುನ್ನು ತಾಂತ್ರಿಕ ಕಾರಣಗಳಿಂದ ಪರಿಷ್ಕರಿಸಿ ಪರ್ಯಾಯ ಯೋಜನೆಯನ್ನು ಕಬಿನಿ ಪುನರ್ ಪರಿಷ್ಕೃತ ಅಂದಾಜಿನಲ್ಲಿ ಅಳವಡಿಸಿ ರೂ.1233 ಕೋಟಿ ಪರಿಸ್ಕೃತ ಅಂದಾಜು ತಯಾರಿಸಿದೆ. ಕಾಮಗಾರಿಗಳ ಸರ್ವೇ ಕಾರ್ಯ ಪ್ರಗತಿಯಲ್ಲಿದೆ.

1082(1496) ಶ್ರೀ ವಾಟಾಳ್ ನಾಗರಾಜ್(ಚಾಮರಾಜನಗರ) : ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಕಳೆದ ಮೂರು ವರ್ಷಗಳಿಂದ ಬೆಂಗಳೂರು ಹಾಗೂ ರಾಜ್ಯದ ಇತರ ಬಾಗಗಳಲ್ಲಿ ನಡೆದಿರುವ ಕೊಲೆ, ದರೋಡೆ, ಅಪಹರಣಗಳ ಪ್ರಕರಣಗಳೆಷ್ಟು; (ವರ್ಷವಾರು ಹಾಗೂ ಜಿಲ್ಲಾವಾರು ವಿವರ ನೀಡುವುದು)

ಆ) ಸದರಿ ಪ್ರಕರಣಗಳಲ್ಲಿ ಎಷ್ಟನ್ನು ಪತ್ತೆ ಹಚ್ಚಲಾಗಿದೆ: (ಪೂರ್ಣ ವಿವರ ನೀಡುವುದು) ;

ಶ್ರೀ ಧರ್ಮಸಿಂಗ್(ಮುಖ್ಯಮಂತ್ರಿಗಳು) :

ಅ) **ಬೆಂಗಳೂರು ನಗರ :–**

ವರ್ಷ	**ಕೊಲೆ**	**ದರೋಡೆ**	**ಅಪಹರಣ**
2002	201	27	159
2003	217	46	132
2004	214	36	175

ರಾಜ್ಯದ ಇತರೆ ಭಾಗಗಳಲ್ಲಿ :–

ವರ್ಷ	**ಕೊಲೆ**	**ದರೋಡೆ**	**ಅಪಹರಣ**
2002	1423	156	488
2003	1286	173	352
2004	1307	164	385

ವರ್ಷವಾರು ಮತ್ತು ಜಿಲ್ಲಾವಾರು ವಿವರಗಳನ್ನು ಅನುಬಂಧ ಅ ನಲ್ಲಿ ನೀಡಲಾಗಿದೆ.

ಆ) ಬೆಂಗಳೂರು ನಗರ :-

ವರ್ಷ	ಕೊಲೆ	ದರೋಡೆ	ಅಪಹರಣ
2002	191	23	76
2003	175	38	61
2004	157	22	55

ರಾಜ್ಯದ ಇತರೆ ಭಾಗಗಳಲ್ಲಿ :-

ವರ್ಷ	ಕೊಲೆ	ದರೋಡೆ	ಅಪಹರಣ
2002	1230	99	304
2003	1127	121	247
2004	1044	99	247

ವರ್ಷವಾರು ಮತ್ತು ಜಿಲ್ಲಾವಾರು ವಿವರಗಳನ್ನು ಅನುಬಂಧ 'ಅ' ನಲ್ಲಿ ಸಲ್ಲಿಸಲಾಗಿದೆ.

ಅನುಬಂಧ-'ಅ'

2002

ಕ್ರ.ಸಂ.	ಜಿಲ್ಲೆ	ಕೊಲೆ		ದರೋಡೆ		ಅಪಹರಣ	
		ವರದಿ	ಪತ್ತೆ	ವರದಿ	ಪತ್ತೆ	ವರದಿ	ಪತ್ತೆ
1	ಬೆಂಗಳೂರು ನಗರ	201	191	27	23	159	76
2	ಮೈಸೂರು ನಗರ	22	18	01	01	11	07
3	ಹುಬ್ಬಳ್ಳಿ-ಧಾರವಾಡ ನಗರ	17	11	05	01	16	08
4	ಬೆಂಗಳೂರು ಜಿಲ್ಲೆ	152	142	24	23	96	09
5	ತುಮಕೂರು	57	38	13	08	19	13
6	ಕೋಲಾರ	75	63	06	03	15	13
7	ಕೆ.ಜಿ.ಎಫ್	14	9	00	00	03	03
8	ಮೈಸೂರು ಜಿಲ್ಲೆ	62	49	03	01	09	09
9	ಚಾಮರಾಜನಗರ	30	29	04	03	06	00
10	ಕೊಡಗು	35	34	00	00	02	02
11	ಮಂಡ್ಯ	61	49	04	03	18	13
12	ಹಾಸನ	73	65	04	04	27	14
13	ದಕ್ಷಿಣ ಕನ್ನಡ	26	21	03	03	05	05
14	ಉಡುಪಿ	15	14	02	02	09	09
15	ಉತ್ತರ ಕನ್ನಡ	28	27	00	00	00	00

16	ಚಿಕ್ಕಮಗಳೂರು	36	31	01	01	12	11
17	ದಾವಣಗೆರೆ	57	52	09	04	14	14
18	ಚಿತ್ರದುರ್ಗ	36	30	02	01	06	05
19	ಶಿವಮೊಗ್ಗ	53	49	07	07	14	13
20	ಬಳ್ಳಾರಿ	62	46	02	01	12	12
21	ಬೆಳಗಾಂ	113	98	12	07	26	23
22	ಧಾರವಾಡ	35	27	02	00	07	05
23	ಬಿಜಾಪುರ	62	57	12	02	30	25
24	ಹಾವೇರಿ	18	182	06	05	10	04
25	ಗದಗ್	15	14	04	02	04	04
26	ಬಾಗಲಕೋಟೆ	51	45	02	00	17	01
27	ಗುಲ್ಬರ್ಗ	79	72	01	01	43	41
28	ಬೀದರ್	49	42	06	02	23	13
29	ರಾಯಚೂರು	59	56	09	07	25	24
30	ಕೊಪ್ಪಳ	19	15	08	04	09	04
31	ರೈಲ್ವೇಸ್	12	09	04	03	00	00
	ಒಟ್ಟು.	**1624**	**1421**	**183**	**122**	**647**	**380**

2003

		ಕೊಲೆ		ದರೋಡೆ		ಅಪಹರಣ	
ಕ್ರ.ಸಂ.	ಜಿಲ್ಲೆ	ವರದಿ	ಪತ್ತೆ	ವರದಿ	ಪತ್ತೆ	ವರದಿ	ಪತ್ತೆ
1	ಬೆಂಗಳೂರು ನಗರ	216	175	46	38	132	61
2	ಮೈಸೂರು ನಗರ	26	18	03	02	10	09
3	ಹುಬ್ಬಳ್ಳಿ-ಧಾರವಾಡ ನಗರ	23	15	04	02	11	09
4	ಬೆಂಗಳೂರು ಜಿಲ್ಲೆ	125	115	16	06	29	26
5	ತುಮಕೂರು	76	55	06	04	23	07
6	ಕೋಲಾರ	68	53	01	01	08	05
7	ಕೆ.ಜಿ.ಎಫ್	12	04	03	03	04	03
8	ಮೈಸೂರು ಜಿಲ್ಲೆ	40	38	02	02	03	03
9	ಚಾಮರಾಜನಗರ	23	23	04	03	02	00
10	ಕೊಡಗು	32	28	03	03	02	02
11	ಮಂಡ್ಯ	57	52	05	01	08	04

12	ಹಾಸನ	53	51	09	09	23	14
13	ದಕ್ಷಿಣ ಕನ್ನಡ	35	34	07	07	09	08
14	ಉಡುಪಿ	15	11	03	02	09	04
15	ಉತ್ತರ ಕನ್ನಡ	23	23	03	02	01	01
16	ಚಿಕ್ಕಮಗಳೂರು	28	24	08	07	14	13
17	ದಾವಣಗೆರೆ	29	26	10	06	12	11
18	ಚಿತ್ರದುರ್ಗ	42	36	05	04	10	05
19	ಶಿವಮೊಗ್ಗ	51	46	08	08	19	17
20	ಬಳ್ಳಾರಿ	48	45	03	02	11	11
21	ಬೆಳಗಾಂ	107	93	16	11	28	21
22	ಧಾರವಾಡ	28	23	09	08	00	00
23	ಬಿಜಾಪುರ	55	52	05	04	18	11
24	ಹಾವೇರಿ	25	18	08	06	08	07
25	ಗದಗ್	16	15	05.	01	01	01
26	ಬಾಗಲಕೋಟೆ	50	46	01	01	16	04
27	ಗುಲ್ಬರ್ಗ	88	83	05	03	29	23
28	ಬೀದರ್	37	31	07	03	22	08
29	ರಾಯಚೂರು	37	35	05	05	16	15
30	ಕೊಪ್ಪಳ	25	23	06	05	05	04
31	ರೈಲ್ವೇಸ್	12	11	03	00	01	01
	ಒಟ್ಟು	**1502**	**1302**	**219**	**159**	**484**	**308**

2004

ಕ್ರ.ಸಂ.	ಜಿಲ್ಲೆ	ಕೊಲೆ		ದರೋಡೆ		ಅಪಹರಣ	
		ವರದಿ	ಪತ್ತೆ	ವರದಿ	ಪತ್ತೆ	ವರದಿ	ಪತ್ತೆ
1	ಬೆಂಗಳೂರು ನಗರ	214	157	36	22	175	55
2	ಮೈಸೂರು ನಗರ	29	24	01	00	08	08
3	ಹುಬ್ಬಳ್ಳಿ-ಧಾರವಾಡ ನಗರ	17	13	00	00	09	03
4	ಬೆಂಗಳೂರು ಜಿಲ್ಲೆ	150	143	14	12	26	14
5	ತುಮಕೂರು	68	36	10	03	13	07
6	ಕೋಲಾರ	63	36	03	00	13	06
7	ಕೆ.ಜಿ.ಎಫ್	16	10	00	00	08	01

8	ಮೈಸೂರು ಜಿಲ್ಲೆ	44	31	03	02	06	05
9	ಚಾಮರಾಜನಗರ	20	16	02	02	09	00
10	ಕೊಡಗು	21	20	01	01	03	03
11	ಮಂಡ್ಯ	58	43	02	00	08	08
12	ಹಾಸನ	61	60	04	03	19	12
13	ದಕ್ಷಿಣ ಕನ್ನಡ	25	24	08	08	11	10
14	ಉಡುಪಿ	16	13	10	06	08	05
15	ಉತ್ತರ ಕನ್ನಡ	24	17	03	01	02	02
16	ಚಿಕ್ಕಮಗಳೂರು	29	26	05	04	13	13
17	ದಾವಣಗೆರೆ	37	35	07	05	10	10
18	ಚಿತ್ರದುರ್ಗ	32	28	06	02	13	07
19	ಶಿವಮೊಗ್ಗ	48	47	07	07	20	18
20	ಬಳ್ಳಾರಿ	43	29	02	01	17	08
21	ಬೆಳಗಾಂ	106	84	15	05	26	23
22	ಧಾರವಾಡ	26	19	04	02	03	01
23	ಬಿಜಾಪುರ	66	54	06	04	21	20
24	ಹಾವೇರಿ	25	18	02	00	07	06
25	ಗದಗ್	16	14	04	00	02	02
26	ಬಾಗಲಕೋಟೆ	38	33	19	15	24	04
27	ಗುಲ್ಬರ್ಗ	102	75	06	03	40	24
28	ಬೀದರ್	40	26	11	09	25	18
29	ರಾಯಚೂರು	43	39	04	04	11	07
30	ಕೊಪ್ಪಳ	26	19	04	00	07	00
31	ರೈಲ್ವೇಸ್	18	12	01	00	03	02
	ಒಟ್ಟು	**1521**	**1201**	**200**	**121**	**560**	**302**

1085(1397) ಶ್ರೀ ವೆಂಕಟಮುನಿಯಪ್ಪ.ಬಿ.ಪಿ (ಬೇತಮಂಗಲ) : ಮಾನ್ಯ ಮುಖ್ಯ ಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬಂಗಾರಪೇಟೆ ಪಟ್ಟಣಕ್ಕೆ ಶಾಶ್ವತ ಕುಡಿಯುವ ನೀರಿನ ಯೋಜನೆ ಏನಾದರೂ ಸರ್ಕಾರದ ಮುಂದಿದೆಯೇ;

ಆ) ಇದ್ದಲ್ಲಿ, ಈ ಯೋಜನೆಯನ್ನು, ಯಾವಾಗ ಪ್ರಾರಂಭಿಸಲಾಗುವುದು;

ಇ) ಈ ಯೋಜನೆಗೆ ಒಟ್ಟು ಎಷ್ಟು ಹಣ ಬಿಡುಗಡೆ ಮಾಡಲಾಗಿದೆ.(ವಿವರ ಒದಗಿಸುವುದು)

ಶ್ರೀ ಧರ್ಮಸಿಂಗ್(ಮುಖ್ಯ ಮಂತ್ರಿಗಳು):

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

1086(1398) ಶ್ರೀ ವೆಂಕಟಮುನಿಯಪ್ಪ.ಬಿ.ಪಿ(ಬೇತಮಂಗಲ) : ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬಂಗಾರಪೇಟೆ ತಾಲ್ಲೂಕು ಬೇತಮಂಗಲ ದೊಡ್ಡ ಕೆರೆ ಹೂಳೆತ್ತುವ ಯೋಜನೆ ಸರ್ಕಾರದ ಮುಂದಿದೆಯೇ?

ಆ) ಈ ಯೋಜನೆಯಡಿ ಹೂಳೆತ್ತುವ ಕಾಮಗಾರಿ ಯಾವಾಗ ಪ್ರಾರಂಭಿಸಲಾಗುವುದು;

ಇ) ಈ ಯೋಜನೆ ಕಾಯ್ದಿರಿಸಲಾಗಿದೆಯೇ?

ಈ) ಹಣ ಕಾಯ್ದಿರಿಸದಿದ್ದಲ್ಲಿ, ಯಾವಾಗ ಈ ಯೋಜನೆಗೆ ಹಣ ಬಿಡುಗಡೆ ಮಾಡಲಾಗುವುದು?

ಶ್ರೀ ಧರ್ಮಸಿಂಗ್(ಮುಖ್ಯ ಮಂತ್ರಿಗಳು) :

ಅ) ಇದೆ

ಆ) ಬೇತಮಂಗಲ ಕೆರೆಯ ಹೊಳೆತ್ತುವ ಕಾಮಗಾರಿಯ ರೂ 981.00 ಲಕ್ಷಗಳ (0.5ಮೀ) ಹಾಗೂ 1961.00 ಲಕ್ಷಗಳ ಅಂದಾಜನ್ನು (1ಮೀ. ಆಳಕ್ಕೆ) ಸರ್ಕಾರದ ಆಡಳಿತಾತ್ಮಕ ಮಂಜೂರಾತಿ ಕೋರಿ ಸಲ್ಲಿಸಿದ್ದು ಪರಿಶೀಲನೆಯಲ್ಲಿದೆ.

ಇ) ಇಲ್ಲ

ಈ) ಯೋಜನೆ ಮಂಜೂರಾತಿ ಆದ ನಂತರ ಈ ಬಗ್ಗೆ ಪರಿಶೀಲಿಸಲಾಗುವುದು.

1087(1284) ಶ್ರೀಮತಿ. ವಿಜಯಲಕ್ಷ್ಮಮ್ಮ ಬಂಡಿಸಿದ್ದೇಗೌಡ (ಶ್ರೀರಂಗಪಟ್ಟಣ) : ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿ ಲೋಕಪಾವನಿ ಏತ ನೀರಾವರಿ ಯೋಜನೆಗೆ ಸರ್ಕಾರ ಮಂಜೂರಾತಿ ನೀಡಿದೆಯೇ?

ಆ) ಈ ಹಿಂದೆ ಸರ್ಕಾರದ ಅವಧಿಯಲ್ಲಿ ಸದರಿ ಯೋಜನೆಗೆ ಸರ್ಕಾರದ ವತಿಯಿಂದ ಶಂಕುಸ್ಥಾಪನೆ ನೆರವೇರಿಸಲಾಗಿದೆಯೇ?

ಇ) ಈ ಯೋಜನೆ ಅನುಷ್ಟಾನಕ್ಕೆ ಇರುವ ತೊಂದರೆಗಳೇನು?

ಈ) ಯಾವಾಗ ಸದರಿ ಯೋಜನೆ ಕಾಮಗಾರಿಯನ್ನು ಆರಂಭಿಸಿ, ಪೂರ್ಣ ಗೊಳಿಸಾಲಾಗುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು) :

ಅ) ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿ ಲೋಕಪಾವನಿ ಏತ ನೀರಾವರಿ ಯೋಜನೆಗೆ ಮಂಜೂರಾತಿ ಪರಿಶೀಲನೆಯಲ್ಲಿದೆ.

ಆ) ಹೌದು

ಇ) ಲೋಕಪಾವನಿ ಏತ ನೀರಾವರಿ ಯೋಜನೆಯ ಸರ್ವೇ ಕಾಮ ಗಾರಿಗಳು ಪೂರ್ಣಗೊಂಡಿರುತ್ತದೆ. ಯೋಜನೆಯ ಅಂದಾಜು ಮೊತ್ತ ರೂ.47.00 ಕೋಟಿಗಳಾಗಿದ್ದು ಆಡಳಿತಾತ್ಮಕ ಮಂಜೂರಾತಿಯನ್ನು ನೀಡಲು ಸರ್ಕಾರದ ಮಟ್ಟದಲ್ಲಿ ಪರಿಶೀಲನೆಯಲ್ಲಿದೆ.

ಈ) ಮಂಜೂರಾತಿ ನೀಡಿದ ನಂತರ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು.

1088(1547)ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ, (ಅಂಕೋಲ) : ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬೆಂಗಳೂರು ಮಹಾನಗರ ಪಾಲಿಕೆ ಹೊಂದಿರುವ ವಾಣಿಜ್ಯ ಸಂಕೀರ್ಣಗಳು ಎಷ್ಟು;

ಆ) ಅವುಗಳು ಯಾವುವು; ಯಾವ ಸ್ಥಳಗಳಲ್ಲಿವೆ;

ಇ) ವಾಣಿಜ್ಯ ಸಂಕೀರ್ಣಗಳಿಂದ ಪಾಲಿಕೆಗೆ ಬರುತ್ತಿರುವ ಆದಾಯ ಎಷ್ಟು;

ಈ) ವಾಣಿಜ್ಯ ಸಂಕೀರ್ಣಗಳಲ್ಲಿರುವ ಮಳಿಗೆಗಳ ಸಂಖ್ಯೆ ಎಷ್ಟು; ಈ ಪೈಕಿ ಹಂಚಿಕೆ ಮಾಡಿರುವ ಬಾಕಿ ಉಳಿದಿರುವ ಮಳಿಗೆಗಳು ಎಷ್ಟು (ವಾಣಿಜ್ಯ ಸಂಕೀರ್ಣವಾರು ವಿವರ ನೀಡುವುದು);

ಉ) ವಾಣಿಜ್ಯ ಸಂಕೀರ್ಣಗಳ ನಿರ್ವಹಣೆಗೆ ಪಾಲಿಕೆಯಿಂದ ತಗಲುತ್ತಿರುವ ವೆಚ್ಚ ಎಷ್ಟು?

ಶ್ರೀ ಧರ್ಮಸಿಂಗ್(ಮುಖ್ಯ ಮಂತ್ರಿಗಳು) :

ಅ) ಬೆಂಗಳೂರು ಮಹಾನಗರ ಪಾಲಿಕೆ ಹೊಂದಿರುವ ವಾಣಿಜ್ಯ ಸಂಕೀರ್ಣಗಳು ಏಳು(7).

ಆ)1. ಶ್ರೀ ಕೃಷ್ಣರಾಜೇಂದ್ರ ಮಾರುಕಟ್ಟೆ, ಮೈಸೂರು ರಸ್ತೆ.

2. ಸುಭಾಷ್‌ನಗರ ವಾಣಿಜ್ಯ ಸಂಕೀರ್ಣ, ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣದ ಮುಂಭಾಗ,
3. ರಾಜಾಜಿನಗರ ವಾಣಿಜ್ಯ ಸಂಕೀರ್ಣ, ರಾಜಾಜಿನಗರ 3ನೇ ಬ್ಲಾಕ್,
4. ಜಯನಗರ ವಾಣಿಜ್ಯ ಸಂಕೀರ್ಣ, ಜಯನಗರ 4ನೇ ಬ್ಲಾಕ್,
5. ಜೆ.ಸಿ.ರಸ್ತೆ ವಾಣಿಜ್ಯ ಸಂಕೀರ್ಣ, ಜೆ.ಸಿ.ರಸ್ತೆ
6. ಯಶವಂತಪುರ ವಾಣಿಜ್ಯ ಸಂಕೀರ್ಣ, ಯಶವಂತಪುರ.
7. ಸುಭಾಷ್‌ಚಂದ್ರ ಬೋಸ್ ವಾಣಿಜ್ಯ ಸಂಕೀರ್ಣ, ಎಂ.ಜಿ.ರಸ್ತೆ.

ಆ) ಈ ವಾಣಿಜ್ಯ ಸಂಕೀರ್ಣಗಳಿಂದ ಪಾಲಿಕೆಗೆ ಬರುತ್ತಿರುವ ಒಟ್ಟು ವಾರ್ಷಿಕ ಆದಾಯ ರೂ.5,25,22,212-00 ಗಳು.

ಇ) ಈ ವಾಣಿಜ್ಯ ಸಂಕೀರ್ಣಗಳಲ್ಲಿರುವ ಒಟ್ಟು ಮಳಿಗೆಗಳ ಸಂ.1862.

1. ಶ್ರೀ ಕೃಷ್ಣರಾಜೇಂದ್ರ ಮರುಕಟ್ಟೆ – 1214 ಮಳಿಗೆಗಳು.
2. ಜಯನಗರ ವಾಣಿಜ್ಯ ಸಂಕೀರ್ಣ – 273 ಮಳಿಗೆಗಳು.
3. ಸುಭಾಷ್‌ಚಂದ್ರ ಬೋಸ್ ವಾಣಿಜ್ಯ ಸಂಕೀರ್ಣ – 118 ಮಳಿಗೆಗಳು.
4. ಯಶವಂತಪುರ ವಾಣಿಜ್ಯ ಸಂಕೀರ್ಣ, – 111 ಮಳಿಗೆಗಳು.
5. ರಾಜಾಜಿನಗರ ವಾಣಿಜ್ಯ ಸಂಕೀರ್ಣ – 106 ಮಳಿಗೆಗಳು.
6. ಜೆ.ಸಿ.ರಸ್ತೆ ವಾಣಿಜ್ಯ ಸಂಕೀರ್ಣ – 25 ಮಳಿಗೆಗಳು.
7. ಸುಭಾಷ್‌ನಗರ ವಾಣಿಜ್ಯ ಸಂಕೀರ್ಣ, ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣದ ಮುಂಭಾಗ – 15 ಮಳಿಗೆಗಳು.

ಸುಭಾಷ್‌ನಗರ ವಾಣಿಜ್ಯ ಸಂಕೀರ್ಣದಲ್ಲಿ ಒಂದು ವಸತಿ ಗೃಹ ಖಾಲಿ ಇರುತ್ತದೆ. ಈ ವಸತಿ ಗೃಹವನ್ನು ಟೆಂಡರ್ ಮೂಲಕ ಹಂಚಿಕೆ ಮಾಡಲು ಸರ್ಕಾರಿ ಅಂಗ ಸಂಸ್ಥೆಯಾದ ಐಡೆಕ್ ಸಂಸ್ಥೆಯವರಿಗೆ ಟೆಂಡರ್ ದಾಖಲೆಗಳನ್ನು ತಯಾರಿಸಲು ಕೋರಲಾಗಿದೆ. ಜಯನಗರ ವಾಣಿಜ್ಯ ಸಂಕೀರ್ಣದಲ್ಲಿ ಪುಟ್ಟಣ್ಣ ಕಣಗಾಲ್ ಚಿತ್ರಮಂದಿರ ಖಾಲಿ ಇದ್ದು, ಈ ಚಿತ್ರಮಂದಿರದಲ್ಲಿ ಕೆಲವೊಂದು

ಅಗತ್ಯ ತುರ್ತು ದುರಸ್ಥಿ ಕಾಮಗಾರಿಗಳು ಕೈಗೊಳ್ಳಬೇಕಾಗಿರುವುದರಿಂದ ಈ ಬಗ್ಗೆ ಆರ್.ಓ.ಎಂ.ಟಿ (ರಿಪೇರಿ, ಒಡೆತನ, ನಿರ್ವಹಣೆ ಮತ್ತು ವರ್ಗಾವಣೆ) ಆಧಾರದ ಮೇಲೆ ಟೆಂಡರ್ ಕರೆದು ರಿಪೇರಿ ಮಾಡಿಸಲು ಕ್ರಮ ವಹಿಸಲಾಗುತ್ತಿದೆ. ಶ್ರೀ ಕೃಷ್ಣಾರಾಜೇಂದ್ರ ಮಾರುಕಟ್ಟೆಯಲ್ಲಿ 22 ಖಾಲಿ ಮಳಿಗೆಗಳಿದ್ದು, ಪೋಡಿಯಂ ಬ್ಲಾಕ್‌ನಲ್ಲಿ ಶೌಚಾಲಯ ನಿರ್ಮಿಸಬೇಕಾಗಿರುವುದರಿಂದ ಅಲ್ಲಿನ ತೆಂಗಿನಕಾಯಿ ವ್ಯಾಪಾರಸ್ಥರನ್ನು ಈ ಖಾಲಿ ಮಳಿಗೆಗಳಿಗೆ ಸ್ಥಳಾಂತರಿಸಲಾಗುವುದು. ಇನ್ನುಳಿದ ವಾಣಿಜ್ಯ ಸಂಕೀರ್ಣಗಳಲ್ಲಿ ಯಾವುದೇ ಮಳಿಗೆಗಳು ಖಾಲಿ ಇರುವುದಿಲ್ಲ.

ಉ) ಈ ವಾಣಿಜ್ಯ ಸಂಕೀರ್ಣಗಳಿಂದ ವಾರ್ಷಿಕ ನಿರ್ವಹಣೆಗೆ ಪಾಲಿಕೆಯಿಂದ ತಗಲುವ ವೆಚ್ಚ ರೂ.. 2,80,36,490.00

1089(1548) ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) : ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನಗಳಿಗೆ ಉತ್ತರಿಸುವರೆ ?

ಅ) ಬೆಂಗಳೂರು ನಗರದಲ್ಲಿ ವಾಣಿಜ್ಯ ಕ್ಷೇತ್ರ ವಸತಿ ಹಾಗೂ ಕೈಗಾರಿಕಾ ಕ್ಷೇತ್ರ ಎಂದು ಬಡಾವಣೆಗಳನ್ನು ಮತ್ತು ರಸ್ತೆಗಳನ್ನು ವಿಂಗಡಣೆ ಮಾಡಲಾಗಿದೆಯೇ;

ಆ) ಬೆಂಗಳೂರು ನಗರದ ಈ ಜಾಗಗಳನ್ನು ಖಾಸಗಿಯವರಿಗೆ ಲೀಸ್ ಕೊಡುವಾಗ ಬೆಂಗಳೂರು ಮಹಾನಗರ ಪಾಲಿಕೆ ಸರ್ಕಾರದ ಆಸ್ತಿ ಪರಭಾರೆ ಮಾಡುವ ಸಂದರ್ಭದಲ್ಲಿ ಅನುಸರಿಸಬೇಕಾದ ನಿಯಮಾವಳಿಗಳನ್ನು ಪಾಲಿಸುತ್ತಿದೆಯೇ;

ಇ) ಇದನ್ನು ಉಲ್ಲಂಘನೆ ಮಾಡಿರುವ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಬಂದಿದ್ದಲ್ಲಿ, ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಧರ್ಮಸಿಂಗ್(ಮುಖ್ಯ ಮಂತ್ರಿಗಳು) :

ಅ) ಹೌದು.

ಆ) ಹೌದು.

ಇ) ಬಂದಿರುವುದಿಲ್ಲ.

ಈ) ಉದ್ಭವಿಸುವುದಿಲ್ಲ.

1093(1172) ಶ್ರೀಎನ್.ಯೋಗಿಶ್ ಭಟ್(ಮಂಗಳೂರು) : ಮಾನ್ಯ ಮುಖ್ಯ ಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದಲ್ಲಿ ಒಟ್ಟು ಎಷ್ಟು ಪಟ್ಟಣ ಯೋಜನಾ ಪ್ರಾಧಿಕಾರಗಳು ಅಸ್ತಿತ್ವದಲ್ಲಿವೆ;

ಆ) ನೂತನ ಪಟ್ಟಣ ಯೋಜನಾ ಪ್ರಾಧಿಕಾರಗಳನ್ನು ರಚಿಸುವ ಯೋಜನೆ ಸರ್ಕಾರದ ಮುಂದಿದೆಯೇ;

ಇ) ಇದ್ದಲ್ಲಿ, ಅವುಗಳು ಯಾವುವು;

ಈ) ಸರ್ಕಾರದವರು ಸದರಿ ಪಟ್ಟಣ ಪ್ರಾಧಿಕಾರಗಳಿಗೆ ನೀಡುತ್ತಿರುವ ಆರ್ಥಿಕ ಸಹಾಯಧನ ಎಷ್ಟು;

ಉ) ಪಟ್ಟಣ ಯೋಜನಾ ಪ್ರಾಧಿಕಾರಗಳ ಆರ್ಥಿಕ ಸ್ಥಿತಿಗತಿಗಳ ಸುಧಾರಣೆಗಾಗಿ ಸರ್ಕಾರದವರು ಕೈಗೊಂಡ ಕ್ರಮಗಳೇನು;

ಊ) ನಗರಾಭಿವೃದ್ಧಿ ಪ್ರಾಧಿಕಾರಗಳಲ್ಲಿ ಸಮಗ್ರ ಸರ್ವೆ ಮಾಡುವ ವ್ಯವಸ್ಥೆ ಹಾಗೂ ಅಭಿವೃದ್ಧಿ ಯೋಜನೆಗಳ ತಯಾರಿಯ ಬಗ್ಗೆ ಸರ್ಕಾರ ಯಾವ ಕ್ರಮ ತೆಗೆದುಕೊಂಡಿದೆ?

ಶ್ರೀ ಧರ್ಮಸಿಂಗ್(ಮುಖ್ಯ ಮಂತ್ರಿಗಳು) :

ಅ) ರಾಜ್ಯದಲ್ಲಿ ಬೆಂಗಳೂರನ್ನೂ ಸೇರಿಸಿ 28 ನಗರಾಭಿವೃದ್ಧಿ ಪ್ರಾಧಿಕಾರಗಳು, 24 ಯೋಜನಾ ಪ್ರಾಧಿಕಾರಗಳು, ಮತ್ತು 45 ಪುರಸಭಾ ಯೋಜನಾ ಪ್ರಾಧಿಕಾರಗಳು ಅಸ್ತಿತ್ವದಲ್ಲಿವೆ.

ಆ) ಇಲ್ಲ

ಇ) ಉದ್ಭವಿಸುವುದಿಲ್ಲ.

ಈ) ಪ್ರಾಧಿಕಾರಗಳಿಗೆ ಯಾವುದೇ ಆರ್ಥಿಕ ಸಹಾಯಧನವನ್ನು ಸರ್ಕಾರ ನೀಡುವುದಿಲ್ಲ.

ಉ) ನಿಯಮಾನುಸಾರ ಪಟ್ಟಣ ಯೋಜನಾ ಪ್ರಾಧಿಕಾರಗಳಿಗೆ ನೀಡಿರುವ ಅಧಿಕಾರದನ್ವಯ ಉಪಕರಗಳನ್ನು ಹಾಗೂ ಇತರೆ ಫೀ ಮುಂತಾದವುಗಳನ್ನು ಸಂಗ್ರಹಿಸಿ ಪಟ್ಟಣ ಯೋಜನಾ ಪ್ರಾಧಿಕಾರಗಳು ಆರ್ಥಿಕವಾಗಿ ಸುಧಾರಿಸಿ ಕೊಳ್ಳಬಹುದಾಗಿದೆ.

ಊ) ಏಷಿಯಾ ಅಭಿವೃದ್ಧಿ ಬ್ಯಾಂಕ್‌ನಿಂದ ಕೆಯುಐಡಿಎಫ್‌ಸಿಯ ಮೂಲಕ ಧನ ಸಹಾಯ ಪಡೆದು ಮೊದಲನೆಯ ಹಂತದಲ್ಲಿ 16 ನಗರ/ಪಟ್ಟಣಗಳಿಗೆ ವೈಮಾನಿಕ ಚಿತ್ರಣದ ಮೂಲಕ ದೊಡ್ಡ ಪ್ರಮಾಣದ ನಕ್ಷೆಗಳನ್ನು ತಯಾರಿಸುವ ಕೆಲಸ ಪ್ರಗತಿಯಲ್ಲಿದೆ. ಎರಡರಿಂದ ಐದು ಹಂತದಲ್ಲಿ ರಾಜ್ಯದ ಉಳಿದ 202 ನಗರ/ಪಟ್ಟಣಗಳಿಗೆ ವೈಮಾನಿಕ ಚಿತ್ರಣದ ಮೂಲಕ ದೊಡ್ಡ ಪ್ರಮಾಣದ ನಕ್ಷೆಗಳನ್ನು ತಯಾರಿಸಲು ಕೆಯುಐಡಿಎಫ್‌ಸಿಯ ಮೂಲಕ ವಿಶ್ವಬ್ಯಾಂಕ್‌ಗೆ ನೆರವಿಗಾಗಿ ಪ್ರಸ್ತಾವನೆ ಸಲ್ಲಿಸಲಾಗಿದೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯಡಿ ಅಭಿವೃದ್ಧಿ ಯೋಜನೆಗಳನ್ನು ರೂಪಿಸಲು ಅಗತ್ಯ ಮಾರ್ಗದರ್ಶನ ನೀಡಲಾಗುತ್ತಿದೆ.

1094(1173) ಶ್ರೀ ಯೋಗೀಶ್ ಭಟ್ ಎನ್ (ಮಂಗಳೂರು) : ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಪ್ರಕೃತಿ ವಿಕೋಪಕ್ಕೆ ಗುರಿಯಾಗುವ ಮೀನುಗಾರರ ಸುರಕ್ಷತೆಗಾಗಿ ಸರ್ಕಾರದವರು ಹಮ್ಮಿಕೊಂಡ ಯೋಜನೆಗಳೇನು;

ಆ) ಮೀನುಗಾರರ ಸಾಮೂಹಿಕ ಅಪಘಾತ ವಿಮಾ ಯೋಜನೆಯಡಿಯಲ್ಲಿ ಪ್ರಸಕ್ತ ಸಾಲಿನಲ್ಲಿ ರಾಜ್ಯದ ಎಷ್ಟು ಜನ ಮೀನುಗಾರರಿಗೆ ಪರಿಹಾರ ನೀಡಲಾಗಿದೆ;

ಇ) ಮೀನುಗಾರರ ಸಂಕಷ್ಟ ಪರಿಹಾರ ನಿಧಿಯಲ್ಲಿ ಎಷ್ಟು ಜನ ಮೀನುಗಾರರಿಗೆ ಪರಿಹಾರವನ್ನು ನೀಲಾಗಿದೆ ಹಾಗೂ ಅದರ ಮೊತ್ತ ಎಷ್ಟು;

ಈ) 2004-05ರಲ್ಲಿ ಸಂಭವಿಸಿದ ಸುನಾಮಿ ಅಲೆಗಳಿಂದಾಗಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿನ ಸಮುದ್ರ ತೀರಗಳಲ್ಲಿ ನುಚ್ಚುನೂರಾದ ಮೀನುಗಾರರ ಬೋಟ್‌ಗಳಿಗೆ ನೀಡಿದ ಪರಿಹಾರ ಧನ ಎಷ್ಟು;

ಉ) ಪರಿಹಾರ ಧನ ನೀಡುವಲ್ಲಿನ ವಿಳಂಬಕ್ಕೆ ಕಾರಣಗಳೇನು?

ಶ್ರೀ ಧರ್ಮಸಿಂಗ್(ಮುಖ್ಯ ಮಂತ್ರಿಗಳು) :

ಅ) ಪ್ರಕೃತಿ ವಿಕೋಪಕ್ಕೆ ಗುರಿಯಾಗುವ ಮೀನುಗಾರರ ಸುರಕ್ಷತೆಗಾಗಿ ಸರ್ಕಾರವು ಹಮ್ಮಿಕೊಂಡಿರುವ ಯೋಜನೆಗಳೇನೆಂದರೆ ;

1) ಮೀನುಗಾರರ ಸಂಕಷ್ಟ ಪರಿಹಾರ ನಿಧಿಯಿಂದ ಪರಿಹಾರಧನ ನೀಡುವುದು.

2) ಮೀನುಗಾರರು ಪ್ರಕೃತಿ ವಿಕೋಪಕ್ಕೆ ಒಳಗಾಗಿ ಮರಣ ಹೊಂದಿದಲ್ಲಿ ಅಥವಾ ಅಂಗವಿಕಲರಾದಲ್ಲಿ ಕೇಂದ್ರ ಪುರಸ್ಕೃತ ಮೀನುಗಾರರ ಸಾಮೂಹಿಕ ಅಪಘಾತ ವಿಮಾ ಯೋಜನೆಯಡಿಯಲ್ಲಿ ರಾಷ್ಟ್ರೀಯ ಮೀನುಗಾರರ ಸಹಕಾರ ಸಂಘಗಳ ಮಹಾಮಂಡಳಿ (ನಿ), ನವದೆಹಲಿ(ಫಿಶ್‌ಕೋಫಡ್) ವತಿಯಿಂದ ವಿಮಾ ಪರಿಹಾರಧನ ಒದಗಿಸುವುದು.

ಆ) ಮೀನುಗಾರರ ಸಾಮೂಹಿಕ ಅಪಘಾತ ವಿಮಾ ಯೋಜನೆಯಡಿ ಪ್ರಸಕ್ತ ಸಾಲಿನಲ್ಲಿ ರಾಜ್ಯದ 7 ಜನ ಮೃತ ಮೀನುಗಾರರ ವಾರಸುದಾರರಿಗೆ ಪರಿಹಾರಧನ ನೀಡಲಾಗಿದೆ.

ಇ) ಪ್ರಸಕ್ತ ಸಾಲಿನಲ್ಲಿ ಮೀನುಗಾರರ ಸಂಕಷ್ಟ ಪರಿಹಾರ ನಿಧಿ ಯೋಜನೆಯಡಿಯಲ್ಲಿ ರಾಜ್ಯದ 18ಜನ ಮೀನುಗಾರರಿಗೆ ಪರಿಹಾರ ಧನ ನೀಡಲಾಗಿರುತ್ತದೆ. ಅದರ ಒಟ್ಟು ಮೊತ್ತ ರೂ. 3.25ಲಕ್ಷಗಳು (ರೂ.ಮೂರು ಲಕ್ಷದ ಇಪ್ಪತ್ತೈದು ಸಾವಿರಗಳು ಮಾತ್ರ).

ಈ) 2004–05ರಲ್ಲಿ ಸಂಭವಿಸಿದ ಸುನಾಮಿ ಅಲೆಗಳಿಂದಾಗಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿನ ಸಮುದ್ರ ತೀರದಲ್ಲಿ ಹಾನಿಗೊಳಗಾದ ಮೀನುಗಾರಿಕೆ ಬೋಟುಗಳಿಗೆ ಪ್ರಕೃತಿ ವಿಕೋಪ ಪರಿಹಾರ ನಿಧಿಯಿಂದ ಈ ಕೆಳಕಂಡಂತೆ ಪರಿಹಾರ ನೀಡಲು ಸರ್ಕಾರವು ಆದೇಶಿಸಿದೆ.

ಅ) ಒಂದು ಲಕ್ಷಕ್ಕಿಂತ ಹೆಚ್ಚಿನ ನಷ್ಟವಾದಲ್ಲಿ – ರೂ. 50 ಸಾವಿರದವರೆಗೆ ಪಾವತಿಸತಕ್ಕದ್ದು.

ಆ) ಒಂದು ಲಕ್ಷಕ್ಕಿಂತ ಕಡಿಮೆ ನಷ್ಟವಾದಲ್ಲಿ – ನಷ್ಟದ ಶೇಕಡಾ 50 ರಷ್ಟು ಭಾಗ ಪಾವತಿಸತಕ್ಕದ್ದು.

ಉ) ಸ್ಥಳ ಪರಿಶೀಲನೆ ನಡೆಸಿ, ನಷ್ಟದ ಅಂದಾಜು ಮಾಡಲು ಕಾಲಾವಕಾಶ ಬೇಕಾಗಿರುತ್ತದೆ.

1095(1388) ಶ್ರೀರಾಜೇಂದ್ರನ್ ಎಸ್(ಕೆ.ಜಿ.ಎಫ್) : ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಆಟೋರಿಕ್ಷಾಗಳಿಗೆ ಕಂಪ್ಯೂಟರೈಸ್ಡ್ ಮೀಟರ್‌ಗಳನ್ನು ಅಳವಡಿಸದೆ ಸಾರ್ವಜನಿಕರಿಂದ ಹಣ ಸುಲಿಗೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲಿ, ಎಲ್ಲಾ ಆಟೋರಿಕ್ಷಾಗಳಿಗೆ ಕಡ್ಡಾಯವಾಗಿ ಕಂಪ್ಯೂಟರೈಸ್ಡ್ ಮೀಟರ್‌ಗಳನ್ನು ಅಳವಡಿಸಲು ತಕ್ಷಣ ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು) :

ಅ) ಹೌದು

ಆ) ಕ್ರಮ ಕೈಗೊಳ್ಳಲಾಗಿದೆ.

1096(1500) ಶ್ರೀ ಎನ್.ಎಲ್.ನರೇಂದ್ರ ಬಾಬು (ರಾಜಾಜಿನಗರ) : ಮಾನ್ಯ ಮುಖ್ಯ ಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಕನ್ನಡ ಅನುಷ್ಠಾನ ಹಾಗೂ ಅಭಿವೃದ್ಧಿಗಾಗಿ ಕಾರ್ಯ ಯೋಜನೆ ಹಾಕಿಕೊಂಡು ಕಾರ್ಯನಿರ್ವಹಿಸುತ್ತಿರುವ ಕನ್ನಡ ಸಂಘ–ಸಂಸ್ಥೆಗಳ ಕಾರ್ಯಗಳಿಗೆ ಖಾಯಂ ಅನುದಾನ ಅಥವಾ ವಾರ್ಷಿಕ ಅನುದಾನ ಬಿಡುಗಡೆ ಮಾಡಲಾಗಿದೆಯೇ(ಕಳೆದ ಮೂರು ವರ್ಷಗಳ ಮಾಹಿತಿ ಒದಗಿಸುವುದು)

ಆ) ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಡಿಯಲ್ಲಿ ಕನ್ನಡ ಅಭಿವೃದ್ಧಿ ಯೋಜನೆಗೆ ಸರ್ಕಾರ ಪ್ರತಿ ಆರ್ಥಿಕ ಸಾಲಿಗೆ ಎಷ್ಟು ಹಣ ಬಿಡುಗಡೆ ಮಾಡಿದೆ(ಕಳೆದ ಮೂರು ವರ್ಷಗಳ ಅಂಕಿ ಸಂಖ್ಯೆಗಳನ್ನು ಒದಗಿಸುವುದು) :

ಇ) ಈ ಹಣ ಕನ್ನಡ ಅಭಿವೃದ್ಧಿ ಯೋಜನೆಗೆ ಬಳಸಿಕೊಳ್ಳಲಾಗಿದೆಯೇ; (ಮೂರು ವರ್ಷದ ಮಾಹಿತಿ ಒದಗಿಸುವುದು)

ಈ) ಕನ್ನಡ ಕ್ರಿಯಾತ್ಮಕ ಕಾರ್ಯ, ಕನ್ನಡ ಅನುಷ್ಠಾನ ಹಾಗೂ ಅಭಿವೃದ್ಧಿ ಕಾರ್ಯದಲ್ಲಿ ತೊಡಗಿರುವ ಎಷ್ಟು ಕನ್ನಡ ಸಂಸ್ಥೆಗಳಿಗೆ ಈ ಮೇಲಿನ ಉದ್ದೇಶಕ್ಕಾಗಿ ಕಳೆದ ಮೂರು ವರ್ಷದಲ್ಲಿ ಸರ್ಕಾರ ಎಷ್ಟು ಹಣ ಬಿಡುಗಡೆ ಮಾಡಿದೆ. ಆಧಾರ ಸಹಿತ ವಿವರದೊಂದಿಗೆ ಸ್ಪಷ್ಟಪಡಿಸುವುದು:

ಉ) ಇದು ಕನ್ನಡ ಸಂಘ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಮಾತ್ರ ಒದಗಿಸುವುದು;

ಊ) 11ನೇ ವಿಧಾನ ಸಭೆಯ ಕನ್ನಡ ಮತ್ತು ಸಂಸ್ಕೃತಿ ಇಲಾಖಾ ವಿಷಯ ಸಮಿತಿಯು 2003ರಲ್ಲಿ ವಿಧಾನ ಸಭೆಯಲ್ಲಿ ಮಂಡಿಸಿರುವ ವರದಿಯಲ್ಲಿ ಕನ್ನಡ ಅನಿಷ್ಠಾನಕ್ಕಾಗಿ ಶ್ರಮಿಸುತ್ತಿರುವ ಕನ್ನಡ ಸಂಘ ಸಂಸ್ಥೆಗಳ ಕಾರ್ಯಗಳಿಗೆ ಖಾಯಂ ಧನ ಸಹಾಯ ನೀಡಲು ಸರ್ಕಾರಕ್ಕೆ ಶಿಫಾರಸ್ಸು ಮಾಡಿದ್ದು ನಿಜವಲ್ಲವೇ;

ಋ) ಹಾಗಿದ್ದಲ್ಲಿ , ಈ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ;

ೠ) ಕ್ರಮ ಕೈಗೊಂಡಿದ್ದಲ್ಲಿ, ಅದನ್ನು ಇದುವರೆವಿಗೂ ಏಕ ಅನುಷ್ಠಾನಕ್ಕೆ ತಂದಿಲ್ಲ;

ಎ) ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಮಗ್ರಪ್ರಮಾಣದಲ್ಲಿ ಸಂಸ್ಕೃತಿ ಸಾಹಿತ್ಯಕ್ಕೆ ವಿನಿಯೋಗಿಸುವ ಧನ ಸಹಾಯವು ಪ್ರತ್ಯೇಕವಾಗಿ ಕನ್ನಡ ಅಭಿವೃದ್ಧಿ ಹಾಗೂ ಅನುದಾನ ಕಾರ್ಯಕ್ಕೆ ಏಕೆ ಹಾಗೂ ಅನುಷ್ಠಾನ ಕಾರ್ಯಕ್ಕೆ ಏಕೆ ಧನವಿನಿಯೋಗ ನಿಗಧಿಗೊಳಿಸಿಲ್ಲ.

ಏ) ಇದರಿಂದ ಅಸಮಾನತೆ ಉಂಟಾಗುವುದಿಲ್ಲವೆ.

ಐ) ಈ ಸಮಸ್ಯೆಯು ಸರ್ಕಾರದ ಗಮನಕ್ಕೆ ಬಂದಿಲ್ಲವೆ;

ಒ) ಸರ್ಕಾರದ ಆಡಳಿತ ಭಾಷಾ ನೀತಿಯೇ ಕನ್ನಡವಾಗಿರುವಾಗ ಕನ್ನಡ ಅಭಿವೃದ್ಧಿ ಹಾಗೂ ಅನುಷ್ಠಾನ ಕಾರ್ಯಕ್ಕೆ ಸಿಂಹಪಾಲು ದೊರೆಯುವುದು ಸೇರಿದಂತೆ ಕನ್ನಡ ಏಳಿಗೆಗೆ ಮೀಸಲಾಗಿರಸಬೇಕೆಂಬುದು ಈ ಇಲಾಖೆಯಲ್ಲಿ ತದ್ವಿರುದ್ಧವಾಗಿರುವುದು ಏಕೆ.

ಶ್ರೀ ಧರ್ಮಸಿಂಗ್(ಮುಖ್ಯ ಮಂತ್ರಿಗಳು) :

ಅ) ಹೌದು

	ವರ್ಷ	2001-02	2002-03	2003-04 (ಲಕ್ಷಗಳಲ್ಲಿ)
ಅ) 1.	ಕನ್ನಡ ಸಾಹಿತ್ಯ ಪರಿಷತ್ತು ಖಾಯಂ ಅನುದಾನ	61.65	82.86	123.43
2.	ಕರ್ನಾಟಕ ವಿದ್ಯಾವರ್ಧಕ ಸಂಘ. ಧಾರವಾಡ	6.00	6.00	4.60

ಆ) ಕನ್ನಡ ಆಡಳಿತ ಭಾಷೆಯಾಗಿ ಅನುಷ್ಠಾನಗೊಳಿಸುವ ನೀತಿಗನ್ವಯ ಕನ್ನಡ ಅಭಿವೃದ್ದಿಯೋಜನೆಗಳಡಿ ವಿವಿಧ ಕಾರ್ಯಕ್ರಮಗಳಿಗೆ ಬಿಡುಗಡೆ ಮಾಡಿರುವ ಹಣ

ವರ್ಷ	2001-02	2002-03	2003-04 (ಲಕ್ಷಗಳಲ್ಲಿ)
	7.96	21.90	12.55

ಅ) ಹೌದು

ಆ) ಅನುಬಂಧ ಲಗತ್ತಿಸಿದೆ.

ಈ) ಕನ್ನಡ ಸಂಸ್ಕೃತಿ ಇಲಾಖೆಯಿಂದ

ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘ ಇವುಗಳು ಕನ್ನಡ ಅಭಿವೃದ್ಧಿಗಾಗಿ ನಿರತವಾಗಿರುವ ತುಂಬ ಇತಿಹಾಸವುಳ್ಳ ಮಾತೃ ಸಂಸ್ಥೆಗಳು ಆದ್ದರಿಂದ ಇವುಗಳಿಗೆ ಖಾಯಂ ಅನುದಾನ ನೀಡಲಾಗುತ್ತಿದೆ. ಉಳಿದ ಅನೇಕ ಸಂಸ್ಥೆಗಳ ಗುಣಮಟ್ಟದ ಕಾರ್ಯಚಟುವಟಿಕೆಗಳನ್ನು ಗಮನಿಸಿ ಧನ ಸಹಾಯ ನೀಡಲಾಗುತ್ತಿದೆ.

ಕನ್ನಡ ಅಭಿವೃದ್ಧಿ ಪ್ರಾಧಿಕಾರದಿಂದ ಯೋಜನೆಯಡಿಯಲ್ಲಿ ಕನ್ನಡ ಸಂಸ್ಕೃತಿ ಶಿಬಿರ ಕಾರ್ಯಕ್ರಮಗಳನ್ನು ನಡೆಸಲು ಕನ್ನಡ ಸಂಘ ಸಂಸ್ಥೆಗಳಿಗೆ ಕಳೆದ 3 ವರ್ಷಗಳಲ್ಲಿ ಕೆಳಕಂಡ ಮೊತ್ತವನ್ನು ಮಂಜೂರು ಮಾಡಲಾಗಿದೆ.

ವರ್ಷ	ಮಂಜೂರು ಮಾಡಿದ ಧನಸಹಾಯ
2002–03	90,800
2003–04	38,500
2004–05	1,35,000

ಉ) ಹಾಗೆಯೇ ಒದಗಿಸಲಾಗಿದೆ.

ಊ) ಹೌದು

ಋ) ಖಾಯಂ ಅನುದಾನ ನೀಡುವ ಬಗ್ಗೆ ಸಂಸ್ಥೆಗಳನ್ನು ಒಳಪಡಿಸುವ ಬದಲು ಅವುಗಳ ಕಾರ್ಯಕ್ರಮಗಳ ಗುಣಮಟ್ಟವನ್ನು ನೋಡಿ ಆರ್ಥಿಕ ನೆರವು ಒದಗಿಸುವುದು ಸೂಕ್ತವೆಂದು ತೀರ್ಮಾನಿಸಲಾಗಿದೆ. ಈ ಕ್ರಮವನ್ನು ಇಲಾಖೆಯಲ್ಲಿ ಅನುಸರಿಸಲಾಗುತ್ತಿದೆ.

ೠ) ಉದ್ಭವಿಸುವುದಿಲ್ಲ.

ಎ) ಸಂಸ್ಕೃತಿ ಎಂಬ ಪದದಲ್ಲಿ ಭಾಷೆ, ಸಾಹಿತ್ಯ, ಹಾಗು ಇತರ ಲಲಿತಕಲೆಗಳು ಒಳಗೊಳ್ಳುವುದರಿಂದ ಸಂಸ್ಕೃತಿ ಮತ್ತು ಸಾಹಿತ್ಯವೆಂದು ಪ್ರತ್ಯೇಕಿಸುವುದು ಸೂಕ್ತವೆನಿಸುವುದಿಲ್ಲ. ಏಕೆಂದರೆ ಸಂಸ್ಕೃತಿಯ ಸಲುವಾಗಿ ಹಮ್ಮಿಕೊಳ್ಳುವ ಎಲ್ಲಾ ಚಟುವಟಿಕೆಗಳು ಕನ್ನಡ ಭಾಷೆ ಮತ್ತು ಕನ್ನಡ ಸಾಹಿತ್ಯದ ಅಭಿವೃದ್ಧಿಯನ್ನು ಒಳಗೊಂಡಿರುತ್ತದೆ. ಇದಲ್ಲದೇ ಸಾಹಿತ್ಯ ಚಟುವಟಿಕೆಗಳು, ಪ್ರಕಟಣೆಗಳು, ವಿಚಾರ ಸಂಕೀರಣ, ಕಮ್ಮಟಗಳು ಇತ್ಯಾದಿಗಳು ಕನ್ನಡ ಅಭಿವೃದ್ಧಿ ಚಟುವಟಿಕೆಗಳಾದರೂ ಪರೋಕ್ಷವಾಗಿ ಸಂಸ್ಕೃತಿ ಅಭಿವೃದ್ಧಿಯ ಕಾರ್ಯವನ್ನು ಒಳಗೊಂಡಿರುತ್ತದೆ ಆದ್ದರಿಂದ ಇವು ಒಂದಕ್ಕೊಂದು ಪೂರಕ ಅಂಶವಾಗಿವೆ.

ಏ) ಇಲ್ಲ

ಐ) ಉದ್ಭವಿಸುವುದಿಲ್ಲ.

ಒ) ಕಂಡಿಕೆ–ಎ ನಲ್ಲಿ ಉತ್ತರಿಸಲಾಗಿದೆ.

ವಿಧಾನ ಸಭಾ ಸದಸ್ಯರಾದ ಶ್ರೀ ಎಂ.ಎಲ್.ನರೇಂದ್ರಬಾಬು ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1500ಕ್ಕೆ ಅನುಬಂಧ.

ಅನುಬಂಧ

ಕನ್ನಡ ಅಭಿವೃದ್ಧಿ ಯೋಜನೆ

ಕ್ರಮ ಸಂಖ್ಯೆ	ಯೋಜನೆಯ ವಿವರ	2001–02ನೇ ಸಾಲಿನ ವೆಚ್ಚ	2002–03ನೇ ಸಾಲಿನ ವೆಚ್ಚ	2003–04ನೇ ಸಾಲಿನ ವೆಚ್ಚ
1	ಅಧಿಕಾರಿ ನೌಕರರಿಗೆ ಆಡಳಿತ ಕನ್ನಡ ಕಾರ್ಯ ಶಿಬಿರ	1,92,700	6,84,000	4,50,000

2	ಮಹಾಲೇಖಪಾಲರ ಕಛೇರಿ ಸಿಬ್ಬಂದಿಗೆ ಬ್ಯಾಂಕಿಂಗ್ ಸಿಬ್ಬಂದಿಗೆ ಹಾಗೂ ವಕೀಲರಿಗೆ ಕನ್ನಡ ಕಾರ್ಯಶಿಬಿರ	58,300	–	–
3	ಕನ್ನಡ ಬಾರದವರಿಗೆ ಕನ್ನಡ ಕಲಿಕೆ ತರಗತಿಗಳು	70,000	38,000	1,20,000
4	ಕನ್ನಡ ಬಾರದ ಅಧಿಕಾರಿ:ಸಿಬ್ಬಂದಿಗೆ ಅಂಚೆ ಮೂಲಕ ಕನ್ನಡ ಶಿಕ್ಷಣ	4,40,000	6,85,000	4,15,000
5	ಗಣಕದಲ್ಲಿ ಕನ್ನಡ ಬಳಕೆ ತರಬೇತಿ	10,000	50,000	–
6	ಮಾರಕ ಸಾಹಿತ್ಯ ಸಿದ್ಧತೆ ಪ್ರಕಟಣೆ ಹಾಗೂ ಪೂರೈಕೆ	25,000	53,000	–
7	ಗಣಕ ಯಂತ್ರಗಳ ಖರೀದಿ	–	3,60,000	–
8	ವಿಭಾಗ ಮಟ್ಟದಲ್ಲಿ ವಿಚಾರ ಸಂಕಿರಣ	–	80,000	–
9	ನಾಮಫಲಕ ಬರಹಗಾರರಿಗೆ ಕನ್ನಡ ಶಿಬಿರ	–	42,000	20,000
10	ಮೋಡಿ ಅಕ್ಷರ ಲಿಪಿ ತರಬೇತಿ	–	32,000	–
11	ಗಡಿ ತಾಲ್ಲೂಕು ಪ್ರದೇಶಗಳಲ್ಲಿ ಕನ್ನಡ ಜಾಗೃತಿ ಸಮಾವೇಶ	–	1,56,000	2,25,000

ಅನುಬಂಧ – II

ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣಾ (ತಿದ್ದುಪಡಿ) ವಿಧೇಯಕ, 2005
(2005ರ ವಿಧಾನಪರಿಷತ್ತಿನ ವಿಧೇಯಕ ಸಂಖ್ಯೆ 1)
(ವಿಧಾನ ಪರಿಷತ್ತಿನಿಂದ ಅಂಗೀಕಾರವಾದ ರೂಪದಲ್ಲಿ)

ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣಾ ಅಧಿನಿಯಮ, 1999ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡು ಬರುವ ಉದ್ದೇಶಗಳಿಗಾಗಿ ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣಾ ಅಧಿನಿಯಮ, 1999ನ್ನು (1999ರ ಕರ್ನಾಟಕ ಅಧಿನಿಯಮ 25) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಐವತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.- (1) ಈ ಅಧಿನಿಯಮವನ್ನು ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣಾ (ತಿದ್ದುಪಡಿ) ಅಧಿನಿಯಮ, 2005 ಎಂದು ಕರೆಯತಕ್ಕದ್ದು.

(2) ಇದು 2004ರ ಡಿಸೆಂಬರ್ ಇಪ್ಪತ್ತನಾಲ್ಕನೇ ದಿನಾಂಕದಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

2. 14ನೇ ಪ್ರಕರಣದ ತಿದ್ದುಪಡಿ.- ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣಾ ಅಧಿನಿಯಮ, 1999ರ (1999ರ ಕರ್ನಾಟಕ ಅಧಿನಿಯಮ 25) 14ನೇ ಪ್ರಕರಣದಲ್ಲಿ,-

(1) (5)ನೇ ಉಪ ಪ್ರಕರಣದಲ್ಲಿ "ಕಪಿಟಿಸಿ ಯೊಡನೆ" ಮತ್ತು "ಕೆಪಿಟಿಸಿ ಯಲ್ಲಿ" ಎಂಬ ಪದಗಳ ತರುವಾಯ ಅನುಕ್ರಮವಾಗಿ ಅಥವಾ "ಸಂದರ್ಭಾನುಸಾರ ಲೈಸನ್ಸುದಾರನೊಡನೆ" ಮತ್ತು "ಅಥವಾ ಸಂದರ್ಭಾನುಸಾರ ಲೈಸನ್ಸುದಾರನಲ್ಲಿ" ಎಂಬ ಪದಗಳನ್ನು ಸೇರಿಸತಕ್ಕದ್ದು; ಮತ್ತು

(2) (8)ನೇ ಉಪಪ್ರಕರಣದಲ್ಲಿ "ಕೆಪಿಟಿಸಿಯು" ಎಂಬ ಅಕ್ಷರಗಳ ತರುವಾಯ "ಅಥವಾ ಸಂದರ್ಭಾನುಸಾರ ಲೈಸನ್ಸುದಾರನು" ಎಂಬ ಪದಗಳನ್ನು ಸೇರಿಸತಕ್ಕದ್ದು.

3. ನಿರಸನ ಮತ್ತು ಉಳಿಸುವಿಕೆಗಳು.- (1) ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣಾ (ತಿದ್ದುಪಡಿ) ಅಧ್ಯಾದೇಶ, 2004ನ್ನು (2004ರ ಕರ್ನಾಟಕ ಅಧ್ಯಾದೇಶ 5) ಈ ಮೂಲಕ ನಿರಸನಗೊಳಿಸಲಾಗಿದೆ.

(2) ಹಾಗೆ ನಿರಸಿತಗೊಳಿಸಿದ್ದಾಗ್ಯೂ, ಸದರಿ ಅಧ್ಯಾದೇಶದ ಮೂಲಕ ತಿದ್ದುಪಡಿ ಮಾಡಲಾದ ಮೂಲ ಅಧಿನಿಯಮದ ಅಡಿಯಲ್ಲಿ ಮಾಡಲಾದ ಯಾವುದೇ ಕಾರ್ಯ ಅಥವಾ ಕೈಗೊಳ್ಳಲಾದ ಯಾವುದೇ ಕ್ರಮವನ್ನು ಈ ಅಧಿನಿಯಮದ ಮೂಲಕ ತಿದ್ದುಪಡಿ ಮಾಡಲಾದ ಮೂಲ ಅಧಿನಿಯಮದ ಅಡಿಯಲ್ಲಿ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು.

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

(ವಿಧೇಯಕವನ್ನು ಮಂಡಿಸುವಾಗ ಲಗತ್ತಿಸಿದಂತೆ)

ರಾಜ್ಯದಲ್ಲಿರುವ ನಾಲ್ಕು ಎಸ್ಕಾಂಗಳಲ್ಲಿ ಒಂದಾದ ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿಯು ಇಂಥ ಒಂದು ಕಂಪನಿಯಾಗಿದ್ದು, ಇದು ಮಂಡ್ಯ, ಮೈಸೂರು, ಚಾಮರಾಜನಗರ, ಕೊಡಗು, ಹಾಸನ, ಉಡುಪಿ, ದಕ್ಷಿಣ ಕನ್ನಡ, ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳಿಗೆ ವಿದ್ಯುತ್ ಸರಬರಾಜಿನ ವಿತರಣೆಯ ಹೊಣೆಗಾರಿಕೆಯನ್ನು ಹೊಂದಿದೆ. ವಿಶಾಲ ಪ್ರದೇಶದಲ್ಲಿ ಚದುರಿ ಹೋಗಿರುವ ತನ್ನ ಗ್ರಾಹಕರಿಗೆ ಸಾಕಷ್ಟು ಸೇವೆಯನ್ನು ಒದಗಿಸುವುದು ಅದಕ್ಕೆ ಕಷ್ಟಕರವಾಗಿದೆ. ಆದ ಕಾರಣ, ರಾಜ್ಯ ಸರ್ಕಾರವು ಮೈಸೂರಿನಲ್ಲಿ ಕೇಂದ್ರ ಸ್ಥಾನವನ್ನು ಹೊಂದಿರುವ, ಮೈಸೂರು, ಚಾಮರಾಜನಗರ, ಮಂಡ್ಯ ಮತ್ತು ಹಾಸನ

ಜಿಲ್ಲೆಗಳನ್ನು ಒಳಗೊಂಡ ಕಾರ್ಯಕ್ಷೇತ್ರದ ಚಾಮುಂಡೇಶ್ವರಿ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ಎಂಬ ಹೆಸರಿನ ಹೊಸದಾದ ವಿದ್ಯುಚ್ಛಕ್ತಿ ಸರಬರಾಜು ಕಂಪೆನಿಯನ್ನು ಸ್ಥಾಪಿಸಲು ನಿರ್ಧರಿಸಿತು, ಸರ್ಕಾರಿ ಆದೇಶ ಸಂಖ್ಯೆ: ಇಎನ್ 98 ಪಿಎಸ್ಆರ್ 2004 ದಿನಾಂಕ: 19.8.2004 ನೋಡಿ. ಇತರ ಎಸ್ಕಾಂಗಳಂತೆ ಮತ್ತು ಅವುಗಳಷ್ಟೇ ಸರಿಸಮನಾಗಿ ಹೊಸ ಕಂಪೆನಿಯು ಕಾರ್ಯನಿರ್ವಹಿಸುವಂತಾಗಬೇಕಾದರೆ, ಆ ಕಂಪೆನಿಗಳಿಗೆ ಇರುವಂಥ ಸ್ವಾಯತ್ತತೆಯನ್ನೇ ಇದೂ ಹೊಂದಿರಬೇಕು. ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣಾ ಅಧಿನಿಯಮ, 1999ಕ್ಕೆ ಸೂಕ್ತ ತಿದ್ದುಪಡಿಮಾಡಿ ಮೈಸೂರು, ಚಾಮರಾಜನಗರ, ಮಂಡ್ಯ ಮತ್ತು ಹಾಸನ ಜಿಲ್ಲೆಗಳಿಗೆ ಸಂಬಂಧಿಸಿದಂತೆ ಅದರ ಎಲ್ಲ ಸ್ವತ್ತುಗಳು ಮತ್ತು ಹೊಣೆಗಾರಿಕೆಗಳನ್ನು ಮೆಸ್ಕಾಂನಿಂದ ಚಾಮುಂಡೇಶ್ವರಿ ವಿದ್ಯುಚ್ಛಕ್ತಿ ಸರಬರಾಜು ಕಂಪನಿಗೆ ವರ್ಗಾಯಿಸುವುದು ಅಗತ್ಯವಾಗಿದೆ.

ಚಾಮುಂಡೇಶ್ವರಿ ವಿದ್ಯುಚ್ಛಕ್ತಿ ಸರಬರಾಜು ಕಂಪನಿಯು ತಕ್ಷಣ ಕಾರ್ಯನಿರ್ವಹಣೆಯನ್ನು ಪ್ರಾರಂಭಿಸಲು ಸಾಧ್ಯವಾಗುವಂತೆ ಮಾಡುವುದಕ್ಕಾಗಿ, ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣಾ ಅಧಿನಿಯಮ 1999ರ 14ನೇ ಪ್ರಕರಣಕ್ಕೆ ತಿದ್ದುಪಡಿಮಾಡಿ 24.12.2004 ರಂದು ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣಾ (ತಿದ್ದುಪಡಿ) ಅಧ್ಯಾದೇಶ 2004ನ್ನು ಪ್ರಖ್ಯಾಪಿಸಲಾಯಿತು. ಸದರಿ ಅಧ್ಯಾದೇಶದ ಬದಲಾಗಿ ಈ ವಿಧೇಯಕವನ್ನು ಮಂಡಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವನ್ನು ಜಾರಿಗೊಳಿಸುವುದರಿಂದ ಯಾವುದೇ ಹೆಚ್ಚಿನ ವೆಚ್ಚ ಉಂಟಾಗುವುದಿಲ್ಲ.

ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ 77(1)ನೇ ನಿಯಮದ ಮೇರೆಗೆ ಅಗತ್ಯಪಡಿಸಲಾದ ವಿವರಣಾತ್ಮಕ ಹೇಳಿಕೆ

ರಾಜ್ಯದಲ್ಲಿರುವ ನಾಲ್ಕು ಎಸ್ಕಾಂಗಳಲ್ಲಿ ಒಂದಾದ ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿಯು ಇಂಥ ಒಂದು ಕಂಪನಿಯಾಗಿದ್ದು, ಇದು ಮಂಡ್ಯ, ಮೈಸೂರು, ಚಾಮರಾಜನಗರ, ಕೊಡಗು, ಹಾಸನ, ಉಡುಪಿ, ದಕ್ಷಿಣ ಕನ್ನಡ, ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳಿಗೆ ವಿದ್ಯುತ್ ಸರಬರಾಜಿನ ವಿತರಣೆಯ ಹೊಣೆಗಾರಿಕೆಯನ್ನು ಹೊಂದಿದೆ. ವಿಶಾಲ ಪ್ರದೇಶದಲ್ಲಿ ಚದುರಿ ಹೋಗಿರುವ ತನ್ನ ಗ್ರಾಹಕರಿಗೆ ಸಾಕಷ್ಟು ಸೇವೆಯನ್ನು ಒದಗಿಸುವುದು ಅದಕ್ಕೆ ಕಷ್ಟಕರವಾಗಿದೆ. ಆದ ಕಾರಣ, ರಾಜ್ಯ ಸರ್ಕಾರವು ಮೈಸೂರಿನಲ್ಲಿ ಕೇಂದ್ರ ಸ್ಥಾನವನ್ನು

ಹೊಂದಿರುವ, ಮೈಸೂರು, ಚಾಮರಾಜನಗರ, ಮಂಡ್ಯ ಮತ್ತು ಹಾಸನ ಜಿಲ್ಲೆಗಳನ್ನು ಒಳಗೊಂಡ ಕಾರ್ಯಕ್ಷೇತ್ರದ ಚಾಮುಂಡೇಶ್ವರಿ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ಎಂಬ ಹೆಸರಿನ ಹೊಸದಾದ ವಿದ್ಯುಚ್ಛಕ್ತಿ ಸರಬರಾಜು ಕಂಪೆನಿಯನ್ನು ಸ್ಥಾಪಿಸಲು ನಿರ್ಧರಿಸಿತು, ಸರ್ಕಾರಿ ಆದೇಶ ಸಂಖ್ಯೆ: ಇಎನ್ 98 ಪಿಎಸ್‌ಆರ್ 2004 ದಿನಾಂಕ: 19.8.2004 ನೋಡಿ. ಇತರ ಎಸ್ಕಾಂಗಳಂತೆ ಮತ್ತು ಅವುಗಳಷ್ಟೇ ಸರಿಸಮನಾಗಿ ಹೊಸ ಕಂಪೆನಿಯು ಕಾರ್ಯನಿರ್ವಹಿಸುವಂತಾಗಬೇಕಾದರೆ, ಆ ಕಂಪೆನಿಗಳಿಗೆ ಇರುವಂಥ ಸ್ವಾಯತ್ತತೆಯನ್ನೇ ಇದೂ ಹೊಂದಿರಬೇಕು. ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣಾ ಅಧಿನಿಯಮ, 1999ಕ್ಕೆ ಸೂಕ್ತ ತಿದ್ದುಪಡಿಮಾಡಿ ಮೈಸೂರು, ಚಾಮರಾಜನಗರ, ಮಂಡ್ಯ ಮತ್ತು ಹಾಸನ ಜಿಲ್ಲೆಗಳಿಗೆ ಸಂಬಂಧಿಸಿದಂತೆ ಅದರ ಎಲ್ಲ ಸ್ವತ್ತುಗಳು ಮತ್ತು ಹೊಣೆಗಾರಿಕೆಗಳನ್ನು ಮೆಸ್ಕಾಂನಿಂದ ಚಾಮುಂಡೇಶ್ವರಿ ವಿದ್ಯುಚ್ಛಕ್ತಿ ಸರಬರಾಜು ಕಂಪನಿಗೆ ವರ್ಗಾಯಿಸುವುದು ಅಗತ್ಯವಾಗಿದೆ.

ಚಾಮುಂಡೇಶ್ವರಿ ವಿದ್ಯುಚ್ಛಕ್ತಿ ಸರಬರಾಜು ಕಂಪನಿಯು ತಕ್ಷಣ ಕಾರ್ಯನಿರ್ವಹಣೆಯನ್ನು ಪ್ರಾರಂಭಿಸಲು ಸಾಧ್ಯವಾಗುವಂತೆ ಮಾಡುವುದಕ್ಕಾಗಿ, ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣಾ ಅಧಿನಿಯಮ 1999ರ 14ನೇ ಪ್ರಕರಣಕ್ಕೆ ತಿದ್ದುಪಡಿಮಾಡಿ 24.12.2004 ರಂದು ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣಾ (ತಿದ್ದುಪಡಿ) ಅಧ್ಯಾದೇಶ 2004ನ್ನು ಪ್ರಖ್ಯಾಪಿಸಲಾಯಿತು. ಸದರಿ ಅಧ್ಯಾದೇಶದ ಬದಲಾಗಿ ಈ ವಿಧೇಯಕವನ್ನು ಮಂಡಿಸಲಾಗಿದೆ.

ಎಚ್.ಡಿ. ರೇವಣ್ಣ

ಲೋಕೋಪಯೋಗಿ ಮತ್ತು ಇಂಧನ ಸಚಿವರು

ಟಿ. ರಾಜಣ್ಣ

ಕಾರ್ಯದರ್ಶಿ

ಅನುಬಂಧ

ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣಾ ಅಧಿನಿಯಮ, 1999ರ (1999ರ ಕರ್ನಾಟಕ ಅಧಿನಿಯಮ 25)

ಉದ್ಧೃತ ಭಾಗ

XX XX XX

14. ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಪುನರ್ ರಚನೆ.- (1) XX XX

(5) ರಾಜ್ಯ ಸರ್ಕಾರವು, ಕೆಪಿಟಿಸಿಯೊಡನೆ ಸಮಾಲೋಚಿಸಿದ ತರುವಾಯ, ಈ ಪ್ರಕರಣದ ಅಡಿಯಲ್ಲಿ ಕೆಪಿಟಿಸಿಯಲ್ಲಿ ನಿಹಿತವಾದ ವಿತರಣಾ ಪ್ರಕಾರ್ಯಗಳು, ಯಾವುದೇ ಸ್ವತ್ತು, ಸ್ವತ್ತಿನಲ್ಲಿಯ ಹಿತಾಸಕ್ತಿ, ಹಕ್ಕುಗಳು ಮತ್ತು ಹೊಣೆಗಾರಿಕೆಗಳು ಸೇರಿದಂತೆ ಯಾವುದೇ

ಪ್ರಕಾರ್ಯವನ್ನು ಹೆಚ್ಚಿನ ಲೈಸೆನ್ಸ್‌ದಾರನಿಗೆ (ವರ್ಗಾವಣೆ ಪಡೆದ ಲೈಸೆನ್ಸ್‌ದಾರ) ವರ್ಗಾವಣೆ ಯೋಜನೆಯನ್ನು ರೂಪಿಸಬಹುದು ಮತ್ತು ಈ ಅಧಿನಿಯಮದ ಅಡಿಯಲ್ಲಿ ವರ್ಗಾವಣೆ ಯೋಜನೆಯಂತೆ ಅದನ್ನು ಪ್ರಕಟಿಸಬಹುದು. ಈ ಉಪ ಪ್ರಕರಣದ ಅಡಿಯಲ್ಲಿ ಅಧಿಸೂಚಿಸಬೇಕಾದ ವರ್ಗಾವಣೆಯು, (2)ನೇ ಪ್ರಕರಣದ ಅಡಿಯಲ್ಲಿ ವರ್ಗಾವಣೆ ಯೋಜನೆಯಂತೆ ಪರಿಣಾಮಕಾರಿಯಾಗಿರತಕ್ಕದ್ದು ಮತ್ತು ನಿರ್ದಿಷ್ಟಪಡಿಸಲಾದ ದಿನಾಂಕದಿಂದ (ಎರಡನೇ ವರ್ಗಾವಣೆ ಜಾರಿ ದಿನಾಂಕ) ಪರಿಣಾಮಕಾರಿಯಾಗಿರತಕ್ಕದ್ದು.

XX XX XX

(8) ರಾಜ್ಯ ಸರ್ಕಾರವು ರೂಪಿಸಿದ ವರ್ಗಾವಣೆ ಯೋಜನೆಗನುಸಾರ, ಕೆಪಿಟಿಸಿಯು, ತನ್ನ ಉದ್ಯಮದ ಯಾವುದೇ ಭಾಗವನ್ನು ಇನ್ನೊಂದು ಕಂಪನಿಯಲ್ಲಿ ಅಥವಾ ನಿಗಮಿತ ನಿಕಾಯದಲ್ಲಿ ಅಥವಾ ವ್ಯಕ್ತಿಯಲ್ಲಿ ನಿಹಿತಗೊಳಿಸಲು ಅಗತ್ಯಪಡಿಸಿದರೆ, ಆಯೋಗವು, ವರ್ಗಾವಣೆ ಪಡೆದವನಿಗೆ ವಹಿಸಿಕೊಡಲಾದ ಪ್ರಕಾರ್ಯಗಳನ್ನು ಮತ್ತು ಚಟುವಟಿಕೆಗಳನ್ನು ನೆರವೇರಿಸುವುದು ವರ್ಗಾವಣೆ ಪಡೆದವನಿಗೆ ಸಾಧ್ಯವಾಗುವಂತೆ ಲೈಸೆನ್ಸನ್ನು ತಿದ್ದುಪಡಿ ಮಾಡತಕ್ಕದ್ದು.

XX XX XX

ಅನುಬಂಧ - III

ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ವಿಧೇಯಕ, 2005

(2005ರ ವಿಧಾನಸಭೆಯ ವಿಧೇಯಕ ಸಂಖ್ಯೆ 3)

ಕರ್ನಾಟಕ ಭೂಸುಧಾರಣೆಗಳ ಅಧಿನಿಯಮ, 1961ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಭೂ ಸುಧಾರಣೆಗಳ ಅಧಿನಿಯಮ, 1961ನ್ನು (1962ರ ಕರ್ನಾಟಕ ಅಧಿನಿಯಮ 10) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಐವತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:-

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.- (1) ಈ ಅಧಿನಿಯಮವನ್ನು ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ಅಧಿನಿಯಮ, 2005 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

2. 109ನೇ ಪ್ರಕರಣದ ತಿದ್ದುಪಡಿ.- ಕರ್ನಾಟಕ ಭೂ-ಸುಧಾರಣೆಗಳ ಅಧಿನಿಯಮ, 1961ರ (1962ರ ಕರ್ನಾಟಕ ಅಧಿನಿಯಮ 10) 109ನೇ ಪ್ರಕರಣದ (1-ಎ) ಉಪ-ಪ್ರಕರಣದ ಪರಂತುಕದಲ್ಲಿ ``ಡೆಪ್ಯುಟಿ ಕಮೀಷನರರನು" ಎಂಬ ಪದಗಳಿಗೆ ``ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಡೆಪ್ಯುಟಿ ಕಮೀಷನರ್ ಮತ್ತು ಬೆಂಗಳೂರು ಜಿಲ್ಲೆಯ ಡೆಪ್ಯುಟಿ ಕಮೀಷನರ್‌ಗಳನ್ನು ಹೊರತುಪಡಿಸಿ ಡೆಪ್ಯುಟಿ ಕಮೀಷನರರನು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕರ್ನಾಟಕ ಭೂ ಸುಧಾರಣೆಗಳ ಅಧಿನಿಯಮ, 1961ರ 109ನೇ ಪ್ರಕರಣದ (1ಎ) ಉಪ ಪ್ರಕರಣಕ್ಕೆ ಪರಂತುಕವನ್ನು ಸೇರಿಸುವ ಮೂಲಕ, ಅರ್ಧ ಹೆಕ್ಟೇರ್ ವಿಸ್ತೀರ್ಣವನ್ನು ಮೀರದ ಭೂಮಿಗೆ ವಿನಾಯಿತಿ ಮಂಜೂರು ಮಾಡುವ ರಾಜ್ಯ ಸರ್ಕಾರದ ಅಧಿಕಾರಗಳನ್ನು ಚಲಾಯಿಸಲು ಡೆಪ್ಯುಟಿ ಕಮೀಷನರರಿಗೆ ಅಧಿಕಾರವನ್ನು ನೀಡಲಾಗಿದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆ ಮತ್ತು ಬೆಂಗಳೂರು ಜಿಲ್ಲೆಯೊಳಗಿನ ಪ್ರದೇಶಗಳಿಗೆ ಸಂಬಂಧಿಸಿದಂತೆ ಸದರಿ ಅಧಿಕಾರಗಳನ್ನು ರಾಜ್ಯ ಸರ್ಕಾರದಲ್ಲಿಯೇ ಉಳಿಸಿಕೊಳ್ಳುವುದು ಅವಶ್ಯಕವೆಂದು ಈಗ ಪರಿಗಣಿಸಿದೆ.

ಆದ್ದರಿಂದ ಈ ವಿಧೇಯಕ.

ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮದಿಂದ ಯಾವುದೇ ಹೆಚ್ಚಿನ ವೆಚ್ಚ ಉಂಟಾಗುವುದಿಲ್ಲ.

ಎಂ.ಪಿ. ಪ್ರಕಾಶ್
ಕಂದಾಯ ಸಚಿವರು

ಟಿ. ರಾಜಣ್ಣ
ಕಾರ್ಯದರ್ಶಿ

ಅನುಬಂಧ

ಕರ್ನಾಟಕ ಭೂ ಸುಧಾರಣೆಗಳ ಅಧಿನಿಯಮ, 1961ರ (1962ರ ಕರ್ನಾಟಕ ಅಧಿನಿಯಮ 10)

ಉದ್ಧೃತ ಭಾಗ

XX XX XX

109. ಕೆಲವು ಭೂಮಿಗಳಿಗೆ ಕೆಲವು ಉಪಬಂಧಗಳಿಂದ ವಿನಾಯಿತಿ.

(1) XX XX XX

(1ಎ) (1)ನೇ ಉಪ-ಪ್ರಕರಣದಲ್ಲಿ ಏನೇ ಇದ್ದರೂ, ರಾಜ್ಯ ಸರ್ಕಾರವು ಸಾರ್ವಜನಿಕ ಹಿತದೃಷ್ಟಿಯಿಂದ ಮತ್ತು ಲಿಖಿತದಲ್ಲಿ ಕಾರಣಗಳನ್ನು ದಾಖಲು ಮಾಡಿ, ಅಧಿಸೂಚನೆಯ ಮೂಲಕ, ಮತ್ತು ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961 (1963ರ ಕರ್ನಾಟಕ ಅಧಿನಿಯಮ ಸಂಖ್ಯೆ 11)ರ ಉಪಬಂಧಗಳಿಗೆ ಒಳಪಟ್ಟು ಮತ್ತು ಅದರಿಂದ ನಿರ್ದಿಷ್ಟಪಡಿಸಿರಬಹುದಾದಂಥ ನಿರ್ಬಂಧಗಳು ಮತ್ತು ಷರತ್ತುಗಳಿಗೆ ಒಳಪಟ್ಟು, ಯಾವುದೇ ನಿರ್ದಿಷ್ಟ ಉದ್ದೇಶಕ್ಕಾಗಿ 63, 79ಎ, 79ಬಿ ಅಥವಾ 80ನೇ ಪ್ರಕರಣಗಳ ಉಪಬಂಧಗಳಿಂದ ಯಾವುದೇ ವಿಸ್ತೀರ್ಣದ ಭೂಮಿಗೆ ವಿನಾಯಿತಿ ನೀಡಬಹುದು.

ಪರಂತು, ಡೆಪ್ಯುಟಿ ಕಮೀಷನರನು ಈ ಉಪ-ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದಂಥ ನಿರ್ಬಂಧಗಳಿಗೆ ಒಳಪಟ್ಟು ಮತ್ತು ಅಂಥ ರೀತಿಯಲ್ಲಿ ಅರ್ಧ ಹೆಕ್ಟೇರ್ ವಿಸ್ತೀರ್ಣವನ್ನು ಮೀರದ ಭೂಮಿಗೆ ವಿನಾಯಿತಿಗಳನ್ನು ನೀಡಲು ರಾಜ್ಯ ಸರ್ಕಾರದ ಅಧಿಕಾರವನ್ನು ಚಲಾಯಿಸಬಹುದು.

XX XX XX

****

ಮುದ್ರಕರು: ನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳು,
ಸಚಿಮುತು. ಕಾಸೂ. 184, 350 ಪುಸ್ತಕಗಳು, ದಿ: 22-06-2006